DAMAGE BOOK

UNIVERSAL
LIBRARY
OU_198994
UNIVERSAL
LIBRARY

ಗಳಗನಾಥ-ಸುರಸ-ಗ್ರಂಥಮಾಲೆ.

ಗ್ರಂಥ ೪.

ಧಾರ್ಮಿಕತೇಜ

ಅಥವಾ

ಪರಹಿತ-ದಕ್ಷತಾ

ಲೇಖಕ

ವೇಂಕಟೇಶ ತಿರಕೊ ಕುಲಕರಣಿ ಗಳಗನಾಥ

(ಸಂಪಾದಕ:-ಸದ್ಗುರು)

೧ ನೆಯ ಆವೃತ್ತಿ - ೨೦೦೦ ಪ್ರತಿಗಳು

ಬೆಂಗಳೂರು ಸಿಟಿ

ಸ್ಟ್ಯಾಂಡರ್ಡ್ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿತು.

೧೯೨೮

ಬೆಲೆ ಕಾಪಿರೈಟ್ ರಿಜಸ್ಟರ್ಡ್ ೧—೪—೦

ಮುದ್ರಕ—ಬಿ. ಎಲ್. ನರಸಿಂಹಯ್ಯ
ಮುದ್ರಣಾಲಯ—ಸ್ಟ್ಯಾಂಡರ್ಡ್ ಮುದ್ರಣಾಲಯ ಬೆಂಗಳೂರು ಸಿಟಿ.
ಪ್ರಕಾಶಕ—ವೇಂಕಟೇಶ ತಿರಕೊ ಕುಲಕರಣಿ ಗಳಗನಾಥ
ಪ್ರಸಿದ್ಧಿಸುವಸ್ಥಳ—" ಶ್ರೀ ಸದ್ಗುರು " ಆಫೀಸು, ಹಾವೇರಿ
ಜಿ. ಧಾರವಾಡ

ಓಂ

ನಮೋ ಭಗವತೇ ಶ್ರೀನಿವಾಸಾಯ

ಧಾರ್ಮಿಕತೇಜ

ಅಥವಾ

ಪರಹಿತ-ದಕ್ಷತಾ

ಎಂಬ

ಈ ಕಾದಂಬರಿಯನ್ನು

ಸನ್ಮಾನ್ಯ

ಸಮಸ್ತ ಕನ್ನಡಿಗರ ಅಭ್ಯುದಯಕ್ಕಾಗಿ

ಪಾಮರನಾದ

ವೇಂಕಟೇಶ ತಿರಕೊ ಕುಲಕರಣಿ ಗಳಗನಾಥನು ನಾನು

ನನ್ನ ಕುಲಸ್ವಾಮಿಯಾದ

ಕಲ್ಯಾಣಪುರಿಯ

ಶ್ರೀಲಕ್ಷ್ಮೀ ವೇಂಕಟೇಶನ ದಿವ್ಯ ಚರಣಗಳಲ್ಲಿ

ಅನನ್ಯಭಕ್ತಿಯಿಂದ ಸಮರ್ಪಿಸಿರುವೆನು.

ಪ್ರಸ್ತಾವನೆ.

ಶ್ರೀ ಸದ್ಗುರು ಕೃಪೆಯಿಂದ ಈ "ಧಾರ್ಮಿಕತೇಜ" ವೆಂಬ ಮೂವತ್ತೈದು ಫಾರ್ಮುಗಳ ಕಾದಂಬರಿಯ ಎರಡುಸಾವಿರ ಪ್ರತಿಗಳು, ಇಪ್ಪತ್ತೇ ದಿವಸಗಳಲ್ಲಿ ಮುದ್ರಿಸಿ ಪ್ರಸಿದ್ಧವಾದದ್ದೊಂದು ಆಶ್ಚರ್ಯದ ಸಂಗತಿಯೇ ಸರಿ! ಇದಕ್ಕಾಗಿ ಸ್ಟ್ಯಾಂಡರ್ಡ್ ಪ್ರೆಸ್ಸಿನ ಮಾಲಕರಾದ ವಿ|| ಬಿ. ಯಲ್. ನರಸಿಂಹಯ್ಯನವರ ಅಭೀಷ್ಟವನ್ನು ಚಿಂತಿಸುವೆನು.

ಯಾವ ಕೆಲಸಕ್ಕಾದರೂ ದೇಹಾರೋಗ್ಯವು ಮುಖ್ಯವಷ್ಟೆ? ನಾನು ಬೆಂಗಳೂರಿಗೆ ಬಂದ ಆರು ತಿಂಗಳಲ್ಲಿ ಯಾವ ತರದ ಅನಾರೋಗ್ಯವೂ ನನಗೆ ಉಂಟಾಗಲಿಲ್ಲ. ಇದಕ್ಕಾಗಿ ನನ್ನ ಕುಲಸ್ವಾಮಿಯಾದ ಶ್ರೀ ಲಕ್ಷ್ಮೀ ವೆಂಕಟೇಶನ ಕೃಪಾವಿಶೇಷಕ್ಕಾಗಿ ಆ ಭಗವಂತನನ್ನು ಧ್ಯಾನಿಸುವೆನು. ಅದರಂತೆ, ಕೇವಲ ಮನೆಯವನಂತೆ ನನ್ನನ್ನು ನಡೆಸಿಕೊಂಡು, ಹಲವು ಬಗೆಯಿಂದ ಸಹಾಯವನಾತಿವ್ವಕ್ಕಾಗಿ ವಿ|| ರಾ|| ರಾ|| ನಾಗೇಶ ಗುರುರಾವ ಸುಂಕವರವರ ಉಪಕಾರವನ್ನು ಸ್ಮರಿಸಿ, ಅವರ ಅಭೀಷ್ಟವನ್ನು ಚಿಂತಿಸುವೆನು.

ನಾನು ಪುಸ್ತಕ ಮಾರುವದಕ್ಕಾಗಿ ಬೆಂಗಳೂರಿಗೆ ಬಂದಿರಲು, ಬೆಂಗಳೂರವರು ನನಗೆ ಸಾಲವಾಡಗೊಡದೆ ಎಂಟು ಸಾವಿರ ರೂಪಾಯಿ ಬೆಲೆಯ ನಾಲ್ಕು ಹೊಸ ಪುಸ್ತಕಗಳನ್ನೂ, ಮೂರು ಸಾವಿರ ರೂಪಾಯಿ ಬೆಲೆಯ ಮೂರು ಹಳೆಯ ಪುಸ್ತಕಗಳನ್ನೂ ಪ್ರಸಿದ್ಧಿಸಲಿಕ್ಕೆ ಅನುಕೂಲಮಾಡಿಕೊಟ್ಟರು; ಅದರಿಂದ ಪುಸ್ತಕಜೀವಿಯಾದ ನನಗೆ ಸಾಲತೀರಿಸಲಿಕ್ಕೆ ಹೆಚ್ಚು ಅನುಕೂಲವಾಯಿತೆಂದು ಕೃತಜ್ಞತೆಯಿಂದ ತಿಳಿಸುವೆನು.

ಮೈಸೂರ ಯೂನಿವರ್ಸಿಟಿಯವರೂ, ವಿದ್ಯಾಖಾತೆಯವರೂ ನನ್ನ ಪುಸ್ತಕಗಳಲ್ಲಿ ಯೋಗ್ಯವಾದವನ್ನು ಬೇರೆಬೇರೆ ಕ್ಲಾಸುಗಳಿಗೆ ಪಠ್ಯ ಪುಸ್ತಕಗಳಾಗಿ ನಿಯಮಿಸಿ, ನನ್ನ ಸಾಲ ತೀರಲಿಕ್ಕೆ ಸಹಾಯಮಾಡಬೇಕೆಂದು ಪ್ರಾರ್ಥಿಸುವೆನು. ನನ್ನ "ರಾಣಾ-ರಾಜಸಿಂಹ" ಎಂಬ ಚಿಕ್ಕ ಕಾದಂಬರಿಯು ಲೋವರ ಸೆಕೆಂಡರಿ ಕ್ಲಾಸಿಗೂ, "ಈಶ್ವರೀ ಸೂತ್ರ" "ಕಮಲಕುಮಾರಿ" "ಸತ್ವಸಾರ" "ಕ್ಷಾತ್ರತೇಜ" "ರಾಣೀವೃಷಾಲಿನಿ" ಎಂಬ ಕಾದಂಬರಿಗಳು ಮೆಟ್ರಿಕ್ ಕ್ಲಾಸಿಗೂ, "ಧಾರ್ಮಿಕತೇಜ" "ರಾಣೀ-ವೃಷಾಲಿನಿ" ಎಂಬವು ಇಂಟರ ಕ್ಲಾಸಿಗೂ ಪಠ್ಯ ಪುಸ್ತಕಗಳಾಗಿ ನಿಯಮಿಸಲು ಯೋಗ್ಯವಾಗಿರುತ್ತವೆಂದು ನನಗೆ ತೋರುತ್ತದೆ.

ನನ್ನ ಬರೆಯುವ ಉತ್ಸಾಹವು ಕುಗ್ಗಿರುವದಿಲ್ಲವೆಂಬ ಮಾತನ್ನೂ, ನಾನು ಬರೆಯಬೇಕೆಂದಿರುವ ಹತ್ತು ಮಹತ್ವದ ಪುಸ್ತಕಗಳು ದೇವರ ಕೃಪೆಯಿಂದ ಬರೆದು ಪ್ರಸಿದ್ಧವಾದರೆ, ಕನ್ನಡ ವಾಙ್ಮಯದ ಅಭಿವೃದ್ಧಿಗೆ "ಅಳಲಿಯ ಭಕ್ತಿ-ಮಳಲಸೇವೆ" ಎಂಬಂತೆ ಕೆಲಮಟ್ಟಿಗಾದರೂ ಉಪಯೋಗವಾಗಬಹುದೆಂಬದನ್ನೂ ನನ್ನ ಸದ್ಗುರು ಪ್ರಭಾವವನ್ನು ಓದಿದವರಿಗೆ ಗೊತ್ತಾಗದೆ ಇರಲಿಕ್ಕಿಲ್ಲ. ಆ ಪುಸ್ತಕಗಳನ್ನಲ್ಲದೆ ಇನ್ನೂ ಬೇರೆ ಪುಸ್ತಕಗಳನ್ನೂ ಬರೆದು ಕನ್ನಡ ಭಾಷಾ ಸೇವೆಯನ್ನು ಯಥಾಮತಿ ಮಾಡಬೇಕೆಂದು ಇಚ್ಛಿಸುತ್ತೇನೆ; ಸರ್ವೇಶ್ವರನು ಆ ಇಚ್ಛೆಯನ್ನು ಪೂರ್ಣಮಾಡಬೇಕು.

ನನ್ನ ಈ "ಧಾರ್ಮಿಕತೇಜ" ವೆಂಬ ಗೌರವದ ಕಾದಂಬರಿಗೆ ಒಂದು ಮಹಾಪಾಪ್ಯ ಕಾದಂಬರಿಯು ಮೂಲಧನವಾಗಿರುವದೆಂದು ಅತ್ಯಂತ ಕೃತಜ್ಞತೆಯಿಂದ ಅರಿಕೆಮಾಡಿಕೊಳ್ಳುವೆನು. ಈ ಕಾದಂಬರಿಯಲ್ಲಿ ಹಲವು ಬೋಧಪ್ರದ ಸಂಗತಿಗಳ ವಿವೇಚನವಿರುತ್ತದೆ. "ಭಕ್ತಿ-ವಿಶ್ವಾಸದ ಧರ್ಮಸಮ್ಮತವಾದ ಕಾರ್ಯನಿಷ್ಠೆಯಿಂದಲ್ಲದೆ, ಕಗ್ಗತನದ ಉಚ್ಛೃಂಖಲವಾದ ಅಧಾರ್ಮಿಕ ಬಾಯ್ಬಡಕ ತನದಿಂದ ಯಾವ ಕಾರ್ಯವೂ ಹಿತಪರ್ಯವಸಾಯಿಯಾಗದೆಂ" ಬ ಮಾತನ್ನು ಈ ಕಾದಂಬರಿಯು ಬೋಧಿಸುತ್ತಿರುವದು. ಈ ಕಾದಂಬರಿಯೊಳಗಿನ "ಸ್ವಾತಂತ್ರ್ಯಪ್ರಾಪ್ತಿಯ ಗುಟ್ಟು," "ಛತ್ರಸಾಲನ ತೇಜಸ್ವಿತೆ," "ಸತ್ವದ ಪ್ರಭಾವ," "ಶಿವರಾಯನು" "ಗೌರವದ ಉಪದೇಶ" ಮುಂತಾದ ಪ್ರಕರಣಗಳನ್ನು ಓದಿದರೆ, ನನ್ನ ಬರಹದ ಸತ್ಯತೆಯು ತೋರಬಹುದು.

೨ನೇ ಬಿ.ದಿ. ೬ಷಿಸೆ ನಂ.
ಬಸವನಗುಡಿ, ಬೆಂಗಳೂರು ಸಿಟಿ.
ತಾಗಿ ೬—೪—೧೯೩೪

ಕನ್ನಡಿಗರ ಸೇವಕ
ವೇ. ತಿ. ಕುಲಕರಣಿ, ಗಳಗನಾಥ.
ಸಂಪಾದಕ "ಸದ್ಗುರು" ಹಾವೇರಿ.

ವಿಷಯಾನುಕ್ರಮಣಿಕೆ

ಪ್ರಕರಣ	ವಿಷಯ	ಪುಟ
೧	ಅಪ್ಪನಿಗೆ ಅವರೇ ದೇವರು	೧- ೧೦
೨	ದೇವಿಯ ಪ್ರಸಾದ	೧೧- ೨೦
೩	ತಂದೆ ಮಕ್ಕಳ ವಿಯೋಗ	೨೧- ೩೦
೪	ಸೈತಾನ	೩೧- ೪೨
೫	ಅಪಘಾತ	೪೩- ೫೧
೬	ರೋಷನಾರಾ ಬೇಗಮೆ	೫೧- ೬೦
೭	ಆಯೇಷೆ	೬೦- ೬೯
೮	ಬಾದಶಹನ ದರ್ಬಾರ	೬೯- ೭೯
೯	ಪ್ರೇಮಬಂಧನ	೮೦-೮೮
೧೦	ಹೀರಾದೇವಿಯ ದುಷ್ಟತನ	೮೮- ೯೭
೧೧	ಕರ್ಕಶ ಹೀರಾದೇವಿ	೯೭-೧೦೮
೧೨	ಸ್ವಾತಂತ್ರ್ಯವು ದಾನದ ವಸ್ತುವೇ ಅಲ್ಲ	೧೦೮-೧೨೧
೧೩	ಅಚ್ಚ ಕ್ಷತ್ರ ಧರ್ಮ	೧೨೧-೧೩೦
೧೪	ಸತ್ಯಸಂಧತೆಯ ಪ್ರಭಾವ	೧೩೦-೧೪೦
೧೫	ಸಾಧ್ವೀ ಸುಫಲಾದೇವಿ	೧೪೧-೧೪೯
೧೬	ಸ್ವಾತಂತ್ರ್ಯಪ್ರಾಪ್ತಿಯ ಗುಟ್ಟು	೧೪೯-೧೫೭
೧೭	ಲಲಿತೆಯ ಪಿಶಾಚ	೧೫೭-೧೬೬
೧೮	ಅಘಟಿತ ಘಟನೆ	೧೬೬-೧೭೩
೧೯	ಮೆಚ್ಚಿದವರಿಗೆ ಹಂದಿಯೇ ಮುಮ್ಮ	೧೭೪-೧೮೦
೨೦	ಛತ್ರಸಾಲನ ತೇಜಸ್ವಿತೆ	೧೮೦-೧೮೭
೨೧	ಸುಫಲಾದೇವಿಯ ಸವಭಿಮಾನ	೧೮೭-೧೯೫
೨೨	ಪಾಪ! ಬಡ ಕಂಚುಕಿರಾಯನು	೧೯೯-೨೦೧
೨೩	ಸತ್ವದ ಪ್ರಭಾವ	೨೦೧-೨೦೮
೨೪	ಬಡಿದ ಛಕ್ತಿ	೨೦೮-೨೧೫
೨೫	ಬದ್ರುನ್ನಿಸೆಯ ಭಯಛಕ್ತಿ	೨೧೫-೨೨೨
೨೬	ಶಿವರಾಯನು	೨೨೨-೨೩೦
೨೭	ಗೌರವದ ಉಪದೇಶ	೨೩೧-೨೩೯
೨೮	ಸಾಮ್ರಾಜ್ಯದ ಮದ	೨೩೯-೨೪೭
೨೯	ಸಂಶಯ ನಿವೃತ್ತಿ	೨೪೮-೨೫೫
೩೦	ಪ್ರತಿಜ್ಞೆಯ ಪರಿತ್ಯಾಗ	೨೫೫-೨೬೪
೩೧	ಸ್ವಾತಂತ್ರ್ಯ ಪ್ರಾಪ್ತಿ	೨೬೪-೨೭೦

ಮುಖ್ಯ ಪಾತ್ರಗಳ ಪರಿಚಯ

೧ ಶ್ರೀ ಚತುರ್ಭುಜಪರಮಾತ್ಮ—ಓರಛಾದ ಮುಖ್ಯದೈವತ

೨ ಶ್ರೀ ವಿಂಧ್ಯವಾಸಿನಿ— ಬುಂದೇಲಖಂಡದವರ ಅಧಿದೈವತೆ

೩ ಶ್ರೀ ಪ್ರಾಣನಾಥಪ್ರಭುಗಳು—ಬುಂದೇಲಖಂಡದಲ್ಲಿಯ ಸತ್ಪುರುಷರು

೪ ಚಂಪತರಾಯ—ಮಹೋಬದ ಅರಸು

೫ ಸರಲಾದೇವಿ—ಚಂಪತರಾಯನ ಹೆಂಡತಿ

೬ ಛತ್ರಸಾಲ—ಚಂಪತರಾಯನ ಮಗ

೭ ಸಭಾಕರಣ—ಸಾಗರದ ಅರಸು

೮ ದಲಪತರಾಯ—ಸಭಾಕರಣನ ಮಗ

೯ ಪಹಾರಸಿಂಗ—ಓರಛಾದ ಅರಸು

೧೦ ಹೀರಾದೇವಿ—ಪಹಾರಸಿಂಗನ ಹೆಂಡತಿ

೧೧ ವಿಮಲದೇವ—ಪಹಾರಸಿಂಗನ ಮಗ

೧೨ ಕಂಚುಕಿರಾಯ—ಧಾರೀರದ ಅರಸು

೧೩ ಸುಫಲಾದೇವಿ—ಕಂಚುಕಿರಾಯನ ಹೆಂಡತಿ

೧೪ ವಿಜಯೆ—ಕಂಚುಕಿರಾಯನ ಮಗಳು

೧೫ ಸಜ್ಜನರಾಯ—ಕಂಚುಕಿರಾಯನ ಮಂತ್ರಿ

೧೬ ಔರಂಗಜೇಬ—ದಿಲ್ಲಿಯ ಬಾದಶಹ

೧೭ ಆಯೇಷ—ಔರಂಗಜೇಬನ ಪಟ್ಟದ ರಾಣಿ

೧೮ ರೋಷನಾರ—ಔರಂಗಜೇಬನ ತಂಗಿ

೧೯ ಬದ್ರುನ್ನಿಸೆ—ಔರಂಗಜೇಬನ ಮಗಳು

೨೦ ರಾಜಾ ಜಯಸಿಂಗ—ರಜಪೂತ ಅರಸು

೨೧ ರಣದುಲ್ಲಾಖಾನ—ಔರಂಗಜೇಬನ ಸರದಾರ

೨೨ ಫಿಯಾದಾಖಾನ—ಔರಂಗಜೇಬನ ಸರದಾರ

೨೩ ಶಿವಾಜಿ—ಮಹಾರಾಷ್ಟ್ರ ರಾಜ್ಯಸ್ಥಾಪಕ

೨೪ ಪಹಾಡಿ— ಶಿವಾಜಿಯ ಸುಟ್ಟಪ್ಪ.

೨೫ ಅಂಬಾಜಿ- ಭೀಮಾನದಿಯ ತೀರದಲ್ಲಿರುವ ಬಂಡುರಂಗ್ಳಿಯವಗಿದ

೨೬- ಸುಭಾ- ಅಂಬಾಜಿಯ ಮಗಳು

ಶ್ರೀ ಶೇಷಸದ್ಗುರವೇ ನಮಃ

ಧಾರ್ಮಿಕ-ತೇಜ

ಅಥವಾ

ಪರಹಿತ-ದಕ್ಷತಾ

೧ನೆಯ ಪ್ರಕರಣ-ಅಪ್ಪನಿಗೆ ಅವರೇ ದೇವರು!

ಶ್ರೀ ವಿಂಧ್ಯವಾಸಿನಿಯ ಗುಡಿಯು, ಬುಂದೇಲಖಂಡದ ಕ್ಷತ್ರಿಯ ರಾಜರು ದೇವಿಯ ಪ್ರತಿ ವರುಷದ ಉತ್ಸವಕ್ಕಾಗಿ ಗುಡಿಯ ಸುತ್ತುಮುತ್ತು ರಾಹುಟೆಹೊಡೆದು ಇರತೊಡಗಿರುತ್ತಾರೆ. ಅಕಬರ ಬಾದಶಹನ ವರೆಗಿದ್ದ ಅವರ ಸ್ವಾತಂತ್ರ್ಯವು, ಅವರ ಒಳಜಗಳಗಳಿಂದ ಈಗಿನ ಔರಂಗಜೇಬನ ಕಾಲದಲ್ಲಿ ಅಳಿದು ಹೋಗಿ, ಅವರು ತೀರ ಒಗರು ಇಲ್ಲದವರಾಗಿರುತ್ತಾರೆ. ದಿಲ್ಲಿಯ ಬಾದಶಹನ ಪ್ರೀತಿಯ ಗಳಿಕೆಯಲ್ಲಿಯೇ ಅವರ ಮನಸ್ಸು; ಆ ಪ್ರೀತಿಯ ಗಳಿಕೆಯ ಹಂಚಿಕೆ ಹುಡುಕುವದರಲ್ಲಿಯೇ ಅವರ ಧ್ಯಾನವು ಪ್ರೀತನಾದ ಬಾದಶಹನು ಕರುಣಿಸಿ ದಯಪಾಲಿಸಿದ ಯಾವದೊಂದು ಸೇವೆಯ ಕೈಕೊಳ್ಳುವದರಲ್ಲಿಯೇ ಅವರ ಆನಂದವು! ಆ ಅಂದಗೇಡಿಗಳು ಈ ಕೆಲಸಗಳಲ್ಲಿ ತಮ್ಮ ಮಾನ ಮರ್ಯಾದೆಗಳನ್ನು ಬದಿಗಿಡುವದಕ್ಕಾಗಲಿ, ತಮ್ಮ ದೊಡ್ಡಸ್ತಿಕೆಯನ್ನು ಮಣ್ಣುಗೂಡಿಸುವದಕ್ಕಾಗಲಿ, ತಮ್ಮ ತಲಾಂತರದ ಶೀಲವಂತಿಕೆಯನ್ನು ಕಳೆದುಕೊಳ್ಳುವದಕ್ಕಾಗಲಿ ಹಿಂದೆ ಮುಂದೆ ನೋಡುತ್ತಿದ್ದಿಲ್ಲ. ಆ ನಾಚಿಕೆಗೇಡಿಗಳು ಬಾದಶಹನ ಪ್ರೇಮ ಸಂಪಾದನದಲ್ಲಿಯೇ ಮೇಲಾಡುವರು; ತಮ್ಮ ದೇಶದ ಒಗರನ್ನು ಕಳೆಯುವದರಲ್ಲಿಯೇ ತಮ್ಮ ಕಲಿತನವನ್ನು ತೋರಿಸುವರು; ಬಾದಶಹನ ಅಧಿಕಾರವನ್ನು ಹೆಚ್ಚಿಸುವದರಲ್ಲಿಯೇ ತಮ್ಮ ಅಡಳಿತದ ಹಿಡತಗಳನ್ನು ಬಳಿಸುವರು! ಇಂತಹ ಕೆಟ್ಟ ಮನಸ್ಸಿನ ಅರಸರ ಆಳಿಕೆಯಿಂದ ಬುಂದೇಲದ ಪ್ರಜೆಗಳಲ್ಲಿ ಪುಕ್ಕತನ, ಸಗಣಿಗಳ್ಳತನ, ಆಶೆಬುರುಕತನ, ಅರವುಗೇಡಿತನ ಮೊದ

ಲಾದ ಹೀನ ಗುಣಗಳು ತಡೆಯಿಲ್ಲದೆ ಹೆಚ್ಚುತ್ತಲಿದ್ದವು. ಮಹಾ ಕಲಿಗಳೂ, ಮಂದಿಗೆ ಎಂದೂ ಸೊಪ್ಪುಹಾಕದವರೂ ಎಂದು ಹೆಸರಾಗಿದ್ದ ಬುಂದೇಲಿಯ ಕ್ಷತ್ರಿಯರ ಇರವೂ ಇಷ್ಟು ಕನಿಕರಪಡುವಂತಹದಾದದ್ದನ್ನು ನೋಡಿದರೆ, ಯಾವ ಹೊತ್ತಿಗೆ ಏನಾದೀತೆಂಬದನ್ನು ಹೇಳುವುದು ಬಹು ಕಷ್ಟವೆಂಬ ಮಾತು ಸಿದ್ಧವಾಗುತ್ತದೆ.

ಇಂಥ ಹೀನಸ್ಥಿತಿಯಲ್ಲಿಯೂ ಚಂಪತರಾಯನಂಥ ಒಬ್ಬಬ್ಬ ಕೆಚ್ಚೆದೆಯ ಕ್ಷತ್ರಿಯ ಕಲಿಗಳು ತಮ್ಮ ಒಗರಿನ ಬೆಳಕಿನಿಂದ ಬುಂದೇಲಖಂಡವನ್ನು ಬೆಳಗುತ್ತಿರುವದು ಸುದೈವವೇ ಸರಿ. ಚಂಪತರಾಯನ ಹಿರಿಯರು ಮಹಾ ಪ್ರತಾಪಿಗಳು, ದೇಶಕಾರ್ಯದಲ್ಲಿ ದೇಹವನ್ನು ಸವಿಸಿ ಸವಿಸಿ ಸಣ್ಣಮಾಡುತ್ತ ಬಂದವರು. ಚಂಪತರಾಯನ ಬುಂದೇಲಿ ಮನೆತನದ ಮೂಲ ಪುರುಷನು ಭಕ್ತಿಯ ಕಟ್ಟಕಡೆಯ ಮೇರೆಯನ್ನು ತೋರಿಸುವದಕ್ಕಾಗಿ ವಿಂಧ್ಯವಾಸಿನಿಯ ಅಡಿಗಳಿಗೆ ತನ್ನ ತಲೆಕೊಡಲು ಸಜ್ಜಾದನು! ಅದರಂತೆ ಚಂಪತರಾಯನ ಮುತ್ತಜ್ಜನಾದ ರುದ್ರಪ್ರತಾಪನು, ತನ್ನ ಹರತಾದ ಕತ್ತಿಯ ಕಸುವಿನಿಂದ ಬುಂದೇಲಖಂಡದ ಸ್ವಾತಂತ್ರ್ಯದ ಹಾದಿಯನ್ನು ತಡೆಗಳಿಲ್ಲದಂತೆ ಮಾಡಿದವನು! ಇಂತಹ ತನ್ನ ಗೌರವದ ಹಿರಿಯರ ನೆನಹಿನಿಂದ ಚಂಪತರಾಯನ ಕಲಿತನವು ಮಾಸದೆ ಇರಲು, ಆತನು ಔರಂಗಜೇಬ ಬಾದಶಹನನ್ನು ಲೆಕ್ಕಿಸದೆ ತನ್ನ ದೇಶವನ್ನು ಸ್ವತಂತ್ರವಾಗಮಾಡುವದಕ್ಕಾಗಿ ಪರಿಪರಿಯ ಕಷ್ಟ-ನಷ್ಟಗಳನ್ನು ಅನುಭವಿಸುತ್ತಲಿದ್ದನು. ತನ್ನ ಈ ಕೆಲಸವು ವಿಂಧ್ಯವಾಸಿನಿಯ ಕೃಪೆಯಿಲ್ಲದೆ ಕೈಗೂಡದೆಂದು ತಿಳಿದು, ಆ ಕೃಪೆಯನ್ನು ಪಡೆಯುವದಕ್ಕಾಗಿಯೇ ಇಂದಿನ ವಾರ್ಷಿಕೋತ್ಸವದ ನೆವದಿಂದ ಆ ವೀರಕೇಸರಿಯು ದೇವಿಯ ದರ್ಶನಕ್ಕಾಗಿ ಬಂದಿದ್ದನು. ಆದರೆ ದೇಶದ್ರೋಹಿಗಳಾದ ಅರಸರ ಮಾತು ಹಾಗಿದ್ದಿಲ್ಲ; ಬಾದಶಹರ ಅಖಂಡವಾದ ಪ್ರೀತಿಯು ನಮ್ಮಮೇಲೆ ಆಗುವಂತೆ ಅನುಗ್ರಹಿಸೆಂದು ದೇವಿಯನ್ನು ಪ್ರಾರ್ಥಿಸುವದಕ್ಕಾಗಿ ಕೆಲವರು ಉತ್ಸವಕ್ಕೆ ಬಂದವರಾಗಿದ್ದರು; ಕೆಲವರು ಬಾದಶಹನ ಕೃಪೆಯಿಂದ ಹೆಚ್ಚಿಸಿಕೊಂಡಿರುವ ತಮ್ಮ ಅಧಿಕಾರ ವೈಭವಗಳನ್ನು ಎಲ್ಲರಲ್ಲಿ ಮೆರಿಸುವ ಹೆಮ್ಮೆಯಿಂದ ಉತ್ಸವಕ್ಕೆ ಬಂದಿದ್ದರು! ಒಟ್ಟಿಗೆ ಪಿಂಡಗ್ರಳಷ್ಟು ಪ್ರಕೃತಿಗಳೆಂಬ ಮಾತು ಸುಳ್ಳಲ್ಲ.

ಚಂಪತರಾಯನು "ಜಯವಿಂಧ್ಯವಾಸಿನಿ" ಎಂದು ದೇವಿಯ ಜಯ ಜಯಕಾರ ಮಾಡುತ್ತ ಗುಡಿಯನ್ನು ಹೊಗುವಾಗ ಆತನ ಮನಸ್ಸಿನೊಳಗಿನ ಹಲವು ಉಚ್ಚಭಾವನೆಗಳ ನಿರ್ಮಲ ತೆರೆಗಳ ಅಂದವಾದ ಚಿತ್ರವು ಆತನ ಮೋರೆಯಲ್ಲಿ ಮಿನುಗುತ್ತಲಿತ್ತು. ತನ್ನ ಮನೆತನದ ಉತ್ಪತ್ತಿಯ ಹಾಗು ವೈಭವದ ಇತಿಹಾಸವು ಆತನ ಕಣ್ಣುಗಳಿಗೆ ಕಟ್ಟಲು, ಆ ಕಣ್ಣುಗಳು ಪ್ರೇಮಾಶ್ರುಪೂರ್ಣವಾದವು; ಅಭಿಮಾನದಿಂದ ಆ ವೀರಮಣಿಯ ವೈಗೂದಲುಗಳು ನೆಟ್ಟಗಾದವು. ಗರ್ಭಗುಡಿಯನ್ನು ಹೊಕ್ಕ ಕೂಡಲೆ ಆತನು ಪುನಃ ದೇವಿಯ ಜಯಘೋಷ ಮಾಡಿದನು. ಆತನು ಬಾಷ್ಪ ಪೂರ್ಣ ನೇತ್ರಗಳಿಂದ ದೇವಿಯ ಕಡೆಗೆ ನೋಡಿ— "ಇಂಥ ತಾಯಿಯು ನೀನು ನನ್ನ ಕುಲದೇವತೆಯಾಗಿರಲು, ನನ್ನ ಬುಂದೇಲ ಖಂಡವ್ರಯನನ್ನ ಬಾದಶಹನ ಅಡಿಯಾಳಾಗಬೇಕೆ? ಇಂಥ ಮಹಾ ಶಕ್ತಿಯನ್ನು ಪೂಜಿಸುವವರು ನಾವಾಗಿರಲು, ಯವನರ ಮುಂದೆ ನಾಯಿಯಂತೆ ನಾವು ಬಾಲ ಗುಂಡಾಡಿಸಬೇಕೆ?" ಎಂದು ಭಾವಿಸುವಾಗ ಆತನ ಕಣ್ಣೀರುಗಳು ಒತ್ತರಿಸಲು, ಅಷ್ಟು ಹತ್ತರ ಹೋಗಿದ್ದರೂ ಆತನಿಗೆ ದೇವಿಯ ದರ್ಶನವು ಸ್ಪಷ್ಟವಾಗಿ ಆಗಲೊಲ್ಲದು. ತನ್ನ ದೇಶದ ದೈನ್ಯವನ್ನು ದೇವಿಯ ಮುಂದೆ ತೋಡಿಕೊಳ್ಳಲು ಆತುರಪಡುತ್ತಿದ್ದ ಆ ಕ್ಷತ್ರಿಯ ವೀರನು ತನ್ನ ಸೆಲ್ಲೆಯಿಂದ ಕಣ್ಣೀರುಗಳನ್ನು ಒರೆಸಿಕೊಂಡು ದಿಟ್ಟಿಸಿ ದೇವಿಯನ್ನು ನೋಡಿದನು. ಆಗ ಆ ಜಗಜ್ಜನನಿಯು ಮುಗುಳು ನಗೆ ನಗುತ್ತ ಸುವರ್ಣಪೀಠದ ಮೇಲೆ ಸ್ಥಿರವಾಗಿ ಕುಳಿತುಕೊಂಡಿದ್ದಳು. ಪುನಃ ಚಂಪತರಾಯನ ಹೃದಯವು ಭಕ್ತಿಯ ನುಗ್ಗು ನಿಕೆಯಿಂದ ನಡುಗಿತು! ಆತನು ನಡುಗುವ ದನಿಯಿಂದ—"ಜಯ ಭವಾನಿ! ಆದಿಮಾಯೆ!!" ಎಂದು ನುಡಿದು ಮುಂದೆ ಮಾತಾಡಲಾರದೆ, ಸಾಷ್ಟಾಂಗವಾಗಿ ದೇವಿಯನ್ನು ವಂದಿಸಿದನು. ಬಳಿಕ ಆತನು ಎದ್ದು ನಿಂತು ಎವೆಯಿಕ್ಕದೆ ದೇವಿಯನ್ನು ನೋಡುತ್ತ ಭಕ್ತಿಯ ಹಗ್ಗದಿಂದ ಆಕೆಯ ಉಜ್ವಲ ಮೂರ್ತಿಯನ್ನು ಸೆಳೆದು ಕಣ್ಣುಗಳ ಹಾದಿಯಿಂದ ಅದನ್ನು ತನ್ನ ಹೃದಯದಲ್ಲಿ ಸೇರಿಸಿಕೊಳ್ಳುತ್ತಿರುವಾಗ, ಮತ್ತೊಬ್ಬ ಕ್ಷತ್ರಿಯ ವೀರನ ಜಯಜಯಕಾರ ಧ್ವನಿಯು ಆತನ ಕಿವಿಗೆ ಬಿದಿತು.

ಇಂದು ವರ್ಷದ ಉತ್ಸವವಿರುವದರಿಂದ ಹೀಗೆ ಜಯಘೋಷವಾದದ್ದು ಚಂಪತರಾಯನಿಗೆ ಆಶ್ಚರ್ಯಕರವಾಗಿ ತೋರಲಿಲ್ಲ; ಯಾಕಂದರೆ ದೇವಿಯ ದರ್ಶನಕ್ಕಾಗಿ ಇಂದು ಬುಂದೇಲಿಯ ಎಲ್ಲ ಕ್ಷತ್ರಿಯ ರಾಜರೂ, ಪ್ರಜೆಗಳೂ ಬರತಕ್ಕವರಾಗಿದ್ದು, ಅವರೆಲ್ಲರ ಜಯಘೋಷದಿಂದ ವಿಂಧ್ಯಾದ್ರಿಯ ದಿಕ್ತಟಗಳು ತುಂಬಿಹೋಗುತ್ತಿರುವದನ್ನು ಚಂಪತರಾಯನು ಅರಿತಿದ್ದನು; ಆದರೆ ತನ್ನ ಕಿವಿಗೆ ಬಿದ್ದ ಆ ನಿಸ್ಸತ್ವ ಜಯಘೋಷದ ರೀತಿಯನ್ನು ನೋಡಿ ಚಂಪತರಾಯನು ಸೋಜಿಗಗೊಂಡಿದ್ದನು. ಇಷ್ಟು ನಡುಗುವ ಕಸುವುಗೆಟ್ಟ ದನಿಯಿಂದ ಅಂಜುತ್ತಂಜುತ್ತ ಜಯಘೋಷಮಾಡುವ ಕ್ಷತ್ರಿಯನು ಯಾರೆಂದು ಆತನು ಹಿಂದಿರುಗಿ ನೋಡಲು, ರಣವೀರ ಸಭಾಕರಣ ಬುಂದೇಲನು ಆತನ ಕಣ್ಣಿಗೆ ಬಿದ್ದನು! ತನ್ನ ಸಿಂಹನಾದದಿಂದ ರಣಭೂಮಿಯನ್ನು ನಡುಗಿಸುತ್ತ, ತನ್ನ ಪ್ರತಾಪದಿಂದ ಶತ್ರುಗಳ ಉತ್ಸಾಹವನ್ನು ಕುಗ್ಗುಬಡಿಯುವ ಆ ರಣಕೇಸರಿಯು, ದೇವಿಯ ಎದುರಿಗೆ ನರಿಯಂತೆ ಇಷ್ಟು ಅಂಜುಬುರುಕನು ಯಾಕೆ ಆದನೆಂಬದರ ಗೂಢವು ಚಂಪತರಾಯನಿಗೆ ತಿಳಿಯದಾಯಿತು; ಮತ್ತು ಒಬ್ಬಾನೊಬ್ಬ ಪಾಪಿಷ್ಠ ಮನುಷ್ಯನ ಮೋರೆಯಂತೆ ಸಭಾಕರಣನ ಮೋರೆಯು ಕಪ್ಪು ಇಟ್ಟಿರುವದರ ಕಾರಣವನ್ನೂ ಚಂಪತರಾಯನು ತಿಳಿಯದಾದನು. ಸಭಾಕರಣನು ಚಂಪತರಾಯನ ಪ್ರಬಲ ಶತ್ರುವು; ಆದರೂ ಆ ಪ್ರತಾಪಿಯಾದ ತನ್ನ ಶತ್ರುವಿನ ಈ ಕನಿಕರದ ಸ್ಥಿತಿಯನ್ನು ನೋಡಿ ಚಂಪತರಾಯನು ಮರುಗಿದನು. ಆತನು ಕೃಪಾದೃಷ್ಟಿಯಿಂದ ಸಭಾಕರಣನನ್ನು ನೋಡುತ್ತಿರಲು, ಆ ಕ್ಷತ್ರಿಯ ವೀರನ ಕಣ್ಣುಗಳೊಳಗಿಂದ ಎರಡು ಅಶ್ರುಬಿಂದುಗಳು ಆತನ ಗಲ್ಲಗಳ ಮೇಲೆ ಬಿದ್ದವು. ಇವು ಭಕ್ತಿಪರವಶತೆಯಿಂದ ಸುರಿಯುವ ಅಶ್ರುಗಳಾಗಿರದೆ, ಸಭಾಕರಣನು ದುಃಖದಿಂದ ಕಣ್ಣೀರು ಸುರಿಸುತ್ತಿರುವನೆಂದು ಚಂಪತರಾಯನು ಕೂಡಲೆ ಕಂಡುಹಿಡಿದನು.

ಚಂಪತರಾಯನೂ, ಸಭಾಕರಣನೂ ಚಿಕ್ಕಂದಿನಲ್ಲಿ ಕೂಡಿ ಆಡಿದವರಾಗಿದ್ದರು. ಪರಸ್ಪರರ ಹೃದಯವನ್ನೂ, ಯೋಗ್ಯತೆಯನ್ನೂ ಪರಸ್ಪರರು ಅರಿತಿದ್ದರು. ತಮ್ಮ ಜನ್ಮಭೂಮಿಯಾದ ಬುಂದೇಲಖಂಡದ ದಾಸ್ಯವನ್ನು ಹೇಗೆ ದೂರಮಾಡಬೇಕೆಂಬದನ್ನು ಕುರಿತು ಇಬ್ಬರೂ ಯಾವಾಗಲೂ ಎಣಿಕೆ

ಹಾಕುತ್ತಿದ್ದರು ; ಆದರೆ ಒಂದಾನೊಂದು ಕಾಲ್ಪನಿಕ ಗೂಢ ಕಾರಣದಿಂದ ಸಭಾಕರಣನ ಹೃದಯದಲ್ಲಿ ಚಂಪತರಾಯನ ವಿಷಯದ ದ್ವೇಷಭಾವವು ಅಕಸ್ಮಾತ್ ಹುಟ್ಟಲು, ಆ ರಣಧೀರನ ಕೈಖಡ್ಗವು ಚಂಪತರಾಯನ ದೇಶೋದ್ಧಾರದ ಕಾರ್ಯಕ್ಕೆ ಸಹಾಯಮಾಡುವದರ ಬದಲು, ಅದು, ಸಮರದಲ್ಲಿ ಚಂಪತರಾಯನನ್ನು ಸಂಹರಿಸಲಿಕ್ಕೂ, ಚಂಪತರಾಯನ ದೇಶೋದ್ಧಾರದ ಪವಿತ್ರ ಕಾರ್ಯಕ್ಕೆ ಪ್ರತಿಬಂಧಮಾಡಲಿಕ್ಕೂ ಸಜ್ಜಾಯಿತು! ಆದರೂ ಆ ಸಭಾಕರಣನು ತನ್ನ ನೀಚತನಕ್ಕಾಗಿ ಪಶ್ಚಾತ್ತಾಪ ಪಟ್ಟು ಈಗ ಕಣ್ಣೀರು ಸುರಿಸುವದನ್ನು ನೋಡಿ ಚಂಪತರಾಯನ ಸರಳ ಹೃದಯವು ಕರಗಿತು. ತನ್ನ ಮಿತ್ರನ ಈ ಪ್ರೇಮಾಂಕುರವನ್ನು ಪ್ರೇಮದಿಂದ ಬೆಳಿಸದೆ, ಆತನನ್ನು ನಿರಾಕರಿಸಿ, ಆತನ ಬಿರಸು ಮಾತುಗಳಿಗೆ ಪ್ರತಿಯಾಗಿ ಬಿರಸು ಮಾತುಗಳನ್ನಾಡಿ, ಮರ್ಮಭೇದಕ ಮಾತುಗಳಿಂದ ಆತನ ಮನಸ್ಸನ್ನು ನೋಯಿಸುತ್ತ ಆತನ ಅವಿವೇಕ ತನಕ್ಕೆ ವಿಚಾರಶೂನ್ಯತೆಯ ಸ್ವರೂಪವನ್ನು ಉಂಟುಮಾಡಿದ್ದಕ್ಕಾಗಿ ಚಂಪತರಾಯನು ಪಶ್ಚಾತ್ತಾಪ ಪಟ್ಟನು. ಈ ವರೆಗೆ ತಾನು ಮಾಡುತ್ತ ಬಂದಿರುವ ತಪ್ಪನ್ನು ಈಗಾದರೂ ತಿದ್ದಿಕೊಂಡು ತನ್ನಮೇಲೆ ಸಿಟ್ಟಾದ ಕಾರಣವನ್ನು ಕೇಳಿ ಕ್ಷಮೆಬೇಡಿ ತನ್ನ ಮಿತ್ರನ ಸಿಟ್ಟು ಇಳಿಸಬೇಕೆಂತಲೂ ಆತನು ಮಾಡಿದನು ; ಅಷ್ಟರಲ್ಲಿ ಸಭಾಕರಣನು ಚಂಪತರಾಯನ ದ್ವೇಷಿಯಾದ ಕಂಚುಕಿರಾಯನೊಡನೆ ಮಾತಾಡುತ್ತ ತನ್ನ ಕಡೆಗೆ ತಿರಸ್ಕಾರದ ಔದ್ಧತ್ಯದಿಂದ ನೋಡಹತ್ತಿದ್ದನ್ನು ನೋಡಿ ಚಂಪತರಾಯನು ಸಂತಾಪಗೊಂಡು— "ಈ ದೇಶದ್ರೋಹಿಗಳ ನಿರ್ಮೂಲಮಾಡಿ ಅವರ ಹೆಣಗಳ ರಾಶಿಯ ಮೇಲೆಯೇ ಸ್ವದೇಶ ಸ್ವಾತಂತ್ರ್ಯದ ಧ್ವಜವನ್ನು ನಿಲ್ಲಿಸಬೇಕೆಂದು ತನ್ನೊಳಗೆ ಅಂದುಕೊಂಡು, ಸಿಟ್ಟಿನಿಂದ ಮೋರೆಯು ಕೆಂಪಾಗುತ್ತಿರಲು, ಹತ್ತಿರದಲ್ಲಿದ್ದ ಒಂದು ಆಸನದ ಮೇಲೆ ಕುಳಿತುಕೊಂಡನು ; ಅಷ್ಟರಲ್ಲಿ ಓರಛಾ ಸಂಸ್ಥಾನದ ರಾಜನಾದ ಪಹಾರಸಿಂಗನೂ, ಆತನ ಹೆಂಡತಿಯಾದ ಹೀರಾದೇವಿಯೂ ಸಪರಿವಾರ ದೇವಿಯ ಮಂದಿರವನ್ನು ಅಹಂಭಾವದಿಂದ ಪ್ರವೇಶಿಸಿದರು.

ಪಹಾರಸಿಂಗನು ಚಂಪತರಾಯನಿಗೆ ಹೊರಗಿನವನಲ್ಲ, ಕಕ್ಕನಮಗನು. ಯವನರು ಅಪಹರಿಸಿದ್ದ ಆತನ ಓರಛಾ ಸಂಸ್ಥಾನವನ್ನು ಚಂಪತರಾಯನು

ತನ್ನ ಪರಾಕ್ರಮದಿಂದ ಗೆದ್ದು, ಅದನ್ನು ತನ್ನ ಬಂಧು ಪಹಾರಸಿಂಗನಿಗೆ ಕೊಟ್ಟು, ತಾನು ಮಹೋಬವ ಸಣ್ಣ ಸಂಸ್ಥಾನದಿಂದಲೇ ಸಂತುಷ್ಟ ನಾದವನ್ದರಿಂದ ಆತನು ಪಹಾರಸಿಂಹನ ಉಪಕಾರಕರ್ತೃವೂ ಆಗಿದ್ದನು. ಹೀಗೆ ಬಂಧುತ್ವ - ಉಪಕಾರಕರ್ತೃತ್ವಗಳ ಮೂಲಕ ಪಹಾರಸಿಂಗನು ಚಂಪತರಾಯನಿಗೆ ಅತ್ಯಂತ ಕೃತಜ್ಞನಾಗಿರಬೇಕಾಗಿತ್ತಷ್ಟೆ? ಆದರೆ ಕೃತಘ್ನ ಪಹಾರಸಿಂಗನೂ, ಆತನ ರಾಣಿಯಾದ ಹೀರಾದೇವಿಯೂ ಚಂಪತ ರಾಯನ ವಿಷಯವಾಗಿ ದೀರ್ಘದ್ವೇಷವನ್ನು ತಾಳಿದ್ದರು! ಕಾರ್ಯವಾಗುವ ವರೆಗೆ ಆ ಗಂಡಹೆಂಡಿರು ಆದರದಿಂದ ಮಾಡಿದ ಚಂಪತರಾಯನ ಸೇವೆ-ಸತ್ಕಾರಗಳನ್ನು ನೋಡಿದವರು, ತನ್ನ ಉಪಕಾರ ಕರ್ತೃವಿನ ವಿಷಯವಾಗಿ ಈ ದುಷ್ಟದಂಪತಿಗಳು ಈಗ ಇಷ್ಟು ಕೃತಘ್ನರು ಹೇಗಾದ ರೆಂದು ಆಶ್ಚರ್ಯಪಡದೆ ಇರುತ್ತಿದ್ದಿಲ್ಲ. ಸ್ವತಃ ಚಂಪತರಾಯನಿಗೂ ಮೇಲೆ ಮೇಲೆ ಈ ಮಾತಿನ ಆಶ್ಚರ್ಯವಾಗುತ್ತಿತ್ತು. ಪಹಾರಸಿಂಗನು ತನ್ನ ಹೆಂಡತಿಯ ಅಲೋಚನೆಯಂತೆ ಔರಂಗಜೇಬಬಾದಶಹನ ಪಕ್ಷವಹಿಸಿ ಚಂಪತರಾಯನ ಸ್ವದೇಶೋದ್ಧಾರದ ಕಾರ್ಯಕ್ಕೆ ಪರಿಪರಿಯಿಂದ ವಿಘ್ನ ಮಾಡತೊಡಗಿದ್ದನು. ದೇಶದ ಅವನತ ಸ್ಥಿತಿಯಲ್ಲಿ ಇಂತಹ ಕೃತಘ್ನ ತೆಯು ವಿಪುಲವಾಗಿ ಕಣ್ಣಿಗೆ ಬೀಳುವದು ಆಶ್ಚರ್ಯದ ಸಂಗತಿಯಲ್ಲ. ಇಂಥ ಕೃತಘ್ನ ಪಹಾರಸಿಂಗನೂ, ಆತನ ಹೆಂಡತಿಯೂ ಚಂಪತರಾಯನನ್ನು ತಿರಸ್ಕಾರದ ಕ್ರೂರದೃಷ್ಟಿಯಿಂದ ನೋಡುತ್ತ ಉಚ್ಚಾಸನದಮೇಲೆ, ಆದರೆ ಚಂಪತರಾಯನಿಂದ ಸ್ವಲ್ಪದೂರದಲ್ಲಿ ಕುಳಿತುಕೊಂಡರು. ಈ ದುಷ್ಟ ದಂಪತಿಗಳ ಹೃದಯದಲ್ಲಿ ದೇವಿಯ ವಿಷಯದ ಭಕ್ತಿಯ ಗಂಧವೂ ಇಲ್ಲದಿರಲು, ಅವರು ಕೇವಲ ತಮ್ಮ ವೈಭವದ ಹೆಮ್ಮೆಯನ್ನು ತೋರಿಸುವದಕ್ಕಾಗಿ ಸ್ತುತಿ ಪಾಠಕರ ಸ್ತುತಿಘೋಷದೊಡನೆ ದೇವಿಯ ಮಂದಿರವನ್ನು ಪ್ರವೇಶಿಸಿದ್ದರು. ಆ ನಾಸ್ತಿಕರು ದೇವಿಯನ್ನು ತಲೆಬಾಗಿ ನಮಿಸಲಿಲ್ಲ, ಬಾಯಿಬಿಟ್ಟು ಆ ಭಗವತಿಯ ಜಯಘೋಷವನ್ನೂ ಮಾಡಲಿಲ್ಲ. ಮೋಟುಮರದಂತೆ ನಿಂತು ಕೈಮುಗಿದು ಹೆಮ್ಮೆಯಿಂದ ಕುಳಿತುಕೊಂಡಿದ್ದರು!

ಹೀಗೆ ಒಬ್ಬೊಬ್ಬರೇ ಬುಂದೇಲಿಯ ಕ್ಷತ್ರಿಯರಾಜರು ಜಯಘೋಷ ಮಾಡುತ್ತ ದೇವಿಯ ಮಂದಿರವನ್ನು ಪ್ರವೇಶಿಸಿದರು. ಅವರಲ್ಲಿ ಯಾರು

ಚಂಪತರಾಯನ ಪಕ್ಷದವರಿದ್ದರು, ಯಾರು ಪಹಾರಸಿಂಗನ ಪಕ್ಷದವರು, ಅರ್ಥಾತ್ ಮೊಗಲರ ಪಕ್ಷದವರು ಇದ್ದರು. ಚಂಪತರಾಯನ ಪಕ್ಷಕ್ಕಿಂತ ಮೊಗಲರ ಪಕ್ಷವು ದೊಡ್ಡದಾಗಿತ್ತು; ಆದರೂ ಬುಂದೇಲಿಯ ಪ್ರಜೆಗಳು ಮನಸ್ಸಿನಿಂದ ಚಂಪತರಾಯನನ್ನೇ ವಿಶೇಷವಾಗಿ ಪ್ರೀತಿಸುತ್ತಿದ್ದರು. ಹೀಗೆ ಬುಂದೇಲಿಯ ಎಲ್ಲ ಅರಸರು ತಮ್ಮತಮ್ಮ ಸ್ಥಳಗಳಲ್ಲಿ ಕುಳಿತು ಕೊಂಡಿರುವದನ್ನು ನೋಡಿ ದೇವಿಯ ಮುಖ್ಯ ಪೂಜಾರಿಯು ಕೈಬೋಡಿಸಿ ಚಂಪತರಾಯನನ್ನು ಕುರಿತು—ರಾಜನ್, ದೇವಿಯ ಪೂಜೆಯ ಸರ್ವಸಿದ್ಧತೆಯಾಗಿರುವದು. ಪೂಜೆಯನ್ನು ಆರಂಭಿಸಬೇಕೋ ಇನ್ನೂ ಯಾರಾದರೂ ಬರುವವರು ಇರುವರೋ, ಎಂದು ಪ್ರಾಣನಾಥ ಪ್ರಭುಗಳು ಕೇಳುತ್ತಿರುವರು, ಎಂದು ಕೇಳಿಕೊಂಡನು. ಅದಕ್ಕೆ ಚಂಪತರಾಯನು—"ಇಂದಿನ ಪುಣ್ಯಕರ ಮಹೋತ್ಸವವನ್ನು ನೋಡುವದಕ್ಕೆ ಪ್ರತಿವರ್ಷದಂತೆ ಎಲ್ಲ ಅರಸರೂ ಬಂದಿರುವರು. ಇನ್ನು ಪೂಜೆಯನ್ನು ಆರಂಭಿಸಲು ಬಾಧಕವಿಲ್ಲ. ನನ್ನ ಈ ವಿಜ್ಞಾಪನೆಯನ್ನು ಪ್ರಾಣನಾಥಪ್ರಭುಗಳಿಗೆ ತಿಳಿಸು" ಎಂದು ಹೇಳಿ ಸುತ್ತುಮುತ್ತು ನೋಡಲು, ತನ್ನ ಮಗನಾದ ಕುಮಾರ ಛತ್ರಸಾಲನು ಅಲ್ಲಿ ಎಲ್ಲಿಯೂ ಕಾಣಲಿಲ್ಲ. ಆಗ ಚಂಪತರಾಯನು ಮತ್ತೆ ಪೂಜಾರಿಗೆ—"ಆಚಾರ್ಯ, ಇಲ್ಲಿ ಕುಮಾರನು ಎಲ್ಲಿಯೂ ಕಾಣುವದಿಲ್ಲ. ಇಷ್ಟರಲ್ಲಿ ಅತನು ಬರುತ್ತಿರಬಹುದು. ಈ ಪುಣ್ಯಕಾರ್ಯವನ್ನು ನೋಡುವ ಇಚ್ಛೆಯು ಅತನಿಗೆ ಬಹಳ. ಅತನು ಬಂದಕೂಡಲೆ ಪೂಜೆಯನ್ನು ಆರಂಭಿಸಿದರೆ, ಇಲ್ಲಿ ಕೂಡಿರುವ ಎಲ್ಲ ಸಜ್ಜನರ ಉಪಕಾರವನ್ನು ಅತನು ನೆನಿಸಬಹುದು.

ಈ ಮೇರೆಗೆ ನುಡಿದು ಚಂಪತರಾಯನು ತನ್ನ ಒಬ್ಬ ಸೇವಕನನ್ನು ಕುಮಾರ ಛತ್ರಸಾಲನನ್ನು ಬೇಗನೆ ಕರತರುವದಕ್ಕಾಗಿ ಕಳಿಸಿಕೊಟ್ಟನು. ಇದನ್ನು ನೋಡಿ ಹೀರಾದೇವಿಯು ಸಂತಪ್ತಳಾದಳು. ಮುಖ್ಯಪೂಜಾರಿಯು ಪೂಜೆಯನ್ನು ಆರಂಭಿಸುವದಕ್ಕಾಗಿ ಕ್ಷುದ್ರನಾದ ಮಹೋಬದ ಅರಸನನ್ನು ಕೇಳಿದ್ದು ಅಕೆಗೆ ಸಹನವಾಗಲಿಲ್ಲ; ಮತ್ತು ಮಹೋಬದ ಕ್ಷುದ್ರ ರಾಜ ಪುತ್ರನ ಸಲುವಾಗಿ ತಾವೆಲ್ಲರೂ ಹಾದಿಯನೋಡುತ್ತ ಕುಳಿತುಕೊಳ್ಳುವದು ಅಕೆಗೆ ಅಪಮಾನಕರವಾಗಿ ತೋರಿತು. ಹೀಗೆ ತಮ್ಮ ಮಾನಖಂಡನಮಾಡಿ

ದ್ದಕ್ಕಾಗಿ ಪೂಜಾರಿಯ ಶಾಸನ ಮಾಡತಕ್ಕದ್ದೆಂದು ಆ ಕೃತಘ್ನಸ್ತ್ರೀಯು ತನ್ನ ಪತಿಗೆ ಆಜ್ಞಾಯಸ್ವರೂಪದಿಂದ ವಿಜ್ಞಾಪಿಸಿದಳು. ಸಭಾಕರಣ ಬುಂದೇಲನೂ ಆಕೆಯ ಮಾತನ್ನು ಪುಷ್ಟೀಕರಿಸಿದನು. ಆಗ ಪ್ರಹಾರ ಸಿಂಗನು ಗಟ್ಟಿಯಾಗಿ ನಕ್ಕು ಅವರನ್ನು ಕುರಿತು—" ಯುವರಾಜ ವಿಮಲ ದೇವನೂ, ಯುವರಾಜ ದಲಪತರಾಯನೂ ಇಲ್ಲಿ ಇರುವರೋ ಹೇಗೆಂಬ ದನ್ನು ಮೊದಲು ನೋಡಿರಿ; ಅವರಿಲ್ಲದಿದ್ದರೂ ಪೂಜೆಯನ್ನು ಆರಂಭಿಸ ಬೇಕೆಂದು ನೀವು ಹೇಳುತ್ತಿದ್ದರೆ, ಹಾಗೆ ಮಾಡುವದಕ್ಕಾಗಿ ಈಗಲೇ ನಾನು ಪೂಜಾರಿಯನ್ನು ಆಜ್ಞಾಪಿಸುವೆನು! ಎಂದು ಹೇಳಿದನು. ಆಗ ಹೀರಾದೇವಿಗೆ ತನ್ನ ಮಗ ವಿಮಲದೇವನೂ, ಸಭಾಕರಣನಿಗೆ ತನ್ನ ಮಗ ದಲಪತರಾಯನೂ ಅಲ್ಲಿ ಎಲ್ಲಿಯೂ ಕಾಣಲಿಲ್ಲ. ಅದರಿಂದ ಅವರಿಬ್ಬರೂ ತಮ್ಮ ಸಿಟ್ಟನ್ನು ನುಂಗಿಕೊಳ್ಳಬೇಕಾಯಿತು. ಅವರು ಕೂಡಲೆ ಕುಮಾರರನ್ನು ಕರತರುವದಕ್ಕಾಗಿ ಸೇವಕರನ್ನು ಓಡಿಸಿದರು; ಆದರೆ ಸೇವಕರು ಗುಡಿಯನ್ನು ಬಿಟ್ಟು ಹೊರಬೀಳುವದರೊಳಗೇ ಒಬ್ಬ ಹನ್ನೆರಡುವರ್ಷದ ಬಾಲಿಕೆಯು ಓಡುತ್ತ ಬಂದು— "ಕುಮಾರರು ಈಗ ಹಿಂದೆ ಬರುವರು" ಎಂದು ಹೇಳುತ್ತ ದೇವಿಯ ಮಂದಿರವನ್ನು ಹೊಕ್ಕಳು.

ಆ ಬಾಲಿಕೆಯು ಧಾರೀರ ಸಂಸ್ಥಾನದ ಅರಸನಾದ ಕಂಚುಕಿರಾಯನ ಮಗಳು. ಆಕೆಯ ಹೆಸರು "ವಿಜಯಾ"ಎಂಬದು" ವಿಜಯೆಯು ಸೌಂದರ್ಯದಲ್ಲಿ ಅಪ್ರತಿಮಳಾಗಿದ್ದಳು. ಆಗಿನಬುಂದೇಲಖಂಡದಲ್ಲಿ ವಿಜಯೆಯನ್ನು ಸರಿಗಟ್ಟುವ ಸೌಂದರ್ಯಶಾಲಿನಿಯರು ಅಪರೂಪ. ಅಂಥ ಸೌಂದರ್ಯದ ಪುತ್ಥಳಿಯು ಓಡಿಬಂದದ್ದರಿಂದ ಆಕೆಯ ಗಲ್ಲಗಳು ಕೆಂಪಾಗಿದ್ದವು. ಹಣೆಯಲ್ಲಿ ಬೆವರ ಹನಿಗಳು ಮುತ್ತುಗಳಂತೆ ಒಪ್ಪುತ್ತಿದ್ದವು. ಆಕೆಯ ವೇಗದ ಶ್ವಾಸೋಚ್ಛ್ವಾಸದಿಂದ ದೇವಿಯಮಂದಿರವು ಸುಗಂಧಮಯವಾಗುತ್ತಲಿತ್ತು. ವಿಜಯೆಯ ಮುಡಿಕಟ್ಟದೆ ಯಿದ್ದ ಬಿಚ್ಚಹೆರಳು ಆಕೆಯ ಹೆಗಲಮೇಲೆ ಬಿದ್ದಿರುವಾಗ, ಅದನ್ನು ಆಕೆಯು ಕೈಯಿಂದ ಬೆನ್ನಿಗೆ ನೂಕಲು, ಅದರಲ್ಲಿ ಮುಡಿದಿದ್ದ ಗುಲಾಬಿಯ ಹೂಗಳ ಪಕಳೆಗಳು ಬಳಬಳನೆ ಉದುರಿದವು. ಆ ಬಾಲಿಕೆಯ ಹರಿಣ ನೇತ್ರಗಳು ಅತ್ಯಂತ ಚಂಚಲವಾಗಿದ್ದವು. ಮುಂಗುರುಳುಗಳು ಮುಂದಮಾರುತನಿಂದ ಆಲೆದಾಡುತ್ತಲಿದ್ದವು. ಆಕೆಯು ಎಡಬಲ

ಗಳನ್ನು ನೋಡದೆ ನೆಟ್ಟಗೆ ದೇವಿಯ ಗರ್ಭಗುಡಿಯ ಬಾಗಿಲಿಗೆ ಹೋಗಿ, ತನ್ನ ಸ್ವರ್ಗೀಯ ಮಂಜುಲಧ್ವನಿಯಿಂದ ಪ್ರಾಣನಾಥ ಪ್ರಭುಗಳನ್ನು ಕುರಿತು—"ಪ್ರಭೋ, ಯುವರಾಜ ಛತ್ರಸಾಲನೂ, ಆತನ ಗೆಳೆಯರಾದ ಯುವರಾಜ ದಲಪತರಾಯ, ಯುವರಾಜ ವಿಮಲದೇವರೂ ಯುದ್ಧದಲ್ಲಿ ಜಯಪಡೆದು ದೇವಿಯ ದರ್ಶನಕ್ಕಾಗಿ ಇತ್ತ ಕಡೆಗೇ ಬರುತ್ತಿರುವರು. ತಾವು ಬರುವವರೆಗೆ ಮಂಗಳಕಾರ್ಯವನ್ನು ಆರಂಭಿಸಬಾರದೆಂದು ತಮ್ಮನ್ನು ಬೇಡಿಕೊಳ್ಳಬೇಕೆಂದು ಅವರು ಹೇಳಿದ್ದರಿಂದ, ನಾನು ತಮ್ಮಮುಂದೆ ಹೇಳುವದಕ್ಕಾಗಿ ಮುಂದೆ ಓಡಿಬಂದೆನು" ಎಂದು ಹೇಳಿದಳು. ಆದನ್ನು ಕೇಳಿದ ಕೂಡಲೆ ಪ್ರಾಣನಾಥ ಪ್ರಭುಗಳು ಗರ್ಭಗುಡಿಯಿಂದ ಹೊರಗೆ ಬರುತ್ತ ವಿಜಯೆಯನ್ನು ಕುರಿತು—"ವತ್ಸೇ, ಎಲ್ಲಿಯ ಯುದ್ಧವು? ಕುಮಾರರು ಜಯವನ್ನೇನು ಸಂಪಾದಿಸಿದರು?" ಎಂದು ಕೇಳುತ್ತ ಗರ್ಭಗುಡಿಯಿಂದ ಹೊರಗೆ ಬಂದರು.

ಅವರು ಹೊರಗೆ ಬಂದಾಗ ಒಂದು ತೇಜೋವಲಯವು ಅವರ ಮುಖಮಂಡಲವನ್ನು ವ್ಯಾಪಿಸಿ ವಿಹರಿಸುತ್ತಿರುವಂತೆ ತೋರಿತು! ಅವರ ತೇಜಸ್ವಿ ಮುಖಮಂಡಲದಿಂದ ಅವರ ಕಠಿಣತರ - ಬ್ರಹ್ಮಚರ್ಯವೂ, ಪವಿತ್ರತರ ನಿಷ್ಕಾಮಬುದ್ಧಿಯೂ, ಉತ್ಕಟತರ ತಪೋಬಲವೂ ಹೊರಬಿದ್ದು ಹರಿದು ಬರುತ್ತಿದ್ದವು! ಆ ಮಹಾತ್ಮರ ಮಹಾಮಹಿಮೆಯಿಂದ ಎಲ್ಲರೂ ಸ್ವಾಭಾವಿಕವಾಗಿ ತಟ್ಟನೆ ಎದ್ದು ನಿಲ್ಲುತ್ತಿರಲು, ದುರಭಿಮಾನಿಗಳಾದ ಪಹಾರಸಿಂಗನೂ-ಹೀರಾದೇವಿಯೂ, ಏಳಲಾರದೆಯೂ ಕುಳಿತು ಕೊಳ್ಳಲಾರದೆಯೂ ಪೇಚಾಡುತ್ತಲಿದ್ದರು. ಆಗ ಪ್ರಭುಗಳು ವಿಜಯೆಯ ಬೆನ್ನಮೇಲೆ ಕೈಯಾಡಿಸುತ್ತ ಆಕೆಯ ಗದ್ದ-ತುಟಿಗಳನ್ನು ಹಿಡಿದು ರಮಿಸುತ್ತ ಆಕೆಯನ್ನು ಹತ್ತರಕರೆದು ಕೊಳ್ಳುತ್ತಿರಲು, ಅಷ್ಟರಲ್ಲಿ ಮುಖ್ಯಪೂಜಾರಿಯು ಪ್ರಭುಗಳಿಗಾಗಿ ಆಸನವನ್ನು ಸಿದ್ಧಪಡಿಸಿದ್ದನು. ಪ್ರಭುಗಳು ತಮ್ಮ ಶಿಷ್ಯವೃಂದವನ್ನು ಕುರಿತು—ಸಜ್ಜನರೇ, ಕುಳಿತುಕೊಳ್ಳಿರಿ. ನಾನು ಬಂದ ಹೋದಾಗೆಲ್ಲ ಎದ್ದು ನಿಲ್ಲಹತ್ತಿದರೆ ಅದೊಂದು ಕೆಲಸವೇ ಆದೀತಲ್ಲ? ಈ ಸುಂದರ ಬಾಲಿಕೆಯು ತಂದಿರುವ ಯುದ್ಧದ ಸುದ್ದಿಯನ್ನು ಶಾಂತಚಿತ್ತದಿಂದ ಕೇಳೋಣ ಕುಳಿತುಕೊಳ್ಳಿರಿ, ಎಂದು ವಿಜಯೆಯೊಡನೆ ಆಸನದಮೇಲೆ ಕುಳಿತುಕೊಳ್ಳಲು, ಎಲ್ಲರೂ ತಮ್ಮ

ತಮ್ಮ ಆಸನಗಳಮೇಲೆ ಕುಳಿತುಕೊಂಡರು. ಆಗ ವಿಜಯೆಯು ಅತ್ಯಂತ ಉತ್ಸಾಹದಿಂದ ಪ್ರಭುಗಳನ್ನು ಕುರಿತು—

ಪ್ರಭೋ, ಇಂದಿನ ದೇವಿಯ ಪೂಜೆಗಾಗಿ ಮಾಲೆಮಾಡಬೇಕೆಂದು ಹೂವು ತರುವದಕ್ಕಾಗಿ ನಾನೂ ಯುವರಾಜ ವಿಮಲದೇವನೂ ಈ ಬಳಿಯ ವಿಂಧ್ಯಾರಣ್ಯಕ್ಕೆ ಹೋದೆವು. ಆಗ ಸೂರ್ಯನ ಹೊಂಬಣ್ಣದ ಕಿರಣಗಳು ಹೂಗಳಮೇಲೆ ಬಿದ್ದು, ನಮ್ಮ ಮನಸ್ಸನ್ನು ಬಹಳವಾಗಿ ಎಳೆದುಕೊಂಡವು. ನಾವು ಹೂಗಳನ್ನು ಎತ್ತುವ ಭರದಲ್ಲಿ ಅರಣ್ಯದೊಳಗೆ ದೂರಹೋದೆವು. ಹೂಗಳಿಂದ ನಮ್ಮ ಬುಟ್ಟಿಯು ತುಂಬಿಹೋಯಿತು. ಆಹಹ! ಎಂತಹ ಚಂದವಾದ ಹೂಗಳವು! ನಾನೂ ವಿಮಲದೇವನೂ ಆ ಹೂಗಳ ಮಾಲೆಮಾಡುತ್ತ ಒಂದು ಹಾಸುಗಲ್ಲಮೇಲೆ ಕುಳಿತುಕೊಂಡೆವು. ನಾನು ಬಾಳೆಯ ನಾರಿನ ಮೇಲಿನ ತುದಿಯಿಂದ ಮಾಲೆಕಟ್ಟಹತ್ತಿದೆನು, ಯುವರಾಜ ವಿಮಲದೇವನು ಕೆಳಗಿನ ತುದಿಯಿಂದ ಮಾಲೆಕಟ್ಟಹತ್ತಿದನು. ಬೇಗನೆ ನಮ್ಮ ಸುಂದರಮಾಲೆಯು ಸಿದ್ಧವಾಯಿತು. ವಿಮಲದೇವನು ನನ್ನಷ್ಟೇ ಚಟವಟಿಕೆಯಿಂದ ಮಾಲೆಕಟ್ಟುವದನ್ನು ನೋಡಿ ನಾನು ಆತನಿಗೆ—"ಹೆಂಗಸರ ಮಾಲೆಕಟ್ಟುವ ಜಾಣತನವೂ ನಿನ್ನಲ್ಲಿ ಚನ್ನಾಗಿರುತ್ತದೆ ಬಿಡು" ಎಂದು ನಗೆಯಾಡುತ್ತಿದ್ದೆನು; ಅಷ್ಟರಲ್ಲಿ ಹತ್ತಿಪ್ಪತ್ತು ಜನ ಮುಸಲ್ಮಾನರು ನಮ್ಮನ್ನು ಮುತ್ತಿದರು. ಅವರ ಉಡಿಗೆ ತೊಡಿಗೆಗಳು ಬೆಲೆಯುಳ್ಳವಿದ್ದವು. ಅಫೂವಿನ ಅಮಲು ಏರಿದವರಂತೆ ಅವರ ಕಣ್ಣುಗಳು ಅರ್ಧಮುಚ್ಚಿದ್ದವು. ಅವರಿಗೆ ಯಾರ ಅಂಜಿಕೆಯೂ ಇದ್ದಂತೆ ತೋರಲಿಲ್ಲ. ಅವರು ಒಬ್ಬರನ್ನೊಬ್ಬರು ನೋಡಿ ಕೈಹೊಡೆದು ನಗುತ್ತಿದ್ದರು. ಅವರ ಮಾತು ಬಲು ಎಟ್ಟು, ನನಗೆ ಚನ್ನಾಗಿ ತಿಳಿಯುತ್ತಿದ್ದಿಲ್ಲ. ಅಂಥ ಮುಸಲ್ಮಾನರು ಅಪ್ಪನ ದರ್ಬಾರದಲ್ಲಿ ಮೇಲೆಮೇಲೆ ಬರುತ್ತಿರುವರು. ಅವರನ್ನು ಅಪ್ಪನು ದೇವರಂತೆ ಪೂಜಿಸುವನು. ಅಪ್ಪನಿಗೆ ಅವರೇ ದೇವರು!



೨ನೆಯ ಪ್ರಕರಣ-ಮೇನಿಯ ಪ್ರಸಾದ!

ಮಗಳ ಈ ಮಾತುಗಳನ್ನು ಕೇಳಿ ಕಂಚುಕಿರಾಯನು ಸಂತಾಪಗೊಂಡನು. ತನ್ನ ಬಾದಶಹನ ಜನರನ್ನು ಹೀಗೆ ಆಡಿಕೊಂಡದ್ದು ಅತನಿಗೆ ಸಹನವಾಗಲಿಲ್ಲ. ಮಗಳ ಈ ಉದ್ಧತತನವು ಒಬ್ಬರ ಕಿವಿಯಿಂದೊಬ್ಬರ ಕಿವಿಗೆ ಹೋಗುತ್ತ, ಬಾದಶಹರ ಕಿವಿಗೆ ಮುಟ್ಟಿಗಿಟ್ಟಿದರೆ ತನ್ನ ಪರಿಸ್ಥಿತಿ ಏನೆಂದು ಆ ಧಾರೀರ ಸಂಸ್ಥಾನದ ವ್ಯವಸ್ಥಾರಾಜನು ಬೆದರಿದನು. ಅತನು ಮಗಳನ್ನು ಪ್ರೇರಿಸಿ—" ವಿಜಯೆ, ಹೆಚ್ಚು ಹರಟಬೇಡ. ಸಾರ್ವಭೌಮರ ಜಾತಿಯ ಆಘನನಂತರು ಮುಂದೇನು ಮಾಡಿದರೆಂಬದನ್ನಷ್ಟು ಹೇಳು " ಎಂದನು. ಈ ಮೇರೆಗೆ ಮಗಳನ್ನು ಬೆದರಿಸಿ ನೊಗಲಿದ ಘನತೆಯನ್ನು ಒಡನುಡಿಯುವ ಕಂಚುಕಿರಾಯನ ಪುಕ್ಕತನವನ್ನು ತಡೆಯಲಾರದೆ ಚಂಪತರಾಯನು ಅತನನ್ನು ಕುರಿತು—

ಚಂಪತರಾಯ—ಕಂಚುಕಿರಾಯರೇ, ನಿಮ್ಮ ಬಾದಶಹರ, ಅಥವಾ ಅವರ ಜಾತಿಯವರ ಘನನಂತಿಗೆಯನ್ನು ಪಾಪ! ಈ ಕೂಸೇನು ಬಲ್ಲದು? ಸ್ವಜನರಲ್ಲಿ ಸೊಕ್ಕಿನಿಂದ ಸೆಟೆಯುವವರು ಬಾದಶಹರ ಸಿಂಹ ಸನದ ಮುಂದೆ ಯಂತು ಇರಲಿ, ಬಾದಶಹರ ಹೆಸರು ಕಿವಿಗೆಬಿದ್ದಕೂಡಲೆ ಎಷ್ಟು ನಮ್ರರಾಗ ಬೇಕೆಂಬದರ ಪರಿಜ್ಞಾನವು ನಿಮ್ಮಂಥ ಪ್ರಬುದ್ಧರಿಗಲ್ಲದೆ ಇಂಥ ಸಣ್ಣ ಹುಡುಗರಿಗೆ ಹೇಗಿದ್ದೀತು? ಅದಕ್ಕೂ ಅಭ್ಯಾಸಬೇಕು, ಶಿಕ್ಷಣಬೇಕು, ಸುಮ್ಮನೆ ಎಲ್ಲರಿಗೂ ಬರುವದೆಯೆ? ಸಿಟ್ಟಾಗಬೇಡಿರಿ; ಮಗಳು ಹೇಳುವದನ್ನು ಸಮಾಧಾನದಿಂದ ಕೇಳಿರಿ.

ಕಂಚುಕಿರಾಯ (ಸಿಟ್ಟಿನಿಂದ ಚಂಪತರಾಯನನ್ನು ನೋಡುತ್ತ)—ವಿಜಯೇ, ಮುಂದೇನಾಯಿತು ಹೇಳು.

ವಿಜಯೆ—ಅವರೇನೇನೋ ತಮ್ಮ ಮಾತಿನಲ್ಲಿ ಮಾತಾಡಿದರು, ಅದೆಲ್ಲ ನನಗೆ ತಿಳಿಯಲಿಲ್ಲ. ಆದರೆ ಕೈಮಾಡಿ ಕಣ್ಣು ಜೆವ್ವುಟ ನನಗೆ—" ಈ ಹುಡುಗೆಯು ಶಹಜಾದಾನ ಜನಾನಖಾನೆಗೆ ಹೋಗುವಷ್ಟು ,ಸುಂದರಿಯಾಗಿರುವಳೆಂ " ತಲೂ, ವಿಮಲದೇವನಿಗೆ—" ಈ ಹುಡುಗನು ಬಾದಶ

ಹರ ದರ್ಬಾರದ ಹುಜರೆಯಾಗಲು ನೆಟ್ಟಗಿರುವನೆಂ" ತಲೂ ನುಡಿದರು. ಈ ಅಪಮಾನದ ಮಾತುಗಳನ್ನು ಕೇಳಿ ನನಗೆ ಬಹಳ ಸಿಟ್ಟು ಬಂದಿತು.

ಈ ಮೇರೆಗೆ ನುಡಿಯುವಾಗ ನಿಜವಾಗಿಯೇ ವಿಮಲೆಯ ಕಣ್ಣುಗಳು ಕೆಂಪಾದವು. ಸಿಟ್ಟಿನ ಭರದಲ್ಲಿ ಆಕೆಯ ಬಾಯಿಂದ ಮಾತುಗಳೇ ಹೊರಡಲೊಲ್ಲವು. ಆಗ ಚಂಪತರಾಯನು ಕಂಚುಕಿರಾಯನಿಗೆ—

ಚಂಪತರಾಯ—ಕಂಚುಕಿರಾವ, ನಿಮ್ಮ ಬಾದಶಹರ ಜಾತಿಯ ಘನವಂತರು ನಿಮ್ಮ ಮಗಳ ವಿಷಯದಲ್ಲಿ ಆಡಿದ ಅಪಮಾನದ ಮಾತುಗಳನ್ನು ಕೇಳಿದಿರೇನು? ನಿಮ್ಮ ಮಗಳದೇ ಏಕೆ, ತಮ್ಮ ಅಧಿಕಾರದೊಳಗಿದ್ದ ಪ್ರತಿ ಒಬ್ಬ ಹಿಂದೂ ಸ್ತ್ರೀಪುರುಷರ ಅಪಮಾನವನ್ನು ಅವರು ಹೀಗೆಯೇ ಮಾಡುವರು. ಬುಂದೇಲಖಂಡದೊಳಗಿನ ಲಾವಣ್ಯವತಿಯರಾದ ಕನ್ಯೆಯರು ಅವರ ಅಮಾನುಷ-ವಿಷಯೇಚ್ಛೆಯನ್ನು ತೃಪ್ತಿಗೊಳಿಸುವದಕ್ಕಾಗಿಯೂ, ಸುಕುಮಾರರಾದ ರಾಜಕುಮಾರರು ಬಾದಶಹರ ಕಾಲೊಳಗಿನ ಜೋಡು ಹಿಡಿಯುವದಕ್ಕಾಗಿಯೂ ಇರುವರೆಂದು ಅವರು ತಿಳಿದಿರುವರು. ತಂಗೀ,ನೀನು ಧಾರೀರದ ರಾಜಕನ್ಯೆಯಿರುನೆನೆಂದೂ, ವಿಮಲದೇವನು ಓರಛಾದ ಯುವ ರಾಜಸಿರುವನೆಂದೂ ನೀವು ಅವರಿಗೆ ಹೇಳಿದಿರೇನು?

ವಿಜಯೆ—ಹೇಳಿದೆವು, ಹಾಗೆ ಹೇಳಿದರೆ ನಮ್ಮ ಬಿಡುಗಡೆಯಾದೀತೆಂದು ನಾವು ತಿಳಿದಿದ್ದೆವು; ಆದರೆ ನಮ್ಮ ಬಿಡುಗಡೆಯಾಗುವದೊತ್ತಟ್ಟಿಗುಳಿದು, ನಮ್ಮನ್ನು ದಿಲ್ಲಿಗೆ ಕರೆದೊಯ್ದು ಶಹಜಾದಾನಿಗೆ ನಮ್ಮನ್ನು ಕಾಣಿಕೆ ಕೊಡಬೇಕೆಂದು ಅವರು ನಿಶ್ಚಯಿಸಿದರು.

ಚಂಪತರಾಯ—ಕಂಚುಕಿರಾಯ, ಮಗಳ ಮಾತುಗಳನ್ನು ಕೇಳುತ್ತಿರುವಿರಷ್ಟೆ?

ಕಂಚುಕಿರಾಯ—ಚಂಪತರಾಯ, ಅದರಲ್ಲ ಕೇಳದಂತಹದೇನಿರುವದು? ಇಂದ್ರನ ಅಮರಾವತಿಗೆ ಸಮಾನವಾದ ದಿಲ್ಲಿಯ ವೈಭವ-ವಿಲಾಸಗಳ ಅನುಭವವಿಲ್ಲದ ನೀವು ಹೀಗೆ ಮಾತಾಡುವದು ಆಶ್ಚರ್ಯವಲ್ಲ. ದಿಲ್ಲಿಯ ವಿಲಾಸೀ ಜನಾನಖಾನೆಯಲ್ಲಿ ತಮ್ಮ ಹೆಣ್ಣುಮಕ್ಕಳನ್ನೂ, ಅಕ್ಕ ತಂಗಿಯರನ್ನೂ ಸೇರಿಸುವದು ಸಣ್ಣ ಪುಟ್ಟ ಕೆಲಸವೆಂದು ನೀವು ತಿಳಿದಿರುವಿರೋ ಏನು? ಅದಕ್ಕೆ ಮಹತ್ಪುಣ್ಯವು ಬೇಕಾಗುತ್ತದೆ! ನಮ್ಮ ವಿಜ

ಯೆಯು ಇಲ್ಲಿಗೆ ತಿರುಗಿ ಬರುವದಕ್ಕಿಂತ ದಿಲ್ಲಿಯ ಜನಾನಖಾನೆಯಲ್ಲಿ ಹೋಗಿ ಬಿದ್ದಿದ್ದರೆ ನನಗೆ ಬಹಳ ಆನಂದವಾಗುತ್ತಿತ್ತು!

ವಿಜಯೆ (ಬಿಕ್ಕಿಬಿಕ್ಕಿ ಅಳುತ್ತ)—ಅಪ್ಪಾ, ಹೀಗೆ ಅಮಂಗಲ ಮಾತು ಗಳನ್ನು ಏಕೆ ಆಡುತ್ತೀರಿ? ನಾನು ನಿಮಗೆ ಇಷ್ಟು ಭಾರವಾಗಿರುವೆನೆ? ಆ ಅಸುರರ ಜನಾನಖಾನೆಗೆ ಹೋಗುವದಕ್ಕಿಂತ ಸಾಯುವದು ನೆಟ್ಟಗಲ್ಲವೆ?

ಚಂಪತರಾಯ— ತಂಗೀ, ಇರಲಿಬಿಡು, ಅಳಬೇಡ; ನಿನ್ನನ್ನೇನು ಜನಾನಖಾನೆಗೆ ಕಳಿಸುವದಿಲ್ಲ; ಮುಂದೇನಾಯಿತು ಹೇಳು.

ವಿಜಯೆ—ಅಷ್ಟರಲ್ಲಿ ಅವರ ಮುಖ್ಯನು ಬಂದನು. ಆತನ ಹೆಸರು ನಮಗೆ ಗೊತ್ತಾಗಲಿಲ್ಲ. ನಮ್ಮನ್ನು ಮುತ್ತಿದವರು ತಮ್ಮ ವಿಚಾರವನ್ನು ತಮ್ಮ ಮುಖ್ಯನಿಗೆ ತಿಳಿಸಿದರು. ಅದಕ್ಕೆ ಆತನು—" ನಾವಾಗಿ ಇವರನ್ನು ದಿಲ್ಲಿಗೆ ಕರೆದೊಯ್ಯುವ ಕಾರಣವಿಲ್ಲ. ಈಗ ಹಿಂದೂ ರಾಜರು ತಮ್ಮ ಹೆಣ್ಣು ಮಕ್ಕಳನ್ನು ಜನಾನಖಾನೆಗೆ ಕಳಿಸಿ ಬಾದಶಾಹೀ ಪ್ರಸಾದವನ್ನು ಪಡೆಯ ಲಿಕ್ಕೂ, ತಮ್ಮ ಗಂಡು ಮಕ್ಕಳನ್ನು ದರ್ಬಾರದ ಕಂಚುಕಿಯ ಕೆಲಸಕ್ಕೆ ಕಳಿಸಿ ರಾಜ್ಯಭಾರ ವಹಿಸುವ ಅನುಭವ ಪಡೆಯಲಿಕ್ಕೂ ಮೇಲಾಡುತ್ತಿರು ವರು; ಆದ್ದರಿಂದ ಇವರನ್ನು ಬಿಟ್ಟುಬಿಡಿರಿ. ಸ್ವಲ್ಪ ದಿನಗಳಲ್ಲಿ ತಾವಾ ಗಿಯೇ ಇವರು ದಿಲ್ಲಿಯ ಹಾದಿಯನ್ನು ಹಿಡಿಯುವರು!" ಎಂದು ಹೇಳಿದನು

ಹೀರಾದೇವಿ—ಆ ಅಧಿಕಾರಿಯು ನುಡಿದ ಭವಿಷ್ಯವು ಸತ್ಯವಾದದ್ದು ನಮ್ಮ ಯುವರಾಜ ವಿಮಲದೇವನು ಅಂತಹ ಯೋಗ್ಯತೆಯವನೇ ಇರುವನು ದಿಲ್ಲಿಯ ದರ್ಬಾರದಲ್ಲಿಯ ಅತ್ಯಂತ ಶ್ರೇಷ್ಠ ಹುಜರೆಯ ಯೋಗ್ಯತೆಯು ಆತನಲ್ಲಿರುವದು. ಸದ್ಯದ ಔರಂಗಜೇಬ ಬಾದಶಹನಿಗೂ ನಮಗೂ ಅಷ್ಟು ನೆಟ್ಟಗಿಲ್ಲ; ನೆಟ್ಟಗಿದ್ದರೆ ಯಾವಾಗೋ ನಮ್ಮ ವಿಮಲದೇವನು ಬಾದಶಹರ ಹುಜರೆ (ಕಂಚುಕಿ) ಯಾಗುತ್ತಲಿದ್ದನು. ಓರಛಾ ಸಂಸ್ಥಾನದ ಭಾವೀ ನೃಪತಿಯು ದಿಲ್ಲಿಯ ದರ್ಬಾರದ ಸೇವೆಯನ್ನು ಮಾಡಲೇಬೇಕು.

ಚಂಪತರಾಯ(ಸಂತಾಪದಿಂದ)—ಹೀರಾದೇವೀ, ನೋಡಿಮಾತಾಡು. ನೀನು ನಮ್ಮ ರುದ್ರಪ್ರತಾಪನ ಮನೆತನಕ್ಕೆ ಸೇರಿದವಳೆಂಬದನ್ನು ನೆನಪಿ ನಲ್ಲಿಡು. ನಿನ್ನ ಈ ಅಮಂಗಲ ಮಾತುಗಳನ್ನು ಕೇಳಿ ಶ್ರೀ ಭವಾನಿಯ ಈ ಶಿಲಾ ಪ್ರತಿಮೆಯೂ ಕಣ್ಣೀರು ಸುರಿಸಬಹುದು!

ಹೀರಾನೇಪ (ಚಂಪತರಾಯನ ಮಾತನ್ನು ದುರ್ಲಕ್ಷಿಸಿ)—ವಿಜಯೀ, ಆ ಮುಖ್ಯ ಮನುಷ್ಯನು ನಿನ್ನನ್ನು ಬಿಟ್ಟು ಕೂಡಲೆ ನೀವು ಹೊರಟು ಬಂದು ಬಿಟ್ಟಿರೇನು? ಆದರೆ ನಮ್ಮ ವಿಮಲದೇವನು ಎಲ್ಲರುವನು?

ವಿಜಯೆ—ಇಲ್ಲ, ಕೂಡಲೆ ನಾವು ಹೊರಟು ಬರಲಿಲ್ಲ; ನಮ್ಮನ್ನು ಅವರು ಕೂಡಲೆ ಬಿಡಲೂ ಇಲ್ಲ. ಅವರು ತಮ್ಮ ತಮ್ಮೊಳಗೆ ಮಾತಾಡಹತ್ತಿದರು. ಅವರ ಆ ಮಾತುಗಳಿಂದ ಆ ದುಷ್ಟರು ವಿಂಧ್ಯವಾಸಿನಿಯ ಮೂರ್ತಿಯನ್ನು ಒಡೆದು ಕಿತ್ತಿ ಚಲ್ಲಿಬಿಡಬೇಕೆಂದು ಬಂದಿರುವಂತೆ ನನಗೆ ತೋರಿತು. ಆಗ ಭಯದಿಂದ ನನ್ನ ಹೃದಯವು ನಡುಗಹತ್ತಿತು. ಅಷ್ಟರಲ್ಲಿ ಆ ಮುಖ್ಯನು ನಮಗೆ—"ನೀವು ವಿಂಧ್ಯವಾಸಿನಿಯ ಗುಡಿಯನ್ನು ನನಗೆ ತೋರಿಸುವಿರಾ?" ಎಂದು ಕೇಳಿದನು. ಅದಕ್ಕೆ ನಾವು ಒಪ್ಪಿಕೊಂಡು, ಅವನನ್ನು ಗುಡಿಯಿರುವ ದಿಕ್ಕಿನ ವಿರುದ್ಧ ದಿಕ್ಕಿನಿಂದ ಕರೆದುಕೊಂಡು ನಡೆದೆವು. ದೇವಿಯ ಮಂದಿರವು ಅವರಿಗೆ ಸಿಗಬಾರದೆಂಬದು ನನ್ನ ಉದ್ವೇಶವಾಗಿತ್ತು. ನಾವು ಹೀಗೆ ಆ ದುಷ್ಟರನ್ನು ಕರೆದೊಯ್ಯುತ್ತಿರಲು, ಎದುರಿನಿಂದ ಯುವರಾಜ ಛತ್ರಸಾಲನೂ, ಯುವರಾಜ ದಲಪತರಾಯನೂ ಅಶ್ವಾರೂಢರಾಗಿ ಬಂದರು. ಅವರನ್ನು ನೋಡಿ ನನಗೆ ಧೈರ್ಯಬಂದಿತು.

ಸಭಾಕರಣ—ನಿಮ್ಮ ಸಂಗಡ ಬರುವ ಯವನರು ಎಷ್ಟು ಜನರಿದ್ದರು?

ವಿಜಯೆ—ಮುಖ್ಯನನ್ನು ಹಿಡಿದು ಇಪ್ಪತ್ತು ಜನರಿದ್ದರು. ಅವರಲ್ಲಿ ಕೆಲವರ ಕೈಯೊಳಗೆ ಶಸ್ತ್ರಗಳ ಬದಲು ಗುದ್ದಲಿ - ಸಲಿಕೆ - ಹಾರಿಗಳು ಇದ್ದವು. ನಮ್ಮನ್ನು ನೋಡಿ ಛತ್ರಸಾಲನು ಯವನರ ಮುಖ್ಯನಿಗೆ—"ಇವರನ್ನೆತ್ತ ಕರಕೊಂಡು ಹೊರಟಿರಿ" ಎಂದು ಕೇಳಿದನು. ಅದಕ್ಕೆ ಉಪಹಾಸದಿಂದ ನಗುವದಕ್ಕಿಂತ ಹೆಚ್ಚಿನ ಉತ್ತರವನ್ನೇನು ಆ ಯವನರ ಮುಖ್ಯನು ಕೊಡಲಿಲ್ಲ. ಆಗ ವಿಮಲದೇವನು ಸ್ವಲ್ಪದರಲ್ಲಿ ಎಲ್ಲ ಸಂಗತಿಯನ್ನು ಛತ್ರಸಾಲನಿಗೆ ಹೇಳಿದನು. ಕೂಡಲೆ ಛತ್ರಸಾಲನೂ, ದಲಪತರಾಯನೂ ಒರೆಗಳಿಂದ ತಮ್ಮ ಖಡ್ಗಗಳನ್ನು ಹಿರಿದರು. ಆಗ ಛತ್ರಸಾಲನು ಯವನರನ್ನು ಕುರಿತು—"ದೇವಿಯ ಮಂದಿರದ ಹಾದಿಯು ಭಕ್ತರಿಗೆ ಅತ್ಯಂತ ಸುಲಭವೂ, ಸುಖಕರವೂ ಆಗಿದ್ದರೂ, ನಿಮ್ಮಂಥ ದೇವಿಯ ಶತ್ರುಗಳಿಗೆ ಅದು ಅಷ್ಟೇ ದುರ್ಗಮವೂ, ದುಃಖದಾಯಕವೂ ಆಗಿರು

ನದು! ಯವನ ವೀರರೆ, ಇವರನ್ನು ಬಿಟ್ಟು ನೆಟ್ಟಗೆ ದಿಲ್ಲಿಯ ಹಾದಿಯನ್ನು ಹಿಡಿಯಿರಿ ನೋಡೋಣ." ಎಂದು ನುಡಿದು ಯುದ್ಧಕ್ಕೆ ಸಿದ್ಧರಾಗಿ ನಿಂತರು.

ಪಹಾರಸಿಂಗ—ಏನು? ಇಬ್ಬರು ವೀರರು ಇಪ್ಪತ್ತು ಜನ ವೀರರೊಡನೆ ಯುದ್ಧಕ್ಕೆ ನಿಂತರೆಯೆ? ಹುಡುಗತನವೆನ್ನುವದು ಇದಕ್ಕೇ. ಸಭಾಕರಣ, ನಿಮ್ಮ ದಲಪತನು ಛತ್ರಸಾಲನ ಸಂಗತಿಯಿಂದ ತೀರ ಕೆಡುತ್ತ ನಡೆದಿರುವನು. ಹುಡುಗರಿಗೆ ಅವರ ತಲೆತಿರುಕ ತನಕ್ಕಾಗಿ ತಕ್ಕ ಶಾಸನ ವಾಗಲೇಬೇಕು.

ಕಂಚುಕಿರಾಯ—ಅದರಲ್ಲಿ ಸಂಶಯವೇನು? ಅವಶ್ಯವಾಗಿ ಆಗ ತಕ್ಕದ್ದು. ಆ ಉದಾರಹೃದಯದ ಯವನ ವೀರರು ಹುಡುಗರೆಂದು ಕೈ ಕಾದುಬಿಟ್ಟಿದ್ದರೆ, ಆ ಹುಡುಗರು ಬಂದ ಬಳಿಕ ಅವರಿಗೆ ಚನ್ನಾಗಿ ಶಾಸನ ಮಾಡತಕ್ಕದ್ದು. ರಾಜಕರ್ತೃಗಳ ಜಾತಿಯವರ ಅಪಮಾನ ಮಾಡುವ ವೆಂದರೇನು? ಅವರು ಒಂದು ಮಂದಿರವನ್ನು ನಾಶಮಾಡಿದರೆ, ನಾವು ಮತ್ತೊಂದು ಮಂದಿರವನ್ನು ಕಟ್ಟಿಕೊಳ್ಳಬಹುದು. ನಮ್ಮಲ್ಲ ಕಲ್ಲು ಮಣ್ಣಿಗೇನು ಕೊರತೆಯೆ? ನಮ್ಮ ಸಾರ್ವಭೌಮರ ಧಾರ್ಮಿಕ ಭಾವನೆಗಳಿಗೆ ಬಾಧೆಯುಂಟುಮಾಡುವದು ಜಾಣತನವಲ್ಲ. ವಿಜಯೇ, ಆ ತುಂಟ ಹುಡುಗರು ಅಲ್ಲಿ ಏನು ಅನಾಚಾರ ಮಾಡಿದರು?

ವಿಜಯೆ—ಅಪ್ಪಾ, ಆ ಯುವರಾಜರೇನು ಅನಾಚಾರ ಮಾಡಲಿಲ್ಲ; ಇಪ್ಪತ್ತು ಜನ ಯವನರು ಮಾತ್ರ ಇಬ್ಬರೇ ಹುಡುಗರಮೇಲೆ ಶಸ್ತ್ರ ಹಿರಿದು ಒಮ್ಮೆಲೆ ದುಮುಕಿದರು! ಅಷ್ಟರಲ್ಲಿ ಛತ್ರಸಾಲನು ಸಿಳ್ಳು ಹಾಕಲು, ಆತನೊಡನೆ ಬೇಟೆಗೆ ಬಂದಿದ್ದ ಎಂಟು ಹತ್ತು ಜನ ಫಿಲ್ಲರು ಕೂಡಲೆ ಶಸ್ತ್ರ ಪಾಣಿಗಳಾಗಿ ಛತ್ರಸಾಲನ ಬಳಿಗೆ ಬಂದರು. ಆಗಿನ ಭಯಂಕರ ಯುದ್ಧವನ್ನು ನೋಡಿ ನನ್ನ ಕಣ್ಣುಗಳು ಮುಚ್ಚಿದವು. ಕೆಲ ಹೊತ್ತಿನ ಮೇಲೆ ಧೈರ್ಯದಿಂದ ನಾನು ಕಣ್ದೆರೆದು ನೋಡಲು, ವಿಮಲದೇವನು ನಗುತ್ತ ನನ್ನ ಬಳಿಯಲ್ಲಿ ನಿಂತುಕೊಂಡಿದ್ದನು. ನಾಲ್ಕೂ ಕಡೆಯಲ್ಲಿ ರಕ್ತವು ಸಿಡಿದಿದ್ದು, ನಾಲ್ಕು ಜನ ಮುಸಲ್ಮಾನರು ಗಾಯಪಟ್ಟು ಒದರುತ್ತ ಬಿದ್ದಿದ್ದರು. ಒಬ್ಬಿಬ್ಬರು ಸತ್ತುಹೋಗಿದ್ದರು. ಯವನರ ಮುಖ್ಯಸ್ಥನ ಸೊಕ್ಕು

ಇಳಿದು ಅವನು ತಲೆ ತಗ್ಗಿಸಿ ನಿಂತುಕೊಂಡಿದ್ದನು. ಆಗ ಛತ್ರಸಾಲನು ನನ್ನನ್ನು ಕರೆದು-- "ವಿಜಯೇ, ಹೋಗು, ಬೇಗನೆ ಹೋಗು. ನಾವು ಈಗಲೆ ಈ ಮುಖ್ಯನ ಹೆಡಮುರಿಗೆ ಕಟ್ಟಿಕೊಂಡು ಬರುವೆವು. ಅಲ್ಲಿಯವರೆಗೆ ದೇವಿಯ ಪೂಜೆಯನ್ನು ಆರಂಭಿಸಬಾರದೆಂದು ಪ್ರಾಣನಾಥ ಪ್ರಭುಗಳನ್ನು ಪ್ರಾರ್ಥಿಸು" ಎಂದು ಹೇಳಿ ಯುವರಾಜ ದಳಪತನೊಡನೆ ಆ ಯವನನ ಮುಖ್ಯನ ಹೆಡಮುರಿಗೆ ಕಟ್ಟತೊಡಗಿದನು. ನಾನು ಇತ್ತ ಓಡುತ್ತ ಬಂದೆನು.

ವಿಜಯೆಯು ತನ್ನ ಮಾತು ಮುಗಿಸುವದರೊಳಗೆ ದೇವಸ್ಥಾನದ ಸಿಂಹದ್ವಾರದ ಮುಂದೆ ದೇವಿಯ ಜಯಜಯಕಾರದ ಧ್ವನಿಯು ಉಂಟಾಯಿತು. ಪ್ರಾಣನಾಥ ಪ್ರಭುಗಳು ಇಲ್ಲಿಯವರೆಗೆ ಶಾಂತರೀತಿಯಿಂದ ವಿಜಯೆಯ ಮಾತುಗಳನ್ನು ಕೇಳುತ್ತ ಕುಳಿತುಕೊಂಡಿದ್ದರು; ಆದರೆ ತಮ್ಮ ಪ್ರಿಯ-ಶಿಷ್ಯ-ಛತ್ರಸಾಲನು ಬಂದದ್ದನ್ನು ತಿಳಿದು ಅವರು ಚಟ್ಟನೆ ಎದ್ದು, ಮಹಾದ್ವಾರದ ಕಡೆಗೆ ಸಾಗಿದರು. ಆಗ ಛತ್ರಸಾಲನು ದಳಪತ-ವಿಮಲದೇವರ ಕೈ ಹಿಡಿದುಕೊಂಡು ಬರುತ್ತಿದ್ದನು. ಆ ಬಾಲವೀರನ ಮೋಹಕ ಮೂರ್ತಿಯನ್ನು ನೋಡಿ ಆ ತಪೋಧನನ ಕಂಠವು ಸದ್ಗದಿತವಾಗಿ ನೇತ್ರಗಳು ಪ್ರೇಮಾಶ್ರುಪೂರ್ಣವಾದವು. ಛತ್ರಸಾಲನಲ್ಲಿ ಸೂರ್ಯನ ಪ್ರತಾಪವೂ, ಚಂದ್ರನ ಶಾಂತಗುಣವೂ ಕೂಡಿಯೇ ಒಪ್ಪುತ್ತಿದ್ದುದರಿಂದ ಆತನನ್ನು ನೋಡುವವರ ನೇತ್ರಗಳು ಸಫಲವಾಗುತ್ತಿದ್ದವು. ಒಂದು ಮಗ್ಗಲಲ್ಲಿ ಪ್ರತಾಪಶಾಲಿಯಾದ ದಳಪತರಾಯನು ತನ್ನ ತೀವ್ರ ತೇಜದಿಂದ ಸೂರ್ಯನನ್ನು ಹೋಲುತ್ತಿದ್ದನು. ಮತ್ತೊಂದು ಮಗ್ಗಲಲ್ಲಿ ವಿಮಲದೇವನು ತನ್ನ ಶಾಂತಗುಣದಿಂದ ಚಂದ್ರನನ್ನು ಹೋಲುತ್ತಿದ್ದನು. ಹೀಗೆ ಸೂರ್ಯಚಂದ್ರ-ಸದೃಶ-ರಾಜಪುತ್ರರಿಂದ ಸೇವಿತನಾದ ಛತ್ರಸಾಲನು, ಆ ಉಭಯರ ಗುಣಗಳ ಖನಿಯಂತೆ ಗಂಭೀರವಾಗಿ ಒಪ್ಪುತ್ತಿದ್ದನು! ತನ್ನ ಗುರುಗಳು ಬರುತ್ತಿರುವದನ್ನು ನೋಡಿ ಛತ್ರಸಾಲನು ಆತುರದಿಂದ ಹೋಗಿ ಅವರ ಪಾದಗಳ ಮೇಲೆ ತಲೆಯಿಟ್ಟನು. ಆಗ ಪ್ರಾಣನಾಥ ಪ್ರಭುಗಳು ಆತನ ತಲೆಯಮೇಲೆ ವರದಹಸ್ತವಿಟ್ಟು ಆಶೀರ್ವದಿಸುತ್ತ, ವಾತ್ಸಲ್ಯದಿಂದ ಆತನನ್ನು ಹಿಡಿದೆತ್ತಿ ಆಲಿಂಗಿಸಿ ಕಂಪಿತಸ್ವರದಿಂದ--"ಛತ್ರಸಾಲ, ಧನ್ಯನೋ

ನೀನು! ಈ ಚಿಕ್ಕ ವಯಸ್ಸಿನಲ್ಲಿಯೇ ನಿನ್ನ ಧರ್ಮನಿಷ್ಠೆಯ, ಹಾಗು ಸ್ವಾತಂತ್ರ್ಯ ಪ್ರೇಮದ ರುಚಿರ ಕಿರಣಗಳು ಬೆಳಗತೊಡಗಿದವು!!" ಎಂದು ನುಡಿದರು. ಅವರ ಕಂಠ ಬಿಗಿದದ್ದರಿಂದ ಹೆಚ್ಚು ಮಾತುಗಳು ಹೊರಡಲಿಲ್ಲ. ಈ ಪ್ರಸಂಗದಲ್ಲಿ ದೇವಿಯ ಮಂದಿರದೊಳಗಿನ ಎಲ್ಲ ರಾಜರೂ ಆ ಗುರು-ಶಿಷ್ಯರ ಸುತ್ತುಮುತ್ತು ನೆರೆದಿರಲು, ಪ್ರಜೆಗಳ ಪ್ರಚಂಡ ಜಯ ಘೋಷದಿಂದ ದಿಕ್ತಟಗಳು ತುಂಬಿಹೋದವು; ಸಹೃದಯರ ಕಣ್ಣುಗಳಿಂದ ಆನಂದ ಬಾಷ್ಪಗಳು ಧಾರೆಯಿಟ್ಟು ಸುರಿದವು!

ಹೀಗೆ ಪ್ರಜೆಗಳು ಪ್ರಚಂಡ ಜಯಘೋಷ ಮಾಡುತ್ತಿರುವಾಗಲೇ ಪ್ರಾಣನಾಥ ಪ್ರಭುಗಳು ವೀರ ದಳಪತರಾಯನನ್ನು ಅಪ್ಪಿಕೊಂಡು ಆತನ ಬೆನ್ನಮೇಲೆ ಕೈಯಾಡಿಸುತ್ತ-- "ಈ ವೀರ ಶಿರೋಮಣಿಯು ತಂದೆಯ ಹೆಸರು ನಿಶ್ಚಯವಾಗಿ ಕಾಯುವನು" ಎಂದು ನುಡಿದು, ಅವರು ಸಭಾಕರಣನ ಕಡೆಗೆ ನೋಡಿದರು; ಆದರೆ ಆ ರಣಪಂಡಿತನು ಮಗನ ಶೌರ್ಯದಿಂದ ಮನಸ್ಸಿನಲ್ಲಿ ಸಂತೋಷಪಟ್ಟಿದ್ದರೂ, ತನ್ನ ದೇಶಮ್ರೋಹದ ನಡತೆಗಾಗಿ ನಾಚಿ ಪ್ರಾಣನಾಥ ಪ್ರಭುಗಳ ಕಡೆಗೆ ನೋಡಲಾರದೆ ತಲೆಯನ್ನು ತಗ್ಗಿಸಿದನು. ವಿಮಲದೇವನನ್ನು ಮಾತ್ರ ಪ್ರಭುಗಳುಆಲಿಂಗಿಸದೆ ದೂರದಿಂದಲೇ ಆತನನ್ನು ಅಭಿನಂದಿಸಿದರು. ಈ ಶಾಬ್ದಿಕ ಅಭಿನಂದನದಿಂದಲೇ ವಿಮಲದೇವನು ಸಂತುಷ್ಟನಾದನು. ಕದಾಚಿತ್ ಪ್ರಾಣನಾಥ ಪ್ರಭುಗಳು ಆತನನ್ನು ವ್ಯೆದಡವಿ ಪ್ರತ್ಯಕ್ಷ ಅಭಿನಂದಿಸಿದ್ದರೆ, ನಿಶ್ಚಯವಾಗಿ ಆತನಿಗೆ ಇಷ್ಟು ಆನಂದವಾಗುತ್ತಿದ್ದಿಲ್ಲ. ಪ್ರಭುಗಳ ಈ ಶಿಷ್ಯವಾತ್ಸಲ್ಯವನ್ನು ನೋಡಿ ಎಲ್ಲರೂ ಆನಂದಬಟ್ಟಿದ್ದರೂ,ಛತ್ರಸಾಲನ ಉತ್ಕರ್ಷವನ್ನು ನೋಡಲಾರದೆ ಹೊಟ್ಟೆಕಿಚ್ಚಿನಿಂದ ಹೊರಳಾಡುವ ಹೀರಾದೇವಿಯಂತಹ ನೀಚ ವೃತ್ತಿಯವರು ಕೆಲವರು ಅಲ್ಲಿ ಇದ್ದೇ ಇದ್ದರು. ಪ್ರಾಣನಾಥ ಪ್ರಭುಗಳ ಅಪ್ಪಣೆಯಂತೆ ಛತ್ರಸಾಲನು ತಂದೆಯಾದ ಚಂಪತರಾಯನ ಚರಣಕ್ಕೆರಗಿದನು. ಮೊದಲೇ ಮಗನ ಸತ್ಕೀರ್ತಿಶ್ರವಣದಿಂದ ಆನಂದಪರವಶನಾಗಿದ್ದ ಚಂಪತರಾಯನು, ಜಯಶಾಲಿಯಾದ ಮಗನ ಈ ನಮಸ್ಕಾರದಿಂದ ಕೃತಕೃತ್ಯನಾಗಿ ಮಗನನ್ನು ತಬ್ಬಿಕೊಂಡು-"ಬಾಳಾ, ನನ್ನ ಹಿರಿಯ ಮಗನಾದ ಸರ್ವಾಹನು ಯವನರೊಡನೆ ಯುದ್ಧಮಾಡುವಾಗ ಧಾರಾ ತೀರ್ಥದಲ್ಲಿ

ಪತನ ಹೊಂದಿದನು. ಅತನು ಅತ್ಯಂತ ಶೂರನಿದ್ದದ್ದರಿಂದ ನನಗೂ ನಿನ್ನ ಹಡೆದಾಕೆಗೂ ಬಹಳ ದುಃಖವಾಯಿತು. ಆಗ ಸರ್ವಾಹನು ನಮ್ಮನ್ನು ಸಮಾಧಾನ ಪಡಿಸುವದಕ್ಕಾಗಿ ನಮ್ಮ ಕನಸಿನಲ್ಲಿ ಬಂದು— "ದುಃಖಪಡ ಬೇಡಿರಿ, ನಾನು ಪುನಃ ನಿಮ್ಮ ಹೊಟ್ಟೆಯಲ್ಲಿ ಹುಟ್ಟಿಬಂದು ಯವನರ ಸೇಡು ತೀರಿಸಿಕೊಳ್ಳುವೆನು" ಎಂದು ಹೇಳಿದನು. ಹೀಗೆ ಇಬ್ಬರಿಗೂ ದೃಷ್ಟಾಂತವಾದ ಕೆಲವು ತಿಂಗಳಲ್ಲಿಯೇ ನೀನು ಹುಟ್ಟಿದೆ; ಆದರೂ ಆ ಸ್ವಪ್ನ ದೃಷ್ಟಾಂತದ ಮೇಲೆ ನನ್ನ ಪೂರ್ಣ ವಿಶ್ವಾಸವಿದ್ದಿಲ್ಲ. ಇಂದಿನ ನಿನ್ನ ಶೂರಕೃತ್ಯದಿಂದ ಆ ದೃಷ್ಟಾಂತವು ಸತ್ಯವಾಯಿತೆಂದು ನಾನು ನಂಬುವೆನು. ಮತ್ತಾ, ಈ ಚಂಪತರಾಯನ ಇಚ್ಛಿತಕಾರ್ಯವು ಅತನಿಂದ ಸಾಧಿಸದಿದ್ದರೂ ಅತನ ಮಗ ಛತ್ರಸಾಲನು ನೀನು ಆ ಕಾರ್ಯವನ್ನು ಕೊನೆಗಾಣಿಸುವೆಯೆಂಬ ನಂಬಿಗೆಯು ನನಗಾಗತೊಡಗಿರುತ್ತದೆ!"

ಈ ಮೇರೆಗೆ ಮಡಿದು ಚಂಪತರಾಯನು ಛತ್ರಸಾಲನನ್ನು ಬಿಗಿಯಾಗಿ ಅಪ್ಪಿಕೊಂಡನು. ಈಗ ಯುವರಾಜ ದಲಪತರಾಯನು ತನ್ನ ತಂದೆಯಾದ ಸಹಾಕರಣನ ಬಳಿಯಲ್ಲಿಯೂ, ಯುವರಾಜ ವಿಮಲದೇವನು ತನ್ನ ತಾಯಿಯಾದ ಹೀರಾದೇವಿಯ ಬಳಿಯಲ್ಲಿಯೂ ಹೋಗಿ ಕುಳಿತುಕೊಂಡಿದ್ದರು. ವಿಜಯೆಯು ತನ್ನ ಹೂ ಮಾಲೆಯನ್ನು ದೇವಿಯ ಕೊರಳಲ್ಲಿ ಹಾಕುವ ಪ್ರಸಂಗವು ಯಾವಾಗ ಬರುತ್ತದೆಂಬದರ ಹಾದಿಯ ನೋಡುತ್ತ ಛತ್ರಸಾಲನ ಬಳಿಯಲ್ಲಿ ನಿಂತುಕೊಂಡಿದ್ದಳು. ಅಷ್ಟರಲ್ಲಿ ಪ್ರಾಣನಾಥ ಪ್ರಭುಗಳು ದೇವಿಯ ಪೂಜೆಯನ್ನು ಆರಂಭಿಸಿದರು. ಭಾವಿಕರು ಭಕ್ತಿಯಿಂದ ಆ ಪೂಜೆಯನ್ನು ನೋಡಿ ಆನಂದಪಡುತ್ತಿರಲು, ಪೂಜೆಯೂ ಮುಗಿಯಿತು. ಆಗ ಪ್ರಭುಗಳು ಪ್ರಸಾದವನ್ನು ಸ್ವೀಕರಿಸುವದಕ್ಕಾಗಿ ಎಲ್ಲ ಅರಸರನ್ನೂ ಗರ್ಭಗುಡಿಯಲ್ಲಿ ಕರೆದರು. ವಿಂಧ್ಯವಾಸಿನಿಯು ಮಹಾ ಪೂಜೆಯಿಂದ ಪ್ರಕಾಶಮಾನಳಾಗಿ ಸುವರ್ಣದ ಉಚ್ಚಾಸನದಮೇಲೆ ವಿರಾಜಿಸುತ್ತಿದ್ದಳು. ಪ್ರಾಣನಾಥ ಪ್ರಭುಗಳು ದೇವಿಯ ಬಲಗಡೆಯಲ್ಲಿ ನಿಂತುಕೊಂಡಿದ್ದು, ವಿಜಯೆಯೂ, ವಿಮಲದೇವನೂ ತಾವು ಮಾಡಿದ್ದ ಹೂಮಾಲೆಯನ್ನು ಹಿಡಿದುಕೊಂಡು ಪ್ರಭುಗಳ ಎದುರಿಗೆ ನಿಂತುಕೊಂಡಿದ್ದರು. ದೇವಿಯ ಮುಂಭಾಗದಲ್ಲಿ ಭಾವಿಕನಾದ ಛತ್ರಸಾಲನು ತಲೆಬಾಗಿ ವಿನಯದಿಂದ ನಿಂತುಕೊಂಡಿ

ದ್ದನು. ಆತನ ಬಳಿಯಲ್ಲಿಯೇ ದಳಪತರಾಯನು ನಿಂತುಕೊಂಡಿದ್ದು, ಚಂಪತರಾಯ-ಸಭಾಕರಣರು ಪ್ರಾಣನಾಥ ಪ್ರಭುಗಳ ಬಳಿಯಲ್ಲಿ ನಿಂತುಕೊಂಡಿದ್ದರು. ಪಹಾರಸಿಂಗನೂ, ಹೀರಾದೇವಿಯೂ ಕಂಚುಕಿರಾಯನ ಸಂಗಡ ಕುಚುಗುಟ್ಟುತ್ತ ಒಂದು ಮೂಲೆಯಲ್ಲಿ ನಿಂತುಕೊಂಡಿದ್ದರು. ಇವರೆಲ್ಲರನ್ನು ಕುರಿತು ಪ್ರಾಣನಾಥ ಪ್ರಭುಗಳು ನುಡಿದರೇನಂದರೆ—

ರಾಜನ್ಯರೇ, ವರ್ಷಂಪ್ರತಿಯಂತೆ ಇಂದು ನೀವು ದೇವಿಯ ಉತ್ಸವವನ್ನು ಆನಂದದಿಂದ ಕೊನೆಗಾಣಿಸಿದಿರಿ; ಆದರೆ ಇಂತಹ ಉತ್ಸವವು ಮುಂದಿನ ವರ್ಷ ಆಗುವದೋ ಇಲ್ಲವೋ ಎಂಬ ಸಂಶಯವು ನನ್ನನ್ನು ಬಾಧಿಸತೊಡಗಿದೆ! ಬರಬರುತ್ತ ಯವನರ ಅಧಿಕಾರವು ಹೆಚ್ಚುತ್ತಲಿದ್ದು, ಹಿಂದುಗಳ ಹಿಂದುತ್ವವನ್ನು ನಷ್ಟಪಡಿಸುವದಕ್ಕಾಗಿ ಅವರು ಹಲವು ಬಗೆಗಳಿಂದ ಯತ್ನಿಸತೊಡಗಿರುತ್ತಾರೆ. ಇಂಥ ಪ್ರಸಂಗದಲ್ಲಿ ನಿಮ್ಮ ಅಂತಃಕಲಹಕ್ಕೆ ಕಳೆಯೇರುತ್ತಿರುವದು ದುಃಖದ ಸಂಗತಿಯೇ ಸರಿ. ಬುಂದೇಲಖಂಡವೆಂದರೆ ಭರತಭೂಮಿಯ ಸೌಂದರ್ಯದ ಕೇಂದ್ರಸ್ಥಾನವೂ, ಸೃಷ್ಟಿಸುಂದರಿಯ ವಿಲಾಸಗೃಹವೂ, ಲಕ್ಷ್ಮಿಯ ಕ್ರೀಡಾಸ್ಥಾನವೂ ಆಗಿರುವದು. ಇಂತಹ ಅಪರೂಪದ ದೇಶವು ದಿಲ್ಲಿಯ ಇಷ್ಟು ಸನಿಯದಲ್ಲಿದ್ದರೂ, ನಿಮ್ಮ ಪೂರ್ವಜರ ಪ್ರತಾಪದಿಂದಲೂ, ಸ್ವಾತಂತ್ರ್ಯ ಪ್ರೀತಿಯಿಂದಲೂ, ಒಕ್ಕಟ್ಟಿನಿಂದಲೂ ಯವನ ಬಾದಶಹರ ಗಂಟಲಲ್ಲಿ ಅದು ಇಳಿಯದೆ, ತಂತ್ರಗಾರನಾದ ಅಕಬರನ ಕಾಲದಲ್ಲಿ ಕೂಡ ಅದು ಸ್ವತಂತ್ರವಾಗಿಯೇ ಇದ್ದಿತು! ಆದರೆ ಈಗೇನಿದೆ? ದುಷ್ಟ ಔರಂಗಜೇಬ ಬಾದಶಹನು ನಿಮ್ಮ ದೇಶದ ಸ್ವಾತಂತ್ರ್ಯಸಾರವನ್ನು ಹಿಂಡಿ ಹಿಪ್ಪೆಮಾಡಿ ಬಿಟ್ಟಿದ್ದಾನೆ. ಈಗ ನಿಮ್ಮಲ್ಲಿ ಶೂರರಿಲ್ಲವೆಂತಲ್ಲ, ಪ್ರತಾಪಿಗಳಿಲ್ಲವೆಂತಲ್ಲ, ರಾಜಕಾರಣ ಪಟುಗಳಿಲ್ಲವೆಂತಲೂ ಅಲ್ಲ; ಆದರೆ ನಿಮ್ಮಲ್ಲಿ ಒಕ್ಕಟ್ಟು ಒಂದು ಇಲ್ಲದ್ದರಿಂದ ನಿಮ್ಮಲ್ಲಿಯ ಆ ಎಲ್ಲ ಸದ್ಗುಣಗಳೂ ಮಣ್ಣುಗೂಡಿ ಹೋಗಿರುವವು. ಚಂಪತರಾಯನಂಥ ಒಬ್ಬಿಬ್ಬ ಅರಸರನ್ನು ಬಿಟ್ಟರೆ, ಉಳಿದವರೆಲ್ಲ ಯವನ ಸತ್ತೆಯನ್ನು ಹೆಚ್ಚಿಸಲಿಕ್ಕೂ, ನಿಮ್ಮ ಮಾತೃಭೂಮಿಯನ್ನು ಪಾರತಂತ್ರ್ಯದ ಕೆಸರಿನಲ್ಲಿ ಮುಣುಗಿಸಲಿಕ್ಕೂ ಯತ್ನಿಸುತ್ತಿರುವಿರಿ. ಸಭಾಕರಣ, ಪಹಾರಸಿಂಗ! ನನ್ನ ಮಾತುಗಳನ್ನು ನೀವು ಕೇಳುತ್ತಿರುವಿಗಷ್ಟೆ? ಇನ್ನು ನೀವು ಯವನ ಪಾದ

ಸೇವೆಯನ್ನು ಬಿಟ್ಟು ದೇಶಸೇವೆ ಮಾಡಲು ಟೊಂಕಕಟ್ಟಿರಿ. ಬುಂದೇಲ ಖಂಡದ ನೀರರದೊಂದು ಮಾಲೆಮಾಡಿ ಈ ಸ್ವಾತಂತ್ರ್ಯ ಪ್ರಿಯ ವಿಂಧ್ಯ ವಾಸಿನಿಗೆ ಅರ್ಪಿಸಿರಿ. ನಿಜಯೇ, ಬಾ, ಸದ್ಯಕ್ಕೆ ನಿನ್ನ ಮಾಲೆಯನ್ನು ದೇವಿಯ ಕೊರಳಲ್ಲಿ ಹಾಕಿ, ಮುಂದಿನ ವರ್ಷ ದೇಶಭಕ್ತ ರಾಜರದೊಂದು ಮಾಲೆಯುಂಟಾಗುವಂತೆ ಅನುಗ್ರಹಿಸೆಂದು ದೇವಿಯನ್ನು ಪ್ರಾರ್ಥಿಸು.

ಪ್ರಾಣನಾಥ ಪ್ರಭುವಿನ ಆಜ್ಞೆಯಂತೆ ವಿಜಯೆಯು ದೇವಿಯ ಕೊರಳಲ್ಲಿ ಮಾಲೆಹಾಕುವದಕ್ಕಾಗಿ ಮುಂದಾದಳು; ಆದರೆ ವಿಮಲದೇವನೂ ತಾನೂ ಕೂಡಿ ಮಾಡಿದ ಮಾಲೆಯನ್ನು ತಾನೊಬ್ಬಳೇ ದೇವಿಯ ಕೊರಳಲ್ಲಿ ಹಾಕಲಿಕ್ಕೆ ಆಕೆಗೆ ಸಂಕೋಚವಾಯಿತು. ಆಕೆಯು ವಿಮಲದೇವನ ಕಡೆಗೆ ನೋಡಿದಳು. ಕೂಡಲೆ ವಿಮಲದೇವನೂ ಉತ್ಸಾಹದಿಂದ ಮಾಲೆಯನ್ನು ದೇವಿಯ ಕೊರಳಲ್ಲಿ ಹಾಕುವದಕ್ಕಾಗಿ ವಿಜಯೆಗೆ ಸಹಾಯಮಾಡತೊಡಗಿದನು. ಇಬ್ಬರೂ ದೇವಿಯಕೊರಳಲ್ಲಿ ಮಾಲೆಹಾಕಿ, ಮಾಲೆಯು ದೇವಿಯ ಕೊರಳಿಗೆ ಸರಿಯಾಗಿ ಕುಳಿತಿತೆಂದು ಮನಗಂಡರು. ಗರ್ಭಾಗಾರದಲ್ಲಿರುವ ವರಿಗೆಲ್ಲರಿಗೂ ಹಾಗೆಯೇ ತೋರಿತು. ಆದರೆ ವಿಜಯಾ-ವಿಮಲ ದೇವರು ಕೈಬಿಟ್ಟ ಕೂಡಲೆ ದೇವಿಯ ಕೊರಳೊಳಗಿನ ಆ ಮಾಲೆಯು ಜಾರುತ್ತ ಜಾರುತ್ತ, ಅದೇ ಕಾಲಕ್ಕೆ ದೇವಿಯ ಚರಣಕ್ಕೆ ತಲೆಬಾಗಿ ನಮಸ್ಕರಿಸಿ ಏಳುತ್ತಿರುವ ಛತ್ರಸಾಲನ ಕೊರಳಿಗೆ ಅಕಸ್ಮಾತ್ತಾಗಿ ಬಿದ್ದಿತು! ಇದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು. ಛತ್ರಸಾಲನು ಗಾಬರಿಯಾಗಿ ತನ್ನ ಕೊರಳೊಳಗಿನ ಮಾಲೆಯನ್ನು ತೆಗೆಯುತ್ತಿರಲು, ಪ್ರಾಣನಾಥ ಪ್ರಭುಗಳು- "ಹಾ! ಬಾಲವೀರಾ, ಮಾಲೆಯನ್ನು ತೆಗೆಯಬೇಡ; ಇಂದಿನ ನಿನ್ನ ಪ್ರತಾಪದ ಸೇವೆಗೆ ಮೆಚ್ಚಿ ದೇವಿಯು ನಿನಗೆ ಅದನ್ನು ಪ್ರಸಾದವಾಗಿ ಕೊಟ್ಟಿದ್ದಾಳೆ." ಎಂದು ಹೇಳಲು, ಛತ್ರಸಾಲನು ಭಕ್ತಿಯಿಂದ ಮಾಲೆಯನ್ನು ನಮಸ್ಕರಿಸಿದನು. ವಿಜಯೆಯು ತಾನು ಮಾಡಿದ ಮಾಲೆಯು ಛತ್ರಸಾಲನ ಕೊರಳಿಗೆ ಬಿದ್ದದ್ದಕ್ಕಾಗಿ ನಾಚಿ ತಲೆತಗ್ಗಿಸಿ, ವಿಮಲಸೇವನನ್ನು ನೋಡಲು, ಆತನ ಗಲ್ಲಗಳೂ ಲಜ್ಜೆಯಿಂದ ಕೆಂಪಾಗಿದ್ದವು.

ಹನ್ನೆರಡು ಪ್ರಕರಣ-ತಂದೆ ಮಕ್ಕಳ ವಿಯೋಗ!

ದೇವಿಯ ವಾರ್ಷಿಕೋತ್ಸವದ ದಿವಸದ ಮಧ್ಯರಾತ್ರಿಯು. ಹಿಟ್ಟು ಚೆಲ್ಲಿದ ಹಾಗೆ ಬೆಳದಿಂಗಳು ಬಿದ್ದಿದೆ. ನಾಲ್ಕೂ ಕಡೆಗೆ ಸ್ತಬ್ಧತೆಯ ಸಾಮ್ರಾಜ್ಯವು ಪಸರಿಸಿಹೋಗಿದೆ. ಹಗಲಿನ ವ್ಯವಸಾಯದಿಂದ ದಣಿದು ಹೋಗಿದ್ದ ಪ್ರಾಣಿಮಾತ್ರಗಳು ನಿದ್ರಾಸುಖದಲ್ಲಿ ವಿಶ್ರಾಂತಿಯನ್ನು ಹೊಂದುತ್ತಲಿವೆ. ತಮಗಾದರೂ ನಿದ್ದೆಬೇಡವೆ, ಎಂಬಂತೆ ವೃಕ್ಷಗಳು ಕೂಡ ಅಲ್ಲಾಡದೆ ಸ್ತಬ್ಧವಾಗಿ ನಿಂತಿವೆ. ಇಂಥ ಯಾವ ಜೊಂಜಾಟವೂ ಇಲ್ಲದ ಸಮಯದಲ್ಲಿ ಸಭಾಕರಣನು ತನ್ನ ರಾಹುಟಿಯಿಂದ ಹೊರಬಿದ್ದು ಬಂದು ಆ ಸ್ವಚ್ಛ ಬೆಳದಿಂಗಳಲ್ಲಿ ಮುಣುಗಿಹೋಗಿದ್ದ ವಿಂಧ್ಯಾಚಲನನ್ನೂ, ಅತನನ್ನು ಮುಚ್ಚಿ ಮುಸುಕುಹಾಕಿರುವ ಅರಣ್ಯ ಪ್ರದೇಶಗಳನ್ನೂ, ಮೇಲೆ ಅನುರ್ಯಾದನಾಗಿ ವ್ಯಾಪಿಸಿ, ನಕ್ಷತ್ರಗಳ ಮಂದಪ್ರಭೆಯಿಂದ ಶೋಭಿಸುವ ಆಕಾಶಮಂಡಲವನ್ನೂ ನೋಡುತ್ತ ನಿಂತುಕೊಂಡನು. ಅಷ್ಟುರಾತ್ರಿಯಾದರೂ ಅತನ ಕಣ್ಣಿಗೆ ಕಣ್ಣು ಹತ್ತಿದ್ದಿಲ್ಲ. ಪ್ರಾಣನಾಥ ಪ್ರಭುಗಳು ತನ್ನನ್ನು ಕುರಿತು, ತಿರಸ್ಕರಿಸಿ ಆಡಿದ ಮಾತುಗಳು ಅತನ ಮನಸ್ಸಿಗೆ ಹತ್ತಿ, ತನ್ನ ನೀಚತನದ ನಡತೆಗಾಗಿ ಅತನಿಗೆ ಬಹಳ ಪಶ್ಚಾತ್ತಾಪವಾಗಿತ್ತು. ತಾನು, ಚಂಪತರಾಯನ ಸ್ವದೇಶೋದ್ಧಾರದ ಕಾರ್ಯಕ್ಕೆ ವಿಘ್ನಮಾಡುವೆನೆಂತಲೂ, ಅತನನ್ನು ಯುದ್ಧದಲ್ಲಿ ಕೊಲ್ಲುವೆನೆಂತಲೂ ಹೀರಾದೇವಿಯ ಮುಂದೆ ಪ್ರತಿಜ್ಞೆ ಮಾಡಿದ ನೀಚತನವು ಅತನ ಮನಸ್ಸನ್ನು ಒಂದೇಸವನೆ ಕೊರೆಯುತ್ತಿತ್ತು. ಅತನು ಮನಸ್ಸಿನಲ್ಲಿ—"ನಾನೂ ಚಂಪತರಾಯನೂ ಚಿಕ್ಕಂದಿನಲ್ಲಿ ಎಂತಹ ಗೆಳೆಯರಾಗಿದ್ದೆವು! ಆಗ ನಾನಾದರೂ ಚಂಪತರಾಯನಂತೆಯೇ ಸ್ವದೇಶೋದ್ಧಾರದ ವಿಚಾರದಿಂದ ಎಂತಹ ಪವಿತ್ರನೂ, ಗೌರವಶಾಲಿಯೂ ಆಗಿದ್ದೆನು! ಅವರೆ ಈಗಿನ ನನ್ನ ಸ್ವದೇಶದ್ರೋಹದ ಹೇಸಿ ಕೆಲಸವನ್ನು ಮನಸ್ಸಿನಲ್ಲಿ ತಂದರೆ, ನಾನು ಭೂಮಿಯಲ್ಲಿ ಬಾಳುವದು ವ್ಯರ್ಥವೆನ್ನುವಹಾಗೆ ಆಗುತ್ತದೆ. ಇಂದಿನ ನಮ್ಮ ದಳಪತನ ಶ್ರೇಯಸ್ಕರ ಪ್ರತಾಪವನ್ನು ನೋಡಿ ನಾನು ನಾಚಬಾರದೇನು? ಆ ಸ್ವಪಿತ್ರನು ಪ್ರತಾಪವಂತನಾದ ಸದ್ಗುಣಿ

ಛತ್ರಸಾಲನ ಹೆಜ್ಜೆಯಮೇಲೆ ಹೆಜ್ಜೆಯಿಟ್ಟು ಸಾಗಿ, ಆತನ ಕ್ಷಾತ್ರವೃತ್ತಿಯಲ್ಲಿ ತನ್ನ ಕ್ಷಾತ್ರವೃತ್ತಿಯನ್ನು ಬೆರಿಸಿ ಅಸಾಧಾರಣ ಸಮರ ಸಾಹಸವನ್ನು ಜಗತ್ತಿಗೆ ತೋರಿಸಿದ್ದನ್ನು ನೋಡಿ, ಒಂದಾನೊಂದು ಕಾಲದಲ್ಲಿ ಚಂಪತರಾಯನ ಮಿತ್ರನೆನಿಸಿಕೊಳ್ಳುತ್ತಿದ್ದ ನಾನು ಈಗ ಬುದ್ಧಿಕಲಿಯಬಾರದೇನು? ಹಾಯ್, ಹಾಯ್! ಹೀರಾದೇವೀ, ಈ ಸಭಾಕರಣನನ್ನು ಪ್ರತಿಜ್ಞೆಯ ಪಾಶದಿಂದ ಬಿಗಿದು, ಯಾವ ಸತ್ಕಾರ್ಯವನ್ನೂ ಮಾಡಲಿಕ್ಕೂ ಬಾರದಂತೆ ಅವನನ್ನು ಪರಾಧೀನನನ್ನಾಗಿ ಮಾಡಿಬಿಟ್ಟೆಯಾ?

ಹೀಗೆ ನುಡಿದು ಸಭಾಕರಣನು ನಿಟ್ಟುಸಿರುಬಿಟ್ಟು ಪಶ್ಚಾತ್ತಾಪದಿಂದ ಆಕಾಶದಕಡೆಗೆ ನೋಡತೊಡಗಿರುವಾಗ ಲಲಿತೆಯ ಮನೋಹರಮೂರ್ತಿಯು ಅತನ ಕಣ್ಣಿಗೆ ಕಟ್ಟಿತು. ಲಲಿತೆಯು ಸಭಾಕರಣನ ತಂಗಿಯು. ಆಕೆಯು ಚಲುವಿಕೆಯಲ್ಲಿ ಸರಿಯಿಲ್ಲದವಳಾಗಿರುವಂತೆ, ಸದ್ಗುಣಗಳಲ್ಲಿಯೂ ಸರಿಯಿಲ್ಲದವಳಾಗಿದ್ದಳು. ಅಣ್ಣನಮೇಲೆ ಆಕೆಯ ಪ್ರೇಮ ಬಹಳ; ಸ್ವದೇಶೋದ್ಧಾರದಲ್ಲಿ ಆಕೆಯ ಆಸಕ್ತಿ ಹೆಚ್ಚು; ಆಕೆಯು ಹದಿನಾರುವರ್ಷದ ವಯಸ್ಸಿನವಳಾಗಿದ್ದರೂ ಗಂಡಸರು ಆಕೆಯ ಕಣ್ಣಿಗೆ ಬಿದ್ದರೆ, ಅವರು ಎಂತಹ ಚಲುವರಿರಲಿ, ಎಂತಹ ತರುಣರಿರಲಿ, ಎಂತಹ ಪ್ರತಾಪಿಗಳಿರಲಿ, ಎಂತಹ ವೈಭವಶಾಲಿಗಳಿರಲಿ ಅವರನ್ನು ಆಕೆಯು ಬಂಧುಭಾವದಿಂದ ನೋಡುವಳಲ್ಲದೆ, ಆಕೆಯ ಮನಸ್ಸಿನಲ್ಲಿ ಯಾವವಿಕಾರದ ಲೇಶವೂ ಹುಟ್ಟುತ್ತಿದ್ದಿಲ್ಲ. ಇದನ್ನೆಲ್ಲ ಮನಸ್ಸಿನಲ್ಲಿ ತಂದು ಸಭಾಕರಣನು ತನ್ನ ತಂಗಿಯ ಶೀಲವನ್ನು ಕುರಿತು ಈಗ ವಿಚಾರಿಸತೊಡಗಿದ್ದನು. ಅತನ ಘೋರಪ್ರತಿಜ್ಞೆಗೆ ಈ ತಂಗಿ ಲಲಿತೆಯೇ ಕಾರಣಳಾಗಿದ್ದಳು. ಅತನು ಮನಸ್ಸಿನಲ್ಲಿ—" ಇಂತಹ ಸದ್ಗುಣಮಂಡಿತ ಲಲಿತೆಯು ಅಕಸ್ಮಾತ್ ಎಲ್ಲಿಯೋ ಹೋಗಿಬಿಡಲು, ಅದರ ಕಾರಣವನ್ನು ಹೀರಾದೇವಿಯು ಸತ್ಯವೆಂದು ನನ್ನಮುಂದೆ ಹೇಳಿದಳಲ್ಲ, ಅದು ಸತ್ಯವಾಗಿರಬಹುದೆ? ನನ್ನ ಆ ತಂಗಿಯು ಹೋಗಿ ಈಗ ಹದಿನಾರು ವರ್ಷಗಳಾಗಿದ್ದರೂ ಆಕೆಯು ಈವರೆಗೆ ನನ್ನ ಕಣ್ಣಿಗೆ ಬೀಳದಿರುವದರಿಂದಲೂ, ಆಕೆಯು ಇಂತಹ ಕಡೆಯಲ್ಲಿರುವಳೆಂಬದರ ಗಂಧವೂ ನನಗೆ ಹತ್ತದಿರುವದರಿಂದಲೂ ಹೀರಾದೇವಿಯು ಹೇಳಿದಂತೆ ಆಕೆಯು ನದಿಯಲ್ಲಿ ಹಾರಿಯಾಕೆ ಜೀವಕೊಟ್ಟಿರಬಾರದು? ಆಕೆಯು ಹಾಗೆ ಆತ್ಮಪತ್ಯಮಾಡಿಕೊಳ್ಳ

ಲಿಕ್ಕೆ ಚಂಪತರಾಯನುಆಕೆಯಕೌಮಾರ್ಯವನ್ನು ಕೆಡಿಸಿದ್ದೇಕಾರಣವೆಂದು ಹೀರಾದೇವಿಯು ಹೇಳಿದ್ದು ಸತ್ಯವು ಯಾಕಾಗಿರಬಾರದು? ನನ್ನ ತಂಗಿಯ ಸೌಂದರ್ಯ-ಸದ್ಗುಣಗಳುಚಂಪತರಾಯನಂತಹ ಸದ್ಗುಣಿಯನ್ನೂ ಮೋಹ ಗೊಳಿಸುವಂತಹವಿದ್ದವೆಂಬದರಲ್ಲಿ ಸಂಶಯವಿಲ್ಲ; ಆದರೆ ಚಂಪತರಾಯನು ಇಷ್ಟು ನೀಚನೆ? ತನ್ನ ಮಿತ್ರ ಸಭಾಕರಣನ ತಂಗಿಯಮೇಲೆ ಬಲಾತ್ಕಾರ ಮಾಡುವಂತಹ ಪಾಪಿಹೃದಯದವನೆ? ನಾನು ಚಿಕ್ಕಂದಿನಿಂದ ಆತನ ಸದ್ಗುಣಗಳನ್ನು ನೋಡಿಲ್ಲವೆ? ಅಸಂಭವವು, ಈ ಮಾತು ತೀರಾ ಅಸಂಭವವು! ನಾನು ಹೀರಾದೇವಿಯ ಮಾತನ್ನು ನಂಬಿ, ವಿಕಾರವಶನಾಗಿ ವ್ಯರ್ಥಘೋರ ಪ್ರತಿಜ್ಞೆಮಾಡಿ ಕೆಟ್ಟಿನು; ಆದರೆ ಆ ಮಾತು ಸುಳ್ಳೆಂದು ನಂಬಿಗೆಯಾಗುವ ವರೆಗೆ ನನಗೆ ಪ್ರತಿಜ್ಞಾ ಭಂಗಮಾಡಲಿಕ್ಕೆ ಮಾರ್ಗವೆಲ್ಲಿದೆ? ಹೀರಾದೇವಿಯ ಮಾತಾದರೂ ಸುಳ್ಳೆಂದು ನಾನು ಯಾವ ಆಧಾರದಿಂದ ತಿಳಿಮ ಕೊಳ್ಳಬೇಕು?"

ಈ ಮೇರೆಗೆ ಆಲೋಚಿಸುವಾಗ ಸಭಾಕರಣನ ಅಂತಃಕರಣವು ಅತ್ಯಂತ ವ್ಯಥಿತವಾಯಿತು. ಆತನು ಮತ್ತೆ ಮನಸ್ಸಿನಲ್ಲಿ— "ನಾನು ಏನು ಅವಿಚಾರ ಮಾಡಿದೆನಲ್ಲ! ಇಂತಹ ಸಮರ ಧೀರನು ನಾನು ನನ್ನ ಈಅವಿಚಾರದಮೂಲಕ ಇಂದು ಬೆಳಗಿನಲ್ಲಿಯ ದೇವಿಯ ಪೂಜೆಗಾಗಿದೇವಿಯ ಗುಡಿಗೆ ಹೋದಾಗ ಚಂಪತರಾಯನ ಮುಂದೆ ಹೇಡಿಯಂತೆ ತೇಜೋಹೀನ ನಾಗಿ ಕಣ್ಣೀರ ಎರಡು ಹನಿಗಳನ್ನು ಕೆಡವಿದೆನಲ್ಲ! ಮಹಾತ್ಮರಾದ ಪ್ರಾಣ ನಾಥ ಪ್ರಭುಗಳು ತ್ರಿಕಾಲ ಜ್ಞಾನಿಗಳಾಗಿರಲು, ನನ್ನನ್ನು ಹಾಗೆ ತಿರಸ್ಕರಿಸಿ ಮಾತಾಡಿದ್ದರ ಮೇಲಿಂದ ನನ್ನ ಪ್ರತಿಜ್ಞೆಯ ಕಾರಣವು ಸುಳ್ಳು ಎಂದು ನಾನು ಯಾಕೆ ಭಾವಿಸಬಾರದು? ನನ್ನ ಪ್ರತಿಜ್ಞೆಯ ಕಾರಣವು ನಿಜವಾಗಿ ದ್ದರೆ, ಆ ನಿಸ್ಪೃಹಿ ಬ್ರಾಹ್ಮಣ ಶ್ರೇಷ್ಠರು ಚಂಪತರಾಯನ ಅಭಿನಂದನ ನನ್ನು ಮಾಡುತ್ತಿದ್ದಿದ್ದಲ್ಲ. ಸುಳ್ಳು, ಪರಿಶುದ್ಧ ಹೃದಯದ ಚಂಪತರಾಯನ ಮೇಲೆ ಹೀರಾದೇವಿಯು ಹೊರಿಸಿದ ಕೆಟ್ಟ ಅಪವಾದವು ನಿಶ್ಚಯವಾಗಿಸುಳ್ಳು; ಆದರೆ ಈಗ ನಾನೇನು ಮಾಡಬೇಕು? ನನ್ನ ತಿಳುವಳಿಕೆಯು ತಪ್ಪಿನದೆಂಬ ದರ ಸಿದ್ಧತೆಗಾಗಿ ನನಗೆ ಸಾಕ್ಷಿಗಳು ಹೇಗೆ ಮೊರೆಯಬೇಕು? ಹೀರಾ ದೇವಿಯು ಅತ್ಯಂತ ನೀಚವೃತ್ತಿಯವಳೆಂದು ಹೆಜ್ಜೆಹೆಜ್ಜೆಗೆ ಈಗ ನನ್ನಿನು

ಭವಕ್ಕೆ ಬರುತ್ತಿದ್ದರೂ, ಆಕೆಯು ಚಂಪತರಾಯನನ್ನೇಲಿ ಹೊರಿಸಿದ ಅಪವಾದವು ಸುಳ್ಳೆಂದು ನಾನು ಹೇಗೆ ತಿಳಿಯಬೇಕು? ಅದಕ್ಕೆ ಪ್ರತ್ಯಕ್ಷ ಸಾಕ್ಷಿ ಬೇಕಲ್ಲವೆ? ನನ್ನ ತಂಗಿ ಲಲಿತೆಯೇ ಬಂದು ಹೀರಾದೇವಿಯ ಸಮಕ್ಷ ಚಂಪತರಾಯನ ಮೇಲಿನ ಆರೋಪವು ಸುಳ್ಳು ಎಂದು ಹೇಳುವವರೆಗೆ ನಾನು ಪ್ರತಿಜ್ಞೆಯನ್ನು ಭಂಗಗೊಳಿಸಲಾರೆನು; ಆದರೆ ನನ್ನ ಲಲಿತೆಯು ಈಗ ಎಲ್ಲಿರುವಳು? ಈಗಲೇ ಹೋಗಿ ಆ ನದಿಯ ಮಡುವನ್ನು ದುಮುಕಿ ಆಕೆಯನ್ನು ಹುಡುಕಿಕೊಂಡು ಬರಲಾ! ಹಾಯ್ ಸಭಾಕರಣ, ನೀನು ಎಂತಹ ಇರುಕಿನಲ್ಲಿ ಸಿಕ್ಕ್ಕಿಯಲ್ಲ! ನೀನು ಪ್ರತಿಜ್ಞೆಯ ಪಾಶಕ್ಕೆ ಒಳಗಾಗಿ ಹೀಗೆಯೇ ದೇಶಬಾಂಧವರ ರಕ್ತದಿಂದ ನಿನ್ನ ಖಡ್ಗವನ್ನು ಕಲಂಕಿಸಿಕೊಳ್ಳಲಿಕ್ಕೂ, ಚಂಪತರಾಯನಂಥ ಸ್ವಾತಂತ್ರ್ಯಪ್ರಿಯ ರಾಜನ ಶಿರಸ್ಸನ್ನು ಸಮರಭೂಮಿಯಲ್ಲಿ ಇಳಿಸಲಿಕ್ಕೂ ಸಿದ್ಧನಾಗಿರತಕ್ಕವನೇನು? ಹಾಗಿರದೆ ಮಾಡಬೇಕೇನು? ಅದು ಸಭಾಕರಣನ ಪ್ರತಿಜ್ಞೆಯು! ಅದು ಎಂದೂ ಅಸತ್ಯವಾಗದು! ಪ್ರತಿಜ್ಞೆಯ ಅಗ್ನಿಯಲ್ಲಿ ಎಲ್ಲವನ್ನೂ ಆಹುತಿಯಾಗಿ ಕೊಡಲು ಅಚ್ಚ ರಜಪೂತ ರಕ್ತದ ಸಭಾಕರಣನು ಈಗ ಸಿದ್ಧನಾಗಿರುವನು!"

ಹೀಗೆ ನುಡಿಯುತ್ತ ಸಭಾಕರಣನು ತ್ವೇಷದಿಂದ ಸುತ್ತುಮುತ್ತು ನೋಡುತ್ತಿರಲು, ದೂರ ಯಾವಳೋ ಒಬ್ಬ ಸ್ತ್ರೀಯು ಬರುತ್ತಿರುವದು ಆತನ ಕಣ್ಣಿಗೆ ಬಿದ್ದಿತು. ಆತನು ಆಶ್ಚರ್ಯದಿಂದ—"ಇಷ್ಟು ರಾತ್ರಿಯಲ್ಲಿ ಸ್ತ್ರೀಯು ನನ್ನ ರಾಹುಟಿಯ ಕಡೆಗೆ ಬರುವದೆಂದರೇನು? ಸಭಾಕರಣನ ಸಮ್ಮಾನಗಳ ವರ್ಚಸ್ಸು ಅಷ್ಟು ಹೀನತರದ್ದೇ? ಅಥವಾ ನನ್ನ ತಂಗಿ ಲಲಿತೆಯೇ ನನ್ನ ಸಂಶಯ ನಿವಾರಣಮಾಡಿ ನನ್ನನ್ನು ಪ್ರತಿಜ್ಞಾಪಾಶದಿಂದ ಮುಕ್ತ ಮಾಡಲಿಕ್ಕೆ ಬರುತ್ತಿರಬಹುದೋ? ಆದರೆ ಹೀರಾದೇವಿಯು ಈಗ ಎಲ್ಲಿರುವಳು? ತನ್ನ ರಾಹುಟಿಯಲ್ಲಿ ಸ್ವಸ್ಥ ನಿದ್ದೆಮಾಡುತ್ತಿರುವ ಹೀರಾದೇವಿಯನ್ನು ಈಗಎಬ್ಬಿಸಿಕೊಂಡು ಬರುವವರಾರು?" ಎಂದು ಏನೇನೋ ಕಲ್ಪಿಸುತ್ತಿರಲು, "ಸಭಾಕರಣ, ಇಷ್ಟು ರಾತ್ರಿಯಲ್ಲಿ ಯಾವ ವಿಚಾರ ನಡೆದದೆ?" ಎಂಬ ಶಬ್ದಗಳು ಸ್ಪಷ್ಟವಾಗಿ ಆತನ ಕಿವಿಗೆ ಬೀಳುತ್ತಿರಲು, ಪ್ರತ್ಯಕ್ಷ ಹೀರಾದೇವಿಯೇ ಆತನ ಮುಂದೆ ಬಂದು ನಿಂತುಕೊಂಡಳು! ಆಕೆಯನ್ನು ನೋಡಿ ಸಭಾಕರಣನ ಮನಸ್ಸು ಹೇಸಿತು. ಈ ಹೆಣ್ಣು

ಮಗಳು ಇಷ್ಟು ರಾತ್ರಿಯಲ್ಲಿ ಒಬ್ಬಳೇ ಬರುವಂತಹ ಕೆಲಸವೇನೆಂದು ಅತನು ಮನಸ್ಸಿನಲ್ಲಿ ಆಕೆಯನ್ನು ತಿರಸ್ಕರಿಸಿದನು. ಅಷ್ಟರಲ್ಲಿ ಹೀರಾದೇವಿಯು ಸಭಾಕರಣನ ತೀರ ಹತ್ತರಕ್ಕೆ ಬಂದು ಮೊದಲಿನಂತೆಯೇ—"ಸಭಾಕರಣ, ಇಷ್ಟು ರಾತ್ರಿಯಲ್ಲಿ ಯಾವ ವಿಚಾರವು ನಡೆದಿದೆ?"ಎಂದು ಮತ್ತೆ ಪ್ರಶ್ನಮಾಡಿದಳು. ಅದಕ್ಕೆ ಸಭಾಕರಣನು—

ಸಭಾಕರಣ—ಹೀರಾದೇವೀ, ಹಗಲೆಲ್ಲ ಪ್ರತಿಜ್ಞಾವಶನಾಗಿ ಮಾಡಬಾರದ ನೀಚ ಕೆಲಸಗಳನ್ನು ಮಾಡುತ್ತಿದ್ದ ಸಭಾಕರಣನು, ಈ ಮಧ್ಯರಾತ್ರಿಯಲ್ಲಿ ಪಶ್ಚಾತ್ತಾಪದಿಂದ ತನ್ನ ಹೃದಯವನ್ನು ಶುದ್ಧಮಾಡಿಕೊಳ್ಳುತ್ತಿರುವಾಗಲೂ ನಿನ್ನ ವಿಘ್ನವೇ? ಇಷ್ಟು ರಾತ್ರಿಯಲ್ಲ ನೀನು ಇಲ್ಲಿಗೆ ಬಂದ ಕಾರಣವೇನು?

ಹೀರಾದೇವಿ—ವೀರ ಕ್ಷತ್ರಿಯನಾದ ಸತ್ಯವಾದಿ ಸಭಾಕರಣನ ಪ್ರತಿಜ್ಞೆಯು ಎಷ್ಟರ ಮಟ್ಟಿಗೆ ದೃಢವಾಗಿರುತ್ತದೆಂಬದನ್ನು ನೋಡಲಿಕ್ಕೆ!

ಸಭಾಕರಣ—ಏನು? ಸಭಾಕರಣನ ಪ್ರತಿಜ್ಞೆಯಲ್ಲಿಯೂ ನಿನ್ನ ಅವಿಶ್ವಾಸವೇ? ಹೀರಾದೇವಿಯು ನೀನು ಭ್ರಮಿಷ್ಠಳಾಗಿರುವಂತೆ ತೋರುತ್ತದೆ; ನೀನಲ್ಲದೆ ಮತ್ತೆ ಯಾರಾದರೂ ಈ ಅಮಂಗಳ ಮಾತು ಆಡಿದ್ದರೆ, ಸಭಾಕರಣನ ಖಡ್ಗವು ಅವರ ನಾಲಿಗೆಯನ್ನು ತುಂಡರಿಸದೆ ಇರುತ್ತಿದ್ದಿಲ್ಲ.

ಸಭಾಕರಣನ ಈ ಮಾತುಗಳನ್ನು ಕೇಳಿ ಹೀರಾದೇವಿಯು ಸ್ವಲ್ಪ ಬೆದರಿದಳು. ಸಭಾಕರಣನು ಅಂತಹ ಸತ್ಯಪ್ರತಿಜ್ಞನೂ, ಸಂತಾಪಿಯೂ ಎಂಬದನ್ನು ಆಕೆಯು ಚರಿತಿದ್ದಳು; ಆದ್ದರಿಂದ ಸಭಾಕರಣನನ್ನು ಶಾಂತಗೊಳಿಸುವದಕ್ಕಾಗಿ ಆ ಸಾಹಸಿಯಾದ ಸ್ತ್ರೀಯು ಸೌಮ್ಯ ಸ್ವರದಿಂದ—

ಹೀರಾದೇವಿ—ಸಭಾಕರಣ, ಶಾಂತನಾಗು. ನೀನು ಅಂತಹ ಸತ್ಯಪ್ರತಿಜ್ಞನೆಂಬದನ್ನು ನಾನು ಬಲ್ಲೆನು; ಆದರೆ ಇಂದಿನ ಬೆಳಗಿನ ದೇವಿಯ ಪೂಜೆಯ ಕಾಲಕ್ಕೆ ನಿನ್ನ ಮಗನಾದ ಯುವರಾಜ ದಳಪತರಾಯನು ಯವನರ ಶಾಸನಮಾಡಿ ಬಂದಾಗ ನೀನು ಒಂದು ಮಾತಿನಿಂದಲೂ ಅತನನ್ನು ತಿರಸ್ಕರಿಸದಿರುವದನ್ನು ನೋಡಿ ನನಗೆ ಆಶ್ಚರ್ಯವಾಯಿತು! ಇದಲ್ಲದೆ, ಪ್ರಾಣನಾಥ ಪ್ರಭುಗಳು ನಿನ್ನನ್ನು ಎಚ್ಚರಗೊಳಿಸಿದಾಗ ನೀನು ಲಜ್ಜೆಯಿಂದ ತಲೆಬಾಗಿಸಲು ನಿನ್ನ ಮುಖದಲ್ಲುಂಟಾದ ಪಶ್ಚಾತ್ತಾಪದ

ಚಿಹ್ನವು ನನ್ನ ಮನಸ್ಸನ್ನು ಚಂಚಲವಾಗಮಾಡಿದೆ; ಆದ್ದರಿಂದ ಸತ್ಯ ಪ್ರತಿಜ್ಞನಾದ ನೀನು ಎಲ್ಲಿ ಪ್ರತಿಜ್ಞಾಭಂಗ ದೋಷಕ್ಕೆ ಗುರಿಯಾಗುವೆಯೋ ಎಂದು ಶಂಕಿಸಿ, ನೀನು ಹಾಗೆ ಮಾತಿನ್ದರ ಕಾರಣವನ್ನು ವಿಚಾರಿಸುವದ ಕ್ಕಾಗಿ ಇಷ್ಟು ಅಪರಾತ್ರಿಯಲ್ಲಿ ನಿನ್ನ ಬಳಿಗೆ ನಾನು ಬಂದಿರುವೆನು! ಏನು ಮಾಡಲಿ? ಸಭಾಕರಣ, ಅಸಮಾಧಾನದಿಂದ ನನ್ನ ಕಣ್ಣಿಗೆ ಕಣ್ಣು ಹತ್ತ ಲೊಲ್ಲದು!

ಹೀರಾದೇವಿಯ ಈ ಮಾತುಗಳನ್ನು ಕೇಳಿ ಸಭಾಕರಣನು ವಿಚಾರ ಕ್ಕೊಳಗಾದನು. ಹೀರಾದೇವಿಯು ಹೇಳಿದಂತೆ ತನ್ನ ಪ್ರತಿಜ್ಞೆಯ ಬಗ್ಗೆ ಆಗ ಆತನಿಗೆ ಪಶ್ಚಾತ್ತಾಪವಾದದ್ದು ನಿಜವಾಗಿತ್ತು. ಯುವರಾಜ ದಳ ಪತಿಯ ಪ್ರತಾಪವನ್ನು ನೋಡಿ ಸಂತೋಷವಾದದ್ದರಿಂದ ಆತನು ತನ್ನ ಆ ಸದ್ಗುಣಿಯಾದ ಮಗನನ್ನು ಈವರೆಗೂ ತಿರಸ್ಕರಿಸಿದ್ದಿಲ್ಲ; ಮುಂದೆಯೂ ತಿರ ಸ್ಕರಿಸುವ ಸಂಭವವಿದ್ದಿಲ್ಲ. ಆದ್ದರಿಂದ ಆ ಸರಳ ಹೃದಯದ ಪ್ರತಿಜ್ಞಾ ಪಾಶಬದ್ಧ ಸಭಾಕರಣನು, ತಟ್ಟನೆ ಹೀರಾದೇವಿಯ ಮಾತುಗಳಿಗೆ ಉತ್ತರ ಕೊಡಲಾರದೆ ಆಲೋಚಿಸತೊಡಗಿದ್ದನು. ಕಡೆಗೆ ಆತನು ಸರಳತನದಿಂದ ಹೀರಾದೇವಿಯನ್ನು ಕುರಿತು—

ಸಭಾಕರಣ—ಹೀರಾದೇವೀ, ನಿನ್ನ ಮಾತು ಸತ್ಯವಾದದ್ದು! ನಾನು ಪ್ರತಿಜ್ಞಾ ಬದ್ಧನಾಗಿದ್ದದೂ, ಆ ದಿವ್ಯ ಮೂರ್ತಿಯಾದ ಪ್ರಾಣನಾಥಪ್ರಭು ವಿನ ದಿವ್ಯ ತೇಜಸ್ಸಿನ ಮುಂದೆ ನನ್ನ ಘಾತಕಪ್ರತಿಜ್ಞೆಗಾಗಿ ನಾನು ನಾಚಿದ್ದು ನಿಜವು; ಅದರಂತೆ, ನನ್ನ ವೀರ ದಳಪತಿಯ ಶೌರ್ಯಕ್ಕಾಗಿ ನನಗೆ ಸಂತೋಷವಾದದ್ದರಿಂದ ನಾನು ಆಗ ಆತನನ್ನು ತಿರಸ್ಕರಿಸಲಿಲ್ಲ. ಈಗಾದರೂ ನಾನು ಆತನನ್ನು ತಿರಸ್ಕರಿಸುವ ಸಂಭವವಿಲ್ಲ! ಆದರೆ ಹೀರಾ ದೇವೀ, ನನ್ನಂತೆ ನನ್ನ ಮಗ ದಳಪತಿಯು ಪ್ರತಿಜ್ಞಾ ಬದ್ಧನಾಗಿರುವದಿಲ್ಲ ವೆಂಬ ಮಾತನ್ನು ನೀನು ವಿಚಾರಿಸಬೇಕಲ್ಲವೆ?

ಹೀರಾದೇವಿ—ಅವಶ್ಯವಾಗಿ ವಿಚಾರಿಸಬೇಕು, ಹಾಗೆ ನಾನು ವಿಚಾರಿ ಸಿಯೂ ವಿಚಾರಿಸುವೆನು; ಆದರೆ ಸಭಾಕರಣ, ಹೀಗೆ ನೀನು ಪ್ರತಿಜ್ಞೆಗೆ ಬಾಧಕವಾದ ಸಂಗತಿಗಳಿಂದ ಮೇಲೆ ಮೇಲೆ ಶಿಥಿಲಹೃದಯನಾಗುತ್ತ ಹೋ ದರೆ, ನಿನ್ನ ಪ್ರತಿಜ್ಞೆಯು ಹೇಗೆ ದೃಢವಾಗಿ ಉಳಿಯಬೇಕು? ಪ್ರತಿಜ್ಞೆಯಂತೆ

ನಿನ್ನಿಂದ ಕಾರ್ಯಗಳಾದವೂ ಹೇಗೆ ಆಗಬೇಕು? ನಿಮ್ಮಿಬ್ಬರು ಒಂದಿಲ್ಲೊಂದು ಕಾರಣವಿಂದ ನಮ್ಮ ಕಾರ್ಯಕ್ಕೆ ಅನುಕೂಲವಾಗಿರುವದರಿಂದಲೇ ನಾವು ಪ್ರತೀಕ್ಷಿತ ಕಾರ್ಯದಲ್ಲಿ, ಅದು ಎಂತಹದಿದ್ದರೂ ಕೈ ಹಾಕಿದ ತಪ್ಪಿಗಾಗಿಯಾದರೂ ಅದನ್ನು ಸಾಧಿಸಬೇಕಾಗಿರುವದು; ಹಾಗೆ ಮಾಡುವದು ಕ್ಷತ್ರಿಯರ ಧರ್ಮವೆಂಬದನ್ನು ಧರ್ಮಾಂತರನಾದ ಪಾಂಡವನಷ್ಟೇಕೆ, ದುರ್ಯೋಧನನ ಆಚರಣೆಯಿಂದ ನೀನು ತಿಳಿದುಕೊಳ್ಳಬಹುದಾಗಿದೆ.

ಸಭಾಕರಣ—ನಿಜವು, ಹೀರಾದೇವೀ, ನೀನು ಆಡುವ ಮಾತು ನಿಜವು! ನಡೆ ಹಾಗಾದರೆ, ಈ ಮಾತಿನ ನಿರ್ಣಯವನ್ನು ಈಗ ಮಾತು ಬಿಡೋಣ; ಆದರೆ ಸಭಾಕರಣನು ತನ್ನ ಪ್ರತಿಜ್ಞೆಗಾಗಿ ಪ್ರಾಣಕೊಡುವವನಾಗಿರುವದರಿಂದ, ಅವನು ಮಕ್ಕಳು ಮರಿಗಳ ಯಾವ ಮೋಹಕ್ಕೂ ಒಳಗಾಗುವನಲ್ಲವೆಂಬದನ್ನು ನೀನು ನೆನಪಿನಲ್ಲಿಡಬೇಕು. ನೀನಂದಂತೆಯೇ ಸಭಾಕರಣನು ಈಗ ಯೋಗ್ಯಾಯೋಗ್ಯಗಳ ವಿಚಾರದ ಗೊಡವೆಗೆಹೋಗನು. ಆತನು ಮಾಡಿರುವ ಪ್ರತಿಜ್ಞೆಯ ಕಾರಣವು ನಿಜವಿರಲಿ-ಸುಳ್ಳಿರಲಿ, ಅದರಿಂದ ಸತ್ಪರಿಣಾಮವಾಗಲಿ – ದುಷ್ಪರಿಣಾಮವಾಗಲಿ, ಅದರಿಂದ ದೇಶದ ಉದ್ಧಾರವಾಗಲಿ – ಅಧಃಪತನವಾಗಲಿ ಸಭಾಕರಣನು ಪ್ರತಿಜ್ಞೆಗೆ ಭಂಗ ತಂದುಕೊಳ್ಳಲಾರನು! ನಡೆ ಹಾಗಾದರೆ, ಯುವರಾಜ ದಳಪತನಲ್ಲಿಗೆ ಹೋಗಿ ಮುಂದಿನ ಮಾತಿನ ವಿಚಾರ ಮಾಡೋಣ!

ಈಗ ಸಭಾಕರಣನು ಗಂಭೀರತನಾಗಿದ್ದನು; ಯಾಕಂದರೆ ಇನ್ನು ಹೀಗೆಯೇ ಮಾಡಬೇಕೆಂಬವರ ನಿಶ್ಚಯವು ಆತನ ಮನಸ್ಸಿನಲ್ಲಿ ಆಗಿ ಹೋಗಿತ್ತು. ಆತನು ಉಲ್ಲಾಸದಿಂದ ಮಗನ ರಾಮಟೆಯ ಕಡೆಗೆ ಸಾಗಿದ್ದನು; ಹೀರಾದೇವಿಯೂ ಆತನನ್ನು ಹಿಂಬಾಲಿಸಿ ನಡೆದಿದ್ದಳು. ಆಕೆಯನ್ನು ಲಕ್ಷಿಸದೆ ಸಭಾಕರಣನು ನೆಟ್ಟಗೆ ಮಗನು ಮಲಗಿರುವಲ್ಲಿಗೆ ಹೋಗಿ, ಅವನ ಮಂಚದ ಬಳಿಯಲ್ಲಿ ನಿಂತುಕೊಂಡನು. ಆಗ ದಳಪತನಿಗೆ ನಿದ್ದೆ ಹತ್ತಿತ್ತು. ಇನ್ನು ಸಭಾಕರಣನು ಮಗನನ್ನು ಹಿಡಿದೆಳೆದು ಒಳಕ್ಕಾಗಿ ದಂಡಿಸುವನೆಂದು ಹೀರಾದೇವಿಯು ಕಲ್ಪಿಸಿದ್ದಳು; ಆದರೆ ಸಭಾಕರಣನು ಮಗನನ್ನು ದಂಡಿಸುವದು ಒತ್ತಟ್ಟಿಗಿರಲಿ, ಆತನು ಅತ್ಯಂತ ವಾತ್ಸಲ್ಯದಿಂದ ಮಗನ ಮೋರೆಯನ್ನು ನೋಡುತ್ತ ನಿಂತುಕೊಂಡನು; ಮಗನಿಗೆ ಎಚ್ಚರಾ

ದೀತೆಂಬ ಕಾರಣವಿಂದ ಆತನು ನಿಸಿಕಾಡದೆ ಮಗನ ಸುಂದರ ಮುಖವನ್ನು ನೋಡುತ್ತಲಿದ್ದನು. ಆಗ ಬೆಳಗಾಗಲಿಕ್ಕೆ ಎರಡು ತಾಸು ರಾತ್ರಿಯು ಉಳಿದಿರಬಹುದು. ಅಷ್ಟರಲ್ಲಿ ದಲಪತಿಗೆ ಕನಸುಬಿದ್ದು, ಕನಸಿನಲ್ಲಿ ತನ್ನ ತಂದೆಯು ತನ್ನ ಅಂದಿನ ಜಯಕ್ಕಾಗಿ ಸಂತೋಷಪಟ್ಟು ತನ್ನನ್ನು ಕಾಣಲಿಕ್ಕೆ ಬಂದಿರುವಂತೆಯಾಯಿತು. ಆತನು ತನ್ನ ತಂದೆಯನ್ನು ನಮಸ್ಕರಿಸಬೇಕೆಂದು ಪಕ್ಕನೆ ಕಣ್ಣ್ತೆರೆದು ಮೇಲಕ್ಕೆ ಏಳಲು, ಪ್ರತ್ಯಕ್ಷ ಎದುರಿಗೆ ನಿಂತಿದ್ದ ಸಭಾಕರಣನು—"ದಳಪತ, ವತ್ಸಾ, ಮಲಗು ಮಲಗು; ನಾನು ಬಂದದ್ದರಿಂದ ನಿನ್ನ ನಿದ್ದೆಗೇಡಾಯಿತೇನು?" ಎಂದು ನುಡಿಯುತ್ತಲಿದ್ದನು. ಆಗ ದಳಪತರಾಯನು ಆತುರದಿಂದ ಎದ್ದು ತಂದೆಯ ಚರಣಗಳ ಮೇಲೆ ಮಸ್ತಕವಿಟ್ಟನು. ಆಗ ಸಭಾಕರಣನು ಮಗನನ್ನು ಅಪ್ಪಿ ನೆತ್ತಿಯನ್ನು ಮೂಸಿನೋಡಿ—"ಬಾಳಾ, ದಳಪತಾ, ಇದೇ ನಿನ್ನ ಕಟ್ಟಕಡೆಯ ಆಲಿಂಗನವಾದದ್ದರಿಂದ ಇನ್ನಿಷ್ಟು ಹೊತ್ತು ನನ್ನ ಬಾಹುಪಾಶದಿಂದ ದೂರವಾಗಬೇಡ, ಎನಲು, ದಳಪತನು-ಅಪ್ಪಾ, ನಾನು ಎಂತಹ ಭಾಗ್ಯಶಾಲಿಯು! ನಸಿಕಿನಲ್ಲಿಯೇ ನನಗೆ ತಮ್ಮ ದರ್ಶನವಾಯಿತು! ವಿಂಧ್ಯವಾಸಿನಿಯ ಸಹಸ್ರ ಸಾರೆಯ ದರ್ಶನವ ಆನಂದಕ್ಕಿಂತಲೂ ಇಂದಿನ ನಿಮ್ಮ ದರ್ಶನದ ಆನಂದವು ನನಗೆ ಹೆಚ್ಚಿನದಾಗಿರುವದು. ಪಿತಾಜಿ, ನನ್ನ ಪೂರ್ವದ ಪುಣ್ಯವು ಇಂದು ಫಲಿಸಿತೆಂದು ನಾನು ತಿಳಿದುಕೊಳ್ಳುವೆನು!

ಸಭಾಕರಣ—ದಳಪತ, ಈಗ ನಾನು ಇಷ್ಟು ಮಾನಕ್ಕೆ ಪಾತ್ರನಿರುವದಿಲ್ಲ. ಮೊದಲಿನ ಸಭಾಕರಣನು ನಾನು ಈಗಿರುವದಿಲ್ಲ. ಚಂಪತರಾಯನ ಸ್ನೇಹಿತನಾಗಿರುವ ದೈನೀ ಭಾವದ ಸಭಾಕರಣನು ಬೇರೆ. ಈಗಿನ ಪ್ರತಿಜ್ಞಾ ಪಾಶಬದ್ಧ ಸಭಾಕರಣನು ಬೇರೆ. ಮೊದಲಿನ ಸಭಾಕರಣನು ದೇಶದ ಹಿತಮಾಡುವವನಾಗಿದ್ದನು; ಈಗಿನ ಸಭಾಕರಣನು ದೇಶದ ದ್ರೋಹ ಕಟ್ಟಿಕೊಳ್ಳುವವನಾಗಿದ್ದಾನೆ!

ದಲಪತ—ಪಿತಾಜೀ, ಹೀಗೇಕೆ ಅನ್ನುವಿರಿ?

ಸಭಾಕರಣ—ವತ್ಸ, ಸತ್ಯವಾದದ್ದನ್ನೇ ಅನ್ನುವೆನು. ನನ್ನ ಘೋರ ಪ್ರತಿಜ್ಞೆಯೇ ಅಂತಹದಿರುವದು. "ನಾನು ಸ್ವತಃ ಪರತಂತ್ರನಾದೇನು, ನನ್ನ ದೇಶವನ್ನು ಪಾರತಂತ್ರ್ಯಕ್ಕೆ ಗುರಿಮಾಡೇನು; ಆದರೆ

ಚಂಪತರಾಯನು ಕೈಕೊಂಡಿರುವ ದೇಶೋದ್ಧಾರದ ಕಾರ್ಯವನ್ನು ನಾಶ ಮಾಡದೆ ಬಿಡಲಿಕ್ಕಿಲ್ಲ" ಎಂದು ನಾನು ಪ್ರತಿಜ್ಞೆಮಾಡಿದ್ದೇನೆ.

ದಲಪತ—ಅಪ್ಪಾ, ಇದೆಂತಹ ಪ್ರತಿಜ್ಞೆಯು! ಪ್ರತಿಜ್ಞೆಯ ಯೋಗದಿಂದ ಅನಾಚಾರವಾಗುತ್ತದೆಂಬದು ನಿಮಗೆ ತೋರಿದರೆ, ನೀವು ಅಂತಹ ಅಯೋಗ್ಯ ಪ್ರತಿಜ್ಞೆಯನ್ನು ತ್ಯಜಿಸಿ ಬಿಡಬೇಕು?

ಸಭಾಕರಣ (ತ್ರೋಷದಿಂದ)—ಏನಂದಿ? ಪ್ರತಿಜ್ಞೆಯ ತ್ಯಾಗವೆ? ದಲಪತ, ನಿನ್ನಂಥ ವೀರನಿಂದ ಈ ಹೇಡಿತನದ ಮಾತು ಹೊರಡತಕ್ಕದ್ದಿದ್ದಿಲ್ಲ; ನೀನು ಈ ಸಭಾಕರಣ ಮಗನಿರುವೆ. ತಾನಾಡಿದ ಮಾತಿನ ಬೆಲೆಯೇನಿರುವೆಂಬದರ ತಿಳುವಳಿಕೆಯು ನಿನಗೆ ಇರಬೇಕಾಗಿತ್ತು. ಸಭಾಕರಣನು ಪ್ರತಿಜ್ಞೆಯ ಭಂಗಮಾಡಿದನೆಂದು ತಿಳಿದರೆ, ಸ್ವರ್ಗಸ್ಥ ಪಿತೃಗಳಿಗೆ ಎಷ್ಟು ದುಃಖವಾದೀತು!

ದಲಪತ—ಯಾವತ್ತು ಬುಂದೇಲಖಂಡದ ಪಾರತಂತ್ರ್ಯಕ್ಕೆ ನೀವು ಕಾರಣರಾದಿರೆಂಬದು ತಿಳಿದರೆ ಆ ಪಿತೃಗಳು ಸಂತೋಷಪಡಬಹುದೊ? ಇಂತಹ ಘೋರಪ್ರತಿಜ್ಞೆಯನ್ನು ಮಾಡಲಿಕ್ಕೆ ಕಾರಣವಾದರು ಏನು?

ಸಭಾಕರಣ—ವತ್ಸಾ, ಆ ಕಾರಣವನ್ನು ಕೇಳಿದರೆ ನಿನಗೆ ಸುಖವಾಗದು. ಅವನ್ನು ತಿಳಿದುಕೊಳ್ಳುವ ಗೊಡವಿಗೆ ನೀನು ಸರ್ವಥಾ ಹೋಗಬೇಡ. ಅವನ್ನು ಕೇಳಿದರೆ ನಿನ್ನ ಜೀವಿತದ ನಾಶವಾದೀತು! ನೀನು ಎಷ್ಟು ಯತ್ನಮಾಡಿದರೂ ನಾನು ಪ್ರತಿಜ್ಞಾಭಂಗವನ್ನು ಮಾಡಿಕೊಳ್ಳಲಾರೆನು. ನಾನು ನನ್ನ ಕೆಲಸವನ್ನು ಒಮ್ಮೆ ಗೊತ್ತುಮಾಡಿಬಿಟ್ಟಿರುತ್ತೇನೆ. ಅದರಲ್ಲಿ ಹೆಚ್ಚು ಕಡಿಮೆ ಮಾಡುವದು ದೇವರ ಕೈಯಲ್ಲಿಯೂ ಇರುವದಿಲ್ಲ. ನಿನ್ನೆ ನೀನು ಪಲವು ಯವನರನ್ನು ಸಂಹರಿಸಿ ರಣದುಲ್ಲಾಖಾನನನ್ನು ಸೆರೆಹಿಡಿದುಕೊಂಡು ಬಂದಾಗಲೇ ನಾನು ನಿನ್ನನ್ನು ತಿರಸ್ಕರಿಸಬೇಕಾಗಿತ್ತು. ಹಾಗೆ ಯಾಕೆ ಮಾಡಲಿಲ್ಲವೆಂದು ಹೀರಾದೇವಿಯು ನನ್ನನ್ನು ಕೇಳುತ್ತ ಮಧ್ಯರಾತ್ರಿಯಿಂದ ನನ್ನ ಬೆನ್ನ ಬಿಡದಾಗಿದ್ದಾಳೆ! ಬಾಳಾ, ನಿನ್ನ ಪರಾಕ್ರಮವನ್ನು ನೋಡಿ ನನಗೆ ಅತ್ಯಾನಂದವಾಗಿದ್ದರೂ, ಚಂಪತರಾಯನು ಛತ್ರಸಾಲನನ್ನು ಅಪ್ಪಿಕೊಂಡು ಅಭಿನಂದಿಸಿದಂತೆ ನಾನು ನಿನ್ನನ್ನು ಅಪ್ಪಿಕೊಂಡು ಅಭಿನಂದಿಸಲಿಕ್ಕೆ ಸಮರ್ಥನಾಗಲಿಲ್ಲ; ಯಾಕಂದರೆ ಪ್ರತಿಜ್ಞಾಬದ್ಧನಾಗಿ

ರುವ ನನ್ನ ಸ್ವಾತಂತ್ರ್ಯವೆಲ್ಲ ನಷ್ಟವಾಗಿ ಹೋಗಿರುವದು! ಆದ್ದರಿಂದ ನನಗೂ ನಿನಗೂ ಇನ್ನು ಕೂಡಿ ನಡೆಯಲಾರದು! ಇಂದಿನಿಂದ ನೀನು ಈ ಸಾಗರಸಂಸ್ಥಾನದ ಸಂಬಂಧವನ್ನು ಕಡಿದುಕೊಳ್ಳಬೇಕು! ಯಾಕಂದರೆ, ನೀನು ವೈಕೋದ್ಧಾರಕನು, ನಾನು ದೇಶದ್ರೋಹಿಯು! ನೀನು ಸದ್ಗುಣ ನುಂಡಿತನು, ನಾನು ಮಗ್ರುಣದ ಖನಿಯು! ಆದ್ದರಿಂದ ನನ್ನ ಸಹವಾಸವು ನಿನಗೆ ಯೋಗ್ಯನಲ್ಲ. ನನ್ನ ಸಹವಾಸದಿಂದ ನಿನ್ನ ಪೌರುಷಕ್ಕೆ ಮಣ್ಣು ಗೂಡುವದು ಸರಿಯಲ್ಲ. ಇಂದಿನಿಂದ ನೀನು ನನ್ನ ವೈರಿಯು!

ಪಲಪತ (ಮಣಿದಿಂದ)—ಪಿತಾಜೀ, ಹೀಗೆ ಮಾತಾಡಬೇಡಿರಿ. ನಿಮ್ಮನ್ನು ಅಗಲಿ ಇರುವದು ನನ್ನಿಂದಾಗದು; ನೀವು ಹೀಗೆ ನನ್ನ ಕೈಬಿಟ್ಟರೆ ನನಗೆ ಆಧಾರವೇನು?

ಸಭಾಕರಣ—ಪಲಪತ, ಇನ್ನು ನಾನು ಬಹಳ ಮಾತಾಡುವದಿಲ್ಲ; ನನ್ನನ್ನು ಮೋಸವಲ್ಲಿ ತೊಡಗಿಸಬೇಡ. ನಿನಗೆ ಆಧಾರವು ಚಂಪತರಾಯನು. ಬುಂದೇಲಖಂಡದ ಸ್ವಾತಂತ್ರ್ಯವು ಛತ್ರಸಾಲನ, ಹಾಗೂ ನಿನ್ನ ಪ್ರಯತ್ನವನ್ನು ಅವಲಂಬಿಸಿರುತ್ತದೆ. ಚಂಪತರಾಯನು ನನ್ನ ವೈರಿಯಾಗಿದ್ದರೂ ಅತನ ದೊಡ್ಡಗುಣಗಳನ್ನು ನಾನು ಅರಿತಿರುವೆನು. ನೀನು ಅತನ ಆಶ್ರಯಕ್ಕೆ ಹೋಗಿ, ನನ್ನಂತೆ ಅತನನ್ನು ತಿಳಿದು ಅವನ ಆಜ್ಞೆಯನ್ನು ಪಾಲಿಸುತ್ತ ಹೋಗು. ಇಂದಿಗೆ ಸಾಗರದ ಯುವರಾಜನು ಇಲ್ಲದಂತಾದನೆಂದು ನಾನು ತಿಳಿಯುವೆನು; ಸಭಾಕರಣನು ನಿಪುತ್ರಕನೆಂದು ಭಾವಿಸುವೆನು! ಏಳು, ಒಂದುಕ್ಷಣವಾದರೂ ಇಲ್ಲಿ ನಿಲ್ಲಬೇಡ. ನಿನ್ನ ನಿಲ್ಲುವಿಕೆಯು ನನ್ನ ಪ್ರತಿಜ್ಞೆಗೆ ಬಾಧಕವಾಗಿದೆ! ನೀನು ಸಭಾಕರಣನ ಹೊಟ್ಟೆಯಲ್ಲಿ ಹುಟ್ಟಿದ್ದೀ ನಿಜವಿದ್ದರೆ, ತಿರುಗಿ ಮಾತಾಡದೆ ಹೀಗೆಯೇ ಹೊರಟು ನಡೆ! ಇನ್ನು ನಿಂತರೆ ಚಂಪತರಾಯನ ಗುಪ್ತಚಾರನೆಂದು ತಿಳಿದು ನಿನ್ನ ವ್ಯವಸ್ಥೆ ಮಾಡುವೆನು!

ತಂದೆಯು ಈ ನಿರ್ಧಾರದ ಮಾತು ಕೇಳಿ ಪಲಪತರಾಯನು ಕೂಡಲೆ ತಂದೆಯ ಚರಣಕ್ಕೆರಗಿ ಯುವರಾಜಪದವಿಯನ್ನೂ, ಸಾಗರದ ರಾಜ್ಯದ ಆಶೆಯನ್ನೂ ಬಿಟ್ಟು ದೇಶಕಾರ್ಯಕ್ಕಾಗಿ ಹೊರಟು ನಡೆದನು.

ನೆಯ ಪ್ರಕರಣ-ಸೈತಾನ.

ಹಿಂದಿನ ಒಂದನೆಯ ಪ್ರಕರಣದಲ್ಲಿ ಹೇಳಿದಂತೆ ಛತ್ರಸಾಲನೂ, ದಳಪತರಾಯನೂ ತಮ್ಮ ಶೌರ್ಯಪ್ರತಾಪಗಳಿಂದ ದಿಲ್ಲಿಯ ರಣಮಲ್ಲ ಖಾನ ಸರದಾರನನ್ನು ಸೆರೆಹಿಡಿದಕೂಡಲೆ, ಗುಡಿಯ ಸುತ್ತಮುತ್ತಲಿನ ಅರಸರ ರಾಹುಟಿಗಳಲ್ಲಿ ಒಂದಿಲ್ಲೊಂದು ಬಗೆಯ ವಿಲಕ್ಷಣ ಪ್ರಸಂಗಗಳು ಒದಗಿದವೆಂದು ಹೇಳಬಹುದು. ಉತ್ಸವದ ಮರುದಿನ ಬೆಳಗಾದಕೂಡಲೆ ದಳಪತರಾಯನು ತನ್ನ ತಂದೆ ಸಭಾಕರಣನ ಕಠಿಣತರ ಆಜ್ಞೆಯಂತೆ ಯುವರಾಜಪದವಿಯನ್ನೂ, ಸಾಗರರಾಜ್ಯದ ಆಕೆಯನ್ನೂ ಬಿಟ್ಟುಕೊಟ್ಟು ಸ್ವದೇಶೋದ್ಧಾರದ ಕಾರ್ಯಕ್ಕೊಸ್ಕರ ಹೊರಟು ಹೋದದ್ದನ್ನು ವಾಚಕರು ಇದೇ ಈ ಶಿನೆಯ ಪ್ರಕರಣದಲ್ಲಿ ಓದಿರುವರು. ಅದರಂತೆ ಉತ್ಸವಪ್ರಸಂಗವು ಒದಗಿದ ರಾತ್ರಿಯೇ ಒದಗಿದ ಇನ್ನೊಂದು ಮನೋರಂಜಕ ಪ್ರಸಂಗವನ್ನು ಈ ಪ್ರಕರಣದಲ್ಲಿ ಹೇಳಬೇಕಾಗಿರುವದು. ಕಂಚುಕೀರಾಯನ ಪರಿಚಯವು ವಾಚಕರಿಗೆ ಇರುವದಷ್ಟೆ? ವಿಜಯೆಯ ತಂದೆಯೂ, ಧೀರಸಂನ್ಯಾಸನದ ಅರಸನೂ ಆದ ಆ ವೃದ್ಧ ಭೂಪತಿಯು ಮೇನಿಯ ಗುಡಿಯಿಂದ ಹೊರಗೆ ಬರುತ್ತಿರಲು, ಮರಕ್ಕೆ ಮುಸಿಗೆ ಬಿಗಿದಿದ್ದ ರಣಮಲ್ಲಖಾನನು ಅತನ ಕಣ್ಣಿಗೆ ಬಿದ್ದನು. ಕಂಚುಕೀರಾಯನಿಗೆ ಖಾನನ ಸಂಪೂರ್ಣ ಪರಿಚಯ! ಮೇಲೆ ಖಾನನು ಔರಂಗಜೇಬನ ಅತ್ಯಂತ ಪ್ರೀತಿಯ ಸರದಾರನು! ಅಂಥ ಘನವಂತ ಸರದಾರನ ಮುಸಿಗೆ ಬಿಗಿದದ್ದು ಅನರ್ಥಕ್ಕೆ ಕಾರಣವಾಗದೆ ಯೋಗದೆಂದು ಕಂಚುಕೀರಾಯನು ತಿಳಿದನು. ಕಂಚುಕೀರಾಯನು ಬಹು ಪುಣ್ಯಸ್ವಭಾವದವನು. ಬಾದಶಹನ ಕ್ಷೋಭವು ತನ್ನಮೇಲೆ ಎಲ್ಲಿ ಆಗುವದೋ ಎಂದು ಅತನು ಮನಸ್ಸಿನಲ್ಲಿ ಬೆದರಿದನು. ಹಾಗೆ ಅತನು ಬೆದರುವದು ಸ್ವಾಭಾವಿಕವೂ ಆಗಿತ್ತು. ಔರಂಗಜೇಬನ ಅಬ್ಬರಕ್ಕೆ ಇಡಿಯ ಹಿಂದುಸ್ಥಾನವೇ ತತ್ತರಿಸುತ್ತಿರುವಾಗ ಪಾಪ! ಕಂಚುಕೀರಾಯನು ಅಂಜಿದ್ದರಲ್ಲಿ ಆಶ್ಚರ್ಯವೇನು? ಬಾದಶಹನ ಈ ದ್ರೋಹದ ಕೆಲಸದಲ್ಲಿ ತನ್ನ ಅಂಗವು ಸರ್ವಥಾ ಇರುವದಿಲ್ಲವೆಂಬದನ್ನು ಖಾನನಿಗೆ ಹೇಗೆತಿಳಿಸಬೇಕೆಂದು ವಿಚಾರಿಸುತ್ತಲೇ ಆ ವೃದ್ಧ ರಾಜನು ತನ್ನ ರಾಹುಟಿಯನ್ನು ಹೊಕ್ಕನು.

ಬುಂದೇಲಖಂಡದ ಜನರು ಅತ್ಯಂತ ಸ್ವಾತಂತ್ರ್ಯ ಪ್ರಿಯರೆಂಬ ಮಾತನ್ನು ಹಿಂದೆ ಹೇಳಿಯದೆ; ಅದರಂತೆ ಅವರು ಮಹಾ ಶೂರರೆಂಬ ಮಾತೂ ಗೊತ್ತಾಗಿರುವದು; ಆದರೆ ಸೇಲೀಮನ ಕಾಲದಿಂದ ದಿಲ್ಲಿಯ ಬಾದಶಹರು ಸಾರ್ವಭೌಮಾಧಿಕಾರಕ್ಕೆ ಒಳಗಾಗುತ್ತ ಬಂದಂತೆ ಅವರ ಸ್ವಾತಂತ್ರ್ಯಪ್ರೀತಿಯೂ, ಶೌರ್ಯವೂ ಸ್ವಾಭಾವಿಕವಾಗಿಯೇ ಕಡಿಮೆಯಾಗುತ್ತ ಬಂದಿದ್ದವು; ಆದರೂ ಚಂಪತರಾಯನಂತಹ ಸ್ವಾತಂತ್ರ್ಯಪ್ರಿಯ ಕ್ಷತ್ರಿಯ ರಾಜರು ಇನ್ನೂ ಬುಂದೇಲ ಖಂಡದಲ್ಲಿ ಹುಟ್ಟುತ್ತಲೇ ಇದ್ದರು. ಯಾವ ದೇಶಕ್ಕಾದರೂ ಉನ್ನತಿ-ಅವನತಿಗಳು ಬಿಟ್ಟವಲ್ಲ. ಇದನ್ನರಿತೇ ವಿವೇಕಿಗಳು ನಡೆದುಕೊಳ್ಳಬೇಕಾಗಿದೆ. ಚಂಪತರಾಯನು ಇಂತಹ ವಿವೇಕಿಯೇ ಆಗಿದ್ದನು. ಆತನು ಔರಂಗಜೇಬನ ಪಕ್ಷವನ್ನುವಹಿಸಿ, ಆತನ ಅಣ್ಣನಾದ ದಾರಾನನ್ನು ಘನ ಘೋರವಾದ ಸಾಮಗಡದ ಯುದ್ಧದಲ್ಲಿ ಸೋಲಿಸಿ ಔರಂಗಜೇಬನಿಗೆ ದಿಲ್ಲಿಯಸಿಂಹಾಸನವನ್ನು ಒದಗಿಸಿಕೊಟ್ಟಿದ್ದನು. ಆದ್ದರಿಂದ, ಔರಂಗಜೇಬನು ಚಂಪತರಾಯನನ್ನು ಮಿತ್ರನೆಂದು ಭಾವಿಸಿ, ಆತನ ಶೌರ್ಯಾದಿ ಸದ್ಗುಣಗಳಿಗಾಗಿ ಅಂತರಂಗದಲ್ಲಾದರೂ ಅಂಜುತ್ತಿದ್ದನು; ಆದರೆ ಔರಂಗಜೇಬನು ಮುಂದೆ ಸಿಂಹಾಸನದಲ್ಲಿ ಸ್ಥಿರನಾಗಿ ಮಹಾ ಬಲಿಷ್ಠನಾಗಲು, ಚಂಪತರಾಯನನ್ನು ದುರ್ಲಕ್ಷಿಸಹತ್ತಿದ್ದನು; ಆದರೂ ಚಂಪತರಾಯನು ತನ್ನ ಅಂತಸ್ತೇಜಸ್ಸನ್ನು ಕುಗ್ಗಗೊಟ್ಟಿದ್ದಿಲ್ಲ. ತನ್ನ ಪ್ರಜೆಗಳ ಕಲ್ಯಾಣದಲ್ಲಿ ಅತ್ಯಂತ ತತ್ಪರನಾಗಿದ್ದನು. ಮುಸಲ್ಮಾನರ ವರ್ಚಸ್ಸು ಆತನ ರಾಜ್ಯದಲ್ಲಿ ಇದ್ದಿಲ್ಲ. ದೊಡ್ಡದೊಡ್ಡ ಅಧಿಕಾರಗಳೆಲ್ಲ ಬುಂದೇಲಿಗಳಿಗೇ. ಪ್ರಜೆಗಳಿಗೆ ಕಂದಾಯ-ಕರಗಳ ಬಾಧೆ ಕಡಿಮೆ. ಮುಸಲ್ಮಾನ ಪ್ರಜೆಗಳಿಗೂ ಆತನು ಪ್ರಿಯನಾಗಿದ್ದನು. ಒಟ್ಟಿಗೆ, ಚಂಪತರಾಯನ ಪ್ರಜೆಗಳು ಅತ್ಯಂತ ಸ್ವಾಮಿನಿಷ್ಠರಾಗಿದ್ದರು! ಪ್ರಜೆಗಳ ರಂಜನದ ಕಡೆಗೆ ಚಂಪತರಾಯನ ಲಕ್ಷ ಬಹಳ; ಆತನು ಅತ್ಯಂತ ಧರ್ಮನಿಷ್ಠನು. ಗೋ ಬ್ರಾಹ್ಮಣ ಪ್ರತಿಪಾಲನದಲ್ಲಿಯೂ, ದೇವಸ್ಥಾನಗಳ ವ್ಯವಸ್ಥೆಯಲ್ಲಿಯೂ ಆತನ ಆಸಕ್ತಿ ಹೆಚ್ಚು. ಔರಂಗಜೇಬನ ಧರ್ಮದ ದುರಭಿಮಾನಕ್ಕಾಗಿಯೂ, ಹಿಂದೂ ಪ್ರಜೆಗಳಿಗೆ ಆತನು ಕೊಡುತ್ತಿರುವ ತಾಪಕ್ಕಾಗಿಯೂ, ಆತನು ಹಿಂದೂ ಜನರ ಮೇಲೆ ಕೂಡಿಸಿದ್ದ ಜಿಜಿಯಾ ಎಂಬ ತಲೆಪಟ್ಟಿಗಾ

ಗಿಯೂ ಚಂಪತರಾಯನು ಸಂತಾಪಗೊಳ್ಳುವನು; ಆದರೆ ಬಲಿಷ್ಠ ಬಾದಶಹನ ಮುಂದೆ ಆಟ ನಡೆಯದ್ದರಿಂದ ಆತನು ಸುಮ್ಮನಿರಬೇಕಾಗಿತ್ತು; ಆದರೆ ಔರಂಗಜೇಬನ ದುಷ್ಟತನದ, ಹಾಗು ಕೃತಘ್ನತೆಯ ಮಿತಿಯು ಮೀರಿ, ಆತನು ಬುಂದೇಲಿಗಳ ಅತ್ಯಂತ ಪವಿತ್ರಸ್ಥಾನವಾದ ವಿಂಧ್ಯವಾಸಿನಿಯ ದೇವಸ್ಥಾನದ ನಾಶಮಾಡಲು ರಣದುಲ್ಲಾಖಾನನನ್ನು ಕಳಿಸಿದ್ದಕ್ಕಾಗಿ ಆ ಧಾರ್ಮಿಕತೇಜದ ಚಂಪತರಾಯನು ಸಂತಾಪಗೊಂಡನು. ಹಿಂದುಗಳ ದೇವಾಲಯಗಳ ನಾಶದ ಗೊಡವಿಗೆ ಹೋಗುವದಿಲ್ಲೆಂದು ಬಾದಶಹನು ಒಪ್ಪಿಕೊಳ್ಳುವವರೆಗೆ, ಖಾನನನ್ನು ಬಂಧಮುಕ್ತ ಮಾಡಲಿಕ್ಕಿಲ್ಲವೆಂದು ನಿಶ್ಚಯಿಸಿ ಆತನನ್ನು ಬಲವಾದ ಕಾವಲಿನಲ್ಲಿ ಇಡಿಸಿದನು.

ಆದರೆ ಇಂತಹ ತೇಜಸ್ವಿತೆಯು ಕಂಚುಕಿರಾಯನಂತಹ ಅಂಬುಜಮುಕ ಅರಸರಿಗೆ ಸೇರಲಿಲ್ಲ. ಚಂಪತರಾಯನ ಈ ಅರಿಷ್ಟವು ತಮಗೆಲ್ಲಿ ಬಡಿದುಕೊಳ್ಳುವದೋ ಎಂದು ಅವರು ಅಂಜಿದರು. ಚಂಪತರಾಯನಲ್ಲಿ ಹಲವು ಸದ್ಗುಣಗಳಿದ್ದಂತೆ ಒಂದೆರಡು ದುರ್ಗುಣಗಳೂ ಇದ್ದವು. ಆತನು ಶೀಘ್ರಕೋಪಿಯು. ಮಿತಿಮೀರಿದ ಸ್ವಾಭಿಮಾನಿಯು. ಬುಂದೇಲ ಖಂಡದ ಸಂಸ್ಥಾನಿಕರು ಬಾದಶಹನಿಗೆ ಹೀಗೆ ಅನುಕೂಲರಾಗಿ ನಡೆಯುವದನ್ನು ನೋಡಿ ಸಹಿಸದೆ ಆತನು ಅವರನ್ನು ದ್ವೇಷಿಸುತ್ತಿದ್ದನು; ಆದ್ದರಿಂದ ಬುಂದೇಲ ಖಂಡದ ಬಹುತರ ಯಾವತ್ತು ರಾಜರು ಚಂಪತರಾಯನನ್ನು ದ್ವೇಷಿಸುತ್ತ ಆತನ ಕೇಡು ಬಗೆಯಲಿಕ್ಕೆ ಹೊಂಚು ಹಾಕಿದ್ದರು. ಚಂಪತರಾಯನಮಗ ಛತ್ರಸಾಲನು ರಣದುಲ್ಲಾಖಾನನನ್ನು ಸೆರೆಹಿಡಿದು ತಂದದ್ದೂ, ಚಂಪತರಾಯನು ಹುಡುಗರ ಕೆಲಸವೆಂದು ಖಾನನನ್ನು ಬಂಧಮುಕ್ತಮಾಡಿ ಬಿಡದೆ ಆತನನ್ನು ಸೆರೆಯಲ್ಲಿಟ್ಟುಬಿಟ್ಟದ್ದೂ ಆ ಉಳಿದ ಅರಸರಿಗೆ ಒಂದು ನೆವ ಸಿಕ್ಕಂತಾಯಿತು. ಈ ನೆವದಿಂದ ಅವರು ಚಂಪತರಾಯನ ನಾಶದ ಸಲುವಾಗಿ ತಮ್ಮೊಳಗೆ ಆಲೋಚಿಸತೊಡಗಿದರು. ಈ ಆಲೋಚನೆಯಲ್ಲಿ ಚಂಪತರಾಯನ ತಮ್ಮನ ಹೆಂಡತಿಯಾದ ಹೀರಾದೇವಿಯು ಮುಖ್ಯಳಾಗಿದ್ದು, ಕಂಚುಕಿರಾಯನೇ ಮೊದಲಾದ ಅರಸರು ಆಕೆಯ ಸಹಾಯಕರಾಗಿದ್ದರು. ಹೀರಾದೇವಿಯು ಅದೇದಿನ ರಾತ್ರಿ ಕಂಚುಕಿರಾಯನನ್ನು ಕರೆಸಿಕೊಂಡು ಆಲೋಚಿಸತೊಡಗಿದಳು. ಮಧ್ಯರಾತ್ರಿಯವರೆಗೆ ಅವರ

ಆಲೋಚನೆಯು ನಡೆಯಿತು. ಕಡೆಗೆ ಕಂಚುಕಿರಾಯನು ಸ್ತ್ರೀವೇಷದಿಂದ ಚಂಪತರಾಯನ ಪಾಳಯವನ್ನು ಪ್ರವೇಶಿಸಿ, ರಣದುಲ್ಲಾಖಾನನನ್ನು ಕಂಡು ಆತನನ್ನು ಸಮಾಧಾನಪಡಿಸಿ, ಎಲ್ಲಕ್ಕೂ ಚಂಪತರಾಯನ ಸೊಕ್ಕೇ ಕಾರಣವಲ್ಲದೆ, ಅದರಲ್ಲಿ ನಮ್ಮ ಸಂಬಂಧವಿಲ್ಲೆಂದು ಖಾನನ ನಂಬಿಗೆ ಮಾಡಿಕೊಡಬೇಕೆಂದು ಗೊತ್ತಾಯಿತು. ಆಮೇಲೆ ಹೀರಾದೇವಿಯು ತನ್ನ ರಾಹುಟಿಗೆ ಹೋಗದೆ, ಆ ಆಲೋಚನೆಯಲ್ಲಿ ಗೊತ್ತಾದಂತೆ ಸಭಾಕರಣ ಬುಂದೇಲನ ರಾಹುಟಿಯ ಕಡೆಗೆ ನಡೆದಳು. ಅದರ ಫಲವೇ ದಳಪತರಾಯನ ರಾಜ್ಯತ್ಯಾಗವೆಂಬದನ್ನು ವಾಚಕರು ಬಲ್ಲರು.

ಇತ್ತ ಕಂಚುಕಿರಾಯನು ಆಲೋಚನೆಯಲ್ಲಿ ಗೊತ್ತಾದಂತೆ ಸ್ತ್ರೀವೇಷವನ್ನು ಧರಿಸಿದನು. ಚಂಪತರಾಯನು ರಣದುಲ್ಲಾಖಾನನನ್ನು ಸರೆಯಲ್ಲಿಟ್ಟಿದ್ದನಷ್ಟೆ? ಆ ರಾಹುಟಿಯನ್ನು ಪ್ರವೇಶಿಸಲಿಕ್ಕೆ ಸ್ತ್ರೀ ವೇಷದ ಹೊರತು ಬೇರೆ ಗತಿಯಿದ್ದಿಲ್ಲ! ಕಂಚುಕಿರಾಯನು ಅತ್ಯಂತ ವೃದ್ಧನು; ಮೇಲೆ ಹಲ್ಲುಗಳೆಲ್ಲ ಬಿದ್ದು ಗಲ್ಲಗಳು ಪಚ್ಚಬಿದ್ದದ್ದರಿಂದ ಆತನ ಕಲ್ಲಿಯ ಮೀಸೆಗಳಿಂದ ಆತನ ಮುಖವು ತೀರ ಅಸಡ್ಡಾಳಾಗಿ ಕಾಣುತ್ತಿತ್ತು. ಆತನ ಮೈಕಟ್ಟು ಬಡಕ, ನಿಲುವಿಕೆ ಎತ್ತರ, ಅಂದಬಳಿಕ ಕೇಳುವದೇನು? ಆತನ ಸ್ತ್ರೀವೇಷವು ನೋಡುವವರಿಗೆ ಪಿಶಾಚ ಸ್ವರೂಪವಾಗಿ ತೋರಿ ಭಯವನ್ನುಂಟುಮಾಡುತ್ತಿತ್ತು. ಕಂಚುಕಿರಾಯನು ಸ್ತ್ರೀಯರ ಆಭರಣಗಳನ್ನೆಲ್ಲ ಹೇರಿಕೊಂಡಿದ್ದನು. ತನ್ನ ಬೆಲೆಯುಳ್ಳ ಸೀರೆ ಕುಪ್ಪಸಗಳಿಂದ ತನ್ನ ಸೌಂದರ್ಯಕ್ಕೆ ಕಳೆಯೇರಿರುವದೆಂದು ತಿಳಿದಿದ್ದನು. ಆತನು ನಡೆಯಹತ್ತಲು, ಕಾಲೊಳಗಿನ ನೂಪುರಗಳ ಮುಂಬುಲ ಧ್ವನಿಯು ಕಿವಿಗಳಿಗೆ ಇಂಪಾಗಿ ಕೇಳುವದು. ಆತನ ಬಡಕ ಮುಂಗೈಯೊಳಗಿನ ಬಳೆಗಳು ಬಡಿದಾಡಿ ಈ ವ್ಯಕ್ತಿಯು ಹೆಂಗಸೆಂದು ಸಾರುತ್ತಿದ್ದವು. ಕಂಚುಕಿರಾಯನು ಕನ್ನಡಿಯಲ್ಲಿ ತನ್ನ ರೂಪವನ್ನು ನೋಡಿ—"ಎಲ್ಲ ನೆಟ್ಟಗಾಗಿದೆ; ಆದರೆ ಈ ಕಲ್ಲಿಯ ಮೀಸೆಗಳಷ್ಟು ಅಸಡ್ಡಾಳಾಗಿ ಕಾಣುವವು. ನಮ್ಮಂಥವರಿಗೆ ಈ ಮೀಸೆಗಳು ಕೆಲಸದವಲ್ಲ. ಬಹುದಿವಸ ಬಾದಶಹನ ಜನಾನಖಾನೆಯಲ್ಲಿ ವ್ಯವಹರಿಸಿರುವ ನನಗೆ ಈ ಮಾತು ತಿಳಿಯಬೇಕಾಗಿತ್ತು., ಆಗಲಿ, ಇಂಥ ಮಹತ್ವದ ಪ್ರಸಂಗದಲ್ಲಿ ಅಡ್ಡ ಬರುವ ಈ ಕೆಟ್ಟ ಮೀಸೆಗಳನ್ನು ನಾಳೆ ಬೆಳ

ಗಾದ ಕೂಡಲೆ ಬೋಳಿಸಿಬಿಡಬೇಕು. ಈಗ ವೈತುಂಬ ಬುರಕೆ ಹಾಕಿ ಕೊಂಡು ಗೋಷೆಯ ಬೀಬಿಯಾಗಿ ಬಿಟ್ಟರೆ, ಎಲ್ಲ ಹುಳುಕೂ ಮುಚ್ಚಿ ಹೋಗುವದು!

ಈ ಮೇರೆಗೆ ಆಲೋಚಿಸಿ ಕಂಚುಕಿರಾಯನು ಕಣ್ಣುಗಳ ಮಟ್ಟಿಗೆ ತೂತುಬಿಟ್ಟು ಮೈತುಂಬ ಬುರುಕೆ ಹಾಕಿಕೊಂಡು ರಣದುಲ್ಲಾಖಾನನನ್ನು ಸೆರೆಯಲ್ಲಿಟ್ಟಿರುವ ರಾಹುಟಿಯ ಕಡೆಗೆ ಸಾಗಿದನು. ಆ ಹೆಣ್ಣುಗರಳಿನ ಅರಸನು ವೇಷಕ್ಕೆ ಒಪ್ಪುವಂತೆ ಹೆಂಗಸರ ಹಾಗೆ ನೂಪುರದ ಧ್ವನಿ ಮಾಡುತ್ತ ಒನಪಿನಿಂದ ನಡೆಯತೊಡಗಲು, ಅದನ್ನು ನೋಡಿ ಆತನ ಸೇವಕನಿಗೆ ಹುಚ್ಚು ನಗೆ ಬಂದಿತು! ಅವರಿಬ್ಬರು ಚಂಪತರಾಯನ ಪಾಳಯದ ಸನಿಯಕ್ಕೆ ಬರಲು, ಕಂಚುಕಿರಾಯನು ತನ್ನ ಸೇವಕನಿಗೆ—"ಇನ್ನು ನೀನು ಹೋಗು, ನಾನು ಯುಕ್ತಿಯಿಂದ ಒಳಗೆ ಹೋಗುವೆನು" ಎಂದು ಹೇಳಿದನು. ಸೇವಕನು ಹೋಗಿ ಒತ್ತಟ್ಟಿಗೆ ಮರೆಗೆ ನಿಂತು ಮೋಜು ನೋಡ ಹತ್ತಿದನು. ಚಿಕ್ಕಂದಿನಿಂದ ದಿಲ್ಲಿಯ ಬಾದಶಹರ ಜನಾನಖಾನೆಯಲ್ಲಿ ವ್ಯವಹರಿಸಿದ್ದರಿಂದ ಕಂಚುಕಿರಾಯನಿಗೆ ಸ್ತ್ರೀಯರ ಹಾವ ಭಾವಗಳು, ಅವರ ಶೃಂಗಾರದ ರೀತಿಗಳು ಚನ್ನಾಗಿ ಗೊತ್ತಾಗಿದ್ದವು. ಸೇಲೀಮನ ಕಾಲದಲ್ಲಿ ಆತನು ಜನಾನಖಾನೆಯ ಕಂಚುಕಿಕೆಲಸವನ್ನು ಕೈಕೊಂಡು, ಶಹಾಜಹಾನನ ಕಾಲದ ವರೆಗೆ ಅಖಂಡ ಮೂವತ್ತು ವರ್ಷ ಬಾದಶಾಹಿ ರಂಗಮಹಾಲಿನಲ್ಲಿ ಏಕನಿಷ್ಠೆಯಿಂದ ಆತನು ಸೇವೆಮಾಡಿದ್ದನು. ಕಡೆಕಡೆಗೆ ಆತನು ಶಹಾಜಹಾನ ಬಾದಶಹನ ದರ್ಬಾರದ ಕಂಚುಕಿಯಾಗಲು, ಬಾದಶಹನು ಆತನನ್ನು ವಿನೋದದಿಂದ "ಕಂಚುಕಿರಾಯ" ಎಂದು ಕರೆಯತೊಡಗಿದ್ದನು. ಮುಂದೆ ಕಂಚುಕಿರಾಯನು ಧಾರೀರದ ಅರಸನಾಗಲು, ತನ್ನ ಮೊದಲಿನ ಹೆಸರಿನಿಂದ ಕರೆಸಿಕೊಳ್ಳದೆ ಕಂಚುಕಿರಾಯನೆಂಬ ಹೆಸರಿನಿಂದಲೇ ಕರೆಸಿಕೊಳ್ಳಹತ್ತಿದನು!

ಸ್ತ್ರೀ ವೇಷಧಾರಿಯಾದ ಕಂಚುಕಿರಾಯನು ಚಂಪತರಾಯನ ಛಾವಣಿಯ ಬಾಗಿಲಿಗೆ ಹೋಗಲು, ಒಬ್ಬ ಕಾವಲುಗಾರನು— "ಯಾರವರು? ಇಷ್ಟು ರಾತ್ರಿಯಲ್ಲಿ ಇಲ್ಲಿ ಏಕೆ?" ಎಂದು ಗದ್ದರಿಸಿದನು. ಆಗ ಕಂಚುಕಿರಾಯನ ಎದೆಯು ನಡುಗಿತು. ಆದರೂ ಧೈರ್ಯತಾಳಿ ಆತನು ಸ್ತ್ರೀಯ

ರಂತೆ ದನಿ ತೆಗೆದು—"ಯಾಕೆ ನಾನು" ಎಂದು ಹೇಳಿದನು. ಅದಕ್ಕೆ ಆ ಕಾವಲುಗಾರರು—"ಇಷ್ಟು ರಾತ್ರಿಯಲ್ಲಿ ಹೆಂಗಸರ ಕೆಲಸವೇನು? ಇದು ಮಹೋಬದ ಚಂಪತರಾಯರ ಭಾವಣಿಯೆಂಬದು ಗೊತ್ತಿಲ್ಲವೊ? ಆಗಲಿ, ನಮ್ಮ ಪ್ರಭುಗಳು ಪರಮ ಕೃಪಾಳುಗಳು. ನಿಮ್ಮಂತಹ ಹೆಂಗಸರಿಗೆ ಇಲ್ಲಿ ಯಾವ ತರದ ಭಯವೂ ಉಂಟಾಗದು; ಆದರೆ ನಿನಗೆ ಏನಾಗಬೇಕು ಹೇಳಿರಿ. ನಿಮ್ಮ ಗೋಷ್ಠಿಯನ್ನು ನೋಡಿದರೆ ನೀವು ದೊಡ್ಡ ಮನೆತನದವರಂತೆ ಕಾಣಿಸುತ್ತೀರಿ."

ಕಂಚುಕಿರಾಯ—(ಆನಂದದಿಂದ ಉಬ್ಬಿ) ನಾನು ರಣದುಲ್ಲಾಖಾನರನ್ನು ಕಾಣಬೇಕಾಗಿದೆ. ನಾನು ಅವರ ಪತ್ನಿಗಡೆಯವಳು; ಚಂಪತರಾಯರ ಭಾವಣಿಯಲ್ಲಿ ಹೆಣ್ಣುಮಕ್ಕಳಿಗೆ ಯಾವ ತೊಂದರೆಯೂ ಒದಗದೆಂಬ ಧೈರ್ಯದಿಂದ ಖಾನಸಾಹೇಬರನ್ನು ಕಾಣಲಿಕ್ಕೆ ಬಂದಿದ್ದೇನೆ.

ಕಂಚುಕಿರಾಯನ ಈ ಮಾತುಗಳನ್ನು ಕೇಳಿ ಕಾವಲುಗಾರರು ತಮ್ಮ ತಮ್ಮೊಳಗೆ ಆಲೋಚಿಸಿದರು. ಬೀಬಿ ಸಾಹೇಬರು ತೀರ ಮುದುಕರಿರುವದರಿಂದ ಯಾವ ಬಗೆಯ ಬಾಧೆಯೂ ಅವರಿಂದ ತಟ್ಟದೆಂದು ತಿಳಿದು ಅವರನ್ನು ಒಳಗೆ ಬಿಡಬೇಕೆಂದು ನಿಶ್ಚಯಿಸಿ, ಕಂಚುಕಿರಾಯನನ್ನು ಒಳಗೆ ಹೋಗಗೊಟ್ಟರು. ಆಗ ಕಂಚುಕಿರಾಯನ ಆನಂದಕ್ಕೆ ಹೊಟ್ಟೆಯಲ್ಲಿ ಹಿಡಿಸಲೊಲ್ಲದು. ಇನ್ನು ತಾನು ರಣದುಲ್ಲಾಖಾನರನ್ನು ಕಂಡು ಅವರ ಕೈಕಾಲು ಬಿದ್ದು—"ತನ್ನಮ್ಮನ್ನು ಸೆರೆಯಲ್ಲಿಟ್ಟವರಲ್ಲಿ ನನ್ನವರಾಗಲಿ, ಹೀರಾದೇವಿಯದಾಗಲಿ ಅಂಗನಿಲ್ಲಿಂತಲೂ, ಈ ಎಲ್ಲ ಅನರ್ಥಕ್ಕೆ ಚಂಪತರಾಯನೂ, ಅತನ ಮಗ ಛತ್ರಸಾಲನೂ ಕಾರಣರೆಂ"ತಲೂ ಹೇಳಿ ಕ್ಷಮೆ ಬೇಡಿಕೊಂಡು ಗಂಡಾಂತರದಿಂದ ಪಾರಾಗಬೇಕೆಂದು ನಿಶ್ಚಯಿಸಿ, ಅತನು ರಣದುಲ್ಲಾಖಾನನ ರಾಹುಟಿಯನ್ನು ಹೊಕ್ಕನು. ಆಗ ಖಾನನು ಹಾಸಿಗೆಯಮೇಲೆ ಮಲಗಿದ್ದನು. ಅದೇ ಅತನಿಗೆ ನಿದ್ದೆಯು ಹತ್ತಿತ್ತು. ಸ್ತ್ರೀ ವೇಷಧಾರಿ ಕಂಚುಕಿರಾಯನು ಅತನ ಬಳಿಯಲ್ಲಿ ಹೋಗಿ ನಿಂತುಕೊಂಡನು; ಆದರೆ ಖಾನಸಾಹೇಬರನ್ನು ಎಬ್ಬಿಸುವ ಧೈರ್ಯವು ಅತನಿಗೆ ಹೇಗಾಗಬೇಕು? ಅತನು ತನ್ನ ನೂಪುರಗಳ ಧ್ವನಿಮಾಡಿದನು; ಕಂಕಣಗಳ ಸಪ್ಪಳ ಕೇಳಿಸಿದನು; ಆದರೆ ಅದರಿಂದ ಖಾನನಿಗೆ ಎಚ್ಚರವಾಗಲಿಲ್ಲ. ಇನ್ನೇನು

ಮಾಡಬೇಕೆಂದು ಯೋಚಿಸಿ ಕಂಚುಕಿರಾಯನು ರಣಮಲ್ಲಾಖಾನನ ಕಾಲ ದೆಸೆಯಲ್ಲಿ ಕುಳಿತು ಕಾಲ ಒತ್ತಹತ್ತಿದನು. ತನ್ನ ಕಾಲಮೇಲಿಂದ ಯಾವಪೋ ಹುರಬರಕ ವೈಯ ಪ್ರಾಣಿಯು ಹರಿದು ಹೋಗುತ್ತದೆಂದು ತಿಳಿದು ರಣಮಲ್ಲಾಖಾನನು ನಿದ್ದೆಗಣ್ಣಿನಲ್ಲಿ ಝಾಡಿಸಿ ಒದ್ದನು. ಆ ಕಸು ವಿನ ಒದಿಕೆಯು ವೃದ್ಧ ಕಂಚುಕಿರಾಯನ ಎದೆಗೆ ಬೀಳಲು, ಆತನು ಕೆಟ್ಟ ದನಿಯಿಂದ ಕೂಗಿ ನೆಲಕ್ಕೆ ಅಂಗಾತ ಕಡಕೊಂಡು ಬಿದ್ದನು! ಮೊದಲು ಅರ್ಧಮರ್ಧ ಎಚ್ಚತ್ತಿದ್ದ ರಣಮಲ್ಲಾಖಾನನು ಕಂಚುಕಿರಾಯನ ಕೆಟ್ಟ ಕೂಗಿನಿಂದ ಪೂರಾ ಎಚ್ಚತ್ತು ಹಾಸಿಗೆಯಮೇಲೆ ಎದ್ದು ಕುಳಿತುಕೊಂಡನು.

ರಾಹುಟಿಯಲ್ಲಿ ದೀಪದ ಪ್ರಕಾಶವು ತೀರ ಮಂದವಾಗಿ ಇದ್ದಿತು. ಕಂಚುಕಿರಾಯನ ಹೃದಯ ದ್ರಾವಕವಾದ ಆ ಕೆಟ್ಟ ಕೂಗನ್ನು ಕೇಳಿ ರಣ ಮಲ್ಲಾಖಾನನಿಗೆ ಆಶ್ಚರ್ಯವಾಯಿತು. ಬರಬರುತ್ತ ಆತನ ಆಶ್ಚರ್ಯವು ಭೀತಿಯ ಸ್ವರೂಪವನ್ನು ತಾಳಿಂದಹತ್ತಿತು. ಮಧ್ಯರಾತ್ರಿಯ ಪ್ರಸಂಗವು, ಅರಣ್ಯದ ವಾಸ, ಭೂತ ಪಿಶಾಚಗಳ ಸಂಚಾರದ ಕಾಲ, ಮೇಲೆ ನಾಲ್ಕೂ ಕಡೆಯಲ್ಲಿ ಸ್ತಬ್ಧತೆ! ಇವೆಲ್ಲ ಸಂಗತಿಗಳು ಒಮ್ಮೆಲೆ ರಣಮಲ್ಲಾಖಾನನ ಮನಸ್ಸಿನಲ್ಲಿ ಬಂದುಬಿಟ್ಟವು. ಆತನು ಹಲವು ಯುದ್ಧ ಪ್ರಸಂಗಗಳಲ್ಲಿ ತನ್ನ ಖಡ್ಗದ ಪ್ರತಾಪನನ್ನು ತೋರಿಸಿದ್ದನು; ಆದರೆ ಈಗ ತನ್ನ ಆ ಖಡ್ಗದ ಉಪಯೋಗವು ಆದೀತೆಂದು ಆತನಿಗೆ ತೋರಲೊಲ್ಲದು. ಆತನು ತರುಣನಿದ್ದನು, ಧೈರ್ಯಶಾಲಿಯಿದ್ದನು, ಬಲಿಷ್ಠನಿದ್ದನು; ಆದರೆ ಅವೆಲ್ಲ, ಕಣ್ಣಿಗೆ ಕಾಣುವ ಮೂರ್ತ ವಸ್ತುಗಳ ಮೇಲೆ, ಅಥವಾ ಪ್ರಾಣಿಗಳ ಮೇಲೆ ನಡೆಯಬಹುದಲ್ಲದೆ, ಸೈತಾನನ ಅದೃಶ್ಯಾಕೃತಿಗಳ ಮೇಲೆ ಅವು ಹೇಗೆ ನಡೆಯುವವೆಂದು ಆತನು ಅಂಜಿ ನಾಲ್ಕೂ ಕಡೆಗೆ ನೋಡಹತ್ತಿದನು. ರಾಹುಟಿಯ ಹೊರಗೆ ಕಾವಲುಗಾರರುಕಾಯುತ್ತಿರುವರೆಂಬದು ಆತನಿಗೆ ಗೊತ್ತಿತ್ತು. ಆ ಕೆಟ್ಟ ಕೂಗು ಅವರಿಗೆ ಕೇಳಿಸಿತೇನೆಂದು ಕೇಳುವವಕ್ಕಾಗಿ ಹೊರಗೆ ಹೋಗಬೇಕೆಂದು ಹೊರಟನು; ಆದರೆ ಕಾಲಿಗೆ ಏನೋ ಹತ್ತಿದ ಹಾಗಾ ಗಲು, ಆತನು ಕೆಳಗೆ ನೋಡಿ ಭಯದಿಂದ— "ಸೈತಾನ! ಸೈತಾನ!" ಎಂದು ಅಂಜಿ ಕೆಟ್ಟ ದನಿಯಿಂದ ಕೂಗುತ್ತ ನಾಲ್ಕು ಹೆಜ್ಜೆ ಹಿಂದಕ್ಕೆ ಸರಿದು ನಿಂತನು.

ಇತ್ತ ಕಂಚುಕಿರಾಯನು ಅಷ್ಟರಲ್ಲಿ ಎಚ್ಚತ್ತು "ತಾನು ಹೀಗೆ ಅಸ್ತವ್ಯಸ್ತವಾಗಿ ಏನು ಬಿದ್ದೆನಲ್ಲ," ಎಂದು ಪಶ್ಚಾತ್ತಾಪಪಡುತ್ತ ಮೇಲಕ್ಕೆ ನೋಡಲು, ತನ್ನ ಆರಾಧ್ಯ ದೈವತವು ಅಂಜಿ ಮೋರೆಯಮೇಲೆ ಚಿವುಟಿದರೆ ರಕ್ತವಿಲ್ಲದ್ದಾಗಿ ನಿಂತುಕೊಂಡಿತ್ತು. ಆಗ ಕಂಚುಕಿರಾಯನು ಗಡಬಡಿಸಿ ಎದ್ದುನಿಂತು ಕೈಜೋಡಿಸಿ—ಸರಕಾರ, ಏನಾದರೂ ತಮ್ಮ ಸೇವೆಯು ನನಗೆ ಲಭಿಸಬೇಕೆಂದು ಇಲ್ಲಿಗೆ ಬಂದಿರುವೆನು.

ರಣದುಲ್ಲಾಖಾನನು ಆ ವಿಲಕ್ಷಣರೂಪವನ್ನು ನೋಡಿ ಮತ್ತಿಷ್ಟು ಅಂಜಿದನು. ಆ ಅಸಡ್ಡಾಳಾದ ಸ್ತ್ರೀವೇಷ, ಆ ಕೆಟ್ಟ ಕಲ್ಲಿಯ ಮೀಸಿ, ಅಸ್ಥಿಪಂಜರದಂತೆ ಇದ್ದ ಆ ಬಡಕ ದೇಹ ಇವನ್ನೆಲ್ಲ ಏಕಾಂತದ ಮಧ್ಯರಾತ್ರಿಯಲ್ಲಿ ಅಕಸ್ಮಾತ್ ನೋಡಿ ಯಾರು ಅಂಜಲಿಕ್ಕಿಲ್ಲ? ರಣದುಲ್ಲಾಖಾನನು ಕಂಚುಕಿರಾಯನ ಆ ವಿನಯದ ಮಾತುಗಳನ್ನು ಕೇಳಿ ಮತ್ತಿಷ್ಟು ಅಂಜಿ—"ಕ್ಷಮಿಸು! ಸೈತಾನ! ನನ್ನನ್ನು ಕ್ಷಮಿಸು! ನನ್ನಿಂದಾಗಲಿ, ನನ್ನ ವಂಶದವರಿಂದಾಗಲಿ ಏನಾದರೂ ಅಪರಾಧವಾಗಿದ್ದರೆ ಅದಕ್ಕಾಗಿ ನಾನು ಈಗ ನಿನಗೆ ಕೈಜೋಡಿಸಿ ಕ್ಷಮೆಬೇಡುವೆನು" ಎಂದು ನುಡಿದನು. ಖಾನನ ಈ ಪ್ರಾರ್ಥನೆಯನ್ನುಕೇಳಿ ಕಂಚುಕಿರಾಯನು ಅಸಮಾಧಾನಪಟ್ಟು ಮನಸ್ಸಿನಲ್ಲಿ— "ನಾನು ಕಂಚುಕಿರಾಯನೆಂದು ಮೊದಲೇ ಹೇಳಿದ್ದರೆ ಖಾನರು ನನ್ನನ್ನು ಹೀಗೆ ಪ್ರಾರ್ಥಿಸುತ್ತಿದ್ದಿಲ್ಲ. ಬಹಳ ತಪ್ಪುಮಾಡಿದೆನು. ಅವರು ನನ್ನನ್ನು ಚಂಪತರಾಯನೆಂದಾಗಲಿ, ಅತನ ಪಕ್ಷದ ಯಾರಾದರೂ ಒಬ್ಬರೆಂದಾಗಲಿ ತಿಳಿದಿರಬಹುದಾದ್ದರಿಂದ, ಹೀಗೆ "ಸೈತಾನ, ಸೈತಾನ" ಎಂದು ಅನ್ನುತ್ತಿರುವರು; ಆದ್ದರಿಂದ ಈಗಾದರೂ ನನ್ನ ಹೆಸರನ್ನು ಹೇಳಬೇಕೆಂದು ತಿಳಿದು ಅತನು—

ಕಂಚುಕಿರಾಯ—ಖಾನಸಾಹೇಬ, ನಾನು ಸೈತಾನನಲ್ಲ. ತಮ್ಮ ಚರಣಸೇವಕನಾದ ಕಂಚುಕಿರಾಯನು. ಧಾರೀರದ ರಾಜನು! ತಮ್ಮ ಚರಣಧೂಳಿಯು ಒಮ್ಮೆ ನನ್ನ ಅರಮನೆಯಲ್ಲಿ ಬಿದ್ದಿತ್ತು!

ರಣದುಲ್ಲಾ—ಏನು? ನೀನು ಸೈತಾನನಲ್ಲವೆ? ಧಾರೀರದ ರಾಜನಾದ ಕಂಚುಕಿರಾಯನೇ?

ಮೆಲ್ಲಮೆಲ್ಲನೆ ರಣದುಲ್ಲಾಖಾನನಿಗೆ ಕಂಚುಕಿರಾಯನ ಗುರುತು ಹತ್ತ ಹತ್ತಿತು. ಆತನು ಕಂಚುಕಿರಾಯನ ಗುರುತನ್ನು ಚೆನ್ನಾಗಿ ಹಿಡಿದನು. ಆತನ ಭಯವು ದೂರಾಯಿತು. ಆತನು ಪ್ರಸನ್ನವದನದಿಂದ ಕಂಚುಕಿರಾಯನನ್ನು ಕುರಿತು—

ರಣದುಲ್ಲಾ—(ನಗುತ್ತ)—ಕಂಚುಕಿರಾಯ, ನೀನು ನನ್ನನ್ನು ಒಳಿತಾಗಿ ಅಂಜಿಸಿದೆ ಬಿಡು! ನೀನು ಇಂಥ ವಿಚಿತ್ರವೇಷ ಧರಿಸಲಿಕ್ಕೆ ಕಾರಣವೇನು?

ಕಂಚುಕಿರಾಯ—ಸರಕಾರದ ಸೇವಾ! ಬೇರೆ ಕಾರಣವೇನಿರಬೇಕು? ಬಾದಶಹರ, ಅಥವಾ ಅವರ ಪರಿವಾರದವರ ಸೇವೆಯ ಪ್ರಸಂಗಬಂದರೆ ಆ ಸುಪ್ರಸಂಗವನ್ನು ನಾವು ಹೇಗೆ ವ್ಯರ್ಥಮಾಡಿಕೊಂಡೇವು?

ರಣದುಲ್ಲಾ—ನಾನು ಇಲ್ಲಿ ಚಂಪತರಾಯನ ಸೆರೆಯಾಳಾಗಿ ಬಿದ್ದಿರುವೆನೆಂಬದನ್ನು ಕುರಿತು ನೀನು ವಿಚಾರಮಾಡಬಾರದೇನು? ಕಂಚುಕಿರಾಯ ನಿನಗೆ ಬುದ್ಧಿಯು ಸ್ವಲ್ಪವೂ ಇಲ್ಲವಲ್ಲ! ನೀನು ಪ್ರಬಲ ಧಾರೀರದ ರಾಜನೆನಿಸುತ್ತೀ; ಆದರೆ ನೂರಾರುಜನ ಸೈನಿಕರೊಡನೆ ಬಂದು ಈ ಛಾವಣಿಯಮೇಲೆ ಬಿನ್ನು ಶೌರ್ಯದಿಂದ ನನ್ನನ್ನು ಬಿಡಿಸಿಕೊಂಡು ಹೋಗಬಾರದಾಗಿತ್ತೇ? ಅದನ್ನು ಬಿಟ್ಟು ನನ್ನ ಸೇವೆಯನ್ನು ಈಗ ನೀನು ಏನುಮಾಡುತ್ತೀ, ನೀನು ಬಾದಶಹರ ಜನಾನಖಾನೆಯಲ್ಲಿ ಬೆಳೆದ ಕಂಚುಕಿಯು! ನಿನ್ನಿಂದ ಪರಾಕ್ರಮದ ಕೆಲಸವು ಹೇಗಾಗಬೇಕು? ಕಂಚುಕಿರಾಯ, ನನ್ನ ಈ ಮಾತು ನಿಜವಷ್ಟೆ?

ಕಂಚುಕಿರಾಯ (ನಿರ್ಲಜ್ಜನಾಗಿ)—ಅದರಲ್ಲಿ ಸಂಶಯವೇನು? ಸರದಾರ ಸಾಹೇಬರು ನನ್ನ ಸ್ವಭಾವದ ನಿಜವಾದ ಪರೀಕ್ಷೆಮಾಡಿದಿರಿ. ನನ್ನ ಹೆಂಡತಿಯೇ ನನ್ನನ್ನು ಹೆಂಗಸೆಂದು ಕರೆಯುವಷ್ಟು ನಾನು ಹೇಡಿಯಾಗಿದ್ದೇನೆ. ಅಂದಬಳಿಕ ನನ್ನಿಂದಯುದ್ಧಮಾಡುವಕೆಲಸವು ಹೇಗಾಗಬೇಕು? ಅದನ್ನೊಂದುಬಿಟ್ಟು ಉಳಿದ ಬೇಕಾದ ಸೇವೆಯನ್ನು ಹೇಳಿರಿ, ಅದನ್ನು ನಿಮ್ಮ ಅಂತಃಪುರದ ಸ್ತ್ರೀಯರಿಗಿಂತ ಹೆಚ್ಚು ಕೌಶಲ್ಯದಿಂದ ಮಾಡುವೆನು.

ರಣದುಲ್ಲಾ(ನಕ್ಕು)—ಒಳ್ಳೆಯದು, ಈ ಗುರುತಿನ ಕಠಾರಿಯನ್ನು ಹಿಡಿ.

ರಣದುಲ್ಲಾಖಾನನು ಕೊಟ್ಟ ಕಠಾರಿಯನ್ನು ತಕ್ಕೊಂಡು ಕಂಚುಕಿರಾಯನು ಅದಕ್ಕೆ ಮುದ್ದಿಟ್ಟನು. ಆಗ ರಣದುಲ್ಲಾಖಾನನು ಆತನನ್ನು ಕುರಿತು—"ಕಂಚುಕಿರಾಯ, ಈ ಕಠಾರಿಯನ್ನು ನಿನಗೆ ಉಚಿತವಾಗಿಕೊಟ್ಟಿರುವದಿಲ್ಲ, ಗುರುತಿಗಾಗಿ ಕೊಟ್ಟಿರುತ್ತೇನೆ. ಇದನ್ನು ತಕ್ಕೊಂಡು ನೀನು ದಿಲ್ಲಿಯ ಬಾದಶಹರ ಬೇಕಾದಷ್ಟು ಸ್ಥಳಕ್ಕೆ ಹೋದರೂ ಅಲ್ಲ ನಿನ್ನ ಪ್ರವೇಶವಾಗುವದು; ಮತ್ತು ಪ್ರವೇಶಮಾಡಿದ ನೀನು ಇದನ್ನು ತೋರಿಸಿದಕೂಡಲೆ ಸುಲಭವಾಗಿ ಆ ಸ್ಥಳದಿಂದ ಹೊರಗೆ ಬರುತ್ತೀ. ಈಗ ನೀನು ಇದನ್ನು ತಕ್ಕೊಂಡು ದಿಲ್ಲಿಗೆಹೋಗಿ, ಇಲ್ಲಿನಡೆದ ಸಂಗತಿಯನ್ನೆಲ್ಲ ಹೇಳು. ಬಂದೇಲಖಂಡದ ಇಬ್ಬರು ಅಡಾಳ ಹುಡುಗರು ತೋರಿಸಿದ ಎಟ್ಟಿತನವನ್ನೂ, ಅದಕ್ಕಾಗಿ ಹುಡುಗರನ್ನು ದಂಡಿಸದೆ ಚಂಪತರಾಯನು ನನ್ನನ್ನು ಸೆರೆಯಲ್ಲಿಟ್ಟಿದ್ದನ್ನೂ ಒಂದುಳಿಯದಂತೆ ಹೇಳು. ಹಿಂದುಗಳ ದೇವಾಲಯಗಳನ್ನು ಕೆಡಿಸುವದಿಲ್ಲವೆಂದು ಬಾದಶಹನು ವಚನ ಕೊಡುವವರೆಗೆ ನನ್ನನ್ನು ಬಿಡುವದಿಲ್ಲವೆಂದು ಚಂಪತರಾಯನು ನಿಶ್ಚಯಮಾಡಿರುವದನ್ನೂ ತಿಳಿಸು.

ಕಂಚುಕಿರಾಯ—ಇಷ್ಟು ಹೇಳಿದರೆ ನಿಶ್ಚಯವಾಗಿ ನಿಮ್ಮ ಬಿಡುಗಡೆಯಾಗುವದಷ್ಟೆ?

ರಣದುಲ್ಲಾ—ಅದರ ಯೋಚನೆಬೇಡ. ದಿಲ್ಲಿಯ ದರ್ಬಾರಕ್ಕೆ ತನ್ನ ಯೋಗ್ಯತೆಯ ಆಭಿಮಾನವಿದೆ. ನೀನು ನಿನ್ನ ಕೆಲಸವನ್ನು ದಕ್ಷತೆಯಿಂದ ಕೊನೆಗಾಣಿಸೆಂದರಾಯಿತು.

ಕಂಚುಕಿರಾಯ—ಖಾವಂದರಿಗೆ ಅದರ ಚಿಂತೆಬೇಡ. ಇನ್ನು ನನಗೆ ಅಪ್ಪಣೆಕೊಡಬೇಕು.

ರಣದುಲ್ಲಾಖಾನ (ನಗುತ್ತ)—ನೀವು ಹಿಂದೂಜನರು ಮೂರ್ಖರು; ಅದರಲ್ಲಿ ನಿಮ್ಮಂಥ ಅರಸರು ತೀರಾತಿಳಿಗೇಡಿಗಳಾಗಿರುವಿರಿ! ನಿಮ್ಮ ಪಾಲಿಗೆ ವಿಚಾರದ ಅಂಶವೂ ಬಂದಿರುವದಿಲ್ಲ. ಇಷ್ಟುದಿವಸ ಬಾದಶಹರ ಸೇವಾಚಾಕರಿಮಾಡಿದ ನಿನಗೆ, - ಹೇಳಿದ ಸೇವೆಯನ್ನು ಸರಿಯಾಗಿ ಮಾಡಲಕ್ಕೂ ಬರಬಾರದೇನು?

ಕಂಚುಕಿರಾಯ (ಗಾಬರಿಯಾಗಿ)—ಖಾನಸಾಹೇಬರ ಸೇವೆಯಲ್ಲಿ ಏನು ತಪ್ಪಾಯಿತು?

ರಣದುಲ್ಲಾ—ನೀನೆಂತಹ ರಾಜನು, ಇಸ್ಪೀಟಿನೊಳಗಿನ ರಾಜನೇಸರಿ! ಅಲ್ಲೋ ಕಂಚುಕಿರಾಯಾ, ಕತ್ತಾರಿಯನ್ನು ತಕ್ಕೊಂಡೆ; ಏನು ಹೇಳಬೇಕೆಂಬದನ್ನು ಪೂರ್ಣವಾಗಿ ಕೇಳಿಕೊಂಡೆ; ಆದರೆ ಯಾರಿಗೆ ಸುದ್ದಿಯನ್ನು ಹೇಳಬೇಕೆಂಬದನ್ನು ಕೇಳಿಕೊಳ್ಳುವಷ್ಟು ಮೇಲುಬುದ್ಧಿಯೂ ನಿನಗಿರಬಾರದೇನು? ಕೌಲೆತ್ತಿನಹಾಗೆ ಹೊರಟುಬಿಟ್ಟೆ.

ಕಂಚುಕಿರಾಯ— (ಅತ್ಯಂತ ಅಭಿಮಾನದಿಂದ) ಖಾನ ಸಾಹೇಬ, ದಿಲ್ಲಿಯ ದರ್ಬಾರದ ವಿಷಯದಲ್ಲಿ ನಾನು ಅಷ್ಟು ತಿಳಿಗೇಡಿಯೆಂದು ನೀವು ತಿಳಿಯುವಿರೇನು? ಅಲ್ಲಿ ನಾನು ಮೂವತ್ತು ವರ್ಷ ಸೇವೆ ಮಾಡಿದ್ದೇನೆ ಮೂವತ್ತು ವರ್ಷ! ನನ್ನಷ್ಟು ಅದಾವ ಅರಸನು ದರ್ಬಾರವನ್ನು ತುಳಿದಿದ್ದಾನೆ? ಇಂಥ ನನಗೆ ಈ ಸುದ್ದಿಯನ್ನು ಬಾದಶಹರಿಗೆ ಹೇಳಬೇಕೆಂಬದು ತಿಳಿದಿರಲಿಕ್ಕಿಲ್ಲವೆ? ಖಾನಸಾಹೇಬರು ನನ್ನನ್ನು ಕತ್ತೆಯನ್ನಾಗಿ ಮಾಡಿಬಿಟ್ಟರಲ್ಲ!

ರಣದುಲ್ಲಾ—ಬರಿಯ ಕತ್ತೆಯಲ್ಲ-ಹೇಸರಕತ್ತೆಯು! ಅಲಮಗೀರ ಬಾದಶಹನು ಈಗ ಬೇನೆಯಿಂದ ಸಾಯಲಾಗಿ ಹಾಸಿಗೆ ಹಿಡಿದಿದ್ದಾನೆ. ಆತನ ಆರೈಕೆಯನ್ನು ಆತನ ತಂಗಿಯೂ, ಶಹಾಜಹಾನ ಬಾದಶಹನ ಪ್ರೀತಿಯ ಮಗಳೂ ಆದ ರೋಷನಾರ ಬೇಗಮೆಯು ಮಾಡುತ್ತಿರುವಳು. ಆಕೆಯ ನೂರಾರು ಜನ ತಾರ್ತರ ಸ್ತ್ರೀಯರು ಬಾದಶಹನ ಸುತ್ತಲು ಶಸ್ತ್ರ ಹಿಡಿದು ಕಾಯುತ್ತಲಿದ್ದಾರೆ. ಅಂದಬಳಿಕ ಬಾದಶಹರ ಕಡೆಗೆ ಹೋಗುವದರಿಂದಾಗುವ ಪ್ರಯೋಜನವೇನು? ನೀನು ರೋಷನಾರಾ ಬೇಗಮಳನ್ನು ಕಾಣಬೇಕಾಗುವದು. ಆಕೆಯು ಇಂದಿಗೆ ದಿಲ್ಲಿಯ ಅನಭಿಷಿಕ್ತ ರಾಣಿಯಾಗಿದ್ದಾಳೆ. ದರ್ಬಾರದ ಎಲ್ಲ ಕೆಲಸಗಳು ಆಕೆಯ ಅಪ್ಪಣೆಯಿಂದಲೇ ನಡೆಯುತ್ತಿರುವವು. ಬಾದಶಹರ ಶಿಕ್ಕಾ-ಮೋರ್ತಬುಗಳು ಆಕೆಯ ಬಳಿಯಲ್ಲಿರುತ್ತವೆ. ಆಕೆಯ ಅಪ್ಪಣೆಯಿಂದಲೇ ನಾನು ಇಲ್ಲಿಗೆ ಬಂದಿರುತ್ತೇನೆ. ಆಕೆಯೇ ನನ್ನ ಬಿಡುಗಡೆಯನ್ನು ಮಾಡುವಳು.

ಕಂಚುಕಿರಾಯ—ಸರದಾರ ಸಾಹೇಬ,

ಈ ಮೇರೆಗೆ ಕಂಚುಕಿರಾಯನು ಏನೇನೋ ಮಾತಾಡಬೇಕೆನ್ನುತ್ತಿರುವಷ್ಟರಲ್ಲಿ ದೂರವಲ್ಲಿ ಚಂಪತರಾಯನು ಕರ್ಕಶಸ್ವರದಿಂದ—" ಖಬರದಾರ,

ಒಂದು ಅಕ್ಷರವನ್ನು ಚ್ಚರಿಸಿದರೆ ನಿನ್ನ ದೇಹದೊಡನೆ ನಿನ್ನ ನಾಲಿಗೆಯನ್ನು ಚೂರುಚೂರು ಮಾಡಿ ಚಲ್ಲೀನು! ಯಾವ ಅಧಮನು ನೀನು? ಚಂಪತರಾಯನ ಛಾವಣಿಯಲ್ಲಿ ಬಂದು ಫಿತೂರಿ, ದಗಲ್‌ಬಾಜಿ, ವಿಶ್ವಾಸಘಾತಗಳನ್ನು ನಡೆಸಿರುವೆಯೇನು? ಸೌಭಾಗ್ಯಸಿಂಹ, ಈ ಮುದುವೆಯನ್ನು ಯಾರ ಅಪ್ಪಣೆಯಿಂದ ಒಳಗೆ ಬಿಟ್ಟೆ?

ಸೌಭಾಗ್ಯಸಿಂಹ (ಅಂಜುತ್ತುಂಜುತ್ತು)—ಮಹಾರಾಜ, ಕ್ಷಮಿಸಬೇಕು.

ಈ ಮೇರೆಗೆ ನುಡಿಯುತ್ತಿರಲು, ಚಂಪತರಾಯನು ಮುಂದೆ ಮಾತಾಡಗೊಡದೆ—

ಚಂಪತರಾಯ— ನಿಮ್ಮ ಕಾರಣವನ್ನು ಹಿಂದಿನಿಂದ ಕೇಳೋಣ. ಮೊದಲು ಈ ಮುದವೆಯು ಯಾರು? ಇಲ್ಲಿಗೆ ಯಾಕೆ ಬಂದಳೆಂಬದು ನನಗೆ ತಿಳಿಯಬೇಕಾಗಿರುವದು. ಈಕೆಯು ಇಲ್ಲಿಗೆ ಬಂದು ಒಂದು ಗಳಿಗೆಯಂತು ಆಗಿರಬೇಕು. ಆಗಿನಿಂದ ನಾನು ಯಾರು ಮಾತಾಡುತ್ತಿರುವರೆಂಬದನ್ನು ತೋಧಿಸುತ್ತಲೇ ಇದ್ದೇನೆ. ಏ ಮುದವೀ, ನೀನು ಯಾರು?

ಕಂಚುಕಿರಾಯನ ಮನಸ್ಸಿನಲ್ಲಿ ಉತ್ತರಕೊಡಬೇಕೆಂದಿದ್ದರೂ, ಆತನ ಬಾಯಿಂದ ಅಕ್ಷರಗಳೇ ಹೊರಡಲೊಲ್ಲವು. ಅಷ್ಟರಲ್ಲಿ ಚಂಪತರಾಯನು—"ಸೌಭಾಗ್ಯಸಿಂಹ, ಈಕೆ ಒಳ್ಳೆಯ ಮಾತಿನಿಂದ ಮಾತಾಡಲಿಕ್ಕಿಲ್ಲ, ಸ್ವಲ್ಪ ಸಮಾಚಾರ ತೆಗೆದುಕೋ," ಎಂದು ಹೇಳಲು, ಸೌಭಾಗ್ಯಸಿಂಹನು ಮುಂದಕ್ಕೆ ಬಂದನು. ಆಗ ಕಂಚುಕಿರಾಯನು ತಡೆಯುತ್ತ ತಡೆಯುತ್ತ—"ಚಂಪತರಾಯ, ನಾನು ಕಂಚುಕಿರಾಯನು, ಧಾರೀರದ ಅರಸನು" ಎಂದು ಹೇಳಿದನು. ಅದನ್ನು ಕೇಳಿ ಎಲ್ಲರೂ ಆಶ್ಚರ್ಯದಿಂದ ಆ ವಿಚಿತ್ರ ವೇಷದ ಕಂಚುಕಿರಾಯನ ಕಡೆಗೆ ನೋಡತೊಡಗಿದರು. ರಣದುಲ್ಲಾಖಾನನು ಚಿಂತೆಯಿಂದ ಅವರ ಕಡೆಗೆ ನೋಡುತ್ತಲಿದ್ದನು! ಆಗ ಚಂಪತರಾಯನು ಕಂಚುಕಿರಾಯನಿಗೆ—"ನೀನೆಂತಹ ರಾಜನು, ರಾಜ್ಯಪದದ ಅಭಿಲಾಷೆಯುಳ್ಳ ಪಿಶಾಚ್ಚನು" ಎಂದು ನುಡಿದನು. ಖಾನನಿಗೆ ರಾಜನ ಮಾತು ಯೋಗ್ಯವಾಗಿ ತೋರಿತು.

೫ನೆಯ ಪ್ರಕರಣ - ಅಪಘಾತ

ಶ್ರೀ ವಿಂಧ್ಯವಾಸಿನಿಯ ವಾರ್ಷಿಕೋತ್ಸವವು ಮುಗಿದದ್ದರಿಂದ ಎಲ್ಲ ಅರಸರೂ ತಮ್ಮ ತಮ್ಮ ರಾಜಧಾನಿಗಳಿಗೆ ಹೋಗತೊಡಗಿದರು. ಕಂಚುಕೆ ರಾಯನು ತನ್ನ ಮಗಳಾದ ವಿಜಯೆಯನ್ನು ಓರಛಾದ ರಾಣಿಯಾದ ಹೀರಾ ದೇವಿಯೊಡನೆ ಆಕೆಯ ರಾಜಧಾನಿಗೆ ಕಳಿಸಿ, ತಾನು ಹೀರಾದೇವಿಯ ಅಪ್ಪ ಣೆಯಂತೆ, ರಾಣಮಲ್ಲಾಖಾನನ ಸುದ್ದಿಯನ್ನು ತಿಳಿಸಲಿಕ್ಕೆ ದಿಲ್ಲಿಗೆ ಹೋದನು; ಅದರಿಂದ ಆತನ ಮಗಳಾದ ವಿಜಯೆಗೆ ವಿಮಲದೇವನ ಸಹವಾಸವು ಅನಾ ಯಾಸವಾಗಿ ಪ್ರಾಪ್ತವಾಗಿ, ಅವರಿಬ್ಬರು ಆನಂದದಿಂದ ಮಾರ್ಗವನ್ನು ಕ್ರಮಿಸತೊಡಗಿದರು. ವಿಜಯಾ-ವಿಮಲದೇವರು ಒಬ್ಬರನ್ನೊಬ್ಬರು ಬಹಳವಾಗಿ ಪ್ರೀತಿಸುತ್ತಿದ್ದರು. ಅಣ್ಣ ತಂಗಿಯರಾಗಿ ನಡೆದುಕೊಳ್ಳುತ್ತಿದ್ದ ಅವರಿಬ್ಬರು ಕೂಡಿ ವನಪುಷ್ಪಗಳ ಮಾಲೆಮಾಡಿ ಶ್ರೀ ವಿಂಧ್ಯವಾಸಿನಿಯ ಕೊರಳಿಗೆ ಹಾಕಿದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಹೀಗೆಯೇ ಯಾವ ಕಾಲದಲ್ಲಾದರೂ ಅವರಿಬ್ಬರು ಕೂಡಿ ಇರುವದೇ ಬಹಳ. ಹೀರಾದೇವಿಯು ಮಾರ್ಗವನ್ನು ಕ್ರಮಿಸುತ್ತ ಮಹೋಬಕ್ಕೆ ಮುಟ್ಟಿದಳು. ವಾಸ್ತವವೆಂದರೆ ಆಕೆಯು ತನ್ನ ಆಪ್ತನೂ, ತನಗೆ ಉಪಕಾರಮಾಡಿದವನೂ ಆದ ಚಂಪತ ರಾಯನಲ್ಲಿಗೆ ಹೋಗಬೇಕಾಗಿತ್ತು; ಆದರೆ ಹೀರಾದೇವಿಯು ಚಂಪತರಾಯ ನನ್ನು ಬಹಳವಾಗಿ ದ್ವೇಷಿಸುತ್ತಿದ್ದದ್ದರಿಂದ, ಆತನ ಮನೆಗೆ ಹೋಗದೆ ಮದನ ಸರೋವರದ ದಂಡೆಯಮೇಲೆ ಒಂದು ಪ್ರಶಸ್ತ ಸ್ಥಳನೋಡಿ ಇಳಿದು ಕೊಂಡಳು! ಆಕೆಗೆ ಈಗ ಚಂಪತರಾಯನನ್ನು ಕಾಣಲಿಕ್ಕೂ ಮನಸ್ಸಾಗ ಲಿಲ್ಲ. ಪಹಾರಸಿಂಗನಂತು ಹೆಂಡತಿಯ ಮಾತು ಮೀರದವನು! ಕ್ಷುದ್ರರ ದ್ವೇಷ ಬುದ್ಧಿಯ ರೀತಿಯೇ ಹೀಗೆ!

ಹೀಗೆ ಹೀರಾದೇವಿಯು ಮದನ ಸರೋವರದ ದಂಡೆಯಲ್ಲಿ ವಸತಿಮಾ ಡಿರುವಾಗ ವಿಜಯಾ-ವಿಮಲದೇವರು ಇಳಿಹೊತ್ತಿನಲ್ಲಿ ಸರೋವರದ ಶೋಭೆ ಯನ್ನು ನೋಡುತ್ತ ಅದರ ದಂಡೆಯ ಮೇಲೆ ಸಂಚರಿಸತೊಡಗಿದರು. ಮದನ ಸರೋವರವು ಬಹು ರಮ್ಯವಾದದ್ದು. ಬುಂದೇಲ ಖಂಡದಲ್ಲಿ ಅಂತಹ ಸರೋವರಗಳು ಹಲವು ಇದ್ದರೂ, ಅವುಗಳಲ್ಲಿ ಒಂದಾವರೂ ಶೋಭೆಯಲ್ಲಿ

ಮದನಸರೋವರವನ್ನು ಸರಿಗಟ್ಟುವಂತೆ ಇದ್ದಿಲ್ಲ. ಸೊಗಸುಗಾರರು ವಿಹರಿಸುವದಕ್ಕಾಗಿ ಅಲ್ಲಿ ಸಣ್ಣಸಣ್ಣ ಎಷ್ಟೋ ಡೋಣಿಗಳು ದಂಡೆಯಲ್ಲಿ ಕಟ್ಟಿದ್ದವು. ಇಳಿಹೊತ್ತು ಆದ ಆದಂತೆ ಎಷ್ಟೋಜನ ಸೊಗಸುಗಾರರು ಒಂದೊಂದು ಡೋಣಿಯನ್ನು ಉಚ್ಚಿಕೊಂಡು ಸರೋವರದಲ್ಲಿ ವಿಹರಿಸುತ್ತಿದ್ದರು. ಅವನ್ನು ನೋಡಿ ವಿಜಯಾ-ವಿಮಲದೇವರೂ ತಾವೊಂದು ಡೋಣಿಯನ್ನು ಉಚ್ಚಿಕೊಂಡು ಸರೋವರದಲ್ಲಿ ಸಂಚರಿಸಬೇಕೆಂದು ಮಾಡಿದರು. ಈ ಸೊದಲೆ ಅವರು ಮಹೋಬಕ್ಕೆ ಬರುತ್ತಿರುವಾಗ ಆ ಸರೋವರದಲ್ಲಿ ಎಷ್ಟೋಸಾರೆ ಡೋಣಿಯಲ್ಲಿ ಕುಳಿತು ಸಂಚರಿಸಿದ್ದರು. ಇಬ್ಬರಿಗೂ ಹುಟ್ಟು ಹಾಕಲಿಕ್ಕೆ ಚನ್ನಾಗಿ ಬರುತ್ತಿತ್ತು; ಆದ್ದರಿಂದ ಅವರಿಬ್ಬರು ನಿರಾತಂಕವಾಗಿ ಅಲ್ಲಿಯದೊಂದು ಡೋಣಿಯನ್ನು ಉಚ್ಚಿಕೊಂಡು ಅದರಲ್ಲಿ ಕೂಳಿತು ಸರೋವರದ ಮಧ್ಯದಲ್ಲಿರುವ ನಡುಗಡ್ಡೆಯಕಡೆಗೆ ಆನಂದದಿಂದ ಸಾಗಿದರು. ಅಷ್ಟರಲ್ಲಿ ಎಷ್ಟೋಜನ ತರುಣ-ತರುಣಿಯರ ಡೋಣಿಗಳು ಆ ಸರೋವರದ ನಡುವಿನ ಗಡ್ಡೆಯ ಕಡೆಗೆ ಸಾಗಿದ್ದವು. ತಾವು ಅವರೆಲ್ಲರಿಗಿಂತ ಮೊದಲೇ ನಡುಗಡ್ಡೆಯನ್ನು ಮುಟ್ಟಬೇಕೆಂಬ ಉಬ್ಬಿನಿಂದ ವಿಜಯೆಯು ಹುಟ್ಟುಹಾಕುತ್ತಿರಲು, ಡೋಣಿಯು ವೇಗದಿಂದ ಸಾಗತೊಡಗಿತು. ಆಗ ವಿಮಲದೇವನು ವಿಜಯೆಯನ್ನು ಕುರಿತು ಉಲ್ಲಾಸದಿಂದ—ವಿಜಯೇ, ನಿನ್ನ ಕೈಗಳು ಸೋತಹಾಗೆ ಕಾಣುತ್ತವೆ, ತಾ, ನಾನು ಸ್ವಲ್ಪಹೊತ್ತು ಹುಟ್ಟು ಹಾಕುತ್ತೇನೆ, ಅನ್ನಲು ವಿಜಯೆಯು—ವಿಮಲದೇವಾ, ಇಷ್ಟರಲ್ಲಿ ನನ್ನ ಕೈಗಳು ಸೋಲುವವೇ? ಇನ್ನು ನಡುಗಡ್ಡೆಯಾದರೂ ಎಷ್ಟುದೂರವದೆ? ಅದೋ ಬಂದಿತು ನೋಡು; ಇನ್ನು ಹತ್ತಿಪ್ಪತ್ತು ಸಾರೆ ಹುಟ್ಟು ಹಾಕಿದರೆ ಗಡ್ಡೆಯು ಬಂದುಬಿಡುವದು. ಗಡ್ಡೆಗೆ ಮುಟ್ಟುವವರೆಗೆ ನಾನೇ ಹುಟ್ಟು ಹಾಕುವೆನು. ಬೇಕಾದರೆ ತಿರುಗಿ ಬರುವಾಗ ನೀನು ಹುಟ್ಟು ಹಾಕುವೆಯಂತೆ.

ಈ ಮೇರೆಗೆ ಉತ್ಸಾಹದಿಂದ ಅವರು ದ್ವೀಪದ ಕಡೆಗೆ ಸಾಗಿರಲು, ಸರೋವರದೊಳಗಿನ ವಿವಿಧ ಕಮಲ ಪುಷ್ಪಗಳ ಕಡೆಗೆ ವಿಮಲದೇವನ ಲಕ್ಷವು ಹೋಯಿತು. ಆತನು ವಿಜಯೆಯನ್ನು ಕುರಿತು—ವಿಜಯೇ, ಈ ಕಮಲಗಳನ್ನು ನೋಡಿದೆಯೇನು? ಸ್ವಲ್ಪ ಹುಟ್ಟು ಹಾಕುವದನ್ನು ಬಿಟ್ಟು ಇತ್ತ ನೋಡಬಾರದೆ? ಕೆಲವು ಕಮಲಗಳು ಪೂರಾ ಅರಳಿವೆ, ಕೆಲವು

ಅರ್ಧ ಅರಳಿವೆ, ಕೆಲವು ಅರಳುವದರಲ್ಲಿವೆ. ಕೆಲವಂತು ಮೊಗ್ಗೆಗಳಿರುವವು. ಅಗೋ, ಅಲ್ಲಿ ಆ ದೊಡ್ಡ ಕಮಲವು ಎಷ್ಟು ಮನೋಹರವಿದೆ ನೋಡು. ಅದನ್ನು ನಾನು ಹರಿದುಕೊಳ್ಳಲಾ? ಎಂದು ಕೇಳಲು, ವಿಜಯೆಯು ನಾವಿಕೆಯನ್ನು ಆ ಕಮಲದ ಕಡೆಗೆ ಸಾಗಿಸಿದಳು. ಕಮಲವು ಹತ್ತರ ಬಂದಕೂಡಲೆ ವಿಮಲದೇವನು ಅದನ್ನು ಕೊಯ್ಯಹೋದನು; ಆದರೆ ಅದು ಕೈಗೆ ನಿಲುಕಲೊಲ್ಲದು. ಆಗ ಅತನು ಡೋಣಿಯು ಅಂಚಿನಮೇಲೆ ಬಿದ್ದು ಬಾಗಿ ಕಮಲನನ್ನು ಕೊಯ್ಯಬೇಕೆಂದು ಯತ್ನಿಸತೊಡಗಿದನು. ಆಗ ಉತ್ಸಾಹಿ ಸ್ವಭಾವದ ವಿಜಯೆಯು ವಿಮಲದೇವನಿಗೆ ಸಹಾಯನೂಡುವದಕ್ಕಾಗಿ ತನ್ನ ಹುಟ್ಟನ್ನು ಮೇಲಕ್ಕೆತ್ತಿಕೊಂಡು ವಿಮಲದೇವನ ಹತ್ತರ ಬಂದಳು. ತಮ್ಮ ಈ ಕೃತಿಯು ತಮ್ಮಿಬ್ಬರ ನಾಶಕ್ಕೆ ಕಾರಣವಾದೀತೆಂಬದರ ಎಚ್ಚರವು ಅವರಿಗಿದ್ದಿಲ್ಲ. ಅವರಿಬ್ಬರ ಭಾರವೂ ಡೋಣಿಯ ಒಂದೇ ಮಗ್ಗಲಿಗೆ ಆದವ್ದರಿಂದ, ಅದು ಒಪ್ಪರಿಯಾಗಿ ನೀರ ಕಡೆಗೆ ಒಲಿಯಿತು; ಆದರೂ ಅವರಿಗೆ ಅದರ ಎಚ್ಚರವೇ ಇದ್ದಿಲ್ಲ. ಅದನ್ನು ದೂರದಲ್ಲಿದ್ದ ಒಬ್ಬ ತರುಣನು ನೋಡಿ, ಇವರಿಗೆ ಇನ್ನು ಜಲಸಮಾಧಿಯು ಆಗುವದೆಂದು ನಿಶ್ಚಯಿಸಿ, ತನ್ನ ಡೋಣಿಯನ್ನು ಅವರ ಕಡೆಗೆ ಭರದಿಂದ ಸಾಗಿಸಿಕೊಂಡು ಬರತೊಡಗಿದನು; ಇದಾವದನ್ನೂ ವಿಜಯಾ-ವಿಮಲದೇವರು ಅರಿಯರು. ಈಗ ಕೈಗೆ ಸಿಗುವದೆಂದು ವಿಮಲದೇವನು ಹೂವನ್ನು ಹಿಡಿದು ಕೊಯ್ಯುತ್ತಿರಲು, ವಿಜಯೆಯೂ ಮುಂದಕ್ಕೆ ಸಾಗರ ಬಿದ್ದಳು. ಇಬ್ಬರ ಜೋಲಿಯಿಂದ ಡೋಣಿಯು ಬಕ್ಕಬೋರಲು ಆಗಿ, ಇಬ್ಬರೂ ನೀರಿನಲ್ಲಿ ಬಿದ್ದುಬಿಟ್ಟರು! ವಿಜಯೆಗೆ ಚನ್ನಾಗಿ ಈಸಲಿಕ್ಕೆ ಬರುತ್ತಿದ್ದದ್ದರಿಂದ ಆಕೆಯು ಮುಣುಗಲಿಲ್ಲ. ಆಕೆಯು ಈಸು ಬಾರದ್ದರಿಂದ ನೀರು ಗುಟುಕರಿಸತೊಡಗಿದ್ದ ವಿಮಲದೇವನ ರಟ್ಟೆಯನ್ನು ಹಿಡಿದು ಎತ್ತಿ—

ವಿಜಯೆ—ವಿಮಲದೇವಾ, ನಿನಗೆ ಈಸಲಿಕ್ಕೆ ಬರುವದಿಲ್ಲವೇ? ಹೀಗೆ ಬಡಿದಾಡಬೇಡ; ಅಂಜಬೇಡ; ನಾನು ನಿನ್ನನ್ನು ದಂಡೆಗೆ ಕರೆದೊಯ್ಯುತ್ತೇನೆ. ಸುಮ್ಮನೆ ನೀರಮೇಲೆ ಬಿದ್ದುಕೊಂಡು ಬಿಡು. ಇತ್ತ ಕಣ್ದೆರೆದು ನೋಡು, ನಾನು ನಿನ್ನ ತಂಗಿ ವಿಜಯೆಯು; ನಿನ್ನ ಹತ್ತರವೇ ಇರುವೆನು, ಹೆದರಬೇಡ!

ಹೀಗೆ ಧೈರ್ಯಹೇಳುವ ವಿಜಯೆಯ ಮಾತುಗಳನ್ನು ಕೇಳಿ ವಿಮಲದೇವನು ಕಣ್ಣೆರೆದು, ಸುತ್ತುಮುತ್ತಲಿನ ಜಲರಾಶಿಯನ್ನು ನೋಡಿ ಅಂಜಿ, ತನ್ನ ರಟ್ಟೆಯನ್ನು ಹಿಡಿದಿರುವ ಸುಕುಮಾರಿಯಾದ ವಿಜಯೆಯ ಕಡೆಗೆ ತಿರುಗಿ ಕಣ್ಣುಗಳಲ್ಲಿ ನೀರು ಹೋಗುತ್ತಿರಲು, ಕರುಣಾವ್ಯಂಜಕ ಸ್ವರದಿಂದ—

ವಿಮಲದೇವ — ಛೀ ಛೀ, ನನ್ನ ರಟ್ಟೆಯನ್ನು ಹಿಡಿಯಬೇಡ, ನನ್ನನ್ನು ನೀರಲ್ಲಿ ಮುಣುಗಗೊಡು. ನನಗೆ ಈಸಲಿಕ್ಕೆ ಏನೂ ಬರುವದಿಲ್ಲ. ನನ್ನನ್ನು ಬದುಕಿಸಹೋಗಿ ನೀನೂ ಪ್ರಾಣಕ್ಕೆ ಎರವಾಗಬೇಕಾದೀತು. ನಿನ್ನಿಂದ ನನ್ನ ಸಂರಕ್ಷಣವಾಗಬಾರದು. ನಿನಗೆ ಈಸಲಿಕ್ಕೆ ಬರುವದರಿಂದ ಸಹಜವಾಗಿ ನೀನು ನಡುಗಡ್ಡೆಯನ್ನು ಮುಟ್ಟಬಹುದು.

ವಿಜಯೆ—ವಿಮಲದೇವಾ, ಹಾಗೆ ಎಂದಿಗೂ ಆಗಲಾರದು. ನಾವು ಇಬ್ಬರೂ ಒಮ್ಮೆಲೆ ಇಲ್ಲಿ ಸತ್ತುಹೋಗೋಣ, ಇಲ್ಲವೆ ಬದುಕುವ ಯೋಗ ವಿದ್ದರೆ,

ಇಷ್ಟು ಮಾತಾಡುವದರೊಳಗೆ ವಿಜಯೆಗೆ ದಮ್ಮುಹತ್ತಿ ಮಾತಾಡಲಿಕ್ಕೆ ಬಾರದಾಯಿತು. ಆಗ ವಿಮಲದೇವನು—ವಿಜಯೇ, ನಿನ್ನ ಕೈಗಳು ಸೋಲಹತ್ತಿದವು. ನನ್ನ ರಟ್ಟೆಯನ್ನು ಬಿಡು. ಇಬ್ಬರು ಸಾಯುವದಕ್ಕಿಂತ ಒಬ್ಬರು ಬದುಕುವದು ಒಳ್ಳೆಯದು. ನನ್ನನ್ನು ಬದುಕಿಸಲಿಕ್ಕೆ ನೀನು ಈಪರಿ ಕಷ್ಟಪಡುವದಕ್ಕಾಗಿ ನಾನು ಅತ್ಯಂತ ಕೃತಜ್ಞನಾಗಿದ್ದೇನೆ. ನಿನ್ನ ಈ ಋಣವನ್ನು ಮುಂದಿನ ಜನ್ಮದಲ್ಲಿ ತೀರಿಸುವೆನು. ಬಿಡು, ನನ್ನನ್ನು ಮುಣುಗಬಿಡು, ಎಂದು ಹೇಳಿದನು. ಆಗ ವಿಜಯೆಯು ಮಾತಾಡಲಾರದೆ- "ಇಲ್ಲ, ಹಾಗಾಗುವದಿಲ್ಲ. ಇಬ್ಬರೂ ಒಮ್ಮೆಲೆ ಸಾಯೋಣ" ಎಂದು ಬಹು ಕಷ್ಟದಿಂದ ಮಾತಾಡಿದಳು. ಈಗ ಆಕೆಯ ಕೈಗಳು ತೀರಾ ಸೋತು ಹೋಗಿದ್ದವು. ವಿಮಲದೇವನ ಸಂರಕ್ಷಣಮಾಡುವ ಸಾಮರ್ಥ್ಯವು ಆಕೆಯಲ್ಲಿ ಉಳಿದಿದ್ದಿಲ್ಲ; ಆದರೂ ತನ್ನಲ್ಲಿ ಶಕ್ತಿಯಿರುವವರೆಗೆ ವಿಮಲದೇವನ ಸಂರಕ್ಷಣ ಮಾಡತಕ್ಕದ್ದೇ, ಎಂದು ಆಕೆಯು ನಿಶ್ಚಯಿಸಿದ್ದಳು; ಆದರೆ ವಿಮಲದೇವನು ವಿಜಯೆಯ ಕೈಯನ್ನು ಕೊಸರಿ 'ಬಿಡಿಸಿ ಆಕೆಯನ್ನು ಹಿಂದಕ್ಕೆ ದೂಡುತ್ತ—"ವಿಜಯೇ," ಎಂದು ಇನ್ನೂ ಏನೇನೋ ಹೇಳಬೇಕೆನ್ನುತ್ತಿರಲು, ಒಮ್ಮೆಲೆ ನೀರಿನಲ್ಲಿ ಮುಣುಗಿ ಒಮ್ಮೆ ಮೇಲಕ್ಕೆದ್ದನು. ಆಗಿನ

ವಿಮಲದೇವನ ದುಸ್ಥಿತಿಯನ್ನು ನೋಡಿ ವಿಜಯೆಯು ಆಕ್ರೋಶಪಡಿ, ಅಷ್ಟು ಕೈಸೋತಿದ್ದರೂ ವಿಮಲದೇವನನ್ನು ಹಿಡಿಯುವದಕ್ಕಾಗಿ ಮುಂದಕ್ಕೆ ಸಾಗಿಬಂದಳು. ಅಷ್ಟರಲ್ಲಿ ವಿಮಲದೇವನು ಮತ್ತೆ ಮುಣುಗಿದನು! ಆಗ ವಿಜಯೆಯು ದುಃಖದಿಂದ ಕಣ್ಣೀರ ಸುರಿಸುತ್ತ—"ಹೊರಟಿಯಾ! ವಿಮಲ ದೇವಾ, ಹೊರಟುಬಿಟ್ಟಿಯಾ! ಈ ಹೊತ್ತಿನಲ್ಲಿ ಯುವರಾಜ ಛತ್ರಸಾಲನಿ ದ್ದರೆ" ಎಂದು ನುಡಿಯುತ್ತಿರಲು, ಒಬ್ಬ ತರುಣನು ತನ್ನ ನೌಕೆಯನ್ನು ವಿಮಲದೇವನು ಮುಣುಗಿದಲ್ಲಿಗೆ ತಂದು ಸರೋವರದಲ್ಲಿ ಹಾರಿ ಕ್ಷಣದಲ್ಲಿ ವಿಮಲದೇವನನ್ನು ಹೊರಗೆ ತೆಗೆದು ತನ್ನ ನೌಕೆಯಲ್ಲಿ ಹಾಕಿದನು. ಇದನ್ನು ನೋಡಿ ವಿಜಯೆಗೆ ಬಹಳ ಸಂತೋಷವಾಯಿತು. ಅಷ್ಟರಲ್ಲಿ ಆಕೆಯು ಈಸಿ ಆ ತರುಣನ ನೌಕೆಯಬಳಿಗೆ ಬಂದಳು. ಆಕೆಯನ್ನು ತನ್ನ ನೌಕೆಯೊಳಗೆ ಕರೆದುಕೊಳ್ಳುವದಕ್ಕಾಗಿ ಆ ತರುಣನು ತನ್ನ ಕೈಯನ್ನು ಚಾಚಿದನು. ವಿಜಯೆಯು ಆ ತರುಣನ ತೇಜಸ್ವಿಮುಖವನ್ನು ನೋಡಿ ಆನಂದಪರವಶಳಾಗಿ, ತನ್ನ ಕೈಯನ್ನು ಮೇಲಕ್ಕೆ ಮಾಡಿದಳು. ಕೂಡಲೆ ಆ ತರುಣನು ವಿಜಯೆಯನ್ನು ನೌಕೆಯಮೇಲೆ ಕರೆದುಕೊಂಡನು!

ಹೀಗೆ ವಿಜಯೆಯನ್ನು ಮೇಲಕ್ಕೆ ಕರಕೊಂಡ ತರುಣನು ಬೇರೆ ಯಾರೂ ಆಗಿರದೆ ಛತ್ರಸಾಲನೇ ಆಗಿದ್ದನು. ಅದನ್ನು ನೋಡಿ ವಿಜಯೆಗೆ ಪರಮಾನಂದವಾಯಿತು. ವಿಮಲದೇವನು ಉಸುರುಗಟ್ಟಿ ಶವದಂತೆ ಬಿದ್ದು ಬಿಟ್ಟಿದ್ದನು. ಛತ್ರಸಾಲನು ಅವನ ಹೊಟ್ಟೆ ಹಿಚಕಿ ಹೊಟ್ಟೆಯೊಳಗಿನ ನೀರು ಹೊರಡಿಸಿದ್ದರಿಂದ, ವಿಮಲದೇವನು ಚನ್ನಾಗಿ ಉಸುರಾಡಿಸಹತ್ತಿ ದನು; ಆದರೆ ಆತನಿಗೆ ಇನ್ನೂ ಎಚ್ಚರವಾಗಿದ್ದಿಲ್ಲ. ವಿಜಯಾ-ಛತ್ರಸಾ ಲರು ಆತನನ್ನು ಬಗೆಬಗೆಯಾಗಿ ಉಪಚರಿಸುವಾಗ ಆತನು ಹೆಂಗಸೆಂಬದು ಅವರಿಗೆ ಗೊತ್ತಾಗಿ ಪರಮಾಶ್ಚರ್ಯವಾಯಿತು! ಆಗ ವಿಜಯೆಯು ಛತ್ರ ಸಾಲನನ್ನು ಕುರಿತು—

ವಿಜಯೆ—ಛತ್ರಸಾಲ, ಈ ಆಶ್ಚರ್ಯದ ಗೂಢವೇನಿರಬಹುದು? ಏನೇ ಇರಲಿ, ವಿಮಲದೇವನು ವಿಮಲೆಯಾಗಿರುವಳೆಂಬದು ನಿಶ್ಚಯವು. ಈಕೆಯು ಪಹಾರಿಂಗನ ಮಗಳಾದದ್ದರಿಂದ ನಿನಗಂತು ತಂಗಿಯಾಗಬೇಕಾ ಯಿತು. ಹೀರಾದೇವಿಯ ರಾಜತಂತ್ರವು ವಿಮಲೆಯ ಪುರುಷವೇಷಕ್ಕೆ

ಕಾರಣವಾಗಿರಬಹುದು; ಆದರೆ ಛತ್ರಸಾಲ, ಒಂದು ಮಾತಿನ ಸಲುವಾಗಿ ನನಗೆ ಬಹಳ ವ್ಯಸನವಾಗುತ್ತದೆ.

ಛತ್ರಸಾಲ—ಅದೇನು ವ್ಯಸನ?

ವಿಜಯೆ—ಪ್ರಿಯ ಛತ್ರಸಾಲ, ಇನ್ನು ನಾಚಿ ಫಲವೇನು? ಮೊನ್ನೆ ಶ್ರೀವಿಂಧ್ಯವಾಸಿನಿಯ ಕೊರಳಲ್ಲಿ ನಾನೂ ವಿಮಲದೇವನೂ ಮಾಲೆ ಹಾಕುತ್ತಿರುವಾಗ, ಆ ಮಾಲೆಯು ಜಾರಿ ನಿನ್ನ ಕೊರಳಿಗೆ ಬಿದ್ದಿತಷ್ಟೆ? ಅದರಿಂದ ನನಗೆ ಲಜ್ಜೆಯು ಉತ್ಪನ್ನವಾದಂತೆ, ವಿಮಲದೇವನಿಗೂ ಲಜ್ಜೆಯು ಉತ್ಪನ್ನವಾದದ್ದನ್ನು ನಾನು ನೋಡಿದ್ದೆನು; ಆದರೆ ವಿಮಲದೇವನು ಗಂಡಸಾದದ್ದರಿಂದ ಆತನ ಲಜ್ಜೆಯ ಮಹತ್ವವು ಆಗ ನನಗೆ ತೋರಿದ್ದಿಲ್ಲ. ಆತನಂತು ಹೆಂಗಸೆಂಬ ಮಾತು ಈಗ ಗೊತ್ತಾಯಿತು. ಈಗ ಒಂದು ನೆನವಿಂದ ನೀನು ನಮ್ಮಿಬ್ಬರ ಪಾಣಿಗ್ರಹಣವನ್ನು ಇಂದು ಮಾಡಿರುವೆ. ಅಂದು ನಾವಿಬ್ಬರೂ ನಿನ್ನ ಕೊರಳಲ್ಲಿ ಮಾಲೆಹಾಕಿ ವಿವಾಹದ ಪೂರ್ವಾಂಗವನ್ನು ದೇವಿಯ ಮುಖಾಂತರ ಎಲ್ಲ ರಾಜರ ಸಮಕ್ಷ ಪೂರ್ಣಮಾಡಿದ್ದೆವು. ಅದರಂತೆ ವಿವಾಹದ ಉತ್ತರಾಂಗವಾದ ಪಾಣಿಗ್ರಹಣ ರೂಪ ಮುಖ್ಯವಿಧಿಯು ಇಂದು ಜಲದೇವತೆಯ ಸಾಕ್ಷಿಯಿಂದ ಪೂರ್ಣವಾಯಿತು. ಅಂದಬಳಿಕ ಈ ದೇಹವಂತು ನಿನ್ನದಾಯಿತು. ನೀನು ನನ್ನನ್ನು ಹೆಂಡತಿಯೆಂದು ಸ್ವೀಕರಿಸು-ಸ್ವೀಕರಿಸದಿರು, ನಾನಂತು ನಿನ್ನ ಹೆಂಡತಿಯಾದೆನು. ನನ್ನ ಪಾಣಿಗ್ರಹಣದ ಅಧಿಕಾರವು ಇನ್ನು ಯಾವ ಪುರುಷನಿಗೂ ಬಾರದು; ಆದರೆ ನನ್ನಷ್ಟೇ ನಿನ್ನಮೇಲೆ ಸ್ವಾಮಿತ್ವವನ್ನು ಸ್ಥಾಪಿಸಿರುವ ಈ ವಿಮಲೆಯು ನಿನ್ನ ತಂಗಿಯಾಗಿರುವದರಿಂದ, ನೀನು ಆಕೆಯ ಪಾಣಿಗ್ರಹಣಮಾಡಿದ್ದು ವ್ಯರ್ಥವಾಗಿ, ದೇವಿಯ ಭವಿಷ್ಯಸೂಚನೆಗೆ ಭಂಗಬಂದಿತಲ್ಲ! ಪ್ರಿಯ ಛತ್ರಸಾಲ, ಇದಕ್ಕಿಂತ ಹೆಚ್ಚಿನ ದುಃಖದ ಸಂಗತಿಯು ಯಾವದಿರುವದು?

ಈ ಮೇರೆಗೆ ನುಡಿಯುವಾಗ ವಿಜಯೆಯ ಕಣ್ಣುಗಳಲ್ಲಿ ನೀರುಗಳು ಬಂದವು. ವಿಜಯೆಯ ಸರಳಹೃದಯವನ್ನೂ, ವಿಮಲದೇವನ ಮೇಲಿನ ಆಕೆಯ ಅಕೃತ್ರಿಮ ಪ್ರೇಮವನ್ನೂ ನೋಡಿ ಛತ್ರಸಾಲನಿಗೆ ಬಹಳ ಆಶ್ಚರ್ಯವಾಯಿತು. ವಿಮಲೆಯು ತನ್ನ ತಂಗಿಯಾಗಿರಲು, ದೇವಿಯ ಭವಿಷ್ಯವು ವ್ಯರ್ಥವಾದದ್ದಕ್ಕಾಗಿ ಆತನಿಗೆ ಅಸಮಾಧಾನವೂ ಆಯಿತು. ಆತನು ವಿಜ

ಯಿಯ ಕೈಹಿಡಿದು—ವಿಜಯೇ, ಈಗ ನಾನು ಬುದ್ಧಿಪೂರ್ವಕ ನಿನ್ನ ಪಾಣಿ ಗ್ರಹಣಮಾಡಿ ನಿನ್ನನ್ನು ನನ್ನ ಅರ್ಧಾಂಗನಾಗಿ ಮಾಡಿಕೊಳ್ಳುತ್ತೇನೆ; ಆದರೆ ಈಗಂತು ನನ್ನ ತಂಗಿಯಾಗಿರುವ ಈ ವಿಮಲೆಯ ವಿಷಯವಾಗಿ ದೇವಿಯ ಭವಿಷ್ಯವು ಅಸಂಭವವಾಗಿ ತೋರುತ್ತಿರುವದು; ಆದರೆ ಬುಂದೇಲಖಂಡವು ಸ್ವತಂತ್ರವಾಗುವವರೆಗೆ ಈ ವಿವಾಹದ ಮಾತೇಕೆ?

ಈ ಮೇರೆಗೆ ನುಡಿಯುತ್ತಿರಲು, ವಿಮಲದೇವನು ಎಚ್ಚತ್ತು ಕಣ್ದೆರೆದು ನಾಲ್ಕೂ ಕಡೆಗೆ ನೋಡಹತ್ತಿದನು. ತನ್ನ ಬಳಿಯಲ್ಲಿ ವಿಜಯೆಯೊಡನೆ ಛತ್ರಸಾಲನು ಕುಳಿತಿರುವದನ್ನು ನೋಡಿ ತನ್ನ ಸ್ತ್ರೀಸ್ವಭಾವಕ್ಕನುಸರಿಸಿ ನಾಚಿ ಚಟ್ಟನೆ ಎದ್ದು ಮರ್ಯಾದೆಯಿಂದ ಕುಳಿತುಕೊಂಡನು. ತಾನು ಹೆಂಗಸೆಂಬದು ಇವರಿಗೆ ತಿಳಿದು ಹೋಗಿರುವದೆಂದು ಆತನು ನಿಶ್ಚಯಿಸಿದನು. ಇದರಿಂದ ಆತನಿಗೆ ಸಮಾಧಾನವೂ ಆಯಿತು. ಅದರಲ್ಲಿ ಛತ್ರಸಾಲನಿಗೆ ತಿಳಿದದ್ದರಿಂದಂತು ಆತನಿಗೆ ಮತ್ತಿಷ್ಟು ಸಮಾಧಾನವಾಯಿತು. ಆತನು ಕೆಲ ಹೊತ್ತು ತಲೆಬಾಗಿ ಕುಳಿತು ಆಲೋಚಿಸಿ--

ವಿಮಲದೇವ—ವಿಜಯೇ, ನಾವಿಬ್ಬರೂ ಪ್ರಾಣಸಂಕಟದಲ್ಲಿರುವಾಗ ಯುವರಾಜ ಛತ್ರಸಾಲನೇ ನಮ್ಮನ್ನು ಬದುಕಿಸಿರಬೇಕು. ಇಲ್ಲದಿದ್ದರೆ ಆತನು ಹೀಗೆ ತೊಯಿಸಿಕೊಳ್ಳಲಿಕ್ಕೆ ಕಾರಣವೇನು? ಈ ಪ್ರಸಂಗದಲ್ಲಿ ನನ್ನ ಸ್ತ್ರೀರೂಪವು ಗೊತ್ತಾದದ್ದೊಂದು ಲಾಭವೇ! ತಂಗೀ, ದೇವಿಯ ಭವಿಷ್ಯವೆಲ್ಲಿಯಾವರೂ ಸುಳ್ಳಾಗಬಹುದೆ? ಪ್ರಿಯ ಛತ್ರಸಾಲ, ನನ್ನ ಪಾಣಿಗ್ರಹಣ ಮಾಡಿದ ನೀನು ನನ್ನ ಪತಿಯಾದೆ! ನನ್ನ ತಾಯಿಯಾದ ಹೀರಾದೇವಿಯ ಒತ್ತಾಯದಿಂದ ಈವರೆಗೆ ಪುರುಷವೇಷವಿಂದಿದ್ದ ನಾನು, ಅಂತರಂಗವಲ್ಲಿ ದುಃಖದಿಂದ ಕೊರಗುತ್ತಿದ್ದೆನು. ಇಂದು ಆ ನನ್ನ ದುಃಖವು ದೂರವಾಯಿತು. ನನ್ನ ಈ ಪ್ರಿಯಸಖಿಯನ್ನು ನಿನ್ನ ನೌಕೆಯಲ್ಲಿ ಕರೆದುಕೊಳ್ಳುವಾಗ ನೀನು ಈಕೆಯ ಪಾಣಿಗ್ರಹಣವನ್ನೂ ಮಾಡಿರಬಹುದು. ಒಂದು ಪಕ್ಷವಲ್ಲಿ ಮಾಡಿರದಿದ್ದರೂ, ಶ್ರೀ ವಿಂಧ್ಯವಾಸಿನಿಯ ಕೊರಳೊಳಗಿನ ಮಾಲೆಯು ನಿನ್ನ ಕೊರಳಲ್ಲಿ ಬಿದ್ದಾಗಲೇ ನಾವಿಬ್ಬರೂ ನಿನ್ನ ಪಾಣಿಗ್ರಹಣ ಮಾಡಿದಹಾಗಾಗಿರುವದು. ಯಾಕೆ ವಿಜಯೇ, ನಾನು ಹೇಳುವದು ನಿಜವಷ್ಟೆ?

ವಿಜಯೆ—ಪ್ರಿಯಸಖೀ, ನಿನ್ನ ಮಾತು ನಿಜವಾದರೆ ಅದಕ್ಕಿಂತಲೂ ಹೆಚ್ಚಿನ ಆನಂದದ ಪ್ರಸಂಗವು ನನ್ನ ಆಯುಷ್ಯದಲ್ಲಿ ಒದಗುವಹಾಗಿಲ್ಲ; ಆದರೆ ನೀನು ಯುವರಾಜ ಛತ್ರಸಾಲನಿಗೆ ತಂಗಿಯಾಗಬೇಕಲ್ಲವೆ?

ವಿಮಲೆ—ನಾನು ಪಹಾರಸಿಂಗರ ಮಗಳಾಗಿದ್ದರಷ್ಟೇ ಯುವರಾಜ ಛತ್ರಸಾಲನ ತಂಗಿಯಾಗುವದು? ನಾನು ಹೀರಾದೇವಿಯ ಹೊಟ್ಟೆಯ ಮಗಳೇ ಅಲ್ಲ! ಕೇವಲ ರಾಜಕಾರಣದಸಲುವಾಗಿ ಹೀರಾದೇವಿಯೂ, ಪಹಾರ ಸಿಂಗನೂ ನನ್ನನ್ನು ಸಂರಕ್ಷಿಸಿ ನನ್ನನ್ನು ಗಂಡುಮಗನೆಂದು ಮಂದಿಗೆ ತೋರಿ ಸುತ್ತಿರುವರು. ಅವರ ಕಾರ್ಯವು ಸಾಧಿಸಿದಬಳಿಕ ನಾನು ಹೆಂಗಸು ಹೆಂಗ ಸಾಗತಕ್ಕವಳೆ! ತಂಗಿ, ದೇವಿಯ ಭವಿಷ್ಯನೆಲ್ಲಿಯಾದರೂ ವ್ಯರ್ಥವಾಗಬ ಹುದೇ? ನಮ್ಮಂಥ ಸತ್ಕುಲಪ್ರಸೂತ ಕ್ಷತ್ರಿಯಕುಮಾರಿಯರಮನಸ್ಸು ಅಯೋ ಗ್ಯಸ್ಥಾನದಲ್ಲಿ ಕುಳಿತು ಕೊಳ್ಳಬಹುದೇನು?

ವಿಜಯೆ (ಆಶ್ಚರ್ಯದಿಂದ)—ಹಾಗಾದರೆ ನೀನು ಯಾರಮಗಳು?

ವಿಮಲೆ—ಅದನ್ನು ನಾನು ಈಗ ಹೇಳಲಾರೆನು. ನಾನು ಒಬ್ಬ ಕ್ಷತ್ರಿಯ ರಾಜಕುಮಾರಿಯೆಂಬದಿಷ್ಟು ಹೇಳುವೆನು. ಹೆಚ್ಚಿಸಮಾತು ಈಗ ಹೇಳುವದು ಹಿತವಲ್ಲ. ಹಾಗೆ ಹೇಳುವದು ನನಗೆ ಯೋಗ್ಯವೂ ಅಲ್ಲ. ವಿಜಯೆ, ಬುಂದೇಲಖಂಡಕ್ಕೆ ಸ್ವಾತಂತ್ರ್ಯಪ್ರಾಪ್ತಿಯಾಗುವವರೆಗೆ ನಾನಂತು ಪುರುಷವೇಷವನ್ನು ಬಿಡುವಹಾಗಿಲ್ಲ. ಈ ಕಾಲವಲ್ಲಿ ಬುಂದೇಲಖಂಡದ ಹೆಂಗಸರು ಗಂಡಸರಾಗಬೇಕಾಗಿದೆ; ಯಾಕಂದರೆ ಅಲ್ಲಿಯ ಗಂಡಸರು ಹೆಂಗ ಸರಾಗಿ ಕೆಲವರು ಸೀರೆ ಉಟ್ಟುಕೊಳ್ಳತೊಡಗಿರುತ್ತಾರೆ, ಕೆಲವರು ನನ್ನ ಹಾಗೆ ಹೊರಗೆ ಗಂಡಸರಾಗಿ ತೋರಿದರೂ ಒಳಗೆ ಹೆಂಗಸರಂತೆ ಇರುತ್ತಾರೆ. ಈಗ ವಿಪರೀತ ಕಾಲವಿರುವದರಿಂದ ನಮ್ಮಂಥ ಹೆಂಗಸರು ಬೈಲಿಗೆ ಬಂದು ದೇಶಕಾರ್ಯದಲ್ಲಿ ಶೀಲವತಿಯರಾಗಿ ದೇಶವನ್ನು ಸವಿಸಬೇಕಾಗಿದೆ. ಅಂದಬಳಿಕ ಈಗ ಲಗ್ನದ ಪ್ರಸಕ್ತಿಯೇಕೆ? ಇಷ್ಟುದಿವಸ ಸಂಶಯವೃತ್ತಿ ಯಲ್ಲಿದ್ದದ್ದರಿಂದ ನಾನು ಕೆಲಸಕ್ಕೆ ಬಾರದಾಕೆಯಾಗಿದ್ದೆನು. ಇನ್ನುಮೇಲೆ ಸ್ವದೇಶೋದ್ಧಾರದ ಕಾರ್ಯದಲ್ಲಿ ಯುವರಾಜ ಛತ್ರಸಾಲನಿಗೆ ವಿಮಲದೇವ ನಿಂದಾಗುವ ಸಹಾಯವನ್ನು ನೋಡು.

ಛತ್ರಸಾಲ—ವಿಮೆಲೆ, ಬಹು ಯೋಗ್ಯಮಾತುಗಳನ್ನಾಡಿದೆ. ನಾವು ರಣದುಲ್ಲಾಖಾನನನ್ನು ಸೆರೆಯಲ್ಲಿಟ್ಟದ್ದರಿಂದ ಕೃಷ್ಣಸರ್ಪವನ್ನು ತುಳಿದು ಸಿಟ್ಟಿಗೆಬ್ಬಿಸಿದಹಾಗಾಗಿರುತ್ತದೆ. ಇಂದಿಲ್ಲ ನಾಳೆ ಬಾದಶಹನು ಈ ಸುದ್ದಿಯು ಕೇಳಿ ದೊಡ್ಡಸೈನ್ಯದೊಡನೆ ನಮ್ಮಮೇಲೆ ಸಾಗಿಬರತಕ್ಕವನೇ! ಅಷ್ಟರಲ್ಲಿ ನಾವು ಒಕ್ಕಟ್ಟಿನಿಂದ ಯುದ್ಧಕ್ಕೆ ಸಿದ್ಧರಾಗಿರಬೇಕಾಗುವದು.

೬ನೆಯ ಪ್ರಕರಣ- ರೋಷನಾರ ಬೇಗಮೆ.

ದಿಲ್ಲಿಯು ಮೊಗಲ ಬಾದಶಹರ ರಾಜಧಾನಿಯು; ಐಶ್ವರ್ಯಮದದಿಂದ ಅದು ಮತ್ತವಾಗಿ ಹೋಗಿದೆ. ಅದರಲ್ಲಿಯ ಅನಾಚಾರ, ವ್ಯಸನ, ಆಲಸ್ಯ ಗಳ ಮಿತಿಯು ಇಲ್ಲದಾಗಿದೆ. ಅದರ ವಿಷಯ ಲಂಪಟತೆಯ ನೆಲೆಯು ಹತ್ತುವ ಹಾಗಿಲ್ಲ. ಆ ದಿಲ್ಲೀ ಪಟ್ಟಣವು ಮಹತ್ವಾಕಾಂಕ್ಷೆಯ ಬಲೆಗೆ ಬಿದ್ದು ಈವೊತ್ತಿನವರೆಗೆ ಮಾಡುತ್ತ ಬಂದಿರುವ ಅನಾಚಾರಗಳನ್ನು ಮನಸ್ಸಿನಲ್ಲಿ ತಂದರೆ, ಅವರ ಖೋಡಿ ಗುಣವು ಗೊತ್ತಾಗುವದು! ಅದು ದುರ್ಯೋಧನನ ಮನಸ್ಸು ಕೆಡಿಸಿ, ಐದು ಊರುಗಳಿಂದ ಸಂತುಷ್ಟರಾಗಿರುವೆವೆಂದು ಹೇಳಿ ಕಳಿಸಿರುವ ಪಾಂಡವರಿಗೆ ಸೂಜಿಯ ತುದಿಗೆ ಹತ್ತುವಷ್ಟು ಮಣ್ಣನ್ನು ಕೊಡಲಿಕ್ಕಿಲ್ಲವೆಂದು ಆತನ ಬಾಯಿಂದ ಸೊಕ್ಕಿನ ಮಾತು ಆಡಿಸಿ, ರಕ್ತದ ಕಾಲಿವೆ ಹರಿಸಿದ್ದು ಈ ದಿಲ್ಲಿಯೆ! ಕನೋಜದ ಜಯಚಂದ ರಾಠೋಡನ ಮಧ್ಯಸ್ಥಿಯಿಂದ ಪೃಥ್ವೀರಾಜ ಚಹ್ವಾಣನಂಥ ತನ್ನ ವೀರಾಧಿವೀರ ಪತಿಯನ್ನು ಶಾಬುದ್ದೀನ ಘೋರಿಯಿಂದ ಕೊಲ್ಲಿಸಿ ತನ್ನ ಹಣೆಯ ಕುಂಕುಮವನ್ನು ತನ್ನ ಕೈಯಿಂದಲೇ ಅಳಿಸಿಕೊಂಡು ಮುಸಲ್ಮಾನ ಸ್ತ್ರೀಯಾದದ್ದು ಈ ದಿಲ್ಲಿಯೆ! ಹೀಗೆ ಮುಸಲ್ಮಾನ ಸ್ತ್ರೀಯಾದ ಬಳಿಕ ಮಾಡಿದ ದಿಲ್ಲಿಯ ಅನಾಚಾರಗಳನ್ನೆಂತು ವರ್ಣಿಸಲಾಸಲ್ಲ! ಮನುಷ್ಯ ವಧ, ರಕ್ತಪಾತ, ಕೊಲೆ ಇವು ಆಗಿನ ದಿಲ್ಲಿಯ ಆಟಗಳಾದವು. ವಜೀರರು ತಮ್ಮ ಸೇವಕ ಭಾವವನ್ನೂ, ಬಂಧುಗಳು ತಮ್ಮ ಬಂಧುಪ್ರೇಮವನ್ನೂ, ತಂದೆಯಾದವರು ಮಕ್ಕಳೆಂಬ ಮರುಕವನ್ನೂ, ಮಕ್ಕಳು ತಂದೆಯೆಂಬ ಗೌರವವನ್ನೂ ಬಿಟ್ಟು ತನ್ನ ಕೈ ಹಿಡಿಯುವಂತೆ ಆಗಿನ ಕೆಟ್ಟ ದಿಲ್ಲಿಯು ಅವರಿಗೆ ಮೋಹದ ಬಲೆಯನ್ನು ಬೀಸಿತು! ಅತ್ಯಂತ ವಿಲಾಸ ಪ್ರಿಯನಾದ ತನ್ನ ಪತಿ ಶಹಾಜ

ಹಾನನು ಸ್ವಲ್ಪ ಮುದುಕನಾಗಲು, ಕೂಡಲೆ ಅನಾಚಾರಿಯಾದ ದಿಲ್ಲಿಯು ಆತನ ಮಗ ಔರಂಗಜೇಬನ ಕೈಯಿಡಿದು ಆತನ ಕೈಯಿಂದ ತನ್ನ ವೃದ್ಧ ಪತಿಯನ್ನು ಸೆರೆಯಲ್ಲಿ ಹಾಕಿಸಿ, ತನ್ನ ಯಾನತ್ತು ಭಾವಮೈದುನರನ್ನು ಕೊಲ್ಲಿಸಿ ಕಪಟಿಯೂ, ಸ್ವಾರ್ಥ ಸಾಧುವೂ, ದಾಂಭಿಕನೂ ಆದ ಔರಂಗಜೇಬನೊಡನೆ ರಮಿಸತೊಡಗಿತು; ಆದರೆ ಆ ದಿಲ್ಲಿಯ ಮನಸ್ಸನ್ನು ಆ ಔರಂಗಜೇಬನಲ್ಲಾದರೂ ಆಸಕ್ತವಾಯಿತೇನು? ಇಲ್ಲ ಇಲ್ಲ! ಔರಂಗಜೇಬನು ಬೇನೆಯಿಂದ ಹಾಸಿಗೆ ಹಿಡಿಯಲು, ತನ್ನ ಪತಿಯೆಂಬ ಎಚ್ಚರವಿಲ್ಲದೆ, ಆ ಔರಂಗಜೇಬನ ಪ್ರೀತಿಯ ತಂಗಿಯಾದ ರೋಷನಾರಳ ಕೈಯಿಂದ ಔರಂಗಜೇಬನನ್ನು ಕೊಲ್ಲಿಸಬೇಕೆಂದು ಯತ್ನ ನಡಿಸಿರುವದನ್ನು ನೋಡಿದರೆ, ಈ ಕೆಟ್ಟ ದಿಲ್ಲಿಯ ನೆರಳು ಬೇಡೆಂದು ಯಾರಾದರೂ ಅಂಜಬಹುದಾಗಿದೆ!

ರೋಷನಾರಾ ಬೇಗಮಳು ಅತ್ಯಂತ ಚಂಚಲಳು, ಕ್ರೂರಸ್ವಭಾವದವಳು, ಮನಸ್ಸಿಗೆ ಬಂದಂತೆ ನಡೆಯುವವಳು, ಯಾರ ಅಧಿಕಾರಕ್ಕೂ ಒಗ್ಗಾದವಳು ಇದ್ದಳು. ಆಕೆಯೇ ಔರಂಗಜೇಬನಿಗೆ ದಿಲ್ಲಿಯ ಪಟ್ಟವನ್ನು ಸಾಧ್ಯವಾಡಿ ಕೊಟ್ಟಿದ್ದರೂ, ಆ ಮಹತ್ವಾಕಾಂಕ್ಷಿಯಾದ ಸ್ತ್ರೀಯು ಈಗ ಬೇನೆಯಿಂದ ಮಲಗಿದ್ದ ತನ್ನ ಅಣ್ಣ ಔರಂಗಜೇಬನನ್ನು ಕೊಲ್ಲಿಸಿ, ದಿಲ್ಲಿಯ ಸಾರ್ವಭೌಮಾಧಿಕಾರವನ್ನು ತಾನು ಸಾಧಿಸಬೇಕೆಂದು ಮಾಡಿದ್ದಳು. ಔರಂಗಜೇಬನ ಹಾಸಿಗೆಯ ಬಳಿಯಲ್ಲಿ ಕುಳಿತಿದ್ದ ಆದುಷ್ಟಳು ತನ್ನಮುಂದೆ ಗದಗುಟ್ಟಿ ನಡಗುತ್ತ ಕುಳಿತಿದ್ದ ರಾಜವೈದ್ಯನನ್ನು ಕುರಿತು ಗರ್ಜಿಸಿ—

ರೋಷನಾರ—ನಿನ್ನ ಈಆಟವು ಇನ್ನೂ ಎಷ್ಟುದಿವಸ ನಡೆಯಬೇಕು? ನೀನು ರಾಜವೈದ್ಯನು, ದಿಲ್ಲಿಯ ದರ್ಬಾರಿನ ವೈದ್ಯನು, ಎಂತಹ ಹೊತ್ತಿನಲ್ಲಿ ಎಂತಹ ತೀಕ್ಷ್ಣ ಔಷಧ ಬೇಕಾಗುತ್ತದೆಂಬದು ನಿನಗೆ ಗೊತ್ತಿರುತ್ತದೆ. ಈ ಹಿರೆಗಿನ ದಿಲ್ಲಿಯ ದರ್ಬಾರಿನ ಸಾಂಪ್ರದಾಯವನ್ನು ನೀನು ಅರಿಯದವನಲ್ಲ. ನಿಮ್ಮನ್ನು ದುಡ್ಡು ಕೊಟ್ಟು ಇಟ್ಟಿರುವದು ಯಾತಕ್ಕೆ? ಮಾತಾಡು; ಈಗ ಎರಡು ಸಪ್ತಕಗಳಿಂದ ಔಷಧ ಕೊಡುತ್ತಿದ್ದರೂ ಔರಂಗಜೇಬನು ಇನ್ನೂ ಯಾಕೆ ಸಾಯಲೊಲ್ಲನೆಂಬದನ್ನು ಸ್ಪಷ್ಟವಾಗಿ ಹೇಳು.

ಹಕೀಮ (ಅತ್ಯಂತ ಆರ್ಜವ ವೃತ್ತಿಯಿಂದ)— ಬೇಗಮ ಸಾಹೇಬ, ಕಹಾನಶಹಾ ಅಲಮಗೀರ ಬಾದಶಹಾ.....

ರೋಷನಾರ—ಬಾಯಿಮುಚ್ಚು! ಅಲಸುಗೀರನ ಹಿಂದೆ ಶಹಾನಶಹಾ ಎಂಬ ಬಿರುದನ್ನು ಜೋಡಿಸಬೇಡ. ಆ ಶಬ್ದವನ್ನು ನೀನು ಪುನಃ ಉಚ್ಚರಿಸಿದರೆ ನಿನ್ನ ನಾಲಿಗೆಯನ್ನು ಚೂರು ಚೂರು ಮಾಡೇನು. ನಿನ್ನೊಡನೆ ಒಂದು ಕ್ಷಣ ಮಾತಾಡಬೇಕೆಂದು ಇಚ್ಛಿಸುತ್ತೇನೆ, ನನ್ನ ಆ ಇಚ್ಛೆಯು ಪೂರ್ಣವಾಗುವದರೊಳಗೇ ನಿನ್ನ ಶಿರಚ್ಛೇದಕ್ಕಾಗಿ ಅಪ್ಪಣೆ ಕೊಡುವಷ್ಟು ನನ್ನನ್ನು ಸಿಟ್ಟಿಗೆಬ್ಬಿಸಬೇಡ!

ಹಕೀಮ—ಏನು? ನನ್ನ ಮಾತು ಪೂರಾ ಕೇಳಿಕೊಂಡ ಬಳಿಕ ನನ್ನನ್ನು ಕೊಲ್ಲುವದಕ್ಕಾಗಿ ಅಪ್ಪಣೆಕೊಡುವಿರಾ?

ರೋಷನಾರ—ಹೌದು. ಇಂದು ನಾನು ನಿನ್ನನ್ನು ಅಲ್ಲಾನ ಕಡೆಗೆ ಕಳಿಸುವ ನಿಶ್ಚಯನಮಾಡಿರುತ್ತೇನೆ.

ಹಕೀಮ (ಶಾಂತವುದ್ರೆಯಿಂದ)—ನನ್ನನ್ನು ಕೊಲ್ಲಿಸುವ ಕಾರಣವೇನು?

ರೋಷನಾರ—ನನ್ನ ಅಪ್ಪಣೆ ವಿೀರಿದ್ದರಿಂದ! ನೀನು ವಿಷಗದಿಂದ ಬಾದಶಹನನ್ನು ಯಾಕೆ ಕೊಲ್ಲಲಿಲ್ಲ?

ಹಕೀಮ—ಇಪೆಂತಪ ನಿನ್ನ ಕೊಳಕ
ದಾತೃವನ್ನು, ಸದ್ಧರ್ಮ ಪ್ರತಿಪಾ

ರೋಷನಾರ—ಹಕೀ

ಹಕೀಮ—ಆ
ಬಾದಶಹನ ಬ
ಬಾಯಿಂದ
ಗಿರುವವ

ಒಂದು
ವನ್ನು
ಕಿಡಿಗಳು
ಬಾ,"ಎ

ವೆಂಬದು ಹಕೀಮನಿಗೆ ಗೊತ್ತಿತ್ತು. ಇನ್ನು ತನ್ನ ಆಯುಷ್ಯವು ಒಂದೆರಡು ಗಳಿಗೆಯದೆಂದು ಆತನು ತಿಳಿದುಬಿಟ್ಟಿದ್ದನು; ಆದರೂ ಆ ಸ್ವಾಮಿನಿಷ್ಠನ ಮುಖದಲ್ಲಿ ಸ್ವಲ್ಪವಾದರೂ ಚಿಂತೆಯ ಚಿಹ್ನವು ತೋರಲಿಲ್ಲ. ಅಷ್ಟರಲ್ಲಿ ಗೋಡೆಯ ಒಂದು ಗುಪ್ತ ಬಾಗಿಲು ಪಕ್ಕನೆ ತೆರೆದು ಒಬ್ಬ ಕ್ರೂರ ಮನುಷ್ಯನು ರೋಷನಾರಳ ಎದುರಿಗೆ ಬಂದು ನಿಂತನು. ಆಗ ರೋಷನಾರಳು ಸಂತಾಪದಿಂದ ಉದ್ಗರಿಸುತ್ತ—"ಸೈತಾನ, ಈ ಹಕೀಮನನ್ನು ಎಳೆಹೊಯ್ದು ಜೀವವಿರುವಾಗಲೇ ಹುಚ್ಚ ನಾಯಿಗಳಿಂದ ಈತನನ್ನು ಹರಿದು ತಿನ್ನಿಸು," ಎಂದು ಅಪ್ಪಣೆ ಕೊಡಲು ಹಕೀಮನು—"ದುಷ್ಟ ಸ್ತ್ರೀಯೇ, ನಿನ್ನ ಈ ಕ್ರೂರ ಅಪ್ಪಣೆಗೆ ನಾನು ಜೆಪಸುತ್ತೇನೆಂದು ತಿಳಿದಿರುತ್ತೀಯಾ? ಇಂದಿಲ್ಲ ಇನ್ನು ಹತ್ತು ವರ್ಷಗಳ ಮೇಲಾದರೂ ನಾನು ಅಲ್ಲಾನ ಬಳಿಗೆ ಹೋಗುವವನು! ಅಂದ ಬಳಿಕ ಆ ದೀನಪರಿಪಾಲನ ಬಳಿಗೆ ಇಂದೇ ಹೋಗಲಿಕ್ಕೆ ನಾನೇಕೆ ಅಂಜಲಿ? ನಿನ್ನಂಥ ನರರಾಕ್ಷಸಿಗೆ ನಾನೇಕೆ ತಲೆಬಾಗಿಸಲಿ? [illegible] ಸ್ತ್ರೀಯಿಂದಲೂ, ಪ್ರಾಮಾಣಿಕತನದಿಂದಲೂ, ಧರ್ಮ-ಶ್ರದ್ಧೆ [illegible] ಮಾಡಿಕೊಂಡಿರುವ ನಾನು ಅಲ್ಲಾನ ಬಳಿಗೆ ಹೋಗಲಿಕ್ಕೆ ಏಕೆ [illegible] ನಡೆ.

[illegible] ಂಡು ಹೋಗಲು, ಇತ್ತ ರೋಷ
[illegible] ಗೆ ಬಾದಶಹನನ್ನು ಕೊಲ್ಲ
[illegible] ರಾಸನವು ನನಗೆ
[illegible] ಲಿಕ್ಕೆ ಅಧಿಕಾ
[illegible] ರಿದ ಬಳಿಕ
[illegible] ನ ಕಾಲ
ಕೀರನು
[illegible] ಎಲ್ಲ
ದರ್ಬಾ
ವಿಲಾಸ,
ಕೋರೆಯು
ನನ್ನ

ತಂದೆಯಾದ ಶಹಾಜಹಾನನು ಇಷ್ಟುಮುದುಕನಾಗಿದ್ದರೂ ಅವನ ವಿಲಾಸವು ಕಡಿಮೆಯಾಗಿಲ್ಲ. ನಮ್ಮ ಅಜ್ಜನಾದ ಸೇಲೀಮನು ನೂರಜಹಾನಳ ಪ್ರಾಪ್ತಿಗಾಗಿ ಆಕೆಯ ಗಂಡನನ್ನು ಕೊಲ್ಲಿಸಿದನು! ಅಂತಹ ವಿಲಾಸವು ಈಗೆಲ್ಲಿ ಉಳಿದಿದೆ? ಇನ್ನು ನಾನು ದಿಲ್ಲಿಯ ಸಿಂಹಾಸನವನ್ನು ಆಕ್ರಮಿಸಿ ವಿಲಾಸವನ್ನು ಹೆಚ್ಚಿಸುವೆನು. ಇದಕ್ಕಾಗಿ ಇನ್ನೊಬ್ಬ ವೈದ್ಯನನ್ನು ಕರೆಸಿ ಬಾದಶಹನಿಗೆ ವಿಷಪ್ರಯೋಗಮಾಡಿಸಿ ಕೂಡಲೆ ಆ ವೈದ್ಯನನ್ನು ಕೊಂದುಬಿಟ್ಟರಾಯಿತು!

ಈಮೇರೆಗೆ ಆಲೋಚಿಸಿ ದೋಷನಾರಳು ತನ್ನ ವಿಶ್ವಾಸದ ದಾಸಿಯಾದ ಬಿಜಲಿಯನ್ನು ಕರೆದು— ಬಿಜಲೀ, ಹೋಗು, ಪಟ್ಟಣದೊಳಗಿನ ಒಬ್ಬ ಶ್ರೀಮಂತ ಹಕೀಮನನ್ನು ಕರಕೊಂಡು ಬಾ. ಇಲ್ಲದಿದ್ದರೆ ಯಾವನಾದರೂ ಒಬ್ಬ ಬಡ ಹಕೀಮನನ್ನು ಕರಕೊಂಡು ಬಂದೀ! ಬಡವರಿಗೆ ಮುಷ್ಟಿನ ಬೆಲೆಯೇ ಗೊತ್ತಿರುವದಿಲ್ಲ! ಅವರು ನೀತಿ-ಧರ್ಮ-ಸ್ವಾಮಿನಿಷ್ಠೆ-ಸತ್ಯ ಇತ್ಯಾದಿ ರಗಳೆಗೆ ಬಿದ್ದು ನಮ್ಮ ದರ್ಬಾರದಹಕೀಮನಂತೆ ಕೆಲಸವನ್ನು ಕೆಡಿಸಿಬಿಡುವರು. ನೀನು ಕರಕೊಂಡು ಬರುವ ಹಕೀಮನಿಗೆ ಮುಷ್ಟೀಧರ್ಮನಾಗಿರಬೇಕು, ಮುಷ್ಟೀ ನ್ಯಾಯವಾಗಿರಬೇಕು, ಮುಷ್ಟೀ ನೀತಿಯಾಗಿರಬೇಕು. ಇಂಥ ಧನಾಢ್ಯ ಹಕೀಮನನ್ನು ಕರಕೊಂಡು ಬಾ. ಒಪ್ಪಿಗೆ ಮುಷ್ಟಿನ ಆಶೆಯಿಂದ ಮುಂದಿಯನ್ನು ಎಗ್ಗಿಲ್ಲದೆ ಕೊಲ್ಲುವ ಹಕೀಮನಿರಬೇಕು ನೋಡು! ನಡೆ, ಒಂದು ಕ್ಷಣವೂ ವಿಲಂಬಮಾಡಬೇಡ, ಎಂದು ಆಜ್ಞಾಪಿಸಲು, ಬಿಜಲಿಯು "ಆಜ್ಞೆಯೇ ಪ್ರಮಾಣವು" ಎಂದು ನುಡಿದು ಹೊರಟು ಹೋದಳು. ಅಷ್ಟರಲ್ಲಿ ಘಾತಿನಿಯೆಂಬ ದ್ವಾರರಕ್ಷಕಳು ಬಂದು ಕುರ್ನಿಸಾತ ಮಾಡಿ—

ಘಾತಿನಿ— ಜನಾನಖಾನೆಯ ಮುಖ್ಯಾಧಿಕಾರಿಯಾದ ಖೋಲಾದ ಖಾನರು ತಮಗೆ ವಿಜ್ಞಾಪಿಸಲು ನನ್ನನ್ನು ಕಳುಹಿದ್ದಾರೆ.

ದೋಷನಾರ (ಆಶ್ಚರ್ಯತೆಯಿಂದ)—ಅವೇನು ವಿಜ್ಞಾಪನೆಯು?

ಘಾತಿನಿ—ಒಬ್ಬ ಹಿಂದೂ ರಾಜನು ತಮ್ಮ ದರ್ಶನಕ್ಕಾಗಿ ಹೊರಗೆ ಕಾದಿರುವನಂತೆ.

ದೋಷನಾರ—ಛೆ! ಈ ಹೊತ್ತಿನಲ್ಲ ನಾನು ಯಾವ ಪುರುಷನನ್ನೂ ಕಾಣಲಾಗುವದಿಲ್ಲ. ಇತ್ತ ಆ ಕನ್ನಡಿ ತೆಗೆದುಕೋ ನೋಡೋಣ? (ಕನ್ನಡಿ

ನೋಡಿಕೊಂಡು) ಛೆ! ಈಗ ನಾನು ಆ ರಾಜನನ್ನು ಕಾಣುವ ಹಾಗಿಲ್ಲ. ನಾನು ಮೈತೊಳಕೊಂಡು ಶೃಂಗಾರವಾದ ಬಳಿಕ ಆ ಬಿಲೋಚಿಯ ದಿವಾಣ ಖಾನೆಯಲ್ಲಿ ಆತನನ್ನು ಕರೆದುಕೊಂಡು ಬಾ. ಫಾತಿಮೇ ನನ್ನನ್ನು ಕಾಣಬೇಕೆಂದಿರುವರಾಜನ ಹೆಸರೇನು ಕೇಳಿರುವೆಯೋ?

ಫಾತಿಮೆ—ಕೇಳಿರುವೆನು, ಬಂದಿರುವವನು ಧಾರೀರದ ಅರಸನಾದ ಕಂಚುಕೀರಾಯನು.

ರೋಷನಾರ—ಹೋಗು, ಆ ಮುದುಕನನ್ನು ನಾನು ಕಾಣುವದಿಲ್ಲ ವೆಂದು ಅವನಿಗೆ ಹೇಳು. ಇಂಥ ಮುದಿಹದ್ದುಗಳನ್ನು ನೋಡಿದಾಗ ನನ್ನ ಮನಸ್ಸಿಗಾದ ಅಸ್ವಸ್ಥತೆಯು ಮುಂದೆ ತಾಸೆರಡುತಾಸು ಹೋಗುವದೇ ಇಲ್ಲ.

ಫಾತಿಮೆ—ಸರಕಾರ, ಮುದುಕರು ಅಸ್ವಸ್ಥತೆಯನ್ನು ಉಂಟುಮಾಡುವಂತೆ ಮನೋರಂಜನವನ್ನೂ ಉಂಟುಮಾಡುತ್ತಾರೆ.

ರೋಷನಾರ—ಹೀಗೋ? ಹಾಗಾದರೆ ಆ ಮುದುಕನನ್ನು ಕಳಿಸು.

ಫಾತಿಮೆಯು ಹೋದ ಸ್ವಲ್ಪಹೊತ್ತಿನಲ್ಲಿ ಕಂಚುಕೀರಾಯನು ರೋಷನಾರಳ ಬಳಿಗೆ ಬಂದನು. ಆತನನ್ನು ನೋಡಿ ರೋಷನಾರಳು ಒಂದೇಸವನೆ ನಗತೊಡಗಿದಳು. ಬೇಗಮಸಾಹೇಬರು ಒಳ್ಳೇ ಆನಂದದಲ್ಲಿರುವದೊಂದು ತನ್ನ ಕಾರ್ಯಕ್ಕೆ ಅನುಕೂಲವೆಂದು ಕಂಚುಕೀರಾಯನು ಮನಸ್ಸಿನಲ್ಲಿ ಹಿಗ್ಗಿದನು. ಆತನು ಬಹುವಿನಯದಿಂದ ರೋಷನಾರಳಿಗೆ ಕುರ್ನಿಸಾತಮಾಡಿ ಒಕಯನ್ನು ಕುರಿತು—" ಸಕಲ ಗುಣಸಂಪನ್ನ ಐಶ್ವರ್ಯಶಾಲಿನಿಯೂ, ಇಹಲೋಕದ ಅಮರಾವತಿಯ ಅನಭಿಷಿಕ್ತ ಇಂದ್ರಾಣಿಯೂ ಆದ ರೋಷನಾರಬೇಗಮ ಸಾಹೇಬರವರ ಎರಡೂ ಚರಣಗಳನ್ನು ಮಸ್ತಕದಲ್ಲಿಟ್ಟುಕೊಂಡು ಈ ದಾಸಾನುದಾಸನು ಬೇಡಿಕೊಳ್ಳುವದೇನಂದರೆ—

ಈ ಮೇರೆಗೆ ನುಡಿಯಲು, ರೋಷನಾರಬೇಗಮೆಯು ಬಿದ್ದುಬಿದ್ದು ನಗತೊಡಗಿದಳು. ಏನುಮಾಡಿದರೂ ಆಕೆಯ ನಗೆಯು ನಿಲ್ಲಲೊಲ್ಲದು. ಆ ಇಂದ್ರಾಣಿಯ ನಗೆಯು ನಿಲ್ಲುವವರೆಗೆ ಕಂಚುಕೀರಾಯನು ಮಾತಾಡುವ ಹಾದರೂ ಹೇಗೆ? ಆತನು ಕೈಜೋಡಿಸಿ ನಿಂತುಕೊಂಡುಬಿಟ್ಟನು. ರೋಷನಾರಳು ಹೊಟ್ಟೆತುಂಬ ನಕ್ಕು ಕಂಚುಕೀರಾಯನನ್ನು ಕುರಿತು—

ದೋಷನಾರ—ಕಂಚುಕಿರಾಯ, ನೀನು ಇಲ್ಲಿ ಇರುವಾಗಿನದಕ್ಕಿಂತ ಈಗ ಏನೋ ವಿಲಕ್ಷಣವಾಗಿ ಕಾಣುತ್ತಿರುವೆಯಲ್ಲ? ನಮ್ಮಲ್ಲಿರುವಾಗ ಈ ಬೆಳ್ಳಿಯ ಗಡ್ಡವಿನ್ನಾಸೆಗಳು ನಿನಗೆ ಇದ್ದಿಲ್ಲ. ನೀನು ಅರಸನಾದಬಳಿಕ ಇವನ್ನು ವಾಡಿಸಿಕೊಂಡಂತೆ ಕಾಣುತ್ತದೆ; ನಿನ್ನ ಈ ಒಚ್ಚಟಾಯನ್ನೂ, ಪಚ್ಚುಬಿದ್ದ ಗಲ್ಲಗಳನ್ನೂ, ಒಳನಟ್ಟ ಕಣ್ಣುಗಳನ್ನೂ ನೋಡಿ ನನಗೆ ಬಹಳ ಅಸಹ್ಯವಾಗುತ್ತದೆ. ಇಂತಹ ಅಂಜಿಕೆಬರುವ ಮೋರೆಯನ್ನು ತಕ್ಕೊಂಡು ನನ್ನಮುಂದೆ ಯಾಕೆಬಂದೆ? ನಿಮ್ಮಂಥ ಮುದುವರಿಗೆ ಮುಂದಿಯಮುಂದೆ ತಿರುಗಾಡಲಿಕ್ಕೆ ನಾಚಿಕೆ ಬರುವದಿಲ್ಲವೆ?

ಕಂಚುಕಿರಾಯ—ಬೇಗಮಸಾಹೇಬರ ಮಾತು ನಿಜವ್ರ. ಬೇಗಮ ಸಾಹೇಬರಿಗೆ ತ್ರಾಸವಾಗುವಂತೆ ನಾವು ಬರಬಾರದು; ಆದರೆ ಒಂದು ರಾಜ ಕಾರಣದ ಸೂಕ್ಷ್ಮಕೆಲಸಕ್ಕಾಗಿ ಬರಬೇಕಾಯಿತು.

ದೋಷನಾರ (ಆವೇಶದಿಂದ)—ರಾಜಕಾರಣ? ನಿಮ್ಮ ಹಿಂದೂ ಜನರಿಗೆ ರಾಜಕಾರಣದಲ್ಲಿ ಅಧಿಕಾರವೆಲ್ಲಿದೆ? ಬಾದಶಹರೂ, ಅವರ ಜಾತಿಯವರೂ ರಾಜಕಾರಣಗಳನ್ನು ನಡಿಸಬಹುದು. ಉಳಿದವರು ರಾಜಕಾರಣವನ್ನು ನಡಿಸಿದರೆ ಬಾದಶಹರಿಗೆ ಸಹನವಾಗದು.

ಕಂಚುಕಿರಾಯ—ಸರಕಾರ, ಈ ದಾಸಾನುದಾಸನ ಮೇಲೆ ಹೀಗೆ ಸಿಟ್ಟಾಗಬಾರದು. ದಿಲ್ಲಿಯ ಬಾದಶಹರ ಯಾವತ್ತು ಮಾಂಡಲಿಕ ರಾಜರಲ್ಲಿ ರಾಜನಿಷ್ಠೆಯ ಸಂಬಂಧದಿಂದ ಈ ಕಂಚುಕಿರಾಯನು ಅಗ್ರಗಣ್ಯನಾಗಿರುವನು. ನನ್ನ ಶ್ರೇಷ್ಠ ಸೇವಾ ಧರ್ಮಕ್ಕೆ ಮೆಚ್ಚಿಯೇ ನಿಮ್ಮ ತಂದೆಯವರು ನನಗೆ "ಕಂಚುಕಿರಾಯ" ಎಂಬ ಹೆಸರನ್ನು ಕೊಟ್ಟಿದ್ದಾರೆ; ಆದರೆ ಏನು ಮಾಡಬೇಕು, ನೋಡಬಾರದ್ದನ್ನು ನೋಡುವ ಪ್ರಸಂಗ ಬಂದದ್ದರಿಂದ ತಮ್ಮ ಚರಣಗಳ ದರ್ಶನಕ್ಕೆ ಬರಬೇಕಾಯಿತು.

ದೋಷನಾರ—ಈ ಅಳಬುರುಕ ರಗಳೆಯನ್ನು ನನ್ನ ಮುಂದೆ ಕೊಚ್ಚಬೇಡ. ಯಾವನಾದರೂ ಒಬ್ಬ ಮಹಮ್ಮದೀಯ ವೀರನು ನಿನ್ನ, ಅಥವಾ ನಿನ್ನ ಪ್ರಜೆಗಳ ಸಂಪತ್ತನ್ನು ಎತ್ತಿ ಹಾಕಿರಲು, ಅದನ್ನು ತಿಳಿಸುವದಕ್ಕಾಗಿ ನೀನು ನನ್ನ ಬಳಿಗೆ ಬಂದಿರಬಹುದು; ಆದರೆ ಈ ವಿಷಯವನ್ನು ದಿಲ್ಲಿಯ

ದರ್ಬಾರವು ವಿಚಾರಿಸಲಾರದು; ಯಾಕಂದರೆ ನಿಮ್ಮ ಹಿಂದೂ ಅರಸರ ಸಂಪತ್ತಿಯು ನಮ್ಮದೇ ಇದ್ದು, ನಿಮ್ಮನ್ನು ಅದರ ರಕ್ಷಕರಾಗಿ ಇಟ್ಟಿರುವೆವೆಂಬ ಭಾವನೆಯು ನಮ್ಮಲ್ಲಿ ದೃಢವಾಗಿರುತ್ತದೆ! ಅಂತೇ ನಿಮ್ಮ ಸಂಪತ್ತನ್ನು ಯಾವಾಗ ಕರದ ರೂಪದಿಂದ, ಯಾವಾಗ ಕಾಣಿಕೆಯ ರೂಪದಿಂದ, ಯಾವಾಗ ಬೇರೊಂದುಕಾರಣದಿಂದ ನಾವು ನಮ್ಮ ಭಾಂಡಾರಕ್ಕೆ ಸೇರಿಸಿಕೊಳ್ಳುತ್ತಿರುವೆವು.

ಕಂಚುಕಿರಾಯ—ಸರಕಾರ, ನನ್ನ ರಾಜ್ಯದ ಸಂಪತ್ತಿಯು ದಿಲ್ಲಿಯ ದರ್ಬಾರದ ಚರಣಕ್ಕೆ ಅರ್ಪಿಸಿದ್ದಾಗಿರುತ್ತದೆ. ಅದಕ್ಕಾಗಿ ರಗಳೆಮಾಡುವನು ಈ ಕಂಚುಕಿರಾಯನಲ್ಲ.

ದೋಷನಾರ (ಮುಗುಳು ನಗೆ ನಗುತ್ತ ಕಣ್ಣು ಚಿವುಟುತ್ತ)—ಹಾಗಾದರೆ ಯಾವನಾದರೂ ಯವನ ಬಾಹದ್ದರನು ನಿನ್ನ ಹೆಂಡತಿಯೊಡನೆ, ಅಥವಾ ತಂಗಿಯೊಡನೆ, ಅಥವಾ ನಿನ್ನ ಮಗಳೊಡನೆ ಬಲಾತ್ಕಾರದಿಂದ ನಿಕಾ ಮಾಡಿಕೊಂಡಿರಬಹುದು; ಹಾಗಿದ್ದರೆ ಅದನ್ನೂ ದಿಲ್ಲಿಯ ದರ್ಬಾರವು ವಿಚಾರಮಾಡುವದಿಲ್ಲ; ಯಾಕಂದರೆ ದಿಲ್ಲಿಯ ಬಾದಶಹರ ಅಧಿಕಾರದೊಳಗಿನ ಪ್ರದೇಶದಲ್ಲಿರುವ ಸೌಂದರ್ಯವತಿಯರಾದ ತರುಣಿಯರಿಗೆ ಬಾದಶಹರ, ಅಥವಾ ಅವರ ಯವನಾಧಿಕಾರಿಗಳ ಉಪಪತ್ನಿಗಳಾಗುವ ಬಹುಮಾನ ಕೊಡುವ ಸಾಂಪ್ರದಾಯವು ದಿಲ್ಲಿಯದರ್ಬಾರದಲ್ಲಿ ಬಹುದಿವಸದಿಂದ ನಡೆದು ಬಂದಿರುತ್ತದೆ. ಇಂತಹ ಬಹುದಿವಸದ ಹಕ್ಕನ್ನು ರಕ್ಷಿಸುವದು ನಮ್ಮ ಶ್ರೇಷ್ಠ ಕರ್ತವ್ಯವೆಂದು ನಾವು ತಿಳಿದಿರುವೆವು!

ಕಂಚುಕಿರಾಯ—ಜೀಗಮುಸಾಹೇಬ, ಅರ್ಧ ಆಯುಷ್ಯವನ್ನು ಬಾದಶಹರ ಜನಾನಖಾನೆಯಲ್ಲಿ ಕಳೆದಿರುವ ಕಂಚುಕಿರಾಯನಿಗೆ ಈ ಮಾತು ಗೊತ್ತಿಲ್ಲವೆ? ನನ್ನ ಹೆಂಡಿರು ಮಕ್ಕಳ ಮೇಲೆ ದಿಲ್ಲಿಯ ದರ್ಬಾರದ ಕೃಪಾದೃಷ್ಟಿಯಾದರೆ ನನ್ನನ್ನು ಧನ್ಯನೆಂದು ತಿಳಿದೇನು! ಆದರೆ ಅಂತಹ ಭಾಗ್ಯವು ನನ್ನ ದೈವದಲ್ಲಿಲ್ಲದೆ?

ದೋಷನಾರ—ಹಾಗಾದರೆ ಯಾಕ ಬಂದೆ? ದರ್ಬಾರದಿಂದ ನಿನ್ನನ್ನೇನು ಕರೆಕಳುಹಿರುವದಿಲ್ಲ.

ಕಂಚುಕಿರಾಯ— ದರ್ಬಾರಕ್ಕೆ ಒಂದು ಮಹತ್ವದ ಸುದ್ದಿಯನ್ನು ಹೇಳಲಿಕ್ಕೆ ಬಂದಿದ್ದೇನೆ.

ರೋಷನಾರ—ಯಾತರ ಸುದ್ದಿಯು? ವ್ಯರ್ಥ ರಗಳೆ ಕೊಚ್ಚಬೇಡ. ನನ್ನ ಶೃಂಗಾರದ ಹೊತ್ತಾಗಿದೆ, ಬೇಗನೆ ಹೇಳು.

ಕಂಚುಕಿರಾಯ—ಸರಕಾರ, ಆ ಸುದ್ದಿಯು ಅತ್ಯಂತ ಶೋಚನೀಯವಾದದ್ದು, ಆ ಸುದ್ದಿಯು ಅತ್ಯಂತ ಹೃದಯದ್ರಾವಕವಾದದ್ದು, ಆ ಸುದ್ದಿಯು ಅತ್ಯಂತ ಸಂತಾಪಕರವಾದದ್ದು!

ರೋಷನಾರ—ಬೆನಕೂಬ! ನೀನು ಕತ್ತೆಯೋ ಮನುಷ್ಯನೋ? ಯಾವ ಸುದ್ದಿಯು ಬೇಗನೆ ಹೇಳಬಾರದೆ? ನಿಲ್ಲು, ನಿನ್ನ ನಾಲಿಗೆಯು ಎಳೆದಂತೆ ಅದನ್ನು ಕೊಯ್ಯುವದೇ ಯೋಗ್ಯವು!

ರೋಷನಾರಳ ಸ್ವಭಾವವನ್ನು ಬಲ್ಲ ಕಂಚುಕಿರಾಯನು ಭಯದಿಂದ ನಡುಗುತ್ತ ಬಹು ನಮ್ರನಾಗಿ— ಸರಕಾರ, ಮಹೋಬದ ಅರಸನಾದ ಚಂಪತರಾಯನು ರಣದುಲ್ಲಾಖಾನರನ್ನು ಸೆರೆಯಲ್ಲಿ ಹಾಕಿರುವನು!

ರೋಷನಾರ—ಏನು? ನಿನ್ನ ಮೈಮೇಲೆ ಎಚ್ಚರಿರುವದೋ ಇಲ್ಲವೊ? ಚಂಪತರಾಯನ ಮೇಲಿನ ದ್ವೇಷದಿಂದ ನೀನು ಈ ಸುದ್ದಿಯನ್ನು ಹುಟ್ಟಿಸಿಕೊಂಡು ಹೇಳುವೆ.

ಕಂಚುಕಿರಾಯ—ಇಲ್ಲ ಸರಕಾರ, ವಿಂಧ್ಯವಾಸಿನಿಯ ದೇವಾಲಯವನ್ನು ನಾಶಮಾಡುವದಕ್ಕಾಗಿ ಬಂದಿದ್ದ ರಣದುಲ್ಲಾಖಾನರನ್ನು ಚಂಪತರಾಯನ ಮಗ ಛತ್ರಸಾಲನೂ, ಬೇರೆ ತುಂಟ ಹುಡುಗರೂ ಕೂಡಿ ಸೋಲಿಸಿದರು. ಚಂಪತರಾಯನು ಅದಕ್ಕಾಗಿ ಹುಡುಗರನ್ನು ದಂಡಿಸದೆ ಖಾನರನ್ನು ಸೆರೆಯಲ್ಲಿಟ್ಟಿರುವನು.

ರೋಷನಾರ—ತುಂಟ ಹುಡುಗರು ಖಾನನನ್ನು ಸೋಲಿಸಿದರೆ? ಇದೆಂತಹ ಅಶಕ್ಯ ಸುದ್ಧಿಯು! ಕಂಚುಕಿರಾಯ, ಇವಕ್ಕೆ ಸಾಕ್ಷಿಯೇನು? ಸುಮ್ಮನೆ ನನಗೆ ತಾಪಕೊಟ್ಟರೆ ನಿನ್ನ ಶಿರಚ್ಛೇದವಾದೀತು!

ರೋಷನಾರಳ ಈ ಭಯಂಕರ ಮಾತಿನಿಂದ ಕಂಚುಕಿರಾಯನ ಕಾಲೇ ಹೋದವು. ಆತನು ಜೋಲಿಬಂದು ಬಿದ್ದನು; ಆದರೂ ಆಕ್ಷಣ ಬೇಗ

ಮೆಯ ಕರ್ಕಶ ಸ್ವಭಾವಕ್ಕೆ ಬೆವರಿ ನಡಗುತ್ತ ಆತನು— "ಬೇಗಮ್ ಸಾಹೇಬ, ಖಾನಸಾಹೇಬರು ತಮ್ಮ ಹೆಸರಿನ ಹಿಡಿಕೆಯ ಕಠಾರಿಯನ್ನು ತಮಗೆ ತೋರಿಸುವವಕ್ಕಾಗಿ ನನ್ನ ಕೈಯಲ್ಲಿ ಕೊಟ್ಟಿದ್ದರು.

ರೋಷನಾರ—ಕತ್ತೆ ! ಅದನ್ನು ಯಾಕೆ ಕೊಡಲಿಲ್ಲ? ಅದನ್ನು ತೋರಿಸಿದರೆ ನಿನ್ನ ಮಾತನ್ನು ನಿಜವೆಂದು ನಂಬುವೆನು.

ಕಂಚುಕಿರಾಯ (ಅಂಜಿ ಕಣ್ಣು ಬೆಳ್ಳಗೆ ಮಾಡುತ್ತ)—ಅದನ್ನು ಛತ್ರಸಾಲನು ಕಸಿದುಕೊಂಡನು.

ಇದನ್ನು ಕೇಳಿ ರೋಷನಾರಳು ಸಿಟ್ಟು ಬೆಂಕಿಯಾಗಿ— ಕಂಚುಕಿರಾಯಾ, ನಿನ್ನ ಈ ಅಸತ್ಯ ಭಾಷಣಕ್ಕಾಗಿ ಈಗಲೇ ನಿನ್ನ ಶಿರಚ್ಛೇದ ಮಾಡಿಸುತ್ತಿದ್ದೆನು; ಆದರೆ ಬಹುದಿನಸದ ದರ್ಬಾರದ ಸೇವಕನಾಗಿರುವದರಿಂದ ನಿನಗೆ ಮೂನತ್ತು ದಿನಗಳ ಅವಧಿಯನ್ನು ಕೊಟ್ಟಿರುತ್ತೇನೆ. ಅಷ್ಟರಲ್ಲಿ ನಿನ್ನ ಸುದ್ದಿಯು ನಿಜವೆಂಬ ನಂಬಿಗೆಯು ನನಗೆ ಆದರೆ ನಿನ್ನನ್ನು ಬಿಟ್ಟುಬಿಡುನೆನು; ಇಲ್ಲದಿದ್ದರೆ ಮೂವತ್ತೊಂದನೆಯ ದಿವಸ ನಿನ್ನ ಶಿರಚ್ಛೇದವಾಯಿತೆಂದು ತಿಳಿ!

ಒನೆಯ ಪ್ರಕರಣ-ಆಯೇಷೆ

ಔರಂಗಜೇಬನು ದಿಲ್ಲಿಯ ಸಿಂಹಾಸನವನ್ನು ಅನ್ಯಾಯದಿಂದ ಸಂಪಾದಿಸಿ ಆರು ವರ್ಷವಾಗಿತ್ತು. ತನ್ನ ಆ ಅನ್ಯಾಯದ ಕ್ರೂರ ಕೃತಿಗಳನ್ನು ಆಡಿಕೊಂಡು ತನ್ನನ್ನು ದ್ವೇಷಿಸದಂತೆ ಶೂರರನ್ನೂ, ಮುತ್ಸದ್ದಿಗಳನ್ನೂ, ಮಾಂಡಲಿಕ ಅರಸರನ್ನೂ, ಪ್ರಜೆಗಳನ್ನೂ ಲಂಚ, ಅಧಿಕಾರ, ಬಿರುದು ಮೊದಲಾದವನ್ನು ಕೊಟ್ಟು ಆ ಕ್ರೂರ ಬಾದಶಹನು ಇನ್ನೂ ಸಮಾಧಾನಪಡಿಸಿದ್ದಿಲ್ಲ. ತನ್ನ ಸಹಾಯಕರ್ತೃಗಳಾದ ಚಂಪತರಾಯ, ಮಿರುಜುಮ್ಲಾ ಮೊದಲಾದವರನ್ನು ಒಂದಿಲ್ಲೊಂದು ಬಗೆಯ ಪ್ರತ್ಯುಪಕಾರದಿಂದ ಇನ್ನೂ ಸಂತೋಷಪಡಿಸಿದ್ದಿಲ್ಲ. ತಂದೆಯನ್ನು ಸೆರೆಯಲ್ಲಿಹಾಕಿ, ಅಣ್ಣತಮ್ಮಂದಿರನ್ನು

ಕೊಲ್ಲಿಸಿ ಸಿಂಹಾಸನವೇರಿದಬಾದಶಹನು ಕುರಾಣದ ಮತದಂತೆ ಬಾದಶಹನೇ ಅಲ್ಲವೆಂದು ವಾದಿಸುತ್ತಿರುವ ಮೌಲವಿ, ಕಾಜಿ, ಮುಲ್ಲಾ ಮೊದಲಾದ ಧರ್ಮಾಧಿಕಾರಿಗಳ ಕೈ ಬೆಚ್ಚಗೆನಾಡಿ ಅವರ ಬಾಯಿಕಟ್ಟಿ ಅವರ ಆಶೀರ್ವಾದ ಪಡೆಯುವದು ಇನ್ನೂ ಹಾಗೆಯೇ ಉಳಿದಿತ್ತು. ತಾನು ಕೇವಲ ಫಕೀರನಂತೆ ಯಾವ ವ್ಯಸನಗಳಿಗೂ ಒಳಗಾಗದೆ, ರಾಜ್ಯದಲ್ಲಿಯ ಜನರನ್ನು ತನ್ನಂತೆಯೇ ನಡಿಸಿಕೊಳ್ಳತೊಡಗಿದ್ದರಿಂದ ಜನರಿಗಾಗಿವ್ವ ಅಸಮಾಧಾನವನ್ನು ಸವ್ಯದವಟ್ಟಿಗಾದರೂ ಆತನು ಹೋಗಲಾಡಿಸಬೇಕಾಗಿತ್ತು. ಈ ಎಲ್ಲ ಕೆಲಸಗಳಿಗಾಗಿ ಆತನು ರಮಜಾನದ ೨೫ನೇ ತಾರೀಖನ್ನು ಗೊತ್ತುಮಾಡಿದ್ದನು. ಅದರ ಮೊದಲನೆಯ ದಿವಸದಿಂದ ನಾಲ್ಕುದಿವಸ ತನ್ನ ಜನಾನಖಾನೆಯ ಎಲ್ಲ ಗೋಷೆಯ ಸ್ತ್ರೀಯರೂ, ಬೇರೆಯವರ ಗೋಷೆಯ ಸ್ತ್ರೀಯರೂ ನಿರ್ಬಾಧವಾಗಿ ಸ್ವತಂತ್ರದಿಂದ ವ್ಯವಹರಿಸತಕ್ಕದ್ದೆಂದು ಗೊತ್ತಾಗಿತ್ತು.

ಔರಂಗಜೇಬನ ಅಪ್ಪಣೆಯಂತೆ ದಿಲ್ಲಿಯು ಇಪ್ಪತ್ತು ಇಪ್ಪತ್ತೆರಡು ದಿವಸಗಳಿಂದ ಮನಃಪೂರ್ವಕವಾಗಿ ಶೃಂಗರಿಸಲ್ಪಡತೊಡಗಿತ್ತು. ಈ ಕೆಲಸದಲ್ಲಿ ಸ್ವಲ್ಪವೂ ಕಾರ್ಪಣ್ಯವಾಡವೆ ಕೈಸಡಿಲುಬಿಟ್ಟು ಹಣ ವೆಚ್ಚಮಾಡಬೇಕೆಂದು ಬಾದಶಹನು ಅಪ್ಪಣೆಮಾಡಿದ್ದನು. ನಾಗರಿಕರು, ವಿಶೇಷವಾಗಿ ಜನಾನಖಾನೆಯೊಳಗಿನ ಪರತಂತ್ರ ತರುಣಿಯರು ಆ ಆನಂದದ ದಿವಸಗಳನ್ನು ಎದುರು ನೋಡತೊಡಗಿದ್ದರು. "ದಿವಾಣ-ಈ-ಆಮ" ಎಂಬ ದರ್ಬಾರವ ಮಂದಿರವು ಅನುರಾನತಿಯು ಇಂದ್ರನ ಸಭೆಯನ್ನು ಹಿಂದಕ್ಕೆ ಸರಿಸುವಂತೆ ಶೃಂಗರಿಸಲ್ಪಡತೊಡಗಿತ್ತು. ಗೋಷೆಯ ತರುಣಿಯರ ಸಲುವಾಗಿ ವಿವಿಧವಸ್ತುಗಳ ಪ್ರದರ್ಶನವು ನೀರಿನಂತೆ ಹಣವೆಚ್ಚಮಾಡಿ ಮನೋಹರವಾಗುವಂತೆ ರಚಿಸಲು ಆರಂಭವಾಗಿತ್ತು. ಆ ಸಮಾರಂಭದಲ್ಲಿ ನಾಚು-ರಂಗು-ಮದ್ಯ ಮೊದಲಾದವುಗಳ ವಿಲಾಸಕ್ಕೆ ಪ್ರತಿಬಂಧವಿದ್ದಿಲ್ಲ. ಹೀಗಿರುವಾಗ ಔರಂಗಜೇಬನು ಅಕಸ್ಮಾತ್ ವ್ಯಾಧಿಪೀಡಿತನಾದನು. ಆತನ ಆರೈಕೆಯ ಎಲ್ಲ ಸೂತ್ರಗಳನ್ನು ರೋಷನಾರಬೇಗಮೆಯು ಆಕ್ರಮಿಸಿದ್ದನ್ನು ವಾಚಕರು ಬಲ್ಲರು. ಆ ಕಠೋರ ಸ್ತ್ರೀಯ ತಂತ್ರವನ್ನು ತಿಳಿಯಲಿಕ್ಕೆ ಯಾರೂ ಸಮರ್ಥರಾಗಿದ್ದಿಲ್ಲ. ಬಾದಶಹನು ಸತ್ತಿರುವನೋ, ಬದುಕಿರುವನೋ ಎಂಬದರ ಗಂಧವನ್ನು ಕೂಡ ಆಕೆಯು ಯಾರಿಗೂ ಹತ್ತಗೊಟ್ಟದ್ದಿಲ್ಲ.

ಆ ಮಹತ್ವಾಕಾಂಕ್ಷಿಯಾದ ವ್ಯಾಪ್ತಿಯು ತನ್ನ ಒಬ್ಬ ಪ್ರೀತಿಯ ರಾಣಿಯ "ಶಹಾಜಹಾನ ಅಜೀಮುಶಹಾ" ಎಂಬ ಆರುವರ್ಷದ ಕೂಸನ್ನು ಸಿಂಹಾಸನದಮೇಲೆ ಕುಳ್ಳಿರಿಸಿ, ಆತನು ದೊಡ್ಡನಾಗುವನರೆಗೆ ತಾನು ದಿಲ್ಲಿಯ ಸಿಂಹಾಸನದ ಸೂತ್ರಗಳನ್ನು ನಡಿಸುತ್ತ ಮೆರೆಯಬೇಕೆಂದು ಯೊಚಿಸಿದ್ದಳು. ಇವಕ್ಕಾಗಿ ಆಕೆಯು ಬಾದಶಹನ ಮರಣದ ಹಾದಿಯನ್ನು ನೋಡುತ್ತ ಆತನ ವಿಷಯದ ಸುದ್ದಿಯನ್ನು ಯಾರಿಗೂ ಹತ್ತಗೊಡದೆ ಬಾದಶಹನ ಸಿಕ್ಕಾಮೊರ್ತಬುಗಳಿಂದ ರಾಜ್ಯಕಾರಭಾರದ ಹುಕುಮುಗಳನ್ನು ಕಳಿಸುತ್ತ ಲಿದ್ದಳು.

ಬಾದಶಹನ ಈ ಆಕಸ್ಮಿಕವೇನೆಯಿಂದ ದರ್ಬಾರದ ಕಾರ್ಯವು ನಡೆಯುವುದೋ ಇಲ್ಲವೋ ಎಂಬುದರ್ಲಿ ಜನರಲ್ಲಿ ಸಂಶಯವು ಉತ್ಪನ್ನವಾಗಿ, ನಾಲ್ಕೂಕಡೆಗೆ ಅಸಮಾಧಾನವು ಪಸರಿಸತೊಡಗಿತು; ಆವರೆ ದಿಲ್ಲಿಯನ್ನು ಶೃಂಗರಿಸುವ ಕೆಲಸವು ಯಥಾಸ್ಥಿತವಾಗಿ ನಡೆಯುತ್ತಲೇ ಇದ್ದಿತು. ಆ ಕೆಲಸವನ್ನು ಅತ್ಯುತ್ತಮರೀತಿಯಿಂದ ನೆರವೇರಿಸುವದಕ್ಕಾಗಿ ಬಾದಶಹನ ಸಿಕ್ಕಾಮೊರ್ತಬುಗಳಿಂದ ರೋಷನಾರಳು ವಜೀರನಿಗೆ ಅಪ್ಪಣೆಗಳನ್ನು ಕಳಿಸುತ್ತಲೇ ಇದ್ದಳು. ಒಂದೊಂದೇ ದಿನಗಳು ಕಳೆಯುತ್ತಿರಲು, ಉತ್ಸವದ ದಿನಸಗಳು ಸನಿಯಕ್ಕೆ ಬಂದಬಂದಂತೆ ಜನರಕುತೂಹಲವು ಹೆಚ್ಚುತ್ತ ಹೋಯಿತು ಹೀಗಿರುವಾಗ ರಮಜಾನವ ಇಪ್ಪತ್ತುನಾಲ್ಕನೆಯ ತಾರೀಖು ಬಂದುಬಿಟ್ಟಿತು. ಗೋಷೆಯಲ್ಲಿಯ ಯಾನತ್ತು ಯಾನನ ಸುಂದರಿಯರು ಸ್ವೇಚ್ಛೆಯಿಂದ ಪ್ರದರ್ಶನದಲ್ಲಿ ಗಂಡಸರೊಳಗೆ ಬೆರೆತು ವ್ಯವಹರಿಸಹತ್ತಿದರು. ಎಲ್ಲಿ ನೋಡಿದರೂ ಸ್ವಾತಂತ್ರ್ಯದ ಸಾಮ್ರಾಜ್ಯ, ಎಲ್ಲಿನೋಡಿದರೂ ಸ್ವಚ್ಛಂದನೃತ್ತಿಯ ಸೊಬಗು, ಎಲ್ಲಿನೋಡಿದರೂ ಆನಂದದ ಅಬ್ಬರ ಈ ಚಂದದಿಂದ ದಿಲ್ಲಿಗೆ ದಿಲ್ಲಿಯೇ ವಿಲಾಸಮಗ್ನವಾಗಿ ಹೋಗಿತ್ತು. ಈ ಬಗೆಯ ಸ್ವಾತಂತ್ರ್ಯದ ವಿಲಾಸಕ್ಕೆ ನಾಲ್ಕುದಿನ ಅತಂಕ ತಂದುಕೊಳ್ಳುವದು, ಅತಂಕ ಮಾಡುವದು ಕಾಯದೆಗೆ ವಿರುದ್ಧವೆಂಬ ಮಾತು ಬಾದಶಹನ ಜಾಹೀರನಾಮೆಯಿಂದ ಎಲ್ಲರಿಗೂ ಗೊತ್ತಾಗಿ ಹೋಗಿರುವದರಿಂದ, ಯಾವಬಗೆಯ ಸಂಕೋಚವೂ ಜನರ ವ್ಯವಹಾರದಲ್ಲಿ ಕಂಡುಬರುತ್ತಿದ್ದಿಲ್ಲ. ಯಾರ ಉಗ್ಗುಹಿನ ದರ್ಶನವೂ ಜನ್ಮದಲ್ಲಿ ದುರ್ಲಭವೋ, ಅಂತಹ ಬಾದಶಹನ ಜನಾನಖಾನೆಯ ರಾಣಿ

ಯರೂ! ಕುಟುಂಬದೊಳಗಿನ ಸ್ತ್ರೀಯರೂ ಸ್ವಚ್ಛಂದದಿಂದ ಒನಪೊಡನೆ ವ್ಯವಹರಿಸುತ್ತಿದ್ದರು!

ಇಂತಹ ಆನಂದದ ಸಮಾರಂಭವು ನಡೆದಿದ್ದರೂ, ಒಬ್ಬ ಪ್ರೌಢಸುಂದರಿಯು ಚಿಂತಾಕ್ರಾಂತಳಾಗಿ ಆ ಉತ್ಸವದಲ್ಲಿ ಸೇರದೆ ಯಾರನ್ನೋ ಹುಡುಕುತ್ತ ಯಮುನಾನದಿಯ ದಂಡೆಯಕಡೆಗೆ ಒಬ್ಬಳೇ ಸಾಗಿದ್ದಳು. ಆಕೆಗೆ ಜಗತ್ತೇ ಶೂನ್ಯವಾಗಿತ್ತು. ತಾನು ಹುಡುಕುತ್ತಿದ್ದ ಮನುಷ್ಯನು ಸಿಗದ್ದರಿಂದ ಆಕೆಯು ಬೇಸತ್ತು ನಿರಾಶೆಪಟ್ಟು ಯಮುನೆಯ ದಂಡೆಯಮೇಲಿದ್ದ ಒಂದು ಬಂಡೆಗಲ್ಲಮೇಲೆ ಕುಳಿತು ಉಸುರುಹಾಕುತ್ತ ಮನಸ್ಸಿನಲ್ಲಿ ದೇವರನ್ನು ಪ್ರಾರ್ಥಿಸುತ್ತಿದ್ದಳು. ಅಂದಿನ ಆ ಮಹೋತ್ಸವವನ್ನು ಬಿಟ್ಟು ಈ ಚಿಂತಾಕ್ರಾಂತ ಸ್ತ್ರೀಯ ಚಿಂತೆಯನ್ನು ದೂರವಾಡಲಿಕ್ಕೆ ಅಲ್ಲಿಗೆ ಯಾರು ಅಡ್ಡ ಹಣಕಬೇಕು? ಆಕೆಯು ಮನಸ್ಸಿನಲ್ಲಿ ದೇವರನ್ನು ಪ್ರಾರ್ಥಿಸುತ್ತ ಪ್ರಾರ್ಥಿಸುತ್ತ ಗಟ್ಟಿಯಾಗಿ—"ದೇವೀ, ವಿಂಧ್ಯವಾಸಿನೀ, ನಿನ್ನ ಈ ಕನ್ಯೆಯು ಅನನ್ಯಭಾವದಿಂದ ನಿನಗೆ ಶರಣುಬಂದಿದ್ದರೂ ನೀನು ಹೀಗೆ ನಿರಾಕರಿಸುವದು ನಿನ್ನ ಕೋಮಲಹೃದಯಕ್ಕೆ ಒಪ್ಪುವದೇ? ದುಷ್ಟಶಾಸನನ ನಿನ್ನ ಅಘೋರಶಸ್ತ್ರಗಳು ಎಷ್ಟುಭಯಂಕರವಿದ್ದರೂ ಭಕ್ತರವಿಷಯದ ನಿನ್ನ ವಾತ್ಸಲ್ಯವು ಎಷ್ಟು ದೃಢವಾದದ್ದೆಂಬದನ್ನು ನಾನು ಬಲ್ಲೆನು. ಇಂದಿನ ರಾತ್ರಿಯು ಕಳೆದು ನಾಳೆ ಬೆಳಗಾಗುತ್ತಲೆ ಶಹಾನಶಹಾ ಔರಂಗಜೇಬ ಬಾದಶಹನ ಅಂತ ಆಗುವದು.ಇದನ್ನು ಈ ಅನಾಥೆಯು ಹೇಗೆ ಸಹಿಸಲಿ? ನಾನು ಅಜ್ಞಾನವಶಳಾಗಿ ವಿಲಕ್ಷಣಪ್ರಸಂಗದಿಂದ ಯವನನ ಕೈಹಿಡಿದ ತಪ್ಪಿಗಾಗಿ ಈಪರಿ ನನ್ನನ್ನು ನೀನು ಕಾಡಬಹುದೆ? ನನ್ನ ನಿರ್ಮಲಹೃದಯವನ್ನು ನೀನರಿಯೆಯಾ? ಎಂದು ನುಡಿಯುವಾಗ ಆಕೆಯ ಕಣ್ಣುಗಳೊಳಗಿಂದ ಒಂದೇಸವನೆ ನೀರುಗಳು ಹೋಗುತ್ತಿದ್ದವು. ತನ್ನ ಬೆನ್ನಹತ್ತಿ ತನ್ನ ಈ ರೀತಿಯನ್ನು ಪರೀಕ್ಷಿಸುತ್ತ ಗೊತ್ತಾಗದಂತೆ ಬಂದಿದ್ದ ಒಬ್ಬ ತರುಣನನ್ನು ಆಕೆಯು ನೋಡಿಯೇ ಇರಲಿಲ್ಲ. ತನ್ನ ದುಃಖದಲ್ಲಿ ತಾನು ಮಗ್ನಳಾಗಿ ಹೋಗಿದ್ದಳು. ಅಷ್ಟರಲ್ಲಿ ಆ ತರುಣನು ಸ್ಪಷ್ಟಧ್ವನಿಯಿಂದ—

ತರುಣ—ಪಾತಕಿಯಾದ ಸ್ತ್ರೀಯೇ, ಸಾಕು, ವಿಂಧ್ಯವಾಸಿನಿಗೆ ದೋಷವಿಡುವದನ್ನು ನಿಲ್ಲಿಸಿಬಿಡು.ಅನೀತಿಯು ಹಾದಿಯಹಿಡಿದು ಹುಟ್ಟಿದ ಮನೆಗೂ,

ಕೊಟ್ಟಮನೆಗೂ ಕಲಂಕವನ್ನುಂಟುಮಾಡುವ ಸ್ತ್ರೀಯು ಭಗವತೀ ವಿಂಧ್ಯವಾಸಿನಿಗೆ ದೋಷವಿಡುವದರಲ್ಲಿ ಆಶ್ಚರ್ಯವಾದರೂ ಏನು? ಘೋರನರಕಕ್ಕೆ ಕೊರತೆಯಾಗಿರುವ ಪಾಪವನ್ನು ತುಂಬಿಕೊಳ್ಳುವದಕ್ಕಾಗಿಯೇ ನೀನು ಹೀಗೆ ದೇವರಿಗೆ ಹೆಸರಿಡುತ್ತೀ.

ಈ ಅಪರಿಚಿತ ಶಬ್ದಗಳು ಕಿವಿಗೆ ಬಿದ್ದಕೂಡಲೆ ಆ ಸ್ತ್ರೀಯು ತನ್ನ ಮುಚ್ಚಿದಕಣ್ಣುಗಳನ್ನು ತೆರೆದಳು. ಈಗ ಸಿಟ್ಟಿನಿಂದ ಅವು ಕೆಂಪಾಗಿ ಕಿಡಿಗಳನ್ನು ಸುರಿಸುತ್ತಿರುವಂತೆ ತೋರುತ್ತಿತ್ತು. ಆಕೆಯು ತನ್ನೆದುರಿಗೆ ನಿಂತಿರುವ ತರುಣನನ್ನು ಕ್ರೋಧದಿಂದ ನೋಡುತ್ತ—

ಸ್ತ್ರೀ—ತರುಣಾ, ನೀನು ನನ್ನನ್ನು ಯಾರೆಂದು ತಿಳಿದಿರುವೆ?

ತರುಣ—ಅನೀತಿಯ ಮದ್ಯದಿಂದ ಮೈಮರೆತವಳೂ, ದೃಢತರವಾದ ವಿಷಯವಾಸನೆಯ ಬಲೆಯಲ್ಲಿ ಸಿಕ್ಕವಳೂ ಆದ ಪಾತಕೀಸ್ತ್ರೀಯೆಂದು ನಾನು ತಿಳಿದಿರುವೆನು.

ಸ್ತ್ರೀ—ಅನುಭವ ಶೂನ್ಯನಾದ ತರುಣನೇ, ಹೀಗೆ ನೀನು ವಿಚಾರವಿಲ್ಲದೆ ನುಡಿಯತಕ್ಕದ್ದಲ್ಲ; ನೀನು ತಿಳಿದುಕೊಂಡಿರುವಂತೆ ನಾನು ಅನೀತಿಯ ಮದ್ಯದಿಂದ ಮೈಮರೆತ ಸ್ತ್ರೀಯಲ್ಲ, ವಿಷಯವಾಸನೆಯ ಬಲೆಯಲ್ಲಿ ಸಿಕ್ಕಿರುವ ಪಾತಕೀ ಸ್ತ್ರೀಯೂ ಅಲ್ಲ.

ತರುಣ—ನೀನು ಅಲ್ಲೆಂದ ಮಾತ್ರದಿಂದ ನನ್ನ ಮಾತು ಸುಳ್ಳಾಗಲಾರದು. ನಿನ್ನ ಈ ಹಿಂದೂ ಹೃದಯವೂ, ಯವನ ವೇಷವೂ ಸಾಕ್ಷಿಯಾಗಿರಲು, ನನ್ನ ಮಾತಿನ ಸತ್ಯತೆಗೆ ನನಗೆ ಮತ್ತೊಂದು ಬೇರೆ ಸಾಕ್ಷಿಯೇತಕ್ಕೆ ಬೇಕು? ವಿಂಧ್ಯವಾಸಿನಿಯನ್ನು ಪ್ರಾರ್ಥಿಸುತ್ತಿರುವ ನೀನು ಜಾತಿಯಿಂದ ಹಿಂದುವಾಗಿರಬೇಕು! ನಿನ್ನ ವೇಷವನ್ನು ನೋಡಿದರೆ, ನೀನು ಅನೀತಿಯಿಂದ ಮುಸಲ್ಮಾನನ ಕೈ ಹಿಡಿದಿರಬೇಕೆಂಬದು ವ್ಯಕ್ತವಾಗುತ್ತದೆ. ಅಂದ ಬಳಿಕ ವಿಷಯಾಸಕ್ತಳಲ್ಲದ ಪವಿತ್ರ ಸ್ತ್ರೀಯಿಂದ ಇಂಥ ಅನುಚಿತಕಾರ್ಯವಾಗಬಹುದೋ?

ಸ್ತ್ರೀ (ತಿರಸ್ಕಾರದಿಂದ ನಕ್ಕು)—ತರುಣ ರಜಪೂತನೇ, ಪಾಪ! ಇನ್ನೂ ನಿನ್ನ ತಲೆಯಮೇಲಿನ ಮಾಸವೂ ಆರಿರುವದಿಲ್ಲ. ಅಂತೇ ಈಗಿನ

ಹೇಡಿ ರಜಪೂತರು ತಮ್ಮ ಹೆಣ್ಣು ಮಕ್ಕಳನ್ನು ದಿಲ್ಲಿಯ ಬಾದ ಶಹರ, ಹಾಗು ಅವರ ಅಧಿಕಾರಿಗಳ ವಶಕ್ಕೆ ಸಂತೋಷದಿಂದ ಒಪ್ಪಿಸುತ್ತಿರುವದನ್ನು ನೀನು ವಿಚಾರಿಸುವದಿಲ್ಲ. ಈ ಮಾತಿನ ವಿಚಾರವನ್ನು ನೀನು ಮಾಡಿದ್ದರೆ, ನನ್ನ ಚರಿತ್ರನನ್ನು ನೀನು ಅರಿಯದಿದ್ದರೂ, ಇಷ್ಟು ಕಠೋರತನದಿಂದ ನನ್ನನ್ನು ತಿರಸ್ಕರಿಸುವ ಸಾಹಸಕ್ಕೆ ನೀನು ಹೋಗುತ್ತಿದ್ದಿಲ್ಲ!

ತರುಣ—ಅಂತಹ ಹೇಸಿ ರಜಪೂತರ ಮಾತನ್ನು ಈ ಚಂಪತರಾಯನ ಮಗನಾದ ಛತ್ರಸಾಲನ ಮುಂದೆ ಎತ್ತಬೇಡ; ಸ್ವಂತದ ಶೀಲಕ್ಕಾಗಿ ರಣಾಂಗಣದಲ್ಲಿ ರಕ್ತದ ಹನಿಗಳನ್ನು ಸುರಿಸುವದಕ್ಕೆ ಬುಂದೇಲದ ರುದ್ರಪ್ರತಾಪನ ವಂಶಜರು ಕೆಲವರಾದರೂ ಇನ್ನೂ ಸಿದ್ಧರಾಗಿರುವರೆಂಬದನ್ನು ಲಕ್ಷವಲ್ಲಿಡು! ಅಂತಹ ತೇಜಸ್ವಿಗಳು ನಿನ್ನನ್ನು ಯಾಕೆ ತಿರಸ್ಕರಿಸಲಿಕ್ಕಿಲ್ಲ?

ತರುಣನ ಈ ಮಾತುಗಳನ್ನು ಕೇಳಿದ ಕೂಡಲೆ ಆ ಗಂಭೀರ ಸ್ತ್ರೀಗೆ ಪರಮಾನಂದವಾಯಿತು. ಆ ತರುಣನಿಂದ ತನಗಾಗಿದ್ದ ಅಪಮಾನವನ್ನು ಮರೆತು ಅಕೆಯು—

ಸ್ತ್ರೀ—ಕುಮಾರ, ನೀನು ಪ್ರತಾಪಶಾಲಿಯಾದ ಚಂಪತರಾಯನ ಮಗನೆ? ಛತ್ರಸಾಲನೆ?

ತರುಣ— ಹೌದು, ನಾನು ಚಂಪತರಾಯನ ಮಗನು, ಕುಮಾರ ಛತ್ರಸಾಲನು!

ಸ್ತ್ರೀ—ಹಾಗಿದ್ದರೆ ನಾನು ಮೊರೆಯಿಟ್ಟದ್ದು ವಿಂಧ್ಯವಾಸಿನಿಯ ಕಿವಿಗೆ ಮುಟ್ಟಿತೆಂದು ತಿಳಿಯುವೆನು. ದೇವೀ, ದಯಾಘನೇ, ನನ್ನಮುಂದೆ ನಿಂತಿರುವ ಈ ತರುಣನು ಮಹೋಬದ ಯುವರಾಜ ಛತ್ರಸಾಲನಾಗಿರದೆ, ನನ್ನನ್ನು ಉದ್ಧರಿಸುವದಕ್ಕಾಗಿ ನೀನು ಕಳಿಸಿರುವ ನಿನ್ನ ಪ್ರತಿನಿಧಿಯೆಂದು ನಾನು ತಿಳಿಯುವೆನು. ಕುಮಾರ, ನಿನ್ನ ಬಲಗೈಯನ್ನು ಮುಂದಕ್ಕೆ ಚಾಚು. ನಾನು ಈ ರಾಖಿಯನ್ನು ನಿನ್ನ ಕೈಗೆ ಕಟ್ಟಿ ನಾನು ನಿನ್ನ ಒಡಹುಟ್ಟಿದಾಕೆಯಾಗಿರಬೇಕಾಗಿರುವದು. ನಾಳೆ ಆಗುವ ದರ್ಬಾರಕ್ಕಾಗಿ ಚಂಪತರಾಯನು ಬರುವನೆಂಬ ಸುದ್ದಿಯನ್ನು ಕೇಳಿ ಆತನ ಕೈಗೆ ಈ ರಾಖಿಯನ್ನು ಕಟ್ಟಿ ಆತನನ್ನು ನನ್ನ ಒಡಹುಟ್ಟಿದ ಅಣ್ಣನನ್ನಾಗಿ ಮಾಡಿಕೊಳ್ಳಬೇಕೆಂದು

ನಾನು ಆತನನ್ನು ಹುಡುಕುತ್ತ ತಿರುಗುತ್ತಿದ್ದೆನು; ಆದರೆ ನನಗೆ ಆತನೇನು ಆತನಮಗನೇನು? ಯಾರಾದರೂ ನನ್ನ ಒಡಹುಟ್ಟಿದವರಾಗಿ ನನ್ನ ವಿಪತ್ತನ್ನು ದೂರಮಾಡಿದರಾಯಿತು!

ಹೀಗೆ ನುಡಿಯುವ ಸ್ತ್ರೀಯ ಮುಖವನ್ನು ಪ್ರಸನ್ನಮುದ್ರೆಯಿಂದ ನೋಡುತ್ತ ಛತ್ರಸಾಲನು ಸುಮ್ಮನೆ ನಿಂತುಕೊಂಡನು. ಆಗ ಆ ಸ್ತ್ರೀಯು ಸ್ವಲ್ಪ ಸಿಟ್ಟಿನಿಂದ—

ಸ್ತ್ರೀ—ಛತ್ರಸಾಲ, ನನ್ನ ಬಂಧುವೆನಿಸಿಕೊಳ್ಳಲಿಕ್ಕೆ ನಿನಗೆ ಅಪಮಾನವಾಗುತ್ತದೇನು? ಅಥವಾ ನಾಚಿಕೆಬರುತ್ತದೆಯೋ? ಮೋಸಹೋಗಿ ಕೈಹಿಡಿದ ತಪ್ಪಿಗಾಗಿ ಪಾತಿವ್ರತ್ಯದ ಧರ್ಮವನ್ನನುಸರಿಸಿ ಯವನ ಪತಿಯನ್ನು ಅನನ್ಯ ಭಾವದಿಂದ ಸೇವಿಸಹತ್ತಿರುವ ಮಾತ್ರದಿಂದ ನಾನು ನೀತಿಭ್ರಷ್ಟಳಾದೆನೆಂದು ತಿಳಿದಿರುವೆಯಾ? ಈ ಭ್ರಾಂತಿಯನ್ನು ಬಿಟ್ಟುಬಿಡು. ನಿನ್ನ ಆ ನಿರಾಧಾರದ ಕಲ್ಪನೆಯನ್ನು ದೂರಮಾಡು. ನಿನ್ನ ಮುಂದೆ ನಿಂತಿರುವ ಈ ಸ್ತ್ರೀಯು ಬುಂದೇಲಖಂಡದ ವೀರ ರಜಪೂತನ ರಕ್ತಮಾಂಸದಿಂದಾದವಳಿರುವಳೆಂದು ತಿಳಿದು, ಕೈಯನ್ನು ಮುಂದಕ್ಕೆ ಚಾಚಿ ನನ್ನ ಬಂಧುವಾಗಲಿಕ್ಕೆ ಸಿದ್ಧನಾಗು. ಇಷ್ಟು ಹೇಳಿದರೂ ನೀನು ನನ್ನ ಬಂಧುವಾಗಲು ಒಪ್ಪದಪಕ್ಷನಲ್ಲಿ, ನಿನ್ನ ಹೃದಯದೊಳಗೆ ಭೂತದಯೆಯು ಲೇಶವಾದರೂ ವಾಸಿಸುತ್ತಿರವದಿಲ್ಲವೆಂದು ತಿಳಿದು, ಆರ್ಯಸ್ತ್ರೀಯರು ನಿನ್ನ ಮುಖಾವಲೋಕನ ಮಾಡುವದೂ ಅಮಂಗಲವೆಂದು ತಿಳಿಯುವರು. ಈ ರಾಖಿಯ ಸ್ಪರ್ಶವು ನಿನ್ನ ಕೈಗೆ ಆದ ಕೂಡಲೆ ನಿಜವಾದ ಬಂಧುತ್ವವು ನಿನ್ನ ಮನಸ್ಸಿನಲ್ಲಿ ಸಂಚರಿಸತೊಡಗಿ, ಇಲ್ಲಿಯವರೆಗೆ ನೀತಿಭ್ರಷ್ಟಳಾಗಿ ತೋರುವ ಈ ಸ್ತ್ರೀಯು ನಿನ್ನ ಅಕ್ಕನಾಗಲಿಕ್ಕೆ ಯೋಗ್ಯಳಿರುವಳೆಂಬದು ನಿನಗೆ ಗೊತ್ತಾದೀತು.

ಸ್ತ್ರೀಯು ಈ ಮಾತುಗಳನ್ನು ಕೇಳಿ ಛತ್ರಸಾಲನು ಗಂಭೀರಮುದ್ರೆಯನ್ನು ತಾಳಿ ತನ್ನ ಬಲಗೈಯನ್ನು ಮುಂದಕ್ಕೆ ಚಾಚಿದನು. ಆಗ ಆ ಕುಮಾರನ ವೀರಶ್ರೀಯುಕ್ತವಾದ ಮುಖಕಮಲದ ಕಡೆಗೂ, ಮುಂದಕ್ಕೆ ಚಾಚಿರುವ ಆತನ ಪರಿಪುಷ್ಟ ಬಾಹುವಿನ ಕಡೆಗೂ, ತನ್ನ ರಾಖಿಯ (ರಕ್ಷಾಬಂಧನದ ರದಾದ) ಕಡೆಗೂ ನೋಡುತ್ತ ತನ್ನ ರಾಖಿಯನ್ನು ಕಟ್ಟುತ್ತಿರುವಾಗ ಛತ್ರಸಾಲನ ಕೈಯೊಳಗಿನ ಕಠಾರಿಯ ಕಡೆಗೆ ಲಕ್ಷಹೋಗಲು, ಆ ಸ್ತ್ರೀಯು

ರಾಖಿ ಕಟ್ಟುವವನ್ನು ಅಷ್ಟಕ್ಕೇ ಬಿಟ್ಟು ಆನಂದದಿಂದ ಕುಣಿಯುತ್ತಿದಳು. ಇದನ್ನು ನೋಡಿ ಛತ್ರಸಾಲನು, ಈಕೆಯು ಹುಚ್ಚಿಯೆಂದು ನಿರ್ಣಯಿಸುತ್ತಿರುವಷ್ಟರಲ್ಲಿ ಆಕೆಯು ಛತ್ರಸಾಲನನ್ನು ಕುರಿತು—

ಸ್ತ್ರೀ— ಆಯಿತು, ನನ್ನ ಕಾರ್ಯವು ನಿಶ್ಚಯವಾಗಿ ಆಯಿತು! ದೇವೀ, ವಿಂಧ್ಯವಾಸಿನೀ, ನಿನ್ನ ಈ ಭಕ್ತೆಯ ಅನುಗ್ರಹಕ್ಕಾಗಿ ನಾಳಿನ ನಿನ್ನ ವಾರ್ಷಿಕೋತ್ಸವದ ದಿವಸ ನಿನ್ನ ಉಡಿಯನ್ನು ಮುತ್ತು ರತ್ನಗಳಿಂದ ತುಂಬುವೆನು; ಆದರೆ ಕುಮಾರ ಛತ್ರಸಾಲ, ನಿನ್ನ ಈ ಋಣವನ್ನು ಯಾವ ರೀತಿಯಿಂದ ತೀರಿಸಲಿ?

ಛತ್ರಸಾಲ—ನನ್ನದೆಂತಹ ಋಣವು? ನಾನೇನು ಈಗ ನಿನಗೆ ಉಪಕಾರಮಾಡಿದ್ದೇನೆ?

ಸ್ತ್ರೀ—ನನ್ನಮೇಲೆ ಉಪಕಾರನಾಡುವ ಪ್ರಸಂಗವು ಇನ್ನುಮೇ ನಿನಗೆ ಬೇಗನೆ ಬರುವದು! ಛತ್ರಸಾಲ, ಈ ಕಠಾರಿಯು ನಿನಗೆ ಎಲ್ಲಿದೊರೆಯಿತು? ರೋಷನಾರಾ ಬೇಗಮೆಯ ಈ ಕಠಾರಿಯು ಈಗ ನಿನ್ನ ಕೈಯಲ್ಲಿರುವದರಿಂದ, ನೀನು ದಿಲ್ಲಿಯ ದರ್ಬಾರದಲ್ಲಿ ಬೇಕಾದ ಕೆಲಸವನ್ನು ಮಾಡಬಹುದು. ನಿನ್ನ ಮಾತು ಕುರಾಣದ ವಾಕ್ಯವಂತೆ ಮನ್ನಿಸಲ್ಪಡುವದು.

ಛತ್ರಸಾಲ—ನಿನ್ನ ಮಾತಿನ ಅರ್ಥವೇ ನನಗೆ ತಿಳಿಯಲೊಲ್ಲದು. ಈ ಕಠಾರಿಯನ್ನು ನಾನು ಕಂಚುಕೀರಾಯನೆಂಬ ಧಾರೀರದ ಅರಸನ ಕೈಯೊಳಗಿಂದ ಕಸಿದುಕೊಂಡೆನು. ಇದರಿಂದ ನಾನು ಬೇಕಾದ ಕೆಲಸವನ್ನು ಹೇಗೆ ಮಾಡಬಹುದು?

ಸ್ತ್ರೀ—ಈ ಕಠಾರಿಯು ನಿನ್ನ ಕೈಯಲ್ಲಿರುವ ತನಕ ಸ್ವತಃ ರೋಷನಾರಾ ಬೇಗಮೆಯಿಂದ ಆಗುವಷ್ಟು ಕೆಲಸವನ್ನು ನೀನು ಮಾಡಬಹುದು ಒಪ್ಪಿಗೆ, ಈ ಕಠಾರಿಯೆಂದರೆ ರೋಷನಾರಾ ಬೇಗಮಳೆಂದು ತಿಳಿದುಬಿಡು. ಇದನ್ನು ತಕ್ಕೊಂಡು ನೀನು ಬೇಕಾದಲ್ಲಿ ಹೋದರೂ ನಿನಗೆ ಯಾರೂ ಪ್ರತಿಬಂಧಮಾಡಲಾರರು. ಆದರೆ ಮೊದಲು ಈ ರಾಖಿಯನ್ನು ಕಟ್ಟಿಸಿಕೊಳ್ಳು, ಆಮೇಲೆ ನೀನು ಮಾಡತಕ್ಕ ಕೆಲಸವನ್ನು ಹೇಳುವೆನು.

ಈ ಮೇರೆಗೆ ನುಡಿದು ಆ ಸ್ತ್ರೀಯು ಛತ್ರಸಾಲನ ಕೈಯಲ್ಲಿ ರಾಖಿಯನ್ನು ಕಟ್ಟಿದಳು. ಬಳಿಕ ಆಕೆಯು ಛತ್ರಸಾಲನನ್ನು ಕುರಿತು—

ಸ್ತ್ರೀ—ಛತ್ರಸಾಲ, ಇಂದಿನಿಂದ ನೀನು ನನ್ನ ಒಡಹುಟ್ಟಿದ ಬಂಧುವಾದೆ ನನ್ನ ಸಂರಕ್ಷಣದ ಭಾರವು ಇನ್ನು ನಿನ್ನನ್ನು ಕೂಡಿತು. ಔರಂಗಜೇಬ ಬಾದಶಹರ ತಂಗಿಯಾದ ರೋಷನಾರಳು ನಾಳೆ ಎರಡುತಾಸುಹೊತ್ತು ಏರುವದರೊಳಗೆ ವಿಷ ಪ್ರಯೋಗದಿಂದ ಬಾದಶಹರನ್ನು ಕೊಲ್ಲಬೇಕೆಂದು ನಿಶ್ಚಯಿಸಿದ್ದಾಳೆ. ವಿಷವು ಹೊಟ್ಟೆಯೊಳಗೆ ಇಳಿದ ಕೂಡಲೆ ಬಾದಶಹರ ಪ್ರಾಣವು ಹೋಗದಿದ್ದರೆ ಅವರ ಶಿರಚ್ಛೇದನಮಾಡಬೇಕೆಂತಲೂ ಅಪ್ಪಣೆ ಮಾಡಿದ್ದಾಳೆ; ಆದ್ದರಿಂದ ಈ ಕಠಾರಿಯ ಸಹಾಯದಿಂದ ನೀನು ಬಾದಶಹರ ಜೀವವನ್ನು ಉಳಿಸಬೇಕು.

ಛತ್ರಸಾಲ—ಅಮ್ಮಾ, ರಾಖಿಯನ್ನು ಕಟ್ಟಿಸಿಕೊಂಡು ನಿನ್ನ ಬಂಧುವಾಗಿರುವ ನಾನು, ನಿನ್ನ ಸಂಕಟವನ್ನು ದೂರಮಾಡುವದಕ್ಕಾಗಿ ನನ್ನ
ಣವನ್ನಾದರೂ ಅರ್ಪಿಸುವೆನು; ಆದರೆ ಪ್ರತ್ಯಕ್ಷ ಔರಂಗಜೇಬ ಬಾದಶ
ತಂಗಿಯು ಅಣ್ಣನ ಪ್ರಾಣಹರಣಮಾಡುವದೆಂದರೆ ನನಗೆ ಪರಮಾಶ್ಚರ್ಯವಾಗಿ ತೋರುತ್ತದೆ; ಆ ಕ್ರೂರ ಮನುಷ್ಯಳು ಅಂಥ ಕ್ರೂರತನವನ್ನು ಯಾವ ಲಾಭದ ಸಲುವಾಗಿ ಮಾಡುವಳು?

ಸ್ತ್ರೀ—ತಾನು ದಿಲ್ಲಿಯ ಮಯೂರಾಸನವನ್ನೇರಿ ರಾಜ್ಯ ಕಾರಭಾರವನ್ನು ನಡೆಸಬೇಕೆಂಬ ಮಹತ್ವಾಕಾಂಕ್ಷೆಯು ಆಕೆಗೆ ಬಹು ದಿವಸಗಳಿಂದ ಇರುವದು. ಈಗ ಬಾದಶಹರನ್ನು ಕೊಂದು ತೆರವಾದ ಸಿಂಹಾಸನದಮೇಲೆ ಬಾದಶಹರ ಮತ್ತೊಬ್ಬ ಮಗನಾದ ಆರು ವರ್ಷದ ಶಹಾಜಹಾನ ಅಜೀಮುಶಹಾ ಎಂಬ ಕೂಸನ್ನು ಹೆಸರಿಗೆ ಕೂಡಿಸಿ, ಆ ಕೂಸನ್ನು ತೊಡೆಯಮೇಲೆ ಆಡಿಸುತ್ತ, ಆತನು ದೊಡ್ಡವನಾಗುವ ವರೆಗೆ ತಾನು ಕಾರಭಾರ ಮಾಡಬೇಕೆಂದು ಆ ದುಷ್ಟ ಬೇಗಮೆಯು ಮಾಡಿರುವಳು

ಛತ್ರಸಾಲ—ಹಾಗಾದರೆ ಯುವರಾಜ ಮಾ[redacted]ಗತಿಯೇನು?

ಸ್ತ್ರೀ—ಖಡ್ಗದ ಒಂ[redacted] ಸಹಜವಾಗಿ ಆತನ ತಲೆಹಾರಿಸಬಹುದೆಂದು ರೋಷನಾರಳು ತಿಳಿದಿರುವಳು; ಆದ್ದರಿಂದ ನೀನು ಈಗ ನನ್ನ ಸಂಗಡ ನಡೆ. ಆ ದುಷ್ಟ ಸ್ತ್ರೀಯು ತನ್ನ ಕಾರಸ್ಥಾನದಲ್ಲಿ ಮಗ್ನಳಾಗಿರುವದರೊಳಗೆ ನಮ್ಮ ಮನೆಗೆ ಹೋಗೋಣ. ಇಲ್ಲದಿದ್ದರೆ, ಆ ಕೃಷ್ಣಸರ್ಪದ ಕಡತದಿಂದ ಬಾದಶಹರೊಡನೆ ನಾವಿಬ್ಬರೂ ಸಾಯಬೇಕಾದೀತು. ನಾಳೆನ

ದರ್ಬಾರದ ಹೊತ್ತಿಗಿಂತ ಎರಡುತಾಸು ಮುಂಚಿತವಾಗಿ, ನೆರೆದ ದರ್ಬಾರದಲ್ಲಿ ಬಾದಶಹರ ಮರಣದ ಸುದ್ದಿಯನ್ನು ಪ್ರಸಿದ್ಧಪಡಿಸಬೇಕೆಂದು ಆ ನೀಚನು ನಿರ್ಧರಿಸಿರುವನು. ಅಷ್ಟರಲ್ಲಿ ನಾವು ಬಾದಶಹರನ್ನು ಬಿಡಿಸೋಣ ನಡೆ. ಯುವರಾಜ ಮೋ ಅಜ್ಜಿಮನೂ ಈ ಕೆಲಸದಲ್ಲಿ ನಿನಗೆ ಸಹಾಯಮಾಡುವನು.

ಛತ್ರಸಾಲ—ಅಮ್ಮಾ, ಬಾದಶಹರ ಸಲುವಾಗಿ ಇಷ್ಟು ಕರುಣಾಮಯಳಾಗಿರುವ ನೀನು ಬಾದಶಹರಿಗೆ ಏನಾಗಬೇಕು? ನಿನ್ನ ಹೆಸರೇನು?

ಸ್ತ್ರೀ—ನಾನು ಬಾದಶಹನ ಹೆಂಡತಿಯು ; ನಾನು ವಿಂಧ್ಯವಾಸಿನಿಯನ್ನು ಧ್ಯಾನಿಸುವಾಗೂ, ನನ್ನ ಜನ್ಮಭೂಮಿಯ ಅಭೀಷ್ಟವನ್ನು ಚಿಂತಿಸುವಾಗೂ ಬುಂದೇಲ ಖಂಡದೊಳಗಿನ ಲಲಿತೆಯಾಗಿರುವೆನು. ಬೇರೆ ಪ್ರಸಂಗದಲ್ಲಿ ಈ ದೇಹಕ್ಕೆ ತಯೀಷಾ ಬೇಗಮೆ ಎಂದು ಕರೆಯುವರು.

ಛತ್ರಸಾಲ— ಅಂದರೆ, ಯುವರಾಜ ಮೋ ಅಜ್ಜಿಮನ ಮಾತೃಶ್ರೀಯವರು ತಾವೇ ಏನು?

ಸ್ತ್ರೀ—ಹೌದು, ಈಗ ನಿನ್ನ ಒಡಹುಟ್ಟಿದಾಕೆಯಾಗಿರುವ ನಾನೇ ಮೋ ಅಜ್ಜೀಮನ ತಾಯಿಯು!



ಆನೆಯ ಪ್ರಕರಣ-ಬಾದಶಹನ ದರ್ಬಾರವು.

ರಮಜಾನದ ಇಪ್ಪತ್ತೈದನೆಯ ತಾರೀಖು. ಮೊದಲೇ ಗೊತ್ತಾದಂತೆ ದಿವಾಣ-ಇ-ಆಮದಲ್ಲಿ ಭವ್ಯವಾದ ದರ್ಬಾರು ನೆರೆದಿದೆ. ಪ್ರಧಾನಮಂಡಲದವರು ಅಧ್ಯತೆಯಿಂದ ಕುಳಿತುಕೊಂಡಿದ್ದಾರೆ. ಸರದಾರರು, ದರಕದಾರರು, ಅಮೀರ ಉಮರಾವರು, ಮಾಂಡಲಿಕರಾಜರು, ನವಾಬರು, ಸುಲತಾನರು ತಮ್ಮ ತಮ್ಮ ಯೋಗ್ಯತೆಯಂತೆ ಉಚಿತಸ್ಥಾನಗಳನ್ನು ಅಲಂಕರಿಸಿರುತ್ತಾರೆ. ಇಬ್ಬರು ರಾಜಕುಮಾರರು, ಈ ಹೊತ್ತಿನಂಥ ಮಂಗಲ ಪ್ರಸಂಗದಲ್ಲಿ ಸಾರ್ವಭೌಮನೃಪತಿಯ ಕಂಚುಕಿಯ ಪದವಿಯ ಮಾನವು ತಮಗೆ ದೊರತದ್ದಕ್ಕಾಗಿ ಹೆಮ್ಮೆಯಿಂದ ಮಯೂರಾಸನದ ಎರಡೂ ಮಗ್ಗಲಲ್ಲಿ ನಿಂತುಕೊಂಡಿದ್ದಾರೆ.

ಜೀರೆ ಇಬ್ಬರುರಾಜಕುಮಾರರು ದಿಲ್ಲೀಪತಿಯ ಗೌರವಶಾಲಿಯಾದ ಪೆಸರನ್ನು ಬಿರುದಿನೊಡನೆ ಹೊಗಳಲು ಸಿದ್ಧರಾಗಿ ತನ್ನ ಕೈಯೊಳಗಿನ ಬಂಗಾರದ ಬೆತ್ತಗಳಕಡೆಗೆ ಅಭಿಮಾನದಿಂದ ನೋಡತೊಡಗಿರುತ್ತಾರೆ. ಬಾದಶಹನ ಧರ್ಮಗುರುವು ಮಯೂರಾಸನದ ಹತ್ತಿರವಲ್ಲಿಯೇ ಒಂದು ಉಚ್ಚಾಸನದ ಮೇಲೆ ಕುಳಿತಿದ್ದು, ಅಲನುಗೀರನ ದರ್ಬಾರದೊಳಗಿನ ತನ್ನ ಶ್ರೇಷ್ಠತ್ವವನ್ನು ಪ್ರಕಟಿಸುತ್ತಲಿದ್ದಾನೆ; ಆದರೆ ಏನಿದ್ದು ಏನು ಮಾತಬೇಕು? ದರ್ಬಾರದ ಕಾರ್ಯಕ್ರಮವು ಕಾಲವ್ಯತಿಸಿಹೋದರೂ ಮಯೂರಾಸನವನ್ನು ಬಾದಶಹನು ಅಲಂಕರಿಸದೆ ಹೋದವರ್ದರಿಂದ ತಿಲಕವಿಹೀನ ಸುಂದರಿಯಂತೆ ದರ್ಬಾರವು ಅಂದಗೆಟ್ಟ ಅನುಮಂಗಲ ಸುರಿಯುತ್ತಿತ್ತು! ಈದಿನ ಬಾದಶಹನು ಮಯೂರಾಸನ ವೇರುವನೋ-ಬೇರೆ ಯಾರಾದರೂ ಅವನ್ನು ಆಕ್ರಮಿಸುವರೋ, ಬಾದಶಹನ ಬೇನೆಯು ನೆಪ್ಪಗಾಗಿರುವದೋ-ಅಥವಾ ಹಾಗೆಯೇ ಇರುವನೋ ಇಲ್ಲವೆ ಆತನು ಸತ್ತಿರುವನೋ ಎಂಬದು ಯಾರಿಗೂ ಗೊತ್ತಿದ್ದಿಲ್ಲ. ಎಲ್ಲರೂ ತಮತಮಗೆ ತೋಚಿದಂತೆ ಏನಾದರು ಕಲ್ಪಿಸುತ್ತ ಕುಳಿತುಕೊಂಡಿದ್ದರು. ಇತ್ತ್ಯಯುವರಾಜ ಛತ್ರಸಾಲನು ಅಕಸ್ಮಾತ್ ಇಲ್ಲವಂತೆ ಆದದ್ದರಿಂದ ಚಂಪತರಾಯನು ಖಿನ್ನನಾಗಿರುವಾಗ, ಆತನನ್ನು ರಾಜಾ ಜಯಸಿಂಗನು ಸಮಾಧಾನ ಗೊಳಿಸುತ್ತಿದ್ದನು.

ಹೀಗಿರುವಾಗ ಸಶಸ್ತ್ರ ತಾರ್ತರ ತರುಣಿಯರು ಸುತ್ತುಗಟ್ಟಿರಲು, ಬಬ್ಬ ಗೋಷೆಯ ಸ್ತ್ರೀಯು ತನ್ನ ಕೈಯಲ್ಲಿ ರಾಜಮುಕುಟವನ್ನು ಹಿಡಿದುಕೊಂಡು ಒಂದು ಆರುವರ್ಷದ ಕೂಸು ಆಕೆಯ ಬೆರಳು ಹಿಡಿದುಕೊಂಡು ಬರುತ್ತಿರಲು, ಜನಾನಖಾನೆಯ ಬಾಗಿಲಿನಿಂದ ಹೊರಟು ದರ್ಬಾರಕ್ಕೆ ಬಂದಳು. ಅದನ್ನು ನೋಡಿ ಎಲ್ಲರೂ ಬೆರಗಾಗಿ ಕುಳಿತುಕೊಂಡರು. ಅಂತಹ ಪ್ರಚಂಡ ದರ್ಬಾರವೆಂದರೇನು? ಸ್ತಬ್ಧವಾಗಿ ಕುಳಿತುಬಿಟ್ಟಿತ್ತು! ಆ ಸ್ತ್ರೀಯು ಸಪರಿವಾರ ಮೆಲ್ಲಮೆಲ್ಲನೆ ಮಯೂರಾಸನದ ಕಡೆಗೆ ಸಾಗಿಬರುತ್ತ, ಆ ಆಸನದ ಮೊದಲನೆಯ ಪಾವಟಿಗೆಯಮೇಲೆ ಒಂದುಕಾಲು ಇಟ್ಟು ನಿಂತುಕೊಂಡು ತನ್ನ ಮೋರೆಯ ಬುರುಕಿಯನ್ನು ತೆಗದು, ತನ್ನ ತೀಕ್ಷ್ಣದೃಷ್ಟಿಗಳಿಂದ ದರ್ಬಾರದ ನಾಲ್ಕೂಕಡೆಗೆ ನೋಡಹತ್ತಿದಳು. ಆಗಿನ ಆಪ್ತೌಢೆಯ ಸುಂದರವಾದ ತೇಜಸ್ವಿಮುಖಮಂಡಲವನ್ನು ನೋಡಿ, ದರ್ಬಾರಕ್ಕೆ ದರ್ಬಾರವೇ

ಬೆಪ್ಪಾಗಿ ಕುಳಿತುಕೊಂಡಿತು. ಆಗ ಆ ಸ್ತ್ರೀಯು ಗಾಂಭೀರ್ಯದಿಂದ ಸಭೆ
ನ್ನುದ್ದೇಶಿಸಿ—"ವೃದ್ಧಪ್ರಧಾನಜೀ, ಓಲಾಸಿಗಳಾದ ಸರದಾರರೆ, ಸಮಸ್ತ
ಮಾಂಡಲಿಕರಾಜರೆ, ನನ್ನ ಅಣ್ಣಂದಿರಾದ ಔರಂಗಜೇಬಬಾದಶಹರ ಮರಣ
ವಾರ್ತೆಯನ್ನು ನಿಮ್ಮೆಲ್ಲರಮುಂದೆ ಹೇಳಲಿಕ್ಕೆ ನನಗೆ ಅತ್ಯಂತ ವ್ಯಸನವಾಗ
ತ್ತದೆ. ಬಾದಶಹರಿಗೆ ನೆಟ್ಟಗಾಗಿ ಅವರು ಪುನಃ ಮಯೂರಾಸನವನ್ನು ಅ
ಕರಿಸಿ ರಾಜ್ಯಭಾರಮಾಡಬೇಕೆಂದು ನಾವು ಪರಿಪರಿಯಾಗಿ ಕಷ್ಟಪಟ್ಟಿದ್ದನ
ನೀವುಅರಿತಿರುವಿರಿ; ಆದರೆ ನಮಗೆ ಯಶಸ್ಸುಕೊಡುವದು ಅಲ್ಲಾನ ಮನಸ್ಸಿ
ಬರಲಿಲ್ಲ! ಬಂಧುವಿನ ಮರಣಕ್ಕಾಗಿ ನಾವು ಶೋಕಮಗ್ನರಾಗುವದು ನಮ್ಮ
ಕರ್ತವ್ಯವಾಗಿರುವದು;ಆದರೂ ಸಾಮ್ರಾಜ್ಯದ ಹಿತಕ್ಕೆ ಲಕ್ಷಗೊಟ್ಟು ಆ ದುಃಖ
ವನ್ನು ನುಂಗಿಕೊಂಡು ತೆರವಾದ ಮಯೂರಾಸವನ್ನು ಅಲಂಕರಿಸುವದಕ್ಕಾಗಿ
ಈ ಶಹಾಜಾದಾಅಜೀಮಶಹನನ್ನು ಕರೆದುಕೊಂಡು ನಾನು ದರ್ಬಾರಕ್ಕೆ ಬರ
ಬೇಕಾಯಿತು. ಪರಲೋಕವಾಸಿ ಅಲಮಗೀರ ಬಾದಶಹರಿಗೆ ಹಲವು ಜನ
ಹೆಂಡರಿದ್ದರೂ, ಶಹಾನವಾಜಖಾನನಮಗಳೊಬ್ಬಳೇ ಆ ಬಾದಶಹರ ಕುರಾಣ
ಸಮ್ಮತ ಹೆಂಡತಿಯಾಗಿರುವಳು. ಕ್ರೈಸ್ತಧರ್ಮವನ್ನನುಸರಿಸಿರುವ ಉದೇ
ಪುರಿಯಾಗಲಿ, ಬುಂದೇಲಖಂಡದಿಂದ ಓಡಿಸಿಕೊಂಡು ಬಂದಿರುವ ಆಯೇಷೆ
ಯಾಗಲಿ ಬಾದಶಹನ ನಿಜವಾದ ರಾಣಿಯರಾಗಿರದೆ, ಉಪಪತ್ನಿಯರಾಗಿರು
ವರೆಂಬ ನಮ್ಮ ಮತದಂತೆ ನಿಮ್ಮ ಮತವಾದರೂ ಇರಲೇಬೇಕೆಂದು ನಾನು
ಇಚ್ಛಿಸುತ್ತೇನೆ. ಆಯೇಷೆಯನ್ನಾಗಲಿ, ಉದೇಪುರಿಯನ್ನಾಗಲಿ, ಉಳಿದ
ನೂರಾರು ಸುಂದರ ತರುಣಿಯರನ್ನಾಗಲಿ ಬಾದಶಹನು ತನ್ನ ವಿಷಯಸುಖ
ಕ್ಕಾಗಿ ಸಂಗ್ರಹಿಸಿರುವದರಿಂದ, ಅವರ ಹೊಟ್ಟೆಯಲ್ಲಿ ಹುಟ್ಟಿದ ಕಮ್ಮಅಸ್ಸಲ
ವೋರರಲ್ಲಿ ಯಾರಿಗೂ ಮಯೂರಾಸನದಮೇಲೆ ಹಕ್ಕು ಇರುವದಿಲ್ಲವೆಂದು
ನಾನು ಸ್ಪಷ್ಟವಾಗಿಹೇಳುತ್ತೇನೆ; ಆದ್ದರಿಂದ ಈಗ ಈ ಶಹಾಜಾದಾಅಜೀಮು
ನನ್ನು ದಿಲ್ಲಿಯಸಿಂಹಾಸನದ ನಿಜವಾದ ಬಾಧ್ಯಸ್ಥನೆಂದು ತಿಳಿದು, ನಾವುಈಗ
ಮುಂದುಮಾಡಿರುವೆವು. ಪರಮ ಕೃಪಾಳುವಾದ ಅಲ್ಲಾನ ಇಚ್ಛೆಯಂತೆ
ಇಂದಿನಿಂದ ಈ ಮಯೂರಾಸನವು ಅಜೀಮಶಹನದಾಗಿದ್ದು, ಈ ಅಜ್ಞಾನಿ
ಬಾದಶಹನ ಪ್ರತಿಪಾಲನದ ಭಾರವನ್ನು ನಾವು ಸ್ವತಃ ವಹಿಸುವವರಿದ್ದೇವೆ;
ಅಂದಬಳಿಕ ಈ ಚಿಕ್ಕ ಬಾದಶಹನು ವಯಸ್ಸಿಗೆ ಬರುವವರೆಗೆ ದಿಲ್ಲಿಯ

ಾವತ್ತು ರಾಜ್ಯಸೂತ್ರಗಳನ್ನು ನಾವು ಸ್ವತಃ ಕೈಯಲ್ಲಿ ತಕ್ಕೊಂಡಿರುವೆವು; ಆದ್ದರಿಂದ ನೀವೆಲ್ಲರೂ ಇನ್ನುಮೇಲೆ ಅಲ್ಪ ವಯಸ್ಕ ಬಾದಶಹನ ಪ್ರತಿನಿಧಿಯಾದ ರೋಷನಾರಾ ಬೇಗಮರ ಆಜ್ಞೆಯನ್ನು ಪಾಲಿಸಬೇಕಾಗುವದು. ಇಂದಿಗೆ ಔರಂಗಜೇಬ ಬಾದಶಹನ ಆಳಿಕೆಯು ಮುಗಿದುಹೋಗಿ, ರೋಷನಾರಾ ಬೇಗಮೆಯ ಆಳಿಕೆಗೆ ಪ್ರಾರಂಭವಾಗಿರುವದು. ಈ ಆಳಿಕೆಯಲ್ಲಿ ಔರಂಗಜೇಬನ ಹಿಂದಿನ ಬಾದಶಹರ ಕಾಲದಲ್ಲಿಯ ಯಾವತ್ತು ವಿಲಾಸಗಳು ಪುನಃ ನಡಿಸಲ್ಪಡುವವು. ನಮ್ಮ ಹೆಸರನ್ನು ಯೋಗ್ಯ ಪದವಿಯಿಂದ ಉಚ್ಚರಿಸಲು ಅಪ್ಪಣೆಕೊಡುವ ಪೂರ್ವದಲ್ಲಿ, ದಯಾಮಯ ಅಲ್ಲಾನ ಸ್ಮರಣೆಮಾಡುತ್ತ, ರಾಜನಿಷ್ಠಾಪೂರ್ಣವಾದ ಪ್ರಚಂಡ ಜಯಜಯಕಾರ ಧ್ವನಿಯೊಡನೆ ಈ ರಾಜಸಿಂಹಾಸನನನ್ನು ನಾವು ಸ್ವೀಕರಿಸುವೆವು.

ಈ ಮೇರೆಗೆ ನುಡಿದು ಅತ್ಯಂತಸಾಹಸಿಯಾದ ರೋಷನಾರಳು ಪ್ರಧಾನ ಮಂಡಲದ ಕಣ್ಣಿಲ್ಲಿ ಮಣ್ಣು ಚಲ್ಲುತ್ತ, ತನ್ನ ಅನುಯಾಯಿಗಳಾದ ತಾರ್ತರ ತರುಣಿಯರು ಎರಡುಸಾರೆ ಜಯಘೋಷ ಮಾಡುತ್ತಿರಲು, ಅಧಿಕಾರ ಮುದ್ರೆಯಿಂದ ನಾಲ್ಕೂ ಕಡೆಗೆ ನೋಡುತ್ತ ಮಯೂರಾಸನದ ಎಡನೆಯ ಪಾವಟಿಗೆಯನ್ನು ಹತ್ತಿದಳು. ಇನ್ನೊಂದು ಸಾರೆ ಜಯಘೋಷವಾಗುತ್ತಿರುವಾಗ ಮೂರನೆಯ ಪಾವಟಿಗೆಯನ್ನು ಹತ್ತಿದರೆ, ಆಕೆಯ ಮಹತ್ವಾಕಾಂಕ್ಷೆಯು ಪೂರ್ಣವಾಗುತ್ತಿತ್ತು; ಆದರೆ ಹಾಗಾಗುವದು ದೇವರ ಸಂಕೇತವಿದ್ದಿಲ್ಲ. ಬೇಗಮೆಯ ತಾರ್ತರ ಸ್ತ್ರೀಯರು ಮೂರನೆಯಸಾರೆ ಜಯಘೋಷಮಾಡದೆ ಬಾಯಿಗೆ ಬೀಗಹಾಕಿದಂತೆ ಸುಮ್ಮನೆ ನಿಂತುಕೊಂಡರು. ಅವನ್ನು ನೋಡಿ ರೋಷನಾರಳು ಸಂತಪ್ತಳಾದಳು. ಆಕೆಯು ತಾರ್ತರ ತರುಣಿಯರ ಮೇಲೆ ಬೈಕೆಕಾರುತ್ತ—"ಯಾಕೆ ಸುಮ್ಮನಾದಿರೇ ಲೌಡಿಯರಿರಾ? ಮೂರುಸಾರೆ ಜಯಘೋಷಮಾಡಿರೆಂದು ನನ್ನ ಬಾದಶಾಹಿಯ ಅಪ್ಪಣೆಯಾಗಿರಲು, ಹೀಗೆ ನನ್ನ ಅವಮಾನಮಾಡುವಿರಾ" ಎಂದು ಗದ್ದರಿಸಿದಳು; ಆದರೂ ಆ ದಾಸಿಯರು ಜಯಘೋಷಮಾಡಲಿಲ್ಲ. ಅಷ್ಟರಲ್ಲಿ, ಈವರೆಗೆ ಸುಮ್ಮನೆ ಕುಳಿತಿದ್ದ ಪ್ರಚಂಡ ದರ್ಬಾರವ್ರ, ಔರಂಗಜೇಬಬಾದಶಹನ, ಹಾಗು ಯುವರಾಜ ಸೊಲ್ತಾನ್ ಮುಅಜ್ಜಿಮನ ಹೆಸರಿನಿಂದ ಜಯಧ್ವನಿ ಮಾಡತೊಡಗಿತ್ತು. ಆಗ ಪ್ರತ್ಯಕ್ಷ ಔರಂಗಜೇಬ ಬಾದಶಹನು ಸುಂದರ ರಾಜಪುತ್ರರಿಂದ ಸುತ್ತುಗಟ್ಟಿದವನಾಗಿ

ಒಂದು ಕೈಯನ್ನು ಮೋ ಅಜ್ಜಿಮನ ಕೈಯಲ್ಲಿ ಕೊಟ್ಟು, ಒಂದು ಕೈಯನ್ನು ಒಬ್ಬ ದೇದೀಪ್ಯಮಾನನಾದ ತರುಣನ ಹೆಗಲಮೇಲೆ ಇಟ್ಟು ಸಿಂಹಾಸನದ ಬಳಿಯಲ್ಲಿ ನಿಂತುಕೊಂಡಿದ್ದನು. ರೋಷನಾರಳು ಚಿತ್ರದೊಳಗಿನ ಗೊಂಬೆಯಂತೆ ಮಯೂರಾಸನದ ಎರಡನೆಯ ಪಾವಟಿಗೆಯಮೇಲೆ ನಿಂತುಕೊಂಡಿದ್ದಳು. ಆಕೆಯು ಸ್ಥಳಬಿಟ್ಟು ಕದಲದೆ, ದರ್ಬಾರವನ್ನುದ್ದೇಶಿಸಿ-"ಈತನು ಅಲಮಗೀರನಲ್ಲ ; ಈತನು ನಿಮ್ಮ ಬಾದಶಹನಲ್ಲ ; ನಿಮ್ಮ ಬಾದಶಹನು ಯಾವಾಗೋ ಪರಲೋಕವಾಸಿಯಾಗಿರಬಹುದು. ಇದು ಅಲಮಗೀರನ ಪಿಶಾಚವು ! ಇಂಥ ಸೈತಾನನ ಜಯಘೋಷವನ್ನು ಏಕೆಮಾಡುವಿರಿ" ಎಂದು ಕೇಳಲು, ದರ್ಬಾರದವರು ಪುನಃ ಮೊದಲಿನಂತೆ ಪ್ರಚಂಡವಾದ" ಜಯಘೋಷ ಮಾಡಿದರು. ಆ ಜಯಜಯಕಾರದ ಪ್ರತಿಧ್ವನಿಯನ್ನನುಸರಿಸಿ ಬಾದಶಹನು ನುಡಿದನೇನಂದರೆ—

ರೋಷನಾರ, ನೀನು ನಿಜವಾದ ಪಿಶಾಚವು! ಸೈತಾನನು ನಿನ್ನ ಕೃತಿಯನ್ನು ನೋಡಿ ನಾಚಬಹುದು. ನಿನ್ನ ಈ ಘೋರ ಅಪರಾಧಕ್ಕಾಗಿ ಇದೇ ಕ್ಷಣದಲ್ಲಿ ನಿನ್ನ ಶಿರಚ್ಛೇದವಾಗತಕ್ಕದ್ದು ; ಆದರೆ ನಮ್ಮ ಹಿತಕರ್ತೃಗಳ ಅಭಿಸಂಧನಮಾಡುವದಕ್ಕಾಗಿಯೂ, ಪೂಜ್ಯಧರ್ಮಾಧಿಕಾರಿಗಳ ಆಶೀರ್ವಾದವನ್ನ ಪಡೆಯುವದಕ್ಕಾಗಿಯೂ ದರ್ಬಾರ ನೆರೆಸಿರುವ ಈ ಮಂಗಲ ಪ್ರಸಂಗದಲ್ಲಿ, ನಿನ್ನ ಸಂಹಾರದ ಅಮಂಗಲಕಾರ್ಯವನ್ನು ಮಾಡುವದು ಸರಿಯಲ್ಲ. ಮೇಲಾಗಿ ನೀನು ಈ ಮಯೂರಾಸನವು ನನಗೆ ಪ್ರಾಪ್ತವಾಗುವದಕ್ಕಾಗಿ ಮಾಡಿದ ಸಹಾಯವನ್ನು ನಾನು ಮರೆತಿರುವದಿಲ್ಲ; ಆದ್ದರಿಂದ ನಿನಗೆ ಈಗ ಜೀವದಾನವನ್ನು ಕೊಟ್ಟಿದ್ದೇನೆ. ನಿನ್ನ ಉಪಕಾರದ ಭಾರವನ್ನು ಕೆಲಮಟ್ಟಿಗಾದರೂ ಇಳಿಸಿಕೊಳ್ಳುತ್ತಿರುವೆನು; ಆದರೆ ಇಂಥ ಕ್ಷಮೆಯನ್ನು ಅಲಮಗೀರ ಬಾದಶಹನು ಮೇಲಿಮೇಲೆ ಮಾಡುತ್ತಿರುವದಿಲ್ಲವೆಂಬದನ್ನು ಚನ್ನಾಗಿ ನೆನಪಿನಲ್ಲಿಡು. ಹೇಗು, ಇದಕ್ಕಾ ಹೆಚ್ಚಿನ ಶೋಭೆಯನ್ನು ಪಡೆಯವ ಉಸಾಬರಿಗೆ ಹೋಗದೆ, ತಟ್ಟನೆ ಇಲ್ಲಿಂದ ಹೊರಟುಹೋಗು. ಜನಾನಖಾನೆಯೊಳಗಿನ ತಾರ್ತಾರ ಸ್ತ್ರೀಯರ ಬಂಡನ್ನು ಇಂದಿನಿಂದ ಪೂರಾ ಮುರಿದುಬಿಟ್ಟಿರುತ್ತದೆ. ಈ ಹುಡುಗೆಯರಲ್ಲಿ ಒಬ್ಬಳೂ ನಿನ್ನನ್ನು ಅನುಸರಿಸಿ ಜನಾನಖಾನೆಗೆ ಬರಲಾರಳು. ಹುಡುಗಿಯರೇ, ತಾತರ್ಾರ ಹುಡುಗಿಯರೇ, ಇಂದಿನಿಂದ

ನಿಮ್ಮನ್ನು ಕೆಲಸದಿಂದ ದೂರಮಾಡಿರುತ್ತದೆ. ಅಲ್ಲಾನು ಮೆಚ್ಚುವಂತೆ ನೀವು ನೀತಿಯಿಂದ ನಡೆದು ಸುಖಿಗಳಾಗಿರಿ, ಹೋಗಿರಿ ಮನೆಗೆ!

ಬಾದಶಹನ ಈ ಮಾತುಗಳನ್ನು ಕೇಳಿ ರೋಷನಾರಳು ಸಿಂಹಾಸನದ ಪಾವಟಿಗೆಯಿಂದ ಇಳಿದಳು. ತಾರ್ತರ ತರುಣಿಯರು ಶಸ್ತ್ರಗಳನ್ನಿಟ್ಟು ಹೊರಟು ಹೋದರು. ರೋಷನಾರಳು ತಂದಿದ್ದ ರಾಜಮುಕುಟವನ್ನು ಬಾದಶಹನು ತನ್ನ ತಲೆಯಮೇಲೆ ಹಾಕಿಕೊಂಡು ಮಯೂರಾಸನದಮೇಲೆ ಕುಳಿತನು. ಆತನು ಆ ದೇದೀಪ್ಯಮಾನನಾದ ತರುಣನನ್ನು ತನ್ನ ಬಲಗಡೆಗೆ ಒಂದು ಆಸನದಮೇಲೆ ಕುಳ್ಳಿರಿಸಿಕೊಂಡನು;ಎಡೆಗಡಗೆ ಶಹಾಜಾದಾಮುಅಜ್ಜಿ ಮನನ್ನು ಒಂದು ಆಸನಮೇಲೆ ಕುಳ್ಳಿರಿಸಿ ಕೊಂಡನು. ರೋಷನಾರಳು ಜನಾನಖಾನೆಗೆ ಹೋಗಲುಹೊರಟು, ಕೈಗಡದ ಸೌಮ್ಯಮುಖ್ರಿಯನ್ನು ತಾಳಿ ಬಾದಶಹನನ್ನು ಕುರಿತು—"ಖಾವಿಂದ, ನನ್ನವಿಷಯವಾಗಿ ಆಗಿರುವ ತಮ್ಮ ತಪ್ಪುತಿಳುವಳಿಕೆಯನ್ನು ಬೇಗನೆ ದೂರಮಾಡುವೆನು" ಎಂದು ಹೇಳಿ, ಆತೇಜಸ್ವಿ ತರುಣನ ಮೇಲೆ ವಿಷಕಾರುತ್ತ ಅಲ್ಲಿಂದ ಹೊರಟು ಹೋದಳು. ಆತನೇ ಬಾದಶಹನನ್ನು ಸಾವಿನ ದವಡೆಯೊಳಗಿಂದ ಉಳಿಸಿರಬೇಕೆಂದು ಆ ಧೂರ್ತಳು ತರ್ಕಿಸಿದ್ದಳು. ಇತ್ತ ಅಲಮಗೀರ ಬಾದಶಹನು ದರ್ಬಾರದ ಜನರನ್ನು ಕುರಿತು ಕೃತಜ್ಞತೆಯಿಂದ—"ಪ್ರಧಾನರೇ, ಸರದಾರರೇ, ಮಾಂಡಲಿಕ ರಾಜರೇ, ನನಗೆ ಇಂದು ಪ್ರಾಣದಾನ ಮಾಡಿದವನು ಈ ತರುಣನು! ನೋಗಲ ಬಾದಶಾಹಿಯನ್ನು ಬೇರುಸಹಿತವಾಗಿ ಕಿತ್ತು ಒಗೆಯುವೆನೆಂತಲೂ, ಬುಂದೇಲ ಖಂಡದೊಳಗಿನ ಇಸ್ಲಾಮಿ ಅಧಿಕಾರವನ್ನು ನಷ್ಟಪಡಿಸಬೇಕೆಂತಲೂ, ರಾಗಲು ರಾತ್ರಿ ಯತ್ನಿಸುತ್ತಿರುವ ಯವನರ ಶಸ್ತ್ರಾಗಾರ ಬುಂದೇಲ ಖಂಡದ ಪ್ರಮುಖಸೈನಿಸುವ ಚಂಪತರಾಯನ ಮಗನು ಈತನು. ಈತನ ಹೆಸರು ಛತ್ರಸಾಲ!

ಈ ಪ್ರಕಾರ ನುಡಿಯುವಾಗ ಬಾದಶಹನ ಲಕ್ಷವು ತನ್ನ ಪಾರ್ಶ್ವದಲ್ಲಿದ್ದ ತರುಣನ ಚಂಪತರಾಯನು ಅರಿತನು. ಆಗ ಬಾದಶಹನು ಚಂಪತರಾಯನನ್ನು ಕುರಿತು—"ಚಂಪತರಾಯ, ನಿಮ್ಮನ್ನು ಅಷ್ಟುದೂರ ಕಳುಹಿಸುವೆನೆಂದು ನಿಮ್ಮ ತಂದೆಗೆ ಆಶ್ವಾಸನೆಮಾಡಿದ ಹಾಗೆಯೇಸರಿ! ಜಯಸಿಂಗನು, ಚಂಪತರಾಯನನ್ನು ಕರೆದುಕೊಂಡು ಹೀಗೆ ಇತ್ತಕಡೆ ಬರಬೇಕು! ಇಂದು ದರ್ಬಾರ

ದಲ್ಲಿ ಶ್ರೇಷ್ಠಸ್ಥಾನದಲ್ಲಿ ಕುಳಿತುಕೊಳ್ಳುವ ಮಾನವು ಚಂಪತರಾಯರದಿರು ತ್ತದೆ'' ಎಂದು ನುಡಿಯಲು, ಒಂದೇ ಆಸನದಲ್ಲಿ ಕುಳಿತಿದ್ದ ಇವರಿಬ್ಬರು ರಜಪೂತವೀರರು ಎದ್ದುಹೋಗಿ ಬಾದಶಹನ ಬಳಿಯಲ್ಲಿ ಕುಳಿತುಕೊಂಡರು. ಆಗ ಬಾದಶಹನು ಪುನಃ ದರ್ಬಾರಿನ ಜನರನ್ನು ಕುರಿತು—'' ಚಂಪತರಾಯಜೀ, ಮಾಂಡಲಿಕರಾಜರೇ, ಸರದಾರರೇ, ನಿಮ್ಮ ಸ್ವಾಗತಮಾಡುವ ಸುಪ್ರಸಂಗವು ಅಲ್ಲಾನಕೃಪೆಯಿಂದ ಒದಗಿದ್ದಕ್ಕಾಗಿ ನನಗೆ ಮನಃಪೂರ್ವಕವಾಗಿ ಆನಂದವಾಗಿರುತ್ತದೆ. ನೀವೆಲ್ಲರೂ ಒಟ್ಟುಗೂಡಿ ಸಾಮ್ರಾಜ್ಯನಿಷ್ಠೆಯನ್ನು ವ್ಯಕ್ತಪಡಿಸಿದ್ದಕ್ಕಾಗಿ ನಾವು ಅತ್ಯಂತ ಅಭಿಮಾನ ಪಡುವೆವು. ನಮ್ಮ ಆಳಿಕೆಯಲ್ಲಿ ನಾವು ನಮ್ಮ ವಿಸ್ತಾರವಾದ ಸಾಮ್ರಾಜ್ಯದೊಳಗಿನ ಪ್ರಜೆಗಳಿಗಾಗಿ, ಮಾನಕರಿಗಳಿಗಾಗಿ, ಅಧಿಕಾರಿಗಳಿಗಾಗಿ, ಅರಸರಿಗಾಗಿ ಹಿಂದುಗಳಿಗಾಗಿ, ಮುಸಲ್ಮಾನರಿಗಾಗಿ, ರಜಪೂತರಿಗಾಗಿ, ಬುಂದೇಲಿಗಳಿಗಾಗಿ, ಶಿಯಾಗಳಿಗಾಗಿ ಸುನ್ನಿಗಳಿಗಾಗಿ ಏನೇನುಮಾಡುವೆವೆಂಬದನ್ನು ಈಗ ನಿಮ್ಮನ್ನೆ ಹೇಳುತ್ತ ಕುಳಿತುಕೊಳ್ಳುವದರಲ್ಲಿ ಅರ್ಥವಿಲ್ಲ. ಬಹಳವಾತಾಡುವದಕ್ಕಿಂತ ಸ್ವಲ್ಪ ಮಾಡಿತೋರಿಸುವದು ಒಳ್ಳೆಯದು. ಅಲ್ಲಾನ ಮನಸ್ಸು ಸುಪ್ರಸನ್ನವಾಗುವಂತೆ, ಪೈಗಂಬರರ ವಚನಗಳಿಗೆ ಮಹತ್ವವು ಉಂಟಾಗುವಂತೆ, ನಮ್ಮ ಪವಿತ್ರ ಶಾಸ್ತ್ರವಾದ ಕುರಾಣದ ಪ್ರತಿಷ್ಠೆಯು ನಾಲ್ಕೂಕಡೆಗೆ ಆಗುವಂತೆ, ಅಲ್ಲಾನ ಭಕ್ತಸಮೂಹವು ಹೆಚ್ಚುವಂತೆ ಮಾಡುವಾಗ ನಮ್ಮಿಹಾಗೂ ನಮ್ಮ ಸಾಮ್ರಾಜ್ಯದ ಸರ್ವಸ್ವವನ್ನು ಅರ್ಪಿಸುವೆವು. ಮಹಮ್ಮದ ಪೈಗಂಬರರ ದಿವ್ಯ ಸಂದೇಶಗಳನ್ನು ಪೂರ್ಣವಾಗಿ ಬಳಿಕೆಯಲ್ಲಿ ತರುವದೇ ನಮ್ಮ ರಾಜ್ಯದಾಡಳಿತದ ಮುಖ್ಯ ಧ್ಯೇಯವಾಗಿರುವದು! ನಮ್ಮ ಹಿರಿಯರ ಕಾಲದಿಂದ ನಡೆದು ಬಂದಿರುವ ಯಾವತ್ತು ವಿಲಾಸಗಳು ಇನ್ನು ನಿಲ್ಲಿಸಲ್ಪಡುವವು. ಈ ಎಲ್ಲ ಸಂಗತಿಗಳನ್ನು ನಿಮ್ಮ ಮುಂದೆ ಹೇಳುವ ಸುಪ್ರಸಂಗವು ಒದಗಿದ್ದು ಈ ತರುಣನಿಂದ! ಎಲ್ಲ ಛತ್ರಸಾಲ, ನೀನು ನನ್ನಮೇಲೆ ಮಾಡಿರುವ ಅತರ್ಕ್ಯ ಉಪಕಾರಕ್ಕಾಗಿ ನಿನಗೆ ದಿಲ್ಲಿಯ ಸಾರ್ವಭೌಮಾಧಿಕಾರವನ್ನು ಕೊಟ್ಟರೂ ನಿನ್ನ ಆ ಉಪಕಾರವು ತೀರದು. ನನ್ನ ಲಕ್ಷಾವಧಿ ರೂಪಾಯಿ ಪಗಾರ ತಿನ್ನುವ ವಜೀರರಿಂದ, ನನ್ನಿಂದ ಬಹುಮಾನದ ಪದವಿಗಳನ್ನು ಪಡೆಯುತ್ತಿರುವ ಸರದಾರರಿಂದ, ನನ್ನಹೊಟ್ಟೆಯ ಮಕ್ಕಳಿಂದ ಆಗದ ಕಾರ್ಯ

ವನ್ನು ಒಬ್ಬ ಪರಕ್ಷನು ನೀನು ನಿಷ್ಕಾಮಬುದ್ಧಿಯಿಂದ ಮಾಡಿರುತ್ತೀ. ಅಂದಬಳಿಕ ನಿನ್ನ ಅಲೌಕಿಕಶೌರ್ಯವನ್ನೂ, ಅದ್ವಿತೀಯ ಧೈರ್ಯವನ್ನೂ, ಧೈನೀತೇಜಸ್ವಿತೆಯ ಹಾಗು ಉತ್ಕಟ ದಯಾಲುತ್ವದ ಲಕ್ಷಣವನ್ನೂ ಎಷ್ಟು ವರ್ಣಿಸಿದರೂ ಸ್ವಲ್ಪವೇ ಇರುವದು. ನನ್ನ ಪ್ರಾಣವನ್ನು ಉಳಿಸಿದ ನಿನಗೆ ನಾನೇನುಕೊಡಲಿ?

ಬಾದಶಹನ ಈ ಮಾತುಗಳನ್ನು ಕೇಳಿ ಛತ್ರಸಾಲನು ಎದ್ದುನಿಂತು—"ಔರಂಗಜೇಬಬಾದಶಹಾ, ನಾನು ಏನಾದರೂ ಕೇಳಿಕೊಳ್ಳಬೇಕೆಂದು ನೀನು ಇಚ್ಛಿಸುವಂತೆ ತೋರುತ್ತದೆ; ಆದರೆ ನನ್ನಸಲುವಾಗಿ ನನಗೆ ಏನೂ ಬೇಕಾಗಿರುವದಿಲ್ಲ. ಉತ್ಕೃಷ್ಟವಾದ ಆರೋಗ್ಯವು, ಪವಿತ್ರನೀತಿಮತ್ತೆಯು, ಸ್ವಧರ್ಮ-ಸ್ವದೇಶ-ಸ್ವಬಂಧುಗಳಲ್ಲಿ ನಿರ್ವ್ಯಾಜಪ್ರೇಮವು ನನಗೆಲಭಿಸಿರುವದರಿಂದಲೂ, ಜೀವದ ಗೆಳೆಯರು-ಅತ್ಯಂತ ವಾತ್ಸಲ್ಯದ ತಂದೆತಾಯಿಗಳು-ಸದ್ಧರ್ಮದ ತತ್ವಗಳನ್ನು ಪ್ರಕಾಶಗೊಳಿಸುವ ಪ್ರಾಣನಾಥ ಪ್ರಭುಗಳು ನನಗಿರುವದರಿಂದಲೂ ನನ್ನ ಐಹಿಕದ ಕೊರತೆಗಳಿಲ್ಲ ಕುಡಿಬಂದಿರುವವು; ಆದರೆ ನಾನು ನಿನ್ನನ್ನು ಈಗ ಕೇಳಿಕೊಳ್ಳುವದೆಂದರೆ, ನನ್ನ ಜನ್ಮಭೂಮಿಯಾದ ಬುಂದೇಲಖಂಡದ ದಾಸ್ಯವಿಮೋಚನವು! ಅಲಮಗೀರ, ನನ್ನ ದೇಶ ಬಾಂಧವರು ಮೊಗಲಬಾದಶಹರ ದಾಸರಾಗಿರುವದರಿಂದ ಅವರಲ್ಲಿ ದಾರಿದ್ರ್ಯ, ದುರ್ವ್ಯಸನ, ಅಧರ್ಮಾಚರಣ, ಬಂಧುದ್ವೇಷ ಮೊದಲಾದ ದುರ್ಗುಣಗಳು ಸೇರಿರುವವಲ್ಲದೆ, ಮೇಲೆ ಮೇಲೆ ಅವರು ಬರ-ಪಿಡಗುಗಳಬಾಧೆಗೆ ಒಳಗಾಗುತ್ತಿರುವರು; ಆದ್ದರಿಂದ ನೀನು ಏನಾದರೂ ನನಗೆ ಕೊಡಬೇಕೆಂದು ಇಚ್ಛಿಸುತ್ತಿದ್ದರೆ, ನನ್ನ ಜನ್ಮಭೂಮಿಯ ಸ್ವಾತಂತ್ರ್ಯವನ್ನು ಬೇಡುವೆನು, ಅದನ್ನು ಕೊಡು! ಅಲಮಗೀರ, ನೀನು ಇಷ್ಟು ದೊಡ್ಡಮನಸ್ಸು ಮಾಡಿದರೆ, ನನ್ನ ಉಪಕಾರವು ತೀರಿತೆಂದು ನಾನು ಸಂತೋಷದಿಂದ ಹೇಳುವೆನು!

ಛತ್ರಸಾಲನ ಈ ಮಾತುಗಳನ್ನು ಕೇಳಿ ಬಾದಶಹನು ಝರ್ರನೆ ಇಳಿಯಲು, ಆತನಮೋರೆಯು ಕಪ್ಪಿಟ್ಟಿತು! ಏನು ಮಾತಾಡಬೇಕೆಂಬದು ಆತನಿಗೆ ತಿಳಿಯದಾಯಿತು. ಛತ್ರಸಾಲನು ಸಿಕ್ಕಹಾಗೆ ಬೇಡಿಕೊಂಡನೆಂದು ಆತನು ತಿಳಿದುಕೊಂಡನು. ಆತನು ಮಾತಾಡದೆ ಸುಮ್ಮನೆ ಕುಳಿತಿರುವದನ್ನು ನೋಡಿ ಚಂಪತರಾಯನು ಆತನನ್ನು ಕುರಿತು—"ಬಾದಶಹಾ, ಕುಮಾರ

ಛತ್ರಸಾಲನ ಬೇಡಿಕೆಯು, ಆತನು ನನ್ನಮೇಲೆ ಮಾಡಿದ ಉಪಕಾರದ ಮಾನದಿಂದ ಹೆಚ್ಚಾಯಿತೆಂದು ನಿನಗೆ ತೋರಿದರೆ, ನಾನು ಸಾಮುಗಡದ ಕಾಳಗದಲ್ಲಿ ನಿಮ್ಮ ಅಣ್ಣ ದಾರಾನನ್ನು ಸೋಲಿಸುವಾಗ ತೋರಿಸಿದ ಪರಾಕ್ರಮದ ಉಪಕಾರವನ್ನು ಅವರಲ್ಲಿ ಕೂಡಿಸಿ ಕುಮಾರನ ಬೇಡಿಕೆಯನ್ನು ಪೂರ್ಣಮಾಡು! ಅಲಮುಗೀರ, ಚಂಪತರಾಯನು ಅದಿನ ರಣಸಾಹಸಮಾಡದಿದ್ದರೆ ಈ ಮಯೂರಾಸನದ ಪ್ರಾಪ್ತಿಯು ನಿನಗೆ ಎಲ್ಲಿ ಆಗುತ್ತಿತ್ತು ಹೇಳು?

ಔರಂಗಜೇಬ (ಶಾಂತರೀತಿಯಿಂದ)—ಚಂಪತರಾಯಜೀ, ನೀವು ಹೇಳುವದು ಸರ್ವಥೈವ ನಿಜವಿರುತ್ತದೆ. ದಿಲ್ಲಿಯ ಸಾರ್ವಭೌಮಪದವನ್ನು ಸಂಪಾದಿಸುವಾಗ ರಾಜಾ ಚಂಪತರಾಯರಿಂದಾದಷ್ಟು ಸಹಾಯ ವ್ಯಬೇರೆ ಯಾರಿಂದಲೂ ನನಗೆ ಆಗಿರುವದಿಲ್ಲ!

ಚಂಪತರಾಯ—ಅಂದಬಳಿಕ ಯುವರಾಜ ಛತ್ರಸಾಲನ ಬೇಡಿಕೆಯನ್ನು ಯಾಕೆ ಪೂರ್ಣವಾಡಬಾರದು? ತಂದೆಯು ಸಾಮ್ರಾಜ್ಯವನ್ನು ಒದಗಿಸಿಕೊಟ್ಟಿರುವನು,ಮಗನು ಜೀವವುಳಿಸಿರುವನು. ಅಂದಬಳಿಕ ಬುಂದೇಲಖಂಡಕ್ಕೆ ಸ್ವಾತಂತ್ರ್ಯವನ್ನು ಕೊಡಲಿಕ್ಕೆ ಇದಕ್ಕೂ ಹೆಚ್ಚಿನವೇನು ಮಾಡಬೇಕು?

ಚಂಪತರಾಯನ ಈ ಮಾತುಗಳಿಗೆ ಬಾದಶಹನು ಉತ್ತರಕೊಡದಾದನು. ಆತನು ಹೀಗೆ ಸುಮ್ಮನೆ ಕುಳಿತಿರುವನನ್ನು ನೋಡಿ ಕುಮಾರ ಛತ್ರಸಾಲನು ಆತನನ್ನು ಕುರಿತು—"ಇಲ್ಲ, ನಾನುಕೇಳಿದ್ದು ನಿನ್ನಮನಸ್ಸಿಗೆ ಬರುವದಿಲ್ಲ. ಬಿಕ್ಕೆಬೇಡಿದರೆಲ್ಲಿಯಾದರೂ ಸ್ವಾತಂತ್ರ್ಯವು ಸಿಗುವದುಂಟೆ? ಜಗತ್ತಿನತುಂಬೆಲ್ಲ ಇಸ್ಲಾಮಿ ಅಧಿಕಾರವನ್ನು ಸ್ಥಾಪಿಸಬೇಕೆನ್ನುವನಲ್ಲಿ ಔದಾರ್ಯವನ್ನೂ, ದಯಾಲುತ್ವವನ್ನೂ ಆಶಿಸುವದೇ ದೊಡ್ಡ ತಪ್ಪು! ಬಾದಶಹಾ, ನಿನ್ನನ್ನು ವ್ಯರ್ಥವಾಗಿ ಸಂಕಟದಲ್ಲಿ ಕೆಡವಿಕೊಳ್ಳಬೇಡ. ನಮ್ಮ ಉಪಕಾರಕ್ಕೆ ಪ್ರತ್ಯುಪಕಾರವಾಡೆಂದು ಈಗ ನಾವೇನು ನಿನ್ನ ಬಾಗಿಲಕಟ್ಟಿರುವದಿಲ್ಲ. ದಿಲ್ಲೀಪತಿಯು ಸ್ವತಃ ತನ್ನಮಾತಿಗೆ ಎಷ್ಟು ಮಾನ್ಯತೆ ಕೊಡುತ್ತಿರುವನೆಂಬದನ್ನು ಪರೀಕ್ಷಿಸುವದು ನಮ್ಮಮನಸ್ಸಿನಲ್ಲಿ ಇತ್ತು; ಆದರ ಪರೀಕ್ಷೆಯೂ ಆದಂತಾಯಿತು. ಇನ್ನು ನಾವು ಹೋಗಿಬರುವೆವು," ಎಂದು ಹೇಳಿ ಛತ್ರಸಾಲನು ಹೊರಟುಹೋಗುವದಕ್ಕಾಗಿ ಎದ್ದು ನಿಂತನು. ಚಂಪತ

ರಾಯನೂ ತನ್ನ ಆಸನವನ್ನು ಬಿಟ್ಟನು. ಅದನ್ನು ನೋಡಿ ಔರಂಗಜೇಬನು ವಿನಯದಿಂದ—

ಔರಂಗಜೇಬ— ಚಂಪತರಾಯಜೀ, ಛತ್ರಸಾಲ, ನನ್ನಮೇಲೆ ಸಿಟ್ಟಾಗಬೇಡಿರಿ. ನನ್ನಮೇಲೆ ನೀವು ಮಾಡಿರುವ ಉಪಕಾರವನ್ನು ನೋಡಿದರೆ, ಬುಂದೇಲಖಂಡದ ಸ್ವಾತಂತ್ರ್ಯವನ್ನು ಕೇಳುವದು ಅತ್ಯಂತ ಕ್ಷುದ್ರವಾಗಿರುವದೆಂಬದನ್ನು ನಾನು ಒಪ್ಪಿಕೊಳ್ಳುವೆನು; ಆದರೆ ನಾನು ಬುಂದೇಲಖಂಡಕ್ಕೆ ಸ್ವಾತಂತ್ರ್ಯವನ್ನು ಕೊಟ್ಟರೆ, ಅಥವಾ ಬುಂದೇಲಖಂಡದವರಿಗೆ ತಮ್ಮ ಧರ್ಮದಂತೆ ನಡೆಯಲು ಅಪ್ಪಣೆಕೊಟ್ಟರೆ, ನಾನು ಪರಮ ದಯಾಳುವಾದ ಅಲ್ಲಾನ ಅಪರಾಧ ಮಾಡಿದಂತಾಗುವದು. ಪೃಥ್ವಿಯ ಎಲ್ಲ ಭಾಗಗಳಲ್ಲಿ ಇಸ್ಲಾಮಿ ಧರ್ಮವನ್ನು ಪಸರಿಸಬೇಕೆಂಬ ಅಲ್ಲಾನ ಅಪ್ಪಣೆಯನ್ನು, ಮಹಮ್ಮದ ಪೈಗಂಬರರು ಸತ್ತಾಧೀಶರಾದ ನಮ್ಮ ಸಲುವಾಗಿ ಪ್ರಸಿದ್ಧ ಮಾಡಿರುವರು; ಅಂದಬಳಿಕ ಅವರ ವಿರುದ್ಧವಾಗಿ ನಾನು ಹೇಗೆ ನಡೆಯಲಿ? ಜಗತ್ತಿನೊಳಗಿನ ಬೇರೆ ಬೇರೆ ರಾಜ್ಯಗಳನ್ನು ಗೆಲ್ಲುವದು ನಮ್ಮ ಕರ್ತವ್ಯವು; ಆದರೆ ಇಸ್ಲಾಮಿ ಧರ್ಮವನ್ನು ಸ್ವೀಕರಿಸಿದ ಹೊರತು ಅವರನ್ನು ಸ್ವತಂತ್ರರಾಗಮಾಡುವದು ನಮ್ಮ ಕೈಯೊಳಗಿಲ್ಲವು; ಆದ್ದರಿಂದ ಚಂಪತರಾಯಜೀ, ನಿಮ್ಮ ಬೇಡಿಕೆಯನ್ನು ಮಾನ್ಯಮಾಡಲಿಕ್ಕೆ ಬರುವ ಹಾಗಿಲ್ಲ!

ಚಂಪತರಾಯ—ಇಂತಹದೇ ಉತ್ತರವನ್ನು ಅಧಿಕಾರ-ಮದದಿಂದ ದುರ್ಯೋಧನನು ಉಚ್ಚರಿಸಿ ವಂಶಕ್ಷಯವನ್ನಾಡಿಕೊಂಡಿರುವನು! ಅಂಥ ಪ್ರಸಂಗವು ದಿಲ್ಲೀ ಪತಿಗೆ ಬರಬಾರದೆಂಬದು ನನ್ನ ಕಟ್ಟಕಡೆಯ ಸೂಚನೆಯು!

ಔರಂಗಜೇಬ—ಚಂಪತರಾಯಜೀ, ಛತ್ರಸಾಲನ ಇಂದಿನ ಉಪಕಾರಕ್ಕಾಗಿ ನಿಮ್ಮ ಎಷ್ಟುಮಾತನ್ನು ಸಹನವಾಡಿಕೊಳ್ಳುವೆನು. ನೀವು ಆಡಿದ ಮಾತುಗಳು ಇನ್ನೊಂದು ಕ್ಷಣದಮೇಲೆ ನನಗೆ ಸಹನವಾಗುವವೋ ಇಲ್ಲವೋ ಎಂಬದನ್ನು ನಾನು ಹೇಳಲಾರೆನು. ಬುಂದೇಲಖಂಡದ ಸ್ವಾತಂತ್ರ್ಯವಂತು ಇರಲಿ, ನಾವು ಕೈವಶಮಾಡಿಕೊಂಡಿದ್ದ ಭೂಮಿಯಲ್ಲಿ ಒಂದು ಬಿರಳಿನಷ್ಟು ಭೂಮಿಯ ಅಧಿಕಾರವನ್ನು ಬಿಟ್ಟುಕೊಡಲಿಕ್ಕೂ ನಾವು ಒಪ್ಪಿಕೊಳ್ಳುವದಿಲ್ಲ! ಬೇಕಾದರೆ ಸರದಾರಪದವಿಯನ್ನು ಕೇಳಿರಿ, ಅಮೀರಪದವಿಯನ್ನು ಕೇಳಿರಿ,

ಇಚ್ಛೆಯಿದ್ದರೆ ನಮ್ಮ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಬುಂದೇಲಖಂಡದ ಯಾವತ್ತು ರಾಜ್ಯವನ್ನು ಕೇಳಿರಿ; ಈ ಅಲಮಗೀರನು ಕೊಡಲಿಕ್ಕೆ ಸಿದ್ಧನಾಗಿರುವನು.

ಚಂಪತರಾಯ—ರಕ್ತಮಾಂಸವಿಲ್ಲದಬರಿಯ ಒಣಎಲುವು ಕಡಿಯಲಿಕ್ಕೆ ನಾವು ನಾಯಿಯಲ್ಲ! ದಿನಾಲು ಬಿಸಿಬಿಸಿ ರಕ್ತವನ್ನು ಕುಡಿಯಲಿಕ್ಕೆ ಕಲಿತ ಸಿಂಹವು, ಅಂತಹ ಎಲುವನ್ನು ಕಣ್ಣೆತ್ತಿಯೂ ನೋಡಲಾರದು. ಬಾದಶಹ, ಸ್ವಾತಂತ್ರ್ಯವಿಲ್ಲದ ರಾಜ್ಯದಿಂದ ಪ್ರಯೋಜನವೇನು? ನೀನುಕೊಡುವ ಸರದಾರಿಕೆ ಮೊದಲಾದವನ್ನು ನಾವು ಧಿಕ್ಕರಿಸುವೆವು. ಬುಂದೇಲಖಂಡದ ರಾಜ್ಯವನ್ನು ನೀನೇಕೆ ಕೊಡಬೇಕು? ಅದು ನಮ್ಮದೇ ಇರುವದು! ಅದು ಬುಂದೇಲಖಂಡದ ಪ್ರತಿಒಬ್ಬ ವ್ಯಕ್ತಿಯದಿರುವದು! ನೀನು ಅದನ್ನು ನಮಗೆ ಕೊಡಲಿಕ್ಕೆ ಯಾರು?

ಔರಂಗಜೇಬ—"ಯಾಅಲ್ಲಾ" ನನ್ನ ಕೈಯಿಂದ ಅನುಚಿತಕಾರ್ಯವನ್ನು ಮಾಡಿಸಬೇಡ. ಛತ್ರಸಾಲನು ಬದುಕಬೇಕೆಂತಲೂ, ಚಂಪತರಾಯನು ಬದುಕಬೇಕೆಂತಲೂ ನಾನು ಇನ್ನೂ ಇಚ್ಛಿಸುತ್ತಿರುವೆನು. ಪ್ರಧಾನಜೀ, ದರ್ಬಾರವನ್ನು ಕೂಡಲೆ ನಿಲ್ಲಿಸಿಬಿಡಿರಿ. ದರ್ಬಾರದ ಕೆಲಸಗಳನ್ನೆಲ್ಲ ಮಧ್ಯಾಹ್ನದಲ್ಲಿ ನೋಡಿಕೊಳ್ಳಲಿಕ್ಕೆ ಬಂದೀತು! ಆದರೆ ಈ ತಂಪೆಮುಕ್ಕಳ ಮಾತನ್ನು ಕೇಳುವದು ನನ್ನಿಂದಾಗದು! ಒಂದು ಘೋರವಾದ ಆಜ್ಞೆಯು ನನ್ನ ಬಾಯಿಂದ ಹೊರಡುವದಕ್ಕಿಂತ ಮೊದಲೇ ದರ್ಬಾರದ ಕಾರ್ಯವನ್ನು ನಿಲ್ಲಿಸಿಬಿಡುವದು ನೆಟ್ಟಗೆ!

ಈಮೇರೆಗೆ ನುಡಿದು ಔರಂಗಜೇಬನು ಮಯೂರಾಸನದಿಂದ ಏಳತೊಡಗಿದನು. ಆಗ ಚಂಪತರಾಯನು—"ಬಾದಶಹಾ, ಒಂದು ಬೆರಳುಭೂಮಿಯನ್ನು ನೀನು ಬಿಟ್ಟುಕೊಡುವದಿಲ್ಲವಲ್ಲನೆ? ಆಗಲಿ;ಸೂಜಿಯತುದಿಗೆ ಹತ್ತಿದ ಮಣ್ಣುಕೊಡುವದಿಲ್ಲೆಂದು ಹೇಳಿದ ದುರ್ಯೋಧನನು ರಣಮಂಡಲದಲ್ಲಿ ಪಟ್ಟ ಅನುಭವವನ್ನು ನೀನು ಪಡೆದೀ" ಎಂದು ನುಡಿದು ಚಂಪತರಾಯನು ಬಾದಶಹನಿಗೆಮುಜುರೆಯನ್ನೂ ಮಾಡದೆ ಮಗನೊಡನೆ ಹೊರಟುಹೋದನು. ದರ್ಬಾರವು ಅಷ್ಟರಮಟ್ಟಿಗೆ ಬಂದು ಆಯಿತು!

೯ನೆಯ ಪ್ರಕರಣ-ಪ್ರೇಮಬಂಧನ.

ಔರಂಗಜೇಬ ಬಾದಶಹನ ದರ್ಬಾರವು ಮುಗಿದ ನಾಲ್ಕನೆಯ ದಿವಸವು. ಉಷಃಕಾಲದಲ್ಲಿ ಒಬ್ಬ ಸುಂದರತರುಣಿಯು ಯಮುನಾತೀರದಲ್ಲಿ ಯಾರದೋ ಹಾದಿಯನ್ನು ನೋಡುತ್ತ ನಿಂತುಕೊಂಡಿದ್ದಳು. ಆಗಿನ ಶಾಂತ ಸಮಯದ ವಿಲಕ್ಷಣ ಸೃಷ್ಟಿಸೌಂದರ್ಯವನ್ನು ನೋಡುವದರಲ್ಲಿ ಆಕೆಯ ಮನಸ್ಸು ತೊಡಗಿಹೋಗಿತ್ತು. ಬಾದಶಹನ ಖಾನಾಬದೂಶದಲ್ಲಿ ಗೋಷೆಯನ್ನು ಚಲ್ಲಿಕೊಟ್ಟು ಸ್ವಚ್ಛಂದದಿಂದ ತಮ್ಮ ಪ್ರೀತಿಯ ವಸ್ತುಗಳನ್ನು ತರುಣರಿಗೆ ಮಾರುವಾಗ ಒಂದು ಕ್ಷುಲ್ಲಕವಸ್ತುವಿಗೆ ಲಕ್ಷಾಂತರ ರೂಪಾಯಿ ಬೆಲೆ ಬರುತ್ತಲಿತ್ತು! ಸುಂದರಿಯರು ಕೈಮುಟ್ಟಿಹಾಕಿದ ಕಸೂತಿಗಳು, ಹೆಣಿಕೆಯ ಸಾಮಾನುಗಳು, ಬೇರೆ ಕೌಶಲ್ಯದ ಒಡವೆಗಳು ತೀರ ಅಲ್ಪಬೆಲೆಯವಿದ್ದರೂ ಅವನ್ನು ಮಾರುತ್ತಿರುವ ಸುಂದರಿಯರ ಸೌಂದರ್ಯ, ಯೋಗ್ಯತೆಗಳಿಗನುಸರಿಸಿ ಅವಕ್ಕೆ ಹೇರಳ ಬೆಲೆ ಬರುತ್ತಲಿತ್ತು. ಬಾದಶಹನ ಮಗಳು ಹೆಣಿಸಿದ ಕರವಸ್ತ್ರವೆಂದರೆ, ಅದರ ಬೆಲೆಯು ಸಹಸ್ರಾವಧಿ ರೂಪಾಯಿ ಯಾಗಬಹುದು-ಲಕ್ಷಾಂತರ ರೂಪಾಯಿಗಳಾದರೂ ಆಗಬಹುದು. ಈ ವ್ಯಾಪಾರಕ್ಕೆ ವಸ್ತುಗಳ ವ್ಯಾಪಾರವೆನ್ನುವದಕ್ಕಿಂತ, ಪ್ರೇಮದ ವ್ಯಾಪಾರವೆಂದರೆ ಒಪ್ಪಬಹುದು. ಈ ವಸ್ತುಗಳ ವ್ಯಾಪಾರದ ನೆವದಿಂದ ತರುಣ-ತರುಣಿಯರು ತಮ್ಮ ಪ್ರೇಮದ ವ್ಯಾಪಾರವನ್ನು ಮಾಡಕ್ಕತ್ತಲಿದ್ದರು. ಈ ಪ್ರಸಂಗದಲ್ಲಿ ಎಷ್ಟೋ ಅವಿವಾಹಿತ ತರುಣಸುಂದರಿಯರು ತಮ್ಮ ಮನಸ್ಸನ್ನು ತರುಣರಿಗೆ ಒಪ್ಪಿಸಿ ತಮ್ಮ ವಿವಾಹದ ನಿಶ್ಚಯವೆಂಬ ಮಂಗಳಾಚರಣವನ್ನು ಮಾಡಿಕೊಳ್ಳುತ್ತಿದ್ದರು. ಇಂಥ ನಿಶ್ಚಯಮಾಡಿಕೊಂಡಿದ್ದ ತರುಣಿಯರಲ್ಲಿಯೇ ಒಬ್ಬಳು ಮೇಲೆ ಹೇಳಿದಂತೆ ಯಮುನಾತೀರದಲ್ಲಿ ತನ್ನ ಪ್ರಿಯನಿಗೆ ತನ್ನ ಮನಸ್ಸಿನ ನಿಶ್ಚಯವನ್ನು ತಿಳಿಸುವದಕ್ಕಾಗಿ ಅತನ ಹಾದಿಯನ್ನು ನೋಡುತ್ತ ನಿಂತುಕೊಂಡಿದ್ದಳು; ಆದರೆ, ತನ್ನ ಮನೋಹರನು ಬರಲು ಸ್ವಲ್ಪ ತಡವಾದದ್ದರಿಂದ, ಆ ಸುಂದರಿಯ ಮನಸ್ಸು ಚಡಪಡಿಸಕೊಡಗಿತ್ತು. ತಾನು ತನ್ನ ಪ್ರಿಯನಿಗೆ ತಿಳಿಸಹೇಳಿದ ಸುದ್ದಿಯನ್ನು ತನ್ನ ಸಖಿಯು ತಿಳಿಸಿದಳೊ ಇಲ್ಲವೊ ಎಂದು ಆಕೆಯು ಶಂಕಿಸತೊಡಗಿದ್ದಳು. ಅಷ್ಟರಲ್ಲಿ ಒಬ್ಬ ಸುಂದರ ತರುಣನು ಧೀರಗಂಭೀರ ಗತಿಯಿಂದ ಅಲ್ಲಿಗೆ ಬಂದು—"ಯಾರು? ರಾಜಾಜಯಸಿಂಗರವರ ಕುಮಾರಿ

ಯಾದ ಜಯೆಯು ಹೇಳಿದ ಸ್ತ್ರೀಯು ನೀವೇಯೋ? ನನ್ನ ಹಾದಿಯನ್ನು ನೋಡುತ್ತ ನಿಂತು ಬಹಳ ಹೊತ್ತಾಯಿತೇನು? ಹಾಗಿದ್ದರೆ ನನ್ನಿಂದಾದ ತೊಂದರೆಗಾಗಿ ನನ್ನನ್ನು ಕ್ಷಮಿಸಬೇಕು.

ತರುಣನ ಈಮಾತನ್ನು ಕೇಳಿ ಆ ತರುಣಿಗೆ ಪರಮಾಶ್ಚರ್ಯವಾಯಿತು. "ತಾನು ವಿಮಾನಬಝಾರದಲ್ಲಿ ಈತನನ್ನು ಹಲವುಸಾರೆ ನೋಡಿ ನನ್ನ ಪ್ರೇಮವನ್ನು ಈತನಿಗೆ ಬಿಚ್ಚಿಸಿರುವಾಗ, ಈತನು ನನ್ನನ್ನು ನೋಡಿರಲಿಕ್ಕಿಲ್ಲವೆ? ಬಝಾರದಲ್ಲಿ ಈತನು ಹಲವುಸಾರೆ ನನ್ನ ಕಣ್ಣಿಗೆ ಬಿದ್ದಿರುವನು. ನನ್ನನ್ನು ನೋಡಿರುವನು; ಬರಿಯ ನೋಡಿರುವನೆಂತಲ್ಲ, ಮನಃಪೂರ್ವಕವಾಗಿ ನೋಡಿರುವನು. ಈತನ ನೋಟದ ರೀತಿಯನ್ನು ನೋಡಿದರೆ, ಈತನು ನನ್ನ ಪ್ರೇಮಯಾಚನೆಗೆ ಸಹಜವಾಗಿ ಒಪ್ಪಿಕೊಳ್ಳುವನೆಂದು ನಾನು ಮಾಡಿದ್ದೆನು; ಅಂತೇ ನನ್ನ ಸಖಿಯಾದ ಜಯೆಯ ಮುಂದೆ ಈತನನ್ನು ಕಳಿಸೆಂದು ಹೇಳಿದ್ದೆನು; ಆದರೆ ಈ ಗಂಭೀರನ ಈ ಔದಾಸೀನ್ಯದಮಾತನ್ನು ಕೇಳಿದರೆ, ಈತನೊಡನೆ ನನ್ನ ವಿವಾಹದ ಯೋಗವು ಇರುವದೋ ಇಲ್ಲವೊ? ಹಾಗೆ ಯೋಗವಿಲ್ಲದಲ್ಲಿ ನಾನು ಕಡೆತನಕ ಅವಿವಾಹಿತಳಾಗಿಯೇ ಕಾಲ ಕಳೆಯಬೇಕಾದೀತಲ್ಲ?" ಎಂಬಿವೇ ಮೊದಲಾದ ವಿಚಾರಗಳಲ್ಲಿ ಮಗ್ನಳಾಗಿ ಆ ತರುಣನ ಸುಂದರಮುಖವನ್ನು ಆಶ್ಚರ್ಯದಿಂದ ನೋಡುತ್ತ ಏಕೆಯು ನಿಂತುಬಿಟ್ಟಳು. ಆ ತರುಣನು ಆ ಭುವನಸುಂದರಿಯ ರೂಪವನ್ನು ನೋಡುವಲ್ಲಿ ಮಗ್ನನಾಗಿ ಹೋಗಿದ್ದನು. ಆ ಅರುಣೋದಯದ ಮಂದಪ್ರಕಾಶದಲ್ಲಿ ಆ ಕುಲೀನ ತರುಣರ ಶುದ್ಧಾಂತಃಕರಣಗಳ ಶುದ್ಧಪ್ರೇಮಗಳ ಪರಸ್ಪರ ತಾಕಲಾಟವಾಗತೊಡಗಿತ್ತು. ಆಗ ಆ ತರುಣನು ಮನಸ್ಸಿನಲ್ಲಿ—"ಈಕೆಯು ಸ್ವರ್ಗಲೋಕದ ಅಪ್ಸರೆಯಾಗಿರಬಹುದೆ? ಇಂಥವಳು ನನ್ನ ದರ್ಶನದ ಅಪೇಕ್ಷೆಮಾಡಿದ್ದರಿಂದ ನಾನು ಧನ್ಯನೇಸರಿ! ಈಕೆಯು ನನ್ನನ್ನು ಕಾಣಲು ಯಾಕೆ ಇಚ್ಛಿಸಿರಬಹುದು," ಎಂದು ಆಲೋಚಿಸಿ ಆ ಸುಂದರಿಯನ್ನು ಕುರಿತು—

ತರುಣ—ನನ್ನನ್ನು ಬುದ್ಧಿಪೂರ್ವಕ ಕರೆಸಿಯೂ ನೀವು ಹೀಗೆ ಮಾತಾಡದೆ ಸುಮ್ಮನೆ ಆಶ್ಚರ್ಯದಿಂದ ನೋಡುತ್ತ ನಿಂತಕಾರಣವೇನು?

ತರುಣಿ—ಘನವಂತನೇ, ನಿನ್ನಿನ ಮಾನಾಬರ್ಧಾರದಲ್ಲಿ ನೀನು ನನ್ನಮುಂದೆ ಹಲವ್ರಸಾರೆ ಹಾದುಹೋಗಿರುವೆ, ನನ್ನನ್ನು ಹಲವ್ರಸಾರೆ ಆಸಕ್ತಿಯಿಂದ ನೋಡಿರುವೆ; ಹೀಗಿದ್ದು, ಎಂದೂ ನನ್ನನ್ನು ನೋಡದಿರುವವ ನಂತೆಈಗ ಪ್ರಶ್ನಮಾಡುತ್ತಿರುವೆ; ಅಂದಬಳಿಕ ಆಶ್ಚರ್ಯದಿಂದ ನಿನ್ನನ್ನು ನೋಡುತ್ತ ನಿಂತುಕೊಳ್ಳದೆ ಏನುಮಾಡಲಿ ?

ತರುಣ—ಸುಂದರೀ, ಇರಬಹುದು; ನಾನು ಮೊನ್ನಿನ ಮಾನಾ ಬರ್ಧಾರದಲ್ಲಿ ನಿನ್ನಮುಂದೆ ಹಲವ್ರಸಾರೆ ಹಾದುಹೋಗಿರಬಹುದು; ಆದರೆ ಯುವರಾಜ ಛತ್ರಸಾಲನಂತೆ ನಾನಾದರೂ ಆಶೃಂಗಾರದ ಬರ್ಧಾರದಲ್ಲಿ ತಿರು ಗಾಡಲಿಕ್ಕೆ ಮನಸ್ಸಿಲ್ಲದವನಾಗಿದ್ದೆನು; ಆದರೆ ನಾನು ಕೇವಲ ರಾಮಸಿಂಗನ ಮಾತು ಮೀರಲಾರದೆ ಬಂದವನಾದದ್ದರಿಂದ, ಸುಂದರ ತರುಣಿಯರನ್ನು ಆಸಕ್ತಿಯಿಂದ ನೋಡಲಿಕ್ಕೆ ನನ್ನ ಮನಸ್ಸು ಮೆಚ್ಚಿರಲಿಲ್ಲ. ಸುಮ್ಮನೆ ಉದಾಸೀನನಾಗಿ ಬರ್ಧಾರದಲ್ಲಿ ತಿರುಗಾಡುತ್ತಿದ್ದೆನು. ಸುಂದರೀ, ನೀನೇ ಹೇಳು, ಬುಂದೇಲಖಂಡವು ಯವನರ ದಾಸ್ಯದಲ್ಲಿ ಕೊಳೆಯುತ್ತಿರಲು, ನಮ್ಮಂಥ ತರುಣ ರಜಪೂತರು ಹೆಣ್ಣು ಹೊನ್ನುಗಳ ಬಲೆಗೆ ಬಿದ್ದು ಪ್ರತಾಪ ಹೀನರಾಗುವದು ಯೋಗ್ಯವೆ?ಅಂತೇ ನನ್ನಧೀರ-ಗಂಭೀರ ಮಿತ್ರನಾದ ಯುವ ರಾಜ ಛತ್ರಸಾಲನು ರಾಮಸಿಂಗನ ಸೂಚನೆಗೆ ಒಪ್ಪದೆ, ಯಮುನಾತೀರಕ್ಕೆ ಹೋಗಿಬಿಟ್ಟನು! ಇರಬಹುದು, ನಿಶ್ಚಯವಾಗಿ ನಾನು ನಿನ್ನಮುಂದೆ ಹಲವು ಸಾರೆ ಬರ್ಧಾರದಲ್ಲಿ ತಿರುಗಾಡಿರಬಹುದು; ಹಾಗೆ ತಿರುಗಾಡುವಾಗ ನಿನ್ನನ್ನು ನೋಡಿರಲೂಬಹುದು. ಹಾಗಿಲ್ಲದಿದ್ದರೆ ನಿನ್ನಂತಹ ಕುಲೀನ ಸುಂದರಿಯು ಸುಳ್ಳಾಡುವದುಂಟೆ? ಆದರಂತೆ ಜಯೆಯ ಮುಖಾಂತರ ನನ್ನನ್ನು ಕರೆಸುವ ಮಂಟೆ? ಆದಕ್ಕೆ, ಸುಂದರೀ, ನನ್ನ ಈ ಯಥಾರ್ಥಮಾತುಗಳಿಂದ ನಿನ್ನ ಮನಸ್ಸು ಸೋಯುತ್ತಿರಬಹುದು, ಅದಕ್ಕಾಗಿ ನನ್ನನ್ನು ಕ್ಷಮಿಸಿ ನನ್ನನ್ನು ಕರೆಸಿದ ಕಾರಣವೇನೆಂಬದನ್ನು ಹೇಳು.

ತರುಣನ ಈ ಮಾತುಗಳನ್ನು ಕೇಳಿ ಆ ಸುಂದರಿಯ ಹೃದಯವು ಮತ್ತಿಷ್ಟು ಕಂಪಿಸಹತ್ತಿತು. ತಾನು ಅಸೆಬುರುಕ ಸಾಮಾನ್ಯಸ್ತ್ರೀಯಂತೆ ಗೋಸೆಯನ್ನು ಚಲ್ಲಿಕೊಟ್ಟು, ತಂದೆಯ ಪ್ರೇಮವು ನಷ್ಟವಾದೀತೆಂಬದನ್ನು ಲೆಕ್ಕಿಸದೆ, ಹೀಗೆ ನಿರ್ಲಜ್ಜ ಸ್ತ್ರೀಯಂತೆ ಅಪರಿಚಿತ ತರುಣನ ಪ್ರೇಮಯಾ

ಚನೆಗಾಗಿ ಬಂದದ್ದಕ್ಕಾಗಿ ಆಕೆಯು ಪಶ್ಚಾತ್ತಾಪಪಡತೊಡಗಿದಳು! ನಮ್ಮಂಥ ತರುಣಿಯರ ಚಂಚಲವೃತ್ತಿಯ ಆದರವು ಹೀಗೆ ನಗೆಗೀಡಾಗುವದೇ ಸರಿ; ಆದರೆ ಬಂದತಪ್ಪಿಗಾಗಿ ಏನೆಂಬವನ್ನು ಮನಗಂಡುಬಿಡೋಣ, ಅಂದರೆ ಒಮ್ಮೆ ಮನಸ್ಸುಕಲ್ಲುಮಾಡಿಕೊಂಡು ಸಮಾಧಾನದಿಂದ ಈ ಮೂರ್ತಿಯನ್ನು ಧ್ಯಾನಿಸುತ್ತ ಕಾಲಹರಣಮಾಡಲಿಕ್ಕಾದರೂ ನೆಟ್ಟಗಾಗುತ್ತದೆ.

ಈ ಮೇರೆಗೆ ಆಲೋಚಿಸಿ ಆ ಸುಂದರಿಯು ಆ ತರುಣ ರಜಪೂತನನ್ನು ಕುರಿತು,—

ತರುಣಿ—ಸರದಾರಸಾಹೇಬ, ಆಗಲೆ ಛತ್ರಸಾಲನೆಂದು ಅಂದಿರಲ್ಲ, ಆ ಛತ್ರಸಾಲನು ಯಾರು? ಬಾದಶಹನನ್ನು ಪ್ರಾಣಸಂಕಟದಿಂದ ಮುಕ್ತ ಮಾಡಿದ ಛತ್ರಸಾಲನೋ ಏನು?

ತರುಣ—ಹೌದು, ಬಾದಶಹನಮೇಲೆ ಎಂದೂ ತೀರಿಸಲಿಕ್ಕೆ ಬಾರದಷ್ಟು ಉಪಕಾರಮಾಡಿದ ಛತ್ರಸಾಲನೇ ಆತನು.

ತರುಣಿ—ಆತನು ನಿಮಗೇನಾಗಬೇಕು?

ತರುಣ—ನಿಜವಾಗಿ ಯೆಂದರೆ, ಆತನು ನನ್ನ ತಂದೆಯ ವೈರಿಯ ಮಗನು; ಸಂಬಂಧದಿಂದ ನೋಡಿದರೆ, ಆತನು ನನ್ನ ತಂದೆಯ ವೈರಿಯಾದದ್ದರಿಂದ ನನ್ನ ವೈರಿಯೂ ಆಗಬೇಕು; ಆದರೆ ಬುಂದೇಲಖಂಡಕ್ಕೆ ಸ್ವಾತಂತ್ರ್ಯವನ್ನು ಒದಗಿಸಿಕೊಡುವ ಸಂಬಂಧದಿಂದ ನಾವಿಬ್ಬರೂ ಮಿತ್ರರಾಗಿರುವಾಗ, ನನ್ನ ತಂದೆಯ ಆಜ್ಞೆಯಂತೆಯೇ ನಾನು ಛತ್ರಸಾಲನ ಸೇವಕನಾಗಿದ್ದೇನೆ. ಆತನ ಆಜ್ಞೆಯನ್ನು ಪಾಲಿಸುವದೇ ನನ್ನ ಸೇವಾಧರ್ಮವು. ಲಕ್ಷ್ಮಣನು ಶ್ರೀ ರಾಮಚಂದ್ರನ ಸೇವೆಯನ್ನು ಆತನ ವನವಾಸವು ಮುಗಿಯುವವರೆಗೆ ಬ್ರಹ್ಮಚರ್ಯದಿಂದ ಮಾಡಿದಂತೆ, ಬುಂದೇಲಖಂಡಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗುವವರೆಗೆ ನಾನೂ ಬ್ರಹ್ಮಚರ್ಯದಿಂದಲೇ ಆತನ ಸೇವೆಯನ್ನು ಮಾಡುವೆನು.

ತರುಣಿ—ಹಾಗಿದ್ದರೆ, ಬುಂದೇಲಖಂಡವು ಸ್ವತಂತ್ರವಾಗುವವರೆಗೆ, ನಾನೂ ಬ್ರಹ್ಮಚರ್ಯದಿಂದ ಇರಬೇಕಾಯಿತು.

ತರುಣ—ಅದೇಕೆ? ನನ್ನ ಬ್ರಹ್ಮಚರ್ಯಕ್ಕೆ ನಿನ್ನ ಸಂಬಂಧವೇನು? ನನ್ನ ಬ್ರಹ್ಮಚರ್ಯವು ಮುಗಿಯುವವರೆಗೆ ನೀನೇಕೆ ಬ್ರಹ್ಮಚರ್ಯದಿಂದಿರಬೇಕು?

ತರುಣಿ—ಮನೋಹರನೇ, ಇನ್ನು ಸಂಕೋಚಪಡುವದಾದರೂ ಏಕೆ? ಮೊನ್ನಿನ ಮಿನಾಬರ್ಬಾರದಲ್ಲಿ ನಾನು ನಿನ್ನನ್ನು ನೋಡಿದಾಗಲೆ ಈ ದೇಹವನ್ನು ನಿನ್ನ ಸೇವೆಯಲ್ಲಿ ಸವಿಸಬೇಕೆಂದು ನಿಶ್ಚಯಿಸಿರುತ್ತೇನೆ; ಅಂದಬಳಿಕ ನೀನು ನನ್ನನ್ನು ಸ್ವೀಕಾರಮಾಡಿದ ಪಕ್ಷದಲ್ಲಿ ನನ್ನ ವಿವಾಹಕ್ಕೆ ಆವರೆಗೆ ಆಸವವೆಲ್ಲಿರುವದು?

ತರುಣಿಯ ಈ ಮಾತುಗಳನ್ನು ಕೇಳಿ ತರುಣನಿಗೆ ಪರಮಾಶ್ಚರ್ಯವಾಯಿತು. ಇಂಥ ಅರುಣೋದಯ ಸಮಯದಲ್ಲಿ ಈಕೆಯು ತನ್ನನ್ನು ಕಾಣಲಿಚ್ಛಿಸಿದ ಕಾರಣದ ಸ್ಪಷ್ಟೀಕರಣವು ಈಗ ಆತನಿಗಾಯಿತು. ಇಂಥ ಲೋಕೋತ್ತರ ಸುಂದರಿಯು ತನ್ನನ್ನು ನೋಡಿದಮಾತ್ರದಿಂದ ಯಾವವಿಚಾರವನ್ನೂ ಮಾಡದೆ ತನಗೆ ತನ್ನ ದೇಹವನ್ನು ಒಪ್ಪಿಸಿದ್ದಕ್ಕಾಗಿ ಆತನು ತನ್ನನ್ನು ಧನ್ಯನೆಂದು ತಿಳಿದನು. ಆತನು ಕೃತಜ್ಞತೆಯಿಂದ ಆ ತರುಣಿಯನ್ನು ಕುರಿತು—

ತರುಣ—ಸುಂದರೀ, ನಿನ್ನ ಸ್ವರ್ಗೀಯ ಲಾವಣ್ಯವನ್ನು ಉಪಭೋಗಿಸುವ ಪಾತ್ರತೆಯು ನನ್ನಲ್ಲಿರುವದಿಲ್ಲ; ಅಧಿಕಾರ, ವಿಲಾಸ, ಐಶ್ವರ್ಯಗಳ ವೃಷ್ಟಿಯಿಂದ ಯೋಗ್ಯನಾದ ಮತ್ತೊಬ್ಬ ಯಾವನಾದರೂ ಪುರುಷನಿಗೆ ನಿನ್ನ ದೇಹವನ್ನು ಒಪ್ಪಿಸು!

ತರುಣಿ—ಹೀಗೆ ತಾವು ನನ್ನ ಅಪಮಾನಮಾಡಬಾರದು; ಅಧಿಕಾರ-ಸಂಪತ್ತಿ-ವಿಲಾಸ ಮೊದಲಾದ ಬಾಹ್ಯಕಾರಣಗಳಿಂದ ನಾನು ಪ್ರೇಮಮಾಡುವೆನೆಂಬ ಆರೋಪವನ್ನು ತಾವು ನನ್ನಮೇಲೆ ಹೊರಿಸಬಾರದು. ಅಂತಹ ಕಲಂಕಿತ ಪ್ರೇಮವು ನನ್ನದಲ್ಲ. ನನ್ನ ಪ್ರೇಮವು ಬೆಲೆಕೊಟ್ಟು ಕೊಂಡುಕೊಳ್ಳುವಂತಹದಲ್ಲ. ವೀರಶ್ರೇಷ್ಠನೇ, ನಿನ್ನ ತೇಜಸ್ವಿತೆಗೆ ಸ್ವಾಭಾವಿಕವಾಗಿಯೇ ನನ್ನ ಮನಸ್ಸು ಸೋತದ್ದರಿಂದ, ತ್ವರಿತಕರಣ ಪೂರ್ವಕವಾಗಿ ನಾನು ನಿನ್ನನ್ನು ವರಿಸಿದ್ದೇನೆ. ಬೇಕಾದರೆ ನನ್ನನ್ನು ಪ್ರೀತಿಸಿ ನೀನು ನನ್ನನ್ನು ಧನ್ಯಳಾಗಮಾಡು. ಇಲ್ಲದಿದ್ದರೆ ನಾನು ಆಜನ್ಮ ಬ್ರಹ್ಮಚರ್ಯದಿಂದ ಇದ್ದು ನಿನ್ನನ್ನು ಧ್ಯಾನಿಸುತ್ತ ಕಾಲಹರಣ ಮಾಡುವೆನು!

ತರುಣ—ಮನೋಹರೀ, ನನ್ನ ಮನಸ್ಸಿನಲ್ಲಿದ್ದದ್ದು ನಿನಗೆ ತಿಳಿದಂತೆ ತೋರಲಿಲ್ಲ; ನಿನ್ನನ್ನು ಸ್ವೀಕರಿಸಿದ ಮಾತ್ರದಿಂದ ನನ್ನಮೇಲೆ ಬೀಳುವ

ದೊಡ್ಡ ಭಾರವನ್ನು ಸಹಿಸಲಾರದ್ದಕ್ಕಾಗಿ ನಿನ್ನನ್ನು ನಾನು ನಿರಾಕರಿಸುವ ಿಲ್ಲ; ಆದರೆ ನಿನ್ನ ಸುಖ.....

ತರುಣನನ್ನು ಮುಂದೆ ಮಾತಾಡಗೊಡದೆ ಆ ಸ್ತ್ರೀಯು— "ನನ್ನ ಸುಖದ ಸಲುವಾಗಿ ನೀವು ಇಷ್ಟು ಚಿಂತೆಮಾಡಬೇಡಿರಿ; ನಾನು ನಿಮಗೆ ನನ್ನ ಪ್ರೇಮವನ್ನು ಅರ್ಪಿಸಿದಾಗಲೇ ನನ್ನ ಸುಖದುಃಖಗಳು ನಿಮ್ಮ ಸುಖ ದುಃಖಗಳಲ್ಲಿ ಅಂತರ್ಭೂತವಾಗಿಹೋಗಿವೆ. ಅಂದಬಳಿಕ ನನ್ನ ಸುಖದುಃಖ ಗಳ ನಿರ್ಧಾರವೇಕೆ? ಸಾಕಾಯಿತು ಆಸುಖವು! ಜಗತ್ತಿನಲ್ಲಿ ಶ್ರೇಷ್ಠತರಗತಿಯ ಸ್ತ್ರೀಯ ಕಲ್ಪನೆಯಲ್ಲಿಯೂ ಭಾರದ ಸುಖವನ್ನು ನಾನು ಅನುಭವಿಸಿದ್ದೇನೆ; ಸ್ವರ್ಗದಲ್ಲಿ ವಿಹರಿಸುತ್ತಿರುವ ದೇವತೆಗಳೂ ಹೊಟ್ಟಿಕಿಚ್ಚುಪಡುವಷ್ಟು ಅತುಲ ಐಶ್ವರ್ಯವು ನನ್ನ ಸೇವೆಗೆ ಸಿದ್ಧವಾಗಿರುತ್ತವೆ; ಪಾತಾಳಲೋಕದಲ್ಲಿ ಸಂಚ ರಿಸುವ ನಾಗಕನ್ಯೆಯರೂ ಲಜ್ಜೆಯಿಂದ ತಲೆಬಾಗಿಸುವಷ್ಟು ವೈಭವವು ನನ್ನ ಸ್ವಾಧೀನದಲ್ಲಿರುತ್ತದೆ; ಆದರೆ ಸಂಪತ್ತು, ಐಶ್ವರ್ಯ, ವೈಭವಗಳಿಗೆ ಹೊಂದಿಕೊಂ ಡಿರುವದು ನನಗೆ ಬೇಸರವಾಗಿರುತ್ತದೆ. ತಮ್ಮ ಪ್ರೇಮದಲ್ಲಿ ನನಗೆ ಅವೆಲ್ಲ ಕಾಣುತ್ತಿರುವವು; ಅಂತೇ ಪ್ರೇಮಯಾಚನೆಯನ್ನು ತಮ್ಮಲ್ಲಿ ನಾನು ಮಾಡುತ್ತಿರುವೆನು.

ತರುಣಿಯ ಈ ಮಾತುಗಳನ್ನು ಕೇಳಿ ಆ ತರುಣನು ತನ್ನೊಳಗೆ— "ದೇವಾ, ಈಗ ನಾನು ಈ ತರುಣಿಗೆ ಏನೆಂದು ಉತ್ತರಕೊಡಲಿ? ಇಂಥ ಸುಂದರಿಯ ತ್ಯಾಗಮಾಡಿ ದೇಶಸೇವೆಯ ವ್ರತವನ್ನು ಏಕನಿಷ್ಠೆಯಿಂದ ನಡಿ ಸಲಾ, ಅಥವಾ ದೇಶಸೇವೆಯ ವ್ರತವನ್ನು ಬಿಟ್ಟುಕೊಟ್ಟು ಈ ರಮಣಿಯ ಮುಖಕಮಲವನ್ನು ನೋಡುತ್ತ ಕುಳಿತುಕೊಳ್ಳಲಾ? ಛೆ ಛೇ! ಛತ್ರಸಾಲ ನನ್ನು ನಿರಾಶೆಗೊಳಿಸಿ, ಶ್ರೀ ವಿಂಧ್ಯನಾಸಿನಿಯ ದ್ರೋಹವನ್ನು ಸಂಪಾದಿಸಿ, ನನ್ನ ಪ್ರತಿಜ್ಞೆಗೆ ಭಂಗವನ್ನುಂಟುಮಾಡಿಕೊಂಡು ನಾನು ನರಕಕ್ಕೆ ಇಳಿಯ ಬಹುದೋ? ಇವಕ್ಕಿಂತ ನನ್ನ ಸೌಖ್ಯವನ್ನು ಹಾಳುಮಾಡಿಕೊಳ್ಳುವದೇ ನೆಟ್ಟಗೆ! ಬುಂದೇಲಖಂಡದ ಲಕ್ಷಾವಧಿ ಪ್ರಜೆಗಳ ಕಲ್ಯಾಣಕ್ಕಾಗಿ ನನ್ನ ಸೌಖ್ಯದ ಹೋಮವಾದರೆ, ನನ್ನಂತಹ ಧನ್ಯನು ನಾನೇಸರಿ! ಲೋಕಸೇವೆ, ವಿಷಯಸುಖ ಇವುಗಳಲ್ಲಿ ಪ್ರಖರ ತೇಜದ ಲೋಕಸೇವೆಯನ್ನು ಅಂಗೀಕರಿ ಸುವದೇ ಶ್ರೇಯಸ್ಕರವು!"

ಈ ಮೇರೆಗೆ ವಿಚಾರಮಾಡಿ ಆ ತರುಣನು ಆ ಸ್ತ್ರೀಯನ್ನು ಕುರಿತು-"ಸುಂದರೀ, ಆಗಲೆಹೇಳಿದೆನಲ್ಲವೆ ಬುಂದೇಲಖಂಡಕ್ಕೆ ಸ್ವಾತಂತ್ರ್ಯಪ್ರಾಪ್ತಿಯಾಗುವವರೆಗೆ ನಾನು ಬ್ರಹ್ಮಚರ್ಯದಿಂದಿರುವೆನೆಂದು! ಅಂದ ಬಳಿಕ ಅಲ್ಲಿಯವರೆಗೆ ನಮ್ಮಿಬ್ಬರ ಪ್ರೇಮಸಂಬಂಧದ ಮಾತೇಕೆ?"

ತರುಣಿ— ಅದಕ್ಕೆ ನಾನು ಸಂತೋಷದಿಂದ ಒಪ್ಪಿಕೊಳ್ಳುವೆನು. ಯಾವಾಗಾದರೂ ನನ್ನನ್ನು ಪ್ರೀತಿಸುತ್ತೀನೆಂದು ನೀವು ನನಗೆ ಹೇಳಿದ್ದೇ ಸಾಕು; ಆದರೆ ಪ್ರಿಯಕರಾ, ಬುಂದೇಲಖಂಡವ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ನನ್ನ ಪಾಣಿಗ್ರಹಣಕ್ಕೆ ಆತಂಕವಿಲ್ಲವಷ್ಟೆ?

ತರುಣ—ಸರ್ವಥಾ ಆತಂಕವಿಲ್ಲ; ಬುಂದೇಲಖಂಡವು ಸ್ವತಂತ್ರವಾದ ದಿನವನೇ ನಾನು ನಿನ್ನವನು! ಆದರೆ ಪ್ರಿಯೇ, ಬುಂದೇಲಖಂಡದ ಸ್ವಾತಂತ್ರ್ಯವು ಹಾದಿಯಮೇಲೆ ಬಿದ್ದಿರುವದಿಲ್ಲ. ಮಹಾ ಸಮರ್ಥನಾದ ದಿಲ್ಲಿಯ ಬಾದಶಹನ ಮುಷ್ಟಿಯಲ್ಲಿ ಬುಂದೇಲಖಂಡವ ಸ್ವಾತಂತ್ರ್ಯವು ಸಿಕ್ಕುಬಿದ್ದಿರುತ್ತದೆ. ಅದನ್ನು ಬಿಡಿಸಿಕೊಳ್ಳುವದು ಸಣ್ಣ ಪುಟ್ಟ ಕೆಲಸವಲ್ಲ.

ತರುಣಿ—ನೀರಶ್ರೇಷ್ಠಾ, ಆಮಾತು ಒಪ್ಪುತಕ್ಕದ್ದೇ ಸರಿ; ಯಾವದೊಂದು ಮಾರ್ಗದಿಂದ ಬುಂದೇಲಖಂಡವ ಮೇಲಿನ ದಿಲ್ಲೀ ಪತಿಯ ಅಧಿಕಾರವು ನಷ್ಟವಾದರೆ, ನನ್ನ ಪ್ರೇಮದ ಸ್ವೀಕಾರಮಾಡುವಿರಷ್ಟೆ?

ತರುಣ—ಅವಶ್ಯವಾಗಿ ಮಾಡುವೆನು. ಯಾವ ಗುಡಿಯಾದರೇನು, ಸಿದ್ದಿ ಬಂದರಾಯಿತಷ್ಟೆ? ಪ್ರಿಯೇ, ನಿನ್ನ ಪ್ರೇಮಸಾಕ್ಷಿಯಿಂದ ಹೇಳುತ್ತೇನೆ, ಯಾವ ಉಪಾಯದಿಂದಲೇ ಆಗಲಿ, ಬುಂದೇಲಖಂಡಕ್ಕೆ ಸ್ವಾತಂತ್ರ್ಯಪ್ರಾಪ್ತಿಯಾದ ದಿವಸ ನಾನು ನಿನ್ನ ಪಾಣಿಗ್ರಹಣ ಮಾಡುತ್ತೇನೆ.

ತರುಣನ ಈ ಮಾತುಗಳನ್ನು ಕೇಳಿ ಆ ಸ್ತ್ರೀಯ ಆನಂದವು ಹೊಟ್ಟೆಯಲ್ಲಿ ಹಿಡಿಸದಾಯಿತು. ತಾನು ಈವರೆಗೆ ಕೈಯಲ್ಲಿಹಿಡಿದುಕೊಂಡಿದ್ದ ಖಡ್ಗವನ್ನು ಮುಂದೆಮಾಡಿ ಆ ತರುಣನನ್ನು ಕುರಿತು—"ವೀರ ಶಿರೋಮಣಿಯೇ, ಮೊನ್ನೆ ಮೀನಾಬಝಾರದಲ್ಲಿ ಘನವಂತ ಸ್ತ್ರೀಯರ ಗುಂಪಿನಲ್ಲಿ ನಾನು ಈ ಖಡ್ಗವನ್ನು ಯೋಗ್ಯಬೆಲೆ ಬಂದಲ್ಲಿ ಕೊಡಬೇಕೆಂದು ಇಟ್ಟುಕೊಂಡು ಕುಳಿತಿದ್ದೆನು. ನನ್ನ ಎಷ್ಟೋ ಗೆಳತಿಯರು ತಾವಿಟ್ಟಿದ್ದ ವಸ್ತುಗಳನ್ನು

ಸಾವಿರಾರು ಮೊಹರುಗಳಿಗೆ ಮಾರಿದರು; ಆದರೆ ನನ್ನ ಪ್ರೇಮಕ್ಕೆ ಪಾತ್ರ ನಾದ ಪುರುಷನಿಗೇ ಈ ಖಡ್ಗವನ್ನು ಅರ್ಪಿಸಬೇಕೆಂದು ನಾನು ಕಾದಿದ್ದೆನು. ಈಗ ನನಗೆ ಈ ಖಡ್ಗದ ಯೋಗ್ಯ ಬೆಲೆಯು ನಿನ್ನಿಂದ ದೊರೆತಿರುವದರಿಂದ, ಇದನ್ನು ಸ್ವೀಕರಿಸಬೇಕು'' ಎಂದು ಹೇಳಿ ಖಡ್ಗವನ್ನು ಕೊಟ್ಟು ಮತ್ತೆ ತರುಣನನ್ನು ಕುರಿತು—" ಈ ದಾಸಿಯ ವಿನಂತಿಯನ್ನು ಮನ್ನಿಸಿ, ನನ್ನ ಪ್ರೇಮದ ಸ್ವೀಕಾರಮಾಡುವೆನೆಂದು ಅಭಿವಚನವಿತ್ತ ಪ್ರಿಯಕರನ ಹೆಸ ರೇನು? ನಡುವಿನ ವಿರಹದ ಕಾಲದಲ್ಲಿ ನಾನು ಯಾವ ಹೆಸರಿನ ಜಪ ಮಾಡ ಬೇಕು?

ತರುಣ—ನನ್ನ ಹೆಸರು " ದಲಪತರಾಯ "

ತರುಣಿ—ಸರದಾರ ಸಾಹೇಬ! ದಳಪತರಾಯಜೀ! ಪರಮೇಶ್ವರನ ಕೃಪೆಯಿಂದ ಬುಂದೇಲ ಖಂಡಕ್ಕೆ ಸ್ವಾತಂತ್ರ್ಯವು ಬೇಗನೆಪ್ರಾಪ್ತವಾದೀತು!

ದಲಪತ (ನಿಟ್ಟುಸಿರುಬಿಟ್ಟು)— ಬುಂದೇಲಖಂಡಕ್ಕೆ ಸ್ವಾತಂತ್ರ್ಯವು ಬೇಗನೆ ದೊರೆಯುವಂತೆ ಇಲ್ಲ.

ತರುಣಿ—ಬೇಗನೆ ದೊರೆಯುವಂತೆ ಇಲ್ಲದಿದ್ದರೆ ನಾನು ಬೇಗನೆ ದೊರೆ ಯುವಂತೆ ಮಾಡುವೆನು.

ದಲಪತ—ಸುಂದರೀ, ಅಂಥ ಸಾಮರ್ಥ್ಯವು ನಿನ್ನಲ್ಲಿರುವದೇ ?

ತರುಣಿ—ನಿಶ್ಚಯವಾಗಿ ಇರುವದು ; ಆದರ ಚಿಂತೆ ನಿಮಗೇಕೆ?

ದಲಪತ—ಸುಮ್ಮನೆ ಚಿಂತೆಯೇಕೆಂದ ಮಾತ್ರದಿಂದ ನನಗೆ ನಂಬಿಗೆ ಯಾಗುವದಿಲ್ಲ. ಅದಕ್ಕೆ ಏನಾದರೂ ಸಾಕ್ಷಿ ಬೇಕು.

ತರುಣಿ—ಪ್ರಿಯಕರಾ, ಬುಂದೇಲಖಂಡದ ಮೇಲೆ ದಿಲ್ಲಿಯ ಪತಿಯ ಅಧಿಕಾರವಿರುತ್ತದಷ್ಟೆ? ಆ ದಿಲ್ಲೀಪತಿಯ ಮೇಲೆ ನನ್ನ ಅಧಿಕಾರವಿರುತ್ತದೆ; ಆದ್ದರಿಂದ ಬುಂದೇಲಖಂಡಕ್ಕೆ ಸ್ವಾತಂತ್ರ್ಯವನ್ನು ಒದಗಿಸಿಕೊಡಲಿಕ್ಕೆ ನನಗೆ ವಿಲಂಬವಾಗಲಾರದು!

ದಲಪತ (ಆಶ್ಚರ್ಯದಿಂದ)—ಅಂದರೆ, ನಿನ್ನ ಮಾತಿನ ಗೂಢವು ನನಗೆ ಹೇಗೆ ತಿಳಿಯಬೇಕು? ದಿಲ್ಲಿಯ ಬಾದಶಹನಮೇಲೆ ಅಧಿಕಾರ ನಡಿಸುವಂತಹ ತೋಕೋತ್ತರ ಸ್ತ್ರೀಯು ನೀನು ಯಾರು?

ತರುಣಿ—ನಾನು ದಿಲ್ಲಿಯ ಬಾದಶಹನ ಮಗಳು; ನನ್ನ ಹೆಸರು ಬದ್ರುನ್ನಿಸೆ! ಬದ್ರುನ್ನಿಸೆಯ ಅಧಿಕಾರವು ಬಾದಶಹನ ಮೇಲೆ ಎಷ್ಟರ ಮಟ್ಟಗಿರುತ್ತದೆಂಬದನ್ನು ಯಾವತ್ತು ದಿಲ್ಲಿಯ ಪಟ್ಟಣವು ಅರಿತಿರುವದು

ದಲಪತ (ಆಶ್ಚರ್ಯದಿಂದ)— ಹಾಗಾದರೆ ನೀನು ಯವನಿಯು ನಮ್ಮ ಬುಂದೇಲಖಂಡದ ಶತ್ರುವಿನ ಮಗಳು!

ಈಮೇರೆಗೆ ನುಡಿದು ದಲಪತರಾಯನು ಆಶ್ಚರ್ಯಮಗ್ನನಾಗಿ ಬದ್ರುನ್ನಿಸೆಯ ಕಡೆಗೆ ನೋಡುತ್ತಿರಲು, ಬದ್ರುನ್ನಿಸೆಯು ತಟ್ಟನೆ ಅಲ್ಲಿಂದ ಹೊರಟು ಬಾದಶಹನ ಜನಾನಖಾನೆಯನ್ನು ಪ್ರವೇಶಿಸಿದಳು!



೧೦ನೆಯ ಪ್ರಕರಣ-ಹೀರಾದೇವಿಯ ದುಷ್ಕೃತನ.

ಹೀಗೆ ಇತ್ತ ದಿಲ್ಲಿಯಲ್ಲಿ ಚಂಪತರಾಯನೂ, ಆತನ ಮಗ ಛತ್ರಸಾಲನೂ ತಮ್ಮ ಓಜಸ್ವಿತೆಯಿಂದ ಪ್ರಕಾಶಮಾನರಾಗುತ್ತಿರಲು, ಅತ್ತ ಬುಂದೇಲಖಂಡದಲ್ಲಿ ಪಹಾರಸಿಂಗನ ಹೆಂಡತಿಯಾದ ಹೀರಾದೇವಿಯು ಚಂಪತರಾಯನ ವಿರುದ್ಧವಾಗಿ ಬುಂದೇಲದ ಉಳಿದ ರಾಜರೊಡನೆ ಗುಪ್ತಾಲೋಚನೆಗಳನ್ನು ಮಾಡಲು ಯತ್ನಿಸುತ್ತಿದ್ದಳು. ಪಹಾರಸಿಂಗನ ತಂದೆಯಾದ ಬೀರಸಿಂಗ ದೇವನು ಮಹಾ ಪರಾಕ್ರಮಿಯು; ಆತನು ತನ್ನ ಪರಾಕ್ರಮದಿಂದ ದಿಲ್ಲಿಯ ಸುತ್ತುಮುತ್ತಲಿನ ಪ್ರದೇಶವನ್ನು ನಡುಗಿಸಿಬಿಟ್ಟಿದ್ದನು. ಅಕಬರ ಬಾದಶಹನ ರಾಜಕಾರಣ ಪಟುತ್ವಕ್ಕೆ ಸೊಪ್ಪುಹಾಕದೆ ಆ ಸಾಹಸಿಯಾದ ವೀರನು ತನ್ನ ಅಜ್ಜನಾದ ಪ್ರತಾಪರುದ್ರನ ಕಟ್ಟಕಡೆಯ ಇಚ್ಛೆಯಂತೆ, ಯಾವತ್ತು ಬುಂದೇಲಖಂಡವನ್ನು ಸ್ವತಂತ್ರವಾಗಮಾಡುವನೆಂದು ಸ್ವಾತಂತ್ರ್ಯಪ್ರಿಯ ಬುಂದೇಲ ಖಂಡವು ನಂಬಿಕೊಂಡಿತ್ತು. ಶ್ರೀರಾಮನು ಲಕ್ಷ್ಮಣನನ್ನು ಪ್ರೀತಿಸುವಂತೆ, ರಾಜಾರಾಮಚಂದ್ರನಾನು ತನ್ನ ತಮ್ಮನಾದ ಬೀರಸಿಂಗದೇವನನ್ನು ಪ್ರೀತಿಸುತ್ತಿದ್ದನು. ಹೀಗೆಯೇ ಈ ಇಬ್ಬರು ಬಂಧುಗಳ ಪ್ರೇಮವು ಕಡೆತನಕ ಶಾಶ್ವತವಾಗಿ ಉಳಿದಿದ್ದರೆ, ಶ್ರೀರಾಮನು ಅಸುರರ ಸಂಹಾರಮಾಡಿ ವಿಜಯಶಾಲಿಯಾಗುವಂತೆ, ರಾಮಚಂದ್ರನಾನೂ ಮುಸಲ್ಮಾ

ನರನ್ನು ಸೋಲಿಸಿ ಬುಂದೇಲ ಖಂಡವನ್ನು ಸ್ವತಂತ್ರವಾಗಿ ಮಾಡಿದ ಶ್ರೇಯಸ್ಸಿಗೆ ಪಾತ್ರನಾಗುತ್ತಿದ್ದನು; ಆದರೆ ಬುಂದೇಲಖಂಡದಲ್ಲಿ ವಂಶಪರಂಪರೆಯಾಗಿ ನಡೆದು ಬಂದಿದ್ದ ರೋಗವು ಬೀರಸಿಂಗದೇವನ ಮನಸ್ಸನ್ನು ಆವರಿಸಿತು. "ತಾನು ಪರಾಕ್ರಮದಿಂದ ಕಾದುತ್ತ ಸಮರಭೂಮಿಯಲ್ಲಿ ಸಂಚರಿಸುತ್ತಿರಬೇಕು, ಅಣ್ಣನು ಸಿಂಹಾಸನದ ಮೇಲೆ ಕುಳಿತು ಸುಖಪಡಬೇಕು" ಎಂಬ ಮಾತ್ಸರ್ಯವು ಆ ಬೀರಸಿಂಗನಲ್ಲಿ ಉತ್ಪನ್ನವಾಗಿ, ಗೃಹಕಲಹಕ್ಕೆ ಆರಂಭವಾಯಿತು. ಓರಛಾದ ಸ್ವಾತಂತ್ರ್ಯದೇವಿಗೆ ಅಲಂಕಾರವಾಗಿದ್ದ ಬೀರಸಿಂಗದೇವನು ಯುವರಾಜ ಸೇಲೀಮನ ಸಂಗತಿಗೆ ಬಿದ್ದನು. ಸೇಲೀಮನ ಸಂತೋಷಕ್ಕಾಗಿ ಅಬುಲಫಜಲನಂಥ ಸರಸ್ವತೀ ಭಕ್ತನನ್ನು "ಬಾರಕೀ ಸರಾಈ" ಎಂಬಲ್ಲಿ ಕೊಂದವನು ಈ ಬೀರಸಿಂಗದೇವನೆ! ಮುಂದೆ ಸ್ವಲ್ಪ ಕಾಲದಲ್ಲಿಯೇ ಬೀರಸಿಂಗದೇವನು ತನ್ನ ಅಣ್ಣನಾದ ರಾಜಾ ರಾಮಚಂದ್ರನಾನನ್ನು ಸಿಂಹಾಸನದಿಂದ ತಳ್ಳಿ, ತಾನು ಓರಛಾದ ಪಟ್ಟವನ್ನು ಏರಿದನು. ಆಮೇಲೆ ಈ ಕುಲನಾಶಕನು ತನ್ನ ದೇಶದ ಸ್ವಾತಂತ್ರ್ಯಕ್ಕೆ ಉಂಟಾಗಿದ್ದ ಪಾರತಂತ್ರ್ಯದ ಕಲಂಕವನ್ನು ದೂರಮಾಡಿಕೊಳ್ಳುವದಕ್ಕಾಗಿ ವಿಫ್ರಪ್ರಯತ್ನ ಮಾಡಿದರೂ ಪ್ರಯೋಜನವೇನು ಆಗದೆ, ಆದರಿಂದ ಬುಂದೇಲಖಂಡದೊಳಗಿನ ಮೂರು ನಾಲ್ಕು ಸಂಸ್ಥಾನಗಳ ಸ್ವಾತಂತ್ರ್ಯವು ಮಾತ್ರ ನಷ್ಟವಾಯಿತು. ಮುಂದೆ ಬೀರಸಿಂಗದೇವನ ಒಬ್ಬನೇ ಒಬ್ಬ ಮಗನಾದ ಪಹಾರಸಿಂಗನಿಂದ ಶಹಾಜಹಾನ ಬಾದಶಹನು ಓರಛಾದ ಸಂಸ್ಥಾನವನ್ನು ಕಸಿದುಕೊಳ್ಳಲು, ಶೂರ ಚಂಪತರಾಯನು ತನ್ನ ಪರಾಕ್ರಮದಿಂದ ಅದನ್ನು ಗೆದ್ದು, ಅದನ್ನು ಪಹಾರಸಿಂಗನಿಗೆ ಕೊಟ್ಟಿದ್ದನು. ಇಂತಹ ಉಪಕಾರ ಕರ್ತೃವನ್ನು ತನ್ನ ರಾಣಿಯಾದ ಹೀರಾದೇವಿಯ ಮಾತಿನಿಂದ ಪಹಾರಸಿಂಗದೇವನು ದ್ವೇಷಿಸತೊಡಗಿದ್ದು ಕೃತಘ್ನತೆಯ ಲಕ್ಷಣವಲ್ಲದೆ ಮತ್ತೇನು?

ಪ್ರತಾಪಶಾಲಿಯಾದ ಚಂಪತರಾಯನ ಕೀರ್ತಿಯು ದಿನದಿನಕ್ಕೆ ಪಸರಿಸತೊಡಗಿದ್ದು, ಈ ಕೃತಘ್ನ ದಂಪತಿಗಳಿಗೆ ಸಹನವಾಗಲಿಲ್ಲ. ಎರಡನೆಯವರ ಉತ್ಕರ್ಷವನ್ನು ಸಹಿಸದ ಈ ಕೆಟ್ಟ ಗುಣವು ಆಗಿನ ಬುಂದೇಲಖಂಡದ ರಾಜರನ್ನು ಮುಚ್ಚಿಹಾಕಿದ್ದರಿಂದ, ಬುಂದೇಲಖಂಡದ ಬಹುಜನ ಅರಸರು ಹೀರಾದೇವಿಯ ಪಕ್ಷವನ್ನು ವಹಿಸಿ, ಚಂಪತರಾಯನನ್ನು ದ್ವೇಷಿಸಹತ್ತಿದರು

ಔರಂಗಜೇಬನ ಕಾಲದಲ್ಲಿ ಬುಂದೇಲಖಂಡದ ಸ್ವಾತಂತ್ರ್ಯಕ್ಕಾಗಿ ಹೆಣಗುವ ವನೆಂದರೆ, ಮಹೋಬದ ಅರಸನಾದ ಚಂಪತರಾಯನೊಬ್ಬನೇ; ರಣಧುರಂ ಧರನಾದ ಸಾಗರ ಸಂಸ್ಥಾನಾಧಿಪತಿ ಸಭಾಕರಣನು ಮೊದಮೊದಲು ಚಂಪತರಾಯನ ಸಹಾಯಕನಾಗಿದ್ದದ್ದರಿಂದ, ಚಂಪತರಾಯನ ಪ್ರಯತ್ನಕ್ಕೆ ಉತ್ತೇಜನವು ದೊರೆಯುತ್ತಲಿತ್ತು; ಆದರೆ, ಕಪಟಿಯಾದ ಹೀರಾದೇವಿಯು, ಸಭಾಕರಣನು ತನ್ನ ಪಕ್ಷವನ್ನು ವಹಿಸದಿದ್ದರೆ ತನ್ನ ಪಕ್ಷವು ಬಲಿಷ್ಠವಾಗದೆಂದು ಭಾವಿಸಿ, ತನ್ನ ಕಪಟನಾಟಕದ ಪ್ರಯೋಗದಿಂದ ಸರಳಹೃದಯದ ಸಭಾಕರಣನನ್ನು ತನ್ನ ಪಕ್ಷಕ್ಕೆ ಎಳೆದುಕೊಂಡು, ಯುದ್ಧದಲ್ಲಿ ಚಂಪತರಾಯನನ್ನು ಕೊಲ್ಲುವ ಪ್ರತಿಜ್ಞೆಯನ್ನು ಆತನಿಂದ ಮಾಡಿಸಿದ್ದಳು. ಹೀಗೆ ಚಂಪತರಾಯನಿಂದ ಹೊರತಾದ ಬುಂದೇಲಖಂಡದ ಸಂಸ್ಥಾನಿಕರೆಲ್ಲರು ಚಂಪತರಾಯನ ಸ್ವಾತಂತ್ರ್ಯಪ್ರಾಪ್ತಿಯ ಪ್ರಯತ್ನಕ್ಕೆ ಸಹಾಯಮಾಡುವದರ ಬದಲು, ತಟಸ್ಥವೃತ್ತಿಯಿಂದ ಚಂಪತರಾಯನ ನಾಶದ ಹಾದಿಯನ್ನು ನೋಡುತ್ತ, ಪ್ರಸಂಗ ಒದಗಿದಕೂಡಲೆ ತಾವೆಲ್ಲರು ಒಟ್ಟಾಗಿ ಆತನನ್ನು ನಾಶಗೊಳಿಸಬೇಕೆಂದು ನಿಶ್ಚಯಿಸಿದ್ದರು!

ಛತ್ರಸಾಲನು ವಿಂಧ್ಯವಾಸಿನಿಯ ಉತ್ಸವದಲ್ಲಿ ಸೆರೆ ಹಿಡಿದುಕೊಂಡು ಬಂದಿದ್ದ ರಣದುಲ್ಲಾಖಾನನನ್ನು, ಚಂಪತರಾಯನು ಸೆರೆಯಲ್ಲಿಹಾಕಿದ್ದನ್ನು ವಾಚಕರು ಬಲ್ಲರಷ್ಟೆ? ಇನ್ನುಮೇಲೆ ಮೊಗಲಬಾದಶಹ ಔರಂಗಜೇಬನೊಡನೆ ತಾನುಯುದ್ಧಮಾಡಬೇಕಾಗುವದೆಂದು ತಿಳಿದು, ಚಂಪತರಾಯನು ತನ್ನ ಬಲವನ್ನು ಹೆಚ್ಚಿಸಿಕೊಳ್ಳುವದಕ್ಕಾಗಿ ಎಲ್ಲ ಅರಸರು ತನ್ನ ಕಾರ್ಯಕ್ಕೆ ಸಹಾಯಮಾಡಬೇಕೆಂದು ಅವರವರ ಕಡೆಗೆ ವಿನಂತಿಯ ಪತ್ರಗಳನ್ನು ಕಳಿಸಿದ್ದನು. ಇದು ಚಂಪತರಾಯನ ದ್ವೇಷಿಗಳಿಗೆ, ಮುಖ್ಯವಾಗಿ ಹೀರಾದೇವಿಗೆ ಸಹನವಾಗಲಿಲ್ಲ. ಚಂಪತರಾಯನ ದ್ವೇಷಿಗಳಲ್ಲಿ ಅಗ್ರೇಸರಳಾದ ಹೀರಾದೇವಿಯು, ಚಂಪತರಾಯನ ನಾಶಮಾಡುವದಕ್ಕೆ ಇದೇ ತಕ್ಕಸಮಯವೆಂದು ತಿಳಿದು, ತನ್ನ ಪಕ್ಷದ ಎಲ್ಲ ಅರಸರನ್ನು ಕರೆಸಿ ಅವರೊಡನೆ ಗುಪ್ತವಾಗಿ ಆಲೋಚಿಸಿ ಚಂಪತರಾಯನ ನಾಶದ ಉಪಾಯವನ್ನು ಗೊತ್ತುಮಾಡಬೇಕೆಂದು ಮಾಡಿದಳು. ತನ್ನ ಮಾವನಾದ ಬೀರಸಿಂಗದೇವನು ಸೇಲೀಮನ ಸ್ವಾಗತಕ್ಕಾಗಿ ಕಟ್ಟಿಸಿದ್ದ ಸಭಾಮಂದಿರದಲ್ಲಿಯೇ ಅರಸರ ದರ್ಬಾರು ನೆರೆ

ಸುವದನ್ನು ಆ ದುಷ್ಟರಾಣಿಯು ನಿಶ್ಚಯಿಸಿ, ತನ್ನ ಪಕ್ಷದ ಎಲ್ಲ ಅರಸರಿಗೆ ವಿನಂತಿಪತ್ರಗಳನ್ನು ಕಳಿಸಿದಳು. ಅದರಂತೆ ಎಲ್ಲ ಅರಸರು ಆನಂದದಿಂದ ಓರಛಾಕ್ಕೆ ಬಂದರು. ಪರತಂತ್ರ ದೇಶದಲ್ಲಿ ಗೆದ್ದವೆತ್ತಿನ ಬಾಲಹಿಡಿಯುವವರೇ ಬಹುಜನರು ಇರುವರಲ್ಲವೆ? ಅದರಂತೆ ಮೊಗಲರ ಪ್ರಬಲ ಬಾದಶಹನಾದ ಔರಂಗಜೇಬನ ಪಕ್ಷನಹಿಸಿದ್ದ ಹೀರಾದೇವಿಯ ನಿಮಂತ್ರಣಕ್ಕೆ ಮಾನ ಕೊಡಲು ಯಾವ ಅರಸರೂ ಹಿಂದೆಮುಂದೆ ನೋಡಲಿಲ್ಲ. ಮೇಲೆಹೇಳಿದ ದರ್ಬಾರಮಂದಿರದಲ್ಲಿ ಅರಸರು ನೆರೆದರು. ಹೀರಾದೇವಿಯು ಸ್ವತಃ ಉತ್ತಮರೀತಿಯಿಂದ ಅವರ ಸ್ವಾಗತನಮಾಡಿದಳು. ಪಹಾರಸಿಂಗನು ಅಗ್ರಾಸನವನ್ನು ಅಲಂಕರಿಸಿದನು. ಹೀರಾದೇವಿಯೂ, ಪ್ರತಾಪಶಾಲಿಯಾದ ಸಭಾಕರೂ ಪಹಾರಸಿಂಗನ ಎಡಬಲದ ಉಚ್ಚಾಸನಗಳಲ್ಲಿ ಕುಳಿತುಕೊಂಡರು. ಉಳಿದ ಅರಸರು ತಮತಮಗೆ ಉಚಿತವಾದ ಆಸನಗಳಲ್ಲಿ ಕುಳಿತುಕೊಂಡರು.

ಈ ಮೇರೆಗೆ ಎಲ್ಲರು ಸ್ತಬ್ಧವಾಗಿ ಕುಳಿತಿರಲು, ಹೀರಾದೇವಿಯು ಆಸನದಮೇಲೆ ಕುಳಿತೇ ಎಲ್ಲ ರಾಜರನ್ನು ಕುರಿತು ಅಶ್ಯತೆಯಿಂದ—"ಬಂದೇಲಖಂಡದ ಸಮಸ್ತ ನೃಪವರ್ಯರೇ, ನಾನು ನಮ್ಮ ಪಕ್ಷವವರೆನ್ನುವರಿಗೇ ವಿನಂತಿಯ ಪತ್ರಗಳನ್ನು ಕಳಿಸಿರುವದರಿಂದ, ನೀವೆಲ್ಲರು ನನ್ನವರಾಗಿಯೇ ಬಂದಿರುವದು ನನಗೆ ಪರಮಸಂತೋಷಕರವು; ಆದರೆ ಯಾರಾದರೂದೆ್ರಹಿಗಳು ನಿಮ್ಮ ಎಡಬಲದಲ್ಲಿದ್ದರೆ ನೋಡಿ, ಅವರನ್ನು ದರ್ಬಾರದಿಂದ ಹೊರಗೆ ಹಾಕಿರಿ; ಯಾಕಂದರೆ, ನಾವು ಇನ್ನು ಆಲೋಚಿಸುವ ಸಂಗತಿಗಳು ಅತ್ಯಂತ ಗುಪ್ತವಾಗಿ ಇರಬೇಕಾಗುವವು!" ಎಂದು ನುಡಿದು ಸುಮ್ಮನಾಗಿ ಕ್ಷಣ ಹೊತ್ತು ನಾಲ್ಕೂಕಡೆಗೆ ನೋಡಿ—"ಬಹಳ ಸಂತೋಷವು. ನಮ್ಮ ಪಕ್ಷವು ಇಷ್ಟು ಬಲಿಷ್ಠವಾಗಿರುವದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ನಿಮ್ಮೆಲ್ಲರ ಸಹಾಯದಿಂದ ನಮ್ಮ ಶತ್ರುವಾದ ಚಂಪತರಾಯನನ್ನು ಸಹಜವಾಗಿ ಕುಗ್ಗುಬಡಿಯಬಹುದು. ಎಷ್ಟು ಆತನ ಪ್ರತಿಷ್ಠೆಯು! ಆತನ ವಿನಂತಿ ಪತ್ರದೊಳಗಿನ ಉದ್ಧಟತನವನ್ನು ನೋಡಿದಿರಾ? ತನ್ನ ವಿನಂತಿ ಪತ್ರವನ್ನು ಮನ್ನಿಸಿ ಸ್ವಾತಂತ್ರ್ಯಪ್ರಾಪ್ತಿಗಾಗಿ ತನಗೆ ಸಹಾಯನಮಾಡದನರನ್ನು ತನ್ನ ಶತ್ರುಗಳೆಂದು ತಿಳಿದು ಅವರ ಶಾಸನಮಾಡುವನಂತೆ. ಅವರನ್ನು ರಾಜ್ಯಭ್ರಷ್ಟರಾಗಮಾಡುವನಂತೆ! ಆತನ ಈ ಎಟ್ಟತನವು ನಿಮ್ಮಂಥ ವೀರ

ರಿಗೆ ಅಪಮಾನಕರವಲ್ಲವೆ? ಆ ಕಪಟಿಯಾದ ಚಂಪತರಾಯನ ಸ್ವಾತಂತ್ರ್ಯ ಪ್ರೀತಿಯು ತೋರಿಕೆಯದು. ಆತನು ತಾನೇ ಬುಂದೇಲಖಂಡದ ಸಾರ್ವಭೌಮನಾಗಬೇಕೆಂದು ಅಂತರಂಗದಲ್ಲಿ ಎಣಿಕೆಹಾಕುತ್ತಿರುವನು. ಈ ಮಾತು ನಿನುಗೆ ಗೊತ್ತಿಲ್ಲವೆಂದು ನಾನು ತಿಳಿದಿರುವದಿಲ್ಲ; ಆದರೆ ಪ್ರಸಂಗ ಒದಗಿದ್ದರಿಂದ ಆಡಿರುವೆನು. ನಮ್ಮ ಈ ಬಲಿಷ್ಠಪಕ್ಷದಿಂದ ಆತನ ಮಹತ್ವಾಕಾಂಕ್ಷೆಯು ಸಫಲವಾಗಲಾರದು. ಆ ಕಪಟಿಯಮೇಲೆ ಮೊಗಲ ಬಾದಶಹನ ಸೈನ್ಯವು ಸಾಗಿಬಂದಾಗ ನಾವೆಲ್ಲರೂ ಅದಕ್ಕೆ ಮನಃಪೂರ್ವಕ ಸಹಾಯನಾಡಿ ಚಂಪತರಾಯನನ್ನೂ ಆತನ ರಾಜ್ಯವನ್ನೂ ಮಣ್ಣುಗೂಡಿಸಬೇಕು; ಬಾದಶಹನು ಒಂದು ಪಕ್ಷದಲ್ಲಿ ಚಂಪತರಾಯನ ಶಾಸನಕ್ಕಾಗಿ ವಿಲಂಬವಾಡಿದರೆ, ನಾವೇ ಒಟ್ಟುಗೂಡಿ ಬಾದಶಹನ ಕಾರ್ಯವನ್ನು ಮಾಡತಕ್ಕದ್ದು. ಒಂದು ತಿಂಗಳೊಳಗೆ ಎಲ್ಲ ಅರಸರು ತನ್ನನ್ನು ಬಂದು ಕೂಡಬೇಕೆಂದು ನಿಮಗೆ ಕಳಿಸಿರುವ ವಿನಂತಿಪತ್ರದಲ್ಲಿ, ಅಲ್ಲಲ್ಲ ಆಜ್ಞಾಪತ್ರದಲ್ಲಿ ಚಂಪತರಾಯನು ಹೇಳಿರುವನಷ್ಟೆ? ಆ ತಿಂಗಳೊಳಗೆ ನಮ್ಮೆಲ್ಲರ ಕೈಯನ್ನು ಆ ದುಷ್ಟನಿಗೆ ತೋರಿಸಿಬಿಡಬೇಕು. ನಮ್ಮ ಕಂಚುಕಿರಾಯನು ಬಾದಶಹನನ್ನು ಕರತರುವದಕ್ಕಾಗಿಯೇ ದಿಲ್ಲಿಗೆ ಹೋಗಿರುವನು. ರಣಮುಲ್ಲಾಖಾನನ ಪ್ರತಿಬಂಧದ ಸುದ್ದಿಯು ಬಾದಶಹನಿಗೆ ತಿಳಿದು, ಆತನು ಚಂಪತರಾಯನಮೇಲೆ ಪ್ರಚಂಡ ಸೈನ್ಯವನ್ನು ಸಿದ್ಧಗೊಳಿಸುವ ಕೆಲಸದಲ್ಲಿ ತೊಡಗಿರಬಹುದು. ಹಾಗಿಲ್ಲದಿದ್ದರೆ ಈಗೆರಡುದಿನಗಳ ಹಿಂದೆಯೇ ಬರಬೇಕಾಗಿದ್ದ ಕಂಚುಕಿರಾಯನು ಯಾಕೆ ತಡೆಯುತ್ತಿದ್ದನು? ಬಾದಶಹನ ದಂಡಿನೊಡನೆಯೇ ಬರಬೇಕೆಂದು ಆತನು ನಿಂತಿರಬಹುದು.''

ಈ ಮೇರೆಗೆ ನುಡಿಯುತ್ತಿರಲು, ಕಂಚುಕಿರಾಯನ ಸಂಗಡ ದಿಲ್ಲಿಗೆ ಹೋಗಿದ್ದ ಕಿಸನನು ಹೊರಗೆ ಬಂದಿರುವನೆಂದು ಸೇವಕನು ಅರಿಕೆಮಾಡಿಕೊಂಡನು. ಕೂಡಲೆ ಹೀರಾದೇವಿಯು ಹಿಗ್ಗಿ, ಬೇಗನೆ ಆತನನ್ನು ಕರತಾರೆಂದು ಸೇವಕನನ್ನು ಆಜ್ಞಾಪಿಸಲು, ಆಷ್ಟರಲ್ಲಿ ಕಿಸನನು ದರ್ಬಾರವನ್ನು ಪ್ರವೇಶಿಸಿದನು. ಆಗಿನ ಆತನ ಬಾಡಿದ ಮೋರೆಯನ್ನೂ, ನಿರುತ್ಸಾಹದಮುದ್ರೆಯನ್ನೂ ನೋಡಿ ಹೀರಾದೇವಿಯು ಮನಸ್ಸಿನಲ್ಲಿ ಕುಗ್ಗಿದಳು. ಕಿಸನನು ಏನೋ ಅನಿಷ್ಟಕಾರಕ ಸುದ್ದಿಯನ್ನು ಹೇಳುವನೆಂದು ಆಕೆಯು ಭಾವಿಸಿ

ದಳು. ಅಷ್ಟರಲ್ಲಿ ಕಿಸನನು ನಮಸ್ಕರಿಸಿ ಸುಮ್ಮನೆ ನಿಂತುಕೊಳ್ಳಲು, ಹೀರಾದೇವಿಯು ಆತನನ್ನು ಕುರಿತು—

ಹೀರಾದೇವಿ—ಯಾಕೆ ಕಿಸನ, ಬಂದು ಸುಮ್ಮನೆ ನಿಂತುಕೊಂಡೆ? ಕಂಚುಕಿರಾಯನು ಯಾಕೆ ಬರಲಿಲ್ಲ?

ಕಿಸನ—ರಾಣೀ ಸರಕಾರ, ಅತ್ಯಂತ ದುಃಖದಾಯಕ ಸಂಗತಿಯನ್ನು ತಿಳಿಸಲಿಕ್ಕೆ ನನ್ನ ಬಾಯಿಯೇ ಏಳಲೊಲ್ಲದು. ಆ ದುಷ್ಟಸಂಗತಿಯನ್ನು ತಿಳಿಸುವದು ನನ್ನಪಾಲಿಗೇ ಬರುವದೆಂದರೆ ನನ್ನ ದುರ್ಭಾಗ್ಯವೇ ಸರಿ.

ಕಿಸನನ ಈ ಮಾತುಗಳನ್ನು ಕೇಳಿ, ಹೀರಾದೇವಿಯೂ, ಉಳಿದ ಅರಸರೂ ಕಂಚುಕಿರಾಯನು ಸತ್ತನೆಂದು ತಿಳಿದುಕೊಂಡರು. ಹೀರಾದೇವಿಗೆ ಆತನ ಮಾತುಕೇಳಿ ತನ್ನ ಈ ಮೊದಲಿನ ತರ್ಕವು ಸುಳ್ಳು ಆದದ್ದಕ್ಕಾಗಿ ಬಹಳ ವ್ಯಸನವಾಯಿತು. ಆಕೆಯು ಸಂತಾಪದಿಂದ ಕಿಸನನನ್ನು ಕುರಿತು—

ಹೀರಾದೇವಿ—ಆ ಅಶುಭ ವರ್ತಮಾನವನ್ನು ಇಷ್ಟು ಅವಸರದಿಂದ ನನಗೆ ತಿಳಿಸುವ ಕಾರಣವೇನು? ಕಿಸನ, ನಿನಗೆ ಹೊತ್ತು ವೇಳೆಯಾವದೂ ತಿಳಿಯುವದಿಲ್ಲ. ನಮ್ಮ ದರ್ಬಾರಕ್ಕೆ ನೀನು ಸುಮ್ಮನೆ ಅತಂಕವನ್ನುಂಟಿಮಾಡಿದೆ. ಹೋಗು, ಧಾರೀರದ ಅರಮನೆಗೆ ಹೋಗಿ ಕಂಚುಕಿರಾಯನ ವಿಧವೆಯಾದ ರಾಣಿಯೊಡನೆ ರಂಬಾಟವನ್ನಾಡಿ ಅಳು ಹೋಗು! ಬೇಕಾದರೆ ಈ ದರ್ಬಾರದ ಕಾರ್ಯವು ಮುಗಿದಮೇಲೆ ನಾವೆಲ್ಲರು ಕಂಚುಕಿರಾಯನ ಮರಣಕ್ಕಾಗಿ ದುಃಖಪ್ರದರ್ಶನ ಮಾಡಿ, ನಮ್ಮ ಕರ್ತವ್ಯದಿಂದ ಮುಕ್ತರಾಗುವೆವು ಹೋಗು.

ಕಿಸನ—ಏನಂದಿರಿ? ರಾಣೀ ಸುಲಾಘದೇವಿಯವರು ವಿಧವೆಯಾದರೆ? ಕಂಚುಕಿರಾಯರು ಪರಲೋಕ ವಾಸಿಗಳಾದರೇನು?

ಕಿಸನನ ಈ ಪ್ರಶ್ನೆಗಳನ್ನು ಕೇಳಿ ಹೀರಾದೇವಿಯು ಸ್ತಂಭಿತಳಾದಳು. ನನ್ನ ತರ್ಕವು ನಿರರ್ಥಕವಾದದ್ದರಿಂದ ಮತ್ತಾವದೋ ಅಶುಭ ವರ್ತಮಾನವನ್ನು ಕಿಸನನು ಹೇಳುವಹಾಗೆ ಕಾಣುತ್ತದೆಂದು ತಿಳಿದು ಆಕೆಯು ಕಿಸನನನ್ನು ಕುರಿತು—

ಹೀರಾದೇವಿ— ಕಿಸನ, ನಿನ್ನ ಅರ್ಧಮಾತುಗಳನ್ನು ಕೇಳಿ ವೃದ್ಧ ಕಂಚುಕಿರಾಯನು ಸತ್ತನೆಂದು ನಾನು ತರ್ಕಿಸಿದೆನು; ಆದರೆ ಈಗ ನೀನು ಯಾರಸಂಬಂಧದ ಅಶುಭವಾರ್ತೆಯನ್ನು ತಿಳಿಸುವವನು?

ಕಿಸನ—ಕಂಚುಕಿರಾಯರ ಸಂಬಂಧದಿಂದ! ಕಂಚುಕಿರಾಯರು ತೋಷನಾರಾಬೇಗಮಳ ಮುಂದೆ ಹೇಳಿದ ರಣದುಲ್ಲಾಖಾನರ ಬಂದೀವಾಸದ ಸುದ್ದಿಯು ಆ ಬೇಗಮೆಗೆ ನಿಜವಾಗಿ ತೋರಲಿಲ್ಲವಂತೆ. ಸುಳ್ಳುಹೇಳಿ ಬಾದ ಶಹರ ಅಪಮಾನಮಾಡಿದ್ದಕ್ಕಾಗಿ ಆ ಸಿಟ್ಟಿನ ಬೇಗಮೆಯು ರಾಜೇಸಾಹೇ ಬರಿಗೆ ದೇಹಾಂತ ಶಾಸನವನ್ನು ವಿಧಿಸಿದಳಂತೆ.

ಹೀರಾದೇವಿ (ಆಶ್ಚರ್ಯದಿಂದ)— ಏನು? ರಾಜನಿಷ್ಠೆಗೆ ಮರಣಶಿ ಕ್ಷೆಯೆ? ಕಿಸನ, ಕಂಚುಕಿರಾಯರ ಮರಣಶಿಕ್ಷೆಯು ಅಮಲಿನಲ್ಲಿಬಂದಿತೇನು?

ಕಿಸನ—ಇಲ್ಲ ಸರಕಾರ, ಅದಕ್ಕೆ ಇನ್ನು ಹನ್ನೆರಡು ದಿನಗಳ ಅವ ಕಾಶವಿರುವದು. ಅಷ್ಟರಲ್ಲಿ ಚಂಪತರಾಯರು ರಣದುಲ್ಲಾಖಾನರನ್ನು ಸೆರೆ ಯಲ್ಲಿ ಹಾಕಿದ ಸುದ್ದಿಯು ನಿಜವೆಂಬ ನಂಬಿಗೆಯು ದಿಲ್ಲೀದರ್ಬಾರಕ್ಕೆ ಆದರೆ ನಮ್ಮ ರಾಜೇಸಾಹೇಬರ ಬಿಡುಗಡೆಯಾಗುವದು.

ಹೀರಾದೇವಿ—ಕಂಚುಕಿರಾಯರು ಕತಾರಿಯನ್ನು ಛತ್ರಸಾಲನಿಗೆ ಕೊಟ್ಟದ್ದೇ ಈ ಅನರ್ಥಕ್ಕೆ ಕಾರಣವು! ಆದರೆ ಇದಕ್ಕಾಗಿ ನಾವು ನಿರಾಶೆ ಪಡುವ ಕಾರಣವಿಲ್ಲ. ಇಂದಿಲ್ಲನಾಳೆ ರಣದುಲ್ಲಾಖಾನರ ಪ್ರತಿಬಂಧದ ಸುದ್ದಿ ಯುಬಾದಶಹರಕಿವಿಗೆ ಮುಟ್ಟಿಯೇಮುಟ್ಟುವದು; ಅಥವಾ ನಮ್ಮಸಾಮ್ರಾಜ್ಯ ನಿಷ್ಠೆಯು ಆ ಸುದ್ದಿಯನ್ನು ಬಾದಶಹರ ಕಿವಿಗೆ ಮುಟ್ಟಿಸಬಹುದು. ಆಗ ಬಾದಶಹರ ಕೋಪಾಗ್ನಿಗೆ ಚಂಪತರಾಯನು ತುತ್ತಾಗುವದು ನಿಶ್ಚಯವು. ಬಾದಶಹರ ಅಮರ್ಯಾದಿತ ಸಾಮರ್ಥ್ಯಕ್ಕೆ ಚಂಪತರಾಯನು ಎಷ್ಟರವನು?

ಹೀರಾದೇವಿಯ ಈ ಮಾತುಗಳನ್ನುಕೇಳಿ, ಕಿಸನನು ಏನೋ ನೆನಪು ಮಾಡಿಕೊಂಡಂತೆ ಮಾಡಿ ರಾಣಿಯನ್ನು ಕುರಿತು—

ಕಿಸನ—ರಾಣೀ ಸರಕಾರ, ದಿಲ್ಲಿಯ ಬಾದಶಹರು ಚಂಪತರಾಯರ ಮೇಲೆಯೂ, ಯುವರಾಜ ಛತ್ರಸಾಲರ ಮೇಲೆಯೂ ಅತ್ಯಂತ ಸುಪ್ರಸನ್ನ ರಾಗಿರುವರು. ದಿಲ್ಲೀ ಪತಿಯು ಚಂಪತರಾಯರಿಗೆ ಹನ್ನೆರಡುಸಾವಿರ ರಾವು ತರ ಮನಸಬಿ ಕೊಟ್ಟು ಅವರನ್ನು ಶ್ರೇಷ್ಠ ಉಮರಾವರನ್ನು ಮಾಡಿರುವನು. ಇಂಥ ಹೊತ್ತಿನಲ್ಲಿ ಬಾದಶಹರು ಚಂಪತರಾಯರಿಗೆ ಸಹಾಯಮಾಡುವದನ್ನು ಬಿಟ್ಟು, ಅವರಮೇಲೆ ಶಸ್ತ್ರವೆತ್ತುವರೆನ್ನುವಹಾಗೆ ನನಗೆ ತೋರುವದಿಲ್ಲ.

ಹೀರಾದೇವಿ (ಕಣ್ಣು ಕೆಕ್ಕರಿಸಿ ನೋಡುತ್ತ)— ಏನಂದಿ? ಕಿಸನ, ಚಂಪತರಾಯನು ದಿಲ್ಲಿಯ ದರ್ಬಾರದ ಮನಸಬದಾರನಾದನೆ? ಉಮರಾವ ನಾದನೆ? ಹೀಗೆ ನುಡಿಯುವಾಗ ನಿನ್ನ ಮೈಮೇಲೆ ಎಚ್ಚರವಿರುವದಷ್ಟೆ?

ಕಿಸನ—ರಾಣೀ ಸರಕಾರ, ನಾನು ಒಂದು ಅಕ್ಷರವನ್ನಾದರೂ ಸುಳ್ಳು ಹೇಳುವದಿಲ್ಲ. ಇನ್ನು ಎರಡು ಮೂರು ದಿವಸಗಳಲ್ಲಿ ಚಂಪತರಾಯರ ಸವಾರಿಯು ನಿಮ್ಮ ರಾಜಧಾನಿಯಬಳಿಯಿಂದ ಹೋಗುವಾಗ ನಿಮಗೆನನ್ನ ಮಾತಿನ ನಂಬಿಗೆಯಾಗಬಹುದು.

ಸಭಾಕರಣ (ಆಶ್ಚರ್ಯದಿಂದ)-- ಏನಂದಿ ಕಿಸನ, ಚಂಪತರಾಯನು ದಿಲ್ಲಿಯ ದರ್ಬಾರಕ್ಕೆ ಹೋಗಿದ್ದನೆ? ಸ್ವಾತಂತ್ರ್ಯದ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿರುವ ಚಂಪತರಾಯನು ದಿಲ್ಲೀಪತಿಯ ಉಮರಾವನಾದನೆ? ಸ್ವಾತಂತ್ರ್ಯದೇವಿಯ ಪ್ರಸಾದಕ್ಕಿಂತ ಹನ್ನೆರಡುಸಹಸ್ರ ರಾವುತರ ಮನಸಬು ಅತನಿಗೆ ಹೆಚ್ಚು ಪ್ರಿಯವಾಯಿತೆ? ಈವೊತ್ತಿನವರೆಗೆ ಚಂಪತರಾಯನು ತೋರಿಸುತ್ತಿದ್ದ ಸ್ವಾತಂತ್ರ್ಯದ ಆಡಂಬರವು ಮಾಯಾವಿಯಾದದ್ದೇನು? ವಿಂಧ್ಯವಾಸಿನಿಯ ಭಕ್ತಿ, ಪ್ರಾಣನಾಥ ಪ್ರಭುಗಳಲ್ಲಿಯ ವಿಶ್ವಾಸ, ಪ್ರಜೆಗಳ ಕಲ್ಯಾಣದ ವಿಷಯದ ಆದರ ಇವೆಲ್ಲ ಚಂಪತರಾಯನ ಸೋಗುಗಳಾಗಿದ್ದವೇನು? ಕಿಸನ, ಕೂಡಿದ ದರ್ಬಾರದಲ್ಲಿಯೇ ಚಂಪತರಾಯನು ಮನಸಬದಾರಿಯನ್ನು ಸ್ವೀಕರಿಸಿರಬಹುದಲ್ಲವೆ? ನೆರೆದ ದರ್ಬಾರದಲ್ಲಿಯೇ ಅವನು ಅಮೀರ ಪದವಿಯನ್ನು ಸ್ವೀಕರಿಸಿದನೇನು?

ಕಿಸನ—ಇಲ್ಲ, ದರ್ಬಾರದಲ್ಲಿ ಚಂಪತರಾಯರು ಮನಸಬದಾರಿಯನ್ನೂ, ಅಮೀರ ಪದವಿಯನ್ನೂ ಸ್ವೀಕರಿಸಲು ಧಿಕ್ಕರಿಸಿದರು! ಬಾದಶಹರು ಮೊದಲಾಗಿ ನೆರೆದ ದರ್ಬಾರವೆಲ್ಲ ಆಶ್ಚರ್ಯದಿಂದ ನೋಡುತ್ತಿರಲು, ಬುಂದೇಲ ಖಂಡಕ್ಕೆ ಸ್ವಾತಂತ್ರ್ಯಕೊಡಲೊಪ್ಪದ ಬಾದಶಹರನ್ನು ಧಿಕ್ಕರಿಸಿ, ಅವರಿಗೆ ಮುಜರೆಯನ್ನೂ ಮಾಡದೆ, ಚಂಪತರಾಯರು ಛತ್ರಸಾಲದೊಡನೆ ದರ್ಬಾರದಿಂದ ಹೊರಟುಬಂದರಂತೆ!

ಸಭಾಕರಣ—ಹಾಗಾದರೆ ಅತನು ಅಮೀರಪದವಿಯ ಸ್ವೀಕಾರವನ್ನು ಹೇಗೆ ಮಾಡಿದನು? ಹನ್ನೆರಡುಸಾವಿರ ರಾವುತರ ಮನಸಬದಾರಿಕೆಯನ್ನು ಅತನು ಹೇಗೆ ಮನ್ನಿಸಿದನು?

ಕಿಸನ—ಚಂಪತರಾಯರು ರಾಜಾ ಜಯಸಿಂಗನಲ್ಲಿ ಅತಿಥಿಗಳಾಗಿ ಇದ್ದರು. ಅಮೀರಿಯನ್ನು, ಹಾಗು ಮನಸಬದಾರಿಕೆಯನ್ನು ಸ್ವೀಕರಿಸುವಂತೆಯಾದರೂ ಮಾಡಿಕೆಂದು ಬಾದಶಹರು ಒಯಸಿಂಗರವರ ಮುಖಾಂತರದುಂಬಾಲಬಿದ್ದದ್ದರಿಂದ, ಕಡೆಗೆ ಒಯಸಿಂಗರ ಮನಸ್ಸು ನೋಯಿಸಲಾರದೆ, ತಮ್ಮ ಮನಸ್ಸಿನಲ್ಲದಿದ್ದರೂ ಚಂಪತರಾಯರು ಅವನ್ನು ಸ್ವೀಕರಿಸಿದರಂತೆ ! ಈ ಮಾತು ನಾನು ಮಂದಿಯ ಬಾಯಿಂದ ಕೇಳಿದ್ದು; ಆದರೆ ನೆರೆದ ದರ್ಬಾರದಲ್ಲಿ ಚಂಪತರಾಯರು ಬಾದಶಹರ ಅನುಗ್ರಹವನ್ನು ತಿರಸ್ಕರಿಸಿದ್ದು ಸಾತ್ಯ ಸತ್ಯವಾದದ್ದು. ಹಿಂದಿನಿಂದ ಅಮೀರ ಪದವಿಯನ್ನೂ, ಮನಸಬದಾರಿಕೆಯನ್ನೂ ಯಾಕೆ ಸ್ವೀಕರಿಸಿದರೆಂಬದು ನನಗೆ ಗೊತ್ತಿಲ್ಲವು.

ಸಭಾಕರಣ (ಶಾಂತನಾಗಿ)—ಆ ಮಾತು ನಿನಗೆ ಗೊತ್ತಾಗಲಾರದು. ಹಾಗೆ ಮಾಡುವದರಲ್ಲಿ ಏನಾದರೂ ರಾಜಕಾರಣವು ಇರಲೇಬೇಕು.

ಇದನ್ನೆಲ್ಲ ಕೇಳಿ ಹೀರಾದೇವಿಗೆ ಬಹಳ ವ್ಯಸನವಾಯಿತು. ದರ್ಬಾರದ ಕಾರ್ಯವನು ಮುಂದಕ್ಕೆ ಸಾಗಿಸುವದು ಆಕೆಯಿಂದಾಗಲಿಲ್ಲ. ಬಂದ ಹೊಸ ಸಂಕಟವನ್ನು ಕುರಿತು ವಿಚಾರಮಾಡಿದಬಳಿಕ ಮುಂದಿನ ಹಾದಿಯನ್ನು ಗೊತ್ತುಮಾಡಬೇಕೆಂದು ಆಕೆಯು ದರ್ಬಾರವನ್ನು ನಿಲ್ಲಿಸಿದಳು. ಅರಸರು ಜಹಾರಸಿಂಗನ ಆತಿಥ್ಯವನ್ನು ಸ್ವೀಕರಿಸುತ್ತ ಕೆಲವು ದಿನ ಓರಛಾದಲ್ಲಿ ನಿಂತುಕೊಂಡರು.

ಆದಿನ ರಾತ್ರಿಯೆಲ್ಲ ಹೀರಾದೇವಿಯು ವಿಚಾರಮಗ್ನಳಾಗಿದ್ದಳು. ಆಕೆಯು ಕಣ್ಣಿಗೆ ಕಣ್ಣು ಹಚ್ಚಲಿಲ್ಲ. ಮರುದಿವಸ ಬೆಳಗಾಗುತ್ತಲೆ ಸಭಾಕರಣನನ್ನು ಕರೆಯಲಿಕ್ಕೆ ತನ್ನ ದಾಸಿಯಾದ ಗಿರಿಜೆಯನ್ನು ಕಳಿಸಿದಳು. ಕೆಲ ಹೊತ್ತಿನಮೇಲೆ ಸಭಾಕರಣನು ಹೀರಾದೇವಿಯ ಬಳಿಗೆ ಬಂದನು. ಆಗ ಆನಂದದ ಭರದಿಂದ ಹೀರಾದೇವಿಯು ಅತನ ಕಿವಿಯಲ್ಲಿ ಏನೋ ಒಟಗುಟ್ಟಿದಳು. ಆ ಒಟಗುಟ್ಟಿದ ಧ್ವನಿಯು ಕಿವಿಯನ್ನು ಸುಡುತ್ತ ಹೋಗಿ, ಅತನ ತಲೆಯ ಮಿದುಳನ್ನು ತಪ್ತವಾಗಮಾಡಿತು. ಅತನು ಭಯಗ್ರಸ್ತನಾಗಿ ಹೀರಾದೇವಿಯ ಕಡೆಗೆ ನೋಡುತ್ತ ಹೊರಟುಹೋದನು. ಆಗ ಹೀರಾದೇವಿಯ ಆಸುರೀ ಆನಂದದ ಚಮಲು ಇಳಿಯಲು, ಆಕೆಯು ಸುತ್ತುಮುತ್ತು ನೋಡುತ್ತಿರುವಾಗ, ತನ್ನ ಹತ್ತರದಲ್ಲಯೇ ಹತಬುದ್ಧಳಾಗಿ ಕುಳಿತಿದ್ದ

ವಿಜಯೆಯು ಆಕೆಯ ಕಣ್ಣಿಗೆ ಬಿದ್ದಳು. ಆಗ ಆ ದುಷ್ಟ ರಾಣಿಯು ವಿಜಯೆಯನ್ನು ಕುರಿತು—

ಹೀರಾದೇವಿ—ವಿಜಯೇ, ನೀನು ಇಲ್ಲ ಏಕೆ?

ವಿಜಯೆ (ಭಯದಿಂದ)—ಅಪ್ಪನ ಬಿಡುಗಡೆಗಾಗಿ ಯಾವ ಉಪಾಯ ಕೂಡುವಿರೆಂಬದನ್ನು ಕೇಳುವದಕ್ಕಾಗಿ ಬಂದಿದ್ದೆನು.

ಹೀರಾದೇವಿ (ನಗುತ್ತ)—ಹೋಗು, ನಿನ್ನೊಳ್ಳೆ ಅಪ್ಪನ ಪ್ರೀತಿಯ ಮಗಳು ಬಂದೆ! ಕಂಚುಕಿರಾಯನ ಬಿಡುಗಡೆಯ ಸಲುವಾಗಿ ನಾವು ಯತ್ನಿಸುವ ಕಾರಣವಿಲ್ಲ, ಈಗ ನಮಗೆ ಕೆಲಸದಲ್ಲಿ ಕೂಡುವ ಹಾಗೂ ಇಲ್ಲ. ರಾಜಾ ಚಂಪತರಾಯನೂ, ಯುವರಾಜ ಛತ್ರಸಾಲನೂ ದಿಲ್ಲಿಯ ಬಾದಶಹರಿಂದ ಬಹುಮಾನಪಡೆದು ಮಹೋಬಕ್ಕೆ ನಮ್ಮ ಊರಮೇಲೆ ಹಾದು ಹೋಗುತ್ತಿರುವರು. ನಾಳಿಗೆ ಅವರ ಆದರಾತಿಥ್ಯದ ವ್ಯವಸ್ಥೆ ಮಾಡುವದು ನಮ್ಮ ಕರ್ತವ್ಯವಾಗಿದೆ. ಮಹೋಬದ ಅರಸು ಮನೆತನಕ್ಕೂ, ಓರಛಾದ ಅರಸು ಮನೆತನಕ್ಕೂ ಸ್ನೇಹಸಂಬಂಧವನ್ನುಂಟುಮಾಡಬೇಕೆಂದು ಯುವರಾಜ ವಿಮಲದೇವನು ಒಂದೇಸವನೆ ನನ್ನ ಬೆನ್ನಹತ್ತಿದ್ದಾನೆ. ಇಂದು ಯುವರಾಜನ ಇಚ್ಛೆಯನ್ನು ಪೂರ್ಣಮಾಡಬೇಕಾಗಿದೆ. ಅಂದಬಳಿಕ ಈಗ ಕಂಚುಕಿರಾಯನ ಬಿಡುಗಡೆ ಮಾಡಿಸಲಿಕ್ಕೆ ನಮಗೆಲ್ಲಿ ಕೂಡುವದು? ಬೇಕಾದರೆ ನೀನೇ ದಿಲ್ಲಿಗೆ ಹೋಗಿ ನಿಮ್ಮ ಅಪ್ಪನನ್ನು ಬಿಡಿಸು!

ಈ ಮಾತನ್ನು ಕೇಳಿ ವಿಜಯೆಯು ಚಟ್ಟನೆ ಎದ್ದು ಹೀರಾದೇವಿಯನ್ನು ತಿರಸ್ಕಾರದಿಂದ ನೋಡುತ್ತ ಹೊರಟುಹೋದಳು. ಹೀರಾದೇವಿಯು ಮತ್ತೆ ಗಹಗಹಿಸಿ ನಕ್ಕಳು!

೧೨ನೆಯ ಪ್ರಕರಣ-ಕರ್ಕಶ ಹೀರಾದೇವಿ.

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಹೀರಾದೇವಿಯು ಅತ್ಯಂತ ಉತ್ಸಾಹದಿಂದ ಚಂಪತರಾಯನ ಸ್ವಾಗತದ ಸಿದ್ಧತೆಯನ್ನು ಮಾಡತೊಡಗಿದ್ದಳು. ಅದನ್ನು ನೋಡಿ ಎಲ್ಲರೂ ಪರಮಾಶ್ಚರ್ಯಪಟ್ಟರು. ಕೃಷ್ಣಸರ್ಪವು ತನ್ನ

ಉಗ್ರಸ್ವಭಾವವನ್ನು ಬಿಟ್ಟು ಸಾತ್ವಿಕವಾದಂತೆಯೂ, ಹುಲಿಯು ತನ್ನ ಹಿಂಸಾ ಕರ್ಮವನ್ನು ಬಿಟ್ಟು ಆಕಳುಗಳ ಹಿಂಡಿನಲ್ಲಿ ಮೇಯುತ್ತಿರುವಂತೆಯೂ ನೋಡುವವರಿಗೆ ತೋರಹತ್ತಿತು. ಮಹೋಬದ ರಾಜಮನೆತನದಮೇಲೆ ವಿಷಕಾರುತ್ತಿದ್ದ ತನ್ನ ಹೆಂಡತಿಯು ಈದಿನ ಇಷ್ಟು ಪ್ರೇಮದಿಂದ ಚಂಪತ ರಾಯನ ಆದರಾತಿಥ್ಯದ ಕಾರ್ಯದಲ್ಲಿ ನಿಮಗ್ನಳಾದದ್ದನ್ನು ನೋಡಿ ಪಹಾ ರಸಿಂಗನಿಗೂ ಆಶ್ಚರ್ಯವಾಯಿತು! ಯಾವಕಾರಣದಿಂದಲೇ ಆಗಲಿ, ಇಂದು ಚಂಪತರಾಯ-ಪಹಾರಸಿಂಗರೊಳಗಿನ ದ್ವೇಷಾಗ್ನಿಯು ಶಾಂತವಾಗಿ ಪರಸ್ಪ ರರು ಪ್ರೇಮದಿಂದ ನಡೆದುಕೊಳ್ಳುವ ಲಕ್ಷಣವನ್ನು ನೋಡಿ ಎಲ್ಲರಿಗೂ ಸಂತೋಷವಾಯಿತು. ಚಂಪತರಾಯನು ಮೊದಲು ಚತುರ್ಭುಜನ ಮಂದಿ ರಕ್ಕೆ ಬಂದು ದೇವರ ದರ್ಶನ ಮಾಡಿಕೊಂಡು ತಮ್ಮೇಲೆ ಅರಮನೆಯನ್ನು ಪ್ರವೇಶಿಸುವೆನೆಂದು ಹೇಳಿದ್ದರಿಂದ, ಆ ದೇವಸ್ಥಾನವನ್ನು ಮನಃಪೂರ್ವಕ ವಾಗಿ ಶೃಂಗರಿಸಿದ್ದರು. ಪಹಾರಸಿಂಗನು ಹೀರಾದೇವಿಯ ಹೇಳಿಕೆಯಂತೆ ಚಂಪತರಾಯನ ಸ್ವಾಗತವನ್ನು ಪ್ರೇಮದಿಂದ ಮಾಡುವದಕ್ಕಾಗಿ ಚತುರ್ಭು ಜನ ಮಂದಿರದಲ್ಲಿ ಸಿದ್ಧನಾಗಿ ಕಾದಿದ್ದನು. ಚಂಪತರಾಯನು ಛತ್ರಸಾಲ-ದಲಪತರೊಡನೆ ಶೃಂಗರಿಸಿದ ರಾಜಮಾರ್ಗದಿಂದ ಬರುತ್ತಿರುವಾಗ ಪುರ ಜನರು ಆತನಮೇಲೆ ಪುಷ್ಪವೃಷ್ಟಿಗರೆದರು. ಈಪರಿಯ ತನ್ನ ಆದರವನ್ನು ನೋಡಿ ಸರಳಮನಸ್ಸಿನ ಚಂಪತರಾಯನು ಅತ್ಯಂತ ಸಂತುಷ್ಟನಾದನು. ಪಹಾರಸಿಂಗ-ಹೀರಾದೇವಿಯರ ವಿಷಯದ ದ್ವೇಷಭಾವವೆಲ್ಲ ಅಳಿದು ಹೋಯಿತು!

ಈ ಮೇರೆಗೆ ಸಮಾರಂಭದಿಂದ ಪುರಜನರ ಸತ್ಕಾರವನ್ನು ಸ್ವೀಕರಿ ಸುತ್ತ ಚಂಪತರಾಯನು ಶ್ರೀ ಚತುರ್ಭುಜನ ಮಂದಿರಕ್ಕೆ ಬರಲು, ಪಹಾರ ಸಿಂಗನು ಅತ್ಯಂತ ಆದರದಿಂದ ಆತನನ್ನು ಬರಮಾಡಿಕೊಂಡನು. ಆಗ ಆ ಬಂಧುಗಳು ಪರಸ್ಪರರನ್ನು ಆಲಿಂಗಿಸುವಾಗ ಬಹುಜನರ ಕಣ್ಣೊಳಗಿಂದ ಆನಂದಬಾಷ್ಪಗಳು ಉದುರಿದವು. ಛತ್ರಸಾಲನು ಈ ದಾಯಾದ್ಯಾನ-ತ್ಸರದ ನಾಶವಾದದ್ದು ಬುಂದೇಲಖಂಡದ ಸ್ವಾತಂತ್ರ್ಯಕ್ಕೆಎಷ್ಟು ಅನುಕೂಲವಾಯಿ ತೆಂಬದನ್ನು ದಲಪತರಾಯನಮುಂದೆ ನರ್ದಿಸತೊಡಗಿದ್ದನು. ಚಂಪತರಾ ಯನು ಶ್ರೀ ಚತುರ್ಭುಜನ ಮಂದಿರದಿಂದ ಹೊರಟು ಅರಮನೆಯ ಬಾಗಿಲಿಗೆ

ಬರಲು, ಹೀರಾದೇವಿಯು ಸ್ವತಃ ಆರತಿಯನ್ನು ತಕೊಂಡು ಬಹುಜನ ಸುವಾಸಿನಿಯರೊಡನೆ ಚಂಪತರಾಯನಿಗೆ ಆರತಿಮಾಡಿದಳು. ಅದನ್ನು ನೋಡಿ ಚಂಪತರಾಯನು ಹೀರಾದೇವಿಗೆ—"ಹೀರಾದೇವಿ, ಇಂದಿನ ನಿನ್ನ ಪ್ರೇಮಾವತಾರಗಳನ್ನು ನೋಡಿ ನಮ್ಮ ರುದ್ರಪ್ರತಾಪನ ವಂಶಜರ ಮುಖಾಂತರವಾಗಿಯೇ ಬುಂದೇಲಖಂಡದ ಸ್ವಾತಂತ್ರ್ಯವು ಶ್ರೀ ಚತುರ್ಭುಜನ ಕೃಪೆಯಿಂದ ಸಾಧಿಸಲ್ಪಡುವದೆಂಬ ನಂಬಿಗೆಯು ನನ್ನಲ್ಲಿ ದೃಢವಾಗತೊಡಗಿದೆ! ರಣದುಲ್ಲಾಖಾನನನ್ನು ನಾನು ಸೆರೆಯಲ್ಲಿ ಹಾಕಿದ ವರ್ತಮಾನವು ಇನ್ನೂ ಔರಂಗಜೇಬನ ಕಿವಿಗೆ ಮುಟ್ಟಿರುವದಿಲ್ಲ. ಆ ಸುದ್ದಿಯು ಹತ್ತಿದಕೂಡಲೆ ಆ ಧರ್ಮಮೂಢ ಬಾದಶಹನು ತನ್ನ ಸಾಮ್ರಾಜ್ಯದ ಸಾಮರ್ಥ್ಯವನ್ನೆಲ್ಲ ಒಟ್ಟುಗೂಡಿಸಿ ಬುಂದೇಲಖಂಡವನ್ನು ಚೂರುಚೂರು ಮಾಡುವದಕ್ಕಾಗಿ ಬರುವನು. ಆ ಕಾಲದಲ್ಲಿ ನಮ್ಮ ಕ್ಷಾತ್ರತೇಜವನ್ನು ಒಟ್ಟುಗೂಡಿಸಬೇಕೆಂದು ನಾನು ಯಾವತ್ತೂ ಬುಂದೇಲಖಂಡದ ರಾಜರಿಗೆ ವಿನಂತಿಪತ್ರವನ್ನು ಬರೆದು ಕೊಂಡಿರುವೆನು. ಆ ಪತ್ರದ ಸುಪರಿಣಾಮವಾದದ್ದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ." ಎಂದು ಅಭಿನಂದಿಸಿದನು. ಚಂಪತರಾಯನ ಈ ಮಾತುಗಳನ್ನು ಕೇಳಿ ಹೀರಾದೇವಿಯು ಹಿರಿಹಿರಿ ಹಿಗ್ಗಿದಳು. ತನ್ನ ತಂತ್ರವು ನಿಸ್ಸಂಶಯವಾಗಿ ಕೊನೆಗಾಣುವದೆಂದು ಭಾವಿಸುತ್ತ, ಸಂತೋಷದಿಂದ ಆಕೆಯು ಮರುದಿನದ ಮೇಜವಾನಿಯ ಕೆಲಸದಲ್ಲಿ ತೊಡಗಿದಳು.

ಮಧ್ಯರಾತ್ರಿಯು ವಿಾರಿಹೋಗಿ, ಚಂದ್ರನು ಅದೇ ಅಸ್ತಂಗತನಾದದ್ದರಿಂದ ನಾಲ್ಕೂ ಕಡೆಗೆ ಪುನಃ ಕತ್ತಲೆಯು ಮುಸುಕತೊಡಗಿತು. ಚಂಪತರಾಯನು ಸ್ವಾತಂತ್ರ್ಯಪ್ರಾಪ್ತಿಯ ಸಮಯವು ಈದಿನ ಸಮಾಪಿಸಿದಂತಾಯಿತೆಂದು ಭಾವಿಸಿ, ಆತನು ಹಲವು ಬಗೆಯ ವಿಚಾರಗಳಲ್ಲಿ ಮಗ್ನನಾಗಿಹೋಗಿದ್ದನು. ಹೀಗಿರುವಾಗ ಯಾರೋ ಒಬ್ಬರು ತನ್ನ ಬಳಿಯಲ್ಲಿ ಬಂದು ನಿಂತಿರುವಂತೆ ಆತನಿಗೆ ತೋರಿತು. ಇಷ್ಟು ಮಧ್ಯರಾತ್ರಿಯಲ್ಲಿ ಇವರು ಯಾರು ಬಂದಿರುವರೆಂದು ಆತುರದಿಂದ ಆತನು ನೋಡಲು, ಒಬ್ಬ ಬಾಲಸುಂದರಿಯು! ಆಕೆಯನ್ನು ನೋಡಿ ಚಂಪತರಾಯನಿಗೆ ಬಹಳ ಆಶ್ಚರ್ಯವಾಯಿತು. ಆತನು ಪ್ರೇಮಲಸ್ವರದಿಂದ—

ಚಂಪತರಾಯ—ತಂಗೀ, ಯಾರಮ್ಮಾ ನೀನು? ಇಷ್ಟು ರಾತ್ರಿಯಲ್ಲಿ ನೀನು ಇಲ್ಲಿ ಏಕೆ?

ವಿಜಯೆ—ಮಹಾರಾಜ, ನಾನು ವಿಜಯೆಯು, ಧಾರೀರದ ಕಂಚುಕಿ ರಾಯನ ಮಗಳು; ಹೀರಾದೇವಿಯ ಆತಿಥ್ಯದ ನಿಜವಾದ ಸ್ವರೂಪವನ್ನು ತಿಳಿಸುವದಕ್ಕಾಗಿ ನಾನು ಇಲ್ಲಿಗೆ ಬಂದಿದ್ದೇನು. ಪಹಾರಸಿಂಗನೂ, ರಾಣೀ ಹೀರಾದೇವಿಯೂ ನಿಮ್ಮ ಆತಿಥ್ಯದಲ್ಲಿ ತೋರಿಸಿದ ದಕ್ಷತೆಯಿಂದ ನೀವು ಅತ್ಯಂತ ಸಂತುಷ್ಟರಾದಂತೆ ತೋರುತ್ತದೆ; ಆದರೆ ಮಹಾರಾಜ, ಇಂದಿನ ಅವರ ಆತಿಥ್ಯವು ಮೃಗಜಲದಂತೆ ಕೇವಲ ತೋರಿಕೆಯದು ಮಾತ್ರ ಇರುವದು; ಅದರ ಮೂಲದಲ್ಲಿ ನಿಜವಾದ ಪ್ರೇಮದ ಅಂಶವೂ ಇರುವದಿಲ್ಲ!

ಚಂಪತರಾಯ—ತಂಗೀ, ನಿನ್ನ ಮಾತು ಕೇಳಿ ನನಗೆ ಆಶ್ಚರ್ಯವಾಗುವದು. ಹೀಗೆ ಹುಡುಗರ ಮಾತು ಕೇಳಿ ಒಬ್ಬರ ವಿಷಯವಾಗಿ ಸಂಶಯಪಡುವಂಥ ಚಂಚಲ ಮನಸ್ಸಿನವನು ಚಂಪತರಾಯನಲ್ಲವೆಂಬದು ನಿನಗೆ ಗೊತ್ತಿಲ್ಲ; ಆದ್ದರಿಂದಲೇ ನೀನು ಇಂಥ ಸಾಹಸಮಾಡಿರುತ್ತೀ. ಹೀಗೆ ಮಂದಿಯ ಮಾತು ಕೇಳಿಯೇ ಮುಳೋಬದ ಮನೆತನಕ್ಕೂ, ಓರಛಾದ ಮನೆತನಕ್ಕೂ ಈವರೆಗೆ ಕಲಹ ಬೆಳೆದು ಅನರ್ಥಕ್ಕೆ ಕಾರಣವಾಗಿತ್ತು: ಆದರೆ ಈಗ ಆ ಎರಡೂ ಮನೆತನಗಳು ಪರಸ್ಪರ ಪ್ರೇಮಪಾಶದಿಂದ ಬದ್ಧವಾಗುತ್ತಿರಲು, ನಿನ್ನಂಥ ಅಪ್ರಬುದ್ಧಳ ಮಾತು ಕೇಳಿ ಮನಸ್ಸಿನಲ್ಲಿ ಪುನಃ ದ್ವೇಷದ ಬೀಜವನ್ನು ನಾನು ಬಿತ್ತಿಕೊಳ್ಳಲಾರೆನು; ಹೋಗು, ನಿನ್ನನ್ನು ಯಾರು ಇಲ್ಲಿಗೆ ಹೀಗೆ ಹೇಳಲಿಕ್ಕೆ ಕಳಿಸಿರುವರೋ ಅವರಿಗೆ ಸ್ಪಷ್ಟವಾಗಿ ಹೇಳುಹೋಗು. ಚಂಪತರಾಯನು ಇಂತಹ ಚಾಡಿಯ ಮಾತಿಗೆ ಕಿವಿಗೊಡುವವನಲ್ಲ!

ವಿಜಯೆ—ಮಹಾರಾಜ, ನಾನು ಹುಡುಗಿಯು, ಅಪ್ರಬುದ್ಧಳು, ಸರಿ! ಆದರೆ ಕಪಟಿಯಲ್ಲವೆಂಬದನ್ನು ಮಾತ್ರ ತಮಗೆ ವಿನಯದಿಂದ ತಿಳಿಸದೆ ಇರಲಾರೆನು; ಹೀರಾದೇವಿಯ ಕಪಟವನ್ನು ನಾನು ಅರಿತಿರುವದರಿಂದಲೇ ಮನಸ್ಸು ನಿಲ್ಲಲಾರದೆ ತಮ್ಮನ್ನು ಎಚ್ಚರಗೊಳಿಸಲಿಕ್ಕೆ ಬಂದಿದ್ದೇನೆ. ಇಲ್ಲವಿದ್ದರೆ ಇಷ್ಟು ಮಧ್ಯರಾತ್ರಿಯಲ್ಲಿ ನಿದ್ದೆಗೆಟ್ಟು ಬರಲಿಕ್ಕೆ ನನಗೇನು ಬೇಕಾಗಿತ್ತು? ಹೀರಾದೇವಿಯ ಹಿಂದಿನ ಚಾರಿತ್ರ್ಯವನ್ನೆಲ್ಲ ನೆನಪಿಗೆ ತಂದುಕೊ

ಳಿರಿ. ನೀವು ಕಳಿಸಿದ ವಿನಂತಿಪತ್ರದ ವಿರುದ್ಧವಾಗಿ ಆಚರಿಸಲು ಒಳ ಸಂಚುಮಾಡುವದಕ್ಕಾಗಿ ಈಗೆರಡು ದಿನಗಳ ಹಿಂದೆ ಬುಂದೇಲಖಂಡದ ರಾಜರನ್ನೆಲ್ಲ ಕರೆಸಿ ದರ್ಬಾರು ನೆರಿಸಿ, ತಮಗೆ ಯಾರೂ ಸಹಾಯಮಾಡಬಾರದೆಂದು ಬೋಧಿಸುತ್ತಿದ್ದಳು; ಆದರೆ ಅಷ್ಟರಲ್ಲಿ ತಮಗೆ ಬಾದಶಹರಿಂದ ಮಾನಸಕರಿಯ ಪದವಿಯೂ, ಹನ್ನೆರಡುಸಾವಿರ ರಾವುತರ ಮನಸಬದಾರಿಕೆಯೂ ದೊರೆತದ್ದನ್ನು ಕೇಳಿದ ಕೂಡಲೆ ಆ ದುಷ್ಟ ಹೀರಾದೇವಿಯು ನಿಮ್ಮ ಮೇಲೆ ಹೀಗೆ ಮೋಹಜಾಲವನ್ನು ಬೀಸಿರುತ್ತಾಳೆ; ಆದ್ದರಿಂದ ನನ್ನ ಮಾತುಗಳನ್ನು, ಹುಡುಗಿಯ ಮಾತುಗಳೆಂದು ನಿರಾಕರಿಸಬೇಡಿರೆಂದು ಬೇಡಿಕೊಳ್ಳುವೆನು.

ಈ ಮೇರೆಗೆ ವಿಜಯೆಯು ಸ್ಪಷ್ಟವಾಗಿ ಮಾತಾಡುವದನ್ನು ಕೇಳಿ ಚಂಪತರಾಯನು ವಿಚಾರಕ್ಕೊಳಗಾಗಿ, ಹೀರಾದೇವಿಯ ಹಿಂದಿನ ಹಾಗು ಈಗಿನ ನಡತೆಗಳನ್ನು ಸರಿಹಚ್ಚಿ ನೋಡಹತ್ತಿದನು. ಆಗ ವಿಜಯೆಯು ಮತ್ತೆ ಚಂಪತರಾಯನನ್ನು ಕುರಿತು—

ವಿಜಯೆ—ಮಹಾರಾಜ, ಇಷ್ಟು ಕಾರಣವು ಸಾಕಾಗದಿದ್ದರೆ, ಇನ್ನೊಂದು ಸಂಗತಿಯನ್ನು ಹೇಳುವೆನು ಕೇಳಿರಿ. ನೀವು ರಣದುಲ್ಲಾಖಾನನನ್ನು ಸೆರೆಯಲ್ಲಿಟ್ಟಿರುವ ಸಂಗತಿಯನ್ನು ದಿಲ್ಲಿಯ ಬಾದಶಹನಿಗೆ ತಿಳಿಸಿ, ನಿಮ್ಮ ನಾಶಪಡಿಸಬೇಕೆಂದು ಹೀರಾದೇವಿಯು ಅಪ್ಪನನ್ನು ದಿಲ್ಲಿಗೆ ಕಳಿಸಿರುವಳು; ಆದರೆ ರೋಷನಾರಳು ಅಪ್ಪನ ಮಾತಿನಲ್ಲಿ ವಿಶ್ವಾಸವಿಡದ್ದರಿಂದ ದಿಲ್ಲಿಯ ಸೈನ್ಯವು ಈವರೆಗೆ ತಮ್ಮಮೇಲೆ ಸಾಗಿಬಂದಿರುವದಿಲ್ಲ. ಇಂಥ ಹೀರಾದೇವಿಯು ತಮ್ಮನ್ನು ನಿಜವಾಗಿ ಸತ್ಕರಿಸುತ್ತಿರಬಹುದೆ?

ಚಂಪತರಾಯ— ನೀನು ಯಾವ ಧೈರ್ಯದಿಂದ ಹೀರಾದೇವಿಯ ದುಷ್ಟತನವನ್ನು ನನ್ನಮುಂದೆ ಹೇಳುತ್ತೀ?

ವಿಜಯೆ—ನಾನು ಕಣ್ಣುಮುಟ್ಟ ನೋಡಿದ್ದರಿಂದ, ಕಿವಿಮುಟ್ಟ ಕೇಳಿದ್ದರಿಂದ ಹೇಳುತ್ತೇನೆ.

ಚಂಪತರಾಯ—ನೀನು ನೋಡಿದ್ದೇನು? ಕೇಳಿದ್ದೇನು?

ವಿಜಯೆ—ಮಹಾರಾಜ, ನಿಮ್ಮ ನಾಶದ ಉಪಾಯವನ್ನು ಹೀರಾದೇವಿಯು ಸಭಾಕರಣನ ಕಿವಿಯಲ್ಲಿ ಹೇಳಲು, ಅಂತಹ ನಿಮ್ಮ ಆ ಭಯಂಕರ

ಶತ್ರುವು ಕೂಡ ಅಂಜಿದನು; ಆತನ ಮೋರೆಯು ಕಪ್ಪಿಟ್ಟಿತು. ಆಗಿನ ಹೀರಾದೇವಿಯ ಆಸುರೀ ಆನಂದವನ್ನು ಹೇಳಲಾಸಲ್ಲ. ಆ ಆನಂದದ ಭರದಲ್ಲಿ ಸಭಾಕರಣನ ಮುಂದೆ ಮೆಲ್ಲಗೆ ಹೇಳುವ ಮಾತನ್ನು ಗಟ್ಟಿಯಾಗಿ ಹೇಳಿದ್ದರಿಂದ ಅದು ನನ್ನ ಕಿವಿಗೆ ಬಿದ್ದಿತು.

ಚಂಪತರಾಯ—ಯಾವ ಮಾತು ಅದು?

ವಿಜಯೆ—ಮಹಾರಾಜ, ನಾಳಿನ ಮೇಜವಾನಿಯಲ್ಲಿ ನಿನಗೆ ವಿಷಪ್ರಯೋಗಮಾಡುವೆನೆಂದು ಆ ದುಷ್ಟಳು ಸಭಾಕರಣನ ಮುಂದೆ ಹೇಳಿದಳು.

ಚಂಪತರಾಯ—ಏನು? ಹೀರಾದೇವಿಯು ನಾಳೆ ನನಗೆ ವಿಷಹಾಕುವಳೆ? ಈ ಮಾತು ನನಗೆ ಸತ್ಯವೆಂದು ತೋರಲೊಲ್ಲದು.

ವಿಜಯೆ—ಆ ಜಗನ್ಮಾತೆಯಾದ ವಿಂಧ್ಯವಾಸಿನಿಯ ಸಾಕ್ಷಿಯಿಂದ ಹೇಳುತ್ತೇನೆ, ಅಸತ್ಯವೆಂದರೇನೆಂಬದರ ಕಲ್ಪನೆಯು ಈ ವಿಜಯೆಗೆ ಇನ್ನೂ ಆಗಿರುವದಿಲ್ಲ!

ವಿಜಯೆಯ ಈ ನಿರ್ಧಾರದ ಮಾತನ್ನು ಕೇಳಿ ಚಂಪತರಾಯನು—"ತಂಗೀ, ಏನೇ ಆಗಲಿ, ಇಂಥಮಾತನ್ನು ಒಮ್ಮೆಲೆನಂಬಲಿಕ್ಕೆ ಬರುವದಿಲ್ಲ," ಎಂದು ನುಡಿಯುತ್ತಿರಲು, ಒಂದು ಭವ್ಯವಾದ ಆಕೃತಿಯು ತನ್ನ ಕಡೆಗೆ ಸಾಗಿ ಬರುತ್ತಿರುವದನ್ನು ಆತನು ನೋಡಿದನು. ಇವರಾರು ಬರುವರೆಂದು ಯೋಚಿಸುತ್ತಿರಲು, ಆ ಆಕೃತಿಯು ಗಾಂಭೀರ್ಯದಿಂದ—

ಆಕೃತಿ—ಚಂಪತರಾಯ, ನಿನಗೆ ನನ್ನ ಗುರುತು ಹತ್ತಿತೋ?

ಚಂಪತರಾಯ—ಹತ್ತಿತು.

ಆಕೃತಿ—ಅಸತ್ಯವನ್ನು ನಾನು ಬಹಳವಾಗಿ ತಿರಸ್ಕರಿಸುವೆನೆಂಬ ಮಾತು ನಿನಗೆ ಗೊತ್ತಿದೆಯೊ?

ಚಂಪತ—ಗೊತ್ತಿದೆ.

ಆಕೃತಿ—ನನ್ನ ಮಾತಿನಮೇಲೆ ಈಗ ನಿನ್ನ ವಿಶ್ವಾಸವು ಕೂಡ ಬಹುದೋ?

ಚಂಪತ (ಬಹಳ ಹೊತ್ತು ವಿಚಾರಮಾಡಿ)—ಕೂಡುವದು!

ಆಕೃತಿ—ಚಂಪತರಾಯ, ಈ ಹುಡುಗಿಯ ಮಾತನ್ನು ಅಸತ್ಯವೆಂದು ತಿಳಿಯಬೇಡ. ಈಕೆಯು ಮೂರ್ತಿಮಂತ ಸತ್ಯವಾಗಿರುವಳು. ಈಕೆಯು

ನಿನಗೆ ಹೇಳಿದ ಸುದ್ದಿಯು ಪೂರಾ ನಿಜವಿರುವದು. ಚಂಪತರಾಯ, ನಾನು ನಿನ್ನ ಶತ್ರುವು; ನಿನ್ನನ್ನು ಸಮರಭೂಮಿಯಲ್ಲಿ ಸಂಹರಿಸಬೇಕೆಂದು ನಾನು ಪ್ರತಿಜ್ಞೆಮಾಡಿದ್ದೇನೆ ; ಆದರೆ ವಿಷಪ್ರಯೋಗದಂತಹ ನೀಚಕೆಲಸವು ನನಗೆ ಸಮ್ಮತವಾದದ್ದಲ್ಲ ; ಹಾಗೆ ಹೀರಾದೇವಿಯು ನಿನ್ನ ಪ್ರಾಣಹರಣ ಮಾಡುವದು ನನ್ನ ಪ್ರತಿಜ್ಞೆಗೆ ಸಹನವಾಗದ್ದರಿಂದ, ನಿನ್ನನ್ನು ಎಚ್ಚರಗೊಳಿಸಲು ಬುದ್ಧಿಪೂರ್ವಕವಾಗಿ ಬಂದಿದ್ದೇನೆ ; ನನ್ನ ಸಂಗಡ ರಣಭೂಮಿಯಲ್ಲಿ ಕಾದಬೇಕೆಂಬ ಇಚ್ಛೆ ನಿನಗಿದ್ದರೆ, ನಾಳಿನ ವಿಷಪ್ರಯೋಗದ ಸಂಕಟದಿಂದ ಪಾರಾಗುವ ಯತ್ನಮಾಡು !

ಈಮೇರೆಗೆ ನುಡಿದು ಆ ವ್ಯಕ್ತಿಯು ಬಂದ ದಾರಿಯಿಂದ ತಿರುಗಿಹೋಗಿಬಿಡಲು, ವಿಜಯೆಯು— ಮಹಾರಾಜ, ಈಗಾದರೂ ನನ್ನ ಮಾತಿನಲ್ಲಿ ತಮ್ಮನಂಬಿಗೆಯಾಯಿತೇ ?

ಚಂಪತರಾಯ—ಸಭಾಕರಣನ ಮಾತಿನಲ್ಲಿ ಯಾವನು ಅವಿಶ್ವಾಸಪಟ್ಟಾನು ? ಆದರೆ ವಿಜಯೇ, ನಾಳಿನ ಸಂಕಟದಿಂದ ಪಾರಾಗಬೇಕಾದರೆ ಏನು ಮಾಡಬೇಕು ಹೇಳು.

ವಿಜಯೆ—ಮಹಾರಾಜ, ನಾಳೆ ಮೇಜವಾನಿಯಲ್ಲಿ ತಮಗಾಗಿ ಬಡಿಸಿತಂದು ಇಟ್ಟ ಸುವರ್ಣಪಾತ್ರವನ್ನು ತಾವು ಯಾವದೊಂದು ನೆವನಹೇಳಿ ಸ್ವೀಕರಿಸದಿದ್ದರಾಯಿತು. ನಿಮ್ಮ ಪ್ರೀತಿಯ ವಸ್ತುವೆಂದು ಹೀರಾದೇವಿಯು ಬಡಿಸಬಂದ ಪದಾರ್ಥವನ್ನು ನೀವು ಸ್ವೀಕರಿಸಬೇಡಿರಿ.

ಚಂಪತರಾಯ—ಹಾಗೇ ಆಗಲಿ, ನಾಳೆ ವಿಜಯೆಯ ಇಚ್ಛೆಯಂತೆ ಎಲ್ಲ ಆಗುವದು ; ಆದರೆ ವಿಜಯೇ, ಇಲ್ಲಿ ಕೂಡಿರುವ ಅರಸರೆಲ್ಲರೂ ಒಳಸಂಚಿನಲ್ಲಿ ಸೇರಿರುವರೇನು ?

ವಿಜಯೆ—ಹೀರಾದೇವಿಯಿಂದ ಆದಕ್ಕಾಗಿಯೇ ಕರೆಸಲ್ಪಟ್ಟಿರುವರು !

ಚಂಪತರಾಯ (ಸಂತಾಪದಿಂದ)—ಈ ದೇಶದ್ರೋಹಿಗಳ ಪಾರಪತ್ಯವನ್ನು ಮೊದಲು ಮಾಡಬೇಕು. ವಿಜಯೇ, ಮಹೋಬದ ಚಂಪತರಾಯನು ನಿನ್ನ ಯೋಗಕ್ಷೇಮವನ್ನು ವಿಚಾರಿಸಿದನೆಂತಲೂ, ನಿನ್ನ ಮಗಳಾದ ವಿಜಯೆಯ ಪದ್ಮಿಣಿಗಳಿಗೆ ಲುಬ್ಧನಾಗಿರುವನೆಂತಲೂ ನಿನ್ನ ತಾಯಿಯಾದ ಸಾಧ್ವೀ ಸುಫಲಾದೇವಿಗೆ ಹೇಳು. ಲಂಥ ಸಾಧ್ವಿಯರ ಪುಣ್ಯದಿಂದಲೇ

ಬುಂದೇಲಖಂಡಕ್ಕೆ ಸ್ವಾತಂತ್ರ್ಯವು ಪ್ರಾಪ್ತವಾಗಬೇಕಾಗಿರುತ್ತದೆ ; ಆದುದ
ರಿಂದ ವಿಜಯೇ, ನೀನೂ ಸುಫಲಾದೇವಿಯೂ ಕಂಚುಕಿರಾಯರ ಮನಸ್ಸನ್ನು
ತಿರುಗಿಸಿ, ಅವರು ದೇಶದ ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕೆ ಸಹಾಯ
ಮಾಡುವಂತೆ ಮಾಡಿರಿ !

ವಿಜಯೆ (ದುಃಖದಿಂದ)—ಮಹಾರಾಜ, ಅಪ್ಪನು ಯೋಗ್ಯಮಾರ್ಗ
ವನ್ನು ಹಿಡಿಯುವಂತೆ ಬೋಧಿಸುವದು ಅವ್ವನ ಹಣೆಯ ಬರಹದಲ್ಲಿ ಬರೆದಿಲ್ಲ! ಇಂದಿನಿಂದ ಹತ್ತುದಿನಗಳಲ್ಲಿ ಅಪ್ಪನ ಶಿರಚ್ಛೇದವಾಗಬೇಕಾಗಿರುವದು ; ಧಾರೀರ ಸಂಸ್ಥಾನವು ಅಲ್ಪಾವಧಿಯಲ್ಲಿಯೇ ದೊಡ್ಡ ವಿಪತ್ತಿಗೆ ಗುರಿಯಾಗ
ಬೇಕಾಗಿರುವದು !

ಚಂಪತರಾಯ—ಏನು? ಸುಫಲಾದೇವಿಗೆ ವೈಧವ್ಯವು ಪ್ರಾಪ್ತವಾಗು
ವದೇ ? ಕಂಚುಕಿರಾಯನು ರೋಷನಾರಾ ಬೇಗಮಳ ಸೆರೆಯಲ್ಲಿರುವನೆಂದು
ನಾನು ಕೇಳಿದ್ದೆನು ; ಅಂದಬಳಿಕ ಈ ಶಿರಚ್ಛೇದದ ಸುದ್ದಿಯೆಲ್ಲಿಯದು ?

ಕಿಸನನು ಹೇಳಿದ ಯಾವತ್ತೂ ಸಂಗತಿಯನ್ನು ವಿಜಯೆಯು ಚಂಪತ
ರಾಯನಿಗೆ ಹೇಳಿದಳು. ಅದನ್ನು ಕೇಳಿ ಚಂಪತರಾಯನು ಆಶ್ಚರ್ಯ
ಮುಗ್ನನಾಗಿ—

ಚಂಪತರಾಯ—ಈಗ ರೋಷನಾರಾಬೇಗಮಳ ಮೂರೂಮುಕ್ಕಾಲು
ಗಳಿಗೆಯ ಆಳಿಕೆಯು ಮುಗಿದುಹೋಗಿದೆ ; ಆದರೂ ಆ ಕುನಸಿನ ಹಟಮಾರಿ
ತ್ರೀಯು ಕಂಚುಕಿರಾಯನ ಶಿರಚ್ಛೇದಮಾಡಿಸದೆ ಬಿಡಲಿಕ್ಕಿಲ್ಲ; ಆದ್ದರಿಂದ
ಆಕೆಯ ನಂಬಿಗೆಯಾಗಿ ಕಂಚುಕಿರಾಯನಬಿಡುಗಡೆಯಾಗಬೇಕಾದರೆ ಕೂಡಲೆ
ರಣದುಲ್ಲಾಖಾನನ ಬಿಡುಗಡೆಮಾಡುವದೇ ಯೋಗ್ಯವು. ಬೇರೆ ಉಪಾಯ
ದಿಂದ ರೋಷನಾರಳ ನಂಬಿಗೆಮಾಡಿಕೊಡುವದು ಅಸಾಧ್ಯವು.

ವಿಜಯೆ—ಹಾಗೆ ಮಾಡಿದರೆ ತಾವಾಗಿ ತಮ್ಮಮೇಲೆ ಸಂಕಟವನ್ನು
ತಂದುಕೊಂಡಂತೆ ಆಗುವದಿಲ್ಲವೆ? ತಮ್ಮ ಯುದ್ಧದ ಸಿದ್ಧತೆಯಾಗುವದ
ರೊಳಗಾಗಿ ಮೊಗಲರ ಪ್ರಚಂಡ ಸೈನ್ಯವು ಬುಂದೇಲಖಂಡದ ಮೇಲೆ ಸಾಗಿ
ಬಂದರೆ, ಅನರ್ಥವಾದೀತಲ್ಲ !

ಚಂಪತರಾಯ—ರಣದುಲ್ಲಾಖಾನನನ್ನು ನಾನು ಸೆರೆಯಲ್ಲಿ ಹಾಕಿದ
ಸುದ್ದಿಯು ಅನ್ಯಮಾರ್ಗದಿಂದ ಬಾದಶಹನಿಗೆ ತಿಳಿಯುವ ಮೊದಲೇ ರಾ

ದುಲ್ಲಾಖಾನನನ್ನು ಬಾದಶಹನ ಬಳಿಗೆ ಕಳಿಸುವದು ನನಗೆ ಯೋಗ್ಯವಾಗಿ ಕಾಣುತ್ತದೆ. ದಿಲ್ಲೀಪತಿಯು ದಿಲ್ಲಿಯ ದರ್ಬಾರದ ಕಾಲದಲ್ಲಿ ನನ್ನೊಡನೆ ಬಳಿಸಿದ ಸ್ನೇಹಕ್ಕೆ ಇದು ಒಪ್ಪುವದು. ಇದರಿಂದ ಬಾದಶಹನು ಕೆಲ ದಿನಗಳ ವರೆಗಾದರೂ ನನ್ನಮೇಲೆ ದಂಡೆತ್ತಿ ಬಾರದೆ ಇರಬಹುದು. ಆ ಅವಧಿಯೊಳಗೆ ನಾನು ಬುಂದೇಲಖಂಡದ ದೇಶದ್ರೋಹಿಗಳ ಸದ್ದು ಅಡಗಿಸಬಹುದು. ಒಂದು ರಾಜಕಾರಣದ ಸಲುವಾಗಿ ರಾಜಾ ಜಯಸಿಂಗನ ಸೂಚನೆಯಂತೆ ನಾನು ದಿಲ್ಲಿಯ ಬಾದಶಹನ ಮಾನಕರಿಯಾದದ್ದು, ಈಗ ರಣದುಲ್ಲಾಖಾನನನ್ನು ಬಂಧಮುಕ್ತಮಾಡದಿದ್ದರೆ ಸಫಲವಾಗಲಾರದು. ಒಪ್ಪಿಗೆ, ರಣದುಲ್ಲಾಖಾನನನ್ನು ಬಂಧಮುಕ್ತಮಾಡುವದರಿಂದ ನನ್ನ ಹಾನಿಯೇನು ಆಗದೆ, ಅದರಿಂದ ಸುಫಲಾದೇವಿಯ ಸೌಭಾಗ್ಯ ರಕ್ಷಣವಾಗುವದು. ಆದ್ದರಿಂದ ನಾನು ಇಂದೇ ರಣದುಲ್ಲಾಖಾನನನ್ನು ಬಂಧಮುಕ್ತನಾಗಮಾಡಿ ಅತನನ್ನು ಬಾದಶಹನಿಗೆ ಒಪ್ಪಿಸುವದಕ್ಕಾಗಿ ಸೌಭಾಗ್ಯಸಿಂಹನನ್ನು ಮಹೋಬಕ್ಕೆ ಕಳಿಸುವೆನು. ಹೋಗು, ವಿಜಯೇ, ನೀನು ನಿಶ್ಶಂಕೆಯಿಂದ ಮನೆಗೆ ಹೋಗು. ಸ್ವಲ್ಪ ದಿನಗಳಲ್ಲಿಯೇ ನಿನ್ನತಂದೆಯು ನಿನ್ನ ಕಣ್ಣಿಗೆ ಬೀಳುವನು.

ಚಂಪತರಾಯನ ಅಪ್ಪಣೆಯಂತೆ ವಿಜಯೆಯು ಮನೆಗೆ ಹೋಗುವದಕ್ಕಾಗಿ ಹೊರಡಲು, ಕೃತಜ್ಞತೆಯಿಂದ ಆಕೆಯ ನೇತ್ರಗಳು ಆಶ್ರುಪೂರ್ಣವಾದವು. ಹೋಗುವಾಗ ಆಕೆಯು ಕೈಜೋಡಿಸಿ ಚಂಪತರಾಯನನ್ನು ಕುರಿತು—"ಮಹಾರಾಜ, ನನ್ನಮೇಲೆ ತಮ್ಮ ಅನಂತ ಉಪಕಾರವಾಗಿರುವದು. ಧಾರೀರದ ರಾಜ ಮನೆತನವು ನಿಮ್ಮ ಸೇವೆಯಲ್ಲಿ ಸದಾ ತತ್ಪರವಾಗಿರುವದು. ಸ್ವಾತಂತ್ರ್ಯ ಸಂಪಾದನದ ಕಾರ್ಯದಲ್ಲಿ ಚಂಪತರಾಯರಿಗೆ ನುಟ್ಟುಮೊದಲು ಸಹಾಯಮಾಡತೊಡಗಿದ ಮಾನವು ಧಾರೀರ ಸಂಸ್ಥಾನಕ್ಕೆ ಒದಗಿದ ಲೌಕಿಕವನ್ನು ತಾವು ಬೇಗನೆ ಕೇಳಬಹುದು" ಎಂದು ನುಡಿದು, ವಿಜಯೆಯು ಚಂಪತರಾಯನ ಶಯ್ಯಾಗೃಹದಿಂದ ಹೊರಟು ಹೋದಳು.

ಮರುದಿವಸವೇ ಮೇಜವಾನಿಯ ಸಮಾರಂಭವಾಯಿತು. ಸಭಾಕರಣದ ಹೊರತು ಬುಂದೇಲಖಂಡದ ಯಾವತ್ತು ರಾಜರು ಮೇಜವಾನಿಗೆ ಬಂದಿದ್ದರು. ಪಹಾರಸಿಂಗನು ಚಂಪತರಾಯನ ಬಳಿಯಲ್ಲಿ ಕುಳಿತುಕೊಂಡಿದ್ದು,

ಆತನ ಮನಸ್ಸನ್ನು ಪ್ರಸನ್ನವಾಗಮಾಡುವದಕ್ಕಾಗಿ ಹಲವು ಬಗೆಯಿಂದ ಯತ್ನಿಸುತ್ತಿದ್ದನು. ಹೀರಾದೇವಿಯು ಬಳಿಯಲ್ಲಿಯೇ ನಿಂತುಕೊಂಡು ಬಡಿಸುವ ವ್ಯವಸ್ಥೆಯನ್ನು ನೋಡುತ್ತಿದ್ದಳು. ಬಡಿಸುವದೆಲ್ಲ ಆಯಿತು. ಹೀರಾದೇವಿಯು ತಾನು ಕೃತಕೃತ್ಯಳಾದೆನೆಂಬ ಆನಂದದಿಂದ ಅಲ್ಲಿ ನಿಲ್ಲಲಾರದೆ ಒಳಗೆಹೋಗಿ ತನ್ನೊಳಗೆ ನಲಿದಾಡಹತ್ತಿದಳು. ಪಹಾರಸಿಂಗನು ಊಟಕ್ಕೆ ಕುಳಿತುಕೊಳ್ಳುವದಕ್ಕಾಗಿ ಚಂಪತರಾಯನಿಗೆ ಸೂಚಿಸಿ, ದೇವರ ನಾಮಘೋಷಮಾಡಲು, ಚಂಪತರಾಯನು ಎಚ್ಚತ್ತು, ಪಕ್ವಾನ್ನಗಳಿಂದ ತುಂಬಿದ ಬಂಗಾರದ ಪಾತ್ರೆಯನ್ನು ನೋಡಿ— "ನಾನು ಸುವರ್ಣಪಾತ್ರದಲ್ಲಿ ಭೋಜನಮಾಡುವದಿಲ್ಲ, ನನ್ನ ಸಲುವಾಗಿ ಬೇರೊಂದು ಪಾತ್ರವನ್ನು ತರಿಸಿರಿ, ಎಂದು ಹೇಳಿದನು. ಅದನ್ನು ಕೇಳಿ ಪಹಾರಸಿಂಗನು, ಚಂಪತರಾಯನನ್ನು ಸಂತೋಷಪಡಿಸಬೇಕೆಂದು ಹೇಳಿದ ತನ್ನ ಹೆಂಡತಿಯ ಇಚ್ಛೆಯನ್ನು ಪೂರ್ಣಮಾಡುವದಕ್ಕಾಗಿ ಆ ರಾಯನನ್ನು ಕುರಿತು— "ಬೇಡ, ಎರಡನೆಯ ಪಾತ್ರೆಯನ್ನು ತರುವದೇಕೆ? ನನ್ನ ಈ ಬೆಳ್ಳಿಯ ಪಾತ್ರೆಯನ್ನೇ ನೀವು ತಕ್ಕೊಳ್ಳಿರಿ, ನಿಮ್ಮ ಬಂಗಾರದ ಪಾತ್ರದಲ್ಲಿ ನಾನು ಉಣ್ಣುವೆನು" ಎಂದು ಹೇಳಿ ತಾಟುಗಳ ಅದಲಾ ಬದಲು ಮಾಡಿ ಊಟಕ್ಕೆ ಕುಳಿತುಕೊಂಡನು. ಎಲ್ಲರೂ ಸ್ತಬ್ಧರಾಗಿ ಊಟಮಾಡುತ್ತಿರುವದನ್ನು ನೋಡಿ ಹೀರಾದೇವಿಯು ತನ್ನ ಕಾರ್ಯವಾಯಿತೆಂಬ ಉಬ್ಬಿನಿಂದ ಒಳಗೆ ಬಂದು ನೋಡಲು, ಸುವರ್ಣಪಾತ್ರವು ತನ್ನ ಗಂಡನ ಮುಂದಿರುವದನ್ನು ನೋಡಿ ಗಡಬಡಿಸಿ ಧಾವಿಸಿ ಬಂದು ಗಾಬರಿಯಾಗಿ—"ಎಲ! ಇದೇನು? ಪಾತ್ರೆಗಳನ್ನು ಬದಲಿಸಿದವರಾರು? ಇವರಂತು ಅರ್ಧ ಉಂಡುಬಿಟ್ಟಿರುವರಲ್ಲ! ಇನ್ನೇನುಗತಿ" ಎನ್ನುತ್ತಿರಲು, ಚಂಪತರಾಯನು ಪಹಾರಸಿಂಗನಕೈಯನ್ನು ಹಿಡಿದು ಆತನ ಊಟವನ್ನು ನಿಲ್ಲಿಸಿ— "ಪಹಾರಸಿಂಗ, ಇನ್ನು ಒಂದು ತುತ್ತನ್ನೂ ಬಾಯಲ್ಲಿ ಹಾಕಿಕೊಳ್ಳಬೇಡ. ಈ ಬಂಗಾರದ ತಾಟಿನೊಳಗಿನ ಅನ್ನದಲ್ಲಿ ವಿಷವು ಕೂಡಿರುತ್ತದೆ" ಎಂದು ಹೇಳಿ, ಆತನನ್ನು ಅರ್ಧಊಟದಲ್ಲಿಯೇ ಎಬ್ಬಿಸಿದನು! ಆದರೆ ಅದರಿಂದ ಪ್ರಯೋಜನವೇನು ಆಗಲಿಲ್ಲ. ಅಂತಹ ಜಾಜ್ವಲ್ಯ ವಿಷವನ್ನೇ ಹೀರಾದೇವಿಯು ಅನ್ನದಲ್ಲಿ ಹಾಕಿದ್ದಳು; ಆದ್ದರಿಂದ ರಾಜವೈದ್ಯನ ಉಪಚಾರಗಳೆಲ್ಲ ವ್ಯರ್ಥವಾಗಿ, ಪಹಾರಸಿಂಗನು

ಪ್ರತಿ ಕ್ಷಣಕ್ಕೂ ಅಸ್ವಸ್ಥನಾಗತೊಡಗಿದನು. ಇನ್ನು ಒಂದು ಗಳಿಗೆಯಲ್ಲಿ ಅವಸಾನನಾಗುವದೆಂದು ರಾಜವೈದ್ಯನು ಹೇಳಿದನು. ಎಲ್ಲರೂ ದುಃಖಿಸ ತೊಡಗಿದರು.

ಪಹಾರಸಿಂಗನ ಮನಸ್ಸಿನಲ್ಲಿ ಬಹಳ ಮಾತಾಡಬೇಕೆಂಬದಿತ್ತು; ಆದರೆ ಒಂದು ಅಕ್ಷರ ಮಾತಾಡುವದೂ ಆತನಿಂದಾಗಲೊಲ್ಲದು. ಆತನು ಬಹು ಕಷ್ಟದಿಂದ—"ಚಂಪತರಾಯಜೀ, ಈವರೆಗಿನ ನನ್ನ ನೀಚತನ ಕ್ಕಾಗಿ ನನ್ನನ್ನು ಕ್ಷಮಿಸಬೇಕೆಂದು ಬೇಡಿಕೊಳ್ಳುವೆನು. ಚಂಪತರಾಯ ಜೀ, ಹೀಗೆ ಇತ್ತ ಕಡೆ ಬರುವವರಾಗಿರಿ! ಇದ್ದ ಸಂಗತಿಯನ್ನು ಸ್ಪಷ್ಟವಾಗಿ ಹೇಳಿದ ಹೊರತು ನನಗೆ ಸುಖದಿಂದ ಮರಣವು ಉಂಟಾಗಲಾರದು. ಇಲ್ಲಿ ನೆರೆದಿರುವ ಎಲ್ಲ ಸಜ್ಜನರ ಸಾಕ್ಷಿಯಿಂದ ಓರಛಾದ ರಾಜ್ಯವನ್ನು ನಾನು ನಿಮಗೆ ಒಪ್ಪಿಸುತ್ತಿರುವೆನು. ಯುವರಾಜ ಛತ್ರಸಾಲನನ್ನು ಇಲ್ಲಿಯ ರಾಜ ಸಿಂಹಾಸನದ ಮೇಲೆ ಕುಳ್ಳಿರಿಸಿ, ಇಲ್ಲಿಯ ಪ್ರಜೆಗಳನ್ನು ಸುಖಿಗಳಾಗ ಮಾಡಿರಿ.


ಚಂಪತರಾಯ—ಪಹಾರಸಿಂಗ, ನಿನ್ನ ಈ ಇಚ್ಛೆಯನ್ನು ನಾನು ಪೂರ್ಣಮಾಡಲಾರೆನು. ಯುವರಾಜ ವಿಮಲದೇವನು ಓರಛಾದ ರಾಜ ಸಿಂಹಾಸನದ ಸಶಾಸ್ತ್ರ ಸಂಬಂಧಿಕನಾಗಿರಲು, ಛತ್ರಸಾಲನು ಎಂದೂ ಆ ಸಿಂಹಾಸನವನ್ನು ಮುಟ್ಟಲಾರನು. ಯುವರಾಜ ವಿಮಲದೇವನನ್ನು ಸಿಂಹಾ ಸನದ ಮೇಲೆ ಕುಳ್ಳಿರಿಸಿ, ಆತನನ್ನು ರಕ್ಷಿಸುವದು ನನ್ನ ಕರ್ತವ್ಯವಾಗಿರು ವದು.

ಪಹಾರಸಿಂಗ (ಅತ್ಯಂತ ಪ್ರಯಾಸದಿಂದ)— ಏನಂದಿರಿ? ವಿಮಲದೇ ವನು ರಾಜ ಸಿಂಹಾಸನವೇರುವನೆ? ಆತನು ಸರ್ವಥಾ ಸಿಂಹಾಸನವೇರಲು ಯೋಗ್ಯನಲ್ಲ. ವಿಮಲನು ನನ್ನ ಹೊಟ್ಟೆಯ ಮಗನಲ್ಲ, ಓರಛಾ ಸಂಸ್ಥಾ ನದ ಶಾಸ್ತ್ರಸಮ್ಮತ ಹಕ್ಕುದಾರರೆಂದರೆ ನೀವು! ಆದ್ದರಿಂದಲೇ ಓರಛಾದ ರಾಜ್ಯವನ್ನು ನಿಮಗೆ ಒಪ್ಪಿಸುತ್ತೇನೆ. ಛತ್ರಸಾಲನು ಓರಛಾದ ಸಿಂಹಾಸನ ವನ್ನೇರಬೇಕು. ವಿಮಲದೇವನು ಆತನ ಪವಿತ್ರಸಹವಾಸದಲ್ಲಿ ಸುಖದಿಂದ ಕಾಲಹರಣಮಾಡಬೇಕು! ವಿಮಲ! ನೀನು ಯಾರಿರುವೆಯೆಂಬದನ್ನು

ಹೇಳಿದೆನೆಂದರೆ, ನನ್ನ ನರಕದ ದಾರಿಯನ್ನು ಹಿಡಿಯಲಿಕ್ಕೆ ನನಗೆ ನೆಟ್ಟಗಾಗುತ್ತದೆ.

ಈಮೇರೆಗೆ ನುಡಿಯುತ್ತಿರಲು, ಹೀರಾದೇವಿಯು ಕರಿಯ ಹಾವಿನಂತೆ ಬುಸುಗುಟ್ಟುತ್ತ ತನ್ನ ಗಂಡನನ್ನು ಕುರಿತು ಸಂತಾಪದಿಂದ—"ನೀವು ನರಕಕ್ಕಾದರೂ ಹೋಗಿರಿ, ಅಥವಾ ನರಕದಿಂದತ್ತ ಕಡೆಗಾದರೂ ಹೋಗಿರಿ; ಆದರೆ, ವಿಮಲದೇವನ ಸಂಬಂಧದಿಂದ ಒಂದು ಅಕ್ಷರವನ್ನೂ ಉಚ್ಚರಿಸಬೇಡಿರಿ. ಮರಣವ್ಯಥೆಯಿಂದ ನೀವು ಭ್ರಮಿಷ್ಟರಾಗಿರುವದರಿಂದ ವೈಪೀಲೆ ಎಚ್ಚರವಿಲ್ಲದೆ ಏನಾದರೂ ಹರಟುತ್ತಿರುವಿರಿ. ಅದನ್ನು ನಿಜವೆಂದು ತಿಳಿದು ಚಂಪತರಾಯನಾಗಲಿ, ಬೇರೆ ಯಾರಾದರೂ ಆಗಲಿ ವಿಮಲದೇವನ ಅಧಿಕಾರವಲ್ಲಿ ಕೈ ಹಾಕಿದರೆ, ರಾಜದ್ರೋಹಿಗಳೆಂದು ಅವರಿಗೆ ತಕ್ಕ ಶಾಸನ ಮಾಡಲಾದೀತು! ವಿಮಲದೇವನೇ ಇನ್ನು ಒಂದೆರಡು ಕ್ಷಣಗಳಲ್ಲಿ ಓರ್ವಾದ ರಾಜನಾಗುವನು. ನಾನು ಮರಣೋನ್ಮುಖರಾಗಿರುವ ಪಹಾರಸಿಂಗರವರ ಪತ್ನೀತ್ವವನ್ನು ಚಲ್ಲಿಕೊಟ್ಟು, ವಿಮಲದೇವನ ಮಾತೃತ್ವವನ್ನು ಅಂಗೀಕರಿಸಿದ್ದೇನೆ! ಅನ್ನಲು, ಪಹಾರಸಿಂಗನು ಸಂತಾಪದಿಂದ ಆಕೆಯನ್ನು ನೋಡುತ್ತ ಅತ್ಯಂತ ಕ್ಷೀಣ ಸ್ವರದಿಂದ—" ನೀನು ಸಾಹಸಿಯು! ಚಂಡಾಲಳು, ಪಾತಕಿಯು, ಅಧಮಳು! "

ಮುಂದಿನ ಶಬ್ದಗಳನ್ನು ನುಡಿಯುವ ತ್ರಾಣವು ಪಹಾರಸಿಂಗನಲ್ಲಿ ಉಳಿಯಲಿಲ್ಲ. ಆತನು ಹೀರಾದೇವಿಯ ಕಡೆಗೆ ಕಣ್ಣು ಕೆಕ್ಕರಿಸಿ ತ್ವೇಷದಿಂದ ಬಿರಿಬಿರಿ ನೋಡುತ್ತ ಗತಪ್ರಾಣನಾದನು!!



೧೩ನೆಯ ಪ್ರಕರಣ- ಸ್ವಾತಂತ್ರ್ಯವು ದಾನದ ವಸ್ತುವೇ ಅಲ್ಲ!

ಔರಂಗಜೇಬ ಬಾದಶಹನು ತನಗೆ ಉಪಕಾರಮಾಡಿದ ಚಂಪತರಾಯನ, ಹಾಗು ಆತನ ಮಗ ಛತ್ರಸಾಲನ ಬೇಡಿಕೆಯನ್ನು ತಿರಸ್ಕರಿಸಿದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ; ಆದರಿಂದ ಔರಂಗಜೇಬನು ಬಹು ಕಠೋರನೂ, ಕೃತಘ್ನನೂ, ಧರ್ಮಮೂಢನೂ ಎಂಬ ಭಾವನೆಯು ವಾಚಕರಲ್ಲಿ ಉಂಟಾಗಿರಬಹುದು. ಔರಂಗಜೇಬನು ತಂದೆಯನ್ನು ಸೆರೆಯಲ್ಲಿಟ್ಟವನೆಂ

ತಲ್ , ಅಣ್ಣತಮ್ಮಂದಿರನ್ನು ಕೊಲ್ಲಿಸಿದವನೆಂತಲೂ, ಹೆಜ್ಜೆಹೆಜ್ಜೆಗೆ ಕೊಟ್ಟ ವಚನಗಳನ್ನು ಮುರಿಯುವ ಮೋಸಗಾರನೆಂತಲೂ, ಪರಧರ್ಮದವರಿಗೆ "ಜಿಜಿಯಾ" ಕರಕೂಡಿಸಿ ಹಿಂಸೆಪಡಿಸುವ ಧರ್ಮಮೂಢನೆಂತಲೂ ಇತಿಹಾಸವು ಹೇಳುತ್ತಿರುವದು; ಅಂದಬಳಿಕ ಇಂತಹ ದುಷ್ಟ ಬಾದಶಹನು ಚಂಪತರಾಯ-ಛತ್ರಸಾಲರೊಡನೆ ನಡೆದ ಬಗೆಯು ಬಹಳ ಆಶ್ಚರ್ಯಕರವಾದದ್ದೆಂದು ಯಾಕೆ ಹೇಳಬೇಕು? ಆದರೆ ಇಂಥ ಕಠೋರನಾದ ಬಾದಶಹನು ಮಕ್ಕಳ ಮೋಹದಲ್ಲಿ ಅತ್ಯಂತ ಕೋಮಲ ಹೃದಯದವನೂ, ದಯಾಳುವೂ, ಸಜ್ಜನನೂ ಆಗುತ್ತಿರುವದು ಮಾತ್ರ ಆಶ್ಚರ್ಯದ ಸಂಗತಿಯೇ ಸರಿ. ಔರಂಗಜೇಬನು ತಾನು ತಂದೆಯನ್ನು ಸೆರೆಯಲ್ಲಿಟ್ಟು ರಾಜ್ಯ ಗಳಿಸಿದವನಾದ್ದರಿಂದ, ತನ್ನ ಮಕ್ಕಳಾದರೂ ತನ್ನನ್ನು ಸೆರೆಯಲ್ಲಿಟ್ಟು ಎಲ್ಲಿ ತನ್ನ ರಾಜ್ಯವನ್ನು ಕಸಿದುಕೊಳ್ಳುವರೋ, ಎಂಬ ಭಯದಿಂದ ಗಂಡುಮಕ್ಕಳನ್ನು ದೂರ ದೂರೇ ಇಟ್ಟಿರುತ್ತಿದ್ದನು. ಅವರ ಸಂಗಡ ಆತನ ಪ್ರೇಮದ ಬಳಿಕೆಇದ್ದಿಲ್ಲ. ಹೆಣ್ಣು ಮಕ್ಕಳಲ್ಲಿ "ಜಿಬುನ್ನಿಸಾ" ಎಂಬವಳು ರೋಷನಾರಳಂತೆ ಯಾವಾಗಲೂ ರಾಜಕಾರಣದಲ್ಲಿ ಸೇರತಕ್ಕವಳಾದದ್ದರಿಂದ, ಅವಳ ಮೇಲೆಯೂ ಬಾದಶಹನ ಪ್ರೇಮವು ಅಷ್ಟಕ್ಕಷ್ಟೇ ಇದ್ದಿತು; ಆದರೆ ವಾಚಕರ ಅತ್ಯಂತ ಪರಿಚಯದವಳಾಗಿರುವ ಬದ್ರುನ್ನಿಸೆಯು ಸರಳಮನಸ್ಸಿನವಳೂ, ಆನಂದವೃತ್ತಿಯವಳೂ, ನಗೆಮೊಗದವಳೂ ಇದ್ದದ್ದರಿಂದ, ಅಕೆಯಮೇಲೆ ಬಾದಶಹನು ನಿಸ್ಸೀಮ ಪ್ರೇಮವಾಡುತ್ತಿದ್ದನು. ಬಾದಶಹನ ಅಸ್ವಸ್ಥವಾದ ಮನಸ್ಸು ಸಮಾಧಾನಪಡುವ ಸ್ಥಾನಗಳೆಂದರೆ, ಮಕ್ಕಳಲ್ಲಿ ಬದ್ರುನ್ನಿಸೆಯ ಮಂದಿರವು; ಹೆಂಡಿರಲ್ಲಿ ಬದ್ರುನ್ನಿಸೆಯ ತಾಯಿಯಾದ ಆಯೇಷೆಯ ಮಂದಿರವು! ಅವೆರಡರಲ್ಲಿಯೂ ಬದ್ರುನ್ನಿಸೆಯ ಸಾನ್ನಿಧ್ಯವು ಬಾದಶಹನಿಗೆ ಅತ್ಯಂತ ಸಮಾಧಾನಕರವಾದದ್ದಿತ್ತು. ತನ್ನಮೇಲೆ ಬಾದಶಹನ ಈಪರಿಯ ಪ್ರೇಮವಿರುವದರಿಂದಲೇ ಬದ್ರುನ್ನಿಸೆಯು ಕೆಲವು ಹೇಳಿದಂತೆ ತನ್ನಪ್ರಿಯನಾದ ದಳಪತರಾಯನಿಗೆ ಬುಂದೇಲಖಂಡದ ಸ್ವಾತಂತ್ರ್ಯವನ್ನು ಬೇಗನೆ ಒದಗಿಸಿಕೊಡುವೆನೆಂದು ಹೇಳಿದ್ದಳು.

ದಕ್ಷಿಣ ಹಿಂದುಸ್ಥಾನದೊಳಗಿನ ವೇವಗಡದ ಅಥವಾ ದೌಲತ್ತಾಬಾದದ ಕೋಟೆಯನ್ನು ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ದಂಡೆತ್ತಿಹೋಗಿದ್ದ

ಬಾದಶಹನಸರದಾರನಾದ ಬಹದ್ದೂರಖಾನಕೋಕಾ ಎಂಬವನು ಬಹುದಿವಸ ಕೋಟೆಯನ್ನು ಮುತ್ತಿದರೂ ಪ್ರಯೋಜನವಿಲ್ಲದೆ ಹೋಗಿತ್ತು. ಅಲ್ಲದೆ, ದೊಡ್ಡಸೈನ್ಯವನ್ನು ತನ್ನ ಸಹಾಯಕ್ಕೆ ಕಳಿಸದಿದ್ದರೆ ಮುತ್ತಿಗೆಯನ್ನು ಎಬ್ಬಿಸಿ ತಿರುಗಿ ದಿಲ್ಲಿಗೆ ಬರಬೇಕಾಗುವದೆಂತಲೂ ಖಾನನು ಬಾದಶಹನಿಗೆ ಬರೆದ ದ್ದನು; ಆದ್ದರಿಂದ ಬಾದಶಹನು ಅದರ ವ್ಯವಸ್ಥೆಮಾಡುವದಕ್ಕಾಗಿ ದಿವಾಣ-ಈ-ಆಮದಲ್ಲಿ ತನ್ನ ವಿಶ್ವಾಸದ ಸಾಮ್ರಾಜ್ಯಭಕ್ತರ ದರ್ಬಾರುನೆರಿಸಿ ಆಲೋಚನೆ ನಡಿಸಿದನು. ರಾಜಾ ಜಯಸಿಂಗನು ಅಲ್ಲಲ್ಲಿ ಪಸರಿಸಿರುವ ಮೊಗಲ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡು ಒಟ್ಟುಗೂಡಿಸಿ ದೊಡ್ಡಸೈನ್ಯದೊಡನೆ ದೇವಗಡದ ಮುತ್ತಿಗೆಯ ಸಹಾಯಕ್ಕಾಗಿ ಹೋಗಬೇಕೆಂದು ಗೊತ್ತಾಯಿತು. ಇಡಿಯ ಭರತಭೂಮಿಯಲ್ಲಿ ಇಸ್ಲಾಮಿ ಅಧಿಕಾರವನ್ನು ಸ್ಥಾಪಿಸಬೇಕೆಂಬ ಮಹತ್ವಾಕಾಂಕ್ಷೆಯನ್ನು ತಾಳಿರುವ ಬಾದಶಹನ ಮನಸ್ಸು ಆಗಾಗ ಅಸ್ವಸ್ಥವಾಗುತ್ತಲಿತ್ತು. ಉತ್ತರದಲ್ಲಿ ರಜಪೂತರನ್ನೂ, ದಕ್ಷಿಣದಲ್ಲಿ ಮರಾಟರನ್ನೂ ಸ್ಮರಿಸಿ ಆತನು ಆಗಾಗ ಅಸ್ವಸ್ಥವಾಗುತ್ತಿದ್ದನು. ಇವರಲ್ಲದೆ ಮುಸಲ್ಮಾನರಲ್ಲಿಯೂ ವಿಜಾಪುರ-ಗೋವಳಕೊಂಡ ಬಾನಶಹರಂಥವರು ಬಾದಶಹನ ಮನಸ್ಸನ್ನು ಮೇಲೆಮೇಲೆ ಅಸ್ವಸ್ಥಗೊಳಿಸುತ್ತಿದ್ದರು. ಒಟ್ಟಿಗೆ, ಆ ಮಹತ್ವಾಕಾಂಕ್ಷಿಯಾದ ಬಾಧಶಹನ ಮನಸ್ಸು ಆಗಾಗ್ಗೆ ಒಂದಿಲ್ಲೊಂದು ಕಾರಣದಿಂದ ಅಸ್ವಸ್ಥವಾಗುವದು ವಾಡಿಕೆಯಾಗಿದ್ದಿತು. ಈದಿನ ದೇವಗಡದ ಮುತ್ತಿಗೆಯವಿಷಯದ ಅನಿಷ್ಟಸಂಗತಿಯಿಂದ ಮನಸ್ಸು ಬಹಳ ಅಸ್ವಸ್ಥವಾದದ್ದರಿಂದ ಬಾದಶಹನು ನೆಟ್ಟಗೆ ಬದ್ರುನ್ನಿಸೆಯ ಬಳಿಗೆ ಹೋದನು.

ಬಾದಶಹನು ಹೋದಾಗ ಬದ್ರುನ್ನಿಸೆಯು ತನ್ನ ಮುಂದಿರದ ಕಿಡಿಕೆಯೊಳಗಿಂದ ಯಮುನೆಯ ಪ್ರವಾಹದಕಡೆಗೋ ಅಥವಾ ಆಕಾಶದಲ್ಲಿ ಪ್ರಕಾಶಿಸುತ್ತಿರುವ ನಕ್ಷತ್ರಗಳ ಕಡೆಗೋ ನೋಡುವದರಲ್ಲಿ ಮಗ್ನಳಾಗಿ ಹೋಗಿದ್ದಳು. ವಿಚಾರದ ಭರದಲ್ಲಿ ತನ್ನ ತಂದೆಯು ತನ್ನನ್ನು ಆಶ್ಚರ್ಯದಿಂದ ನೋಡುತ್ತ ತನ್ನ ಬಳಿಯಲ್ಲಿಯೇ ನಿಂತಿರುವದು ಆಕೆಗೆ ಗೊತ್ತೇ ಆಗಲಿಲ್ಲ. ಮಗಳ ಆ ವಿಚಾರಮಗ್ನ ಸುಂದರಮೂರ್ತಿಯನ್ನು ನೋಡಿ ಬಾದಶಹನು ಪರಮ ಸಂತುಷ್ಟನಾದನು. ಈ ಬದ್ರುನ್ನಿಸೆಯು ತನಗೆ ಖುದಾನು ಸ್ವರ್ಗದಿಂದಕಳಿಸಿದ ಮನೋಹರವಾದ ಶಾಂತಿದಾಯಕವಸ್ತುವೆಂದು ಆತನು ಭಾವಿ

ಸಿದನು. ಬಾದಶಹನು ಬದ್ರುನ್ನಿಸೆಯ ಗಂಭೀರವಾದ ಸುಪ್ರಸನ್ನ ಮುಖವನ್ನು ನೋಡಿ ಆಶ್ಚರ್ಯದಿಂದ—

ಔರಂಗಜೇಬ—ಬೇಟೀ, ಯಾವವಿಚಾರದಲ್ಲಿ ಇಷ್ಟು ಮಗ್ನಳಾಗಿ ಹೋಗಿರುವೆ? ವಿಚಾರಮಾಡಿ ಮನಸ್ಸನ್ನು ವ್ಯರ್ಥನೋಯಿಸಿಕೊಳ್ಳುವದೇಕೆ? ನಿನ್ನ ಸುಖಸಾಧನದಲ್ಲಿ ಏತರ ಕೊರತೆಯಿದೆ? ಈ ದಿಲ್ಲೀಪತಿಯು ತನ್ನ ಮಗಳ ಸುಖದ ಸಲುವಾಗಿ ಇಷ್ಟು ಯತ್ನಿಸುತ್ತಿದ್ದರೂ ಬದ್ರುನ್ನಿಸೆಯು ಚಿಂತಾತುರಳು ಯಾಕೆಂಬದು ಆತನಿಗೆ ತಿಳಿಯಲೊಲ್ಲದು.

ಬದ್ರುನ್ನಿಸೆಯು ಎಚ್ಚತ್ತು ಗಾಬರಿಯಾಗಿ ಗಾಳಿಯಿಂದ ಅಲ್ಲಾಡುವ ತನ್ನ ತಲೆಗೂದಲುಗಳನ್ನು ತನ್ನ ಸುಕುಮಾರ ಕರಗಳಿಂದ ಸರಿಮಾಡಿಕೊಳ್ಳುತ್ತ ತನ್ನ ತಂದೆಯಬಳಿಗೆ ಹೋಗಿ ಅಚ್ಚೆಯಿಂದ—

ಬದ್ರುನ್ನಿಸೆ—ತಮ್ಮ ಕೃಪೆಯಿಂದ ನನಗೆ ಯಾತಕ್ಕೂ ತೊರತೆಯಿಲ್ಲ; ಆದರೂ ನನ್ನ ಮನಸ್ಸು ಏನನ್ನಾದರೂ ಹೊಸದನ್ನು ನೆನಸಿ ಅಸ್ವಸ್ಥವಾಗುತ್ತದಲ್ಲ! ಹೀಗೆ ಯಾಕಾಗಬೇಕೆಂಬದನ್ನು ಕುರಿತು ವಿಚಾರಮಾಡುತ್ತ ನಾನು ಈ ಯಮುನಾ ಪ್ರವಾಹದ ಕಡೆಗೂ, ಆಕಾಶದಲ್ಲಿ ಹೊಳೆಯುತ್ತಿರುವ ನಕ್ಷತ್ರಗಳ ಕಡೆಗೂ, ಈ ಉಪವನದಲ್ಲಿರುವ ಹೂವಿನಗಿಡಗಳಕಡೆಗೂ ನೋಡುತ್ತ ಕುಳಿತು ಕೊಂಡಿದ್ದೆನು. ಈ ನಕ್ಷತ್ರಗಳು ಎಂದಿನಿಂದಲೋ ಒಂದೇಸವನೆ ಹೊಳೆಯುತ್ತ ತಮ್ಮಸ್ಥಿತಿಯಲ್ಲಿಯೇ ಸಂತುಷ್ಟವಾಗಿವೆ, ಹೊಸದನ್ನು ಬಯಸಿ ನಮ್ಮಹಾಗೆ ಅಸಂತುಷ್ಟವಾಗುವದಿಲ್ಲ. ಈ ಯಮುನಾನದಿಯು ಎಂದಿನಿಂದಲೋ ಒಂದೇಸವನೆ ಹರಿಯುತ್ತ, ತನ್ನ ಆ ಸ್ಥಿತಿಯಲ್ಲಿಯೇ ಸಂತುಷ್ಟವಾಗಿರುತ್ತದೆ, ಹೊಸದನ್ನು ಬಯಿಸಿ ನಮ್ಮಂತೆ ಚಿಂತಿಸುತ್ತ ಕುಳಿತಿರುವದಿಲ್ಲ; ಅದರಂತೆ, ಈ ಹೂವಿನ ಗಿಡಗಳಾದರೂ ಒಂದೇಸವನೆ ಮೊಗ್ಗುತ್ತ, ಹೂ ಬಿಡುತ್ತ ಆನಂದದಿಂದಿವೆ, ಅವುಬೇಸತ್ತು ಅಸಮಾಧಾನಪಟ್ಟಂತೆ ತೋರುವದಿಲ್ಲ; ಆದರೆ, ನಮ್ಮ ಮನುಷ್ಯರ ಮನಸ್ಸು ಹೀಗೆ ಹೊಸ ಹೊಸದನ್ನು ಬಯಸಿ ಅಸಂತುಷ್ಟವು ಯಾಕಾಗಬೇಕು? ಎಂದು ವಿಚಾರಮಾಡುತ್ತ ಕುಳಿತುಕೊಂಡಿದ್ದೆನು.

ಔರಂಗಜೇಬ (ಗಾಂಭೀರ್ಯದಿಂದ)—ಬದ್ರುನ್ನಿಸೇ, ಖುದಾನು ಆ ಸಿರ್ಜೀವ ಪದಾರ್ಥಗಳನ್ನು ತಾನು ಗೊತ್ತುಮಾಡಿಕೊಟ್ಟಷ್ಟು ಕೆಲಸವನ್ನು

ಮಾಡುತ್ತಿರುವಂತೆ ಮಾಡಿರುವದರಿಂದ ಅವು ಒಂದೇಸವನೆ ತಮ್ಮ ಕೆಲಸ ಮಾಡುತ್ತಿರುವವು. ಆದರೆ ಮನುಷ್ಯಪ್ರಾಣಿಯು ಅವುಗಳಂತೆ ನಿರ್ಜೀವ ವಸ್ತುವಲ್ಲ. ಈತನನ್ನು ಖುದಾನು ಹೊಸಹೊಸದನ್ನು ಬಯಸುತ್ತ ತನ್ನ ಸೃಷ್ಟಿಯೊಳಗಿನ ಉಚ್ಚತರ ಸುಖಗಳನ್ನು ಪ್ರಯತ್ನದಿಂದ ಕೈಸೇರಿಸಿಕೊಳ್ಳುವಂತೆ ಮಾಡಿರುವನು; ಅದರಿಂದ ನಾವು ದೊರೆತಿದ್ದ ಸುಖದಲ್ಲಿ ಸಂತುಷ್ಟರಾಗದೆ. ಹೊಸಹೊಸವನ್ನು ಬಯಸುವೆವು. ಇದರಿಂದ ತೀರ ಹೀನಸ್ಥಿತಿಯಲ್ಲಿದ್ದ ಮನುಷ್ಯನು ತನ್ನ ಪ್ರಯತ್ನದಿಂದ ಉಚ್ಚಸ್ಥಿತಿಗೆ ಹೋದದ್ದು ನಮ್ಮ ಕಣ್ಣಿಗೆ ಬೀಳುತ್ತಿರುವದು. ನಮ್ಮ ಪೂರ್ವಜನಾದ ಮಹಾಪ್ರತಾಪಶಾಲಿ ಬಾಬರನು ತನ್ನ ಸಮುಕರ್ಂದದ ಸಣ್ಣ ರಾಜ್ಯದಿಂದ ಸಂತುಷ್ಟನಾಗದೆ ದಿಲ್ಲಿಯ ಪ್ರಾಂತವಲ್ಲಿ ತನ್ನ ಅಧಿಕಾರವನ್ನು ಸ್ಥಾಪಿಸಿದನು. ಅಲ್ಲಿಂದ ಆತನ ಮೊಮ್ಮಗನಾದ ಅಕಬರನು ಅಷ್ಟರಿಂದ ಸಂತುಷ್ಟನಾಗದೆ ಉತ್ತರಹಿಂದುಸ್ಥಾನವನ್ನೆಲ್ಲ ಗೆದ್ದನು; ಆವರೆ ಅವನು ಗೆಲ್ಲದೆ ಉಳಿದಿರುವ ದಕ್ಷಿಣ ಹಿಂದುಸ್ಥಾನವನ್ನು ನಾನು ಗೆಲ್ಲಬೇಕೆಂದು ಮಾಡಿದ್ದೇನೆ.

ಒಪ್ಪುನ್ನಿಸೆ—ಆದರೆ ಮಹತ್ವಾಕಾಂಕ್ಷೆಗಳ ಪಾವಟಿಗೆಗಳನ್ನು ನೀವು ಏರುತ್ತಿರುವಾಗ ಎರಡನೆಯವನನ್ನು ಎಷ್ಟು ತುಳಿಯುತ್ತಿರುವಿರೆಂಬದರ ಕಲ್ಪನೆಯಾದರೂ ನಿಮಗಿರುತ್ತದೆಯೆ? ಒಬ್ಬರನ್ನು ತುಳಿದು ಅವರ ಸುಖಸಾಧನಗಳನ್ನು ಕಸಿದುಕೊಂಡು ತಮ್ಮ ಸುಖವನ್ನು ಹೆಚ್ಚಿಸುವದು ಖುದಾನ ಮನಸ್ಸಿಗೆ ಬರುತ್ತಿರಬಹುದೇ? ನಾವು ದಿಲ್ಲಿಯಲ್ಲ ಅನುಭವಿಸುತ್ತಿರುವ ಸುಖಗಳ ಮೂಲವನ್ನ ನೋಡಿದರೆ, ಒಡ ಬಗ್ಗರ ರಕ್ತಹೀರಿ ನಮ್ಮ ತೃಪ್ತಿಯನ್ನು ಮಾಡಿಕೊಳ್ಳುವ ಹಾಗೆ ತೋರುತ್ತದಲ್ಲವೆ? ಅಪ್ಪಾ, ನಾನು ಹೀಗೆ ಕೇಳುವದಕ್ಕಾಗಿ ನನ್ನನ್ನು ಕ್ಷಮಿಸಬೇಕು. ಹಿಂದುಸ್ಥಾನದ ಪ್ರಜೆಗಳೆಂದರೆ? ನಮ್ಮಂತೆ ಖುದಾನ ಮಕ್ಕಳೇ ಅಲ್ಲವೆ? ಅಂದಬಳಿಕ ಆತನ ಮಕ್ಕಳು ಒಬ್ಬರ ರಕ್ತವನ್ನು ಒಬ್ಬರು ಕುಡಿಯಹತ್ತಿದರೆ ಆತನಿಗೆ ಹೇಗೆಸಂತೋಷವಾದೀತು, ಬಾಬರನು ದಿಲ್ಲಿಯ ಪ್ರದೇಶದ ಪ್ರಜೆಗಳನ್ನು ಹಿಂಡಿದನು, ಅಕಬರನು ಉತ್ತರ ಹಿಂದುಸ್ಥಾನದ ಪ್ರಜೆಗಳನ್ನು ಹಿಂಡಿದನು, ಅಪ್ಪಾ, ನೀವು ಇತಿಯ ಹಿಂದುಸ್ಥಾನದ ಪ್ರಜೆಗಳ ರಕ್ತವನ್ನು ಹೀರಬೇಕೆನ್ನುವಿರಿ! ಈಮಾತು ಅತ್ಯಂತ ದಯಾಳುವೂ, ನ್ಯಾಯಪ್ರಿಯನೂ ಆಗಿರುವ ಖುದಾನಿಗೆ ಸೇರಬಹುದೆ?

ಔರಂಗಜೇಬ (ಆಶ್ಚರ್ಯದಿಂದ)—ಬದ್ರುನ್ನಿಸೇ, ಈದಿನ ನೀನು ಹೀಗೇಕೆ ಮಾತಾಡುತ್ತೀ? ನಮ್ಮ ಮನೆತನಕ್ಕೆ ದಿಲ್ಲಿಯ ಸಾಮ್ರಾಜ್ಯಪದವು ಪ್ರಾಪ್ತವಾದದ್ದು ನಮ್ಮಮೇಲಿನ ಖುದಾನ ಪ್ರೇಮದ ಲಕ್ಷಣವೆಂದು ಕಾಜಿಗಳು ನಮಗೆ ಹೇಳುತ್ತಿರುವರಲ್ಲವೆ? ಇಸ್ಲಾಮಿ ಧರ್ಮವನ್ನು ಎಲ್ಲಕಡೆಗೆ ಹಬ್ಬಿಸುವದಕ್ಕಾಗಿ ಶಸ್ತ್ರವನ್ನು ಉಪಯೋಗಿಸುವ ಪೈಗಂಬರೀಮಂತ್ರವನ್ನು ನಮ್ಮ ಕಾಜಿಗಳು ನಮಗೆ ಉಪದೇಶಿಸುವದಿಲ್ಲವೆ?

ಬದ್ರುನ್ನಿಸೆ—ಇಂಥ ಅನ್ಯಾಯದ ಮಾತನ್ನು ಪೈಗಂಬರರು ಹೇಳಿರಬಹುದೇ, ಎಂದು ನಾನು ಖುರಾಣವನ್ನು ಎರಡುಸಾರೆ ಓದಿನೋಡಿದೆನು; ಆದರೆ ಶಸ್ತ್ರದಿಂದ ಧರ್ಮವನ್ನು ಹಬ್ಬಿಸಬೇಕೆಂದು ಹೇಳಿದ್ದು ನನಗೇನು ಕಂಡುಬರಲಿಲ್ಲ. ನಿಮ್ಮ ದರ್ಬಾರದ ಕಾಜಿ-ಮುಲ್ಲಾಗಳುತಮ್ಮ ಹೊಟ್ಟೆತುಂಬಿ ಹರಿಯುವಷ್ಟು ವೇತನವನ್ನು ನಿಮ್ಮಿಂದ ಪಡೆಯುತ್ತಿರುವದರಿಂದ ನಿಮ್ಮ ಮನಸ್ಸಿಗೆ ಸಂತೋಷವಾಗುವಂತೆ, ತಾವು ದೊಡ್ಡ ಸಾರ್ವಭೌಮನ ಗುರುಗಳೆನಿಸುವ ಮಹತ್ವಾಕಾಂಕ್ಷೆಯಿಂದ ಹೀಗೆ ಹೇಳುತ್ತಿರಬಹುದು, ಆದರೆ ಅಪ್ಪಾ, ಈ ಸಂಸಾರದಕ್ಷ ಗುರುಗಳ ಉಪದೇಶದಂತೆ ಹೋಗಲಿಕ್ಕೆ ನೀವೇನು ಬುದ್ಧಿಹೀನರೆ? ಸ್ವತಃ ಅಲ್ಲಾನ ಸಮತೆಯನ್ನು ವಿಚಾರಮಾಡಲಿಕ್ಕೆ ನೀವೇನು ಅಸಮರ್ಥರೆ? ಅಲ್ಲಾನ ಇಚ್ಛೆಗೆ ವಿರುದ್ಧವಾಗಿರುವ ಆಚರಣೆಗಳು ಸೈತಾನನ ಆಚರಣೆಗಳೆಂಬದನ್ನು ತಾವು ಅರಿಯರಾ? ಈ ತಾರಕಾ ಪುಂಜಗಳು ತಮತಮಗೆ ಪರಮೇಶ್ವರನು ನಿಯಮಿಸಿಕೊಟ್ಟಿದ್ದಕ್ಷೇತ್ರದಲ್ಲಿಪ್ರಕಾಶಿಸುತ್ತ, ಜಗತ್ತಿನ ಶಾಂತಿಗೆ ಭಂಗವನ್ನುಂಟುಮಾಡದಿರುವಂತೆ, ಮನುಷ್ಯರಾದರೂ ತಮ್ಮ ತಮ್ಮ ಕ್ಷೇತ್ರದಲ್ಲಿದ್ದು, ಬೇಕಾದರೆ ಖುದಾನ ವೈಭವವನ್ನು ತಿಳಿದುಕೊಳ್ಳುವದಕ್ಕಾಗಿ ಯತ್ನಿಸಿ ಆನಂದಪಡುತ್ತ ಜಗತ್ತಿನ ಶಾಂತಿಯನ್ನುಯಾಕೆ ಕಾದುಕೊಳ್ಳಬಾರದು? ಸಮರ್ಕಂದದ ಮೊಗಲರು ಹಿಂದುಸ್ಥಾನದ ಧನವನ್ನು ಕರದ ರೂಪದಿಂದಾಗಲಿ, ದಂಡದ ರೂಪದಿಂದಾಗಲಿ, ಸಾಲದ ರೂಪದಿಂದಾಗಲಿ ಯಾಕೆ ಸುಲಿಯಬೇಕು? ಪ್ರಾಣಕ್ಕಿಂತಲೂ ಪ್ರಿಯವಾಗಿರುವ ಹಿಂದುಗಳ ಸ್ವಾತಂತ್ರ್ಯವನ್ನು ಕಸಿದುಕೊಂಡು ಅವರನ್ನು ಗುಲಾಮರಾಗ ಮಾಡುವ ಬಾಧ್ಯತೆಯು ಈ ಭಿನ್ನ ದೇಶದ ಮೊಗಲರಿಗೆ ಹೇಗೆ ಉಂಟಾಗುವದು?

ಔರಂಗಜೇಬ (ಕುಂಠಿತನಾಗಿ) — ಬದ್ರುನ್ನಿಸೇ, ಒಬ್ಬಾನೊಬ್ಬ ಬಂಡಖೋರ ಹಿಂದುವಿನಂತೆ ನೀನು ಇಂದು ಮಾತಾಡುತ್ತಿರುವೆ! ಮೊನ್ನಿನ ದರ್ಬಾರದಲ್ಲಿ ಮಹೋಬತ ಚಂಪತರಾಯನೂ, ಆತನ ಮಗ ಛತ್ರಸಾಲನೂ ಎಲ್ಲರ ಸಮಕ್ಷ ನನ್ನ ಮುಂದೆ ಹೀಗೆಯೇ ಚಮತ್ಕಾರದ ಹರಟೆಗಳನ್ನು ಕೊಚ್ಚಿದರು. ಅವರ ಆ ರಾಜದ್ರೋಹಕ್ಕಾಗಿ ಅದೇ ಕೈಯಲ್ಲಿ ಶಿಕ್ಷೆಯನ್ನು ವಿಧಿಸುತ್ತಿದ್ದೆನು; ಆದರೆ—

ಈ ಮೇರೆಗೆ ನುಡಿಯುತ್ತಿರಲು, ಪಟ್ಟರಾಣಿಯಾದ ಆಯೇಷೆಯು ಅಲ್ಲಿಗೆ ಬಂದು—"ಹಾಗೆ ಶಿಕ್ಷೆಯನ್ನು ವಿಧಿಸಿದ್ದರೆ, ದಿಲ್ಲೀಪತಿಯ ಕೀರ್ತಿಧ್ವಜವು ಜಗತ್ತಿನಲ್ಲಿ ಮೆರೆಯುತ್ತಿತ್ತು! ಶಹಾನಶಹಾ! ಅಂದು ಛತ್ರಸಾಲನು ತಮಗೆ ಪ್ರಾಣದಾನಮಾಡಿದ ಅಗಾಧಕಾರ್ಯವನ್ನು ತಾವು ನ್ಯಾಯತಃ ಮನಸ್ಸಿನಲ್ಲಿ ತಂದಿದ್ದರೆ, ಬರಿಯ ಬುಂದೇಲಖಂಡದ ಸ್ವಾತಂತ್ರ್ಯವನ್ನೇಏಕೆ? ತಮ್ಮ ಸಾಮ್ರಾಜ್ಯದ ಸ್ವಾತಂತ್ರ್ಯವನ್ನು ಕೊಡಲಿಕ್ಕೂ ತಾವು ಹಿಂದೆಮುಂದೆ ನೋಡುತ್ತಿದ್ದಿಲ್ಲ! ಖಾನಿಂದ, ತಮ್ಮ ಜೀವಕ್ಕೆ ಏನೂ ಬೆಲೆಯಿಲ್ಲವೆ? ನಿಮ್ಮ ದಾಸಿಯಾದ ಈ ಆಯೇಷೆಯು ತನ್ನ ಜೀವನವನ್ನು ಯಾವತ್ತು ಜಗತ್ತಿಗಿಂತ ಪ್ರಿಯವಾದದ್ದೆಂದು ನೋಡುತ್ತಿದ್ದು, ಅಂತಹ ಆ ತನ್ನ ಬೆಲೆಯುಳ್ಳ ಜೀವನನ್ನು ಆಕೆಯು ನಿಮ್ಮ ಜೀವದ ಮೇಲೆ ನಿವಾಳಿಸಿ ಚಲ್ಲಲು ಸಿದ್ಧಳಿರುವಳು! ಶಹಾನಶಹಾ! ಛತ್ರಸಾಲನೇ ನಿಮ್ಮ ಪ್ರಾಣವನ್ನು ಉಳಿಸದಿದ್ದರೆ, ನೀವು ಆತನಿಗೆ ರಾಜದ್ರೋಹಿಯೆಂದು ಶಿಕ್ಷೆಯನ್ನು ವಿಧಿಸಲಿಕ್ಕೆ ಮಯೂರಾಸನದ ಮೇಲೆ ಎಲ್ಲಿ ಕುಳಿತಿರುತ್ತಿದ್ದಿರಿ? ಅಂತಹ ನೀಗದ ದುಃಖದ ಪ್ರಸಂಗವು ಒದಗಿದ್ದರೆ, ಖುದಾವಂತ! ತಮ್ಮ ಮುಂದೆ ಈ ತಾಯಿ ಮಕ್ಕಳು ಇಂದು ಹೀಗೆ ಮಾತಾಡಲಿಕ್ಕೆ ಇಲ್ಲಿ ಹೇಗೆ ಕುಳಿತುಕೊಳ್ಳುತ್ತಿದ್ದೆವು?

ಹೀಗೆ ನುಡಿಯುವಾಗ ಆಯೇಷೆಯ ಕಣ್ಣುಗಳು ನೀರಿನಿಂದ ತುಂಬಿದವು! ಆಗ ಒಪ್ಪುನ್ನಿಸೆಯು ಅಳುವನ್ನೋರೆಯಿಂದ—"ಅಪ್ಪಾ, ಖುದಾನು ಛತ್ರಸಾಲನೆ ಮುಖಾಂತರವಾಗಿ ನಿಮ್ಮ ಅಮೂಲ್ಯ ಪ್ರಾಣವನ್ನು ಉಳಿಸದಿದ್ದರೆ, ಇಷ್ಟೊತ್ತಿಗೆ ನಮ್ಮ ಗತಿಯು ಏನು ಆಗುತ್ತಿತ್ತು? ಛತ್ರಸಾಲನ ಉಪಕಾರವು ನಿಮ್ಮೊಬ್ಬರಮೇಲಲ್ಲ, ನನ್ನಮೇಲೆಯೂ, ಅಮ್ಮನಮೇಲೆಯೂ, ಶಹಾಜಾದಾ ಮುಅಜ್ಜಿಮನ ಮೇಲೆಯೂ, ಇಡಿಯ ಮೊಗಲ ರಾಜ

ನಿಷ್ಠ ಪ್ರಜೆಗಳ ಮೇಲೆಯೂ ಅನಂತವಾಗಿ ಆಗಿರುವದು! ಇಂತಹ ಖುದಾನ ಪ್ರತಿನಿಧಿ ಭತ್ರಸಾಲನಿಗೆ ನೀವು ಬುಂದೇಲದ ಸ್ವಾತಂತ್ರ್ಯವನ್ನು ಕೊಡುವ ದಿಲ್ಲವೆಂದು ಹೇಳುವದು ನಿಮಗೆ ಯೋಗ್ಯವೆ? ನಮಗೆ ಸಹ್ಯವೆ? ನಿಮ್ಮ ರಾಜನಿಷ್ಠ ಪ್ರಜೆಗಳಿಗೆ ಮಾನ್ಯವೆ?

ತಾಯಿ ಮಕ್ಕಳ ಈ ಹೃದಯದ್ರಾವಕ ಭಾಷಣದಿಂದ ಔರಂಗಜೇಬನ ಕಲ್ಲೆದೆಯು ಕರಗಿತು! ತಾನು ಹಾಗೆ ಚಂಪತರಾಯ-ಭತ್ರಸಾಲರನ್ನು ನಿರಾಕರಿಸಿದ್ದು ಯೋಗ್ಯವಾಗಲಿಲ್ಲವೆಂದು ಆತನು ಪಶ್ಚಾತ್ತಾಪಪಡತೊಡಗಿದನು: ಆದರೂ ಆ ತಂತ್ರಗಾರನಾದ ಬಾದಶಹನು ತನ್ನ ಆ ಪಶ್ಚಾತ್ತಾಪದ ಸ್ಥಿತಿಯನ್ನು ಒಮ್ಮೆಲೆ ತೋರಗೊಡದೆ, ಆಯೇಷೆಯನ್ನು ಕುರಿತು—

ಔರಂಗಜೇಬ—ಪ್ರಿಯೇ, ನಿನ್ನ ಮಾತು ಯೋಗ್ಯವಾದದ್ದು; ಆದರೆ ನಿಮ್ಮ ಸಹವಾಸದಲ್ಲಿರುವ ಪ್ರೇಮುಲ ಔರಂಗಜೇಬನು ಬೇರೆ, ಮಯೂರಾಸನವೇರಿ ರಾಜಕಾರಣ ನಡಿಸುವ ಕ್ರೂರ ಔರಂಗಜೇಬನು ಬೇರೆ. ನೀವು, ಆ ಕ್ರೂರ ಔರಂಗಜೇಬನನ್ನು ನೆನಿಸಿ ಅಸಮಾಧಾನಪಡದೆ, ನಿಮ್ಮ ಬಳಿಯಲ್ಲಿ ಕುಳಿತಿರುವ ಪ್ರೇಮುಲ ಔರಂಗಜೇಬನನ್ನು ನೋಡಿ ಸಮಾಧಾನಪಡಿರಿ. ರಾಜಕಾರಣವೇ ಬಹು ತೊಡಕಿನ ಸ್ವಭಾವದ್ದಿರುವದು!

ಆಯೇಷೆ (ಅತ್ಯಂತ ಕೋಮಲ ಸ್ವರದಿಂದ)— ಖಾವಿಂದ, ನಾವು ತಮ್ಮ ರಾಜಕಾರಣದಲ್ಲಿ ಲೇಶಮಾತ್ರವೂ ಕೈಹಾಕಲಾರೆವು. ದರ್ಬಾರದೊಳಗಿನ ತಮ್ಮ ನಡತೆಗೆ ನಾವು ದೋಷನಿಡುವ ಕಾರಣವೂ ಇಲ್ಲ; ಆದರೆ ಭತ್ರಸಾಲ-ಚಂಪತರಾಯರಿಗೆ ಕೊಟ್ಟ ವಚನದ ಭಂಗವು.....

ಔರಂಗಜೇಬ (ವಿಕಟ ಹಾಸ್ಯದಿಂದ) — ಆಯೇಷೇ! ಎಂತಹ ಹುಚ್ಚಿಯೇ ನೀನು? ಕುಟಿಲ ರಾಜನೀತಿಯಲ್ಲಿ ವಚನಕ್ಕೆ ಮಹತ್ವವೆ? ರಾಜಕಾರಣದಲ್ಲಿ ನಾವು ಮೇಲೆಮೇಲೆ ವಚನಭಂಗ ಮಾಡಬೇಕಾಗುವದು. ನಿಮ್ಮ ರಜಪೂತರ ಹಾಗೆ ವಚನದ ಮಬ್ಬಿಗೆ ಬಿದ್ದು ನನ್ನ ಸರ್ವಸ್ವವ ನಾಶಮಾಡಿಕೊಳ್ಳೆಂದು ಹೇಳುತ್ತೀಯೋ ಏನು? ಸಾಮ್ರಾಜ್ಯಕ್ಕೆ ನಾಶಕಾಲವು ಒದಗಿದಾಗ ಬೇಕಾದಷ್ಟು ವಚನ ಕೊಡಬೇಕು, ಮುಂದೆ ಸಾಮ್ರಾಜ್ಯವು ಸುರಕ್ಷಿತವಾಯಿತೆಂದರೆ, ಕೊಟ್ಟ ಹಾಗೆ ಆ ವಚನಗಳನ್ನು ಮುರಿದುಬಿಡಬೇಕು! ಈ ವಚನಭಂಗದ ದೊಡ್ಡ ಬಲದಿಂದಲೇ ಛತ್ರಿಯ ಔರಂಗಜೇಬನಿದ್ದವನು ನಾನು

ಶಹಾನಶಹಾ ಅಲಮಗೀರ ಔರಂಗಜೇಬನಾದೆನು ! ಹೀಗಾಗುವಾಗ ನಾನು ಮುರಾದನಿಗೆ ವಚನಕೊಟ್ಟು ಮುರಿದೆನು ; ಸುಜಾನಿಗೆ ವಚನಕೊಟ್ಟು ಮುರಿದೆನು; ಸ್ವತಃ ನನ್ನ ತಂದೆಗೆ ವಚನಕೊಟ್ಟು ಮುರಿದೆನು; ಪ್ರಿಯೇ,ಆಯೇಷೇ, ಬಹಳ ಹೇಳುವದೇನು? ಪ್ರತ್ಯಕ್ಷ ಅಲ್ಲಾನಿಗೂ ವಚನ ಕೊಟ್ಟೆನು, ಕಾರ್ಯವಾದಮೇಲೆ ಆ ವಚನವನ್ನು ಮುರಿದೂ ಬಿಟ್ಟೆನು ! ವಚನದ ಮಬ್ಬಿಗೆ ಬಿದ್ದು ಬುಂದೇಲ ಖಂಡಕ್ಕೆ ಸ್ವಾತಂತ್ರ್ಯವನ್ನು ಕೊಟ್ಟರೆ, ಆ ಕಾಟಕ ಸ್ವಭಾವದ ಶೂರ ರಜಪೂತರು ಇಷ್ಟು ಸನಿಯದಲ್ಲಿರುವ ನಮಗೆ ಸುಖದಿಂದ ನಿದ್ದೆ ಮಾಡಗೊಡಬಹುದೇ ? ಪ್ರಸಂಗ ಬಂದರೆ, ನಮ್ಮನ್ನು ದಿಲ್ಲಿಯಿಂದ ಓಡಿಸಲಿಕ್ಕೂ ಅವರು ಹಿಂದೆ ಮುಂದೆ ನೋಡಲಿಕ್ಕಿಲ್ಲ !

ಬದ್ರುನ್ನಿಸೆ (ಖಿನ್ನಳಾಗಿ)—ಅಪ್ಪಾ,ಹೀಗನ್ನಬೇಡಿರಿ. ಬುಂದೇಲದ ಜನರು ನೀವು ಕೊಟ್ಟ ಸ್ವಾತಂತ್ರ್ಯದಿಂದ ಸಂತುಷ್ಟರಾಗಿರುವರು. ಅವರು ಕೃತಘ್ನರಾಗಿ ದಿಲ್ಲಿಯ ಕಡೆಗೆ ಹಣಿಕಿಯೂ ನೋಡಲಾರರು !

ಔರಂಗಜೇಬ (ಆಶ್ಚರ್ಯದಿಂದ ಬದ್ರುನ್ನಿಸೆಯ ಕಡೆಗೆ ನೋಡುತ್ತ)-ಎಲ ! ಇದೇನು ? ಬದ್ರುನ್ನಿಸೇ, ನೀನೂ ಬುಂದೇಲಖಂಡದ ಪಕ್ಷಗಟ್ಟಿ ಮಾತಾಡಹತ್ತಿದೆಯಲ್ಲ ! ನಿನ್ನ ತಾಯಿಯು ಬುಂದೇಲಖಂಡದೊಳಗಿನವಳಿರುವದರಿಂದ, ಆಕೆಯು ಬುಂದೇಲಖಂಡದ ಪಕ್ಷ ವಹಿಸುವದು ಸಯುಕ್ತಿಕವಾದದ್ದು ; ಆದರೆ ನಿನ್ನ ಒಲವು ಬುಂದೇಲಖಂಡದ ಕಡೆಗೇಕೆ ?

ಆಯೇಷೆ—ಶಹಾನಶಹಾ ! ನಾನು ಬುಂದೇಲಖಂಡದಿಂದ ತಮ್ಮ ಬೆನ್ನುಹತ್ತಿ ಬಂದವಳು; ಆದರೆ ಬದ್ರುನ್ನಿಸೆಯು ಇನ್ನುಮೇಲೆ ಬುಂದೇಲಖಂಡದಲ್ಲಿಯೇ ತನ್ನ ಆಯುಷ್ಯವನ್ನು ಕಳೆಯುವದಕ್ಕೆ ಹೋಗುವವಳು !

ಔರಂಗಜೇಬ (ಆಶ್ಚರ್ಯದಿಂದ)—ಏನಂದಿ? ಬದ್ರುನ್ನಿಸೆಯು ಇನ್ನುಮೇಲೆ ಬುಂದೇಲಖಂಡದಲ್ಲಿ ತನ್ನ ಆಯುಷ್ಯವನ್ನು ಕಳೆಯಲಿಕ್ಕೆ ಹೋಗುವವಳೆ? ಅದು ಹೇಗೆ ?

ತಂದೆ ಮಾಡಿದ ಈ ಪ್ರಶ್ನೆಗೆ ಅವ್ವನು ಕೊಡುವ ಉತ್ತರವನ್ನು ಕೇಳಲಿಕ್ಕೆ ಅಲ್ಲಿ ಕುಳಿತುಕೊಳ್ಳಲಾರದೆ ಬದ್ರುನ್ನಿಸೆಯು ನಾಚಿ, ಏನೋ ಕೆಲಸವಿದ್ದವಳಂತೆ ತಟ್ಟನೆ ಅಲ್ಲಿಂದ ಎದ್ದುಹೋಗಿ ಕಿಡಿಕೆಯ ಬಳಿಯಲ್ಲಿ ನಿಂತು

ಹೊರಗೆ ನೋಡುವವಳಂತೆ ತೋರಿಸಹತ್ತಿದಳು. ಅಷ್ಟರಲ್ಲಿ ಆಯೇಷೆಯು ಬಾದಶಹನನ್ನು ಕುರಿತು—

ಆಯೇಷೆ—ಖಾವಿಂದ, ಮೊನ್ನಿನ ವೀನಾ ಬಝಾರದಲ್ಲಿ ಬದ್ರುನ್ನಿಸೆಯು ಸಾಗರದ ಅರಸನಾದ ಸಭಾಕರಣನ ಮಗ ದಲಪತರಾಯನಿಗೆ ತನ್ನ ಪ್ರೇಮವನ್ನು ಒಪ್ಪಿಸಿರುವಳು ; ಆದರೆ ದಳಪತರಾಯನು ಬುಂದೇಲಖಂಡಕ್ಕೆ ಸ್ವಾತಂತ್ರ್ಯಸ್ಥಾಪ್ತಿಯಾಗುವವರೆಗೆ ತಾನು ಬದ್ರುನ್ನಿಸೆಯ ಪಾಣಿಗ್ರಹಣ ಮಾಡುವದಿಲ್ಲವೆಂದು ಹೇಳಿದ್ದರಿಂದ, ಬುಂದೇಲಖಂಡದ ಸ್ವಾತಂತ್ರ್ಯದ ಹಾದಿಯನ್ನು ಬದ್ರುನ್ನಿಸೆಯು ನೋಡಬೇಕಾಗಿರುವದು!

ಆಯೇಷೆಯ ಈ ಮಾತುಗಳನ್ನು ಕೇಳಿ ಬಾದಶಹನುಸಂತಪ್ತನಾದನು; ಆತನ ಆಗಿನ ಮುಖಮುದ್ರೆಯನ್ನು ನೋಡಿ ಬದ್ರುನ್ನಿಸೆಯ ಎದೆಯು ದಸಕ್ಕೆಂದಿತು! ತನ್ನ ಉದ್ದೇಶವು ಸಫಲವಾಗುವದಿಲ್ಲವೆಂದು ಆಕೆಯು ನಿರಾಶೆ ಪಟ್ಟಳು. ಆಗ ಔರಂಗಜೇಬನು—

ಔರಂಗಜೇಬ—ಏನು? ನನ್ನ ಮಗಳು ನನ್ನ ಒಬ್ಬ ಶತ್ರುವನ್ನು ಮದುವೆಯಾಗುವಳೋ? ನನ್ನ ಸಾಮ್ರಾಜ್ಯದೊಳಗಿನ ಯಾವದೊಂದು ದೇಶದ ಸ್ವಾತಂತ್ರ್ಯಕ್ಕಾಗಿ ಯತ್ನಿಸುವವರೆಲ್ಲ ನನ್ನ ಶತ್ರುಗಳಾಗಿರುವರು.

ಆಯೇಷೆ—ಹೀಗೆ ಅವಿಚಾರ ಮಾಡಬೇಡಿರಿ. ಪ್ರೇಮದ ಪ್ರಭಾವವು ಎಷ್ಟು ವಿಲಕ್ಷಣವಾಗಿರುವದೆಂಬದರ ಗೊತ್ತು ನಿಮಗಿರುವದು. ಹದಿನಾರು ವರ್ಷಗಳ ಹಿಂದಿನ ಕಾಲವನ್ನು ನೆನಪಿನಲ್ಲಿ ತಂದುಕೊಳ್ಳಿರಿ. ಆಗ ನೀವು ರಜಪೂತ ವೇಷದಿಂದ ಬುಂದೇಲಖಂಡದಲ್ಲಿ ಸಂಚರಿಸುತ್ತಿದ್ದದ್ದನ್ನು ನೆನಿಸಿರಿ. ನಿಮ್ಮ ಸಲುವಾಗಿ, ನಿಮ್ಮ ಪ್ರೇಮದ ಸಲುವಾಗಿ ದಿಲ್ಲಿಗೆ ಬರಲಿಕ್ಕೆ ನಾನು ಹೇಗೆ ಸಿದ್ಧಳಾದೆನೆಂಬದನ್ನೂ, ನನ್ನ ಮನಸ್ಸಿನ ಚಾಂಚಲ್ಯವು ಬೈಲಿಗೆ ಬಿದ್ದರೆ ನನ್ನ ಮನೆತನಕ್ಕೆ ಕುಂದು ಉಂಟಾದೀತೆಂದು ನಾನು ಹೇಗೆ ಎಚ್ಚರಪಟ್ಟಿನೆಂಬದನ್ನೂ, ಕಡೆಗೆ ನನ್ನ ಹಾಗು ನನ್ನ ಆಪ್ತೇಷ್ಟರ ಪರಲು ಹರಿದುಕೊಂಡು ನಿಮ್ಮೊಡನೆ ನಾನು ದಿಲ್ಲಿಗೆ ಹೇಗೆ ಗುಪ್ತರೀತಿಯಿಂದ ಬಂದೆನೆಂಬದನ್ನೂ ಸ್ಮರಿಸಿರಿ; ಅಂದರೆ ಬದ್ರುನ್ನಿಸೆಯ ಮನಸ್ಸಿನ ಪರೀಕ್ಷೆ ಮಾಡಲಿಕ್ಕೆ ನಿಮಗೆ ಬಂದೀತು. ಕುಮಾರ ದಲಪತರಾಯನು ಸ್ವಾತಂತ್ರ್ಯದ

ಸಲುವಾಗಿ ಯತ್ನಿಸುವನೆಂಬ ಕಾರಣದಿಂದ ನಿಮ್ಮ ಶತ್ರುವಾಗಿದ್ದರೆ, ಆತ ನನ್ನ ಮಿತ್ರನಾಗಿ ಮಾಡಿಕೊಳ್ಳುವದು ನಿಮಗೆ ಅಸಾಧ್ಯವಿಲ್ಲ.

ಔರಂಗಜೇಬ—ಏನು ? ದಳಪತರಾಯನು ಇಸ್ಲಾಮಿ ಧರ್ಮವನ್ನು ಸ್ವೀಕರಿಸುವನೋ? ಹಾಗೆಮಾಡಿದರೆ, ಆತನಿಗೆ ಬದ್ರುನ್ನಿಸೆಯನ್ನು ಕೊಡುವದು ನನಗೆ ಸಂಕಟಕರವಾಗದು. ಆತನು ಒಮ್ಮೆ ಯವನನಾಗಿ ನನ್ನ ಆಳಿಯನಾದರೆ, ಬುಂದೇಲಖಂಡದರಾಜ್ಯ ಒಂದೇ ಏಕೆ? ಅಂಥ ಹಲವು ರಾಜ್ಯಗಳು ಆತನ ಕಾಲದೆಸೆಗೆ ಉರುಳಾಡುವಂತೆ ಆತನ ಯೋಗ್ಯತೆಯನ್ನು ನಾನು ಹೆಚ್ಚಿಸೇನು !

ಆಯೇಷೆ (ತೀಕ್ಷ್ಣ ದೃಷ್ಟಿಯಿಂದ ನೋಡುತ್ತ)-ಪ್ರೇಮದ ಸಾಮ್ರಾಜ್ಯದಲ್ಲಿ ಧಾರ್ಮಿಕ ಪ್ರತಿಬಂಧವನ್ನು ಎಣಿಸುವದು ಸರ್ವಥಾ ತಪ್ಪು ಎಂದು ನೀವೇ ನನಗೆ ಹೇಳಿದ್ದಿರಲ್ಲವೆ ? ಬುಂದೇಲರ ರಜಪೂತನ ಮಗಳಾದ ನನ್ನನ್ನು ನಿಮ್ಮ ಗೋಷೆಯಲ್ಲಿ ಕರಕೊಳ್ಳುವಾಗ ನಿಮಗೆ ಧರ್ಮದ ಹಂಗು ಸ್ವಲ್ಪವೂ ತೋರಲಿಲ್ಲ; ಆದರೆ ಈಗ ನಿಮ್ಮ ಮಗಳು ಬುಂದೇಲಿಯ ರಜಪೂತನನ್ನು ಪ್ರೀತಿಸತೊಡಗಿದ ಕೂಡಲೆ, ಧರ್ಮದ ನೆವವನ್ನು ತೋರಿಸುವದು ನಿಮಗಾದರೂ ಯೋಗ್ಯವಲ್ಲ !

ಆಯೇಷೆಯ ಭಾಷಣದಿಂದ ಬಾದಶಹನ ಮನಸ್ಸು ಕರಗಿತು. ತಾನು ಬುಂದೇಲಖಂಡಕ್ಕೆ ಸ್ವಾತಂತ್ರ್ಯವನ್ನು ಕೊಡದಿದ್ದರೆ, ಬದ್ರುನ್ನಿಸೆಯ ಆಯುಷ್ಯವು ದುಃಖದಾಯಕವಾಗುವದೆಂಬ ವಿಚಾರವು ಆತನ ಮನಸ್ಸಿನಲ್ಲಿ ಬಂದಿತು. ಬದ್ರುನ್ನಿಸೆಗೆ ದುಃಖಕೊಡುವದು ಆತನಿಂದಾಗಲೊಲ್ಲದು. ತನ್ನ ಮಗಳನ್ನು ಆಜನ್ಮ ದುಃಖದಲ್ಲಿ ಕೊರಗಗೊಡುವದು, ಆಕೆಯ ಮೇಲಿನ ತನ್ನ ಪ್ರೇಮಕ್ಕೆ ಲಾಂಛನವೆಂದು ಆತನು ತಿಳಿದನು. ತನ್ನ ಪ್ರೀತಿಯ ಮಗಳ ವಿಷಯವಾಗಿ ಆತನು ಅಷ್ಟು ಕಠೋರತನ ತೋರಿಸುವದು ಶಕ್ಯವೂ ಇದ್ದಿಲ್ಲ. ಆತನು ಮಗಳ ಮೋಹದಲ್ಲಿ ಸಿಕ್ಕು ಆಕೆಯನ್ನು ಕುರಿತು ಅತ್ಯಂತ ಪ್ರೇಮದಿಂದ—

ಔರಂಗಜೇಬ—ಬತ್ತೀಸೀ, ಬದ್ರುನ್ನಿಸೇ, ಅಸಮಾಧಾನ ಪಡಬೇಡ. ನಿನ್ನ ಮನಸ್ಸನ್ನು ನೋಯಿಸುವದು ನನ್ನಿಂದಾಗದು. ಸ್ವಾಗರದ ಯುವರಾಜ ದಳಪತರಾಯನು ನಿನ್ನ ಪತಿಯಾಗುವನು. ನಿನ್ನ ಸ್ವೀಕಾರಮಾಡಿ ನಿನ್ನನ್ನು

ಸಂತೋಷಪಡಿಸುವ ಸಂಧಿಯು ಅತನಿಗೆ ಒದಗುವದಕ್ಕಾಗಿ ಬುಂದೇಲ ಖಂಡಕ್ಕೆ ನಾನು ಪೂರ್ಣಸ್ವಾತಂತ್ರ್ಯವನ್ನು ಕೊಡುವೆನು!

ಬಾದಶಹನ ಈ ಅಮೃತವಾಣಿಯನ್ನು ಕೇಳಿ ಆ ತಾಯಿಮಕ್ಕಳಿಬ್ಬರೂ ಆನಂದ ಪರವಶರಾದರು. ತನ್ನ ಸಲುವಾಗಿ ತನ್ನ ತಂದೆಯು ಈಪರಿ ಸ್ವಾರ್ಥತ್ಯಾಗಮಾಡಿದ್ದನ್ನು ನೋಡಿ ಬದ್ರುನ್ನಿಸೆಯು ತಂದೆಯ ಚರಣಗಳನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಕೃತಜ್ಞತೆಯ ಭರದಲ್ಲಿ ಆಕೆಯ ಕಂಠವು ಬಿಗಿದದ್ದರಿಂದ ಆಕೆಯ ಬಾಯಿಂದ ಮಾತುಗಳು ಹೊರಡದಾದವು; ಆಕೆಯ ಆನಂದಾಶ್ರುಗಳು ತಂದೆಯ ಪಾದಪ್ರಕ್ಷಾಲನ ಮಾಡತೊಡಗಿದವು. ಆಗ ಬಾದಶಹನು ಶಹಾಜಾದೆಯನ್ನು ಎಬ್ಬಿಸುತ್ತ—"ಬದ್ರುನ್ನಿಸೇ, ಬೇಡ, ಇಷ್ಟರಲ್ಲಿ ನನ್ನ ಚರಣಗಳಿಗೆರಗಬೇಡ. ಉಪಕಾರಮಾಡುವ ದೊಡ್ಡಸ್ತಿಕೆಯು ನನ್ನ ಮನಸ್ಸಿಗೆ ಅಪರಿಚಿತವಾದದ್ದು! ಸ್ವಾತಂತ್ರ್ಯದಾನದಂಥ ಉಪಕಾರವು ಅತ್ಯಂತ ಉದಾರಬುದ್ಧಿಯ ರಾಜನಿಂದಲೂ ಆಗುವದು ಕಠಿಣವು! ಆದ್ದರಿಂದ ನನ್ನ ವಚನವು ಪೂರ್ಣವಾಗಲಿ; ಸ್ವಾತಂತ್ರ್ಯದ ಪತ್ರವು ಮುಹೋಬದ ಚಂಪತರಾಯನ ಕೈಯಲ್ಲಿ ಬೀಳಲಿ; ಆಮೇಲೆ ನೀವು ನನ್ನ ಉಪಕಾರವನ್ನು ಸ್ಮರಿಸಿರಿ! ಬುಂದೇಲಖಂಡದ ಸ್ವಾತಂತ್ರ್ಯದ ಸನದು ಈಗಿಂದೀಗಲೇ ಸಿದ್ಧವಾಗಬೇಕು. ಒಂದು ಕ್ಷಣದ ಅವಧಿಯಲ್ಲಿಯೂ ನನ್ನ ಮನಸ್ಸು ಬದಲಾಗಬಹುದು. ಬದ್ರುನ್ನಿಸೇ, ಸನದು ಬರೆಯುವದಕ್ಕಾಗಿ ನೀನು ದೌತಿ-ಲೇಕ್ಕಣಿಕೆ ಮೊದಲಾದವನ್ನು ಸಿದ್ಧಮಾಡು, ಅಷ್ಟರಲ್ಲಿ ಆಯೇಷೆಯು ನನ್ನ ಶಿಕ್ಕಾಮೊರ್ತಬುಗಳನ್ನು ತರುವಳು!

ತಾಯಿಮಕ್ಕಳಿಬ್ಬರೂ ಬಾದಶಹನ ಇಚ್ಛೆಯನ್ನು ಕ್ಷಣದಲ್ಲಿ ಪೂರ್ಣಮಾಡಿದರು. ಸ್ವಾತಂತ್ರ್ಯದಾನದ ಸನದು ಬರೆದು ಸಿದ್ಧವಾಯಿತು. ಬಾದಶಹನು ತನ್ನ ಮೊಹರುಮಾಡಲಿಕ್ಕೆ ಸಿದ್ಧನಾದನು. ಬದ್ರುನ್ನಿಸೆಯು ಆನಂದದಿಂದ ಸನದನ್ನು ನೋಡುತ್ತಲಿದ್ದಳು. ಅಷ್ಟರಲ್ಲಿ ಆ ಪವಿತ್ರಸ್ಥಳದ ಪಾವಿತ್ರ್ಯವನ್ನು ನಷ್ಟಪಡಿಸುತ್ತ, ರೋಷನಾರಾಬೇಗಮೆಯು ಅಲ್ಲಿಗೆ ಬಂದು ಬಾದಶಹನ ಮುಂದೆ ನಿಂತಳು! ಆಗ ಬಾದಶಹನು ಘಾತಕಿಯಾದ ತನ್ನ ಆ ತಂಗಿಯಕಡೆಗೆ ಸಿಟ್ಟಿನಿಂದ ನೋಡುತ್ತ—"ಇಂದು ಯಾವಸಂಕಟದಲ್ಲಿ ನನ್ನನ್ನು ಕೆಡವಬೇಕೆಂದು ನೀನು ಯೋಚಿಸಿರುತ್ತೀ? ರಾತ್ರಿಯ ಹೊತ್ತಿ

ನಲ್ಲಿ ಇಷ್ಟು ಅವಸರದಿಂದ ಬರಲಿಕ್ಕೆ ಅಂತಹ ದುರ್ಧರಪ್ರಸಂಗವೇನು ನಿನ್ನ ಮೇಲೆ ಬಂದಿತ್ತು?

ಬಾದಶಹನ ಈ ಭಾಷಣವನ್ನು ದುರ್ಲಕ್ಷಿಸಿ ರೋಷನಾರಳು ಸನದನ್ನು ನೋಡುತ್ತ—" ಶಹಾನಶಹಾ, ನೀವು ಇದಾವಸನದನ್ನು ಸಿದ್ಧಮಾಡುತ್ತಿರುವಿರಿ?" ಎಂದು ಕೇಳಿದಳು. ಆಗ ಔರಂಗಜೇಬನು ಬೇಗಮಳ ಮನಸ್ಸಿಗೆ ನಡುವಂತೆ ನಗುತ್ತ—" ಈ ಸನದನೊಳಗಿನ ಸಂಗತಿಯನ್ನು ನೀನು ನೋಡಲೇಬೇಕು. ನಿನ್ನ ಕಪಟದ ಕೃತಿಯನ್ನು ಬೇರುಸಹಿತ ಕಿತ್ತುಒಗೆದು ನನ್ನ ಮೇಲೆ ಮಹದುಪಕಾರಮಾಡಿದ ತರುಣ ಛತ್ರಸಾಲನ ಉಪಕಾರದ ಹೊರೆಯನ್ನು ಇಳಿಸುವದಕ್ಕಾಗಿ ನಾನು ಈ ಅಲ್ಪಪ್ರಯತ್ನವನ್ನು ಮಾಡುತ್ತಿರುವೆನು. ಈ ಸನದು ಬುಂದೇಲಖಂಡದ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳುತ್ತಿರುವದು.

ರೋಷನಾರ—ಏನು? ದಿಲ್ಲಿಯ ದರ್ಬಾರದ ಅಪಮಾನಮಾಡುವನಿಗೆ ಸ್ವಾತಂತ್ರ್ಯದಾನವೇ? ಈ ಸನದಿನಮೇಲೆ ಮೊಹರುಮಾಡುವ ಮೊದಲು ದಿಲ್ಲಿಯ ದರ್ಬಾರದ ಅಪಮಾನವು ಬಾದಶಹನ ಕಿವಿಗೆ ಬೀಳಲಿ! ಸರದಾರ ಸಾಹೇಬ! ಕಂಚುಕಿರಾವ! ಹೀಗೆಬನ್ನಿರಿ. ಚಂಪತರಾಯನ ಉದ್ಧತತನವನ್ನು ಬಾದಶಹರಿಗೆ ಅರಿಕೆಮಾಡಿಕೊಳ್ಳಿರಿ.

ಈ ಮೇರೆಗೆ ರೋಷನಾರಳು ನುಡಿಯಲು, ರಣದುಲ್ಲಾಖಾನನು ಮುಂದಕ್ಕೆ ಬಂದು ಬಾದಶಹನಿಗೆ ಕುರ್ನಿಸಾತಮಾಡಿ ಚಂಪತರಾಯನು ತನ್ನನ್ನು ಸೆರೆಯಲ್ಲಿ ಹಾಕಿದ ಸಂಗತಿಯನ್ನೆಲ್ಲ ಸಾದ್ಯಂತವಾಗಿ ಉಪ್ಪುಕಾರ ಹಚ್ಚಿ ಹೇಳಿದನು! ಆಗ ದುರಭಿಮಾನಿಯಾದ ಬಾದಶಹನ ಸ್ಥಿತಿಯನ್ನು ವರ್ಣಿಸುವದೇನು? ಆತನ ಆ ಸಂತಪ್ತ ಮುದ್ರೆಯನ್ನು ನೋಡಿ ಆಯೇಷೆಯೂ, ಬದ್ರುನ್ನಿಸೆಯೂ ಕೈಗೆಬಂದ ತುತ್ತು ಬಾಯಿಗೆ ಬರುವ ಸಂಭವವಿಲ್ಲವೆಂದು ನಿರಾಶೆಪಟ್ಟರು. ಅಷ್ಟರಲ್ಲಿ ಬಾದಶಹನು ತನ್ನ ಕೈಯೊಳಗಿನ ಸನದನ್ನು ತಿರಸ್ಕಾರದಿಂದ ನೋಡುತ್ತ—" ಈ ಸನದನ್ನು ಈಗಲೆ ಸುಟ್ಟು ಬೂದಿಮಾಡತಕ್ಕದ್ದು; ಮತ್ತು ದಿಲ್ಲಿಯ ದರ್ಬಾರದ ಅಪಮಾನಮಾಡುವ ಮಹೋಬದ ಮನೆತನದ ನಾಶವು ಬೇಗನೆ ಹೇಗಾದೀತೆಂಬದನ್ನು ಕುರಿತು ಆಲೋಚಿಸಿ ನಿಶ್ಚಯಿಸತಕ್ಕದ್ದು! ರೋಷನಾರ, ಕ್ಷಣವೂ ವಿಲಂಬಮಾಡದೆ

ದಿವಾಣ-ಇ-ಆಮದಲ್ಲಿ ದರ್ಬಾರು ನೆರೆಯುವದು; ಅಲ್ಲಿಗೆ ರಣದುಲ್ಲಾಖಾನನನ್ನೂ, ಕಂಚುಕಿರಾಯನನ್ನೂ ಕರೆದುಕೊಂಡು ಬಾ'' ಎಂದುಹೇಳಿ ಮಗಳನ್ನು ಕುರಿತು—''ಬದ್ರುನ್ನಿಸೇ, ಬುಂದೇಲಖಂಡದ ಸ್ವಾತಂತ್ರ್ಯದ ಸನದಿನ ಈ ಅವಸ್ಥೆಯನ್ನು ನೋಡು. ದಿಲ್ಲಿಯ ದರ್ಬಾರದ ಅಪಮಾನದ ಮುಂದೆ ಅಪತ್ಯಪ್ರೇಮದ ಆಟವು ನಡೆಯಲಾರದು,'' ಎಂದು ನುಡಿದು ಬಾದಶಹನು ಸನದನ್ನು ಚೂರು ಚೂರುಮಾಡಿ ಹರಿದು ಚಲ್ಲಿ ಅದನ್ನು ತುಳಿಯುತ್ತ—''ಆಯೇಷೇ, ನಿನ್ನ ಬಾಂಧವರಿಗೆ ಸ್ವಾತಂತ್ರ್ಯ ಪ್ರಾಪ್ತಿಯಾಗಲಾರದು, ಬದ್ರುನ್ನಿಸೇ ನಿನ್ನ ಪ್ರಿಯಕರನಿಗೆ ಸ್ವಾತಂತ್ರ್ಯದಾನವು ದೊರೆಯಲಾರದು'' ಎಂದು ನುಡಿಯುತ್ತ ದಿವಾಣ-ಇ-ಆಮದ ಕಡೆಗೆ ನಡೆದನು! ದರ್ಬಾರದ ಕೆಲಸವು ಪೂರ್ಣವಾಗಿ, ಚಂಪತರಾಯನ ನಾಶದ ಉಪಾಯವು ನಿಶ್ಚಿತವಾಯಿತು! ಸ್ವಲ್ಪಹೊತ್ತಿನಲ್ಲಿ ಕಂಚುಕಿರಾಯನು ಒಂದು ಫರ್ಮಾನನನ್ನು ತಕ್ಕೊಂಡು ತನ್ನ ಮನಸ್ಸಿನಂತೆ ಆಯಿತೆಂದು ಕುಣಿಯುತ್ತ, ಓರಛಾದ ಹಾದಿಯನ್ನು ಹಿಡಿದನು. ಬೆಳಗಾಗಲು, ಬದ್ರುನ್ನಿಸೆಯು ತನ್ನ ಮಹಾಲಿನಿಂದ ಎಲ್ಲಿಯೋ ಹೊರಟು ಹೋದಳೆಂಬ ಸುದ್ದಿಯು ಎಲ್ಲಕಡೆಗೂ ಹಬ್ಬಿತು! ಸ್ವಾತಂತ್ರ್ಯವು ದಾನದ ವಸ್ತುವೇ ಅಲ್ಲ!

೧೩ನೆಯ ಪ್ರಕರಣ- ಅಚ್ಚ ಕ್ಷಾತ್ರಧರ್ಮ!

ಪಹಾರಸಿಂಗನು ಸಾಯುವಾಗ ಆಡಿದಮಾತುಗಳು ಎಚ್ಚರಿಲ್ಲದವೆಂದು ಹೇಳಿ,ಹೀರಾದೇವಿಯು ಆತನ ಉತ್ತರಕ್ರಿಯೆಗಳನ್ನು ಯುವರಾಜ ವಿಮಲದೇವನ ಕೈಯಿಂದ ಮಾಡಿಸಿದಳು. ಪಹಾರಸಿಂಗನ ಪ್ರೇತಕ್ಕೆ ಅಗ್ನಿಸಂಸ್ಕಾರವಾದ ಕೂಡಲೆ ಚಂಪತರಾಯನು, ಯುವರಾಜ ಛತ್ರಸಾಲನನ್ನೂ, ಯುವರಾಜ ದಲಪತರಾಯನನ್ನೂ, ತನ್ನ ಉಳಿದಪರಿವಾರವನ್ನೂ ಕೂಡಿಕೊಂಡುಮಹೋಬದ ಹಾದಿಯನ್ನು ಹಿಡಿದನು. ವಿಮಲದೇವನ ಪಟ್ಟಾಭಿಷೇಕಕ್ಕೆ ಬರುವೆನೆಂದು ಹೇಳಿ, ಎಲ್ಲ ಅರಸರೂ ತಮ್ಮ ತಮ್ಮ ರಾಜಧಾನಿಗಳಿಗೆ ಹೋದರು. ಮೇಜವಾನಿಯ ದಿನಸ ಇಲ್ಲದ ಹಾಗಾಗಿದ್ದ ಸಭಾಕರಣನು ಪುನಃ ಹೀರಾದೇವಿಯ ಕಣ್ಣಿಗೆ ಬೀಳಲಿಲ್ಲ. ಆತನು ತನ್ನ ಸಾಗರದ ಕೋಟೆಯ

ಲ್ಲಿದ್ದು, ದಿಲ್ಲಿಗೆ ಹೋದ ಕಂಚುಕಿರಾಯನು ಏನು ಮಾಡಿಕೊಂಡು ಬರುವನೆಂಬದರ ಹಾದಿಯನ್ನು ನೋಡುತ್ತಲಿದ್ದನು. ಪಹಾರಸಿಂಗನು ವಿಷಪ್ರಯೋಗದಿಂದ ಸತ್ತನೆಂಬ ಸುದ್ದಿಯು ಆತನಿಗೆ ಹತ್ತಿತು. ಈ ಆಪತ್ತಿಯ ಮೂಲಕವಾಗಿಯಾದರೂ ಹೀರಾದೇವಿಯು ಪಶ್ಚಾತ್ತಾಪಪಟ್ಟು, ತನ್ನ ನೀಚ ವರ್ತನದಿಂದ ಹಿಂದಿರುಗಬಹುದೆಂದು ಆತನು ಮಾಡಿದ್ದನು; ಆದರೆ ಅಂಥ ಆಪತ್ಕಾಲದಲ್ಲಿಯೂ ಆಕೆಯು ಯುದ್ಧಕ್ಕಾಗಿ ಸೈನ್ಯವನ್ನು ಒಳ್ಳೇ ಆಸಕ್ತಿಯಿಂದ ಕೂಡಿಸುತ್ತಿರುವಳೆಂಬ ಸುದ್ದಿಯು ಆತನಿಗೆ ಹತ್ತಿತು! ಇದರ ತರುವಾಯ ಸ್ವಲ್ಪ ದಿವಸಗಳಲ್ಲಿಯೇ ಹೀರಾದೇವಿಯು ಸಭಾಕರಣನಿಗೆ- "ನೀವು ಒಳಸಂಚಿನಲ್ಲಿ ಸೇರಿದ ಯಾವತ್ತು ರಾಜರ ಪ್ರಚಂಡ ಸೇನೆಯ ಆಧಿಪತ್ಯವನ್ನು ಸ್ವೀಕರಿಸಿ, ಚಂಪತರಾಯನೊಡನೆ ಯುದ್ಧಕ್ಕೆ ಹೋಗಬೇಕೆಂ"ದು ಆಜ್ಞಾಪತ್ರವನ್ನು ತನ್ನ ಸಹಿ - ಮುದ್ರೆಗಳೊಡನೆ ಕಳುಹಿದಳು. ಪಾಪ! ಸಭಾಕರಣನು ಪ್ರತಿಜ್ಞೆಯ ಪಿಶಾಚವು ಬಡಿದವನಾದ ಕಾರಣ ಒಂದು ಕ್ಷಣವೂ ವಿಲಂಬಮಾಡದೆ ಓರಛಾಕ್ಕೆ ಹೊರಟುಹೋದನು.

ಓರಛಾವ ರಾಜಪ್ರಾಸಾದಕ್ಕೆ ಹೋದ ಕೂಡಲೆ ಆತನಿಗೆ ಮೊದಲು ಕಂಚುಕಿರಾಯನ ಭೆಟ್ಟಿಯಾಯಿತು. ಆ ವೃದ್ಧ ರಾಜನು ತಾನು ದಿಲ್ಲಿಯಿಂದ ಮಾಡಿಕೊಂಡು ಬಂದಿರುವ ಮಹಾಕಾರ್ಯದ ವರ್ಣನವನ್ನು ಒಳ್ಳೇ ಅಭಿಮಾನದಿಂದ ಸಭಾಕರಣನ ಮುಂದೆ ಮಾಡಿದನು. ದಿಲ್ಲೀಪತಿಯು ಚಂಪತರಾಯನ ಮೇಲೆ ಎಷ್ಟು ಸಿಟ್ಟಾಗಿರುವನೆಂಬದನ್ನು ವಿವರಿಸಿ ಹೇಳಿ- "ಸಭಾಕರಣಜೀ, ರೋಷನಾರಾ ಬೇಗಮೆಯ ಚಾತುರ್ಯವನ್ನೂ, ಕರ್ತವ್ಯ ದಕ್ಷತೆಯನ್ನೂ ಎಷ್ಟು ವರ್ಣಿಸಿದರೂ ತೀರದು! ಆಕೆಯು ನಮ್ಮ ಹೀರಾದೇವಿಯ ಎರಡನೆಯ ಮೂರ್ತಿಯೇ ಆಗಿರುವಳು! ರಣದುಲ್ಲಾಖಾನನು ದಿಲ್ಲಿಗೆಬಂದು ರೋಷನಾರಳನ್ನು ಕಂಡಬಳಿಕ ಒಂದುಕ್ಷಣದ ವಿಲಂಬವಾಗಿದ್ದರೆ, ಯಾವತ್ತು ಬುಂದೇಲಖಂಡದ ಮೇಲೆ ಎಂತಹ ವಿಪತ್ತು ಬರುತ್ತಿತ್ತೆಂಬದನ್ನು ನಾನೇನು ಹೇಳಲಿ? ಬುಂದೇಲಖಂಡದ ಸ್ವಾತಂತ್ರ್ಯದ ಸನದು, ಲೇಖನದ ಸೀಮೆಯು ಮುಗಿದುಹೋಗಿ ಸಿದ್ಧವಾಗಿತ್ತು. ದಿಲ್ಲೀ ಪತಿಯ ಮೊಹರು ಇನ್ನು ಆ ಸನದಿನಮೇಲೆ ಆಗತಕ್ಕದ್ದು, ಅಷ್ಟರಲ್ಲಿ ರೋಷನಾರಳು ರಾತ್ರಿಯೆಂದು ನೋಡದೆ, ರಣದುಲ್ಲಾಖಾನನನ್ನೂ, ನನ್ನನ್ನೂ ಬಾದಶಹನ ಬಳಿಗೆ ಕರೆದು

ಕೊಂಡುಹೋದದ್ದರಿಂದ, ಬುಂದೇಲಖಂಡವು ಸ್ವತಂತ್ರವಾಗುವ ದೊಡ್ಡ ವಿಪತ್ತಿನ ಪರಾಭವವಾಯಿತು. ಹಾಗಾಗದಿದ್ದರೆ ಚಂಪತರಾಯನ ಕೀರ್ತಿಯು ನಾಲ್ಕೂ ಕಡೆಗೆ ಹಬ್ಬಿ ನಮ್ಮ ಒಳಸಂಚು ವ್ಯರ್ಥವಾಗುತ್ತಿತ್ತಲ್ಲದೆ, ನಮಗೆ ಪ್ರಾಪ್ತವಾಗಿರುವ ದಿಲ್ಲೀಪತಿಯ ಅಬಾಧಿತಸೇವೆಯ ಸುಯೋಗವು ತಪ್ಪಿಹೋಗುತ್ತಿತ್ತು! ಆದರೆ ರಣದುಲ್ಲಾಖಾನನು ತನ್ನ ಬಂದಿವಾಸದ ಪ್ರಸಂಗವನ್ನು ಸವಿಸ್ತಾರವಾಗಿ ಹೇಳಿದ್ದರಿಂದ, ಪೂರಾ ಬರೆದುಹೋಗಿದ್ದ ಸನದು ಚೂರುಚೂರು ಆಯಿತು. ನಮ್ಮ ಒಳಸಂಚಿಗೆ ಸಾಮ್ರಾಜ್ಯನಿಷ್ಠೆಯೆಂದು ಹೇಳುವ ಈ ಮಹತ್ವದ ಸನದನ್ನು ಬಾದಶಹರು ನಿಮ್ಮ ಕೈಯಲ್ಲಿ ಕೊಡಬೇಕೆಂದು ಹೇಳಿರುತ್ತಾರೆ,'' ಎಂದುನುಡಿದು, ದಿಲ್ಲಿಯಿಂದತಾನು ತಂದಿದ್ದ ಫರ್ಮಾನವನ್ನು ಸಭಾಕರಣನ ಕೈಯಲ್ಲಿ ಕೊಟ್ಟನು. ಆಗ ಸಭಾಕರಣನು, ಆ ಕಾಗದವನ್ನೂ, ಅದನ್ನು ಅಭಿಮಾನದಿಂದ ತನ್ನ ಕೈಯಲ್ಲಿ ಕೊಡುತ್ತಿರುವ ಕಂಚುಕಿರಾಯನನ್ನೂ ತಿರಸ್ಕಾರದಿಂದ ನೋಡುತ್ತ ಕಂಚುಕಿರಾಯನಿಗೆ—'' ದಿಲ್ಲೀಪತಿಯು ಏನನ್ನುವನು? ಆತನು ಈ ಫರ್ಮಾನದಲ್ಲಿ ಏನು ಬರೆದಿರುವನು?'' ಎಂದು ಕೇಳಿದನು!

ಕಂಚುಕಿರಾಯನು ರಾಜಭಾಷೆಯಲ್ಲಿಯ ತನ್ನ ಅಗಾಧ ಜ್ಞಾನಕ್ಕಾಗಿ ಅಹಂಕಾರಪಡುತ್ತ, ಅಚ್ಚ ಉರ್ದೂ ಭಾಷೆಯಲ್ಲಿಬರೆದಿರುವ ಆ ಫರ್ಮಾನದ ಭಾಷಾಂತರವನ್ನು ಮಾಡಲು ಸಿದ್ಧನಾದನು. ಅಷ್ಟರಲ್ಲಿ ಹೀರಾದೇವಿಯು ತನ್ನ ವೈಧವ್ಯದ ನಾಚಿಕೆಯು ಸ್ವಲ್ಪವೂ ಇಲ್ಲದೆ ಉತ್ಸಾಹದಿಂದ ಕುಣಿಯುತ್ತ ಅಲ್ಲಿಗೆ ಬಂದು—'' ಸಭಾಕರಣ, ನಿಮ್ಮನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುವೆನು. ನೀವು ದಿಲ್ಲೀಪತಿಯ ಸನ್ಮಾನ್ಯ ಸರದಾರರಾಗಿರುತ್ತೀರಿ. ದಿಲ್ಲೀಪತಿಯ ಭಯಂಕರ ಶತ್ರುವಾಗಿರುವ ಚಂಪತರಾಯನ ಶಾಸನಮಾಡುವದಕ್ಕಾಗಿ ಬಾದಶಹನು ನಿಮ್ಮನ್ನು ನಿಯಮಿಸಿರುವನು. ಬುಂದೇಲಖಂಡದೊಳಗಿನ ಯಾವತ್ತು ಮಾಂಡಲಿಕ ರಾಜರ ಸೈನ್ಯಗಳನ್ನು ಒಟ್ಟುಗೂಡಿಸಿಕೊಂಡು ನೀವು ಮಹೋಬದಮೇಲೆ ಸಾಗಿ ಹೋಗಬೇಕೆಂದು ದಿಲ್ಲೀಪತಿಯು ಆಜ್ಞಾಪಿಸುವನಲ್ಲದೆ, ತಾನು ಸ್ವತಃ ಪ್ರಚಂಡ ಸೈನ್ಯವನ್ನು ತಕ್ಕೊಂಡು ಬಂದು ನಿಮ್ಮನ್ನು ಕೂಡಿಕೊಳ್ಳುವನಿರುವನು. ಚಂಪತರಾಯನನ್ನು ನಾಶಮಾಡುವದಕ್ಕಾಗಿ ನಾವೆಲ್ಲರೂ ಕೂಡಿ ಆಲೋಚಿಸಿದ

ಆಲೋಚನೆಯು ಸಫಲವಾಗುವ ಹಾಗೆ ತೋರುತ್ತದೆ. ಕಂಚುಕಿರಾಯನು ತನ್ನ ಕೆಲಸವನ್ನು ಉತ್ತಮ ರೀತಿಯಿಂದ ಮಾಡಿದನು. ಬುಂದೇಲಖಂಡದೊಳಗಿನ ಬಹುತರ ಎಲ್ಲ ಮಾಂಡಲಿಕರ ಸೈನ್ಯಗಳು ನಿಮ್ಮ ಹಾದಿಯನ್ನು ನೋಡುತ್ತ ಕುಳಿತುಕೊಂಡಿರುವವು. ನಾಡದು ಗರ್ಗಾಚಾರ್ಯರ ಮುಹೂರ್ತದಲ್ಲಿ ಪ್ರಯಾಣ ಬೆಳಿಸಬೇಕೆಂದು ಸದರಜೋಯಿಸರು ಮುಹೂರ್ತ ತೆಗೆದುಕೊಟ್ಟಿರುವರು. ಆ ದಿವಸ ನೀವು ನಿಮ್ಮ ಪ್ರತಿಜ್ಞೆಯನ್ನು ಪೂರ್ಣ ಮಾಡುವದಕ್ಕಾಗಿಯೂ, ದಿಲ್ಲೀ ಪತಿಯ ಆಜ್ಞೆಯನ್ನು ಪಾಲಿಸುವದಕ್ಕಾಗಿಯೂ ಪ್ರಚಂಡ ಸೈನ್ಯದ ಆಧಿಪತ್ಯವನ್ನು ಕೈಕೊಳ್ಳಬೇಕು" ಎಂದು ಹೇಳಿದಳು. ಸಭಾಕರಣನು ಮಹೋಬದ ಮೇಲೆ ಸಾಗಿಹೋಗುವ ಸೈನ್ಯದ ಆಧಿಪತ್ಯವನ್ನು ಬಹಳ ಆಸಮಾಧಾನದಿಂದ ಕೈಕೊಂಡನು. ದೇಶದ ಈ ಸ್ವಾತಂತ್ರ್ಯ ವಿಘಾತಕ ಕಾರ್ಯಕ್ಕೆ ತಾನು ಮುಂದಾಳಾಗಿರುವದು ಕೇವಲ ನರಕಸಾಧನವೆಂದು ಆತನು ತಿಳಿದನು ; ಆದರೆ ಮಾಡುತ್ತಾನೇನು? ಪ್ರತಿಜ್ಞೆಯ ಹಗ್ಗದಿಂದ ಆತನು ಗಟ್ಟಿಮುಟ್ಟಿಯಾಗಿ ಕಟ್ಟಿಹೋಗಿದ್ದನಲ್ಲವೆ? ಆ ಸತ್ಯವಾದಿಯಾದ ಕ್ಷತ್ರಿಯ ವೀರನು ಮಹೋಬದ ಸನಿಸನಿಯಕ್ಕೆ ಹೋದ ಹೋದಂತೆ ಪ್ರತಿಜ್ಞೆಯ ಸ್ಮರಣದಿಂದ ವೀರಾವೇಶಗೊಳ್ಳಹತ್ತಿದನು. ಪ್ರತಿಜ್ಞೆಗಾಗಿ ಪ್ರಾಣಕೊಡುವ ರಜಪೂತರ ಪದ್ಧತಿಯು ಪ್ರಸಿದ್ಧವಾದದ್ದು.

ಇತ್ತ ಚಂಪತರಾಯನು ವಿಜಯೆಯ ಮುಖದಿಂದ ಬುಂದೇಲಖಂಡದ ಎಲ್ಲ ಅರಸರ ಒಳಸಂಚಿನ ಸುದ್ದಿಯನ್ನು ಕೇಳಿದಂದಿನಿಂದ ಸಂತಾಪಗೊಂಡಿದ್ದನು. ಈ ದೇಶದ್ರೋಹಿಗಳಾದ ಅರಸರ ನಾಶವನ್ನು ಮೊದಲು ಮಾಡಜೇಕೆಂದು ಆತನು ನಿಶ್ಚಯಿಸಿದನು. ಆತನು ಓರಛಾದಿಂದ ಮಹೋಬಕ್ಕೆ ಬಂದಕೂಡಲೆ ಸೈನ್ಯವನ್ನು ಕೂಡಿಸತೊಡಗಿದನು. ಮಹೋಬದ ಅರಮನೆಯ ಮುಂದೆ ಪ್ರತಿದಿನ ಮುಂಜಾವಿನಲ್ಲಿ ಶಸ್ತ್ರಗಳ ರಾಶಿಗೆ ರಾಶಿಯು ಬೀಳಬೇಕು, ಸಂಜೆಯೊಳಗೆ ಅವನ್ನೆಲ್ಲಸೈನಿಕರು ತಕ್ಕೊಂಡು ಹೋಗಬೇಕು. ಈ ಕ್ರಮವು ಅಖಂಡ ಹದಿನೈದು ದಿನಗಳ ವರೆಗೆ ಸಾಗಿತ್ತು. ಇಷ್ಟು ಶಸ್ತ್ರಗಳ, ಹಾಗು ಇಷ್ಟು ಶಸ್ತ್ರಗಳನ್ನು ಉಪಯೋಗಿಸುವ ವೀರರ ಸಾಮರ್ಥ್ಯದ ಉಪಯೋಗವು ತಮ್ಮ ಬಂಧುಗಳ ನಾಶಕ್ಕಾಗಿಯೇ ಆಗುವದನ್ನು ನೆನಿಸಿ ಛತ್ರಸಾಲನು ದುಃಖಪಟ್ಟನು. " ಹೀಗೆ ನಮ್ಮ ಬಂಧುಗಳನ್ನು ದೇಶದ್ರೋ

ಹಿಗಳೆಂಬ ಕಾರಣದಿಂದ ಸಂಹಾರಮಾಡಿದರೆ, ಮುಂದೆ ಯಾರ ಬೆಂಬಲದಿಂದ ನಾವು ದಿಲ್ಲೀಪತಿಯೊಡನೆ ಕಾದಿ ಸ್ವಾತಂತ್ರ್ಯವನ್ನು ಪಡೆಯಬೇಕು? ಸ್ವಾತಂತ್ರ್ಯವನ್ನಾದರೂ ಯಾರ ಸಲುವಾಗಿ ಸಂಪಾದಿಸಬೇಕು ? ಸಭಾಕರಣನಂಥ ವೀರಾಗ್ರೇಸರನ ಮನಸ್ಸಿನೊಳಗಿನ ದ್ವೇಷವನ್ನು ಯೋಗ್ಯ ಪ್ರಯತ್ನದಿಂದಾಗಲಿ, ಸೋತಾಗಲಿ, ಕಡೆಗೆ ಕ್ಷಮೆಬೇಡಿಯಾಗಲಿ ದೂರಮಾಡಿದರೆ ಎಷ್ಟು ಹಿತವಾಗಬಹುದು. ಬುಂದೇಲಖಂಡದ ಈ ರಾಜರನ್ನು ಶತ್ರುಗಳೆಂದು ತಿಳಿದು ಅವರಮೇಲೆ ಶಸ್ತ್ರವೆತ್ತುವದಕ್ಕಿಂತ, ಅವರ ಕಲುಂಕಿತ ಮನಸ್ಸನ್ನು ಸ್ವಚ್ಛವಾಗಮಾಡಿ ಅವರನ್ನು ಸ್ವಾತಂತ್ರ್ಯಪ್ರಾಪ್ತಿಗಾಗಿ ಕಾದುವಂತೆ ಮಾಡಿದರೆ ಸ್ವಾತಂತ್ರ್ಯ ಪ್ರಾಪ್ತಿಯ ಮಾರ್ಗವು ಎಷ್ಟು ಸುಲಭವಾಗಬಹುದು! ತಮ್ಮತಮ್ಮೊಳಗೆ ಹೊಡೆದಾಡಿ ಬುಂದೇಲಖಂಡದ ಉಳಿದಿರುವ ಸಾಮರ್ಥ್ಯವನ್ನು ಇಲ್ಲದಂತೆ ಮಾಡಿಕೊಳ್ಳುವದಕ್ಕಿಂತ, ಆ ಸಾಮರ್ಥ್ಯವನ್ನು ಒಕ್ಕಟ್ಟಿನ ಹಗ್ಗದಿಂದ ಒಟ್ಟುಗೂಡಿಸಿ ಬಿಗಿದರೆ ಅದು ಎಷ್ಟು ಅಭೇದ್ಯವೂ, ಅಚಿಂತ್ಯವೂ, ಬಲಾಢ್ಯವೂ ಆಗಬಹುದು!" ಎಂಬಿವೇ ಮೊದಲಾದ ವಿಚಾರಗಳು ಛತ್ರಸಾಲನ ಮನಸ್ಸಿನಲ್ಲಿ ಬಂದು, ಆತನು ತಳಮಳಿಸತೊಡಗುವನು. ತನ್ನ ತಂದೆಯು ಸ್ವಾತಂತ್ರ್ಯಕ್ಕಾಗಿ ಮನಃಪೂರ್ವಕವಾಗಿ ಯತ್ನಿಸುವದನ್ನು ನೋಡಿ ಆ ತರುಣ ಯುವರಾಜನಿಗೆ ಸಮಾಧಾನವಾಗುತ್ತಿದ್ದರೂ, ಸರಳ ಸ್ವಾಭಾವದ ತನ್ನ ತಂದೆಯ ಈ ಸ್ವಜನಘಾತದ ಮಾರ್ಗಕ್ಕಾಗಿ ಆತನು ನೊಂದುಕೊಳ್ಳುತ್ತಿದ್ದನು. ಸಭಾಕರಣನ ಪ್ರಬಲ ಸೈನ್ಯವು ಮಹೋಬದಿಂದ ಐದು ಹರದಾರಿಯ ಮೇಲೆ ಬಂದು ಇಳಿಯಿತು, ಚಂಪತರಾಯನ ಮಸ್ತಕವು ಕ್ರೋಧದಿಂದ ತಪ್ತವಾಯಿತು. ಪುತ್ರ ಧರ್ಮಕ್ಕನುಸರಿಸಿ ಛತ್ರಸಾಲನು ಎಷ್ಟೋ ಸೈನ್ಯದ ಅಧಿಪತ್ಯವನ್ನು ಸ್ವೀಕರಿಸಬೇಕಾಯಿತು. ದಲಪತರಾಯನು ತನ್ನ ತಂದೆ ಸಭಾಕರಣನೊಡನೆ ಯುದ್ಧಮಾಡುವದಕ್ಕಾಗಿ ಸಜ್ಜಾದನು. ಚಂಪತರಾಯನು ಕುದುರೆಯನ್ನು ಹತ್ತಿ ತನ್ನ ಸೈನ್ಯವನ್ನು ಸಜ್ಜುಗೊಳಿಸುತ್ತ ಅದರ ಸುತ್ತುಮುತ್ತು ಸಂಚರಿಸತೊಡಗಿದನು. ಸೈನ್ಯವು ಸಾಗಿಹೋಗುವ ಸೂಚನೆಯನ್ನು ಮಾಡುವ ರಣವಾದ್ಯಗಳು ಕರ್ಕಶಧ್ವನಿ ಮಾಡತೊಡಗಿದವು.

ಹೀಗೆ ಉಭಯಪಕ್ಷದ ಪ್ರಚಂಡ ಸೈನ್ಯಗಳು ಯಾವ ಹಿತೋದ್ದೇಶವನ್ನೂ ಸಾಧಿಸದಿರುವ ನಾಶಕಾರಕ ಮಾರ್ಗ ಹಿಡಿದು ಕಾದತೊಡಗಿದವು! ಒಂದು ಮನೆತನದೊಳಗಿನ ಅಣ್ಣತಮ್ಮಂದಿರು ಹೊಟ್ಟೆಯಕಿಚ್ಚಿನಿಂದ ಒಬ್ಬರನಾಶವನ್ನೊಬ್ಬರು ಮಾಡಿಕೊಳ್ಳಲಿಕ್ಕೆ ನಿಂತಲ್ಲಿ, ಎಷ್ಟಾದರೂ ಮನೆತನದ ನಾಶವೇ ಆದೀತಲ್ಲವೆ, ಮನೆತನದ ಹಿತವಾಗಲಾರದು. ಅದೇಮಾತು ದೇಶಬಾಂಧವರಿಗೂ ಹತ್ತುತದು. ಬುಂದೇಲಖಂಡದ ಕ್ಷತ್ರಿಯರು ಪರಸ್ಪರ ಹೊಟ್ಟೆಕಿಚ್ಚಿನಿಂದಕಾದಹತ್ತಿದ್ದರಿಂದ ಬುಂದೇಲವುಕಸುವುಗೆಟ್ಟು ಕುರಿಯಂತೆ ಆಗುವದರಿಂದ, ಔರಂಗಜೇಬನಂಥ ಸೊಕ್ಕಿದ ಸಿಂಹಕ್ಕೆ ಸುಲಭಸಾಧ್ಯ ಆಹಾರ ಮಾತ್ರ ಆಗಬಹುದಾಗಿತ್ತು. ಈ ವಿಚಾರವು ಛತ್ರಸಾಲನ ಮನಸ್ಸಿನಲ್ಲಿ ಬಂದದ್ದರಿಂದ ಆತನುಯುದ್ಧವ್ಯಾಪಾರದಲ್ಲಿ ಉದಾಸೀನನಾಗಿದ್ದನು. ಯುದ್ಧದ ಈ ಮೊದಲನೆಯ ದಿನದ ಜಂಪತರಾಯನಿಗೆ ಜಯವಾಯಿತು. ಈದಿನ ದಲಪತರಾಯನು ಬಹುಪರಾಕ್ರಮದಿಂದ ತನ್ನ ತಂದೆಯೊಡನೆ ಕಾದಿದನು. ಇವನ್ನು ನೋಡಿದ ಛತ್ರಸಾಲನು—" ಈ ತಂದೆಮಕ್ಕಳು ಹೀಗೆ ವಿರೋಧಿಗಳಾಗಿ ಕಾದುವವನ್ನು ಬಿಟ್ಟು, ಇಬ್ಬರೂ ಕೂಡಿ ಮೊಗಲಬಾದಶಹನೊಡನೆ ಕಾದಿದ್ದರೆ ಸ್ವಾತಂತ್ರ್ಯವು ಎಷ್ಟುಸನಿಯಕ್ಕೆ ಬಂದಹಾಗಾಗುತ್ತಿತ್ತಲ್ಲ," ಎಂದು ಚಿಂತಿಸುತ್ತ ಆ ತಂದೆಮಕ್ಕಳ ಯುದ್ಧವನ್ನು ಆಸಮಾಧಾನದಿಂದ ನೋಡುತ್ತ ನಿಂತುಕೊಂಡಿದ್ದನು. ಜಂಪತರಾಯನು ತಾನು ಹಿಡಿದ ಮಾರ್ಗವು ಸ್ವಾತಂತ್ರ್ಯಪ್ರಾಪ್ತಿಗೆ ಅನುಕೂಲವಾದದ್ದೆಂದು ನಂಬಿಕೊಂಡದ್ದರಿಂದ, ಅಂದಿನ ಯುದ್ಧದಲ್ಲಿ ಜೀವದ ಹಂಗು ಇಲ್ಲದೆ ಕಾದಿದನು. ಶೂರನಾದ ಸಭಾಕರಣನು ಮೂರುಸಾರೆ ಜಂಪತರಾಯನ ಸೈನ್ಯದಮೇಲೆ ಆವೇಶದಿಂದ ನುಗ್ಗಿಬಂದನು; ಆದರೆ ದಳಪತರಾಯನ ಪರಾಕ್ರಮದ ಮುಂದೆ ಆತನು ನಿಲ್ಲಲಾರದೆ ಮೂರುಸಾರೆಯೂ ಹಿಂದಕ್ಕೆ ಸರಿಯಬೇಕಾಯಿತು. ದಳಪತರಾಯನ ಮೂರನೆಯಸಾರೆಯ ಸಂತಾಪದ ಹೊಡತದಿಂದಂತು, ಸಭಾಕರಣನ ಸೈನ್ಯವು ಒಂದು ಹರದಾರಿ ಹಿಂದಕ್ಕೆ ಸರಿಯಿತು! ಸಭಾಕರಣನು ಮಗನ ಈ ಶೌರ್ಯವನ್ನು ಮನಃಪೂರ್ವಕವಾಗಿ ಅಭಿನಂದಿಸಿದನು! ದಳಪತರಾಯನ ಪರಾಕ್ರಮವನ್ನು ಹೊಗಳುತ್ತ ಜಂಪತರಾಯನ ಸೈನ್ಯವು ಶಿಬಿರದ

ಕಡೆಗೆ ಸಾಗಿತು. ಆ ದಿವಸ ಛತ್ರಸಾಲನು ತನ್ನ ಖಡ್ಗವನ್ನು ಒರೆಯಿಂದ ತೆಗೆಯಲೇ ಇಲ್ಲವು.

ಎರಡನೆಯ ದಿವಸ ಭಯಂಕರಯುದ್ಧವು ಆರಂಭವಾಗುವ ಮೊದಲು ಛತ್ರಸಾಲನು ತನ್ನ ತಂದೆಯನ್ನು ಕಾಣುವದಕ್ಕಾಗಿ ಹೋದನು. ಆಗ ಚಂಪತರಾಯನು ತನ್ನ ಅಧಿಕಾರಿಗಳಿಗೆ ನಾಳಿನ ಯುದ್ಧವನ್ನು ಹೇಗೆ ಮಾಡ ಬೇಕೆಂಬುದನ್ನು ತಿಳಿಸುತ್ತಲಿದ್ದನು. ಶೂರರಾದ ದಲಪತರಾಯನೇ ಮೊದಲಾದವರು ಅದನ್ನು ಮನಸ್ಸುಗೊಟ್ಟು ಕೇಳುತ್ತಿದ್ದರು. ಚಂಪತರಾಯನ ಮಾತು ಮುಗಿದಕೂಡಲೆ ಯಾವತ್ತು ವೀರರ ಮನಸ್ಸಿನಲ್ಲಿ ಶೌರ್ಯದ ಸಂಚಾರವಾಗುವದಕ್ಕಾಗಿ ಕವನಗಳ ಗಾಯನವನ್ನು ತಾನು ಯಾವಾಗ ಮಾಡೇನೆಂದು ಚಾರಣದೇವನು ಹಾದಿಯ ನೋಡುತ್ತಿದ್ದನು. ಅಷ್ಟರಲ್ಲಿ ಛತ್ರಸಾಲನು ಮುಂದಕ್ಕೆ ಬಂದು ತಂದೆಯನ್ನು ಕುರಿತು—"ಅಪ್ಪಾ, ಈ ಯುದ್ಧವೆಂದರೆ ನಿರ್ದಯದ ಪರಮಾವಧಿಯು! ಈ ಬಗೆಯ ನಮ್ಮನಮ್ಮೊಳಗಿನ ಯುದ್ಧದಿಂದ ಬುಂದೇಲಖಂಡದ ಕಲ್ಯಾಣವೇನಾಗುವದು? ಬುಂದೇಲಖಂಡದೊಳಗಿನ ಈ ಜನಸಂಹಾರವು ಬುಂದೇಲಖಂಡದ ಯಾವ ಹಿತವನ್ನು ಸಾಧಿಸುವದು? ಈ ದಾಯಾದ್ಯಮತ್ಸರದಲ್ಲಿಯೇ ಬುಂದೇಲಖಂಡದ ಶಕ್ತಿಸರ್ವಸ್ವದ ನಾಶವಾದರೆ, ಮತ್ತು ಈ ನಮ್ಮನಮ್ಮೊಳಗಿನದ್ವೇಷದಲ್ಲಿಯೇ ಬುಂದೇಲಖಂಡದ ಅಪ್ರತಿಮ ಕ್ಷಾತ್ರತೇಜದಲಯವಾಯಿತೆಂದರೆ ಈ ಕಲಹಾಗ್ನಿಯಲ್ಲಿಯೇ ನಮ್ಮಲ್ಲಿಯ ಆರಿಸಿದ ವೀರರ ಆಹುತಿಯಾದರೆ ಬುಂದೇಲಖಂಡದ ಸ್ವಾತಂತ್ರ್ಯದ ಕಾರ್ಯವು ಹೇಗೆ ಕೊನೆಗಾಣುವದು? ಅಪ್ಪಾ, ಮುಂದೆ ಯುದ್ಧವನ್ನು ಸಾಗಿಸುವದರಿಂದ ಬುಂದೇಲಖಂಡದ ಹಿತವು ಸ್ವಲ್ಪವೂ ಸಾಧಿಸಲಾರದೆಂದು ನನಗೆ ತೋರುತ್ತದೆ!

ಮಗನ ಈ ಮಾತುಗಳನ್ನು ಕೇಳಿ ಚಂಪತರಾಯನು ಆಶ್ಚರ್ಯದಿಂದ-"ಯಾರು? ಛತ್ರಸಾಲ, ಈ ಮಾತುಗಳನ್ನು ಆಡುವ ನೀನು ಛತ್ರಸಾಲನೇನು? ಬುಂದೇಲದ ಹಿತವು ಯಾತರಿಂದಾಗುವದೆಂಬ ಮಾತು ನನಗೆ ಸಂಪೂರ್ಣ ಗೊತ್ತಿರುತ್ತದೆ. ಸ್ವಾತಂತ್ರ್ಯದೇವಿಯ ಭಕ್ತಿಯಲ್ಲಿ ಆಯುಷ್ಯವನ್ನು ಕಳೆದಿದ್ದ ನೀರರಿಗೆ ಹುಡುಗರು ಬುದ್ಧಿಯ ಹೇಳುವದೆಂದರೆ ಸಾಹಸವೇ ಸರಿ; ಛತ್ರಸಾಲ, ನಿನ್ನ ಇಂದಿನ ಹೇಡಿತನದ ಮಾತಿಗಾಗಿ ಚಂಪಕ

ರಾಯನು ನಿನ್ನನ್ನು ಕ್ಷಮಿಸುವನು. ಇಂಥ ಅಂಜುಬುರುಕತನದ ಮಾತನ್ನು ಇನ್ನೊಮ್ಮೆ ಆಡಿದರೆ'' ಇಷ್ಟಕ್ಕೆ ಚಂಪತರಾಯನು ತನ್ನ ಸಿಟ್ಟನ್ನು ನುಂಗಿಕೊಂಡನು. ಚಾರಣದೇವನು ಉಚ್ಚಸ್ವರದಿಂದ ಬುಂದೇಲಖಂಡದೊಳಗಿನ ವೀರರ ಶೌರ್ಯದ ಗಾಯನಮಾಡತೊಡಗಿದನು. ಚಂಪತರಾಯ, ದಲಪತರಾಯ, ಬೇರೆ ವೀರರು ಇವರಲ್ಲಿ ವೀರಶ್ರೀಯ ಸಂಚಾರವಾಯಿತು! ಯುದ್ಧದ ಕೊಂಬು ದೊಡ್ಡಧ್ವನಿಯಿಂದ ಕೂಗತೊಡಗಿತು; ಆಕಾಶವನ್ನು ಭೇದಿಸುವಂತೆ ವಿಂಧ್ಯವಾಸಿನಿಯ ಜಯಜಯಕಾರಧ್ವನಿಯು ಏಗತೊಡಗಿತು ನಿಕರವ ಕಾಳಗವು ಆರಂಭವಾಗಿ ಜನಸಂಹಾರದ ಕಾರ್ಯವು ಭರದಿಂದ ನಡೆಯಿತು; ಆದರೆ ಆ ದಿವಸವೂ ಛತ್ರಸಾಲನು ಯುದ್ಧಮಾಡಲಿಲ್ಲ. ಆ ದಿನವೂ ಆತನು ತನ್ನ ಖಡ್ಗವನ್ನು ಒರೆಯೊಳಗಿಂದ ಹಿರಿಯಲಿಲ್ಲ.

ತಮ್ಮತಮ್ಮೊಳಗೆ ನಡೆದಿದ್ದ ಬುಂದೇಲಖಂಡದೊಳಗಿನ ಈ ಯುದ್ಧವು ಜಯಪ್ರಾಪ್ತಿಯಾಗುವವರೆಗೆ ಎಷ್ಟೋದಿವಸ ನಡೆದಿತ್ತು. ಇಷ್ಟು ದಿವಸಗಳಲ್ಲಿ ಚಂಪತರಾಯನು ಅಪಕೀರ್ತಿಯನ್ನು ಪಡೆದು ಎಂದೂ ಹಿಂದಿರುಗಿ ಹೋಗಲಿಲ್ಲ; ಆದರೆ ಇದೇಕ್ರಮವು ಇನ್ನೂ ಕೆಲವು ದಿವಸ ನಡೆದರೆ, ದಿನದಿನಕ್ಕೆ ಸೊರಗತೊಡಗಿದ್ದ ತನ್ನ ವೀರರ ಸಂಖ್ಯೆಯು ಕಡೆಗೆ ನಾಮಶೇಷವಾಗುವದೋ ಏನೋ ಎಂಬ ಸಂಶಯವು ಚಂಪತರಾಯನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಸಭಾಕರಣನ ಸೈನ್ಯವಾದರೂ ಅಲ್ಪಸ್ವಲ್ಪ ನಾಶವಾಗಿದ್ದಿಲ್ಲ; ಆದರೆ ಹೀರಾದೇವಿಯು ಮೇಲಿಂದಮೇಲೆ ಹೊಸಸೈನ್ಯದ ಪೂರೈಕೆ ಮಾಡಿಕೊಡುತ್ತಿದ್ದದ್ದರಿಂದ, ಸಭಾಕರಣನ ಸೈನ್ಯವು ಈವರೆಗೆ ತಡೆದು ನಿಂತಿತ್ತು. ಇಷ್ಟುದಿವಸ ಯುದ್ಧನಡೆದರೂ ಚಂಪತರಾಯನ ವರ್ಚಸ್ಸಿಗೆ ಚ್ಯುತಿಯುಂಟಾಗದೆ, ಆತನ ವಿರುದ್ಧಪಕ್ಷದ ಬುಂದೇಲಿಗಳ ನಾಶವು ವಿಶೇಷವಾಗಿ ಆದದ್ದನ್ನು ಕೇಳಿ, ಔರಂಗಜೇಬನು ಸ್ವತಃ ಪ್ರಚಂಡ ಸೈನ್ಯದೊಡನೆ ಬುಂದೇಲ ಖಂಡದ ಮೇಲೆ ಸಾಗಿಬಂದನು. ಈ ಸುದ್ದಿಯನ್ನುಕೇಳಿ ಚಂಪತರಾಯನು ಎದೆಗುಂದದೆ ಬಾದಶಹನೊಡನೆ ಯುದ್ಧಕ್ಕೆ ಸಿದ್ಧನಾದನು. ಕಲ್ಪನೆಗಿಂತ ಬೇಗನೆ ಬಾದಶಹನ ಸೈನ್ಯವು ತನ್ನಮೇಲೆ ಸಾಗಿಬಂದಿತೆಂಬ ಚಿಂತೆಯು ಆ ವೀರಪುಂಗವನಿಗೆ ಲೇಶವೂ ಉಂಟಾಗಲಿಲ್ಲ! ಈವರೆಗೆ ಸಮರಾಂಗಣದಲ್ಲಿ ತಟಸ್ಥವೃತ್ತಿಯಿಂದ ಕಾಲಹರಣಮಾಡಿದ್ದ ಛತ್ರಸಾಲನೂ,

ಇಂದು ಒರೆಯಿಂದ ಶಸ್ತ್ರವನ್ನು ಹಿರಿದು ಆಕಾಶಮಧ್ಯದಲ್ಲಿರುವ ಸೂರ್ಯನಂತೆ ಪ್ರಕಾಶಿಸತೊಡಗಿದನು. ಛತ್ರಸಾಲನ ಈ ಅದ್ವಿತೀಯ ಉತ್ಸಾಹವನ್ನು ನೋಡಿ, ಚಂಪತರಾಯನ ಉಳಿದ ಸೈನಿಕರಿಗೆ ಹೊಸ ಉತ್ಸಾಹವು ಉತ್ಪನ್ನವಾಯಿತು. ಅವರು ಬಾದಶಹನ,ಹಾಗು ಸಭಾಕರಣನ ಮಿಶ್ರಸೈನ್ಯಕ್ಕೆ ಯಮನಂತೆ ತೋರಹತ್ತಿದರು. ಮಹಾಕಪಟಿಯಾದ ಔರಂಗಜೇಬನು ಸಭಾಕರಣನ ಸಹಾಯದಿಂದ ಆಯಕಟ್ಟಿನಸ್ಥಳನೋಡಿ ನಿಂತು ಚಂಪತರಾಯನಸೈನ್ಯವನ್ನು ಹಣಿಯಹತ್ತಿದನು; ಆದರೂ ಚಂಪತರಾಯನ ಶೂರಸೈನಿಕರು ಹಿಂಜರಿಯದೆ ಶೌರ್ಯದಿಂದ ಕಾದಿ ರಣಭೂಮಿಯಲ್ಲಿ ದೇಹವಿಡತೊಡಗಿದರು. ಹೀಗೆ ವೀರರ ಸಂಖ್ಯೆಯು ಕಡಿಮೆಯಾಗುತ್ತ ಹೋದಂತೆ, ಚಂಪತರಾಯನು ಕ್ಷೀಣಬಲನಾಗತೊಡಗಿದನು.

ಸ್ವಜನರೆಲ್ಲರೂ ಚಂಪತರಾಯನ ಕೈಬಿಟ್ಟರು; ಚಂಪತರಾಯನಿಗೆ ಎಲ್ಲಿಯೂ ವಿಶ್ವಾಸವು ತೋರದಾಯಿತು. ಮೊಗಲರ ಪ್ರಚಂಡ ಸೇನೆಯ ಹೊಡತದಿಂದ ಆಗುತ್ತಿರುವ ಮಹೋಬದ ಜನರ ನಾಶವನ್ನು ಆತನು ನೋಡದಾದನು. ಇನ್ನು ತಾನು ಮಹೋಬವನ್ನು ರಕ್ಷಿಸುವದು ಅಶಕ್ಯವೆಂದು ತಿಳಿದು, ದುಃಖದಿಂದ ಸ್ವದೇಶತ್ಯಾಗಮಾಡಿ ಅರಣ್ಯವನ್ನು ಸೇರಿದನು. ಪರಾಕ್ರಮದಿಂದ ಕಾದುತ್ತಿದ್ದ ಯುವರಾಜ ಛತ್ರಸಾಲನೂ, ಯುವರಾಜ ದಲಪತರಾಯನೂ ಚಂಪತರಾಯನನ್ನು ಅನುಸರಿಸಿ ಅರಣ್ಯದ ಮಾರ್ಗವನ್ನು ಹಿಡಿದರು. ಛತ್ರಸಾಲನ ತಾಯಿಯಾದ ಸರಲಾದೇವಿಯು ಕೈಯಲ್ಲಿ ಶಸ್ತ್ರವನ್ನು ಧರಿಸಿ ಪತಿಯನ್ನು ಅನುಸರಿಸಿ ನಡದಳು. ಈಗ ಚಂಪತರಾಯನ ಬಳಿಯಲ್ಲಿ ಐವತ್ತುಜನ ವೀರರು ಮಾತ್ರ ಉಳಿದಿದ್ದರು. ಇತ್ತ ಮಹೋಬದ ಮೇಲೆ ದಿಲ್ಲೀಪತಿಯ ಹಸರು ನಿಶಾನೆಯು ಮೆರೆಯಹತ್ತಲು, ಹೀರಾದೇವಿಯ ಆನಂದವುಹೊಟ್ಟೆಯಲ್ಲಿಹಿಡಿಸದಾಯಿತು. ಆಕೆಯಆನಂದದಲ್ಲಿ ಚಂಪತರಾಯ-ಛತ್ರಸಾಲರಿಬ್ಬರು ರಣಭೂಮಿಯಲ್ಲಿ ಇನ್ನೂ ಮಡಿಯಲಿಲ್ಲವಲ್ಲ, ಎಂಬುದೊಂದೇಕೊರತೆಯಿತ್ತು. ಈ ಮೇರೆಗೆ ಆ ದುಷ್ಟಸ್ತ್ರೀ ಹೀರಾದೇವಿಯು ಬುಂದೇಲಖಂಡದೊಳಗಿನ ಯಾವತ್ತು ಶೌರ್ಯವನ್ನು ಒಟ್ಟುಗೂಡಿಸಿ ಚಂಪತರಾಯನಿಗೆ ವಿರೋಧಿಯಾಗಿ ದಿಲ್ಲಿಯ ಬಾದಶಹನಿಗೆ ಸಹಾಯಮಾಡುತ್ತಿರುವಾಗ,

ದಿನಾಲು ಒಂದಿಲ್ಲೊಂದು ಕಡೆಯಲ್ಲಿ ಚಂಪತರಾಯನಿಗೂ, ಬಾದಶಹನ ಸೈನ್ಯಕ್ಕೂ ಯುದ್ಧವಾಗುತ್ತಿತ್ತು. ಚಂಪತರಾಯನೂ, ದಲಪತರಾಯನೂ ಜೀವದ ಆಶೆಬಿಟ್ಟು ಕಾದುತ್ತಿರುವಾಗ, ಪ್ರತಿದಿನ ಅವರ ಕಡೆಯ ಕೆಲವು ಶೂರರ ಸಂಹಾರವಾಗುತ್ತಿತ್ತು. ಹೀಗಿರುವಾಗ ಚಂಪತರಾಯನು ಅತ್ಯಂತ ಕ್ಷೀಣಬಲನಾದನು. ಯುದ್ಧಮಾಡುವ ಸಾಮರ್ಥ್ಯವು ಆ ವೀರಪುಂಗವನಲ್ಲಿ ಸರ್ವಥಾ ಉಳಿಯಲಿಲ್ಲ. ಈ ಸ್ಥಿತಿಯಲ್ಲಿ ಆತನ ಪರಿವಾರವೆಂದರೆ, ಆತನ ಧರ್ಮಪತ್ನಿ ಸರಲಾದೇವಿ, ಮಗನಾದ ಛತ್ರಸಾಲ, ವಿರಾಗ್ರಣಿ ದಲಪತರಾಯ, ಕೆಲಜನ ಶೂರದಂಡಾಳುಗಳು ಇಷ್ಟೆ! ಈ ಸ್ಥಿತಿಯಲ್ಲಿಯೂ ಆ ಸ್ವಾತಂತ್ರ್ಯ ಪ್ರಿಯನು ಬಾದಶಹನಿಗೆ ಶರಣು ಹೋಗಲಿಚ್ಛಿಸಲಿಲ್ಲ. ಆವೀರನ ನಿಶ್ಚಿತವಾದ ಇಚ್ಛೆಗಳು ಎರಡೇ ಇದ್ದವು. ಒಂದನೆಯದು ಶತ್ರುವನ್ನು ಸೋಲಿಸಿ ಜಯ ಸಂಪಾದಿಸುವದು, ಎರಡನೆಯದು ತಾನುದುರ್ದೈವದಿಂದ ಜಯಶಾಲಿಯಾಗದಿದ್ದರೆ ಸಮರಭೂಮಿಯಲ್ಲಿ ಶತ್ರುಗಳೊಡನೆ ಕಾದುತ್ತ ಕಾದುತ್ತ ಧಾರಾತೀರ್ಥವಲ್ಲಿ ಪತನಹೊಂದಿ ವೀರಸ್ವರ್ಗವನ್ನು ಹೊಂದುವದು! ಇವುಗಳಲ್ಲಿ ಎರಡನೆಯ ಇಚ್ಛೆಯನ್ನು ಪೂರ್ಣಮಾಡಿ ಕೊಳ್ಳುವದಕ್ಕಾಗಿ ಆತನು ಆಲೋಚಿಸತೊಡಗಿದನು; ಯಾಕಂದರೆ, ಚಂಪತರಾಯನು ಮೂರ್ತಿಮಂತ ಅಚ್ಚ ಕ್ಷಾತ್ರಧರ್ಮವಾಗಿದ್ದನು!



೧೪ನೆಯ ಪ್ರಕರಣ- ಸತ್ಯಸಂಧತೆಯ ಪ್ರಭಾವ!

ಹೀಗೆ ಮೂರ್ತಿಮಂತ ಅಚ್ಚ ಕ್ಷಾತ್ರಧರ್ಮವಾಗಿದ್ದ ಚಂಪತರಾಯನು ಸಮರಭೂಮಿಯಲ್ಲಿ ದೇಹವಿಡುವದನ್ನು ನಿಶ್ಚಯಿಸಿ, ಅರಣ್ಯದೊಳಗಿನ ಒಂದು ಪ್ರಶಸ್ತ ಶಿಲೆಯಮೇಲೆ ಗಾಂಭೀರ್ಯದಿಂದ ವಿಚಾರಮಾಡುತ್ತ ಕುಳಿತುಕೊಂಡಿದ್ದನು. ಯುವರಾಜ ಛತ್ರಸಾಲನೂ, ಯುವರಾಜ ದಲಪತರಾಯನೂ ಗಂಭೀರಮುದ್ರೆಯನ್ನು ತಾಳಿ ಆತನ ಬಳಿಯಲ್ಲಿಯೇ ಕುಳಿತುಕೊಂಡಿದ್ದರು. ಸಾಧ್ವಿಯಾದ ಸರಲಾದೇವಿಯು ತನ್ನ ಪತಿಗೆ, ಹಾಗು ಪುತ್ರಮಿತ್ರರಿಗೆ ಆಕಸ್ಮಿಕವಾಗಿ ಒದಗಿದ ನಿಕೃಷ್ಟಾವಸ್ಥೆಯನ್ನು ಶೋಕದಗ್ಧ ಹೃದಯದಿಂದ ನೋಡುತ್ತ ಕುಳಿತುಕೊಂಡಿದ್ದಳು. ಉಳಿದ ಒಬ್ಬಿಬ್ಬ ಕೆಚ್ಚೆ

ದೆಯು ಕ್ಷತ್ರಿಯ ವೀರ ದಂಡಾಳುಗಳು ತಮ್ಮ ಪ್ರಭುವಿನ ಆಜ್ಞೆಯ ನಿರೀಕ್ಷಣೆ ಮಾಡುತ್ತ ಕುಳಿತುಕೊಂಡಿದ್ದರು. ಹೀಗೆ ಅವರೆಲ್ಲರೂ ಆ ಅರಣ್ಯ ಮಧ್ಯ ದಲ್ಲಿ ವಿಚಾರಮಾಡುತ್ತ ಕೆಲಹೊತ್ತು ಸುಮ್ಮನೆ ಕುಳಿತಿರುವಾಗ, ಚಂಪತ ರಾಯನು ತನ್ನ ಪರಿವಾರವನ್ನುದ್ದೇಶಿಸಿ ಗಾಂಭೀರ್ಯದಿಂದ—" ಒಳ್ಳೆಯ ಕಠಿಣ ಪ್ರಸಂಗವಂತು ಒದಗಿತು. ಕಾದುತ್ತ ಕಾದುತ್ತ ಸಾಯಬೇಕು, ಇಲ್ಲವೆ ನಿರ್ಲಜ್ಜೆಯಿಂದ ಶತ್ರುವಿನ ಸ್ವಾಧೀನವಾಗಬೇಕು. ಇದರ ಹೊರತು ಬೇರೆ ಉಪಾಯವಿಲ್ಲವು. ಸಾಯಬಹುದು; ಆದರೆ ಸಾಯುವಾಗ ಸ್ವದೇಶದ ದೈನ್ಯಾವಸ್ಥೆಯು ಕಣ್ಣಿಗೆ ಕಟ್ಟಲು, ಮನಸ್ಸಿಗೆ ಆಗುವ ವ್ಯಥೆಯನ್ನು ಸಹಿಸ ಲಾಸಲ್ಲ! ಹಾಗಾದರೆ ಬದುಕಬೇಕೆ? ಬದುಕಿದರೆ ಆ ವಚನಭ್ರಷ್ಟ ಔರಂಗ ಜೇಬನ ಗುಲಾಮನಾಗಬೇಕು. ಛೆ! ಹಾಗೆ ಬದುಕುವದು ನರಕವಾಸಕ್ಕಿಂತ ಕಠಿಣವೇ ಸರಿ! ಸತ್ತು ವೀರಸ್ವರ್ಗಕ್ಕೆ ಹೋಗಿ ದೇವತೆಗಳ ಮುಂದೆ ಬುಂದೇಲಖಂಡದ ಪಾರತಂತ್ರ್ಯವನ್ನು ವರ್ಣಿಸಿ ಹೇಳೋಣ! ನಿಶ್ಚಯವು, ಇನ್ನು ಸಾಯುವದೇ ನಿಶ್ಚಯವು. ಇನ್ನು ಕಣ್ಣಿಗೆ ಬಿದ್ದ ಶತ್ರುಗಳ ಗುಂಪಿ ನಮೇಲೆ ಈ ಚಂಪತರಾಯನು ಹುಲಿಯಂತೆ ಜಿಗಿಯತಕ್ಕವನು! ಚಂಪತ ರಾಯನ ಐಹಿಕ ಕರ್ತವ್ಯವು ಮುಗಿಯಿತು. ಸರಲೇ, ನೀನು ವ್ಯರ್ಥವಾಗಿ ಶೋಕಮಾಡಬೇಡ. ಛತ್ರಸಾಲ-ದಲಪತರಾಯ, ನೀವೂ ದುಃಖಮಾಡ ಬೇಡಿರಿ. ಇನ್ನು ನಾನು ಕೆಲವು ತಾಸು ಬದುಕಿ ಇರತಕ್ಕವನು. ಅಷ್ಟು ಕಾಲವನ್ನು ನಾವು ಆನಂದದಿಂದ ಕಳೆಯೋಣ. ಒಬ್ಬರನ್ನೊಬ್ಬರು ಪ್ರೇಮ ದಿಂದ ಕಾಣೋಣ, ಒಬ್ಬರ ಅನುಭವವನ್ನೊಬ್ಬರು ಪರಸ್ಪರರಿಗೆ ಹೇಳೋಣ!

ಈವರೆಗೆ ಸಮಾಧಾನದಿಂದ ಕುಳಿತಿದ್ದ ಸರಲಾದೇವಿಯು ಪತಿಯ ಈ ಮಾತುಗಳನ್ನು ಕೇಳಿ ಬಿಕ್ಕಿಬಿಕ್ಕಿ ಅಳತೊಡಗಿದಳು. ಆಗ ಚಂಪತರಾಯನು-" ಸರಲೇ, ನೀನು ಹುಚ್ಚಿಯಲ್ಲವೆ? ಶತ್ರುಗಳು ನಾಲ್ಕೂ ಕಡೆಯಿಂದ ಅರಣ್ಯ ವನ್ನು ಸುತ್ತುಹಾಕಿದ್ದು, ಯಾವಾಗ ಅವರು ನಮ್ಮ ಮೇಲೆ ಬಿದ್ದಾರೆಂಬದರ ನಿಯಮವಿಲ್ಲ. ಆಂದಬಳಿಕ ಶತ್ರುಗಳು ಬಂದಬಳಿಕ ಯಾಪ ಮಾತುಆಡ ಲಿಕ್ಕೆ ಬಂದೀತು? ಆದ್ದರಿಂದ ಸರಲೇ, ನಿನ್ನ ಕಟ್ಟಕಡೆಯ ಆಲಿಂಗನವನ್ನು ನನಗೆ ಕೊಡು" ಎನ್ನಲು, ಸರಲಾದೇವಿಯು ಆತುರದಿಂದ ಧಾವಿಸಿ ಪತಿ ಯನ್ನು ಆಲಿಂಗಿಸಿದಳು. ತನ್ನ ತಾಯಿತಂದೆಗಳ ಈ ಕಟ್ಟಕಡೆಯ ಕಾಣೋ

ಣವನ್ನು ನೋಡಿ ಛತ್ರಸಾಲನ ಕಣ್ಣುಗಳಲ್ಲಿ ನೀರುಬಂದವು; ಆದರೆ ತಾನು ಕಣ್ಣೀರುಹಾಕುವದು ಅಪ್ಪನ ಕಣ್ಣಿಗೆ ಬಿದ್ದರೆ ಅತನಿಗೆ ಪರಮಾವಧಿ ಮಃಖ ವಾದೀತೆಂದು ತಿಳಿದು, ದಃಖವನ್ನು ಬಹು ಪ್ರಯಾಸದಿಂದ ನುಂಗಿಕೊಂ ಡನು. ಸ್ವಲ್ಪಕಾಲದಲ್ಲಿ ಚಂಪತರಾಯನು ತನ್ನನ್ನು ಆಲಿಂಗಿಸಿದ್ದ ತನ್ನ ಹೆಂಡತಿಯನ್ನು ಹಿಂದಕ್ಕೆ ಸರಿಸಿ—"ಪ್ರಿಯೇ, ಇನ್ನು ನಿನಗೆ ನನ್ನ ದರ್ಶನವು ಸ್ವರ್ಗಲೋಕದಲ್ಲಿ! ಸರಲೇ, ನಾನು ಸ್ವರ್ಗಕ್ಕೆ ಹೋದ ಬಳಿಕ ಅಲ್ಲಿ ನಮ್ಮ ವಾಸಸ್ಥಳ ಮುಂತಾದವುಗಳ ವ್ಯವಸ್ಥೆಮಾಡುವೆನು; ಅಷ್ಟರಲ್ಲಿ ನೀನು ನನ್ನ ಉಳಿದಿರುವ ಕೆಲಸಗಳನ್ನು ತೀರಿಸಿಕೊಂಡು ಅಲ್ಲಿಗೆ ಹೊರಟುಬಾ! ಯುವ ರಾಜನು ಇನ್ನೂ ಸಣ್ಣವನಿರುವನು. ಅತನ ಸಂಗೋಪನಕ್ಕೆ ಇನ್ನೂ ಮಾತೃ ಪ್ರೇಮದ ಅವಶ್ಯಕತೆಯಿರುವದು. ಅಷ್ಟು ತೀರುವವರೆಗೆ ನೀನು ಈ ಲೋಕ ದಲ್ಲಿಯೇ ವಾಸಿಸು. ಛತ್ರಸಾಲ, ನಿನ್ನನ್ನು ಕಾಣುವ ಮೊದಲು ನನ್ನ ಆಯುಷ್ಯದೊಳಗಿನದೊಂದು ಅನುಭವವನ್ನು ನಿನಗೆ ಹೇಳುವೆನು, ಅದನ್ನು ಮನಸ್ಸುಗೊಟ್ಟು ಕೇಳು.

ಯುವರಾಜ ಛತ್ರಸಾಲನು ಕೈಜೋಡಿಸಿ, ಮೋರೆಯನ್ನು ತಗ್ಗಿಸಿ ತನ್ನ ತಂದೆಯ ಮುಂದೆ ನಿಂತುಕೊಂಡನು. ದಲಪತರಾಯನು ವೀರಾಗ್ರಣಿ ಚಂಪ ತರಾಯನ ಕಟ್ಟಕಡೆಯ ಭಾಷಣವನ್ನು ಲಕ್ಷಪೂರ್ವಕವಾಗಿ ಕೇಳತೊಡಗಿ ದನು. ಆಗ ಚಂಪತರಾಯನು ಮಗನನ್ನು ಕುರಿತು—"ಛತ್ರಸಾಲ, ಸ್ವಜನ ರೊಡನೆ ಕಾದುವದು ದೇಶಕ್ಕೆ ಹಿತಕರವಲ್ಲೆಂಬ ಮಾತನ್ನು ನೀನು ಯುದ್ಧದ ಎರಡನೆಯ ದಿವಸ ನನಗೆ ಹೇಳಿದೆ; ಆದರೆ ಅದರ ಮಹತ್ವವು ನನಗೆ ಬಹಳ ತಡವಾಗಿ ಗೊತ್ತಾಯಿತು! ನಾನು ಸ್ವಾತಂತ್ರ್ಯ ಪ್ರಾಪ್ತಿಗಾಗಿ ವಿಶ್ವಪ್ರಯತ್ನ ಮಾಡಿದೆನು, ಸರ್ವ ಸುಖಗಳನ್ನು ಬಿಟ್ಟುಕೊಟ್ಟೆನು, ಯಾವಾಗಲೂ ನನ್ನ ಮನಸ್ಸಿನಲ್ಲಿ ಸ್ವಾತಂತ್ರ್ಯದ ವಿಚಾರವು ಒಂದೇ ಕಟೆಯುತ್ತಿತ್ತು. ನಾನು ಈ ಮೊದಲೆ ಸಾವುಗಡದ ಯುದ್ಧದಲ್ಲಿ ಔರಂಗಜೇಬನಿಗೆ ಸಹಾಯಮಾಡಿ ದೆನು, ಈಗ ಔರಂಗಜೇಬನೊಡನೆ ಯುದ್ಧಮಾಡುತ್ತಿರುವೆನು; ಈ ಮೊದಲು ನಾನು ಸಭಾಕರಣನ ಭುಜಕ್ಕೆ ಭುಜವನ್ನು ಅನಿಸಿ ನಿಂತು ಸ್ವದೇಶದಸ್ವಾತಂ ತ್ರ್ಯಕ್ಕಾಗಿ ಕಾದಿದೆನು, ಈಗ ಅದೇಸಭಾಕರಣನ ಸಂಗಡ ಎದೆಗೆ ಎದೆಕೊಟ್ಟು ಯುದ್ಧಮಾಡುತ್ತಿರುವೆನು; ಈ ಮೊದಲೆ ಹೀರಾದೇವಿಯನ್ನು ಓರಛಾದ

ಪಟ್ಟನ ರಾಣಿಯಾಗನಾಡುವದು ನನಗೆ ಯೋಗ್ಯವಾಗಿ ತೋರಿತು, ಈಗ ಆಕೆಯು ಸೈನ್ಯದೊಡನೆ ಕಾದುವದು ನನಗೆ ಇಷ್ಟವಾಗಿ ತೋರುತ್ತದೆ. ಹೀಗೆ ಪರಸ್ಪರ ವಿರೋಧವಾಗಿರುವ ಕಾರ್ಯಗಳನ್ನು ಮಾಡುವಾಗೂ ಸ್ವಾತಂತ್ರ್ಯ ಪ್ರಾಪ್ತಿಯು ಇಚ್ಛೆಯ ದಿವ್ಯಜ್ಯೋತಿಯು ನನ್ನ ಹೃದಯದಲ್ಲಿ ಪ್ರಕಾಶಿಸುತ್ತಲಿತ್ತು; ಆದರೂ ಸ್ವಾತಂತ್ರ್ಯಪ್ರಾಪ್ತಿಯ ಕಾರ್ಯದಲ್ಲಿ ನನಗೆ ಯಶಸ್ಸು ದೊರೆಯುಲಿಲ್ಲ! ನನ್ನ ಪ್ರಯತ್ನದೊಳಗಿನ ದೋಷವನ್ನು ನಾನು ಕಂಡು ಹಿಡಿಯುವ ಪ್ರಯತ್ನವನ್ನು ಎಷ್ಟು ಮಾಡಿದರೂ ಆಗ ಅದು ನನಗೆ ಗೊತ್ತಾಗಲಿಲ್ಲ. ಛತ್ರಸಾಲ, ನಾನು ಸ್ವಾತಂತ್ರ್ಯದ ಮಂದಿರವನ್ನು ಕಟ್ಟುವದಕ್ಕಾಗಿ ಪ್ರಯತ್ನಮಾಡಿದೆನು; ಆದರೆ ಆ ಮಂದಿರದ ತಳಹದಿಯು ಭದ್ರವಾಗಿದೆಯೋ ಇಲ್ಲವೋ ಎಂಬದನ್ನು ನೋಡಲಿಲ್ಲ. ಒಬ್ಬರ ಆಳಾಗಿರಲಿಕ್ಕೆ ಬುಂದೇಲಖಂಡವು ಎಷ್ಟು ಮೆಚ್ಚಿರುವದೆಂಬವನ್ನೂ, ಅವರ ಆ ಮೆಚ್ಚಿಗೆಯ ಮೂಲಕ ದಾಸ್ಯತ್ವದ ಅಂಗಗಳಾದ ನೀಚಸ್ವಾರ್ಥಪರತೆ, ಅಸೂಯೆ, ವಿಷಯಾಸಕ್ತಿ ಮುಂತಾದ ದುರ್ಗುಣಗಳಿಂದ ಅದರ ಸದ್ಗುಣಗಳೆಲ್ಲ ಹೇಗೆ ಕುಗ್ಗಿರುವವೆಂಬದನ್ನೂ ನಾನು ಲಕ್ಷಪೂರ್ವಕವಾಗಿ ನೋಡಿ ಅವುಗಳನ್ನು ಹೋಗಲಾಡಿಸಲಿಕ್ಕೆ ತಕ್ಕ ಉಪಾಯಗಳನ್ನು ಮಾಡಲಿಲ್ಲ. ತಮಗೆ ಅಂಟಿ ಕೊಂಡಿರುವ ಈ ದುರ್ಗುಣಗಳ ರೋಗದಿಂದ ಬುಂದೇಲಿಗಳು ಪರಾಧೀನರಾಗಿ ನನ್ನ ಸ್ವಾತಂತ್ರ್ಯದ ಕಾರ್ಯಕ್ಕೆ ವಿರೋಧಿಗಳಾಗಲು, ಬುದ್ಧಿಪೂರ್ವಕವಾಗಿ ಅವರು ನನ್ನನ್ನು ದ್ವೇಷಿಸುವರೆಂದು ತಿಳಿದು ನಾನು ಅವರ ನಾಶವಾಗಲು ತೊಡಗಿದೆನು. ಇಂಥ ರೋಗಗ್ರಸ್ತ ಕೊಳಕ ಜನರ ಕೊಳೆಯನ್ನು ದೂರವಾಡುವದನ್ನು ಬಿಟ್ಟು, ನಾನು ಅವರನ್ನು ನಮ್ಮ ಶತ್ರುಗಳಾದ ಯವನರ ಸಾಲಿನಲ್ಲಿ ಕುಳ್ಳಿರಿಸಿದೆನು! ವತ್ಸ, ಛತ್ರಸಾಲಾ, ಪ್ರಾಣನಾಥ ಪ್ರಭುಗಳ ಕೃಪೆಯಿಂದಲೂ, ಶ್ರೀ ವಿಂಧ್ಯವಾಸಿನಿಯ ಅನುಗ್ರಹದಿಂದಲೂ ನಿನಗೆ ಈ ಮಾತಿನ ಎಚ್ಚರವು ಸ್ವಾಭಾವಿಕವಾಗಿಯೇ ಇರುವದನ್ನು ತಿಳಿದು ನನಗೆ ಬಹಳ ಸಂತೋಷವಾಗಿದೆ. ನನ್ನ ಬುಂದೇಲಿಗಳನ್ನೆಲ್ಲ ಒಟ್ಟುಗೂಡಿಸಬೇಕೆಂಬ ವಿಚಾರವು ನನ್ನಲ್ಲಿ ಹುಟ್ಟಲಿಲ್ಲ. ನನಗೆ ಬೇಡಾವವರನ್ನು ಮೊದಲು ನಾಶವಾಡಿ, ಆಮೇಲೆ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂಬ ಸಂಕಲ್ಪವಾಡಿದ ನನ್ನ ಸಂಕಲ್ಪವು, ಮೊದಲು ಬುಂದೇಲಖಂಡ

ವನ್ನೆಲ್ಲ ನಿರ್ಮಾನುಷವಾಗಿ ಮಾಡಿ, ಆಮೇಲೆ ಸ್ವಾತಂತ್ರ್ಯದ ಪ್ರಯೋಜನವೇ ಉಳಿಯುವಿಲ್ಲವಲ್ಲ, ಎಂಬ ಪಶ್ಚಾತ್ತಾಪದಿಂದ ಬೆಂದು ಸಾಯುವ ಮೂರ್ಖನ ಸಂಕಲ್ಪದಂತೆ ಆಯಿತು! ನಾನು ಇಡಿಯ ಬುಂದೇಲಖಂಡದ ರಾಜರಿಗೆಲ್ಲ ಬೇಡಾಗಿರುವೆನು. ಇದು ನನ್ನ ಸರಲ ಹೃದಯದ, ಅಥವಾ ಇವರೆಲ್ಲರೂ ನನ್ನಂತೆ ಇಲ್ಲವಲ್ಲ, ಎಂಬ ತಾಪದ ಪರಿಣಾಮವಾಗಿದ್ದರೂ, ಅದು ಬೇರೆಬೇರೆ ಸ್ವಭಾವದ ಬುಂದೇಲಿಗಳನ್ನು ಒಟ್ಟುಗೂಡಿಸಿ ಅವರ ಬಲವನ್ನು ಹೆಚ್ಚಿಸಿ ಅದರ ಸಹಾಯದಿಂದ ಬುಂದೇಲದ ಸ್ವಾತಂತ್ರ್ಯವನ್ನು ಸಂಪಾದಿಸುವ ಹಿತಕಾರಕ ಮಾರ್ಗಕ್ಕೆ ಉಪಯುಕ್ತವಾದದ್ದಲ್ಲ! ಛತ್ರಸಾಲ, ನಾನು ಈಪ್ರಸಂಗದಲ್ಲಿ ಮಹಾರಾಷ್ಟ್ರ ರಾಜ್ಯಸ್ಥಾಪಕನಾದ ಶಿವರಾಯನನ್ನು ಗುರುವನ್ನಾಗಿ ಮಾಡಿಕೊಳ್ಳತಕ್ಕದ್ದಿತ್ತು; ಆದರೆ ಅಷ್ಟು ಪುಣ್ಯವನ್ನು ನಾನು ಮಾಡಿರಲಿಲ್ಲ; ನನ್ನ ಎಟ್ಟೆ ಸ್ವಭಾವದ ಮೂಲಕ ಬುಂದೇಲಿಗಳೆಲ್ಲರೇಗಿದರು. ಉಪದೇಶದಿಂದ, ಪ್ರಾರ್ಥನೆಯಿಂದ, ಪ್ರಸಂಗ ಒದಗಿದಲ್ಲಿ ಕ್ಷಮೆಬೇಡಿ ನಾನು ನನ್ನ ದೇಶಬಾಂಧವರ ಮನಸ್ಸನ್ನು ಒಲಿಸಿಕೊಳ್ಳಲಿಲ್ಲ. ಛತ್ರಸಾಲ, ನೀನಾದರೂ ನಾನು ಮಾಡಿದ ತಪ್ಪುಗಳನ್ನು ಮಾಡದಂತೆ ಎಚ್ಚರವಾಗಿರು; ನೀನಾದರೂ ಆ ಮಹಾತ್ಮನಾದ ಶಿವರಾಯನನ್ನು ಗುರುವಾಗಿ ಮಾಡಿಕೊಳ್ಳುವದಕ್ಕಾಗಿ ದಕ್ಷಿಣ ಹಿಂದುಸ್ಥಾನಕ್ಕೆ ಹೋಗದೆ ಇರಬೇಡ; ಬುಂದೇಲಖಂಡವನ್ನು ಸ್ವತಂತ್ರವಾಗಮಾಡಬೇಕೆಂಬ ಸಂಕಲ್ಪವು ದೃಢವಾಗಿ ನಿನ್ನ ಹೃದಯದಲ್ಲಿರಲಿ; ವಿಂಧ್ಯವಾಸಿನಿಯ ಕೃಪೆಯಿಂದಲೂ, ಪ್ರಾಣನಾಥ ಪ್ರಭುಗಳ ಅನುಗ್ರಹದಿಂದಲೂ ನಿನ್ನ ಆ ಸಂಕಲ್ಪವು ಪೂರ್ಣವಾಗುವದು! ಅಪೋ! ನೋಡು, ಅಲ್ಲಿ ಯವನರ ಸೇನೆಯಮೊಂದು ಗುಂಪು ಇತ್ತಕಡೆಗೆ ಸಾಗಿ ಬರುತ್ತಿರುವದು. ನಿನ್ನ ತಾಯಿಯ ಸಂರಕ್ಷಣದ ಭಾರವನ್ನು ನಿನ್ನ ತಲೆಯಮೇಲೆ ಹೊರಿಸುವೆನು. ನಾನು ಕಟ್ಟಕಡೆಯ ಭಯಂಕರ ಸಂಗ್ರಾಮವನ್ನು ಮಾಡಲೇಬೇಕಾಗಿರುವದು. ಛತ್ರಸಾಲ, ದಲಪತ, ಇನ್ನು ಯುದ್ಧಕ್ಕಾಗಿ ನನಗೆ ಅನುಮತಿಕೊಡಿರಿ! ದೇವರು ನಿಮಗೆ ಕಲ್ಯಾಣ ಮಾಡಲಿ!"

ಈಮೇರೆಗೆ ನುಡಿದು ಚಂಪತರಾಯನು ಆ ಯವನರ ಗುಂಪನ್ನು ತ್ವೇಷದಿಂದ ನೋಡುತ್ತ ಅದರಮೇಲೆ ಬೀಳುವದಕ್ಕಾಗಿ ಹೋಗುತ್ತಿರಲು,

ಛತ್ರಸಾಲನು ಅತನನ್ನು ತಡೆದು—"ಅಪ್ಪಾ, ಇನ್ನೂ ತಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳಲಿಕ್ಕೆ ಬರುವಹಾಗಿರುವದು; ಆದ್ದರಿಂದ ಬುದ್ಧಿಪೂರ್ವಕವಾಗಿ ಬೆಂಕಿಯಲ್ಲಿ ಹಾರಿಕೊಳ್ಳಬಾರದು." ಎಂದು ಹೇಳುತ್ತಿರಲು, ಚಂಪತರಾಯನು—"ಛತ್ರಸಾಲ, ನಾನು ಬದುಕುವದಕ್ಕಿಂತ ಸಾಯುವದರಿಂದಲೇ ಬುಂದೇಲಖಂಡದ ಕಲ್ಯಾಣವು ಸಾಧಿಸುವಹಾಗಿದೆ! ಬುಂದೇಲಿಗಳ ಮನಸ್ಸನ್ನು ಸುಡುತ್ತಿರುವ ಮಾತ್ಸರ್ಯಾಗ್ನಿಯು, ನಾನು ಸಾಯುವದರಿಂದಲೇ ಶಾಂತವಾಗುವದು. ಸ್ವಾತಂತ್ರ್ಯವೆಂದರೆ ಚಂಪತರಾಯನೆಂದು ಒಹುಜನ ಬುಂದೇಲಿಗಳು ತಿಳಿದಿರುವದರಿಂದ, ನನ್ನನ್ನು ಮತ್ಸರಿಸುವ ನೆವದಿಂದ ಅವರು ಸ್ವಾತಂತ್ರ್ಯ ದೇವಿಯನ್ನು ಮತ್ಸರಿಸುವರು; ಆದ್ದರಿಂದ ಪರತಂತ್ರ, ದೇಶಹಿತಕ್ಕಾಗಿ ಈಗ ನಾನು ಸಾಯಲೇಬೇಕಾಗಿರುವದು! ನಾನು ಸತ್ತರೆ ನೀನು ಇರುವೆಯಲ್ಲ, ಅಂದ ಬಳಿಕ ಬುಂದೇಲದ ಸ್ವಾತಂತ್ರ್ಯದ ಚಿಂತೆ ನನಗೇಕೆ? ಛತ್ರಸಾಲ, ಈಗ ನಾನು ಸಮರಾಂಗಣದಲ್ಲಿ ವೀರೋಚಿತವಾದ ಮರಣವನ್ನು ಹೊಂದುವದೇ ಯೋಗ್ಯವಾಗಿರುವದು; ಬುಂದೇಲದ ಈ ಪಾರತಂತ್ರ್ಯದ ನರಕದಲ್ಲಿರುವದು ನನಗೆ ಬೇಸರಿಟ್ಟಿದೆ. ಹೋಗು, ನಿನ್ನ ತಾಯಿಯ ಸಂರಕ್ಷಣದ ಕಾರ್ಯವನ್ನು ಮನಃಪೂರ್ವಕವಾಗಿಮಾಡು ನಡೆ!" ಎಂದು ಹೇಳಿ ಯವನ ಸೈನ್ಯದ ಮೇಲೆ ಬಿದ್ದನು. ದಲಪತರಾಯನು ಮನಃಪೂರ್ವಕವಾಗಿ ಅತನಿಗೆ ಸಹಾಯ ಮಾಡತೊಡಗಿದನು. ಛತ್ರಸಾಲನು ತನ್ನ ತಾಯಿಯ ಸಂರಕ್ಷಣವನ್ನು ದಕ್ಷತೆಯಿಂದ ಮಾಡತೊಡಗಿದನು.

ಚಂಪತರಾಯನ ಅಂದಿನ ಶೌರ್ಯವು ಅವರ್ಣನೀಯವಾದದ್ದು. ನಾಲ್ಕೂ ಕಡೆಯಿಂದ ಶತ್ರುಗಳು ಅತನನ್ನು ಮುತ್ತಿದ್ದರು. ಹಲವು ಗಾಯಗಳಾದದ್ದರಿಂದ ಅತನ ದೇಹದಿಂದ ರಕ್ತವು ಸುರಿಯುತ್ತಿತ್ತು; ಆದರೂ ಅತನ ಖಡ್ಗವು ತನ್ನ ಸಂಹಾರದ ಕಾರ್ಯವನ್ನು ಮಾಡುತ್ತಲೇ ಇತ್ತು. ಅತನು ಹಲವು ಯವನವೀರರನ್ನು ಕೊಂದನು. ಮೂರುತಾಸುಗಳವರೆಗೆ ಚಂಪತರಾಯನು ಯುದ್ಧಮಾಡಿದನು. ಅತನ ಅತುಲ ಪರಾಕ್ರಮವನ್ನು ಶತ್ರುಗಳು ಹೊಗಳಹತ್ತಿದರು. ಕಟ್ಟಕಡೆಯ ಯುದ್ಧದಲ್ಲಿ ತಾನು ಚನ್ನಾಗಿ ಪರಾಕ್ರಮವನ್ನು ತೋರಿಸಿದೆನೆಂಬ ಸಮಾಧಾನವು ಅತನಿಗಾಯಿತು; ಆದರೆ, ಮೈಯೊಳಗಿಂದ ಒಂದೇಸವನೆ ರಕ್ತಹೋಗಹತ್ತಿದ್ದರಿಂದ, ಚಂಪತ

ರಾಯನು ಮೆಲ್ಲಮೆಲ್ಲನೆ ಕಸುವುಗೆಡತೊಡಗಿದನು! ಸ್ವಲ್ಪಹೊತ್ತಿನಲ್ಲಿ ಆತನಿಗೆ ಮೂರ್ಛೆ ಬರತೊಡಗಿತು. ಈ ಸಂಧಿಯನ್ನು ಸಾಧಿಸಿ ಆತನ ಬಳಿಯಲ್ಲಿರುವ ನಾಲ್ವರು ಯವನರು ಆತನ ಮೇಲೆಬಿದ್ದರು. ಆ ಸ್ಥಿತಿಯಲ್ಲಿಯೂ ಚಂಪತರಾಯನು ಮೂವರನ್ನು ನೆಲಕ್ಕುರುಳಿಸಿದನು; ಆದರೆ ನಾಲ್ಕನೆಯವನ ಹೊಡತನನ್ನು ತಪ್ಪಿಸಿಕೊಳ್ಳುವದು ಆತನಿಂದ ಆಗಲಿಲ್ಲ! ಆತನು ವೀರಮರಣೋನ್ಮುಖನಾಗಿ ವೀರರಿಗೆ ಉಚಿತವಾದ ಹಾಸಿಗೆಯಮೇಲೆ ಮಲಗಿದನು. "ರಾಜಾ ಚಂಪತರಾಯನು ಬಿದ್ದನು! ಮಹೋಬದ ಅರಸನು ಬಿದ್ದನು!" ಎಂದು ಎಲ್ಲಕಡೆಗೆ ಗುಲ್ಲುಆಯಿತು. ಅತ್ತ ದಳಪತರಾಯನು ಒಬ್ಬ ಯವನ ವೀರನನ್ನು ಸಂಹರಿಸುವದಕ್ಕಾಗಿ ಖಡ್ಗವೆತ್ತಿರಲು, ಈ ಸುದ್ದಿಯನ್ನು ಕೇಳಿ ಆತನು ಬೇಗನೆ ಚಂಪತರಾಯನನ್ನು ಹುಡುಕುತ್ತ ಬಂದನು. ರಕ್ತದಲ್ಲಿ ಮುಣುಗಿ ಮರಣೋನ್ಮುಖನಾಗಿ ಬಿದ್ದಿರುವ ಚಂಪತರಾಯನನ್ನೂ, ಆತನ ಬಳಿಯಲ್ಲಿ ಶಸ್ತ್ರಧಾರಿಯಾಗಿ ನಿಂತಿದ್ದ ತನ್ನ ತಂದೆಯಾದ ಸಭಾಕರಣನನ್ನೂ ಆತನು ನೋಡಿದನು. ತನ್ನ ತಂದೆಯೇ ಚಂಪತರಾಯನನ್ನು ಕೆಡಹಿದನೆಂದು ತಿಳಿದು, ದಳಪತರಾಯನು ತ್ವೇಷದಿಂದ ತನ್ನ ತಂದೆಯಮೇಲೆ ಶಸ್ತ್ರವೆತ್ತಿದನು. ಆಗ ಚಂಪತರಾಯನು ಕ್ಷೀಣಸ್ವರದಿಂದ-"ದಳಪತ, ಕೈಬಿಗಿಹಿಡಿ; ಕಾರಣವಿಲ್ಲದೆ ತಂದೆಯನ್ನು ಸಂಹರಿಸಿ ನರಕದ ಹಾದಿಯನ್ನು ಹಿಡಿಯಬೇಡ! ಈ ಮೊದಲೆ ನಿನಗೆ ಮಾಡಿದ ಉಪದೇಶವನ್ನು ಇಷ್ಟರಲ್ಲಿಯೇ ಮರೆತುಬಿಟ್ಟಿಯಾ? ಸ್ವಜನರೊಡನೆ ಯುದ್ಧಮಾಡಬಾರದೆಂಬ ನನ್ನ ಕಟ್ಟಕಡೆಯ ಉಪದೇಶವನ್ನು ನೀನು ಮರೆತುಬಿಟ್ಟಿಯೇನು." ಎಂದು ಕೇಳುತ್ತಿರಲು, ದಳಪತರಾಯನು ಎತ್ತಿದ ಶಸ್ತ್ರವನ್ನು ಹಿಂದಕ್ಕೆ ತಕ್ಕೊಳ್ಳದೆ ಸಂತಪ್ತಮುದ್ರೆಯಿಂದ—

ದಳಪತ—ಈ ಸಭಾಕರಣನು ನಿಮ್ಮನ್ನೇಲೆ ಶಸ್ತ್ರಪ್ರಯೋಗ ಮಾಡಲಿಲ್ಲವೆ?

ಸಭಾಕರಣ—ಇಲ್ಲ, ಅಷ್ಟುಪುಣ್ಯವನ್ನು ನಾನು ಮಾಡಿರುವದಿಲ್ಲ! ಚಂಪತರಾಯನು ಈ ಅರಣ್ಯದಲ್ಲಿರುವನೆಂಬದನ್ನು ಕೇಳಿ, ನನ್ನ ಪ್ರತಿಜ್ಞೆಯನ್ನು ಕೊನೆಗಾಣಿಸುವದಕ್ಕಾಗಿ ಇಲ್ಲಿಗೆ ಓಡಿಬಂದೆನು; ಆದರೆ ಹಲವು ಶಸ್ತ್ರಗಳಿಂದ ಛಿನ್ನವಿಚ್ಛಿನ್ನವಾಗಿರುವ, ಈ ಚಂಪತರಾಯನು ನನ್ನಕಣ್ಣಿಗೆ

ಬಿದ್ದನು. ಇನ್ನು ಈತನ ಅಂತಕಾಲದ ವ್ಯಥೆಯನ್ನು ನೋಡಿಯೇ ನಾನು ಸಮಾಧಾನ ಪಡಬೇಕಾಗಿರುವದು.

ಚಂಪತರಾಯ (ಕಷ್ಟದಿಂದ)—ದಳಪತರಾಯ, ಸಭಾಕರಣನು ಆಡುವ ಮಾತು ಸತ್ಯವಾದದ್ದು. ಆತನು ನನ್ನ ಮೇಲೆ ಶಸ್ತ್ರವೆತ್ತಲಿಲ್ಲ; ಶಸ್ತ್ರವನ್ನು ಹಿಂದಕ್ಕೆ ತೆಗೆದುಕೋ. ವ್ಯರ್ಥವಾಗಿ ಪಿತೃವಧವನ್ನು ಮಾಡಬೇಡ.

ದಳಪತರಾಯನು ಶಸ್ತ್ರವನ್ನು ಒರೆಗಾಣಿಸಿ ಚಂಪತರಾಯನ ತಲೆಯನ್ನು ತನ್ನ ತೊಡೆಯಮೇಲೆ ಇಟ್ಟುಕೊಂಡು ಆತನಿಗೆ ಗಾಳಿಯ ಹಾಕ ಹತ್ತಿದನು. ಇದರಿಂದ ಚಂಪತರಾಯನ ಅಂತಕಾಲದ ವ್ಯಥೆಯು ಕಡಿಮೆಯಾಗುವದೆಂದು ಆತನು ತಿಳಿದಿದ್ದನು. ಚಂಪತರಾಯನು ಬಿದ್ದಸುದ್ದಿಯನ್ನು ತಿಳಿಸುವದಕ್ಕಾಗಿ ಯವನಸೈನಿಕರು ನಾಮುಂದೆ ನೀಮುಂದೆ ಅನ್ನುತ್ತ ಬಾದಶಹನ ಛಾವಣಿಯಕಡೆಗೆ ಓಡಹತ್ತಿದರು. ತನ್ನ ತಾಯಿಯನ್ನು ಕರಕೊಂಡು ತನ್ನ ತಂದೆಯಬಳಿಗೆ ಬರಲಿಕ್ಕೆ ಛತ್ರಸಾಲನ ಹಾದಿಯು ತೆರವಾಯಿತು. ಆತನು ಸ್ವಲ್ಪವೇಳೆಯಲ್ಲಿಯೇ ಹೆಣಗಳನ್ನು ತುಳಿಯುತ್ತ ಸರಲಾದೇವಿಯೊಡನೆ ತನ್ನತಂದೆಯ ಒಳಗೆ ಬಂದನು. ಸರಲಾದೇವಿಯ, ಹಾಗು ಛತ್ರಸಾಲನ ಮನೋ ಧೈರ್ಯವನ್ನು ಪರೀಕ್ಷಿಸುವ ಪ್ರಸಂಗವು ಆಗಿನದಾಗಿತ್ತು! ಚಂಪತರಾಯನು ಮರಣಕಾಲದ ಕಷ್ಟದಿಂದ ಚಡಪಡಿಸುವದನ್ನು ನೋಡಿ ಅವರ ಅಂತಃಕರಣಗಳು ಶೋಕದಗ್ಧವಾದವು; ಆದರೆ ಅವರು ಕಣ್ಣೀರ ಒಂದು ಹನಿಯನ್ನಾದರೂ ಹೊರಬೀಳಗೊಡಲಿಲ್ಲ; ಬಾಯಿಂದ ಒಂದು ಮಃಖೋದ್ಗಾರವನ್ನೂ ಹೊರಗೆಡವಲಿಲ್ಲ! ಚಂಪತರಾಯನ ಈ ಶೋಚನೀಯ ಅವಸ್ಥೆಯನ್ನು ನೋಡಿ ಸಭಾಕರಣನಿಗೆ ಒಂದುಕ್ಷಣ ತನ್ನ ಪ್ರತಿಜ್ಞೆಯ ಮರವಾಯಿತು. ಆ ಅವಸರದಲ್ಲಿ ಆತನಿಗೆ ಹುಡುಗರಾಗಿದ್ದಾಗಿನ ತಮ್ಮಿಬ್ಬರ ಗೆಳೆತನದ ರೀತಿಯೂ, ತಾವಿಬ್ಬರೂ ಬುಂದೇಲದ ಸ್ವಾತಂತ್ರ್ಯಕ್ಕಾಗಿ ಮೊಗಲರೊಡನೆ ಹೊಡೆದಾಡಿದ ಪ್ರಸಂಗಗಳೂ ನೆನಪಾಗಿ, ಆತನು ದುಃಖಿಸತೊಡಗಿದನು! ತನ್ನ ಮಿತ್ರನೊಬ್ಬನು ಇಹಲೋಕದ ಯಾತ್ರೆಯನ್ನು ಮುಗಿಸಿ ಹೊರಟನೆಂಬ ದುಃಖದಿಂದ ಆತನ ಕಣ್ಣುಗಳಿಂದ ನೀರುಗಳು ಸುರಿಯಹತ್ತಿದವು; ಆ ಕಣ್ಣೀರ ಎರಡು ಹನಿಗಳು ಚಂಪತರಾಯನ ಮುಖದ ಮೇಲೆ ಬೀಳಲು, ಚಂಪತರಾಯನು ತೀರ ಕ್ಷೀಣ ಸ್ವರದಿಂದ—

"ಛತ್ರಸಾಲ, ನೀನು ನನ್ನ ಸಲುವಾಗಿ ಅಳುವೆಯಾ? ಸರಲೇ, ನೀನು ನನ್ನ ಸಲುವಾಗಿ ಕಣ್ಣೀರು ಹಾಕುವೆಯಾ? ಛೇ ಛೆ! ನನ್ನ ಛತ್ರಸಾಲನೂ, ನನ್ನ ಸರಲೆಯೂ ನನ್ನ ಅಪ್ಪಣೆಯನ್ನು ಮೀರಲಾರರು" ಎಂದು ಸುಡಿದು ಚಂಪತರಾಯನು ಬಹು ಕಷ್ಟದಿಂದ ಕಣ್ಣುತೆರದು ನೋಡಲು, ಸಭಾಕರಣನು ಕಣ್ಣೀರು ಸುರಿಸುತ್ತ ನಿಂತುಕೊಂಡಿದ್ದನು. ಅದನ್ನು ನೋಡಿ ಚಂಪತರಾಯನ ಮುಖದ ಪ್ರೇತಕಳೆಯಲ್ಲಿ ಆಶ್ಚರ್ಯದ ಚಿಹ್ನವು ತೋರಹತ್ತಿತು. ಆತನು ಅತ್ಯಂತ ಕ್ಷೀಣ ಸ್ವರದಿಂದ— "ಸಭಾಕರಣನು ನನ್ನ ಸಲುವಾಗಿ ಶೋಕಮಾಡುತ್ತಿರುವನು! ನಾನು ಸಾಯುವೆನೆಂದು ಸಭಾಕರಣನು ದುಃಖ ಮಾಡುತ್ತಿರುವನೇನು?" ಎಂದು ಸುಡಿಯಲು, ರಣಧೀರ ಸಭಾಕರಣನು ಬಿಕ್ಕಿಬಿಕ್ಕಿ ಅಳತೊಡಗಿದನು. ಆಗ ಚಂಪತರಾಯನು—

ಚಂಪತರಾಯ—ಸಭಾಕರಣ! ದುಃಖಿಸಬೇಡ. ನನ್ನ ಅಂತಕಾಲದಲ್ಲಾದರೂ ನಿನ್ನ ಮನಸ್ಸು ನನ್ನ ವಿಷಯವಾಗಿ ನಿಷ್ಕಲಂಕವಾದದ್ದನ್ನು ನೋಡಿ ನನಗೆ ಸಮಾಧಾನವಾಗುವದು.

ಸಭಾಕರಣ (ದುಃಖವನ್ನು ನುಂಗಿಕೊಂಡು)—ಚಂಪತರಾಯ, ಸಭಾಕರಣನು ಸುಳ್ಳು ಆಡುವದಿಲ್ಲ. ನಿನ್ನ ಸಲುವಾಗಿ ನನ್ನ ಮನಸ್ಸು ನಿಷ್ಕಲಂಕವಾಗಿರುವದಿಲ್ಲ. ವ್ಯರ್ಥವಾಗಿ ಸಮಾಧಾನಪಡಬೇಡ. ಚಿಕ್ಕಂದಿನ ನಮ್ಮಿಬ್ಬರ ಪ್ರೇಮದ ನೆನಪಾಗಿ ನನಗೆ ದುಃಖವಾಯಿತಿಷ್ಟೆ!

ಚಂಪತರಾಯ—ಸಭಾಕರಣ, ಈವರೆಗೂ ನಿನ್ನ ಮನಸ್ಸು ನಿಷ್ಕಲಂಕವಾಗದಂತಹ ಅಪರಾಧವನ್ನು ನಾನೇನು ಮಾಡಿದ್ದೇನೆ?

ಸಭಾಕರಣ—ಚಂಪತರಾಯ, ಆ ಘೋರ ಪಾತಕದ ನೆನಪನ್ನು ನಿನ್ನ ಅಂತಕಾಲದಲ್ಲಿ ನಾನು ಮಾಡಿಕೊಡಲೇಬೇಕು, ಅಂದರೆ ಪಶ್ಚಾತ್ತಾಪದಿಂದ ಅಂತಕಾಲದಲ್ಲಿ ನಿನ್ನ ಹೃದಯವು ಸುಟ್ಟು ಶುದ್ಧವಾಗಿ ನೀನು ನೆಟ್ಟಗೆ ಸ್ವರ್ಗಕ್ಕೆ ಹೋದೀ! ಚಂಪತರಾಯ, ಲಲಿತೆಯೆಂಬ ಸಾಗರದ ರಾಜಕನ್ಯೆಯು, ನನ್ನ ತಂಗಿಯು ಒಬ್ಬಳಿದ್ದಳೆಂದು ನಿನ್ನ ನೆನಪಿನಲ್ಲಿರುವಮೋ?

ಚಂಪತರಾಯ—ಆ ಸೌಂದರ್ಯಶಾಲಿನಿಯ ಮರವು ನನಗೆ ಹೇಗಾದೀತು?

ಸಭಾಕರಣ—ಆ ಲಲಿತೆಯು ಆತ್ಮಹತ್ಯಮಾಡಿಕೊಂಡಳು! ಅದಕ್ಕೆ ನಿನ್ನ ಅನೀತಿಯ ಆಚರಣವೇ ಕಾರಣವು!

ಇವನ್ನು ಕೇಳಿ ಚಂಪತರಾಯನ ಮುಖದಲ್ಲಿಯ ಪ್ರೇತಕಳೆಯಲ್ಲಿ ಆಶ್ಚರ್ಯದ, ಹಾಗು ದುಃಖದ ಚಿಹ್ನಗಳು ತೋರಹತ್ತಿದವು. ಆತನು ಅತ್ಯಂತ ಕ್ಷೀಣ ಸ್ವರದಿಂದ—

ಚಂಪತರಾಯ — ಸಭಾಕರಣ, ಚಂಪತರಾಯ - ಲಲಿತೆಯರಲ್ಲಿಯ ಪ್ರೇಮವು ಅಣ್ಣತಂಗಿಯರದಾಗಿತ್ತು. ಲಲಿತೆಯು ನನ್ನ ತಂಗಿಯು ತನ್ನ ತಂಗಿಯ ಸಲುವಾಗಿ, ಹಾಗು ತನ್ನ ಮಿತ್ರನ ಸಲುವಾಗಿ ಹೀಗೆ ಅಪಮಾನ ಹೊರಿಸುವ ಸಭಾಕರಣನ ಬಾಳಿಗೆ ಧಿಕ್ಕಾರವು! ಸಭಾಕರಣಾ, ಸುಮ್ಮನೆ ಇಲ್ಲದ ಸಂಶಯಕ್ಕೆ ಗುರಿಯಾಗಿ ದೇಶಕಾರ್ಯಕ್ಕೆ ಎರವಾದೆ! ಇನ್ನಾದರೂ ಎಚ್ಚರಪಡು!

ಚಂಪತರಾಯನ ಈ ಮಾತುಗಳನ್ನು ಕೇಳಿ ಸಭಾಕರಣನ ಮೋರೆಯು ಕಪ್ಪಿಟ್ಟಿತು! ಆತನ ಕಣ್ಣೀರುಗಳು ದಳದಳಇಳಿಯುತ್ತಿರಲು, "ಈಮಾತು ನನಗೆ ಮೊದಲೇ ಗೊತ್ತಾಗಲಿಲ್ಲವಲ್ಲ"ಎಂದು ಆತನು ದುಃಖಿಸತೊಡಗಿದನು. ಇತ್ತ ಚಂಪತರಾಯನ ಆತ್ಮವು ಇಹಲೋಕವನ್ನು ಬಿಟ್ಟು ಹೊರಟುಹೋಯಿತು. ಆತನು ತನ್ನ ಕಟ್ಟಕಡೆಯ ದೃಷ್ಟಿಯನ್ನು ತನ್ನ ಹೆಂಡತಿಯ ಮೇಲೆ, ತನ್ನ ಮಗನಮೇಲೆ, ತನ್ನ ಬಾಲಮಿತ್ರನ ಮೇಲೆ, ಕರ್ತವ್ಯದಕ್ಷ ದಳಪತರಾಯನಮೇಲೆ ಹೊರಳಿಸಿ, ಸ್ವರ್ಗಕ್ಕೆ ತೆರಳಿದನು! ಸರಲಾದೇವಿ-ಛತ್ರಸಾಲರ ಶೋಕಧ್ವನಿಯು ದಿಗಂತವನ್ನು ವ್ಯಾಪಿಸುತ್ತಿರಲು, ಅದರಲ್ಲಿ ಸಭಾಕರಣನ ದುಃಖಧ್ವನಿಯೂ ಬೆರೆತು ಆ ತೇಜಸ್ವಿಗಳಾದ ಕ್ಷತ್ರಿಯರ ಪರಿವಾರವು ಪರಸ್ಪರ ಪುನಃಕಾರಣದಿಂದ ಬದ್ಧವಾಯಿತು! ಸತ್ಯಸಂಧನಾದ ಚಂಪತರಾಯನ ಒಂದೇ ಒಂದು ಮಾತಿನಿಂದ ಸಭಾಕರಣನ ಸಂಶಯನಿವೃತ್ತಿಯಾಗಿ, ಚಂಪತರಾಯನ ಪರಿವಾರವನ್ನು ಆತನು ತನ್ನದೆಂದು ಭಾವಿಸತೊಡಗಿದನು! ಸತ್ಯಸಂಧತೆಯೇ, ನಿನ್ನ ಪ್ರಭಾವವು ದೊಡ್ಡದು!

೧೫ನೆಯ ಪ್ರಕರಣ-ಸಾಧ್ವೀ ಸುಫಲಾದೇವಿ.

ಹೀಗೆ ಬುಂದೇಲಖಂಡವ ಸ್ವಾತಂತ್ರ್ಯ ರವಿಯು ಅಸ್ತಂಗತನಾದದ್ದ ರಿಂದ, ಪಾರತಂತ್ರ್ಯವ ಕಗ್ಗತ್ತಲೆಯು ಬುಂದೇಲಖಂಡವನ್ನೆಲ್ಲ ವ್ಯಾಪಿಸಿತು. ಚಂಪತರಾಯನಂಥ ಸ್ವಾತಂತ್ರ್ಯಪ್ರಿಯ ಕ್ಷತ್ರಿಯ ವೀರನೊಬ್ಬನು ಮಹೋ ಬದ ರಾಜ್ಯದಲ್ಲಿಯಿನುಗುತ್ತಿರ್ಪ್ಪರ್ದ್ದರಿಂದ, ಬುಂದೇಲಖಂಡವನ್ನು ಸ್ವಾತಂತ್ರ್ಯ ದ ಅಲ್ಪಸ್ವಲ್ಪ ಪ್ರಕಾಶವಾದರೂ ಬೆಳಗುತ್ತಲಿತ್ತು; ಅದರಿಂದ ಔರಂಗ ಜೀಬನಂಥ ಮಹತ್ವಾಕಾಂಕ್ಷಿ-ಧರ್ಮಮೂಢನು, ಇದಿಷ್ಟು ಪ್ರಕಾಶವನ್ನು ಅಡಗಿಸಿ ಬುಂದೇಲಖಂಡವನ್ನು ಪಾರತಂತ್ರ್ಯದ ಕತ್ತಲೆಯಲ್ಲಿ ಮುಣುಗಿಸಿ ಬಿಟ್ಟರೆ, ತನ್ನ ಸಾರ್ವಭೌಮಾಧಿಕಾರವು ಅಷ್ಟರ ಮಟ್ಟಿಗೆ ನಿಷ್ಕಂಟಕವಾ ಗುವದೆಂದು ಎಣಿಕೆಹಾಕುತ್ತಿರ್ವ್ವನು. ತನ್ನ ದಿಲ್ಲಿಯ ಇಷ್ಟು ಸನಿಯದಲ್ಲಿ ರುವ ಬುಂದೇಲಖಂಡವಲ್ಲಿ ಬುಂದೇಲಿಗಳಂಥ ಕಾಟಕ ಕ್ಷತ್ರಿಯರು ಸ್ವತಂತ್ರ ರಾದರೆ, ಅವರು ತನಗೆ ಬೆಳತನಕ ನಿದ್ದೆಮಾಡಗೊಡಲಿಕ್ಕಿಲ್ಲವೆಂಬ ಮಾತು ಆತನಿಗೆ ಚನ್ನಾಗಿ ಗೊತ್ತಿದ್ದಿತು; ಆದ್ದರಿಂದಲೇ ಅಂತಹ ಉಪಕಾರಮಾ ಡಿದ ಚಂಪತರಾಯನ್ನಹಾಗು ಛತ್ರಸಾಲನ ಬೇಡಿಕೆಯನ್ನು, ತಾನು ವಚನ ಭ್ರಷ್ಟನಾಗುವೆನೆಂಬವರ ಎಚ್ಚರವಿಲ್ಲದೆ ನೆರೆದ ದರ್ಬಾರದಲ್ಲಿ ಆತನು ತಿರ ಸ್ಕರಿಸಿದನು! ಅಂತಹ ಕುಟಿಲ ನೀತಿಯ ಬಾದಶಹನಿಗೆ ಚಂಪತರಾಯನ ಮರಣದಿಂದ ಸಮಾಧಾನವಾದದ್ದು ಆಶ್ಚರ್ಯವಲ್ಲ; ಆದರೂ ಆ ಶೂರ ಬಾದಶಹನು ಚಂಪತರಾಯನ ಗುಣಗಳನ್ನೂ, ತನ್ನ ಸಿಂಹಾಸನ ಸ್ಥಾಪ್ತಿ ಯಲ್ಲಿ ಆತನಿಂದ ತನಗಾದ ಮಹತ್ವದ ಸಹಾಯವನ್ನೂ ನೆನಿಸದೆ ಇರಲಿಲ್ಲ; ಅದಕ್ಕಾಗಿ ಆ ಕುಟಿಲ ರಾಜಕಾರಣ ಪಟುವಿಗೆ ಕ್ಷಣಕಾಲ ದುಃಖವೂ ಆಗಿರಬ ಹುದು; ಯಾಕಂದರೆ ವೀರರ ಯೋಗ್ಯತೆಯನ್ನು ವೀರರು ತಿಳಿಯದೆ ಹೋಗುವದಿಲ್ಲ. ತನ್ನ ದರ್ಬಾರದಲ್ಲಿಯ ಚಂಪತರಾಯನ ತೇಜಸ್ವಿತೆಯ ಭಾಷಣವು ಈ ಕಾಲದಲ್ಲಿ ಬಾದಶಹನಿಗೆ ನೆನಪಾಯಿತು! ಅಂತಹ ಸ್ವಾತಂ ತ್ರ್ಯಪ್ರಿಯ ರಾಜನನ್ನು ತಾನು ಇಷ್ಟು ಅಟ್ಟಹಾಸಮಾಡಿ ನಾಶಮಾಡಿದ್ದ ಕ್ಕಾಗಿ ಸ್ವಲ್ಪ ಪಶ್ಚಾತ್ತಾಪವೂ ಆತನಿಗಾಯಿತು; ಆದರೆ ಚಂಪತರಾಯನ ಮರಣದಿಂದ ತಾನು ನಿಶ್ಚಿಂತನಾದೆನೆಂಬ ಆನಂದವನ್ನು ಅಲಂಕರಿಸುವ ಮಟ್ಟಿಗೆ ಚಂದ್ರಕಲೆಯಂತೆ ಬಾದಶಹನ ಈ ದುಃಖ : ಪಶ್ಚಾತ್ತಾಪಗಳಿದ್ದ

ವಲ್ಲದೆ, ಅವು ನಿಜವಾಗಿಯೂ ಚಂಪತರಾಯನ ಸಹಾನುಭೂತಿಯನ್ನು ತೋರಿಸತಕ್ಕಂತಹವಿದ್ದಿಲ್ಲವೆಂದು ಹೇಳಬಹುದು; ಅಂತೇ ಆ ದುಷ್ಟ ಬಾದಶಹನು ಚಂಪತರಾಯನ ಮಗ ಛತ್ರಸಾಲನನ್ನು ಸೆರೆಹಿಡಿದು ತನ್ನ ಕಡೆಗೆ ಕಳಿಸಬೇಕೆಂದು ಹೀರಾದೇವಿಯನ್ನು ಆಜ್ಞಾಪಿಸಿದನು.

ಚಂಪತರಾಯನ ಮರಣಕ್ಕಾಗಿ ಹೀಗೆ ಬಾದಶಹನಷ್ಟು ದುಃಖ-ಪಶ್ಚಾತ್ತಾಪಪಡುವಷ್ಟು ಪಾತ್ರತೆಯೂ ಹೀರಾದೇವಿಯಲ್ಲಾಗಲಿ, ಕಂಚುಕಿರಾಯನಂಥ ಬುಂದೇಲಖಂಡದ ಹೇಡಿ ಅರಸರಲ್ಲಾಗಲಿ ಇದ್ದಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು! ಅವರು ಚಂಪತರಾಯನ ಮರಣಕ್ಕಾಗಿ ಪರಮಾನಂದಪಟ್ಟು, ತಮ್ಮ ಶ್ರಮವು ಸಾರ್ಥಕವಾಯಿತೆಂದು ತಮ್ಮತಮ್ಮೊಳಗೆ ಕೃತಕೃತ್ಯರಾದರು! ಆದರೆ ಸುಫಲಾದೇವಿಯಂಥ ಸ್ವಾತಂತ್ರ್ಯಪ್ರಿಯ ಸ್ತ್ರೀಯರಿಗೆ ಮಾತ್ರ ಚಂಪತರಾಯನ ಮರಣದಿಂದ ಅತ್ಯಂತ ವ್ಯಸನವಾಯಿತು. ಇಂದಿಗೆ ಬುಂದೇಲಖಂಡದ ಸ್ವಾತಂತ್ರ್ಯತಂತುವೇಹರಿದುಹೋಯಿತೆಂತಲೂ, ಸ್ವಾತಂತ್ರ್ಯ ರವಿಯ ಸಂಧಿಪ್ರಕಾಶದಂತಹ ಮಂದಪ್ರಕಾಶವೂ ಬುಂದೇಲಖಂಡದ ಪಾಲಿಗೆ ಇಲ್ಲದ ಹಾಗಾದದ್ದರಿಂದ, ನಾವೆಲ್ಲರೂ ಪಾರತಂತ್ರ್ಯದ ಕತ್ತಲೆಯಲ್ಲಿ ಮುಣುಗಿಹೋದೆವೆಂತಲೂ ಅವರು ವ್ಯಸನಪಡತೊಡಗಿದರು. ಸುಫಲಾದೇವಿಗೆ ಈ ದುಷ್ಟವಾರ್ತೆಯನ್ನು ಕೇಳಿದಾಗಿನಿಂದ ಏನೂ ಬೇಡಾಯಿತು. ಆಕೆಯು ತೀರಾ ಉದಾಸೀನಳಾದಳು. ಆ ವಂದನೀಯ ಸತಿಯು ಕಂಚುಕಿರಾಯನಂಥ ಅಧಮ ಕ್ಷತ್ರಿಯನ ಕೈಯನ್ನು ಹಿಡಿದಿದ್ದರೂ, ತನ್ನ ಸದ್ಗುಣಗಳ ಯೋಗದಿಂದ ಪತಿಯ ದೋಷಗಳ ದುಷ್ಪರಿಣಾಮವು ತನ್ನ ರಾಜ್ಯದ ಮೇಲೆ ಆಗಗೊಡದಷ್ಟು ಆಕೆಯು ತೇಜಸ್ವಿಯಾಗಿದ್ದಳು. ತನ್ನ ಧಾರೀರದ ರಾಜ್ಯದ ಸ್ವಾಮಿನಿಷ್ಠ ಮಂತ್ರಿಯಾದ ಸಜ್ಜನರಾಯನ ಸಹಾಯದಿಂದ ರಾಜ್ಯಸೂತ್ರಗಳನ್ನು ಸರಿಯಾಗಿ ಸಾಗಿಸಿ, ತನ್ನ ಪ್ರಜೆಗಳ ಅಧಃಪತನವಾಗದಂತೆ ಆಕೆಯು ಮಾಡಿದ್ದಳು. ಕಂಚುಕಿರಾಯನು ನಾಮಧಾರಿ ರಾಜನು; ಸಿಂಹಾಸನವನ್ನು ಪ್ರಸಂಗವಶಾತ್ ಅಲಂಕರಿಸುವನು ಅವನ ಕೆಲಸವಾಗಿತ್ತು; ಆದರೆ ಅಂಥವನ ಹುಳಕೂ ಸುಫಲಾದೇವಿಯ ಪುಣ್ಯದಿಂದ ಮುಚ್ಚಿಹೋಗಿತ್ತು. ಇಂಥ ಪುಣ್ಯವಂತ ಸುಫಲಾದೇವಿಯು ಒಂದುದಿನ ರಾತ್ರಿ ಚಂಪತರಾಯನ ಮರಣದಿಂದಾದ ಬುಂದೇಲಖಂಡದ ಹಾನಿಯನ್ನು ಕುರಿತು

ವಿಚಾರಿಸುತ್ತ, ತನ್ನ ಮಗಳಾದ ವಿಜಯೆಯೊಡನೆ ಉಪವನದಲ್ಲಿ ಕುಳಿತಿದ್ದಳು. ವಿಜಯೆಗಂತು ಚಂಪತರಾಯನ ಮರಣದಿಂದ ಹೇಳಕೂಡದಷ್ಟು ದುಃಖವಾಗಿತ್ತು. ತಾನು ವಿಷಪ್ರಯೋಗದ ಸುದ್ದಿಯನ್ನು ಆ ಪ್ರತಾಪಿ ಚಂಪತರಾಯನಿಗೆ ತಿಳಿಸಿದಾಗ ವ್ಯಕ್ತವಾದ ಅತನ ದೊಡ್ಡಿಸ್ಮಿಕೆಯನ್ನು ನೆನಸಿ, ಆಕೆಯು ಕಣ್ಣೀರು ಸುರಿಸಿದಳು. ಆಕೆಯು ಕಣ್ಣು ಒರಿಸಿಕೊಳ್ಳುತ್ತ ತನ್ನ ತಾಯಿಯನ್ನು ಕುರಿತು—

ವಿಜಯೆ—ಅವ್ವಾ, ಸೂರ್ಯನು ಮುಣುಗಿದ ಕೂಡಲೆ ಗೂಗೆಗಳು ಅಮಂಗಲ ಧ್ವನಿಮಾಡುತ್ತ ಎಲ್ಲ ಕಡೆಗೂ ಆನಂದದಿಂದ ಹೊರಬಿದ್ದು ಹಾರಾಡುವಂತೆ, ಸ್ವಾತಂತ್ರ್ಯ ರವಿಯಾದ ಚಂಪತರಾಯನು ಮರಣಹೊಂದಿದ್ದರಿಂದ, ಔರಂಗಜೇಬ ಬಾದಶಹನ ಪರಿವಾರದವರು ಇನ್ನು ಬುಂದೇಲಖಂಡದ ತುಂಬ ಗೊಂದಲ ಹಾಕಬಹುದಲ್ಲವೆ?

ಸುಫಲಾದೇವಿ—ಅದರಲ್ಲಿ ಸಂಶಯವೇನು? ಆ ಗೂಗೆಗಳ ಗೊಂದಲ ವಷ್ಟೇ ಅಲ್ಲ; ಹೀರಾದೇವಿ, ಸಭಾಕರಣರಂಥ ಪಿಶಾಚಗಳ ಬಾಧೆಯೂ ಬುಂದೇಲ ಖಂಡನನ್ನು ಬಾಧಿಸದೆ ಬಿಡದು! ಈ ಉದ್ಯಾನದೊಳಗಿನ ಬಿಳಿಯ ಹೂಗಳು ಈ ಕತ್ತಲೆ ಮುಸುಕಿರುವಾಗ ಕಾಣದಿರುವಂತೆ, ಚಂಪತರಾಯನ ಮರಣದಿಂದ ಪಾರತಂತ್ರ್ಯದ ಕತ್ತಲೆ ಮುಸುಕಿದ ಬುಂದೇಲಖಂಡದಲ್ಲಿ, ಚಂಪತರಾಯನ ಪವಿತ್ರ ಕೃತಿಗಳೂ ಇನ್ನು ಕಣ್ಣಿಗೆ ಕಾಣದೆ ಹೋಗುವವು!

ವಿಜಯೆ—ಅವ್ವಾ, ಕತ್ತಲೆಯಲ್ಲಿ ಹೂಗಳು ಕಾಣದಿದ್ದರೂ, ಅವುಗಳ ಸುಗಂಧದಿಂದ ಇಲ್ಲಿ ಹೂವಿರುವವೆಂಬ ಮಾತು ಗೊತ್ತಾಗುವಂತೆ, ಚಂಪತರಾಯರು ಮರಣಹೊಂದಿದ್ದರೂ ಅವರ ಕೀರ್ತಿಯು ಅವರು ಇದ್ದಿದ್ದರ ಸ್ಮರಣಮಾಡಿಕೊಡದೆ ಹೋಗುವದಿಲ್ಲ. ನಾಳೆ ಬೆಳಗಾಗಲಿ ನೋಡು, ಹೂಗಳು ಮತ್ತೆ ಕಾಣುವದಿಲ್ಲವೆ? ಅದರಂತೆ, ನಾಳೆ ಚಂಪತರಾಯರ ಮಗ ಛತ್ರಸಾಲನು ಸ್ವಾತಂತ್ರ್ಯದ ತೇಜದಿಂದ ಬೆಳಗಹತ್ತಿದನೆಂದರೆ, ಚಂಪತರಾಯರ ಪವಿತ್ರ ಕೃತಿಗಳು ಮತ್ತೆ ಅನುಭವಕ್ಕೆ ಬರುವವು!

ಸುಫಲಾದೇವಿ—ವಿಂಧ್ಯವಾಸಿನಿಯು ಅಷ್ಟು ಮಾಡಿಸಬೇಕು!

ವಿಜಯೆ—ಮಾಡಿಸಿಯೇ ಮಾಡಿಸುವಳು! ಅವ್ವಾ, ಆ ಚಂಪತರಾಯನ ಮಗನಾದ ಯುವರಾಜ ಛತ್ರಸಾಲನನ್ನು ನೀನು ಇನ್ನೂ ನೋಡಿಲ್ಲ, ನೋಡಿ

ವರೆ ನನ್ನ ಮಾತು ನಿನಗೂ ನಿಜವಾಗಿ ಕಂಡೀತು. ಅತನೂ, ದಳಪತರಾಯನೂ ಶೌರ್ಯದಿಂದ ಕಾದಿ ರಣದುಲ್ಲಾಖಾನನನ್ನು ಸೆರೆಹಿಡಿದದ್ದನ್ನು ಪೊನ್ನೆ ವಿಂಧ್ಯವಾಸಿನಿಯ ಉತ್ಸವದಲ್ಲಿ ನಾನು ಕಣ್ಣುಮುಟ್ಟಿ ನೋಡಿದ್ದೇನೆ. ನಿಜವಾಗಿಯೆಂದರೆ, ಚಂಪತರಾಯನಿಗೆ ಸ್ವಾತಂತ್ರ್ಯ ಸೂರ್ಯನೆನ್ನುವದಕ್ಕಿಂತ, ಸ್ವಾತಂತ್ರ್ಯಸೂರ್ಯನ ಸಾರಥಿ ಅರುಣನೆಂದರೆ ಚನ್ನಾಗಿ ಒಪ್ಪುವದು. ನಾನಂತು ಬುಂದೇಲಖಂಡದ ಸ್ವಾತಂತ್ರ್ಯಸೂರ್ಯನ ಉದಯವನ್ನು ಸೂಚಿಸುವ ಅರುಣನು ಸ್ವಾತಂತ್ರ್ಯ ಸೂರ್ಯಪ್ರಕಾಶದಲ್ಲಿ ಚನ್ನಾಹಾದನೆಂದು ತಿಳಿದುಕೊಳ್ಳುವೆನು. ಇನ್ನು ಸ್ವಲ್ಪಕಾಲದಲ್ಲಿಯೇ ಬುಂದೇಲಖಂಡದ ಭಾಗ್ಯರವಿಯಾದ ಮಹೋಬದ ಛತ್ರಸಾಲನು ಸ್ವಾತಂತ್ರ್ಯದ ತೇಜದಿಂದ ಪ್ರಕಾಶಿಸತೊಡಗುವನು!

ಈಮೇರೆಗೆ ವಿಜಯೆಯು ನುಡಿಯುತ್ತಿರಲು, " ವಿಜಯೇ, ನಿನ್ನಮಾತು ಸತ್ಯವಾಗಲಿ " ಎಂದು ಆ ತಾಯಿಮಕ್ಕಳ ಕೇವಲ ಪರಿಚಯದ ಧ್ವನಿಯಿಂದ ಹೊರಟ ವರವಾಣಿಯು ಅವರ ಕಿವಿಗೆ ಬಿದ್ದಿತು. ಕೂಡಲೆ ಅವರು ಆಶ್ಚರ್ಯದಿಂದ ತಮ್ಮ ಆಸನದಿಂದ ಎದ್ದು ಆ ಧ್ವನಿಯು ಕೇಳಬಂದದಿಕ್ಕಿನಕಡೆಗೆ ಸಾಗಿಹೋಗಿ, ಅತ್ಯಂತ ನಮ್ರತೆಯಿಂದ ತಲೆಬಾಗಿ ವಿನಯದಿಂದ—" ಪ್ರಾಣನಾಥಪ್ರಭೂ! ನಮ್ಮ ನಮನದ ಸ್ವೀಕಾರವಾಗಬೇಕು, ನಾವು ಮನಃಪೂರ್ವಕ ಪ್ರಭುಗಳ ಸ್ವಾಗತಮಾಡುವೆವು " ಎಂದು ನುಡಿಯಲು, ಪ್ರಾಣನಾಥ ಪ್ರಭುಗಳು—" ಸುಫಲಾದೇವೀ, ಈ ಏಕಾಂತದ ಸ್ಥಳದಲ್ಲಿ ನಿಮ್ಮನ್ನು ಕಂಡದ್ದು ಬಹಳ ನಟ್ಟಗಾಯಿತು. ನನ್ನಸಂಗಡ ಇನ್ನು ಮೂವರು ಇದ್ದಾರೆ. ನಾವು ಸುಫಲಾದೇವಿಯನ್ನು ಏಕಾಂತದಲ್ಲಿ ಕಾಣಬೇಕಾದುದರಿಂದ ನಾವು ರಾಜಮಾರ್ಗದಿಂದ ರಾಜಮಂದಿರವನ್ನು ಪ್ರವೇಶಿಸದೆ, ಗುಪ್ತಮಾರ್ಗದಿಂದ ಇಲ್ಲಿಗೆ ಬಂದಿದ್ದೇವೆ.

ಸುಫಲಾದೇವಿ (ಅತ್ಯಂತ ಆದರದಿಂದ)—ಪ್ರಭೋ, ನಿಮ್ಮ ಸಂಗಡ ಬಂದಿರುವವರ ಸ್ವಾಗತವನ್ನೂ ನಾನು ಅತ್ಯಾನಂದದಿಂದ ಮಾಡುತ್ತೇನೆ. ಪೂಜ್ಯಅತಿಥಿಗಳೇ, ನನ್ನ ಬೆನ್ನಹತ್ತಿ ಹೀಗೆ ದಯಮಾಡಿಸಬೇಕು, ನಿಮ್ಮನ್ನು ಯಾರೂ ನೋಡಲಾರರು.

ಸ್ವಲ್ಪಹೊತ್ತಿನಲ್ಲಿಯೇ ಸುಫಲಾದೇವಿಯು ಪ್ರಾಣನಾಥ ಪ್ರಭುಗಳನ್ನು, ಉಳಿದ ಅಪರಿಚಿತ ಅತಿಥಿಗಳನ್ನು ಕರೆದುಕೊಂಡು ತನ್ನ ಅಂತಃಪುರದಲ್ಲಿ ಬಂದಳು. ಅಷ್ಟರಲ್ಲಿ ವಿಜಯೆಯು ಮುಂದೆಬಂದು ಅಂತಃಪುರದೊಳಗಿನ ಎಲ್ಲ ದಾಸಿಯರನ್ನು ಹೊರಗೆ ಕಳಿಸಿಬಿಟ್ಟಿದ್ದರಿಂದ, ತಮ್ಮ ಹೊರತು ಇಲ್ಲಿ ಬೇರೆಯಾರೂ ಇರುವದಿಲ್ಲವೆಂಬದನ್ನು ನೋಡಿ ಪ್ರಾಣನಾಥ ಪ್ರಭುಗಳಿಗೆ ಬಹಳ ಸಮಾಧಾನವಾಯಿತು. ವಿಜಯೆಯು ತನ್ನ ಕೆಲಸವನ್ನು ತೀರಿಸಿಕೊಂಡು ಹೊರಗೆ ಹೋಗತೊಡಗಲು, ಪ್ರಾಣನಾಥಪ್ರಭುಗಳು—

ಪ್ರಾಣನಾಥ—ವಿಜಯೇ, ನೀನು ಇಲ್ಲಿ ಇದ್ದರೂ ಚಿಂತೆಯಿಲ್ಲ. ನಿನ್ನಂತಹ ಪವಿತ್ರಮನಸ್ಸಿನ ಬಾಲಿಕೆಯಮುಂದೆ ನಾವೇನೂ ಬಚ್ಚಿಇಡಲಾರೆವು. ಸುಫಲಾದೇವೀ, ಇಷ್ಟು ಆಶ್ಚರ್ಯದಿಂದ ಯಾಕೆ ನೋಡುತ್ತೀ? ಈ ಸರಲಾದೇವಿಯು ನಿನ್ನ ಚಿಕ್ಕಂದಿನ ಗೆಳತಿಯಾಗಿದ್ದು, ನಿನಗೆ ಇನ್ನೂ ಆಕೆಯ ಗುರುತು ಹತ್ತಲೊಲ್ಲದೇನು? ಛತ್ರಸಾಲ, ದಲಪತರಾಯ, ಈ ಧಾರೀರದ ಅರಮನೆಯು ರಾಜಾ ಕಂಚುಕೀರಾಯರದಾಗಿದ್ದರೂ, ಸುಫಲಾದೇವಿಯು ಅಪ್ಪಣೆಯು ಇಲ್ಲಿ ಶಿರಸಾವಂದ್ಯವಾಗಿ ಪಾಲಿಸಲ್ಪಡುತ್ತಿರುವದು. ನೀವು ಯಾವಬಗೆಯ ಸಂಶಯವನ್ನೂ ಮನಸ್ಸಿನಲ್ಲಿ ತಾರದೆ, ಸುಫಲಾದೇವಿಯ ಆದರಾತಿಥ್ಯವನ್ನು ಸ್ವೀಕರಿಸಿರಿ.

ಪ್ರಾಣನಾಥಪ್ರಭುಗಳ ಸಂಗಡ ಬಂದಿರುವ ಅಪರಿಚಿತ ಅತಿಥಿಗಳು ಯಾರೆಂಬದು ಈಗ ಸುಫಲಾದೇವಿಗೆ ಗೊತ್ತಾದದ್ದರಿಂದ, ಆಕೆಯು ತನ್ನ ಚಿಕ್ಕಂದಿನ ಅನಾಥ ಗೆಳತಿಯನ್ನು ಅತ್ಯಂತ ಆದರದಿಂದ ಕೆಳಗೆ ಕುಳ್ಳಿರಿಸಿಕೊಂಡು ಭಕ್ತಿಯಿಂದ—

ಸುಫಲಾದೇವಿ—ಇಂಥ ಪುಣ್ಯಶೀಲರ ಚರಣಸ್ಪರ್ಶವು ಧಾರೀರದ ಅರಮನೆಗೆ ಆದದ್ದು ಮಹದ್ಭಾಗ್ಯವೇ ಸರಿ! ಧಾರೀರದ ರಾಜ್ಯವು ಈವರೆಗೆ ಹಿಡಿದಿರುವ ಪಾಪದ ಅಪವಿತ್ರದಾರಿಯನ್ನು ಬಿಟ್ಟು, ಇನ್ನು ಪುಣ್ಯದ ಪವಿತ್ರದಾರಿಯನ್ನು ಹಿಡಿಯುವದಕ್ಕೆ ಈಗ ಶುಭಶಕುನವಾಯಿತೆಂದು ನಾನು ತಿಳಿದುಕೊಳ್ಳುವೆನು! ಸರಲಾದೇವೀ, ನೀನೂ ನಾನೂ ಚಿಕ್ಕಂದಿನಲ್ಲಿ ಒಂದೇಕಡೆ ಕೆಲವುಕಾಲ ಕೂಡಿ ಆಡಿರುವೆವು. ಆವರೆ ಆಗಿನಕಾಲದ ಸರಲೆಗಿಂತ, ಸ್ವಾತಂತ್ರ್ಯದ ವಾತಾವರಣದಲ್ಲಿ ಬೆಳೆದಿರುವ ಈಗಿನ ಸರಲಾದೇವಿಯು ಎಷ್ಟು

ಶಾಂತಳೂ, ಪವಿತ್ರಳೂ, ಪೂಜ್ಯಳೂ ಆಗಿರುವಳು! ಸರಲಾದೇವಿ, ನನಗೆ ನಿನ್ನ ಚರಣಗಳ ಮೇಲೆ ನನ್ನ ಮಸ್ತಕವಿಡಗೊಡಿರಿ! ಛತ್ರಸಾಲನಂಥ ಸ್ವಾತಂತ್ರ್ಯಪ್ರಿಯ ವೀರನಿಗೆ ಜನ್ಮಕೊಡುವ ಪುಣ್ಯವತೀಮಾತೆಯ ಪಾದವನ್ನು ಬುಂದೇಲಖಂಡದೊಳಗಿನ ಪ್ರತಿಯೊಬ್ಬ ಸ್ತ್ರೀಯೂ, ಪ್ರತಿಯೊಬ್ಬ ಪುರುಷನೂ ಭಕ್ತಿಯಿಂದ ವಂದಿಸಲೇಬೇಕು!

ಈಮೇರೆಗೆ ನುಡಿದು ಸುಫಲಾದೇವಿಯು ಸರಲಾದೇವಿಯ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡಳು! ಆಗ ಸರಲಾದೇವಿಯು— "ಅವ್ವಾ, ಸುಫಲಾದೇವಿ, ಬೇಡ, ಈ ಭಾಗ್ಯಹೀನಳ ಕಾಲು ಹಿಡಿದುಕೊಳ್ಳಬೇಡ," ಎಂದು ನುಡಿಯುತ್ತಿರಲು, ಸುಫಲಾದೇವಿಯು—"ದೇವೀ, ನೀನು ಭಾಗ್ಯಹೀನಳೇ? ಬುಂದೇಲಖಂಡದ ಚಂಪತರಾಯರಂಥ ತೇಜಸ್ವಿರತ್ನವನ್ನು ಅಲಂಕರಿಸಿದ ಸಾಧ್ವೀಮಣಿಯು ನೀನು, ಕೀರ್ತಿಶೇಷರಾಗಿ ಚಂಪತರಾಯರು ಅಚಂದ್ರಾರ್ಕ ಶಾಶ್ವತರಾಗಿರಲು, ನೀನು ಭಾಗ್ಯಹೀನಳೇ? ಅವ್ವಾ, ಭಾಗ್ಯಹೀನರು ನಾವು! ಮುಳದಹಾಗೆ ಹುಟ್ಟುವೆವು, ಮುಳದಹಾಗೆ ಸತ್ತುಹೋಗುವೆವು! ದೇವೀ, ಬುಂದೇಲಖಂಡದ ಭಾಗ್ಯಲಕ್ಷ್ಮಿಯೇ, ಛತ್ರಸಾಲನಂತಹ ವೀರಾಗ್ರಣಿಯು ನಿನ್ನ ಪವಿತ್ರಉದರವನ್ನು ಅಲಂಕರಿಸಿ ನಿನ್ನನ್ನು ವೀರಮಾತೆಯಾಗಮಾಡಿರುವಾಗ, ನೀನು ಸೌಭಾಗ್ಯಹೀನಳೆ? ನಿನ್ನ ಭಾಗ್ಯದಮುಂದೆ ಈ ಪರತಂತ್ರ ಸುಫಲೆಯ ಭಾಗ್ಯವೇನು ಹೇಳು? ತೇಜಸ್ವಿನಿಯಾದ ಈ ನಮ್ಮ ವಿಜಯೆಯ ಪುಣ್ಯದಿಂದ ನಾನು ಸ್ವಾತಂತ್ರ್ಯದ ಭಾಗ್ಯವನ್ನು ಕಂಡರೆ ಕಾಣಬೇಕು.

ಈಮೇರೆಗೆ ನುಡಿದು ಸುಫಲಾದೇವಿಯು ಕೆಲಹೊತ್ತು ಸುಮ್ಮನೆ ಕುಳಿತು, ತನ್ನ ಹಾಗು ಸರಲಾದೇವಿಯಸ್ಥಿತಿಯನ್ನು ಹೋಲಿಸಿ ನೋಡುತ್ತ, ಛತ್ರಸಾಲನ ಕಡೆಗೆ ನೋಡಿದಳು. ಉಕ್ಕಿಬರುವ ಆತನ ಕ್ಷಾತ್ರತೇಜಸ್ಸಿನಿಂದ ಆ ಸುಫಲಾದೇವಿಯ ಮನಸ್ಸು ಪರಮ ಸಂತುಷ್ಟವಾಯಿತು; ಛತ್ರಸಾಲನು ನಿಶ್ಚಯ ಬುದ್ಧಿಯವನು, ಆದರೆ ಅವನ ಸ್ವಭಾವವು ಪ್ರೇಮಲ; ತೇಜಸ್ವಿಯು, ಆದರೆ ಸರಳನು; ಮಾನಧನನು, ಆದರೆ ಗರ್ವರಹಿತನು. ಇವೆಲ್ಲ ಲಕ್ಷಣಗಳು ಅವನ ಮುಖಮುದ್ರೆಯಲ್ಲಿ ತೋರುವದನ್ನು ನೋಡಿ, ಸುಫಲಾದೇವಿಯ ಮನಸ್ಸು ಕರಗಿಹೋಗಿ ಛತ್ರಸಾಲನ ವಿಷಯವಾಗಿ ಆಕೆಯು ಅತ್ಯಂತ ಆದರಭಾವವುಳ್ಳವಳಾದಳು! ಈ ಪ್ರಸಂಗದಲ್ಲಿ ತಾನು ಅಪುತ್ರವತಿ

ಯೆಂಬ ವಿಷಯದಲ್ಲಿ ಆಕೆಯ ಮನಸ್ಸು ಸ್ವಲ್ಪ ಕುಗ್ಗಿತು; ಆದರೆ ತನ್ನ ಪ್ರಿಯಪುತ್ರಿಯಾದ ವಿಜಯೆಯ ನೆನಪಾಗಲು, ಆ ಕುಗ್ಗಿದ ಮನಸ್ಸು ಮತ್ತೆ ಹಿಗ್ಗಿತು. ಆಕೆಯು ಮನಸ್ಸಿನಲ್ಲಿ-" ಈ ಸರಲಾದೇವಿಯ ಮಗ ಛತ್ರಸಾಲನು ಮಹಾ ಪರಾಕ್ರಮಿಯೂ, ಸ್ವದೇಶಾಭಿಮಾನಿಯೂ, ಸ್ವಧರ್ಮರತನೂ, ಅತ್ಯಂತ ಮನೋಹರನೂ ಆಗಿರುವದರಿಂದ, ಆತನು ಸರಲಾದೇವಿಯೊಬ್ಬಳ ಮಗನೇ ಆಗಿರದೆ, ಬುಂದೇಲಖಂಡದ ಸತ್ಪುತ್ರನೂ ಆಗಿರುವನು; ಯಾಕಂದರೆ ಆತನಮೇಲೆ ಪ್ರೇಮಮಾಡುವ ಅಧಿಕಾರವೂ, ಆತನಿಂದ ಪುತ್ರನ ಕರ್ತವ್ಯಗಳನ್ನು ಮಾಡಿಸಿಕೊಳ್ಳುವ ಅಧಿಕಾರವೂ ಇಡಿಯ ಬುಂದೇಲಖಂಡಕ್ಕೇ ಇರುತ್ತದೆ! ಆದರೆ ಇಂಥ ಈ ಸತ್ಪುತ್ರನ ಜೋಡು ವಿವಾಹಬಂಧನದಿಂದ ನಮ್ಮ ವಿಜಯೆಗೆ ಆದರೆ, ನನಗೆ ಪುತ್ರಪ್ರಾಪ್ತಿಯ ಲಾಭವೂ, ಸರಲಾದೇವಿಗೆ ಕನ್ಯಾಪ್ರಾಪ್ತಿಯ ಲಾಭವೂ ಆಗುವದಲ್ಲವೆ?" ಎಂಬಿವೇ ಮೊದಲಾದ ಸದಾಲೋಚನೆಗಳಿಂದ ಆನಂದಪಡುತ್ತ, ಅತಿಥಿಗಳ ಸತ್ಕಾರದ ವ್ಯವಸ್ಥೆಯನ್ನು ಬೇಗನೆ ಮಾಡುವದಕ್ಕಾಗಿ ವಿಜಯೆಗೆ ಏನೋ ಸೂಚಿಸುತ್ತಿರಲು, ಪ್ರಾಣನಾಥ ಪ್ರಭುಗಳು ಸುಫಲಾದೇವಿಯನ್ನು ಕುರಿತು—

ಪ್ರಾಣನಾಥಪ್ರಭು—ಸುಫಲಾದೇವೀ, ಛತ್ರಸಾಲನೂ, ದಲಪತರಾಯನೂ ಇಂದು ಬಹುದೂರದಿಂದ ದಣಿದು ಬಂದಿರುವರು. ನಿನ್ನೆ ರಾತ್ರಿಯಿಂದ ಅವರು ಬಾಯಲ್ಲಿ ನೀರುಹಾಕಿರುವದಿಲ್ಲ. ಅವರಿಗೆ ಸುಫಲಾದೇವಿಯ ಆತಿಥ್ಯದ ಅವಶ್ಯಕತೆಯು ವಿಶೇಷವಾಗಿರುತ್ತದೆ; ಆದರೆ ಅವರು ಇಲ್ಲಿಗೆ ಬಂದ ಉದ್ದೇಶವು ಸಫಲವಾದ ಹೊರತು ಅವರು ಅನ್ನಗ್ರಹಣಮಾಡುವದಿಲ್ಲ; ಹಾಗೂ ವಿಶ್ರಾಂತಿಯನ್ನೂ ಹೊಂದುವದಿಲ್ಲ!

ಸುಫಲಾ (ಕೈಜೋಡಿಸಿ)—ಪ್ರಭೂ, ನಾನು ಅವರ ಸಲುವಾಗಿ ಏನು ಮಾಡಲಿ? ಯಾವ ಸೇವೆಯನ್ನು ಮಾಡಿದರೆ ಸರಲಾದೇವಿಯು ಸಂತುಷ್ಟಳಾಗುವಳು? ಕುಮಾರ ಛತ್ರಸಾಲನಂಥ ಬುಂದೇಲಖಂಡದ ಭಾಗ್ಯರವಿಯು ಯಾವ ಉದಾತ್ತ ಉದ್ದೇಶದಿಂದ ಧಾರೀರದ ಅರಮನೆಗೆ ಬಂದಿರುವನು? ಹೇಳಿರಿ, ಪ್ರಾಣನಾಥ ಪ್ರಭೂ, ನನಗೆ ವಂದ್ಯರಾಗಿರುವ ಈ ಅತಿಥಿಗಳ ಉದ್ದೇಶವೇನೆಂಬದನ್ನು ಹೇಳಿರಿ; ಅಂದರೆ, ಅದನ್ನು ಪೂರ್ಣಮಾಡಲಿಕ್ಕೆ ನನಗೆ ನೆಟ್ಟಗಾಗುವದು.

ಪ್ರಾಣನಾಥಪ್ರಭು (ಆನಂದದಿಂದ)—ದೇವೀ, ನೀನು ಬಹು ದೊಡ್ಡ ಮನುಷ್ಯಳು, ಶುದ್ಧ ಮನಸ್ಸಿನವಳು! ಚಂಪತರಾಯನು ಮರಣಹೊಂದಿದ್ದರಿಂದ ಮಹೋಬವ ರಾಜ ಮನೆತನದ ಮೇಲೆ ಎಂತಹ ದುರ್ಧರ ಪ್ರಸಂಗವು ಒದಗಿರುವದೆಂಬದು ಯಾವತ್ತೂ ಬುಂದೇಲಖಂಡದಲ್ಲಿ ಪ್ರಸಿದ್ಧವಾಗಿರುವದು. ಚಂಪತರಾಯನುಮರಣಹೊಂದಿದರೂ, ಚಂಪತರಾಯನರಾಜಧಾನಿಯಮೇಲೆಯವನರ ಹಸರು ನಿಶಾನೆಯೇರಿದರೂ ಹೀರಾದೇವಿಗೆ ಸಮಾಧಾನವಾಗಿಲ್ಲ; ಆಕೆಯು ಚಂಪತರಾಯನ ವಂಶವನ್ನೇ ಹುರಿದು ಬಿಡಬೇಕೆಂದು ತನ್ನ ಸೇವಕರನ್ನು ನಾಲ್ಕೂಕಡೆಗೆ ಇವರ ಶೋಧಕ್ಕಾಗಿ ಕಳಿಸಿರುವಭಲ್ಲದೆ, ಇವರನ್ನು ಹುಡುಕಿ ಕೊಟ್ಟವರಿಗೆ ದೊಡ್ಡದೊಡ್ಡ ಇನಾಮುಗಳನ್ನು ಕೊಡುವೆನೆಂದು ಡಂಗುರಸಾರಿರುವಳು! ಅತ್ತ ಮೊಗಲ ಬಾದಶಹನೂ ಇವರನ್ನು ಹಿಡಿಯುವದಕ್ಕಾಗಿ ಯತ್ನಿಸುತ್ತಿರುವನು. ಅಂದಬಳಿಕ ಇವರ ಸಂರಕ್ಷಣದ ಭಾರವು ಎಷ್ಟು ದುಸ್ಸಹವಾವದ್ದೆಂಬವನ್ನು ನಾನು ವಿವರಿಸಿ ಹೇಳುವ ಕಾರಣವಿಲ್ಲ. ಅಂತಹ ಭಾರವನ್ನು ನಿನ್ನಮೇಲೆ ಹೊರಿಸಬೇಕೆಂದು ನಾನು ಬಂದಿರುವೆನು. ಈ ವಿಷಯವಾಗಿ ಹಲವುಕಡೆಗೆ ಪ್ರಯತ್ನಮಾಡಿ ನಿರಾಶಪಟ್ಟಿರುವೆನು. ಯಾರು ಹೀರಾದೇವಿಯ ಭಯದಿಂದ, ಯಾರು ಬಾದಶಹನ ಭಯದಿಂದ ಈ ಭಾರ ಹೊರಲಿಕ್ಕೆ ಹಿಂಜರಿದರು. ಈಗ ನಿನ್ನ ಬಳಿಗೆ ಬಂದಿರುವದೆಂದರೆ, ಕಟ್ಟಕಡೆಯ ಯತ್ನವು! ಈಗ ನೀನು ಧೈರ್ಯಮಾಡಿ ಬುಂದೇಲಖಂಡದ ಮರ್ಯಾದೆಯನ್ನಾದರೂ ಉಳಿಸು, ಇಲ್ಲವೆ, ಸ್ವಾತಂತ್ರ್ಯಪ್ರಾಪ್ತಿಗಾಗಿ ಹೆಣಗಾಡುತ್ತಿದ್ದ ಚಂಪತರಾಯನ ಅನಾಥ ಕುಟುಂಬಕ್ಕೆ ವಿಪತ್ಕಾಲದಲ್ಲಿ ಸಹಾಯಮಾಡಲಿಲ್ಲವೆಂಬ ಅಪಕೀರ್ತಿಯು ಬುಂದೇಲಖಂಡಕ್ಕೆ ಉಂಟಾಗುವಂತೆಯಾವರೂ ಮಾಡು!

ಸುಫಲಾದೇವಿ (ಗಾಂಭೀರ್ಯದಿಂದ)— ಚಂಪತರಾಯರು ಇಡಿಯ ಬುಂದೇಲಖಂಡದ ಮೇಲೆ ಮಾಡಿರುವ ಉಪಕಾರದಲ್ಲಿ ಈ ಸುಫಲಾದೇವಿಯ ಪಾಲಿಗೆ ಅಲ್ಪಸ್ವಲ್ಪವಾದರೂ ಬಂದಿರಬಹುದು; ಆದರೆ ನನ್ನ ಪತಿಗೆ ಪ್ರಾಣದಾನಮಾಡಿ ನನಗೆ ಸೌಭಾಗ್ಯದಾನಮಾಡಿದ ಆ ಮಹಾತ್ಮನ ಅನಂತವಾದ ಉಪಕಾರವನ್ನು ನಾನು ಹೇಗೆ ಮರೆಯಲಿ? ಪ್ರಭೂ, ಆ ಉಪಕಾರಕ್ಕಾಗಿ ನಾನು ನನ್ನ ವೈದೊಗಲ ಜೋಡನ್ನುಮಾಡಿ ಈ ಸರಲಾದೇವಿಯ ಕಾಲಿಗೆ

ಹಾಕಿದವಾದರೂ ಆ ಉದಾರ ಹೃದಯದ ಮಹಾತ್ಮನ ಉಪಕಾರವು ತೀರ ಬಹುದೆ? ಸರಲಾದೇವಿಯಸಲುವಾಗಿ, ಛತ್ರಸಾಲನ ಸಲುವಾಗಿ ನಾನು ಏನುಮಾಡಬೇಕೆಂಬವನ್ನು ಆಜ್ಞಾಪಿಸಿರಿ; ನಿಮ್ಮಂತಹ ಅಲೌಕಿಕ ಮಹಾ ನುಭವರ ಕೃಪಾವೃಷ್ಟಿಯು ಅವರಮೇಲೆ ಇರುವಾಗ, ನಾನು ಅವರಮೇಲೆ ಯಾವ ಉಪಕಾರಮಾಡುವದಕ್ಕಾಗಿಯಾಗಲಿ ಯಾಕೆ ಹೆದರಬೇಕು? ಸತ್ಪು ರುಷರ ಕೃಪೆಯಿಂದ ಸಕಲ ವಿಪತ್ತುಗಳೂ ದೂರವಾಗುತ್ತಿರಲು, ಅನಾಯಾಸ ವಾಗಿ ನಮಗುಂಟಾಗಬಹುದಾದ ಕೃತಕೃತ್ಯತೆಗಾಗಿ ನಾನು ಯಾಕೆ ಹಿಂದೆ ಮುಂದೆ ನೋಡಲಿ? ಮಹಾತ್ಮನ್, ಸರಲಾದೇವಿ-ಛತ್ರಸಾಲರ ಕಾರ್ಯನಿ ರ್ವಾಹಕ್ಕಾಗಿ ಈ ಧಾರೀರವ ಸಮಸ್ತ ರಾಜ್ಯವನ್ನು ಪ್ರಭುಗಳ ಚರಣಕ್ಕೆ ಅರ್ಪಿಸುತ್ತೇನೆ. ಬೇಕಾದರೆ ಛತ್ರಸಾಲನು ಇಂದೇ ಈ ಧಾರೀರವ ರಾಜ್ಯದ ರಾಜಧಾನಿಯಮೇಲೆ ತನ್ನ ಸ್ವಾತಂತ್ರ್ಯದ ಧ್ವಜವನ್ನು ನಿಲ್ಲಿಸಲಿ! ಪ್ರಾಣ ನಾಥ ಪ್ರಭೋ, ಇಲ್ಲಿಯ ಸಂಪತ್ತಿ, ಇಲ್ಲಿಯ ದಾಸದಾಸಿಯರು, ಇಲ್ಲಿಯ ಅಭೇದ್ಯ ಕೋಟೆಯು, ಇಲ್ಲಿಯ ಸೈನ್ಯ, ಇಲ್ಲಿಯ ಪ್ರತಿಒಂದು ವಸ್ತುವು ಚಂಪತರಾಯರನೇ ಇರುತ್ತವೆಂದು ತಿಳಿದು, ನಿಮ್ಮ ಮನಸ್ಸಿಗೆ ಬಂದ ಹಾಗೆ ಅವುಗಳ ವ್ಯವಸ್ಥೆಮಾಡಿರಿ. ಸರಲಾದೇವಿಗೆ ಈ ಅರಮನೆಯು ಧಾರೀ ರವ ಅರಮನೆಯೆಂದು ತಿಳಿಯಬೇಡಿರಿ. ಅದು ಮಹೋಬದ ಅರಮನೆಯು. ಇಲ್ಲಿ ನೀವು ಕುಸಾರ ಛತ್ರಸಾಲನೊಡನೆ ಸಂತೋಷದಿಂದ ಇರಬೇಕು. ಸರಲಾದೇವಿಯು ನೀವೆಯಿಂದ ಸುಫಲಾದೇವಿಯುಧನ್ಯಳಾಗತಕ್ಕನಳಿದ್ದಾಳೆ!

ಪ್ರಾಣನಾಥ (ಹರ್ಷಭರದಿಂದ)—ಸುಫಲಾದೇವೀ, ನೀನು ನಿಜವಾ ಗಿಯೂ ಉದಾರ ಹೃದಯದ ಸಾಧ್ವಿಯೆಂಬದರಲ್ಲಿ ಸಂಶಯವಿಲ್ಲ. ನೀನು ಕಂಚುಕಿರಾಯನಂಥ ಪಾಪಿಯಿಂದ ರಾಜನ ಕೈಹಿಡಿಸಿದ್ದರೂ, ನಿನ್ನ ಸದ್ಗು ಣಗಳ ಪರಿಮಳವು ಸ್ವಲ್ಪವೂ ಕಡಿಮೆಯಾಗಿರುವದಿಲ್ಲ. ನೀನು ಬುಂದೇಲ ಖಂಡದ ಮರ್ಯಾದೆಯನ್ನು ಕಾದೆ! ಇಲ್ಲದಿದ್ದರೆ ಸ್ವಾತಂತ್ರ್ಯಪ್ರಿಯ ಚಂಪ ತರಾಯನ ಕುಟುಂಬದವರಿಗೆ ಅವರ ವಿಪತ್ಕಾಲದಲ್ಲಿ ಯಾರೂ ಸಹಾಯಮಾ ಡಲಿಲ್ಲವೆಂಬ ಕಲಂಕವು ಕಡೆತನಕ ಅದಕ್ಕೆ ತಗಲುತ್ತಿತ್ತು.

ಈ ಪೇರಿಗೆ ಸಂಭಾಷಣಗಳು ನಡೆದಿರಲು, ವಿಜಯೆಯು ಊಟದ ಸಿದ್ಧ ತೆಯಾಗಿರುವದೆಂದು ಸೂಚಿಸಿದಳು. ಛತ್ರಸಾಲನು ತಮ್ಮನೆಗೆ ಬಂದದ್ದ

ರಿಂದ ವಿಜಯೆಗೆ ಪರಮಾನಂದವಾಗಿತ್ತು. ಹಿಂದಕ್ಕೆ ಮದನ ಸರೋವರದ ಮೇಲೆ ನಡೆದ ಪ್ರಸಂಗವು ಆಕೆಯ ಕಣ್ಣಿಗೆ ಈಗ ಕಟ್ಟಿದಹಾಗಾಯಿತು. ತನ್ನ, ಹಾಗು ವಿಮಲದೇವನೆಂದು ಕರೆಸಿಕೊಳ್ಳುತ್ತಿರುವ ವಿಮಲೆಯ ಜೀವವನ್ನು ಬದುಕಿಸಿದ ಆ ಮನೋಹರ ಮೂರ್ತಿಯನ್ನು ಎಷ್ಟು ನೋಡಿದರೂ ಆಕೆಗೆ ತೃಪ್ತಿಯಾಗದಾಯಿತು. ಪ್ರಾಣನಾಥ ಪ್ರಭುಗಳ ಅಪ್ಪಣೆಯಂತೆ ಎಲ್ಲರೂ ಭೋಜನಕ್ಕಾಗಿ ಎದ್ದರು. ಚಂಪತರಾಯನು ಮರಣಹೊಂದಿದ ಬಳಿಕ, ಆತನ ಈ ಪರಿವಾರವು ಊಟಕ್ಕೆ ಕುಳಿತದ್ದೆಂದರೆ ಇದೇ ನೊದಲು! ಪತಿನಿಯೋಗ ದುಃಖದಿಂದಲೂ, ಇನ್ನುಮೇಲೆ ಆಗಬೇಕಾಗಿರುವ ಪುತ್ರವಿಯೋಗ ದುಃಖದಿಂದಲೂ ಸರಲಾದೇವಿಗೆ ಊಟವು ಹೋಗಲಿಲ್ಲ! ಆದರೂ ಸುಫಲಾದೇವಿಯಂಥ ಸಾಧ್ವಿಯು ನಿರ್ಧಾರವಾದ ವಿಷಯವು ದೊರೆತದ್ದಕ್ಕಾಗಿ ಆಕೆಯು ಸಮಾಧಾನಪಟ್ಟಳು.

೧೬ನೆಯ ಪ್ರಕರಣ- ಸ್ವಾತಂತ್ರ್ಯಪ್ರಾಪ್ತಿಯು ಗುಟ್ಟು

ಭೋಜನವಾದ ಬಳಿಕ ಎಲ್ಲರೂ ಮತ್ತೆ ಒತ್ತಟ್ಟಿಗೆ ಕುಳಿತು ಹಲವು ಸಂಗತಿಗಳನ್ನು ಕುರಿತು ಸಂಭಾಷಣನಡಿಸಿದರು. ಪ್ರಾಣನಾಥಪ್ರಭುಗಳಂಥ ಮಹಾತ್ಮರ, ಹಾಗು ಚಂಪತರಾಯನ ಪರಿವಾರದಂಥ ಸ್ವಾತಂತ್ರ್ಯಪ್ರಿಯ ಪರಿವಾರದ ಸಹವಾಸವಾದದ್ದರಿಂದ ಸುಫಲಾದೇವಿಗೆ ಎಂದೂ ಅನುಭವಕ್ಕೆ ಬಂದಿರದ ಆನಂದವು ಉಂಟಾಯಿತು. ಈ ಆನಂದವು ಬಹುಕಾಲ ಒದಗುವ ಸಂಭವವಿರುವದಕ್ಕಾಗಿ ಆಕೆಯು ಉತ್ಸಾಹಗೊಂಡಳು. ಅತಿಥಿಗಳು ದಣಿದು ಬಂದವರಾದದ್ದರಿಂದ ಅವರು ವಿಶ್ರಾಂತಿಯನ್ನು ತಕ್ಕೊಳ್ಳಲೆಂದು ಆಕೆಯು ಎಲ್ಲ ಸಿದ್ಧತೆಮಾಡಿಸಿ ಪ್ರಭುಗಳನ್ನು ಕುರಿತು—

ಸುಫಲಾದೇವಿ—ಪ್ರಭೋ, ಮಾತಾಡಲಿಕ್ಕೆ ನಾಳೆ ಬೇಕಾದಷ್ಟು ಹೊತ್ತು ಇದೆ. ಇಂದೆ ಎಲ್ಲರೂ ದಣಿದುಬಂದವರಾಗಿರುವದರಿಂದ ವಿಶ್ರಾಂತಿಯನ್ನು ಹೊಂದುವದು ಯೋಗ್ಯವಾಗಿ ತೋರುತ್ತದೆ. ರಾತ್ರಿಯೂ ಆರು ತಾಸು ಮೀರಿತು.

ಪ್ರಭುಗಳು—ದೇವೀ, ನಮಗಿನ್ನೆಲ್ಲಿಯ ವಿಶ್ರಾಂತಿಯು! ಬುಂದೇಲ ಖಂಡಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗುವವರೆಗೆ ನಾವು ವಿಶ್ರಾಂತಿಯ ಮಾತು ಎತ್ತುವಹಾಗಿಲ್ಲ. ಸರಲಾದೇವಿಯೊಬ್ಬಳು ನಿನ್ನ ಆಶ್ರಯದಲ್ಲಿರುವಳು, ಆಕೆಯನ್ನಷ್ಟು ಜೋಕೆ; ಯಾಕಂದರೆ, ಕಂಚುಕಿಯಾಯನು ಕೇವಲ ಮೊಗಲ ಪಕ್ಷಪಾತಿಯು, ಬಾದಶಹನ ಸಂತೋಷಕ್ಕಾಗಿ ಆತನು ಏನುಮಾಡಲಿಕ್ಕೂ ಹೇಸುವವನಲ್ಲ. ಕೇವಲ ನಿನ್ನ ಧೈರ್ಯದಿಂದ ಚಂಪತರಾಯನ ಪತ್ನಿಯನ್ನು-ಛತ್ರಸಾಲನ ಮಾತೆಯನ್ನು ನಿನ್ನ ಬಳಿಯಲ್ಲಿ ಬಿಟ್ಟುಹೋಗುತ್ತೇವೆ. ಆಕೆಯನ್ನಷ್ಟು ದಕ್ಷತೆಯಿಂದ ರಕ್ಷಿಸು. ಆಕೆಯು ಇಲ್ಲಿ ಇರುವಳೆಂಬ ಸುದ್ದಿಯು ಎಷ್ಟುಮಾತ್ರವೂ ಹೊರಬೀಳಲಾಗದು.

ಸುಫಲಾದೇವಿ—ಭಗವನ್, ಅದರಚಿಂತೆ ತನುಗೆ ಬೇಡ. ಇಷ್ಟುರಾತ್ರಿಯಲ್ಲಿ ತಾವು ಮೂವರೂ ಹೋಗುವದೆಲ್ಲಿಗೆ?ಸತ್ಸಮಾಗನುವು ಕೆಲದಿನಗಳವರೆಗಾದರೂ ಈಪಾಮರಳಿಗೆ ಆಗಬಾರದೇನು?ಕುಮಾರಛತ್ರಸಾಲನು ಅನುಕೂಲಕಾಲವು ಬರುವವರೆಗೆ ಇಲ್ಲಿ ಇರುವದು ನೆಟ್ಟಗಲ್ಲವೆ? ಬೇಕಾದರೆ ನಾನು ಆಗಲೆ ಹೇಳಿದಂತೆ ಆತನು ಈ ಧಾರೀರದ ಕೋಟೆಯಮೇಲೆ ತನ್ನ ಸ್ವಾತಂತ್ರ್ಯದ ಧ್ವಜವನ್ನು ನಿಲ್ಲಿಸಿ, ಸ್ವಾತಂತ್ರ್ಯಪ್ರಾಪ್ತಿಗಾಗಿ ಯತ್ನಿಸಲೂ ಬಹುದು!

ಛತ್ರಸಾಲ—ದೇವೀ, ಸ್ವಾತಂತ್ರ್ಯಕ್ಕಾಗಿ ಬಾದಶಹನೊಡನೆ ಕಾದುವ ಪ್ರಸಂಗದಲ್ಲಿ ಧಾರೀರದ ಕೋಟೆಯಂಥ ಭದ್ರವಾದ ಕೋಟೆಯು ಉಪಯೋಗವನ್ನು ಮಾಡಿಕೊಳ್ಳಲೇಬೇಕಾಗುವದು; ಆದರೆ ಈಗೇ ಆ ಕೆಲಸಮಾಡುವದುಸರಿಯಲ್ಲ; ಮತ್ತು ನೀನುಹೇಳಿದಂತೆ ಅನುಕೂಲಕಾಲದ ಹಾದಿಯನ್ನೋಡುತ್ತ ಧಾರೀರದ ಕೋಟೆಯಲ್ಲಿ ಅಡಗಿಕೊಂಡು ಕುಳಿತುಕೊಳ್ಳುವದೂ ಸರಿಯಲ್ಲ; ಆದ್ದರಿಂದ ಅನುಕೂಲಕಾಲವು ಬೇಗನೆ ಒದಗಿಬರುವಂತೆ ಮಾಡುವದಕ್ಕಾಗಿ ಪ್ರಭುಗಳೊಡನೆ ನಾನು ಹೋಗಲೇ ಬೇಕಾಗುವದು.

ಸುಫಲಾದೇವಿ—ಕುಮಾರ ಛತ್ರಸಾಲ, ಈಗ ನೀನು ಹೋಗುವದಾದರೂ ಎಲ್ಲಿಗೆ?

ಛತ್ರಸಾಲ—ಔರಂಗಜೇಬನ ಸರದಾರನಾದ ರಾಜಾ ಜಯಸಿಂಗನ ಸೇನೆಯೊಡನೆ ದಕ್ಷಿಣಕ್ಕೆ ಹೋಗುವೆನು.

ಸುಫಲಾದೇವಿ (ಆಶ್ಚರ್ಯದಿಂದ)—ಏನು? ಛತ್ರಸಾಲನು ರಾಜಾಜಯ ಸಿಂಗನ ಚಾಕರಿಯನ್ನು ಮಾಡುವನೋ? ರಾಜಾ ಚಂಪತರಾಯನ ಮಗನು ದಿಲ್ಲೀಪತಿಯ ಸೇವಕನಾಗುವನೇನು?

ಛತ್ರಸಾಲ (ಗಾಂಭೀರ್ಯದಿಂದ)—ನನಗೆ ಅತ್ಯಂತ ಅಪ್ರಿಯವಾಗಿರುವ ಬಾದಶಹನ ಸೇವೆಯನ್ನು ಸ್ವಾತಂತ್ರ್ಯಪ್ರಾಪ್ತಿಗಾಗಿ ಕೆಲವುದಿನ ನಾನು ಮಾಡಬೇಕಾದೀತು? ಮುಖ್ಯಮಾತು, ಯಾವ ದಾರಿಯಿಂದಾದರೂ ಬುಂದೇಲಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗುವದು ಛತ್ರಸಾಲನಿಗೆ ಬೇಕಾಗಿದೆ!

ಸುಫಲಾದೇವಿ—ಯೋಗ್ಯವಿಚಾರವು; ಆದರೆ ರಾಜಾಜಯಸಿಂಗನು ಈಗ ದಕ್ಷಿಣಕ್ಕೆ ದಂಡೆತ್ತಿಹೋಗುವ ಕಾರಣವೇನು?

ಛತ್ರಸಾಲ—ದಿಲ್ಲೀಪತಿಯ ಒಬ್ಬ ಅಧಿಕಾರಿಯಾದ ಬಹದ್ದೂರಖಾನ ಕೋಕಾ ಎಂಬಾತನು ದಕ್ಷಿಣದಲ್ಲಿಯ ದೇವಗಡಕ್ಕೆ ಮುತ್ತಿಗೆ ಹಾಕಿಕೊಂಡು ಕುಳಿತಿರುತ್ತಾನೆ. ಆತನಿಗೆ ಸಹಾಯಮಾಡುವದಕ್ಕಾಗಿ ದಿಲ್ಲೀಪತಿಯ ಅಪ್ಪಣೆಯಂತೆ ರಾಜಾಜಯಸಿಂಗನು ಅಲ್ಲಿಗೆ ಹೋಗುತ್ತಿರುವನು.

ಸುಫಲಾದೇವಿ—ದಿಲ್ಲೀಪತಿಯ ಕಡೆಯವನಾಗಿ ಛತ್ರಸಾಲನು ದಕ್ಷಿಣದಲ್ಲಿ ಸಮರಪಟುತ್ವವನ್ನು ತೋರಿಸುವದು ಪ್ರಭುಗಳಮನಸ್ಸಿಗೆ ಬರುವದೋ?

ಪ್ರಾಣನಾಥಪ್ರಭು—ಸುಫಲಾದೇವೀ, ನಿನ್ನಂಥ ಸ್ವಾತಂತ್ರ್ಯಪ್ರಿಯಳಾದ ಸ್ವಾಭಿಮಾನದ ಸಾಧ್ವಿಗೆ ಈ ಪ್ರಶ್ನವು ಬಹಳವಾಗಿ ಒಪ್ಪುವದು. ಛತ್ರಸಾಲನು ಕೇವಲ ದಿಲ್ಲಿಯ ಬಾದಶಹನ ಪಕ್ಷದಿಂದ ಕಾದುವದಕ್ಕಾಗಿ ಹೋಗುವದಿಲ್ಲ. ದಕ್ಷಿಣದಲ್ಲಿರುವ ಸ್ವಾತಂತ್ರ್ಯಪ್ರಿಯ ಶಿವಾಜಿಯು ತನ್ನ ಮಹಾರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ಒದಗಿಸಿ ಕೊಡುವದಕ್ಕಾಗಿ ಮಾಡುತ್ತಿರುವ ಯತ್ನವನ್ನು ಕಣ್ಣುಮುಚ್ಚಿ ನೋಡಿ, ಆ ಮಹಾಪುರುಷನ ಪ್ರತ್ಯಕ್ಷ ದರ್ಶನಮಾಡಿಕೊಂಡು ಆತನ ಆಲೋಚನೆಯನ್ನು ಕೇಳಿ, ಆಮೇಲೆ ಬುಂದೇಲಖಂಡದ ಸ್ವಾತಂತ್ರ್ಯ ಸಂಪಾದನದ ಕಾರ್ಯಕ್ಕಾಗಿ ಕಂಕಣಕಟ್ಟಿಕೊಳ್ಳಬೇಕೆಂದು ಆತನು ಮಾಡಿರುವನು! ದೇವೀ, ರಾಜಾ ಜಯಸಿಂಗನು ಚಂಪತರಾಯನ ಮಿತ್ರನಾಗಿರುವದರಿಂದ, ಛತ್ರಸಾಲನ ಸಂರಕ್ಷಣದ ಸಲುವಾಗಿ ಚಿಂತೆಮಾಡುವಂತೆ ಇಲ್ಲ. ರಾಜಾ ಜಯಸಿಂಗನು ಪ್ರತಿಜ್ಞೆಗೆ ಒಳಗಾಗಿ

ತಾನು ದಿಲ್ಲಿಯ ಬಾದಶಹನಿಗೆ ಅಂಕಿತನಾಗಿದ್ದರೂ, ಸ್ವಾತಂತ್ರ್ಯಕ್ಕಾಗಿ ಯತ್ನಿಸುವವರನ್ನು ನೋಡಿ ಆತನು ಸಂತೋಷಪಡನು. ಬಾದಶಹನ ಅಪ್ಪಣೆಯಹೊರತು ಅಂಥವರ ಕಾರ್ಯಕ್ಕೆ ವಿಘ್ನತರುವ ಗೊಡವಿಗೆ ಆತನು ಹೋಗುವದಿಲ್ಲ; ಆದ್ದರಿಂದ ದಕ್ಷಿಣದಕಠಿಣತರದ ಪ್ರವಾಸವನ್ನು ಸುಲಭರೀತಿಯಿಂದ ಮಾಡುವದಕ್ಕಾಗಿ ಛತ್ರಸಾಲನು ಆ ನರವೀರನ ಸಂಗಡ ಹೋಗುತ್ತಿರುವನು. ಸುಫಲಾದೇವೀ, ಹೀಗೆ ಛತ್ರಸಾಲನು ಮೊಗಲಸೈನ್ಯದ ಸಂಗಡ ಹೋಗುವದರಲ್ಲಿ ದೊಡ್ಡ ಲಾಭವುಂಟು. ಮುಂಪೆ ಛತ್ರಸಾಲನು ಮೊಗಲ ಬಾದಶಹನ ಸೈನ್ಯದೊಡನೆ ಕಾದಬೇಕಾಗಿರುವದಷ್ಟೆ? ಅಂದಬಳಿಕ ಮೊಗಲ ಸೈನ್ಯದ ಸಾಮರ್ಥ್ಯವೆಷ್ಟು? ಆ ಸೈನಿಕರು ಯುದ್ಧಮಾಡುವ ಬಗೆಹೇಗೆ? ಅವರು ಬಾದಶಹನ ಅಪ್ಪಣೆಯನ್ನು ಯಾವ ಮನಸ್ಸಿನಿಂದ ಪಾಲಿಸುವರು ಇತ್ಯಾದಿ ಒಂದಲ್ಲ ಎರಡಲ್ಲ, ಹಲವು ಸಂಗತಿಗಳನ್ನು ಕಣ್ಣುಮುಟ್ಟಿ ನೋಡುವದು ಅವಶ್ಯವಾಗಿರುವದು. ಇದಕ್ಕಾಗಿ ದಿಲ್ಲೀಪತಿಯ ನೌಕರಿಯ ನೆವದಿಂದ ಕೆಲ ಕಾಲ ಸೈನ್ಯದಲ್ಲಿ ಕಳೆಯುವದು ಅವಶ್ಯವೆಂದು ಛತ್ರಸಾಲನು ದಕ್ಷಿಣಕ್ಕೆ ಹೋಗುತ್ತಿರುವನು.

ಸುಫಲಾದೇವಿ—ಸರಿಸರಿ! ಆದರೆ ಪ್ರಭೋ, ಈ ವೀರನಾರು? ತನ್ನ ಅತುಲಕ್ಷಾತ್ರತೇಜದಿಂದ ನನ್ನ ಮನಸ್ಸನ್ನು ಯಾವಾಗೋ ಎಳೆದುಕೊಂಡು ಬಿಟ್ಟಿರುವದರಿಂದ, ಅತನ ಪರಿಚಯ ಮಾಡಿಕೊಂಡ ಹೊರತು ನನಗೆ ಸಮಾಧಾನವಾಗುವಹಾಗಿಲ್ಲ?

ಪ್ರಾಣನಾಥ—ದೇವೀ, ಆತನು ವೀರಾಗ್ರಣಿ ಸಭಾಕರಣನ ಪುತ್ರನಾದ ದಲಪತರಾಯನು, ಸಾಗರದ ಯುವರಾಜನು!

ಸುಫಲಾ (ಆಶ್ಚರ್ಯದಿಂದ)—ಏನು? ಸ್ವದೇಶೋದ್ಧಾರಕ್ಕಾಗಿ ತನ್ನ ಯುವರಾಜಪದವಿಯನ್ನು ಬಿಟ್ಟುಕೊಟ್ಟು, ತಂದೆಯ ಬಳಿಯಿಂದ ಹೊರಟು ಚಂಪತರಾಯನ ಆಶ್ರಯವನ್ನು ಹೊಂದಿದ ಧೀರನು ಈತನೇಯೇನು? ಇಂತಹ ತರುಣವೀರರು ಬುಂದೇಲಖಂಡದಲ್ಲಿ ಹುಟ್ಟುತ್ತಿರುವಾಗ ಅದು ಪಾರತಂತ್ರ್ಯದ ಕೆಸರಿನಲ್ಲಿ ಎಷ್ಟುದಿವಸ ಸಿಕ್ಕುಬಿದ್ದೀತು? ಕುಮಾರಾ ದಲಪತ, ಧನ್ಯನು, ನೀನು ಪರಮಧನ್ಯನು! ನೀನು ದೀರ್ಘಾಯುಷಿಯಾಗಿ ಕುಷ್ಠಾರ ಛತ್ರಸಾಲನ ಕಾರ್ಯಕ್ಕೆ ಸಹಾಯಮಾಡೆಂದು ನಾನು ಹರಸುವೆನು.

ದಳಪತಿ—ಅಮ್ಮಾ, ತಮ್ಮಂತಹ ಸತ್ಪುರುಷ ಸಾಧ್ವಿಯರ ಆಶೀರ್ವಚನವು ಅಸತ್ಯವಾಗಬಹುದೆ? ತಮ್ಮಂಥವರ ಅಮೋಘವಾದ ಆಶೀರ್ವಾದವನ್ನು ಪಡೆದವನೇ ಧನ್ಯನು!

ಪ್ರಾಣನಾಥ ಪ್ರಭು - ದಳಪತಿರಾಯನ ಶೌರ್ಯವು ಛತ್ರಸಾಲನ ಶೌರ್ಯಕ್ಕೆ ಸಮಾನವಾಗಿದ್ದು, ಇದೇ ಈಗ ನಡೆದು ಮುಗಿದಿದ್ದ ಯುದ್ಧದಲ್ಲಿ ತನ್ನ ರಣಪಾಂಡಿತ್ಯದಿಂದ ಈತನು ತನ್ನ ಪ್ರತ್ಯಕ್ಷ ತಂದೆಯನ್ನು ಹಿಂದಕ್ಕೆ ಸರಿಸಿ ನಾಚಿಸಿರುವನು! ದೇವೀ, ಸಭಾಕರಣನ ಪ್ರತಾಪಾತಿಶಯವನ್ನು ನೀನು ಕೇಳಿಯಾದರೂ ಬಲ್ಲೆಯಷ್ಟೆ? ಅಂತಹತಂದೆಯನ್ನು ಪರಾಜಯಪಡಿಸಿದ ಈ ವೀರಪುತ್ರನು ಧನ್ಯನಲ್ಲವೆ? ಈಗ ಈತನು ತನ್ನಂತೆ ಸ್ವದೇಶದ ಸ್ವಾತಂತ್ರ್ಯಕ್ಕಾಗಿ ತಳಮಳಿಸುತ್ತಿರುವ ತರುಣ ವೀರರು ಬುಂದೇಲಖಂಡದಲ್ಲಿ ಎಲ್ಲೆಲ್ಲಿ ಇರುವರೆಂಬದನ್ನು ಹುಡುಕಿ, ಸ್ವಾತಂತ್ರ್ಯದ ತಳಮಳವಿಲ್ಲದವರ ಮನಸ್ಸಿನಲ್ಲಿ ತಳಮಳವನ್ನು ಹುಟ್ಟಿಸಿ, ಅವರೆಲ್ಲರನ್ನು ಒಟ್ಟುಗೂಡಿಸುವದಕ್ಕಾಗಿ ಬುಂದೇಲಖಂಡದಲ್ಲೆಲ್ಲ ಸಂಚಾರಮಾಡಲಿಕ್ಕೆ ಹೋಗುತ್ತಿರುವನು.

ಸುಫಲಾದೇವಿ—ಅತ್ಯಂತ ಸ್ತುತ್ಯವಾದ ಉದ್ಯೋಗವು ; ಇಂತಹ ಪೌರುಷದ ಉದ್ಯೋಗವು ಈ ಕುಮಾರ ದಳಪತಿರಾಯನಂಥ ಪೌರುಷಿಗಳಿಗೆ ಒಪ್ಪುವದು.

ಛತ್ರಸಾಲ (ಅತ್ಯಂತ ವಿನಯದಿಂದ)—ದೇವೀ, ನಾನು ರಾಜಾ ಜಯಸಿಂಗನೊಡನೆ ದಕ್ಷಿಣಕ್ಕೆ ಹೋಗಿ ಮೊಗಲ ಸೈನ್ಯದ ಮಟ್ಟನ್ನು ತಿಳಿದು ಕೊಂಡು ಮಾಡುವದೇನು? ಅಥವಾ ದಳಪತಿರಾಯನಂಥ ಶೂರರು ಬುಂದೇಲಖಂಡವನ್ನೆಲ್ಲ ತಿರುಗಿ ತರುಣವೀರರನ್ನು ಒಟ್ಟುಗೂಡಿಸಿ ಮಾಡುವದೇನು ? ಹದಮಾಡದೆ ಇದ್ದ ಕಸುವುಗೆಟ್ಟ ಒಣಭೂಮಿಯಲ್ಲಿ ಬಿತ್ತಿದ ಬೀಜವುವ್ಯರ್ಥವಾಗುವಂತೆ, ಪ್ರಭುಗಳಂತಹ ಮಹಾತ್ಮರು ತಮ್ಮ ತಪೋಬಲದಿಂದ ಬುಂದೇಲಖಂಡದ ಜನರ ಮನೋಭೂಮಿಯೊಳಗಿನ ದುರ್ಗುಣ-ದೋಷಗಳನ್ನು ಕಳೆದು ಶುದ್ಧಮಾಡಿ, ಸದ್ಗುಣಮಂಡಿತ ಕ್ಷಾತ್ರತೇಜದ ಗೊಬ್ಬರವನ್ನು ಆ ಭೂಮಿಗೆ ಸಾಕಿ, ಭೂತದಯೆಯಿಂದ ಆ ಮನೋಭೂಮಿಯನ್ನು ಆರ್ದ್ರಮಾಡಿರುವಿದ್ದರೆ, ನನ್ನಂತಹ ನೂರಾರು ಛತ್ರಸಾಲರೂ, ನನ್ನಪ್ರಿಯ ಮಿತ್ರ ದಳಪತಿನಂತಹ ನೂರಾರು ದಳಪತಿರೂ ಕೂಡಿದರೂ ವ್ಯರ್ಥವೇ ಸರಿ!

ದೇವಿ, ಬರಿಯ ನಮ್ಮಂಥ ಅಹಂಕಾರ ಯುಕ್ತ ಲೌಕಿಕರ ಪರೋಪದೇಶ ಪಾಂಡಿತ್ಯದ ಬೋಧದಿಂದ ಕಾರ್ಯವಾಗುವದೊತ್ತಟ್ಟಿಗುಳಿದು, ಕಾರ್ಯ ಹಾನಿಯು ಮಾತ್ರ ಆಗುವದು. ನಮ್ಮಂಥ ಪಂಡಿತಂಮನ್ಯರ ಬೋಧವು ಹೆಚ್ಚಾದಂತೆ ದೇಶದಲ್ಲಿ ಏಕತ್ವವು ಉಂಟಾಗುವದರ ಬದಲು ಅನೇಕತ್ವವು ಉಂಟಾಗುವದು ; ಪರಸ್ಪರರಲ್ಲಿ ಪ್ರೇಮವು ಬೆಳೆಯುವದರ ಬದಲು ದ್ವೇಷವು ಬೆಳೆಯುವದು ; ಆದ್ದರಿಂದ ನಿಜವಾದ ಕಾರ್ಯಸಾಧಕರೆಂದರೆ ಪ್ರಭುಗಳಂತಹ ತಪೋಧನರು. ಮಹಾರಾಷ್ಟ್ರಕ್ಕೆ ಶ್ರೀ ಸಮರ್ಥ ರಾಮದಾಸರು ಶಿವರಾಯನಿಗೆ ಸಹಾಯಕರಾಗಿ ದೊರೆತಿರುವಂತೆ, ಬುಂದೇಲಖಂಡದ ಪುಣ್ಯದಿಂದ ಪ್ರಭುಗಳು ಇಲ್ಲಿಯ ಸ್ವಾತಂತ್ರ್ಯಪ್ರಿಯರಿಗೆ ಸಹಾಯಕರಾಗಿ ದೊರೆತಿರುವರು. ದೇವೀ, ಬರಿಯಸದ್ಬೋಧವು ಕಿವಿಯಲ್ಲಿ ಹೋಗುವದರಿಂದ ಮನುಷ್ಯನ ಮನೋವೃತ್ತಿಗಳ ತಿದ್ದುಪಡೆಯಾಗುವದಿಲ್ಲ ; ಸದ್ಬೋಧಕ್ಕಿಂತ ಸದ್ವಸ್ತುದರ್ಶನದಿಂದ ಮನೋವೃತ್ತಿಗಳು ತಟ್ಟನೆ ತಿದ್ದಿಹೋಗುತ್ತವೆ. ಪ್ರಭುಗಳಂತಹ ಮಹಾತ್ಮರು ಕರುಣಾಳುಗಳಾಗಿ, ನಾವು ಉದ್ಧಾರವಾಗಬೇಕೆಂಬ ಸಂಕಲ್ಪದಿಂದ ನಮ್ಮ ಕಡೆಗೆ ನೋಡಿದರೆ ಸಾಕು, ನಾವು ಪತಿತರು ಹೋಗಿ ಪಾವನರು ಆಗುವೆವು; ಆದರೆ, ದೇವರ ಸಂಕೇತಕ್ಕೆ ವಿರುದ್ಧವಾಗಿ ಸೃಷ್ಟಿಯ ವ್ಯಾಪಾರದಲ್ಲಿ ಹೆಚ್ಚು ಕಡಿಮೆ ಮಾಡುವದು ತಮ್ಮ ಧರ್ಮವಲ್ಲವೆಂದು ಅವರು ತಿಳಿದಿರುವದರಿಂದ, ನಮ್ಮ ಉದ್ಧಾರಕ್ಕೆ ವಿಲಂಬವಾಗುತ್ತಿರುವದು.

ಈ ಮೇರೆಗೆ ನುಡಿದು ಛತ್ರಸಾಲನು ಮೋರೆತಗ್ಗಿಸಿಕಷ್ಟದಿಂದ ಉಸುರ್ಗರೆಯಲು, ಪ್ರಾಣನಾಥ ಪ್ರಭುಗಳು ಕರುಣಾಳುಗಳಾಗಿ, ಆ ತರುಣ ವೀರನನ್ನು ಕುರಿತು—" ಕುಮಾರಾ, ಛತ್ರಸಾಲಾ, ನೀನು ಬಹುಯೋಗ್ಯವಾಗಿ ಮಾತಾಡಿದೆ. ಯುಗಧರ್ಮಕ್ಕನುಸರಿಸಿ ಸೃಷ್ಟಿ ವ್ಯವಹಾರಗಳು ನಡೆಯಬೇಕೆಂದು ಈಶ್ವರೀ ಸಂಕೇತವಿರುವದರಿಂದ, ಜ್ಞಾನಿಗಳಾದವರು ತಮ್ಮ ಪ್ರಭಾವದಿಂದ ಆ ಈಶ್ವರೀ ಸಂಕೇತಕ್ಕೆ ಭಂಗವುಂಟುಮಾಡುವ ಗೊಡವಿಗೆ ಹೋಗುವದಿಲ್ಲ ; ಆದರೆ ತೀರ ಧರ್ಮಗ್ಲಾನಿಯಾಗಿ ಸೃಷ್ಟಿಯು ನಾಶದ ಪಂಥವನ್ನು ಹಿಡಿಯಲು, ಆಗ ಪರಮೇಶ್ವರನು ಅಂಶತಃ ಅವತಾರಮಾಡಿ ಜನರಮನೋವೃತ್ತಿಗಳನ್ನು ತಿದ್ದತೊಡಗಿದಾಗ, ಸತ್ಪುರುಷರು ಆ ಪ್ರಭುವಿಗೆ ಸಹಾಯಕರಾಗಿ

ಮುಂದೆ ಬರುವರು. ಛತ್ರಸಾಲಾ, ನೀನು ಹೇಳಿದ ಶಿವರಾಯ-ಸಮರ್ಥ ರಾಮದಾಸರ ಜೋಡಿಯನ್ನು ಈ ದೃಷ್ಟಿಯಿಂದಲೇ ನೋಡು. ಶಿವರಾಯನು ಈಶ್ವರಾಂಶನಾದುದರಿಂದಲೇ ಸ್ವದೇಶೋದ್ಧಾರದ ಕಾರ್ಯಕ್ಕೆ ಕೈಹಾಕಲು, ಮಹಾಪುರುಷರಾದ ಸಮರ್ಥ ರಾಮದಾಸರು ಆತನಿಗೆ ಸಹಾಯಮಾಡುವದಕ್ಕಾಗಿ ಬೈಲಿಗೆ ಬರುತ್ತಿರುವರು. ಛತ್ರಸಾಲಾ, ಶಿವರಾಯನು ಈಶ್ವರಾಂಶನೆಂದು ಹೇಳಿದ ಮಾತ್ರದಿಂದ ನಾನು ಈಶ್ವರಾಂಶನೆಲ್ಲಿರುವನೆಂದು ನೀನು ನಿರಾಶೆಪಡಬೇಡ. ನಿಸ್ಪೃಹವೃತ್ತಿಯ ಪರೋಪಕಾರಿಯಾದ ವೀರನು ಸತ್ವಾತಿಶಯದಿಂದ ಸ್ವಬಾಂಧವರ ಉದ್ಧಾರಕ್ಕಾಗಿ ಟೊಂಕಕಟ್ಟಲು, ಆತನಲ್ಲಿ ಈಶ್ವರನ ಆವೇಶವು ಆಗಿಯೇ ಆಗುತ್ತದೆ. ಶಿವರಾಯನಿಗೆ ಕಷ್ಟಕಾಲದಲ್ಲಿ ಶ್ರೀ ಭವಾನಿಯ ಆವೇಶವಾಗುತ್ತಿರುವದನ್ನು ನೀನು ಕೇಳಿಲ್ಲವೆ? ಹಾಗೆಯೇ ನೀನು ಅಹಂಕಾರರಹಿತನಾಗಿ ಸ್ವದೇಶೋದ್ಧಾರದಲ್ಲಿಯೇ ದೃಷ್ಟಿಯನ್ನಿಟ್ಟು ಮದಮಾತ್ಸರ್ಯಾದಿ ದೋಷಗಳಿಗೆ ಎಡೆಗೊಡದೆ, ಸರ್ವಕ್ಕೂ ಕರ್ತೃವು ಪರಮೇಶ್ವರನೆಂಬ ದೃಢವಾದ ನಂಬಿಗೆಯಿಂದ ಸ್ವದೇಶೋದ್ಧಾರದ ಕಾರ್ಯದಲ್ಲಿ ತಲ್ಲೀನನಾದೆಯೆಂದರೆ, ಸತ್ಪುರುಷರಿದ್ದವರು ಬೈಲಿಗೆ ಬಂದು ನಿನಗೆ ಸಹಾಯ ಮಾಡಿಯೇ ಮಾಡುವರು. ತರುಣವೀರಾ, ಛತ್ರಸಾಲಾ, ಸತ್ಪುರುಷರ ಸಹಾಯವು ದೈವೀಭಾವಕ್ಕಲ್ಲದೆ ಆಸುರೀಭಾವಕ್ಕೆ ಸರ್ವಥಾ ದೊರೆಯದೆಂಬದನ್ನು ಚೆನ್ನಾಗಿ ನೆನಪಿನಲ್ಲಿಡು. ಆಸುರೀ ಭಾವವೆಂದರೆ, ನನ್ನಿಂದ ಕಾರ್ಯವಾಗುತ್ತದೆಂಬ ಭಾವವು; ದೈವೀ ಭಾವವೆಂದರೆ, ದೇವರಿಂದ ಕಾರ್ಯವಾಗುತ್ತದೆಂಬ ಭಾವವು! ದೈವೀ ಭಾವದವರಿಗೆ ಸತ್ಪುರುಷರ ಸಹಾಯವು ಒದಗಿ ಲೋಕಕ್ಕೆ ಶಾಂತಿಯು ದೊರೆಯುವದು. ಆಸುರೀ ಭಾವದವರಿಗೆ ದುಷ್ಟರ ಸಹಾಯವು ಒದಗಿ ಲೋಕಕ್ಕೆ ತಾಪವುಂಟಾಗುವದು; ಆದ್ದರಿಂದ ಛತ್ರಸಾಲಾ, ದಳಪತರಾಯಾ, ಎಲ್ಲ ನಿಮ್ಮ ಕೈಯಲ್ಲಿರುತ್ತದೆ. ನೀವು ಪೌರುಷಿಗಳಾಗಿ ನಿಸ್ಪೃಹತೆಯಿಂದಲೂ, ನಿರಹಂಕಾರದಿಂದಲೂ ಬುಂದೇಲದ ಸ್ವಾತಂತ್ರ್ಯದ ಕಾರ್ಯದಲ್ಲಿ ತೊಡಗಿರಿ; ಅಂದರೆ ಪ್ರಾಣನಾಥನೂ ತನ್ನ ಯೋಗ್ಯತೆಯಂತೆ ಸಹಾಯಮಾಡುವನು!

ಹೀಗೆ ಪ್ರಾಣನಾಥ ಪ್ರಭುಗಳು ಅಭಿವಚನವಿತ್ತದ್ದನ್ನು ಕೇಳಿ ಎಲ್ಲರಿಗೂ ಪರಮಾನಂದವಾಯಿತು. ಸುಫಲಾದೇವಿಯು ಆನಂದಪರವಶಳಾಗಿ

ಪ್ರಾಣನಾಥ ಪ್ರಭುಗಳನ್ನು ಕುರಿತು—ಪ್ರಭೋ, ಬುಂದೇಲಖಂಡದ ಮಹಾ ದಾ್ಭಗ್ಯವು ತಮ್ಮ ವರದವಾಣಿಯಿಂದ ಇಂದು ತೆರೆಯಿತೆಂದು ನಾನು ನಿಶ್ಚಯವಾಗಿ ತಿಳಿದುಕೊಳ್ಳುವೆನು. ಬುಂದೇಲಖಂಡದ ಭಾಗ್ಯದ ಕಾಲವು ಸಮೀಪಿಸಿದ್ದರಿಂದಲೇ ತಮ್ಮಂಥ ಮಹಾತ್ಮರ ವರದವಾಣಿಯು ಹೊರಡುವದು. ದಕ್ಷಿಣದಲ್ಲಿ ಶಿವರಾಯನು ರಾಜ್ಯಸ್ಥಾಪಿಸುವದಕ್ಕಿಂತ ಮೊದಲೇ ಶ್ರೀ ಸಮರ್ಥ ರಾಮದಾಸರೂ, ಅವರ ಶಿಷ್ಯರೂ ಮಹಾರಾಷ್ಟ್ರದಲ್ಲೆಲ್ಲ ಸಂಚರಿಸಿ ಜನರ ಮನೋವೃತ್ತಿಗಳನ್ನು ಉಜ್ವಲಗೊಳಿಸಹತ್ತಿದ್ದರೆಂದು ಕೇಳಿದ್ದೇನೆ. ಔರಂಗಜೇಬನಂಥ ಕಪಟಪಟುಬಾದಶಹನಿಗೂ ನಾಮಹಚ್ಚುತ್ತಿರುವ ಶಿವರಾಯನ ಚರಿತ್ರವನ್ನು ಹೇಳುತ್ತಿರುವಾಗ, ಇಂತಹ ಎಷ್ಟೋ ಮಾತುಗಳು ಹೊರಡುತ್ತಿರುವವು; ಆದರೆ ಪ್ರಭೋ, ನಮ್ಮ ಸುದೈವದಿಂದ ನಮ್ಮ ಬುಂದೇಲಿಗಳ ಮನೋವೃತ್ತಿಗಳು ತಿದ್ದಿ, ಅವು ಪರಿಶುದ್ಧವಾಗಿ ಸ್ವಾತಂತ್ರ್ಯಪ್ರಾಪ್ತಿಗೆ ಬೇಕಾಗುವ ಉದಾತ್ತ ಗುಣಗಳಿಂದ ಅಲಂಕೃತವಾಗುವದನ್ನು ನಾವು ಬೇಗನೆ ನೋಡುವೆವೆಂದು ನಿಶ್ಚಯವಾಗಿ ತಿಳಿದುಕೊಳ್ಳುತ್ತೇನೆ.

ಪ್ರಭು—ವಿಂಧ್ಯವಾಸಿನಿಯ ಕೃಪೆಯಿಂದ ಬುಂದೇಲಕ್ಕೆ ಬೇಗನೆ ಸ್ವಾತಂತ್ರ್ಯವು ಪ್ರಾಪ್ತವಾಗುವದು; ಆದರೆ ಸುಫಲಾದೇವೀ, ಇನ್ನು ನಮಗೆ ಹೋಗಲಿಕ್ಕೆ ಅನುಜ್ಞೆಯನ್ನು ಕೊಡು. ನಾವು ಇಲ್ಲಿ ಬಹಳ ಹೊತ್ತು ಇರಲಾಗುವದಿಲ್ಲ. ಬುಂದೇಲಖಂಡವು ದಿನದಿನಕ್ಕೆ ಹೆಚ್ಚುಹೆಚ್ಚು ಪರತಂತ್ರವಾಗುತ್ತಿರಲು, ಮತ್ತು ಸ್ವಾತಂತ್ರ್ಯದ್ರೋಹಿಗಳ ಕಾಟವು ದೇಶದಲ್ಲಿ ದಿನದಿನಕ್ಕೆ ಹೆಚ್ಚುತ್ತಿರಲು ದೇಶೋದ್ಧಾರದ ಭಾರವನ್ನು ಹೊತ್ತಿರುವವರು ಒಂದು ಕ್ಷಣವೂ ಆಲಸ್ಯಕ್ಕೆ ಒಳಗಾಗತಕ್ಕದ್ದಲ್ಲ. ಅನುಕೂಲ ಕಾಲವು ಒದಗಿತೆಂದು ಒಂದು ಕ್ಷಣವೂ ಸುಮ್ಮನೆ ಕುಳಿತುಕೊಳ್ಳಬಾರದು. ದೇಶಕಾರ್ಯಮಾಡುವವರು ಒಮ್ಮೊಮ್ಮೆ ಸುಮ್ಮನೆ ಕುಳಿತುಕೊಳ್ಳಬೇಕಾಗುವದೆಂಬದು ನಿಜವು; ಆಗ ಅವರು ಬಹಿರಂಗವ್ಯಾಪಾರಶೂನ್ಯರಾಗಿದ್ದಂತೆ ತೋರಿದರೂ ಅವರ ಆಂತರಂಗದ ವ್ಯಾಪಾರವು ಅವ್ಯಾಹತವಾಗಿ ನಡದೇ ಇರುವದು. ಈ ಆಂತರಂಗವ್ಯಾಪಾರವು ಆತ್ಮಶುದ್ಧಿಯದಾಗಿರಬಹುದು; ಅಥವಾ ಅನುಕೂಲ ಕಾಲವನ್ನು ಒದಗಿಸಿಕೊಡುವಂತೆ ದೇವರನ್ನು ಪ್ರಾರ್ಥಿಸುವದಾಗಿರಬಹುದು; ಅಥವಾ ಸದುಪದೇಶದಿಂದ ಜನರ ಅಜ್ಞಾನವನ್ನು ಹೊರದೂಡುವದಾಗಿರಬಹುದು. ಹೀಗೆ

ಒಂದಿಲ್ಲೊಂದುಬಗೆಯ ಕಾರ್ಯದಲ್ಲಿತೊಡಗಿ ಅನುಕೂಲ ಕಾಲವನ್ನೂ, ಅನುಕೂಲ ಪರಿಸ್ಥಿತಿಯನ್ನೂ ತಂದುಕೊಳ್ಳಬೇಕಾಗುವದಲ್ಲದೆ, ಬರಿಯ ಮಾರ್ಗನಿರೀಕ್ಷಣಮಾಡುತ್ತ ಕೈಮುಚ್ಚಿಕುಳಿತುಕೊಂಡರೆ ಯಾವಕಾರ್ಯವೂಆಗಲಿಕ್ಕಿಲ್ಲ;ಆದ್ದರಿಂದ ಸುಫಲಾದೇವೀ, ಇನ್ನು ನಾವು ಮೂವರೂ ಹೊರಡುವೆವು. ಬುಂದೇಲಖಂಡದಲ್ಲಿ ಅನುಕೂಲ ಪರಿಸ್ಥಿತಿಯು ಉಂಟಾಗುವವರೆಗೆ ನೀನು ಸರಲಾದೇವಿಯ ಸಂರಕ್ಷಣದ ಒಂದೇ ಕಾರ್ಯವನ್ನು ಮಾಡಬೇಕಾಗುವದು. ರಾಜಾ ಜಯಸಿಂಗನು ಚಂಪತರಾಯನ ಮಿತ್ರನಿರುವದರಿಂದ ಛತ್ರಸಾಲನ ಚಿಂತೆಯು ನಮಗಿದ್ದಿಲ್ಲ; ಸರಲಾದೇವಿಯನ್ನು ಎಲ್ಲಿಇಡಬೇಕೆಂಬ ಚಿಂತೆಯು ನಮ್ಮನ್ನು ಬಹಳವಾಗಿ ಬಾಧಿಸುತ್ತಿತ್ತು; ಆದರೆ ನಿನ್ನಿಂದ ಅಭಯವಚನವು ಸಿಕ್ಕಿದ್ದರಿಂದ ಆ ಚಿಂತೆಯ ಪರಿಹಾರವೂ ಇಂದುಆಯಿತು. ಸುಫಲಾದೇವೀ, ಸರಲಾದೇವಿಯ ಮೇಲೆ ನಿನ್ನ ಪ್ರೇಮವು ವಿಶೇಷವಾಗಿರುತ್ತಿದ್ದರೂ, ಆಕೆಯು ಇಲ್ಲಿ ಅಜ್ಞಾತವಾಸದಲ್ಲಿ ಕಾಲಹರಣಮಾಡಬೇಕೆಂದಿರುವಳೆಂಬವನ್ನು ಮರೆಯಬೇಡ. ರಾಜಾ ಕಂಚುಕಿರಾಯನು ಹೀರಾದೇವಿಯ ಕೈಗೊಂಬೆಯಾಗಿರುವನು. ಆತನು ಸರಲಾದೇವಿಯಮೇಲೆ ಯಾವ ಬಗೆಯ ವಿಪತ್ತನ್ನುಂಟುಮಾಡುವನೆಂಬದನ್ನು ಹೇಳಲಾಗುವದಿಲ್ಲ; ಆದ್ದರಿಂದ ನಾನು ಮತ್ತೆ ಮತ್ತೆ ಈ ಮಾತನ್ನು ನಿನಗೆ ಹೇಳುತ್ತಿರುವೆನು.



೧೭ನೆಯ ಪ್ರಕರಣ-ಲಲಿತೆಯು ಪಿಶಾಚವು.

ಚಂಪತರಾಯನು ಮರಣಕಾಲದಲ್ಲಿ ಆಡಿದ ಮಾತುಗಳಿಂದ ಸಭಾಕರಣನ ಸಂಶಯವು ದೂರವಾಯಿತೆಂಬದನ್ನು ವಾಚಕರು ಬಲ್ಲರು. ಅಂದಿನಿಂದ ಸಭಾಕರಣನ ಹೃದಯವು ಪಶ್ಚಾತ್ತಾಪದಿಂದದಗ್ಧವಾಗತೊಡಗಿತು. ಆತನು ಅತ್ಯಂತ ಉದಾಸೀನನಾದನು. ನಾನು ಒಂದು ಸಣ್ಣ ಮಾತಿನ ಸ್ಪಷ್ಟೀಕರಣವನ್ನು ಮಾಡಿಕೊಳ್ಳದೆ ಹೀರಾದೇವಿಯಂತಹ ನೀಚಸ್ತ್ರೀಯ ಮಾತನ್ನು ಕೇಳಿ ಎಂಥ ಭಯಂಕರ ಕೆಲಸವನ್ನು ಮಾಡಿದೆನಲ್ಲ! ಈಗ ಕೇಳಿದಂತೆ ಹೀರಾದೇವಿಯು ನನ್ನ ಮನಸ್ಸನ್ನು ಕೆಡಿಸಿದ ದಿವಸವೇ ನಾನು ಚಂಪತರಾಯನನ್ನು ಯಾಕೆ ಕೇಳಿರಲಿಕ್ಕಿಲ್ಲ? ಚಂಪತರಾಯನು ನನ್ನ ಮಿತ್ರನಿದ್ದಿಲ್ಲವೆ? ಅಂತಹ ಮಹಾತ್ಮನಾದ ಬಾಲ ಮಿತ್ರನಲ್ಲಿಯೂ ದೋಷವನ್ನು ಆರೋಪಿಸಿ

ತಟ್ಟನೆ ಆತನ ನಾಶಕ್ಕಾಗಿ ನಾನು ಪ್ರತಿಜ್ಞೆಯನ್ನುಮಾಡಬಹುದೇ? ಎಂತಹ ನನ್ನ ಅವಿಚಾರವಿದು! ನಾನು ಎಷ್ಟುಶೀಘ್ರಕೋಪಿಯು! ದುಷ್ಟನು ನಾನು ದೇಶದ್ರೋಹಿಯಾಗಿ ಹಲವುಜನ ದೇಶಬಾಂಧವರ ಕೊಲೆಮಾಡಿದೆನು; ಚಂಪ ತರಾಯನಂಥ ಮಹಾತ್ಮನಾದ ದೇಶಭಕ್ತನ ದ್ರೋಹಬಗೆದು ಆತನನ್ನು ನಾಶಗೊಳಿಸಿದೆನು. ಈ ಮಹಾಪರಾಧಕ್ಕಾಗಿ ಯನು ಲೋಕದಲ್ಲಿ ನನಗೆ ಯಾವ ನರಕವು ಸಿದ್ಧವಾಗಿರಬಹುದು ! ಸಭಾಕರಣಾ, ಏನು ನಿನ್ನ ಯೋಗ್ಯತೆಯು ! ನೀನು ಮಹಾ ಪ್ರತಾಪಿಯೂ,ಶೂರನೂ, ಅಚಲ ಧೈರ್ಯ ಶಾಲಿಯೂ, ಸತ್ಯಪ್ರತಿಜ್ಞನೂ ಎಂದು ಬುಂದೇಲಖಂಡವು ಅಭಿಮಾನದಿಂದ ಹೇಳಿಕೊಳ್ಳುತ್ತಿತ್ತಲ್ಲ; ಆದರೆ ದೇಶದ್ರೋಹದಿಂದ ತೇಜೋಹೀನನಾದನೀನು ಇನ್ನು ಲೋಕದಲ್ಲಿ ಏನೆಂದು ಪ್ರಸಿದ್ಧನಾಗುವೆ? ಇಂಥ ಕೆಟ್ಟಮೋರೆಯ ಸಭಾಕರಣನು ನೀನು ಬುಂದೇಲಖಂಡಕ್ಕೆ ಇನ್ನು ಮೋರೆಯನ್ನು ಹೇಗೆ ತೋರಿಸುವೆ? ಛಿಛೀ! ನಾನು ಬಾಳಿದ್ದುವ್ಯರ್ಥವಾಯಿತು; ಇನ್ನು ಬಾಳುವದೂ ವ್ಯರ್ಥವೇ ಸರಿ! ಆದರೆ ಮಾಡಲೇನು? ಸ್ತ್ರೀಯರಂತೆ ಆತ್ಮಹತ್ಯ ಮಾಡಿ ಕೊಳ್ಳಲಾ ? ದುರ್ಮರಣದಿಂದ ನರಕವಲ್ಲದೆ ಯಾವ ಪುರುಷಾರ್ಥವು ಸಾಧಿಸುವದು ? ಹಾಗೆಮಾಡುವದು ಯೋಗ್ಯವಲ್ಲ. ಮೊದಲು ಹೀರಾದೇವಿಯನ್ನು ಕಂಡು ನನ್ನ ಪ್ರಿಯ ಲಲಿತೆಯ ನಿಜವಾದ ಸಂಗತಿಯನ್ನುಕೇಳಿಕೊಳ್ಳುವೆನು. ಆ ದುಷ್ಟಳು ಸುಳ್ಳುಹೇಳಿದಳೆಂಬ ಮಾತು ಸಿದ್ಧವಾದ ಕೂಡಲೆ ಆಕೆಗೆ ತಕ್ಕ ಶಾಸನಮಾಡಿ, ಪ್ರಿಯ ಛತ್ರಸಾಲನ ದೇಶೋದ್ಧಾರದ ಕಾರ್ಯಕ್ಕೆ ಸಹಾಯ ಮಾಡುತ್ತ ರಣಭೂಮಿಯಲ್ಲಿ ದೇಹವಿಡುವೆನು.

ಈ ಮೇರೆಗೆ ಆಲೋಚಿಸಿ ಸಭಾಕರಣನು ಸಮರಭೂಮಿಯಿಂದ ನೆಟ್ಟಗೆ ಹೀರಾದೇವಿಯ ಬಳಿಗೆ ಬಂದನು. ಆಗ ಹೀರಾದೇವಿಯು ತನ್ನ ಶಯ್ಯಾಗೃಹದಲ್ಲಿ ಕಂಚುಕಿರಾಯನೊಡನೆ ಏನೋ ಆಲೋಚಿಸುತ್ತ ಕುಳಿತಿದ್ದಳು; ಆಕೆಯ ಆಲೋಚನೆಯೊಳಗಿನ ದುಷ್ಟತನವು ಆಕೆಯ ಮುಖದಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು. ಅಷ್ಟರಲ್ಲಿ ಸಭಾಕರಣನು ಶಯ್ಯಾಗೃಹದ ಬಾಗಿಲನ್ನು ಧಡಲ್ಲನೆ ತೆರೆದು ಒಳಗೆಹೋದನು. ಆಗ ಹೀರಾದೇವಿಯು ಮೆಟ್ಟಿಬಿದ್ದು ಬಾಗಿಲಕಡೆಗೆ ನೋಡುತ್ತಾಳೆ,ಸಭಾಕರಣನು! ಆತನನಿಸ್ತೇಜವಾದ, ಆದರೆ ಉಗ್ರವಾಗಿರುವ ಮೋರೆಯನ್ನು ನೋಡಿ ಆಕೆಯು ಬೆದರಿದಳು;

ಕಂಚುಕಿರಾಯನ ಅವಸ್ಥೆಯು ಕಂಚುಕಿರಾಯನಿಗೆ ಆಗಿಹೋಗಿತ್ತು! ಆತನು ತನ್ನ ಜರದಶಾಲನ್ನು ಎಷ್ಟು ಮೈತುಂಬಹೊದ್ದುಕೊಂಡರೂ ನಡಗು ನಿಲ್ಲಲೊಲ್ಲದು. ಆತನು ಆಗಿನ ಸಭಾಕರಣನ ಮುಂದೆ ಕುಳಿತುಕೊಳ್ಳಲಾರದೆ ತಟ್ಟನೆ ಎದ್ದುನಿಂತನು. ಹೀರಾದೇವಿಯು ತನಗುಂಟಾಗಿದ್ದ ಅಂಜಿಕೆಯನ್ನು ಅಡಗಿಸಿಕೊಳ್ಳುತ್ತ ಸಭಾಕರಣನನ್ನು ಕುರಿತು—

ಹೀರಾದೇವಿ—ಯಾರು? ಸಭಾಕರಣ! ನೀವು ಗುರುತು ಸಿಗದಹಾಗೆ ಆಗಿರುವಿರಲ್ಲ? ನಿಮ್ಮ ಮೋರೆಯು ಇಷ್ಟೇಕೆ ಕಪ್ಪಿಟ್ಟಿದೆ? ಯುದ್ಧದಲ್ಲಿ ಬಲವಾದ ಗಾಯವಾಗಿ ನಿಮ್ಮ ಮೈಯೊಳಗಿನ ರಕ್ತ ಹೋಗಲು, ಇಷ್ಟು ನೀವು ತೇಜೋಹೀನರಾಗಿರುವಿರೋ ಏನು?

ಈ ಮೇರೆಗೆ ಉಪಚಾರದ ಮಾತುಗಳನ್ನಾಡುತ್ತಿರಲು, ಸಭಾಕರಣನು ನಡುವೆ ಬಾಯಿಹಾಕಿ—

ಸಭಾಕರಣ—ಹೀರಾದೇವೀ, ನಿನ್ನ ಉಪಚಾರದ ಮಾತುಸಾಕು! ಲಲಿತೆಯ ವಿಷಯವಾಗಿ ನೀನು ನನ್ನಮುಂದೆ ಸುಳ್ಳುಹೇಳಿರುವೆ; ಆದರೆ ಒಳ್ಳೆಯಮಾತಿನಿಂದ ನಿಜವಾದ ಸಂಗತಿಯನ್ನು ಹೇಳು. ದುಷ್ಟಳೇ, ನನ್ನ ಮೋರೆಯುಕಪ್ಪಿಟ್ಟಿರುವದೆಂದು ಚೇಷ್ಟೆಮಾಡುವೆಯಾ? ದೇಶದ್ರೋಹಿಯೂ, ಮಿತ್ರದ್ರೋಹಿಯೂ, ಬಂಧುದ್ರೋಹಿಯೂ ಆಗಿರುವ ಸಭಾಕರಣನ ಮೋರೆಯು ಕಪ್ಪಿಡದೆ ಪ್ರಕಾಶಿತವಾದೀತೇ? ಈ ಸಭಾಕರಣನ ತೇಜೋಹಾನಿಗೆ ನೀನೇ ಕಾರಣಳು, ಹೇಳು, ಲಲಿತೆಯ ನಿಜವಾದ ಸಂಗತಿಯನ್ನು ಬೇಗನೆ ಹೇಳು, ತಡಮಾಡಿದರೆ ದಯಾಶೂನ್ಯನಾಗಿರುವ ಈ ಸಭಾಕರಣನು ಏನುಮಾಡುವನೆಂಬದನ್ನು ಹೇಳಲಾಗುವದಿಲ್ಲ!

ಸಭಾಕರಣನ ಈ ಚಮತ್ಕಾರದ ಪ್ರಶ್ನವು ಅಕಸ್ಮಾತ್ ಕಿವಿಗೆ ಬಿದ್ದದ್ದರಿಂದ ಹೀರಾದೇವಿಯು ಆಶ್ಚರ್ಯಮಗ್ನಳಾಗುತ್ತಿರುವಾಗ, ಆಕೆಯ ಹೃದಯವು ಭಯದಿಂದ ನಡುಗತೊಡಗಿತು. ಸಭಾಕರಣನ ಮನಸ್ಸನ್ನು ಕೆಡಿಸಿ ತನ್ನ ದುರಾಲೋಚನೆಗೆ ಆತನನ್ನು ಅನುಕೂಲಮಾಡಿಕೊಳ್ಳಬೇಕೆಂದು ಲಲಿತೆಯ ಸುದ್ದಿಯನ್ನು ತಾನು ಸುಳ್ಳೇ ಹುಟ್ಟಿಸಿಕೊಂಡು ಹೇಳಿದ್ದು, ಈಗ ಯಾಕೆ ಈತನ ಮನಸ್ಸಿನಲ್ಲಿ ಆ ಸುದ್ದಿಯು ಬಂದಿತೆಂಬದನ್ನು ಆಕೆಯು ತಿಳಿಯದಾದಳು. ಆ ಸಂಗತಿಯು ಒದಗಿ ಇಂದಿಗೆ ಹದಿನಾರು ವರ್ಷಗಳಾಗಿ

ಹೋದದ್ದರಿಂದ, ಲಲಿತೆಯ ಹೆಸರನ್ನೂ ಎಲ್ಲರೂ ಮರೆತು ಬಿಟ್ಟಿದ್ದರೆಂದು ಹೇಳಬಹುದು. ಸಭಾಕರಣನಂತು ತನ್ನ ಆ ತಂಗಿಯ ಹೆಸರನ್ನು, ಆಕೆಯು ಕೆಟ್ಟನಡತೆಯವಳೆಂದು ತಿಳಿದು ಬುದ್ಧಿಪೂರ್ವಕವಾಗಿ ಮರೆತುಬಿಟ್ಟಿದ್ದನು. ಆ ಸೌಂದರ್ಯದ ಲತೆಯು, ಆ ಸದ್ಗುಣಗಳಖನಿಯು ಅಕಸ್ಮಾತ್ ಬುಂದೇಲಖಂಡವಲ್ಲಿ ಇಲ್ಲದಹಾಗದದ್ದಕ್ಕಾಗಿ ಬೇರೆಬೇರೆ ಜನರಲ್ಲಿ ಬೇರೆ ಬೇರೆತರ್ಕಗಳು ಆಗಿ, ಆ ತರ್ಕಗಳೆಲ್ಲ ಒಂದೊಂದು ಕಥೆಗಳಾಗಿ ಹೋಗಿದ್ದವು! ಹೀಗಿರಲು, ಯಮಸ್ವರೂಪಿಯಾದ ಸಭಾಕರಣನು ಅತ್ಯಂತ ನಿಷ್ಕುರನಾಗಿ ಲಲಿತೆಯ ನಿಜವಾದ ಸುದ್ದಿಯನ್ನು ಹೇಳೆಂದು ಗದ್ದರಿಸಿ ಕೇಳಿದ್ದರಿಂದ, ಹೀರಾದೇವಿಯ ಬಾಯಿಂದ ಮಾತುಗಳೇ ಹೊರಡದಾದವು. ಅದನ್ನು ನೋಡಿ ಸಭಾಕರಣನು—"ಯಾಕೆ ಹೀರಾದೇವಿ, ಮಾತಾಡಲೊಲ್ಲೆ? ಹೀಗೆ ಸುಮ್ಮನೆ ಕುಳಿತರೆ ಪಾರಾದೆಯೆಂದು ತಿಳಿದಿರುವೆಯೇನು? ಹೇಳು, ನಿನ್ನ ಅಪರಾಧಕ್ಕೆ ಯಾವ ಶಿಕ್ಷೆಯನ್ನು ಕೊಡಲಿಹೇಳು. ದುಷ್ಟಳೇ, ಸಭಾಕರಣನ ಬುದ್ಧಿಯನ್ನು ಕೆಡಿಸಿ ದೇಶದ್ರೋಹದ ಕಾರ್ಯದಲ್ಲಿ ಆತನನ್ನು ತೊಡಗಿಸಿದೆ; ವಿಷಪ್ರಯೋಗದಿಂದ ಚಂಪತರಾಯನನ್ನು ಕೊಲ್ಲಹೋಗಿ ನಿನ್ನ ಗಂಡನನ್ನು ಕೊಂದೆ; ಬುಂದೇಲದ ರಾಜರ ದುರ್ಬಲವಾದ ನೀಚಮನೋವೃತ್ತಿಗಳನ್ನು ನಿನ್ನಕಡೆಗೆ ಎಳಕೊಂಡು, ಚಂಪತರಾಯನಂಥ ಮಹಾತ್ಮನನ್ನು ನೀಗಿಇಟ್ಟೇ! ಅಧಮಸ್ತ್ರೀಯೆ, ನಿನ್ನ ಈ ಎಲ್ಲ ಅಪರಾಧಗಳಿಗೆ ತಕ್ಕ ಶಿಕ್ಷೆಯಾವದೆಂಬದು ನನಗೆ ಗೊತ್ತಾಗಲೊಲ್ಲದು. ನೀನೇಹೇಳು, ನಿನಗೆ ಯಾವ ಶಿಕ್ಷೆಕೊಡಲಿ? ಅಥವಾ ಈ ಹೇಡಿ ಕಂಚುಕಿರಾಯನಾದರೂ ನಿನಗೆ ಯಾವ ಶಿಕ್ಷೆಕೊಡಬೇಕೆಂಬದನ್ನು ಹೇಳಲಿ! ಏ ಅಂಜುಬುರುಕಾ, ನೀನು ದಿಲ್ಲಿಯ ಜನಾನಖಾನೆಯಲ್ಲಿ ಬಹುದಿವಸ ಕಾಲಕಳೆದಿರುವದರಿಂದ, ಜನರ ಪ್ರಾಣಹರಣಮಾಡುವ ಪಲವು ಕ್ರೂರತನದ ಶಿಕ್ಷೆಗಳು ನಿನಗೆ ಗೊತ್ತಿರುವವು! ಆದ್ದರಿಂದ ಹೇಳು, ಈ ಅಧಮಳಿಗೆ ಯಾವ ಶಿಕ್ಷೆಕೊಡಲಿ ಹೇಳು.

ಇಷ್ಟೇ ಅವಕಾಶವು ದೊರೆಯಲು, ಹೀರಾದೇವಿಯು ತನ್ನ ಅಂಜಿಕೆಯ ಚಿಹ್ನವನ್ನು ಕೃತ್ರಿಮನಗೆಯಿಂದ ಅಡಗಿಸಿಕೊಳ್ಳುತ್ತ ಮೃದುಸ್ವರದಿಂದ-

ಹೀರಾದೇವಿ—ಸಭಾಕರಣ, ಸ್ವಲ್ಪ ಶಾಂತರಾಗಿರಿ! ನಾನು ನಿಜವಾಗಿಯೇ ಶಿಕ್ಷೆಗೆ ಪಾತ್ರಳಿದ್ದರೆ, ನೀವು ಉಚ್ಚರಿಸಿದಶಿಕ್ಷೆಯನ್ನು ನಾನು ಆನಂದ

ದಿಂದ ಭೋಗಿಸುವೆನು; ಆದರೆ ಶಿಕ್ಷೆಕೊಡುವ ಮೊದಲು ಕ್ಷಣಮಾತ್ರ ವಿಚಾರಮಾಡಿರಿ. ಸಾಗರದ ಲಲಿತೆಯ ವಿಷಯದ ಸುಳ್ಳು ಸುದ್ದಿಹೇಳಿದೆನೆಂದು ನನ್ನಮೇಲೆ ನಿಮ್ಮ ಆರೋಷವಿರುವದಲ್ಲವೆ?

ಸಭಾಕರಣ (ತಿರಸ್ಕಾರದಿಂದ)—ಹೌದು.

ಹೀರಾದೇವಿ—ಚಂಪತರಾಯನು ಲಲಿತೆಯಮೇಲೆ ಬಲಾತ್ಕಾರಮಾಡಿರುವದಿಲ್ಲವೆಂಬ ಬಗ್ಗೆ ನಿಮ್ಮ ನಂಬಿಗೆಯು ಸಂಪೂರ್ಣವಾಗಿ ಆಗಿದೆಯೋ?

ಸಭಾಕರಣ—ಹೀರಾದೇವಿ, ಹಾಗೆ ನಂಬಿಗೆಯಾಗದೆ ಸಭಾಕರಣನು ನಿನ್ನನ್ನು ಕೇಳುತ್ತಾನೆಂದು ತಿಳಿದಿರುವೆಯೇನು? ಲಲಿತೆಯು ನನಗೆ ಏನಾಗಬೇಕೆಂಬದರ ಎಚ್ಚರವು ನಿನಗಿರುವದಷ್ಟೆ? ನನ್ನ ತಂಗಿಯ ವಿಷಯವಾಗಿ ಕೆಟ್ಟ ಆರೋಪಮಾಡಿ ನನ್ನ ಮನಸ್ಸು ಕೆಡಿಸಿದ ನೀನು, ಈಗ ಮತ್ತೆ ಅದೇ ಆರೋಪವನ್ನು ನನ್ನಮುಂದೆ ಉಚ್ಚರಿಸುತ್ತೀಯಾ? ಹೀರಾದೇವೀ, ಲಲಿತೆಯ ಕೌಮಾರ್ಯದ ಭಂಗವಾಗಿರುವದಿಲ್ಲ. ಬುಂದೇಲದ ತನ್ನ ಬಂಧು-ಭಗಿನಿಯರ ಸಲುವಾಗಿ ತನ್ನ ಸರ್ವಸ್ವವನ್ನು ಕಳೆದುಕೊಳ್ಳಲು ಸಿದ್ಧನಾಗಿ ಪರಿಪರಿಯ ಕಷ್ಟಗಳನ್ನು ಹೊಂದಿದ ಮಹಾತ್ಮನಾದ ಚಂಪತರಾಯನು, ಒಬ್ಬ ಸಚ್ಛೀಲ ಕುಮಾರಿಕೆಯಮೇಲೆ ಕೈಮಾಡುವನೆಂದು ತಿಳಿದುಕೊಳ್ಳುವದು ಅತ್ಯಂತ ಅಧಮತನವು! ಹೀರಾದೇವೀ, ಚಂಪತರಾಯನು ಲಲಿತೆಯನ್ನು ತನ್ನ ತಂಗಿಯೆಂದು ತಿಳಿದು ಪ್ರೀತಿಸುತ್ತಿದ್ದನು. ಅವರಿಬ್ಬರು ಅಣ್ಣತಂಗಿಯರಾಗಿದ್ದರೆಂಬ ನಂಬಿಗೆಯು ನನಗೆ ಸಂಪೂರ್ಣವಾಗಿ ಆಗಿದೆ.

ಈ ಮಾತುಗಳನ್ನು ಕೇಳಿ ಹೀರಾದೇವಿಯ ಮುಖವು ನಿಸ್ತೇಜವಾಯಿತು. ಆದರೂ ಆಕೆಯು ಕೃತ್ರಿಮ ಧೈರ್ಯದಿಂದ—

ಹೀರಾದೇವಿ— ಲಲಿತೆಯು ಚಂಪತರಾಯನ ಪಾಪಾಚರಣೆಯಿಂದ ದೇಹತ್ಯಾಗಮಾಡಿರುವದಿಲ್ಲೆಂಬ ನಂಬಿಗೆಯು ನಿಮಗೆ ಹೇಗೆ ಆಯಿತು?

ಸಭಾಕರಣ— ಪಾತಕಿ ಸ್ತ್ರೀಯೇ, ಮಹಾತ್ಮನಾದ ಚಂಪತರಾಯನು ಸಮರಭೂಮಿಯಲ್ಲಿ ಬಿದ್ದು ಪ್ರಾಣಬಿಡುವಾಗ ಲಲಿತೆಯಮೇಲೆ ನನ್ನ ಶುದ್ಧವಾದ ಭಗಿನೀ ಪ್ರೇಮವಿತ್ತೆಂದು ಸ್ವತಃ ತನ್ನ ಬಾಯಿಂದ ಹೇಳಿರುವನು. ಜನ್ಮದಲ್ಲಿ ಚಂಪತರಾಯನು ಸುಳ್ಳುಮಾತಾಡಿದವನಲ್ಲ. ಅಂದ್ಧಬಳಿಕ ಅಂತಕಾಲದಲ್ಲಿ ತನ್ನ ವಾಣಿಗೆ ಅಸತ್ಯದ ಕಲಂಕವನ್ನು ತಗಲಿಸಿಕೊಂಡು ಅತನು ಯಾಕೆ ನರಕಕ್ಕೆ ಗುರಿಯಾದಾನು?

ಹೀರಾದೇವಿ (ನಗುತ್ತ)— ಸಭಾಕರಣ, ಏನು ನಿಮ್ಮ ವಿಶ್ವಾಸವು! ನೀವು ಸಮರಭೂಮಿಯಲ್ಲಿ ಪರಾಕ್ರಮಿಗಳಷ್ಟೇ ಅಲ್ಲದೆ, ಮನುಷ್ಯರ ಪರೀಕ್ಷೆಯು ನಿಮಗೆ ಆಗುವದಿಲ್ಲ! ಆ ಧೂರ್ತ ಚಂಪತರಾಯನು ನಮ್ಮಿಬ್ಬರ ಮನಸ್ಸು ಕೆಡಿಸುವದಕ್ಕಾಗಿ ಹೀಗೆ ಆಡಿರಬಹುದು; ಇಷ್ಟೂ ನಿಮಗೆ ತಿಳಿಯಬಾರದೇನು? ಯಾಕೆ, ಕಂಚುಕಿರಾವ, ನನ್ನ ತರ್ಕವು ನಿಜವಿರಬಹುದಲ್ಲವೆ?

ಕಂಚುಕಿರಾವ (ತಲೆಯಲ್ಲಾಡಿಸುತ್ತ)—ಹೀರಾದೇವಿಯ ತರ್ಕವು ಈವರೆಗೆ ಎಲ್ಲಿಯಾವರೂ ಸುಳ್ಳಾಗಿರುವದೆ? ದಿಲ್ಲಿಯಸಾಮ್ರಾಜ್ಯದಲ್ಲಿ ರೋಷನಾರು, ಬುಂದೇಲಖಂಡದಲ್ಲಿ ಹೀರಾದೇವಿಯು! ಇವರ ಚಾತುರ್ಯವನ್ನು ಯಾರು ಒಪ್ಪಿಕೊಳ್ಳಲಿಕ್ಕಿಲ್ಲ!

ಸಭಾಕರಣ (ಸಂತಾಪದಿಂದ)—ಎಲಾ, ದಿಲ್ಲಿಯಕಂಚುಕಿಯೇ, ಹೀರಾದೇವಿಯಂತಹ ಕಟಕಳ ಮೇಲುಗಟ್ಟುವ ಪಿಶಾಚವೇ, ವ್ಯರ್ಥ ಬಡಬಡಿಸಬೇಡ. ನೀನೂ, ಮಾಯಾವಿಯಾದ ಹೀರಾದೇವಿಯೂ ನನ್ನ ಉಪಹಾಸ ಮಾಡುವಿರಾ? ಹೀರಾದೇವೀ, ಅದು ಏನೇ ಇರಲಿ, ನಿನಗೆ ದೇಹಾಂತ ಪ್ರಾಯಶ್ಚಿತ್ತ ಕೊಡಲು ನಾನು ನಿಶ್ಚಯಿಸಿರುತ್ತೇನೆ. ನೀನು ಬದುಕಿರುವವರೆಗೆ ಬುಂದೇಲಖಂಡಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯು ಆಗಲಾರದು. ಹೇಳು, ನಿನ್ನನ್ನು ಹೇಗೆ ಕೊಲ್ಲಲಿ? ಕುತ್ತಿಗೆ ಹಿಚಿಕಿ ಕೊಲ್ಲಲಾ, ಅಥವಾ ವಜ್ರಮುಷ್ಟಿಯಿಂದ ಗುದ್ದಿ ಕೊಲ್ಲಲಾ, ಅಥವಾ ಒದೆದುಕೊಲ್ಲಲಾ? ಆದರೆ ಈ ಉಪಾಯಗಳಿಂದ ನಿನ್ನನ್ನು ಕೊಲ್ಲುವಾಗ ನಿನ್ನ ಅಪವಿತ್ರ ಅಂಗಕ್ಕೆ ನಾನು ಸ್ಪರ್ಶ ಮಾಡಬೇಕಾಗುವದು; ಮತ್ತು ಆ ಪಾತಕವನ್ನು ಕಳೆದುಕೊಳ್ಳುವದಕ್ಕಾಗಿ ಕಂಚುಕಿರಾಯನಂಥ ದೇಶದ್ರೋಹಿಯನ್ನು ಕೊಲ್ಲಬೇಕಾಗುವದು; ಆದ್ದರಿಂದ ಅಸ್ಥಿಪಂಜರವಾಗಿರುವ ಈ ಕಂಚುಕಿರಾಯನನ್ನು ನಿನ್ನಮೇಲೆ ಅಪ್ಪಳಿಸಿ, ಇಬ್ಬರನ್ನೂ ಒಮ್ಮೆಲೆ ಕೊಂದುಬಿಡುವದು ನೆಟ್ಟಗೆ!

ಮಹಾ ಸಮರ್ಥನಾದ ಸಭಾಕರಣನ ಈ ಮಾತುಗಳನ್ನು ಕೇಳಿ ಕಂಚುಕಿರಾಯನು ಥರಥರ ನಡುಗಹತ್ತಿದನು. ತಾನು ಹೀರಾದೇವಿಯನ್ನು ಕೊಲ್ಲುವದೊಂದು ಸಾಧನವಾಗುವೆನೆಂದು ಆತನು ಬಾಯಿಬಿಡಹತ್ತಿದನು. ಆತನ ಮೋರೆಯಮೇಲೆ ಹೆಣದ ಕಳೆ ಸುರಿಯಹತ್ತಿತು. ಆತನು ಜೀವ ಉಳಿಸಿಕೊಳ್ಳುವದಕ್ಕಾಗಿ ಸಭಾಕರಣನನ್ನು ಕುರಿತು—

ಕಂಚುಕಿರಾಯ (ಕೈಜೋಡಿಸಿ)—ಸಭಾಕರಣ, ಹೀಗೆ ಅನ್ಯಾಯವನ್ನಾ ಡಬೇಡಿರಿ. ಬೇಕಾದರೆ ದಿಲ್ಲಿಯ ದರ್ಬಾರದೊಳಗಿನ, ಅಥವಾ ದಿಲ್ಲಿಯ ಜನಾನಖಾನೆಯೊಳಗಿನ ಮನುಷ್ಯವಧೆಯ ಬೇರೆಬೇರೆ ಪ್ರಕಾರಗಳನ್ನು ನಾನು ನಿಮಗೆ ಹೇಳುವೆನು. ಅವುಗಳಲ್ಲಿ ನಿಮಗೆ ಯೋಗ್ಯಕಂಡ ಉಪಾಯವನ್ನು ನೀವು ಕೈಕೊಳ್ಳಿರಿ; ಆದರೆ ನನ್ನಿಂದ ಹೊಡೆದು ಎರಡುಜೀವಗಳನ್ನು ತಕ್ಕೊಳ್ಳಬೇಡಿರಿ. ನಾನು ಸತ್ತುಬಳಿಕ ನನ್ನ ಪತ್ನಿಯಾದ ಸಾಧ್ವೀಸುಫಲಾ ದೇವಿಯು ಜೀವವಿಂದಿರಲಾರಳು!

ಸಭಾಕರಣ (ಸ್ವಲ್ಪ ಶಾಂತನಾಗಿ)— ಒಳ್ಳೇದು, ಸಾಧ್ವೀ ಸುಫಲಾ ದೇವಿಗೆ ದುಃಖವಾಗಬಾರದೆಂದು ನಾನು ನಿನಗೆ ಜೀವದಾನ ಕೊಡುವೆನು. ಹೋಗು, ಒಂದುಕ್ಷಣವೂ ಇಲ್ಲಿ ನಿಲ್ಲಬೇಡ. ನಾನು ಇನ್ನು ಹೀರಾದೇವಿಯ ಪ್ರಾಣಹರಣಮಾಡುವೆನು; ಆ ಭಯಂಕರ ಪ್ರಕಾರವನ್ನು ನೋಡುವದು ನಿನ್ನಿಂದಾಗಲಿಕ್ಕಿಲ್ಲ ಹೋಗು.

ತನ್ನ ಜೀವವು ಉಳಿಯಿತೆಂಬ ಆನಂದದಿಂದ ಕಂಚುಕಿರಾಯನು ಹೊರಟುಹೋದನು. ಆಗ ಸಭಾಕರಣನು ಹೀರಾದೇವಿಯನ್ನು ಕುರಿತು—

ಸಭಾಕರಣ—ಏ! ಹೀರಾದೇವೀ, ಹೇಳು, ಲಲಿತೆಯು ಆತ್ಮಹತ್ಯ ವನ್ನು ಯಾಕೆ ಮಾಡಿಕೊಂಡಳೆಂಬದನ್ನು ನಿಜವಾಗಿ ಹೇಳು.

ಹೀರಾದೇವಿ—ಸಭಾಕರಣ, ನಾನು ರಾಜಕಾರಣದಲ್ಲಿ ಸುಳ್ಳು ಆಡಿದ್ಯ ಬಹುದು, ಇತರರೊಡನೆ ನಾನು ಮರೆಮೋಸಮಾಡುತ್ತಿರಬಹುದು ; ಆದರೆ ನಿಮಗೆ ಒಂದು ಅಕ್ಷರವನ್ನೂ ಸುಳ್ಳು ಹೇಳಿರುವದಿಲ್ಲ. ಬಟವಾಸದಿಯ ಮಡುವಿನಲ್ಲಿ ಬಾತು ತೇಲಿಬಂದ ನಿಮ್ಮ ತಂಗಿಯ ಹೆಣವನ್ನು ನೀವು ಗುರುತಿ ಸಲಿಲ್ಲವೆ? ಮಡುವಿನ ದಂಡೆಯಮೇಲೆ ಬಿದ್ದಿರುವ ಆಭರಣಗಳೂ, ಸೀರೆಯೂ ಲಲಿತೆಯವೇ ಎಂದು ನೀವೇ ಹೇಳಲಿಲ್ಲವೆ? ಲಲಿತೆಯು ಆತ್ಮಹತ್ಯನಮಾಡಿ ಕೊಂಡಳೆಂಬ ನಂಬಿಗೆಯು ನಿಮಗೆ ಆಗಿದ್ದಿಲ್ಲವೆ?

ಸಭಾಕರಣ—ಆ ಮಾತು ಸತ್ಯವು, ಲಲಿತೆಯು ಆತ್ಮಹತ್ಯನಮಾಡಿಕೊಂ ಡಳೆಂಬದನ್ನು ನಾನು ಒಪ್ಪಿಕೊಳ್ಳುತ್ತೇನೆ; ಆದರೆ ಆಕೆಯು ಆತ್ಮಹತ ವನ್ನು ಮಾಡಿಕೊಂಡ ಕಾರಣವನ್ನು ಹೇಳಬಾರದೆ?

ಹೀರಾದೇವಿ—ಬೇರೆ ಕಾರಣವೇನಿರಬೇಕು ? ಚಂಪತರಾಯನು ಲಲಿತೆಯ ಮೇಲೆ ಬಲಾತ್ಕಾರ—

ಸಭಾಕರಣ—ದುಷ್ಟೇ,ಮತ್ತೆ ಚಂಪತರಾಯನ ಹೆಸರುಹೇಳುವೆಯಾ? ಮತ್ತೆ ನನ್ನ ತಂಗಿಯಮೇಲೆ ಹೊಲಸು ಆರೋಪವನ್ನು ಹೊರಿಸತೊಡಗುವೆಯಾ ? ಚಂಪತರಾಯನ ಸ್ವಭಾವವನ್ನೂ, ಆತನ ಸತ್ಯನಿಷ್ಠೆಯನ್ನೂ, ಆತನ ಧರ್ಮಪರಾಯಣತೆಯನ್ನೂ ನಾನು ಚಿಕ್ಕಂದಿನಿಂದ ನೋಡುತ್ತ ಬಂದಿರುವೆನು. ನಿನ್ನ ಮಾತಿನ ಮೇಲಿಂದ ಚಂಪತರಾಯನ ಸಂಗಡನಾನು ದ್ವೇಷಬಳಿಸಹತ್ತಿದ ಮೇಲೆಯೂ ಆ ಮಹಾತ್ಮನ ಯೋಗ್ಯತೆಯನ್ನು ನಾನು ಪರೀಕ್ಷಿಸುತ್ತ ಬಂದಿರುವೆನು. ಅಂಥ ಪುಣ್ಯಾತ್ಮನ ವಿಷಯವಾಗಿ ನಿನ್ನಂತಹ ಚಂಡಾಲಳ ಮಾತಿನಿಂದಂತು ಇರಲಿ, ಪ್ರತ್ಯಕ್ಷ ಆಕಾಶವಾಣಿಯಿಂದಲೂ, ಲಲಿತೆಯೇ ಮೂರ್ತಿಮಂತಳಾಗಿ ನನ್ನ ಎದುರಿಗೆಬಂದು ಹೇಳಿದರೂ ನಾನು ಸಂಶಯಪಡಲಾರೆನು ! ಆ ಮಹಾತ್ಮನ ಅಂತಕಾಲದ ಶಬ್ದಗಳು ನನ್ನ ಮನಸ್ಸನ್ನು ಪರಿಶುದ್ಧವಾಗಿ ಮಾಡಿಬಿಟ್ಟವೆ. ಇನ್ನು ಆತನ ವಿಷಯವಾಗಿ ನನ್ನ ಆ ಮನಸ್ಸನ್ನು ಅಪವಿತ್ರವಾಗಮಾಡುವದು ಯಾರಿಗೂ ಶಕ್ಯವಿಲ್ಲ. ನೀನಂತು ಆ ಪ್ರಯತ್ನಕ್ಕೆ ಸರ್ವಥಾ ಹೋಗಬೇಡ. ಲಲಿತೆಯ ಆತ್ಮಹತ್ಯದ ನಿಜವಾದ ಕಾರಣವನ್ನು ಹೇಳು ; ಮತ್ತು ಮಾಡಿದ ಅಪರಾಧಕ್ಕಾಗಿ ಶಿಕ್ಷೆಯನ್ನು ಅನುಭವಿಸಲಿಕ್ಕೆ ಸಮಾಧಾನದಿಂದ ಸಿದ್ಧಳಾಗು.

ಸಭಾಕರಣನ ಈ ಮಾತುಗಳನ್ನುಕೇಳಿ ಹೀರಾದೇವಿಯು ತನ್ನ ಆಸನದಿಂದ ಎದ್ದು ತನ್ನ ಮಲಗುವ ಕೋಣೆಯ ಕಡೆಗೆ ಒಂದೊಂದೇ ಹೆಜ್ಜೆ ಹೋಗುತ್ತ ಸಭಾಕರಣನನ್ನು ಕುರಿತು—" ನಾನು ಸತ್ಯವನ್ನೇನು ಹೇಳಲಿ? ಅಸತ್ಯವನ್ನು ಆಡಿದ್ದರಷ್ಟೆ ಈಗ ಸತ್ಯವನ್ನು ಹೇಳುವದು ! ಈಗ ಹದಿನಾರು ವರ್ಷಗಳ ಹಿಂದೆ ಸುಕುಮಾರಿಯಾದ ಲಲಿತೆಯು ಇದೇ ಹೊತ್ತಿನಲ್ಲಿ, ಅದೋ ಆಲ್ಲಿ ಕಾಣುವ ಮಡುವಿನಲ್ಲಿ ಹಾರಿಕೊಂಡಳು. ಆಗ ಹೀಗೆಯೇ ಬೆಳದಿಂಗಳು ಸ್ವಚ್ಛವಾಗಿ ಬಿದ್ದಿತ್ತು; ಸುಳಿಗಾಳಿಯು ಹೀಗೆಯೇ ಸುಳಿದಾಡುತ್ತಲಿತ್ತು ; ವಿರಲ ನಕ್ಷತ್ರಗಳು ಹೀಗೆಯೇ ಮಿನುಗುತ್ತಲಿದ್ದವು; ಆದರೆ ಇವರೆಲ್ಲ ಸಾಕ್ಷಿದಾರರಿಗೆ ಸಾಕ್ಷಿ ಹೇಳಲಿಕ್ಕೆ ಬಾಯಿಯೆಲ್ಲಿರುವದು? ಆದರೆ ಸಭಾಕರಣ, ನಿಲ್ಲಿರಿ, ಆತ್ಮಹತ್ಯೆ ಮಾಡಿಕೊಂಡವರಿಗೆ ಸರ್ವಥಾ ಸದ್ಗತಿಯಾಗದೆಂಬ ನಿಯ

ನುವಿರುವನು. ಅಂತಹವರು ದೆವ್ವವಾಗಿ ಜೀವಬಿಟ್ಟ ಸ್ಥಳದಲ್ಲಿಯೇ ಸಂಚರಿಸುತ್ತ ಬಹುಕಾಲ ಇರುವರೆಂದು ಹೇಳುವರು. ಹಾಗೆ ಲಲಿತೆಯು ಪಿಶಾಚವಾಗಿರಬಹುದು, ಆಕೆಯನ್ನೇ ನೀವು ಕೇಳಿ ನನ್ನ ಮಾತಿನ ಸತ್ಯತೆಯಬಗ್ಗೆ ನಂಬಿಗೆಮಾಡಿಕೊಳ್ಳಬಹುದು. ಅಗೋ ನೋಡಿರಿ, ಅದೇ ಮಡುವಿನಲ್ಲಿ ಲಲಿತೆಯು ಜೀವಬಿಟ್ಟಿದ್ದು. ಲಲಿತೆಯು ಶುಭ್ರವಸ್ತ್ರವನ್ನು ಬಹುಪ್ರೀತಿಯಿಂ ಉಟ್ಟುಕೊಳ್ಳುತ್ತಿದ್ದಳಾದ್ದರಿಂದ, ಆಕೆಯ ಪಿಶಾಚವಾದರೂ ಬಿಳಿಯ ವಸ್ತ್ರವನ್ನು ಉಟ್ಟುಕೊಂಡಿರಬಹುದು; ಆದ್ದರಿಂದ ಈಗ ಹಿಟ್ಟುಚಲ್ಲಿದಹಾಗೆ ಬಿದ್ದಿರುವ ಬೆಳದಿಂಗಳಲ್ಲಿ ದಿಟ್ಟಿಸಿನೋಡಿದ ಹೊರತು ಲಲಿತೆಯ ಪಿಶಾಚವು ಕಣ್ಣಿಗೆ ಕಾಣಲಿಕ್ಕಿಲ್ಲ.

ಈ ಮೇರೆಗೆ ಹೀರಾದೇವಿಯು ನುಡಿಯಲು, ಸಭಾಕರಣನು ಮಡುವಿನ ಕಡೆಗೆ ದಿಟ್ಟಿಸಿನೋಡತೊಡಗಿದನು. ಅಷ್ಟರಲ್ಲಿ ಹೀರಾದೇವಿಯು ಮತ್ತೆ ನಾಲ್ಕಾರೆಜ್ಜೆ ಹಿಂದಕ್ಕೆ ಸರಿದು ಮಲಗುವ ಕೋಣೆಯ ಬಾಗಿಲಿಗೆ ಮುಟ್ಟಿದಳು. ಸಭಾಕರಣನು ಮಡುವಿನ ಕಡೆಗೆ ನೋಡುತ್ತಲೇ ಇದ್ದನು. ಅಷ್ಟರಲ್ಲಿ ಹೀರಾದೇವಿಯು ತನ್ನ ಮಲಗುವ ಕೋಣೆಯನ್ನು ಹೊಕ್ಕು ಬಾಗಿಲು ಹಾಕಿಕೊಳ್ಳತಕ್ಕವಳು; ಆದರೆ ಆ ಕೋಣೆಯೊಳಗಿನ ಕಿಡಿಕೆಯೊಳಗಿಂದ ಬಟವಾನದಿಯ ಆ ಮಡುವು ಸ್ಪಷ್ಟವಾಗಿ ಕಾಣಹತ್ತಿ, ನಿಜವಾಗಿಯೇ ಒಬ್ಬ ತರುಣಿಯು ಬಿಳಿಯ ವಸ್ತ್ರವನ್ನು ಉಟ್ಟುಕೊಂಡು ಆ ಮಡುವಿನ ದಂಡೆಯ ಮೇಲೆ ಸಂಚರಿಸುತ್ತಿದ್ದಳು. ಅದನ್ನು ನೋಡಿದ ಕೂಡಲೆ, ತನ್ನ ಜೀವ ಉಳಿಸಿಕೊಳ್ಳುವದಕ್ಕಾಗಿ ಓಡಿಹೋಗಬೇಕೆಂದು ಈ ಹಂಚಿಕೆ ತೆಗೆದಿದ್ದ ಹೀರಾದೇವಿಯು, ತನ್ನ ಜೀವ ಉಳಿಸಿಕೊಳ್ಳುವದರ ಪರಿವೆಯಲ್ಲದೆ, ಆ ತರುಣಿಯನ್ನು ನೋಡುತ್ತ ಕಲ್ಲಿನಂತೆ ಬಾಗಿಲಲ್ಲಿ ನಿಂತುಬಿಟ್ಟಳು. ಸಭಾಕರಣನಿಗಂತು ಆ ತರುಣಿಯು ಸ್ಪಷ್ಟವಾಗಿ ಕಾಣಹತ್ತಿದಳು. ಹೀರಾದೇವಿಯ ಕಡೆಗೆ ಆತನ ಲಕ್ಷವು ಎಷ್ಟುಮಾತ್ರವೂ ಇದ್ದಿಲ್ಲ. ಆತನು ಆ ಬಿಳಿಯ ವಸ್ತ್ರವನ್ನುಟ್ಟುಕೊಂಡಿದ್ದ ತರುಣಿಯನ್ನೇ ದಿಟ್ಟಿಸಿ ನೋಡತೊಡಗಿದ್ದನು. ಆತನಿಗೆ ಆ ತರುಣಿಯು ತನ್ನ ತಂಗಿಯಾದ ಲಲಿತೆಯಂತೆಯೇ ತೋರಹತ್ತಿದಳು. ಅದೇ ಸೌಂದರ್ಯ, ಅದೇ ಎತ್ತರ, ಅದೇ ನಡಿಗೆ ಇವನ್ನೆಲ್ಲ ನೋಡಿ ಆತನು, ಆಶ್ಚರ್ಯದಿಂದ ಆ ಸ್ತ್ರೀಯನ್ನು ನೋಡುತ್ತ ನಿಂತುಬಿ

ಟ್ಟನು. ನೋಡುವಷ್ಟರದಲ್ಲಿ ಆತನು ಬಾಹ್ಯ ಜಗತ್ತನ್ನೇ ಮರೆತಿದ್ದನೆಂದು ಹೇಳಬಹುದು. ಈ ಪ್ರಸಂಗದಲ್ಲಿ ಹೀರಾದೇವಿಯು ಬೇಕಾದಹಾಗೆ ಓಡಿ ಹೋಗಿ ತನ್ನ ಜೀವನನ್ನು ಉಳಿಸಿಕೊಳ್ಳಬಹುದಾಗಿತ್ತು; ಆದರೆ ಆ ತರುಣ ಸ್ತ್ರೀಯನ್ನು ನೋಡಿ ಆಕೆಯು ಕಾಲುಗಳೂ ಕಿತ್ತದಾದವು. ಸಭಾಕರಣನು ಆ ತರುಣಿಯನ್ನು ನೋಡುತ್ತನೋಡುತ್ತ ಹೀರಾದೇವಿಯನ್ನು ಕುರಿತು— ಹೀರಾದೇವೀ, ಏನಂದೆ? ಆ ಪಿಶಾಚವನ್ನೇ ಕೇಳೆಂದು ನೀನು ಅನ್ನಲಿಲ್ಲವೆ? ನಾನು ಪಿಶಾಚವನ್ನು ಕೇಳಲಾ? ನೋಡು, ಲಲಿತೆಯು ಪಿಶಾಚವು ಮಡುವಿನ ಮೇಲೆ ಓಡಾಡುತ್ತಿರುವದು! ನಿಲ್ಲು, ಅದನ್ನು ಕೇಳಿ ಬಂದು ನಿನಗೆ ಮಾಡ ತಕ್ಕ ಶಿಕ್ಷೆಯನ್ನು ಮಾಡುವೆನು ನಿಲ್ಲು. ಎಲೈ ಸುಕುಮಾರ ಪಿಶಾಚಿಯೇ, ಕ್ಷಣ ಹೊತ್ತು ನಿಂತುಕೊಳ್ಳು. ನೀನು ಬದುಕಿರುವಾಗಿನ ನಿನ್ನ ಅಣ್ಣ ಸಭಾಕ ರಣನು ನಿನ್ನ ಬಳಿಗೆ ವಾಯುವೇಗದಿಂದ ಬರುವನು ನಿಲ್ಲು. ಅಲ್ಲಿಯವರೆಗೆ ಅದೃಶ್ಯ ವಾಗಬೇಡ. ಎಂದು ನುಡಿದು ಸಭಾಕರಣನು ಹೀರಾದೇವಿಯು ಮಲ ಗುವಕೋಣೆಯೊಳಗಿನ ಕಿಡಿಕೆಯೊಳಗಿಂದ ಬಟವಾ ನದಿಯ ಮಡುವಿನಳ್ಳ ಡಡಮ್ಮನೆ ಹಾರಿಕೊಂಡನು!



೧೮ನೆಯ ಪ್ರಕರಣ - ಅಘಟಿತ ಘಟನೆ!

ಹೀಗೆ ಸಭಾಕರಣನು ಮಡುವಿನಲ್ಲಿ ಹಾರಿಕೊಂಡದ್ದನ್ನು ನೋಡಿ ಹೀರಾದೇವಿಗೆ ಆಶ್ಚರ್ಯವಾದದ್ದಕ್ಕಿಂತ, ಮಡುವಿನ ದಂಡೆಯಲ್ಲಿ ಲಲಿತೆಯು ಸುಳಿದಾಡುತ್ತಿರುವದನ್ನು ನೋಡಿ ಆಕೆಗೆ ಹೆಚ್ಚು ಆಶ್ಚರ್ಯವಾಗಿತ್ತು. ತಾನು ಸಭಾಕರಣನ ಕೈಯಿಂದ ಪಾರಾಗಿ ಹೋಗುವದಕ್ಕಾಗಿ ಆತನ ಲಕ್ಷ್ಯ ವನ್ನು ಬೇರೆ ಕಡೆಗೆ ಒಯ್ಯಬೇಕೆಂದು ಈ ಯುಕ್ತಿಯನ್ನು ಆಕೆಯು ಮಾಡಿದ್ದ ಳಲ್ಲದೆ, ಲಲಿತೆಯ ಪಿಶಾಚವು ಅಲ್ಲಿ ಇರುವದೆಂಬದನ್ನು ಸೂಚಿಸುವದಕ್ಕಾಗಿ ಆಕೆಯು ಹೀಗೆ ಸಭಾಕರಣನಿಗೆ ಹೇಳಿದ್ದಿಲ್ಲ. ಯಾಕಂದರೆ ಲಲಿತೆಯು ಎಲ್ಲಿ ಇರುವಳೆಂಬದು ಆ ಕಪಟಿಯಾದ ಸ್ತ್ರೀಗೆ ಗೊತ್ತು ಇದ್ದಿತು. ಲಲಿತೆಯು ಆತ್ಮಹತ್ಯವ ಮಾಡಿಕೊಂಡಿದ್ದ ಸುಳ್ಳುಸುದ್ದಿಯನ್ನು ಸಭಾಕರಣನ ಮುಂದೆ

ಆಕೆಯು ಹೇಳಿ, ಆತನಿಂದ ಚಂಪತರಾಯನನ್ನು ಕೊಲ್ಲುವ ಪ್ರತಿಜ್ಞೆಮಾಡಿಸಿ ಕೊಂಡಿರಲು, ಲಲಿತೆಯ ಪಿಶಾಚದ ಕಲ್ಪನೆಯು ಆಕೆಗೆ ಎಲ್ಲಿಂದ ಬರಬೇಕು? ಆದರೆ ಸಾವಿನದವಡೆಯೊಳಗಿಂದ ಪಾರಾಗುವದಕ್ಕಾಗಿ ತಾನೊಂದುಯುಕ್ತಿಯೆಂದು ಆ ಪಿಶಾಚದ ಮಾತು ಹೇಳಲಿಕ್ಕೂ, ಲಲಿತೆಯ ರೂಪದ ಸ್ತ್ರೀಯು ಮಡುವಿನ ದಂಡೆಯಮೇಲೆ ಕಣ್ಣಿಗೆ ಬೀಳಲಿಕ್ಕೂ ಗಂಟೇ ಬಿದ್ದ ಬಳಿಕ ಆಕೆಗೆ ಆಶ್ಚರ್ಯವಾಗದೇನು ಮಾಡೀತು? ಆಕೆಯು ಮತ್ತೆ ಆ ತರುಣಿಯಕಡೆಗೆ ನೋಡುತ್ತ ತನ್ನೊಳಗೆ—"ಆಕೆಯೇ ಈಕೆಯು! ಆ ಲಲಿತೆಯಲ್ಲದೆ ಬೇರೆ ಯಾರಿರುವರು? ಆಕೆಗೆ ಪುನಃ ಬುದ್ಧಿಭ್ರಮಣದಲ್ಲಿ ಬರುವ ಧೈರ್ಯವು ಹೇಗೆ ಆಯಿತು? ಹೀಗೆ ಸ್ವಚ್ಛಂದದಿಂದ ತಿರುಗುವದಕ್ಕಾಗಿ ಆಕೆಗೆ ಒಪ್ಪಿಗೆಯು ಹೇಗೆ ಹೊಂದಿರಬಹುದು! ಆ ಲಲಿತೆಯು ಹೋಗಿ ಹದನಾರುವರ್ಷವಾಗಿರಲು, ಆಕೆಯು ಆಗಿನ ಹದಿನೈದುವರ್ಷದ ತರುಣಿಯಂತೆಯೇ ಈಗೂ ಇರುವಳಲ್ಲ! ಹದಿನಾರುವರ್ಷದಲ್ಲಿ ಆಕೆಯ ಚಲ್ಲಿಕೆಯಲ್ಲಿ, ತಾರುಣ್ಯದಲ್ಲಿ. ಪ್ರಸನ್ನತೆಯಲ್ಲಿ ಸ್ವಲ್ಪವೂ ಹೆಚ್ಚುಕಡಿಮೆಯಾಗಿರಲಿಕ್ಕಿಲ್ಲವೆ? ಇದು ಲಲಿತೆಯ ಪಿಶಾಚವೇ ಆಗಿರಬಹುದೇನು? ಲಲಿತೆಯು ಸತ್ತುಹೋಗಿ ಪಿಶಾಚವಾಗಿ ಇಲ್ಲಗೆ ಬಂದಿರಬಹುದೆ?

ಈ ಮೇರೆಗೆ ಹೀರಾದೇವಿಯು ಮೂಢಳಾಗಿ ವಿಚಾರಮಾಡುತ್ತ ನಿಂತಿರಲು, ಅತ್ತ ಸಭಾಕರಣನು ಬಟವಾನದಿಯ ನೀರನ್ನು ಕಸುವಿನಿಂದ ಬಗೆಯುತ್ತ ದಂಡೆಯಕಡೆಗೆ ಸಾಗಿದ್ದನು; ಆದರೆ ಆ ಪಿಶಾಚದಕಡೆಗಿದ್ದ ಆತನ ದೃಷ್ಟಿಯು ಮಾತ್ರ ಚಲಿಸಿದ್ದಿಲ್ಲ; ಯಾಕಂದರೆ, ಕಣ್ಣುಮುಚ್ಚಿ ಕಣ್ಣು ತೆರೆಯುವದರೊಳಗಾಗಿ ಪಿಶಾಚವು ಎಲ್ಲಿ ಮಾಯವಾಗುವದೊ, ಎಂಬ ಅಂಜಿಕೆಯು ಆತನಿಗೆ ಬಹಳವಾಗಿ ಇತ್ತು. ಪಿಶಾಚದ ಸನಿಸನಿಯಕ್ಕೆ ಹೋದಂತೆ ಆತನ ಆತುರತೆಯು ಹೆಚ್ಚುತ್ತ ಹೋಯಿತು. ಆತನು ಆಗ ಹೆದರುತ್ತಿದ್ದದ್ದು ಪಿಶಾಚವು ಬಡಿದುಕೊಂಡೀತೆಂದು ಅಲ್ಲ, ಆದರೆ ತನ್ನ ಕಾಲಸಪ್ಪಳ ಕೇಳಿ ಅದು ಎಲ್ಲಿ ಅದೃಶ್ಯವಾಗುವದೋ ಎಂದು! ಆಗ ಆ ತರುಣಿಯು ಬೆಳದಿಂಗಳಲ್ಲಿ ಬಟವಾನದಿಯು ಶಾಂತರೀತಿಯಿಂದ ಹರಿದು ಹೋಗುತ್ತಿರುವದನ್ನು ಏಕಾಗ್ರದಿಂದ ನೋಡುತ್ತಿದ್ದಳು. ಆ ಸುಂದರತರುಣಿಯ ಮನಸ್ಸಿನಲ್ಲಿ ವಿವಿಧ ವಿಚಾರತರಂಗಗಳು ಉತ್ಪನ್ನವಾಗಿದ್ದವು. ತನ್ನ ಆ ವಿಚಾರ

ಮಗ್ನಸ್ಥಿತಿಯಲ್ಲಿ ಸಭಾಕರಣನು ಈಸಿಬರುವದನ್ನು ಆಕೆಯು ನೋಡಿದ್ದಿಲ್ಲ. ಆಕೆಯು ತನ್ಮಯಳಾಗಿ ಪ್ರವಾಹವನ್ನು ನೋಡುತ್ತ ನಿಂತಿರಲು, ಯಾರೋ ತನ್ನ ಕೈಹಿಡಿದಂತೆ ಆಕೆಗೆ ಆಯಿತು. ಆಕೆಯು ಎಚ್ಚತ್ತು ಸಭಯದೃಷ್ಟಿಯಿಂದ ನೋಡಲು, ಒಬ್ಬ ಭವ್ಯಪುರುಷನು ತನ್ನ ಕೈಯನ್ನು ಹಿಡಿದುಕೊಂಡು ದಯಾರ್ದ್ರ ದೃಷ್ಟಿಯಿಂದ ತನ್ನಕಡೆಗೆ ನೋಡುತ್ತಿರುವದು ಆಕೆಯ ಕಣ್ಣಿಗೆ ಬಿದ್ದಿತು; ಆದರೆ ಹಾಗೆ ಕೈಹಿಡಿದವನು ಸಾಗರದ ರಾಜನಾದ ಸಭಾಕರಣನೆಂಬದು ಆಕೆಗೇನು ಗೊತ್ತು! ಆಕೆಯು ಹಾಗೆಯೇ ಆಶ್ಚರ್ಯದಿಂದ ನೋಡುತ್ತ ನಿಂತಿರಲು ಸಭಾಕರಣನು—

ಸಭಾಕರಣ—ಸುಕುಮಾರ ಪಿಶಾಚವೆ, ಕ್ಷಣಹೊತ್ತು ನನ್ನ ಸಂಗಡ ಮಾತಾಡಿ, ಆಮೇಲೆ ಅದೃಶ್ಯವಾಗು. ನನ್ನ ಪ್ರಶ್ನೆಗೆ ಯೋಗ್ಯ ಉತ್ತರ ಕೊಟ್ಟು ನನ್ನನ್ನು ಸಮಾಧಾನಗೊಳಿಸುವತನಕ ನಿನ್ನ ಕೈಯನ್ನು ನಾನು ಬಿಟ್ಟುವನಲ್ಲ.

ಸ್ತ್ರೀ—ನೀವು ಯಾರು? ನನಗೆ ನೀವು ಪಿಶಾಚವೆಂದು ಯಾಕೆ ಅನ್ನುವಿರಿ? ನಾನಿರುವ ಸ್ಥಳವು ಇಲ್ಲಯೇ ಸಮೀಪದಲ್ಲಿದೆ, ಅಲ್ಲಿ ನನ್ನವರೂ ಇದ್ದಾರೆ; ಆದರೆನಿದ್ದೆಬಾರದ್ದರಿಂದ ಸುಮ್ಮನೆ ವಿಶ್ರಾಂತಿಹೊಂದುವದಕ್ಕಾಗಿ ಈ ನದೀತೀರಕ್ಕೆ ನಾನು ಬಂದಿರುವೆನು.

ಸಭಾಕರಣ (ಆನಂದದಿಂದ) ಅಹಾ! ಅದೇಧನಿಯು! ನಮ್ಮಲಲಿತೆಯ ಧನಿಯೂ ಇಷ್ಟು ಕರ್ಣಮಧುರವಾಗಿಯೇ ಇತ್ತು. ಲಲಿತೆಯನ್ನು ಅಂಜಿಸಿದರೆ ಹೀಗೆಯೇ ಆಕೆಯು ಗಾಬರಿಯಾಗುತ್ತಿದ್ದಳು. ಎಲೈ ಲಲಿತೆಯ ಪಿಶಾಚವೇ, ನಿನ್ನಲ್ಲಿ ಲಲಿತೆಯ ಪೂರ್ಣಸೌಂದರ್ಯವಿಷ್ಟೇಅಲ್ಲ, ಲಲಿತಯ ಕೋಮಲಧ್ವನಿಯೂ, ಲಲಿತೆಯ ಮಧುರದೃಷ್ಟಿಪಾತವೂ, ಲಲಿತೆಯ ಅವರ್ಣನೀಯ ಪ್ರಸನ್ನಮುದ್ರೆಯೂ ನಿನ್ನಲ್ಲಿ ಪೂರ್ಣವಾಗಿ ಮೂಡಿರುವವು! ಈ ಮಡುವಿನಲ್ಲಿ ಸತ್ತಿದ್ದ ಲಲಿತೆಯನ್ನು ನಾನು ನೋಡಿರದಿದ್ದರೆ, ನಿನ್ನ ನಾನು ಲಲಿತೆಯೆಂದು ಸಾಗರದ ಅರಮನೆಗೆ ಕರಕೊಂಡು ಹೋಗುತ್ತಿದ್ದೆ. ಸುಕುಮಾರ ಪಿಶಾಚವೇ, ನಿನಗೆ ಈ ಪಿಶಾಚಜನ್ಮವು ಯಾಕೆ ಬಂದಿತು?

ತರುಣಿ (ಹೃದಯಕರಗಿ)—ಸದ್ಗೃಹಸ್ಥನೇ, ನಿನ್ನ ಮೆದುಳಿಗೆ ನಾನಾದರೂ ಅಪಾಯವಾಗಿರಬಹುದು; ಹಾಗಲ್ಲದಿದ್ದರೆ ಪ್ರತ್ಯಕ್ಷ ಮನುಷ್ಯಳಾದ

ನನ್ನನ್ನು ಪಿಶಾಚವೆಂದು ಕರೆಯುತ್ತಿದ್ದೆಯಾ? ನನ್ನನ್ನು ಲಲಿತೆಯ ಪಿಶಾಚವೆಂದು ತಿಳಿದಿರುವ ನಿನಗೆ, ಆ ಲಲಿತೆಯು ಏನಾಗಬೇಕು?

ಸಭಾಕರಣ—ಲಲಿತೆಯು ನನಗೆ ತಂಗಿಯಾಗಬೇಕು.

ತರುಣಿ—ಅಕೆಯು ಸತ್ತಿರುವಳೋ?

ಸಭಾಕರಣ—ಆಕೆಯು ಇದೇ ಮಡುವಿನಲ್ಲಿ ಹಾರಿಕೊಂಡು ಜೀವಕಳೆ ಕೊಂಡಳು. ಆತ್ಮಹತ್ಯಮಾಡಿಕೊಂಡಿರುವದರಿಂದಲೇ ಲಲಿತೆಯು ಪಿಶಾಚವಾಗಿ ಸಂಚರಿಸುತ್ತಿರುವಳು. ನನ್ನ ತಂಗಿಯು, ನನ್ನ ಲಲಿತೆಯು ಆತ್ಮಹತ್ಯವನ್ನು ಏಕೆ ಮಾಡಿಕೊಂಡಳು?

ತರುಣಿ—ಅದನ್ನು ನಾನು ಹೇಗೆ ಹೇಳಲಿ? ದುರ್ಬ್ಬಲ ಪುರುಷನೇ, ನನ್ನನ್ನು ನೀನು ಪಿಶಾಚವೆಂದು ತಿಳಿಯುತ್ತೀ; ಆದರೆ ನಾನು ಪಿಶಾಚವಲ್ಲ.

ಸಭಾಕರಣ—ಏನು? ನೀನು ಪಿಶಾಚವಲ್ಲವೆ? ಹಾಗಾದರೆ ಯಾರು?

ತರುಣಿ—ನಾನು ಮನುಷ್ಯ ಸ್ತ್ರೀ ಇರುವೆನು.

ಸಭಾಕರಣ—ನೀನು ಮನುಷ್ಯಸ್ತ್ರೀ ಇರುವೆಯಾ? ಹಾಗಿದ್ದರೆ ಇಷ್ಟು ರಾತ್ರಿಯಲ್ಲಿ ಮನುಷ್ಯರ ಸುಳವಿಲ್ಲದ ಸ್ಥಳದಲ್ಲಿ ನಮ್ಮ ಲಲಿತೆಯು ಆತ್ಮಹತ್ಯ ಮಾಡಿಕೊಂಡ ಸ್ಥಳದಲ್ಲಿಯೇ ನೀನು ಯಾಕೆ ಸಂಚರಿಸುತ್ತಿರುವೆ?

ತರುಣಿ—ನಾನು ಆಗಲೆ ನಿನಗೆ ಹೇಳಲಿಲ್ಲವೆ? ನಾನು ಇಳಿದುಕೊಂಡ ಸ್ಥಳವು ಇಲ್ಲಿಯೇ ಸಮೀಪದಲ್ಲಿರುವದು. ಅಲ್ಲಿ ನನ್ನ ಜನರೂ ಇರುವರು. ನನಗೆ ನಿದ್ದೆಬಾರದ ಹಾಗಾದದ್ದರಿಂದ ಸುಮ್ಮನೆ ನಾನು ಇಲ್ಲಿಗೆ ಬಂದುಬಿಟ್ಟೆನು. ನನ್ನನ್ನು ಈಗ ಒಬ್ಬಳೆಯೆಂದೂ ತಿಳಿಯಬೇಡ. ಇದೋನೋಡು, ಈ ತೀಕ್ಷ್ಣ ಕಠಾರಿಯು ಪ್ರಸಂಗದಲ್ಲಿ ನನ್ನ ಸಂರಕ್ಷಕ ಬಂಧುವಾಗಿ ನನ್ನ ಬಳಿಯಲ್ಲಿರುವದು!

ಸಭಾಕರಣ (ಆಶ್ಚರ್ಯದಿಂದ)—ನೀನು ಎಲ್ಲಿಯವಳು? ನಿನ್ನ ಹೆಸರೇನು?

ತರುಣಿ—ನಾನು ದಿಲ್ಲಿಯವಳು, ನನ್ನ ಹೆಸರು ಬದ್ರುನ್ನಿಸೆ.

ಸಭಾಕರಣ (ಆಶ್ಚರ್ಯದಿಂದ)—ಬದ್ರುನ್ನಿಸಾ, ನೀನು ಯವನಿಯೆಯಾಗಿ ತೋರುತ್ತಿದೆ; ಆದರೆ ನಮ್ಮ ಮಾತನ್ನು ಇಷ್ಟುಸರಳವಾಗಿ ಹೇಗೆ ಆಡುತ್ತೀ? ನಿನಗೆ ನಮ್ಮ ಉಡಿಗೆತೊಡಿಗೆಗಳೇಕೆ?

ತರುಣಿ—ಇದು ನನ್ನ ಸೇರಿಕೆಯ ಮಾತು. ಬುಂದೇಲಖಂಡದ ಸ್ತ್ರೀಯರಂತೆಯೇ ನಾನು ಉಡತೊಡುವುದಕ್ಕೆ ಮೆಚ್ಚಿದವಳಾಗಿರುತ್ತೇನೆ. ನನ್ನ ತಾಯಿಯು ಬುಂದೇಲಖಂಡದೊಳಗಿನವಳಿರುವದರಿಂದ ಆಕೆಗೆ ಇಲ್ಲಿಯಭಾಷೆಯೂ, ಇಲ್ಲಿಯ ಸ್ಥಿತಿ - ರೀತಿಗಳೂ ಬಹಳವಾಗಿ ಸೇರುತ್ತವೆ. ಆಕೆಯು ನನಗೆ ಈ ಮಾತು ಕಲಿಸಿದಳು.

ಸಭಾಕರಣ—ನಿನ್ನ ತಾಯಿಯು ಬುಂದೇಲಖಂಡದೊಳಗಿನವಳಾಗಿದ್ದರೂ, ಲಗ್ನವಾಗುವ ಮೊದಲು ಆಕೆಯು ಯವನಿಯೇ ಆಗಿದ್ದಳಲ್ಲವೆ ?

ಬದ್ರುನ್ನಿಸೆ—ಛೇ ! ನನ್ನ ತಾಯಿಯ ಜನ್ಮವು ಬುಂದೇಲಖಂಡದ ಒಂದು ಉಚ್ಚ ಮನೆತನದಲ್ಲಾಗಿರುವದು. ಆಕೆಯು ಯವನನನ್ನು ಲಗ್ನವಾಗಿದ್ದರೂ, ತನ್ನ ಧರ್ಮವನ್ನು ಬಿಟ್ಟಿರುವದಿಲ್ಲ. ಆಕೆಯು ದೇವೀ ವಿಂಧ್ಯವಾಸಿನಿಯಭಕ್ತಳಾಗಿರುವಳು.

ಬದ್ರುನ್ನಿಸೆಯ ಈಮಾತುಗಳನ್ನುಕೇಳಿ ಸಭಾಕರಣನಿಗೆ ಯಾವದೋ ಮಾತಿನ ಸಂಶಯ ಬಂದ ಹಾಗಾಯಿತು. ಆತನು ಬದ್ರುನ್ನಿಸೆಯನ್ನು ಕುರಿತು—

ಸಭಾಕರಣ—ಬದ್ರುನ್ನಿಸೇ, ನಿನ್ನ ತಾಯಿಯು ಎಷ್ಟುವರ್ಷದ ವಯಸ್ಸಿನವಳಿರುವಳು?

ಬದ್ರುನ್ನಿಸೆ—ಆಕೆಯು ಸುಮಾರು ಮೂವತ್ತೈರಡು ವರ್ಷದ ವಯಸ್ಸಿನವಳಿರಬಹುದು. ತಾನು ಬುಂದೇಲಖಂಡವನ್ನು ಬಿಟ್ಟು ಹದಿನಾರು ವರ್ಷವಾಯಿತೆಂದೂ, ಬುಂದೇಲಖಂಡವನ್ನು ಬಿಡುವಾಗ ತಾನು ಹದಿನಾರು ವರ್ಷದವಳಿದ್ದೆನೆಂದೂ ಆಕೆಯು ಒಮ್ಮೊಮ್ಮೆ ಅನ್ನುತ್ತಿದ್ದಳು.

ಸಭಾಕರಣ—ನಿಮ್ಮ ಅವ್ವನ ಅಂದಚಂದಗಳು ಹೇಗಿವೆ ?

ಬದ್ರುನ್ನಿಸೆ—ತದ್ರೂಪ ನನ್ನಹಾಗೆಯೇ ಇವೆ; ಆಕೆಯು ವಯಸ್ಸಿನಿಂದ ನನಗಿಂತ ಹಿರಿಯಳಿರುವದರಿಂದ ಸ್ವಲ್ಪ ಪ್ರೌಢಳಾಗಿ ತೋರುವಳು. ಅಷ್ಟಲ್ಲದೆ ನಮ್ಮಿಬ್ಬರ ಸ್ವರೂಪದಲ್ಲಿ ಏನೂ ಹೆಚ್ಚುಕಡಿಮೆ ಇರುವದಿಲ್ಲ.

ಬದ್ರುನ್ನಿಸೆಯ ಈ ಮಾತುಗಳನ್ನು ಕೇಳಿ ಸಭಾಕರಣನು ತನ್ನೊಳಗೆ—

—"ಈ ಸುಕುಮಾರಿಯ ತಾಯಿಯು ಲಲಿತೆಯಾಗಿರಬಹುದೋ? ಈ ಎಳವಾದ ಮಡುವಿನಲ್ಲಿ ಹಾರಿಕೊಳ್ಳುವದರ ಬದಲು, ಯವನರಗೋಷೆಯನ್ನು ಆಕೆಯು

ಸ್ವೀಕರಿಸಿರಬಹುದೋ? ನನ್ನ ಲಲಿತೆಯನ್ನು ನಾನು ಮತ್ತೆ ನೋಡಬಹುದಲ್ಲವೆ? ಹೀರಾದೇವಿಯು ಯಾವದಾದರೂ ಒಂದು ಹೆಂಗಸಿನ ಪೆಣನನ್ನು ತೋರಿಸಿ ಲಲಿತೆಯು ಆತ್ಮಹತ್ಯಮಾಡಿಕೊಂಡಳೆಂದುಹೇಳಿ ನನ್ನನ್ನು ಯಾಕೆ ಮೋಸಗೊಳಿಸಿರಬಾರದು?ಲಲಿತೆಯು ತಾನಾಗಿಯಾಗಲಿ, ಒಬ್ಬರ ಒತ್ತಾಯದಿಂದಾಗಲಿ ಯವನರ ಗೋಷೆಯಲ್ಲಿ ಸೇರಿರುವದೇ ನಿಜವು; ಆದ್ದರಿಂದ ಬದ್ರುನ್ನಿಸೆಯ ತಾಯಿಯನ್ನು ನಾನು ನೋಡಲೇಬೇಕು; ಆಕೆಯ ಸ್ಥಿತಿ-ಗತಿಯ ವಿಚಾರವನ್ನು ಮಾಡಲೇಬೇಕು. ಎಂದು ವಿಚಾರಿಸಿ ಈವರೆಗೆ ಹಿಡಿದುಕೊಂಡಿದ್ದ ಬದ್ರುನ್ನಿಸೆಯ ಕೈಯನ್ನು ಬಿಟ್ಟು ಆಕೆಯನ್ನು ಕುರಿತು—

ಸಭಾಕರಣ—ತಂಗೀ, ನಿನ್ನ ತಾಯಿಯೇ ನನ್ನ ಪ್ರೀತಿಯ ತಂಗಿಯು ಇರಬೇಕೆಂದು ನನಗೆ ಸಂಶಯವು ಬರತೊಡಗಿದೆ; ಆದ್ದರಿಂದ ದಿಲ್ಲಿಗೆ ಹೋಗಿ ನಿಜವಾದ ಸಂಗತಿಯನ್ನು ತಿಳಿದುಕೊಳ್ಳುವೆನು.

ಇದನ್ನು ಕೇಳಿ ಬದ್ರುನ್ನಿಸೆಯು ಸ್ವಲ್ಪ ವಿಚಾರಮಗ್ನಳಾದಳು. ಆಕೆಯು ಏನೂ ಮಾತಾಡಲಿಲ್ಲ. ಮತ್ತೆ ಸಭಾಕರಣನು—

ಸಭಾಕರಣ—ತಂಗೀ, ನಿನ್ನ ತಾಯಿಯ ಈಗಿನ ಹೆಸರೇನು? ಆಕೆಯು ದಿಲ್ಲಿಯಲ್ಲಿ ಎಲ್ಲಿರುವಳು?

ಬದ್ರುನ್ನಿಸೆ—ಆಕೆಯ ಹೆಸರು ಆಯೇಷೆ. ಆಕೆಯು ಸಾರ್ವಭೌಮ ದಿಲ್ಲೀಪತಿಯ ಜನಾನಖಾನೆಯಲ್ಲಿರುವಳು.

ಸಭಾಕರಣ—ದಿಲ್ಲೀಪತಿಯ ಜನಾನಖಾನೆಯಲ್ಲಿ? ಅದೇಕೆ? ಅಲ್ಲಿ ಏಕೆ ಇರುವಳು?

ಬದ್ರುನ್ನಿಸೆ (ಗಾಂಭೀರ್ಯದಿಂದ)—ನನ್ನ ತಾಯಿಯಾದ ಆಯೇಷೆಯು ಶಹಾಜಶಹಾ ಔರಂಗಜೇಬ ಬಾದಶಹನ ಪಟ್ಟದರಸಿ ಇರುವದರಿಂದ, ಆ ಸಾರ್ವಭೌಮರಾಜನ ಜನಾನಖಾನೆಯಲ್ಲಿರುವಳು.

ಇದನ್ನು ಕೇಳಿ ಸಭಾಕರಣನು ಆಶ್ಚರ್ಯಮಗ್ನನಾದನು. ಕೆಲ ಹೊತ್ತಿನವರೆಗೆ ವಿಚಾರಮಾಡುತ್ತಾ ನಿಂತುಬಿಟ್ಟನು. ತನ್ನ ತಂಗಿಯು ಕ್ಷುದ್ರರ ಪಾಶಕ್ಕೆ ಬೀಳತಕ್ಕಂತಹ ಸಾಮಾನ್ಯ ಸ್ತ್ರೀಯಲ್ಲವೆಂತಲೂ, ಯಾವ ಕಾರಣದಿಂದಲೋ ಮೋಸಹೋಗಿಯಾಗಲಿ, ಬಲಾತ್ಕಾರಕ್ಕೊಳಗಾಗಿಯಾಗಲಿ ಆಕೆಯು ಬಾದಶಹನ ಪಟ್ಟದ ರಾಣಿಯಾಗಿರಬೇಕೆಂತಲೂ ಆತನು

ತರ್ಕಿಸಿದನು. ಆತನು ಅತುರತೆಯಿಂದ ಮತ್ತೆ ಬದ್ರುನ್ನಿಸೆಯನ್ನು ಕುರಿತು-

ಸಭಾಕರಣ—ದಿಲ್ಲಿಯ ಪತಿಯ ಜನಾನಖಾನೆಯಲ್ಲಿ ನಾನು ಹೋಗ ಬೇಕಾಯಿತು., ಸುಂದರವಾದ ಶಹಾಜಾದೀ ಬಾದಶಹನ ಜನಾನಖಾನೆಯೊಳಗಿನ ವಿಲಾಸವನ್ನು ಬಿಟ್ಟು ಹೀಗೆ ನೀನೊಬ್ಬಳೇ ಯಾಕೆ ತಿರುಗುತ್ತಿರುವೆ?

ಲಲಿತೆ—ಬಾದಶಹನ ಜನಾನಖಾನೆಯಲ್ಲಿಯಸುಖಕ್ಕಿಂತಲೂ ಶ್ರೇಷ್ಠ ಸುಖವ ಸ್ಥಾನವನ್ನು ನಾನು ನೋಡಿದ್ದರಿಂದ, ನಾನು ಆಸ್ಥಾನವನ್ನು ಹುಡುಕುತ್ತಿರುವೆನು. ನೀವು ನನ್ನ ತಾಯಿಯನ್ನು ಕಾಣುವದಿದ್ದರೆ, ಇಗೋ, ಈ ಉಂಗುರವು ನಿಮ್ಮ ಬಳಿಯಲ್ಲಿ ಇರಲಿ. ಈ ಉಂಗುರವನ್ನು ಜನಾನಖಾನೆಯಲ್ಲಿಯ ಕಾವಲುಗಾರರಿಗೆ ತೋರಿಸಿದರೆ, ಅವರು ನಿಮ್ಮನ್ನು ನೆಟ್ಟಗೆ ನನ್ನ ತಾಯಿಯ ಬಳಿಗೆ ಕರೆದುಕೊಂಡು ಹೋಗುವರು. ಅಲ್ಲಿ ಹೋದಬಳಿಕ ನನ್ನ ತಾಯಿಗೆ ಈ ಉಂಗುರವನ್ನು ತೋರಿಸಿ, ಬದ್ರುನ್ನಿಸೆಯು ಸುರಕ್ಷಿತವಾಗಿರುವಳೆಂದು ಅಕೆಗೆ ಹೇಳಿರಿ.

ಬದ್ರುನ್ನಿಸೆಯ ಈ ಮಾತುಗಳನ್ನು ಕೇಳಿ ಸಭಾಕರಣನು ಪರಮ ಸಂತುಷ್ಟನಾಗಿ ಅತ್ಯಂತ ಆದರದಿಂದ ಆಕೆಯ ಉಂಗುರವನ್ನು ಇಸಕೊಂಡನು. ಈ ಅಕಲ್ಪಿತ ಯೋಗವು ಒದಗಿದ್ದಕ್ಕಾಗಿ ಆತನಿಗೆ ಪರಮಾಶ್ಚರ್ಯವಾಯಿತು. ದೀರ್ಘಪ್ರಯತ್ನದಿಂದಲೂ ಸಾಧಿಸದೆ ಇದ್ದ ಅನುಕೂಲತೆಯು ಅನಾಯಾಸವಾಗಿ ಒದಗಿದ್ದನ್ನು ನೋಡಿ, ಸೃಷ್ಟಿಯೊಳಗಿನ ದೇವರ ಒಂದೊಂದು ಅಗಾಧ ಘಟನೆಗಳು ಆಶ್ಚರ್ಯಕರವಾದವುಗಳೆಂದು ಭಾವಿಸಿ, ತನ್ನಂಥ ಮನುಷ್ಯಪ್ರಾಣಿಗಳ ಅಹಂಕಾರಕ್ಕಾಗಿ ಆತನು ಮನಸ್ಸಿನಲ್ಲಿ ಬಹಳವಾಗಿ ನಾಚಿಕೊಂಡನು. ಆತನು ಅತ್ಯಂತ ಕೃತಜ್ಞತೆಯಿಂದ ಬದ್ರುನ್ನಿಸೆಯನ್ನು ಕುರಿತು—

ಸಭಾಕರಣ—ತಂಗೀ, ನನ್ನಮೇಲೆ ನಿನ್ನ ಉಪಕಾರವು ಬಹಳವಾಯಿತು. ಅದಕ್ಕಾಗಿ ನಾನು ನಿನಗೇನು ಹಿತಮಾಡಲಿ ಹೇಳು?

ಬದ್ರುನ್ನಿಸೆ—ದಿಲ್ಲಿಯ ಜನಾನಖಾನೆಯನ್ನು ಬಿಟ್ಟುಂಡಿನಿಂದ ನನಗೆ ಯಾತರ ಕೊರತೆಯೂ ಆಗಿರುವದಿಲ್ಲ; ಆದರೆ ನಾನು ಹುಡುಕುತ್ತಿರುವ ಪ್ರೀತಿಯ ವಸ್ತುವು ಪಾತ್ರ ನನಗೆ ಇನ್ನೂ ದೊರೆತಿರುವುದಿಲ್ಲ.

ಸಭಾಕರಣ (ಆಶ್ಚರ್ಯದಿಂದ)--ಶಹಾಜಾದಿ ಬದ್ರುನ್ನಿಸೆಯು ಇಷ್ಟು ಗುಪ್ತರೀತಿಯಿಂದ ಯಾವ ಪ್ರೀತಿಯ ವಸ್ತುವನ್ನು ಹುಡುಕುತ್ತಿರುವಳು?

ಬದ್ರುನ್ನಿಸೆ—''ಸಭಾಕರಣ'' ಎಂಬ ಹೆಸರಿನ ಸಾಗರದ ರಾಜರ ಗುರುತು ತಮಗೆ ಇರುವದೋ? ನಾನು ಅವರ ಕುಮಾರರಾದ ದಳಪತರಾಯಜಿಯವರನ್ನು ಹುಡುಕುತ್ತಿರುವೆನು.

ಸಭಾಕರಣ—ರಾಜಾ ಚಂಪತರಾಯನು ಬುಂದೇಲಖಂಡದ ಸ್ವಾತಂತ್ರ್ಯಕ್ಕಾಗಿ ಯತ್ನಿಸುತ್ತಿದ್ದನು. ಆತನ ಆ ಯತ್ನವನ್ನು ದಿಲ್ಲೀಪತಿಯು ವ್ಯರ್ಥಗೊಳಿಸಿದ್ದರಿಂದ, ಸ್ವಾತಂತ್ರ್ಯಪ್ರಾಪ್ತಿಯ ಸಲುವಾಗಿ ಹೆಣಗುತ್ತಿರುವ ಸ್ವಲ್ಪ ಜನರೊಡನೆ ದಲಪತರಾಯನು ಅಜ್ಞಾತವಾಸದಲ್ಲಿರುವನು.

ಬದ್ರುನ್ನಿಸೆ—ಏನು? ಬುಂದೇಲಖಂಡದ ಸ್ವಾತಂತ್ರ್ಯದ ಪ್ರಯತ್ನವು ವ್ಯರ್ಥವಾಯಿತೆ?

ಈ ಮೇರೆಗೆ ಬದ್ರುನ್ನಿಸೆಯು ದುಃಖಪೂರ್ಣವಾದ ಧ್ವನಿಯಿಂದ ನುಡಿಯುವಾಗ ಆಕೆಯ ಕಣ್ಣುಗಳಿಂದ ನೀರು ಬಂದವು. ಆಕೆಯು ಮೋರೆಯು ಬಾಡಿತು; ದುಃಖದಿಂದ ಉಸುರ್ಗರೆಯುತ್ತ ಆಕೆಯು ಸಭಾಕರಣನ ಮೋರೆಯನ್ನು ಕನಿಕರದ ಮುದ್ರೆಯಿಂದ ನೋಡತೊಡಗಿದಳು! ಅಪಶ್ನಿ ನೋಡಿ ಸಭಾಕರಣನಿಗೆ ಏನೂ ತೋಚದಾಯಿತು. ಬುಂದೇಲಖಂಡವನ್ನು ಪಾರತಂತ್ರ್ಯದ ಕೆಸರಲ್ಲಿ ಮುಳುಗಿಸುವ ದಿಲ್ಲೀಪತಿಯ ಮಗಳು ಬುಂದೇಲಖಂಡದ ಸ್ವಾತಂತ್ರ್ಯಪ್ರಾಪ್ತಿಯ ಯತ್ನವು ನಿಷ್ಫಲವಾದದ್ದಕ್ಕಾಗಿ ಈಪರಿ ದುಃಖಿಸುವದರ ಗೂಢವನ್ನು ಆತನು ತಿಳಿಯದಾದನು. ಆಗ ಆ ರಜಪೂತ ವೀರನು ದೇಶಪ್ರೇಮದ ಕೃತಿಯ ಮೂಲಕ ತನ್ನ ಮೋರೆಗೆ ಹತ್ತಿದ ಮಸಿಯನ್ನು ಬೇಗನೆ ಕಳೆದುಕೊಳ್ಳಬೇಕೆಂದು ನಿಶ್ಚಯಿಸಿ, ಅಲ್ಲಿ ಒಂದು ಕ್ಷಣವಾದರೂ ನಿಂತುಕೊಳ್ಳದೆ, ಸಾಮ್ರಾಜ್ಞಿಯನ್ನು ಕಾಣುವದಕ್ಕಾಗಿ ದಿಲ್ಲಿಗೆ ಹೊರಟುಹೋದನು.

೧೯ನೆಯ ಪ್ರಕರಣ- ಮೆಚ್ಚಿದವರಿಗೆ ಹಂದಿಯೇ ಮುದ್ದು

ಔರಂಗಜೇಬ ಬಾದಶಹನು ಯಾವತ್ತು ಬುಂದೇಲಖಂಡದ ಸ್ವಾತಂತ್ರ್ಯವನ್ನು ಮಣ್ಣುಗೂಡಿಸಿ, ಬುಂದೇಲಿಗಳನ್ನು ತನ್ನ ದಾಸಾನುದಾಸರನ್ನಾಗಿ ಮಾಡಿ ದಿಲ್ಲಿಗೆ ಹೊರಟುಹೋದನು. ರಣದುಲ್ಲಾಖಾನನನ್ನು ಸೆರೆ ಹಿಡಿದು ಚಂಪತರಾಯನು ದಿಲ್ಲಿಯ ದರ್ಬಾರದ ಅಪಮಾನಮಾಡಿದ್ದರಿಂದ, ಆ ಅಪಮಾನವನ್ನು ಕಳೆದುಕೊಳ್ಳುವದಕ್ಕಾಗಿ ಬಾದಶಹನು ರಣದುಲ್ಲಾಖಾನನನ್ನು ಬೇಕೆಂತಲೇ ಬುಂದೇಲಖಂಡದ ಅಧಿಕಾರಿಯನ್ನಾಗಿ ನಿಯಮಿಸಿ ಓರಛಾ ಸಂಸ್ಥಾನಕ್ಕೆ ಕಳಿಸಿದನು. ರಣದುಲ್ಲಾಖಾನನು ಈಗ ಓರಛಾದ ಮುಲಾಖತ ದಿವಾಣಖಾನೆಯಲ್ಲಿ ವಾಸಮಾಡಿದ್ದನು. ಬಾದಶಹನ ಆಗಮನಕ್ಕಾಗಿ ಹೀರಾದೇವಿಯಿಂದ ಶೃಂಗರಿಸಿದ ಆ ದಿವಾಣಖಾನೆಯು ಅನಾಯಾಸವಾಗಿಯೇ ರಣದುಲ್ಲಾಖಾನನ ಉಪಭೋಗಕ್ಕಾಗಿ ಸಿದ್ಧವಾಗಿ ಇದ್ದಿತು. ಸುಗಂಧದೆಣ್ಣೆಯ ದೀಪಗಳು ಅಲ್ಲಲ್ಲಿ ತಮ್ಮ ಸುಗಂಧವನ್ನು ನಾಲ್ಕೂ ಕಡೆಗೆ ಪಸರಿಸುತ್ತಲಿದ್ದವು. ಮೂರು ತಾಸು ರಾತ್ರಿಯಾಗಿತ್ತು. ಖಾನನು ಅದೇ ಉಂಡು ಗುಡಗುಡಿಯನ್ನು ಸೇದುತ್ತ ಕುಳಿತುಕೊಂಡಿದ್ದನು. ಆ ತರುಣನ ಮನಸ್ಸಿನಲ್ಲಿ ಹಲವು ವಿಚಾರ ತರಂಗಗಳು ಉತ್ಪನ್ನವಾಗಿದ್ದವು. ತಾನು ಯಾವನೊಬ್ಬ ಹಿಂದು ದುರ್ಬಲರಾಜನ ಪಟ್ಟವನ್ನು ಆಕ್ರಮಿಸಿ ತಾನು ಆತನ ಸಿಂಹಾಸನವನ್ನೇರಿ ಬುಂದೇಲಖಂಡದ ಉಳಿದ ಮಾಂಡಲಿಕ ರಾಜರಿಂದ ಸೇವೆಯನ್ನು ಸ್ವೀಕರಿಸಬೇಕೆಂದು ಆತನು ಎಣಿಕೆಹಾಕುತ್ತಿದ್ದನು. ಹೀಗಿರುವಾಗ ಆತನಿಗೆ ವಿಜಯೆಯ ನೆನಪಾಯಿತು. ವಿಜಯೆಯು ಖಾನನ ಕಾರಾಗೃಹವಾಸಕ್ಕೆ ಕಾರಣಳಾದದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ವಿಜಯೆ - ವಿಮಲದೇವರು ಆತನನ್ನು ವಿಂಧ್ಯವಾಸಿನಿಯ ಗುಡಿಗೆ ಕರೆದುಕೊಂಡು ಹೋಗುತ್ತೇವೆಂದು ಹೇಳಿ, ಗುಡಿಯ ವಿರುದ್ಧ ದಿಕ್ಕಿಗೆ ಕರೆದುಕೊಂಡು ಹೋಗಿದ್ದರೆಂಬದು ವಾಚಕರಸ್ಮರಣದಲ್ಲಿರಬಹುದು. ಆಗ ಖಾನನ ವಿಷಯವಾಸನೆಯ ಹೃದಯದಲ್ಲಿ ವಿಜಯೆಯು ಮೂಡಿಹೋಗಿದ್ದಳು! ಅಲ್ಲದೆ, ವಿಜಯೆಯು ಕುಮಾರಿಕೆಯಾಗಿದ್ದು, ಆಕೆಯು ದುರ್ಬಲನಾದ ಕಂಚುಕಿರಾಯನ ಮಗಳೆಂಬದನ್ನು ಆತನು ತಿಳಿದುಕೊಂಡಿದ್ದನು.

ಈ ಮೊದಲೆ ರಣದುಲ್ಲಾಖಾನನು ಯಾವದೋ ಒಂದು ಕೆಲಸಕ್ಕಾಗಿ ಕಂಚುಕಿರಾಯನನ್ನು ಕರೆಸಿದ್ದನು. ಖಾನನ ಮನಸ್ಸು ವಿಜಯೆಯ ಸ್ಮರಣೆ ದಿಂದ ಚಂಚಲವಾದ ಕೂಡಲೆ, ಕಂಚುಕಿರಾಯನು ಇನ್ನೂ ಏಕೆ ಬರಲಿಲ್ಲ ವೆಂದು ಆತನು ಚಡಪಡಿಸಹತ್ತಿದನು. ಆತನು ತನ್ನ ಸೇವಕರನ್ನು ಕುರಿತು—"ಇನ್ನೂ ಕಂಚುಕಿರಾಯನು ಏಕೆ ಬರಲಿಲ್ಲ?" ಎಂದು ಕೇಳಲು, ಸೇವಕನು "ಖಾವಿಂದ, ತಾವು ಖಾನಾಕ್ಕೆ ಹೊರಟಿರುವಾಗಲೇ ಕಂಚುಕಿ ರಾಯರು ಬಂದಿದ್ದು, ಕೆಳಗೆ ತಮ್ಮ ಅಪ್ಪಣೆಯ ಹಾದಿಯನ್ನು ನೋಡುತ್ತ ಕುಳಿತುಕೊಂಡಿರುವರು" ಎಂದು ಹೇಳಿದನು. ಖಾನನ ಅಪ್ಪಣೆಯಿಂದ ಕಂಚುಕಿರಾಯನು ಕೂಡಲೆ ಬಂದು ವಿನಯದಿಂದ ಮುಜರೆಮಾಡಿ ದೂರ ಹೋರೆತಗ್ಗಿಸಿ ನಿಂತುಕೊಂಡನು. "ಖಾನರು ತಾವಾಗಿ ತನ್ನ ನೆನಪುಮಾ ಡಿದರಲ್ಲ" ಎಂದು ಆತನಿಗೆ ಹಿಡಿಸಲಾರದಷ್ಟು ಸಂತೋಷವಾಗಿತ್ತು. ಸಂತೋಷದ ಭರದಲ್ಲಿ ಆತನು ಖಾನನನ್ನು ಕುರಿತು—

ಕಂಚುಕಿರಾಯ—ಸರದಾರ ಸಾಹೇಬರಿಗೆ ನನ್ನ ನೆನಪು ಆದದ್ದಕ್ಕಾಗಿ ನನ್ನನ್ನು ಧನ್ಯನೆಂದು ತಿಳಿಯುವೆನು! ಖಾನ ಸಾಹೇಬ, ಈ ಗುಲಾಮನಿಗೆ ಯಾವ ಅಪ್ಪಣೆ ಯಿರುವದು?

ಖಾನ—ಕಂಚುಕಿರಾಯ, ನಿನ್ನ ದಡ್ಡತನದಿಂದ, ಹಾಗೂ ನಿನ್ನತಿಳಿ ಗೇಡಿ ಮಗಳ ಅತಿ ಪ್ರಸಂಗದಿಂದ ನಾನು ಚಂಪತರಾಯನ ಘೋರ ಕಾರಾ ಗೃಹವಾಸದಲ್ಲಿ ಕಾಲಕಳೆಯಬೇಕಾಯಿತು! ಆದರಿಂದ ನಮ್ಮ ಅಪಮಾನಕ್ಕೆ ಹೊಣೆಯಾರು? ಆಗ ನಮಗಾದ ತ್ರಾಸವನ್ನೂ, ನಮ್ಮ ವಿಲಾಸಕ್ಕೆ ಆದ ತೊಂದರೆಯನ್ನೂ ಈಗ ತುಂಬಿಕೊಡುವವರಾರು? ಆ ಪ್ರಸಂಗದಲ್ಲಿ ನಮು ಗಾಗಿದ್ದ ಹಾನಿಯನ್ನು ನಿನ್ನ ಕೈಯಿಂದ ನಾವು ಈಗ ತುಂಬಿಕೊಳ್ಳಬೇ ಕೆಂದು ಮಾಡಿದ್ದೇವೆ.

ಕಂಚುಕಿರಾಯ (ಅಂಜಿ ನಡುಗುತ್ತ)— ಸರದಾರ ಸಾಹೇಬ, ತಮ್ಮ ಬಿಡುಗಡೆಗೆ ನನ್ನ ಮಗಳೇ ಕಾರಣಳಾಗಿರುವಳು. ಆಕೆಯು ಚಂಪತರಾ ಯನ ಮುಂದೆ—

ಖಾನ—(ಮುಂದೆ ಮಾತಾಡಗೊಡದೆ) ಆ ಪುರಾಣವನ್ನು ನನ್ನಮುಂದೆ ಉಚ್ಚಬೇಡ; ನಾವು ಹಾನಿಯಾಗಿದೆಯೆಂದಬಳಿಕ ನೀನು ಅದಕ್ಕೆ ಒಪ್ಪಿಕೊ

ಳ್ಳಲೇಬೇಕು; ನಾವು ಲಾಭವಾಗಿದೆಯೆಂದರೆ ನೀನು ಲಾಭವಾಗಿದೆಯೆಂದು ತಿಳಿಯಬೇಕು. ನಾವು ಗೆದ್ದವರು, ನೀವು ಗೆಲ್ಲಲ್ಪಟ್ಟವರು. ನಿಮ್ಮ ಮರ್ಯಾದೆಯ ಮೆಟ್ಟು ಕಡಮೆಯದಿದ್ದಂತೆ, ನಿಮ್ಮ ಜ್ಞಾನದ ಮೆಟ್ಟಾದರೂ ಕಡಮೆಯದಿರಲೇಬೇಕು. ಇದನ್ನರಿತು ವಿಚಾರದಿಂದ ಮಾತಾಡುತ್ತ ಬಾ. ನೀನೂ ನಿನ್ನ ಮಗಳೂ ನನ್ನ ಹಾನಿಯನ್ನು ಮಾಡಿರುವಿರೆಂದು ನಾವು ತಿಳಿದಿರುವೆವು. ಈ ಹಾನಿಯನ್ನು ಈಗ ತುಂಬಿಕೊಳ್ಳಬೇಕೆಂದು ನಾವು ಇಚ್ಛಿಸುತ್ತೇವೆ.

ಕಂಚುಕಿರಾಯ—ಖಾವಂದರ ಯಾವಸೇವೆಯನ್ನು ಮಾಡಿದರೆ ಈ ದಾಸನು ಹಾನಿಯನ್ನು ತುಂಬಿಕೊಟ್ಟನೆಂದು ತಿಳಿಯಲಾಗುವದು?

ಖಾನ—ಹಾ! ಹೀಗೆ ಹಾದಿಗೆಬಂದು ಮಾತಾಡು. ನಿನ್ನ ಹೊಟ್ಟೆಯಲ್ಲಿ ಗಂಡುಮಕ್ಕಳಿಲ್ಲವೆಂಬ ಸಂಗತಿಯು ನಿಜವಷ್ಟೆ?

ಕಂಚುಕಿರಾಯ (ದುಃಖದಿಂದ)—ಧಾರೀರದ ರಾಜನಿಗೆ ಯುವರಾಜನಿಲ್ಲವೆಂಬ ಮಾತು ನಿಜವು.

ಖಾನ—ಹಾಗಾದರೆ ನಿನ್ನ ತರುವಾಯದಲ್ಲಿ ಧಾರೀರದ ರಾಜ್ಯದ ವ್ಯವಸ್ಥೆಯನ್ನು ಹೇಗೆ ಮಾಡಬೇಕೆಂದು ಯೋಚಿಸಿರುತ್ತಿ?

ಕಂಚುಕಿರಾಯ—ಸರದಾರಸಾಹೇಬ, ಆ ಮಾತಿನ ವಿಚಾರವನ್ನು ನಾನು ಇನ್ನೂ ಮಾಡಿರುವದಿಲ್ಲ. ಆ ಸಂಬಂಧದಿಂದ ಯೋಗ್ಯ ಸೂಚನೆಯನ್ನು ಮಾಡಿದರೆ ನಾನು ಅತ್ಯಂತ ಋಣಿಯಾಗುವೆನು.

ಖಾನ—ಅದಕ್ಕಾಗಿಯೇ ಈಗ ನಿನ್ನನ್ನು ಬುದ್ಧಿಪೂರ್ವಕವಾಗಿ ಕರೆಸಿದ್ದು. ಈ ರಣದುಲ್ಲಾಖಾನನ ಯೋಗ್ಯತೆಯನ್ನೂ, ಅಧಿಕಾರವನ್ನೂ, ಲೌಕಿಕವನ್ನೂ, ಮಾನಮರ್ಯಾದೆಯನ್ನೂ ನೀನು ಅರಿತವನೇ ಇರುತ್ತೀ, ಹೊಸದಾಗಿ ಹೇಳಬೇಕೆನ್ನುವ ಹಾಗಿಲ್ಲ! ನಮ್ಮಂಥ ರೂಪಸಂಪನ್ನನಾದ ಯೋಗ್ಯತೆಯ ಸುಂದರ ಅಳಿಯನು ನಿನಗೆ ಸಿಗುವದು ದುರ್ಲಭವೇ ಸರಿ! ನಾನು ಹೇಗೆ ಅಳಿಯನಾದೇನೆಂದು ರಜಪೂತಸ್ಥಾನದ ರಜಪೂತಅರಸರು ಮೋಲಾಟದಿಂದ ಹಾದಿಯ ನೋಡುತ್ತಿರುವರು. ಆದರೆ ನಮ್ಮನ್ನು ಅಳಿಯನಾಗಿ ತಿಳಿಯುವ ಬಹುಮಾನವನ್ನು ನಾವು ನಿನಗೆ ಕೊಡಬೇಕೆಂದು ಮಾಡಿರುತ್ತೇವೆ. ನಿನ್ನ ಚಲುವೆಯಾದ ಮಗಳ—ಕೈಹಿಡಿದು ನಮ್ಮ ಹಾನಿಯನ್ನು ತುಂಬಿಕೊಳ್ಳಬೇಕೆಂತಲೂ, ನಿನ್ನ ಪಶ್ಚಾತ್ ಧಾರೀರದ ರಾಜ್ಯದ ವ್ಯವ

ಸ್ಥಿಯು ಏನಾದೀತೆಂಬ ನಿನ್ನ ಚಿಂತೆಯನ್ನು ದೂರಮಾಡಬೇಕೆಂತಲೂ ನಾವು ಸಜ್ಜಯಿಸಿರುತ್ತೇವೆ.

ಕಂಚುಕಿರಾಯ—ಸರದಾರಸಾಹೇಬ, ನೀವು ನನ್ನಮೇಲೆ ಬಹು ದೊಡ್ಡ ಉಪಕಾರಮಾಡುತ್ತಿರುವಿರಿ! ವಿಜಯೆಯನ್ನು ತಾವು ಸ್ವೀಕರಿಸಿದರೆ ಆಕೆಯು ತಮ್ಮ ಜನ್ಮದ ಋಣಿಯಾಗುವಳು. ಮಗಳಸಲುವಾಗಿ ವರನನ್ನು ಹುಡುಕುವ ಚಿಂತೆಯಿಂದ, ಹಾಗು ನನ್ನ ಪಶ್ಚಾತ್ ನನ್ನ ರಾಜ್ಯದ ವ್ಯವಸ್ಥೆಯೇನಾದೀತೆಂಬ ಚಿಂತೆಯಿಂದ ನನ್ನನ್ನು ಮುಕ್ತಮಾಡುವ ತಮ್ಮ ವಿಚಾರವು ಅಭಿನಂದನೀಯವು!

ತನ್ನ ಕಲ್ಪನೆಗಿಂತಲೂ ಹೆಚ್ಚು ಕೆಲಸವಾದದ್ದನ್ನು ನೋಡಿ ಖಾನನು ಬಹಳ ಸಂತೋಷಪಟ್ಟನು. ಆತನು ಕಂಚುಕಿರಾಯನನ್ನು ಕುರಿತು—

ಖಾನ—ಕಂಚುಕಿರಾಯ, ನೀನು ದಿಲ್ಲಿಯದರ್ಬಾರದಲ್ಲಿ ಕೆಲದಿನಗಳನ್ನು ಕಳೆದಿರುವದರಿಂದ, ಯಾವ ಪ್ರಸಂಗದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬದನ್ನು ಚನ್ನಾಗಿ ಅರಿತಿರುತ್ತೀ. ನಮ್ಮಂಥ ಅಧಿಕಾರಿಗಳ ಮನಸ್ಸನ್ನೊಲಿಸಿಕೊಂಡು ನಮ್ಮ ಒಲವಿನಂತೆ ನಡೆಯುವ ಕಲೆಯನ್ನು ನೀನು ಚನ್ನಾಗಿ ಸಂಪಾದಿಸಿರುತ್ತೀ. ನಿನ್ನ ಸ್ವಂತದ ಕಲ್ಯಾಣದ ಯೋಗ್ಯಮಾರ್ಗವನ್ನು ನೀನು ಹಿಡಿದ ಹಾಗಾಯಿತು. ನಿನ್ನಾ ನಮ್ಮಾ ಸಂಬಂಧವು ಒಂದು ಕೂಡಿ ಬರಲಿ, ನಿನ್ನ ತಲೆಯಮೇಲಿನ ರಾಜ್ಯದ ಜವಾಬುದಾರಿಯ ಹೊರೆಯನ್ನು ಹೇಗೆ ಇಳಿಸಿ ಬಿಡುತ್ತೇನೆಂಬದರ ಅನುಭವವು ನಿನಗೆ ಬಾರದೆ ಯಿರಲಿಕ್ಕಿಲ್ಲ!

ಕಂಚುಕಿರಾಯ (ಗಡಬಡಿಸಿ)—ಸರದಾರಸಾಹೇಬ, ರಾಜ್ಯಕಾರಭಾರದಲ್ಲಿ ತಮ್ಮ ಯೋಗ್ಯವಾದ ಆಲೋಚನೆಯ ಅವಶ್ಯಕತೆಯು ನನಗೆ ಆಗಾಗ್ಗೆ ಬೇಕಾಗುವಲ್ಲಿ ಸಂಶಯವಿಲ್ಲ; ಅಥವಾ ತಮ್ಮ ಸಮ್ಮತಿಯಹೊರತು ಧಾರೀರದ ರಾಜ್ಯಕಾರಭಾರವು ನಡೆಯಲಾರದು; ಆದರೆ ರಾಜಸಿಂಹಾಸನವೇರುವ ಮಾನವು ಮಾತ್ರ ಕಡೆತನಕ ನನಗೇ ಇರಬೇಕೆಂಬ ನನ್ನ ಮಾತನ್ನು ನಡೆಸುವ ಮೆಹರ್ಬಾನಿಯಾಗಬೇಕೆಂದು ಪ್ರಾರ್ಥಿಸುತ್ತೇನೆ. ನನ್ನ ಪಶ್ಚಾತ್ ಧಾರೀರದ ಪ್ರಬಲರಾಜ್ಯವು ತಮ್ಮದೇ ಇರುತ್ತದೆ?

ಖಾನ—ನಿನಗೆ ಅದರ ಚಿಂತೆಬೇಡ. ಅದು ನನ್ನ ಅಧಿಕಾರದೊಳಗಿನ ಮಾತು. ನಾಳೆ ಬೆಳಗಾಗುತ್ತಲೆ ನೀನು ನಿನ್ನ ರಾಜಧಾನಿಗೆ ಹೋಗು. ಆದಷ್ಟುಬೇಗನೆ ನಮ್ಮ ಲಗ್ನದ ವ್ಯವಸ್ಥೆಯನ್ನು ಮಾಡು. ನಾನು ಯಾವ

ದಿವಸ ಅಲ್ಲಿಗೆ ಬರಬೇಕೆಂಬದನ್ನು ನಮಗೆ ತಿಳಿಸು. ನಾವು ಇಲ್ಲಿಯ ಕೆಲಸವನ್ನು ಮಾಡುತ್ತ ನಿನ್ನ ಪತ್ರದ ಹಾದಿಯನ್ನು ನೋಡುತ್ತಿರುವೆವು.

ಕಂಚುಕಿರಾಯ—ತಮ್ಮ ಅಪ್ಪಣೆಯು ಶಿರಸಾವಂದ್ಯವಾಗಿರುವದು. ಲಗ್ನದ ವಿಧಿಯು ಯಥಾಸಾಂಗವಾಗಿ ಆಗುವದಕ್ಕಾಗಿ ಕಾಜಿಯನ್ನು ಇಲ್ಲಿಂದಲೇ ಕರೆದುಕೊಂಡು ಹೋಗಬೇಕೆಂದು ಮಾಡಿದ್ದೇನೆ. ಯಾಕಂದರೆ, ಧಾರೀರದ ಕಾಜಿಗೆ ಅಷ್ಟು ಕುರಾಣದ ಜ್ಞಾನವಿಲ್ಲೆಂದು ನನ್ನ ತಿಳುವಳಿಕೆಯಾಗಿದೆ. ಲಗ್ನದಂತಹ ಮಹತ್ವದ ವಿಧಿಯು ಯಥಾಕುರಾಣವಾಗುವದು ಅತ್ಯವಶ್ಯವಾಗಿರುತ್ತದೆ. ನಾನು ಧಾರೀರಕ್ಕೆ ಹೋದಕೂಡಲೆ ತಿಥಿಯನ್ನು ಗೊತ್ತುಮಾಡಿ ತಮಗೆ ತಿಳಿಸುವೆನು. ತಮ್ಮಸಲುವಾಗಿ ನನ್ನ ಖಾಸರಾಜ ಮಂದಿರವನ್ನೇ ಶೃಂಗರಿಸಿ ಇಟ್ಟಿರುವೆನು. ಲಗ್ನವಾಗುವತನಕ ನಾವು ಆರ ಮನೆಯ ಸಮೀಪದ ಕುದುರೆಯ ಮನೆಯಲ್ಲಿರುವೆವು.

ಖಾನ—ಶಾಬಾಸ! ಕಂಚುಕಿರಾಯಾ, ನಿನ್ನಮೇಲೆ ನಾವು ಸುಪ್ರಸನ್ನರಾಗಿರುವೆವು. ದಿಲ್ಲೀಪತಿಯನ್ನು ಕಾಣುವ ಪ್ರಸಂಗ ಒದಗಿರುವಾಗ ನಿನಗೋಸ್ಕರ ಒಂದು ಸನ್ಮಾನದ ಉಚ್ಚತರಪದವಿಯನ್ನು ಕೊಡುವದಕ್ಕಾಗಿ ನಾವು ಹೇಳಿಕೊಳ್ಳುವೆವು. ಹೋಗು, ನಮ್ಮ ಅಮೃತಪಾನದ ಹೊತ್ತಾಯಿತು!

ಕಂಚುಕಿರಾಯನು ಅಲ್ಲಿಂದ ಹೊರಟನು. ಮುಂದೆ ತನ್ನ ಅಳಿಯನಾಗಬೇಕಾಗಿರುವ ರಣದುಲ್ಲಾಖಾನನಿಗೆ ಒಹುವಿನಯದಿಂದ ಕುರ್ನಿಸಾತ ಮಾಡಿದನು. ಇನ್ನು ಹೋಗುವದಕ್ಕಾಗಿ ಕಾಲು ಕಿತ್ತತಕ್ಕವನು, ಅಷ್ಟರಲ್ಲಿ ಆತನಿಗೆ ಹೀರಾದೇವಿಯು ಹೇಳಿದ ಮಾತು ನೆನಪಾಯಿತು. ಆತನು ಪುನಃ ಸರದಾರ ಸಾಹೇಬರ ಕಡೆಗೆ ತಿರುಗಿ ಬಂದು ವಿನಯದಿಂದ—

ಕಂಚುಕಿರಾಯ—ತಮ್ಮ ಅಪ್ಪಣೆಯಂತೆ ತಮ್ಮಬಳಿಗೆ ಬರುವದಕ್ಕಾಗಿ ನಾನು ಹೊರಟೆರಲು, ದಾರಿಯಲ್ಲಿ ಹೀರಾದೇವಿಯು ನನ್ನನ್ನು ಕಂಡಳು. ಸರದಾರಸಾಹೇಬರು ಇಲ್ಲಿಯವರೆಗೆ ಬರುವ ಶ್ರಮವನ್ನು ಯಾಕೆ ವಹಿಸಿದರೆಂಬದು ತಿಳಿಯಲಿಕ್ಕೆ ಶಕ್ಯವಿದ್ದರೆ, ಕೇಳಿಕೊಂಡು ಬಾರೆಂದು ನನಗೆ ಹೇಳಿರುವಳು. ನನ್ನ ಮಗಳನ್ನು ಧನ್ಯಳಾಗಮಾಡುವ ಉದ್ದೇಶದ ಹೊರತು ಬೇರೆ ಉದ್ದೇಶವಿದ್ದಲ್ಲಿ ತಿಳಿಸುವಹಾಗಿದರೆ ಈ ದಾಸನಿಗೆ ತಿಳಿಸುವ ಕೃಪೆ ಮಾಡಬೇಕು.

ರಣದುಲ್ಲಾ ಖಾನ(ಆಶ್ಚರ್ಯತೆಯಿಂದ)—ನಾವು ಇಲ್ಲಿಗೆ ಬಂದಿರುವ ಹೇತುಗಳು ಎರಡು ಒಂದು ಸ್ವಂತದ ಹಿತವನ್ನು ಸಾಧಿಸುವದು, ಮತ್ತೊಂದು ಸಾರ್ವಜನಿಕ ಹಿತವನ್ನು ಸಾಧಿಸುವದು. ಸ್ವಂತದ ಹಿತದ ಮಾತನ್ನಂತು ಈಗ ಸ್ವಲ್ಪದರಲ್ಲಿ ನಿನ್ನಮುಂದೆ ಹೇಳಿಯೇ ಇರುವೆವು. ಇನ್ನು ಸಾರ್ವಜನಿಕ ಹಿತದ ಮಾತನ್ನು ಹೇಳುವೆವು ಕೇಳು. ಮಹಮ್ಮದ ಪೈಗಂಬರರ ಪವಿತ್ರ ಆಜ್ಞೆಯನ್ನು ಪಾಲಿಸುವದಕ್ಕಾಗಿ ನಾವು ವಿಂಧ್ಯವಾಸಿನಿಯ ದೇವ ಸ್ಥಾನವನ್ನು ನಾಶಮಾಡಲು ಈ ಮೊದಲೆ ಬಂದಿದ್ದೆವಷ್ಟೆ? ಆಗ ನಮಗಾದ ಅಪಮಾನವು ನಿನಗೆ ಗೊತ್ತೇಇರುವದು. ಆ ಅಪಮಾನವು ರಣದುಲ್ಲಾ ಖಾನನೆಂಬ ಹೆಸರಿನ ಒಬ್ಬ ವ್ಯಕ್ತಿಯದೇ ಆಗಿರದೆ, ದಿಲ್ಲಿಯ ಇಸ್ಲಾಮಿ ಸಿಂಹಾಸನದ, ಪೈಗಂಬರರ ತೇಜಸ್ವಿಗಳಾದ ಭಕ್ತರ, ಅಲ್ಲಾನ ಮಹತ್ವದ ತತ್ವದ ಅಪಮಾನವುಆಗಿರುತ್ತದೆಂಬ ತಳಮಳವು ದಿಲ್ಲಿಯಬಾದಶಹರಿಗೆಆಗಿರುತ್ತದೆ. ಸಾವಿರಾರು ಬುಂದೇಲಿಗಳ ರಕ್ತಪಾತವಾಯಿತು; ಚಂಪತರಾಯನು ರಣಭೂಮಿಯಲ್ಲಿ ಬಿದ್ದನು; ಮಹೋಬದಮೇಲೆ ದಿಲ್ಲಿಯ ನಿಶಾನೆಯು ಏರಿತು; ಛತ್ರಸಾಲನು ಅವನ ಅನುಯಾಯಿಗಳು ದೇಶಭ್ರಷ್ಟರಾದರು;ಇಷ್ಟಾದರೂ ದಿಲ್ಲೀಪತಿಯ ತಾಪವು ಶಾಂತವಾಗಿರುವದಿಲ್ಲ! ಇನ್ನೂ ಇಸ್ಲಾಮಿ ಧರ್ಮದ ಸಾರ್ವಜನಿಕ ಅಪಮಾನವು ಕೂಡಿಬಂದಿರುವದಿಲ್ಲವೆಂದೂ ಬಾದಶಹರು ತಿಳಿದಿರುವರು. ಬುಂದೇಲಖಂಡದೊಳಗಿನ ಒಂದು ದೇವಾಲಯವು ಉಳಿಯದಂತೆ ಕಾಫಿರರ ದೇವಸ್ಥಾನಗಳೆಲ್ಲ ನೆಲಸಮವಾದ ಹೊರತು ನನಗೆ ಸಮಾಧಾನವಾಗದೆಂದು ದಿಲ್ಲೀಪತಿಗಳು ಕೂಡಿದ ದರ್ಬಾರದಲ್ಲಿ ಆಡಿ ತೋರಿಸಿರುವರು; ಆದ್ದರಿಂದ ಬುಂದೇಲಖಂಡವಲ್ಲಿಯ ಯಾವತ್ತು ದೇವಸ್ಥಾನಗಳನ್ನು ನಾಶಮಾಡುವದಕ್ಕಾಗಿ ಇಲ್ಲಿಯ ಸುಬೇದಾರನಾದ ಫಿಯಾದಖಾನನಿಗೆ ಆಜ್ಞಾಪಿಸಿ, ಆತನಿಗೆ ಸಹಾಯಮಾಡುವದಕ್ಕಾಗಿ ಬಾದಶಹರು ನನ್ನನ್ನು ಕಳುಹಿಸಿರುವರು. ಸುಭೇದಾರ ಫಿಯಾದಖಾನನ ಸಹಾಯದಿಂದ ರಾಜಧಾನಿಗಳಲ್ಲಿ, ಪಟ್ಟಣಗಳಲ್ಲಿ, ಹಳ್ಳಿಗಳಲ್ಲಿ, ಅರಣ್ಯಗಳಲ್ಲಿ, ಗುಡ್ಡಗಳಲ್ಲಿ ಇರುವ ದೇವಸ್ಥಾನಗಳನ್ನೆಲ್ಲ ನೆಲಸಮಮಾಡುವದೇ ನಮ್ಮ ಸಾರ್ವಜನಿಕ ಹಿತದ ಉದ್ದೇಶವಾಗಿರುತ್ತದೆ!

ಸತ್ತಾಧಾರಿಗಳ ಸ್ವಂತದ, ಹಾಗು ಸಾರ್ವಜನಿಕವಾದ ಹಿತದ ಉದ್ದೇಶಗಳು ಎಷ್ಟು ಉದಾತ್ತವಾಗಿರುವವೆಂಬದನ್ನು ಆಲೋಚಿಸುತ್ತ ಕಂಚುಕಿ

ರಾಯನು ಮುಲಾಕತದಿವಾಣಿಖಾನೆಯಿಂದ ಕಾಲುಕಿತ್ತಿದನು. ಮರುದಿವಸವೇ ಆತನು ಸೂರ್ಯೋದಯಕ್ಕೆ ಮುಂಚೆ ಓರಛಾ ರಾಜಧಾನಿಯನ್ನು ಬಿಟ್ಟು ತನ್ನ ಧಾರೀರ ರಾಜಧಾನಿಯ ಹಾದಿಯನ್ನು ಹಿಡಿದನು. ಈ ಆನಂದದ ಸುದ್ದಿಯನ್ನು ತನ್ನ ಹೆಂಡತಿಯಾದ ಸುಫಲಾದೇವಿಗೂ, ಮಗಳಾದ ವಿಜಯೆಗೂ ಯಾವಾಗ ಹೇಳೇನೆಂಬ ಆತುರದಿಂದ ಆ ವೃದ್ಧ ಕಂಚುಕಿ ರಾಯನು ಒಂಟಿಯಮೇಲೆ ಕುಳಿತು ವೇಗದಿಂದ ಸಾಗಿದ್ದನು. ಮೆಚ್ಚಿದವರಿಗೆ ಹಂದಿಯೇ ಮುಮ್ಮ!

೨೦ನೆಯ ಪ್ರಕರಣ- ಛತ್ರಸಾಲನ ತೇಜಸ್ವಿತೆ!

ವಿಜಯಪ್ರಾಪ್ತಿಯ ಆನಂದದ ಸವಿಯನ್ನು, ಪರಾಕ್ರಮದಿಂದ ಕಾದಿ ಜಯವನ್ನು ಸಂಪಾದಿಸಿದವರೇ ಬಲ್ಲರು. ಉಳಿದವರಿಗೆ ಆ ಆನಂದದ ಕಲ್ಪನೆಯೂ ಆಗಲಾರದು. ದೇವಗಡದ ಕೋಟೆಯು ಕೈಸೇರಿದ್ದರಿಂದ ದಿಲ್ಲೀಪತಿಯ ಜಯಶಾಲಿಯಾದ ಸೈನ್ಯವು ವಿಜಯೋತ್ಸವದಲ್ಲಿ ಮುಣುಗಿಹೋಗಿತ್ತು. ಮಧ್ಯರಾತ್ರಿಯುವಿುರಿಯೋಗಿದ್ದರೂ ಸೈನಿಕರ ಉತ್ಸವಭರವು ಹೆಚ್ಚುತ್ತಲೇಇತ್ತು. ರಾಜಾಜಯಸಿಂಗನು ದೇವಗಡದ ಗೆಲುವಿನ ವರ್ಣನದ ಇಷ್ಟುದ್ದ ಪತ್ರವನ್ನು ಬಾದಶಹನಿಗೆ ಬರೆದು, ಅದನ್ನು ಸಾಂಡಣಿಯ ಸವಾರನಸಂಗಡ ದಿಲ್ಲಿಗೆ ಅದೇ ಕಳಿಸಿ ಸಮಾಧಾನ ಹೊಂದಿದ್ದನು. ತಾನು ಮಾಡತಕ್ಕ ಅವಶ್ಯದ ಮಹತ್ವದ ಕೆಲಸವನ್ನು ಮಾಡಿ ಬಿಟ್ಟೆನೆಂಬ ಸಂತೋಷವು ಆಗ ಆತನಿಗೆ ಆಗಿದ್ದಿತು. ಗೆಲವಿನ ಸುದ್ದಿಯನ್ನು ಕೇಳಿದಕೂಡಲೆ ದಿಲ್ಲೀಪತಿಯು ಎಷ್ಟು ಸಂತುಷ್ಟನಾದಾನು, ಇಷ್ಟು ಬೇಗನೆ ದೇವಗಡವು ಕೈಸೇರಿದ್ದನ್ನು ಓದಿದ ಕೂಡಲೆ ಆತನಿಗೆ ನನ್ನ ಸಲುವಾಗಿ ಎಷ್ಟು ಧನ್ಯತೆಯುಂಟಾದೀತು ಎಂಬ ಅನೇಕ ವಿಚಾರಗಳು ಆ ಸ್ವಾಮಿಭಕ್ತ ರಜಪೂತವೀರನ ಮನಸ್ಸಿನಲ್ಲಿ ವಿಹರಿಸುತ್ತಿದ್ದವು. ವಿಜಯ ಪ್ರಾಪ್ತಿಯ ನಿಜವಾದ ಆನಂದವು ಆತನಮುಖದಲ್ಲಿ ಉಕ್ಕುತ್ತಲಿತ್ತು. ಇಷ್ಟೆಲ್ಲ ಜನರ ಆನಂದದ ಕಾರಣವು ಒಂದು ವಿಜಯವು! ಆ ವಿಜಯಕ್ಕೆ ಕುಮಾರ ಛತ್ರಸಾಲನ ಮಹಾಪರಾಕ್ರಮವು ಕಾರಣವೆಂಬದನ್ನು ನೆನಿಸಿ ಆ ಪ್ರತಾಪಿ ರಜಪೂತನು ಛತ್ರಸಾಲನ ವಿಷಯವಾಗಿ ಅತ್ಯಂತ ಪ್ರೇಮಭಾವವನ್ನು ವಹಿಸಿದ್ದನು. ಛತ್ರಸಾಲನನ್ನು ಅಭಿನಂದಿಸುವದಕ್ಕಾಗಿ

ಆ ಗಂಭೀರನಾದ ಕ್ಷತ್ರಿಯನು ಛತ್ರಸಾಲನ ರಾಹುಟಿಯ ಕಡೆಗೆ ಸಾಗಿದ್ದನು. ಛತ್ರಸಾಲನ ಇಂದಿನ ಪರಾಕ್ರಮವು ಕಳೆದುಹೋಗಿದ್ದ ಆತನ ವೈಭವವನ್ನು ಆತನಿಗೆ ಮತ್ತೆ ಸಂಪಾದಿಸಿ ಕೊಡುವದೆಂಬ ಆನಂದದ ವಿಚಾರದಿಂದ ಆ ವೃದ್ಧವೀರನು ಉತ್ತೇಜಿತನಾಗಿದ್ದನು.

ಕುಮಾರ ಛತ್ರಸಾಲನು ಒಂದು ಕಲ್ಲಮೇಲೆ ಬಾಡಿದ ಮೋರೆಯಿಂದ ವಿಚಾರಮಾಡುತ್ತ ಕುಳಿತುಕೊಂಡಿದ್ದನು. ರಾಜಾಜಯಸಿಂಗನು ಆತನನ್ನು ಬಹಳಹೊತ್ತು ದಿಟ್ಟಿಸಿನೋಡಿ ಆತನನ್ನು ಕುರಿತು—"ಕುಮಾರಛತ್ರಸಾಲ, ಹೀಗೆ ನಿನ್ನ ಬಾಡಿದ ಮೋರೆಯೇಕೆ?" ಎಂದು ಕೇಳಿದನು. ಅದಕ್ಕೆ ಯಾವ ಉತ್ತರವೂ ದೊರೆಯಲಿಲ್ಲ. ತರುಣನ ಮುಖದಲ್ಲಿಯ ಚಿಂತೆಯು ಚಿಹ್ನವಾಗಲಿ, ಆತನ ಮನಸ್ಸಿನ ಏಕಾಗ್ರತೆಯಾಗಲಿ ಲೇಶವೂ ಕಡಿಮೆಯಾಗಲಿಲ್ಲ. ಆಗ ರಾಜಾ ಜಯಸಿಂಗನು ಎರಡು ಹೆಜ್ಜೆ ಮುಂದಕ್ಕೆ ಬಂದು ತರುಣನ ಹೆಗಲಮೇಲೆ ಕೈಯಿಟ್ಟು ಆಶ್ಚರ್ಯದ ಪ್ರೇಮದಿಂದ—"ಕುಮಾರ, ನಿನ್ನ ಖಿನ್ನತೆಯ ಕಾರಣವೇನು? ನಿನ್ನ ಪ್ರತಾಪಶಾಲಿಯಾದ ತಂದೆಯ ನೆನಸಾದದ್ದರಿಂದ ಹೀಗೆ ಖಿನ್ನನಾಗಿರುವೆಯೋ?

ರಾಜಾ ಜಯಸಿಂಗನ ಈ ಮಾತುಗಳನ್ನುಕೇಳಿ ಛತ್ರಸಾಲನು ಗಡಬಡಿಸಿ ಎಚ್ಚತ್ತು ಎದ್ದುನಿಂತು ಜಯಸಿಂಗನನ್ನು ವಿನಯದಿಂದ ನಮಸ್ಕರಿಸಿ—"ಕಾಕಾಜಿ, ಈ ಕಾಲವು ತಮ್ಮ ವಿಶ್ರಾಂತಿಯದಾಗಿದ್ದು, ಹೀಗೆ ನನ್ನ ಕಡೆಗೆ ಬರುವ ಆಯಾಸವನ್ನು ಯಾಕೆಹೊಂದಿದಿರಿ? ತಮ್ಮ ಸಲುವಾಗಿ ನಾನು ಏನು ಮಾಡಲಿ? ನನಗೆ ಯಾವ ಸೇವೆಯನ್ನು ಹೇಳಿ ಧನ್ಯನಾಗಮಾಡುವಿರಿ?" ಎಂದು ಕೇಳಿದನು. ಅದಕ್ಕೆ ಜಯಸಿಂಗನು—"ಕುಮಾರ, ಇಂದಿನ ಗೆಲವಿನ ಕೀರ್ತಿಯು ಸಂಪೂರ್ಣವಾಗಿ ನಿನ್ನದಾಗಿದ್ದು, ನೀನು ಹೀಗೆ ಖಿನ್ನನಾಗಿರುವದೇಕೆ? ನಿನ್ನ ಶೌರ್ಯದ ಅಭಿನಂದನ ಮಾಡುವದಕ್ಕಾಗಿ ನಾನು ನಿನ್ನ ಬಳಿಗೆ ಬಂದಿರಲು, ನಿನ್ನ ಈ ಬಾಡಿದ ಮೋರೆಯು ನನ್ನ ಕಣ್ಣಿಗೆ ಬಿದ್ದಿತು. ನಿನಗೆ ಗೆಲವಿನ ಆನಂದವು ಸ್ವಲ್ಪವೂ ಆಗುವದಿಲ್ಲವೇನು?"

ಛತ್ರಸಾಲ (ದುಃಖದಿಂದ) — ಕಾಕಾ ಸಾಹೇಬ, ಯಾರಗೆಲವಿಗೆ ಯಾರು ಆನಂದಪಡಬೇಕು? ಇಂದಿನ ಗೆಲವು ದಿಲ್ಲೀಪತಿಯದು, ಆತನ ಜಾತಿಯವರದು; ಅದಕ್ಕಾಗಿ ಛತ್ರಸಾಲನು ಏಕೆ ಆನಂದಪಡಬೇಕು? ಆದರೆ

ಕಾಕಾಜೀ, ನಿಮ್ಮ ಆಶ್ರಯದಲ್ಲಿ ನಾನು ಇಷ್ಟುದಿವಸ ಇದ್ದೆನು; ನಿಮ್ಮ ಆಶ್ರಯದಿಂದ ದಿಲ್ಲೀಪತಿಯ ಸೈನ್ಯದ ಒಳಗಿನ ಹುರುಳು ನನಗೆ ಗೊತ್ತಾಯಿತು. ನಿಮ್ಮ ಆಶ್ರಯವು ನನ್ನ ಮುಂದಿನ ವೈಭವಕ್ಕೆ ಕಾರಣವಾಗುವದೆಂದು ತಿಳಿದೇ ನಿಮ್ಮನ್ನು ಸಂತೋಷಪಡಿಸುವದಕ್ಕಾಗಿ ಇಂದು ಛತ್ರಸಾಲನು ಬಾಡಿಗೆಯ ಯುದ್ಧವನ್ನು ಮಾಡಿರುವನು. ದೇವಗಡವು ಕೈಸೇರಿದರೆ, ಅಥವಾ ದಿಲ್ಲೀಪತಿಗೆ ಜಯವಾದರೆ ಕಾಕಾಜಿಯವರು ಸಂತುಷ್ಟರಾಗುವರೆಂದು ತಿಳಿದು, ಇಂದಿನ ನನ್ನ ಕಟು ಕರ್ತವ್ಯವನ್ನು ಕಷ್ಟದಿಂದ ಕೊನೆಗಾಣಿಸಿರುವೆನು. ಅಂದಬಳಿಕ ನನಗೆ ಆನಂದವು ಹೇಗಾಗಬೇಕು?

ರಾಜಾ ಜಯಸಿಂಗ (ಬೆನ್ನುಮಾಡಿ ಸುತ್ತುಮುತ್ತು ತೋರಿಸುತ್ತ)— ಈ ಸುತ್ತುಮುತ್ತಲಿನ ಪ್ರದೇಶದ ಕಡೆಗೆ ನೋಡು. ವಿಜಯೋತ್ಸವದಲ್ಲಿ ಮುಣುಗಿಹೋಗಿರುವವರೆಲ್ಲ ಯವನರೇ ಇರುವರೇನು? ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ನಮ್ಮ ದೇಶದವರೇ ಇರುವರು. ಅಂದಬಳಿಕ ಇವರು ವಿಜಯೋತ್ಸವವನ್ನು ಯಾಕೆ ಮಾಡಬೇಕು?

ಛತ್ರಸಾಲ—ಇದೇ ನನಗೆ ತಿಳಿಯಲೊಲ್ಲದು; ನಿಜವಾಗಿಯೆ ಅದರಿ ಇಂದಿನ ಯವನರ ವಿಜಯಕ್ಕಾಗಿ ನನ್ನಂತೆ ನಮ್ಮವರಿಗೂ ಆನಂದವಾಗಬಾರದು; ಆದರೆ ಕಾಕಾಸಾಹೇಬ, ತಾವು ಪರಾಕ್ರಮದಿಂದ ಕಾದಿ ಗೆದ್ದುಕೊಂಡ ತಮ್ಮ ದೇಶವನ್ನೇ ಬಾದಶಹನಿಗೆ ಸಂತೋಷದಿಂದ ಅರ್ಪಿಸುವಷ್ಟು ಮೂಢರಾಗಿರುವ ಜನರು ಆನಂದಬಟ್ಟರೆ ಯಾರು ಮಾಡುವದೇನು? ಸ್ವದೇಶದ ಮೇಲೆ ತಿರುಗಿ ಬಿದ್ದಿರುವ ಇಂಥ ಈ ತಿಳುವಳಿಕೆಯಿಲ್ಲದ ಸ್ವಾರ್ಥಪರಾಯಣ ಸೈನಿಕರ ಸಾಲಿನಲ್ಲಿ, ಸ್ವಾತಂತ್ರ್ಯಪ್ರಿಯನಾದ ಚಂಪತರಾಯನ ಮಗನನ್ನು ಕೂಡಿಸುವಿರೇನು? ಗೇಣುಹೊಟ್ಟೆಯ ತಗ್ಗನ್ನು ತುಂಬಿಕೊಳ್ಳುವದಕ್ಕಾಗಿ ದೇಶದ್ರೋಹಿಗಳಾಗಿರುವ ಕ್ಷುದ್ರ ಸೈನಿಕರ ಮನಸ್ಸಿಗೆ, ಸ್ವದೇಶಭಕ್ತ ಚಂಪತರಾಯನ ಮಗನ ಮನಸ್ಸನ್ನು ಹೋಲಿಸಿನೋಡುವಿರೇನು? ನನ್ನ ಪರಾಕ್ರಮದಿಂದ ಬುಂದೇಲ ಖಂಡಕ್ಕೆ ಸ್ವಾತಂತ್ರ್ಯವು ದೊರೆತರೆಮಾತ್ರ ನನಗೆ ಆನಂದವಾಗುವದು.

ರಾಜಾ ಜಯಸಿಂಗ— ಕುಮಾರ, ಬುಂದೇಲಖಂಡದ ಸ್ವಾತಂತ್ರ್ಯದ ನಿನ್ನ ಹಂಬಲವು ಇನ್ನೂ ಹೋಗಿರುವದಿಲ್ಲವೆ? ಚಂಪತರಾಯನ ವಿನಾಶ

ದಿಂದಲಾದರೂ ನಿನ್ನ ಕಣ್ಣುಗಳು ತೆರೆಯಬೇಕಾಗಿತ್ತು. ಬುಂದೇಲಖಂಡ ದಲ್ಲುಂಟಾದ ಭಯಂಕರ ರಕ್ತಪಾತವನ್ನು ನೋಡಿಯಾದರೂ ನಾವು ದೇಶ ಕಲ್ಯಾಣದ ಹಾದಿಯನ್ನು ತಪ್ಪುತ್ತಿರುವೆವೆಂದು ನೀನು ತಿಳಿದುಕೊಳ್ಳಬಹು ದಾಗಿತ್ತು. ಆದರೆ ಬುಂದೇಲಖಂಡದ ದುರ್ದೈವದ ಕಾಲವು ಇನ್ನೂ ತೀರಿ ರುವದಿಲ್ಲವೆಂಬಂತೆ ತೋರುತ್ತದೆ!

ಛತ್ರಸಾಲ (ಆವೇಶದಿಂದ)—ಕಾಕಾಜೀ, ಸ್ಪಷ್ಟ ಮಾತಾಡುವೆನೆಂದು ಸಿಟ್ಟಾಗಬಾರದು. ರಾಜಸ್ಥಾನಕ್ಕಷ್ಟೇ ಅಲ್ಲ, ಇಡಿಯ ಭರತಖಂಡಕ್ಕೇ ಹಿತ ವಾಗಬೇಕೆಂದು ದಿಲ್ಲಿಯ ದರ್ಬಾರದಲ್ಲಿ ನೀವು ಇಷ್ಟುದಿವಸ ವ್ಯವಹರಿಸುತ್ತಿ ರುವಿರಲ್ಲ, ನಿಮ್ಮಿಂದ ರಾಜಸ್ಥಾನಕ್ಕಾಗಲಿ, ಭರತಖಂಡಕ್ಕಾಗಲಿ ಎಷ್ಟರ ಮಟ್ಟಿಗೆ ಹಿತವಾಗಿರುತ್ತದೆ?

ಜಯಸಿಂಗ (ವಿಚಾರದಮುದ್ರೆಯಿಂದ)-ಛತ್ರಸಾಲ, ನಿನ್ನಮಾತಿನಿಂದ ನನಗೆ ಸಿಟ್ಟುಬರುವದಿಲ್ಲ. ದಿಲ್ಲಿಯ ದರ್ಬಾರದಲ್ಲಿ ನಾನು ಇದ್ದದ್ದರಿಂದ ಜನತೆಯ ಕಲ್ಯಾಣವೇನೂ ಆಗಿರುವದಿಲ್ಲವೆಂದು ತಿಳಿದು ನೀನೊಬ್ಬನೇ ನನ್ನನ್ನು ಆರೋಪಿಸುತ್ತಿರುವದಿಲ್ಲ; ಆದರೆ ಜನರ ಆ ಆರೋಪವನ್ನು ಲಕ್ಷಿ ಸದೆ ನನ್ನ ಕರ್ತವ್ಯವನ್ನು ಮೆಲ್ಲಮೆಲ್ಲನೆ ಸಾಗಿಸಿಕೊಂಡು ಹೋಗಬೇಕೇದು ನಾನು ನಿಶ್ಚಯಿಸಿದ್ದೇನೆ. ನನ್ನ ಪ್ರಯತ್ನದಿಂದ ಸಾಮ್ರಾಜ್ಯದೊಳಗಿನ ನನ್ನ ಬಂಧುಗಳ ಹೆಚ್ಚಿನ ಲಾಭವಾಗದಿದ್ದರೂ, ಈ ಜಯಸಿಂಗನ ಪ್ರಯತ್ನ ದಿಂದಲೇ ಎಷ್ಟೋ ತಲೆಭಾರವಾದ ಕರಗಳನ್ನು ಬಾದಶಹನು ತೆಗೆದುಬಿಡಬೇ ಕಾಗಿದೆಯೆಂಬದನ್ನು ಎಲ್ಲರೂ ಲಕ್ಷದಲ್ಲಿಡತಕ್ಕದ್ದು.

ಛತ್ರಸಾಲ—ಮತ್ತು ಆದೇ ಕಾಲದಲ್ಲಿ ದಿಲ್ಲೀಪತಿಯು ಎಷ್ಟೋ ಹೊಸ ಕರಗಳ ಭಾರವನ್ನು ಪ್ರಜೆಗಳ ಮೇಲೆ ಹೊರಿಸಿರುವನೆಂಬದನ್ನೂ ಲಕ್ಷದಲ್ಲಿಡ ತಕ್ಕದ್ದು. ಕಾಕಾಜೀ, ರಾಜಕಾರಣದೊಳಗಿನ ಈ ಸ್ಪಷ್ಟವಾದ ಹಿಡತ ಗಳು ನಿಮಗೆ ನಿಚ್ಚಳವಾಗಿ ಕಾಣುತ್ತಿರುವವು. ಒಂದು ಹಕ್ಕನ್ನು ಕೊಡ ಬೇಕು, ಅಂತಹವೇ ಎರಡು ಹಕ್ಕುಗಳನ್ನು ಕಸಿದುಕೊಳ್ಳಬೇಕು; ಎರಡು ಕರಗಳನ್ನು ತೆಗೆಸು ಬಿಡಬೇಕು, ಆ ತೆಗೆದ ಕರಗಳಿಂದಾದ ಹಾನಿಯು ತುಂಬಿ ಹೆಚ್ಚುಉಳಿತಾಯವಾಗುವಂತೆ ಬಹು ದೊಡ್ಡ ಭಾರದ ಒಂದು ಕರವನ್ನುಹೇರ ಬೇಕು. ಇವುರಾಜಕಾರಣದ ಹಿಡತಗಳು. ಇವುಗಳನ್ನು ನನ್ನಂತಹಹುಡುಗನು

ನಿಮ್ಮಮುಂದೆ ಸ್ಪಷ್ಟವಾಡಿ ಹೇಳಲು ಸಮರ್ಥನಾಗಬಹುದೆ? ನಿಮಗೆಲ್ಲ ಅದು ಗೊತ್ತಿರುವದು. ಸ್ವಲ್ಪ ವಿಚಾರಮಾಡಿ ನೋಡಿದರೆ, ಮಹಾರಾಣಾ ರಾಜ ಸಿಂಹನ ಪ್ರಯತ್ನವು ನಿಮ್ಮ ಪ್ರಯತ್ನಕ್ಕಿಂತ ಯಾಕೆ ಶ್ರೇಷ್ಠವಾದದ್ದೆಂಬ ಮಾತು ನಿಮ್ಮ ಲಕ್ಷದಲ್ಲಿ ಬರಬಹುದು. ಮಹಾರಾಣಾ ರಾಜಸಿಂಹನ ಖಡ್ಗವು ರಾಜಸ್ಥಾನದಲ್ಲಿ ಯಾಕೆ ಹೊರಬಿದ್ದಿರುವದೋ, ಮಹಾತ್ಮನಾದ ಶಿವಾಜಿಯ ಖಡ್ಗವು ದಕ್ಷಿಣದಲ್ಲಿ ಯಾಕೆ ಹೊಳೆಯುತ್ತಿರುವದೋ, ಅದಕ್ಕಾಗಿಯೇನನ್ನ ತಂದೆಯಾದ ಚಂಪತರಾಯನ ಖಡ್ಗವು ಬುಂದೇಲಖಂಡವಲ್ಲಿ ಕಡೆಯತನಕ ಪ್ರಕಾಶಿಸುತ್ತಲಿತ್ತು. ಉದೇಪುರದ ಪುಣ್ಯವು ಬಲವತ್ತರವಾಗಿತ್ತು, ದಕ್ಷಿಣದ ದೈವವು ತೆರೆದಿತ್ತು; ಅಂತೇ ಮಹಾರಾಣಾ ರಾಜಸಿಂಹರವರ, ಹಾಗು ಮಹಾತ್ಮರಾದ ಶಿವಾಜಿಯವರ ಕೆಲಸಕ್ಕೆ ಯಶಸ್ಸು ದೊರೆಯಿತು; ಆದರೆ ಬುಂದೇಲಖಂಡದ ದುರ್ದೈವದ ಕಾಲವು ಇನ್ನೂ ತೀರಿರನ್ದರಿಂದ, ಚಂಪತ ರಾಯರ ಪ್ರಯತ್ನಕ್ಕೆ ಯಶಸ್ಸು ಬರಲಿಲ್ಲ. ಇಷ್ಟರಮೇಲಿಂದ ನಮ್ಮತಂದೆ ಯವರ ಪ್ರಯತ್ನವನ್ನು ವ್ಯರ್ಥವೆಂದು ಹೇಳಬಹುದೋ?

ಜಯಸಿಂಹ— ಬುಂದೇಲಖಂಡದ ದೈವವು ಎಂದು ತೆರೆಯುವದೋ ತೆರೆಯಲಿ, ಆದರೆ ಅಲ್ಲಿಯವರೆಗೆ ಹೀಗೆ ಹೀನಾವಸ್ಥೆಯಲ್ಲಿ ಕಾಲ ಕಳೆಯುವ ದಕ್ಕಿಂತ, ಇಂದಿನ ವಿಜಯದಿಂದಾಗುವ ಲಾಭವನ್ನು ಪಡೆದು, ಕಳೆದುಕೊಂ ಡಿದ್ದ ವೈಭವವನ್ನು ಪುನಃ ನೀನು ಸಂಪಾದಿಸಬೇಕೆಂದು ನಾನು ಇಚ್ಛಿಸು ತ್ತೇನೆ. ನಾಳೆ ನಮ್ಮ ಸೈನ್ಯವು ದಿಲ್ಲಯಕಡೆಗೆ ಹೋಗುವದಕ್ಕಾಗಿ ಪಾಳ ಯವನ್ನು ಕಿತ್ತತಕ್ಕದ್ದಿದೆ. ನೀನೂ ನಮ್ಮ ಸಂಗಡ ದಿಲ್ಲಿಗೆ ನಡೆ. ಛತ್ರ ಸಾಲಾ, ನನ್ನ ಸೂಚನೆಯನ್ನು ಧಿಕ್ಕರಿಸಬೇಡ. ಮಹೋಬದ ರಾಜ್ಯವನ್ನು ನಿನಗೆ ತಿರುಗಿ ಕೊಡುವಬಗ್ಗೆ ನಾನು ಹೊಣೆಯಾಗುತ್ತೇನೆ.

ಛತ್ರಸಾಲ—ಮಹೋಬದ ರಾಜ್ಯವು ದೊರೆತರೆ ಬುಂದೇಲಖಂಡದ ಸ್ವಾತಂತ್ರ್ಯವು ದೊರೆತಹಾಗಾಗಲಿಲ್ಲ. ಅಪ್ಪನ ಕಾಲದ ಎಲ್ಲ ಐಶ್ವರ್ಯವು ದೊರೆತರೆ ಬುಂದೇಲಖಂಡದ ಸ್ವಾತಂತ್ರ್ಯವು ದೊರೆತಹಾಗಾಗಲಿಲ್ಲ. ಕಾಕಾ ಸಾಹೇಬ, ಹಸಿದ ಸಿಂಹವು ನರಿಯ ಮಾಂಸದಿಂದ ತನ್ನ ಹಸಿವೆಯನ್ನು ದೂರಮಾಡಿಕೊಳ್ಳಲು ಇಚ್ಛಿಸಬಹುದೋ? ಅದರಂತೆ, ಯಾವತ್ತು ಬುಂದೇಲ ಖಂಡದ ಸ್ವಾತಂತ್ರ್ಯವನ್ನು ಇಚ್ಛಿಸುತ್ತಿರುವ ಈ ಛತ್ರಸಾಲನು, ಮಹೋ

ಬದ ಮಾಂಡಲಿಕತ್ವದಿಂದಾಗಲಿ, ಅಥವಾ ದಿಲ್ಲಿಯ ದರ್ಬಾರದ ಅಮೀರಿಯಿಂದಾಗಲಿ ಹೇಗೆ ಸಂತುಷ್ಟನಾದಾನು?

ಜಯಸಿಂಗ (ಪ್ರೇಮದಿಂದ ನೋಡುತ್ತ)—ಕುಮಾರ, ನೀನನ್ನುವದು ನಿಜವು. ಚಂಪತರಾಯನು ದಿಲ್ಲಿಯ ಪತಿಯ ಅಮೀರಿಯನ್ನು ಸ್ವೀಕರಿಸುವಾಗ ಹೀಗೆಯೇ ಅಂದನು. ಆದರೆ ಕಾಲ-ಪರಿಸ್ಥಿತಿಗಳನ್ನು ನೋಡಿ ಪುಚ್ಛರು ನಡೆಯತಕ್ಕದ್ದು. ನೀನು ನನ್ನ ಸಂಗಡ ದಿಲ್ಲಿಗೆ ನಡೆ. ಈದಿನದ ನಿನ್ನ ಉಪಕಾರದ ಸಂಗಡ ಹಿಂದಿನ ನಿನ್ನ ಉಪಕಾರದ ನೆನಪನ್ನು ಬಾದಶಹರಿಗೆ ಮಾಡಿಕೊಡೋಣ. ಬುಂದೇಲಖಂಡದ ಸುದ್ದಿಯದಿಂದ ಅದಕ್ಕೆ ಸ್ವಾತಂತ್ರ್ಯವು ದೊರೆತರೆ ದೊರೆತೇ ಹೋಯಿತು. ಇಂದಿನ ವಿಜಯದಿಂದ ದಿಲ್ಲಿಯ ಪತಿಯ ಕೈಸೇರಿದ ಸ್ಯಾಂತದ ವಿಸ್ತಾರದ ಪಾಸಂಗಕ್ಕೆ ನಿನ್ನ ಬುಂದೇಲಖಂಡದ ಸೀಮೆಯು ಹತ್ತಲಾರದು.

ಛತ್ರಸಾಲ—ಅದೆಲ್ಲ ನಿಜವು! ಆದರೆ ನಿಮ್ಮಂಥ ಕ್ಷತ್ರಿಯ ವೀರರು ಔರಂಗಜೇಬನ ಪ್ರಾಣಪ್ರತಿಷ್ಠಾಪನೆಯಿಂದ ಆರಂಭಿಸಿ, ಆತನನ್ನು ಇಂದಿನ ವೈಭವದ ಶಿಖರಕ್ಕೆ ಮುಟ್ಟಿಸಿರಲು, ಮತ್ತು ಈಗಲೂ ನೀವು ದಿಲ್ಲಿಯ ಬಾದಶಾಹಿಯ ಮಂದಿರದ ಮುಖ್ಯ ಆಧಾರಸ್ತಂಭವಾಗಿರಲು, ಆ ದುಷ್ಟ ಬಾದಶಹನು ನಿಮಗೆ ಸ್ವಾತಂತ್ರ್ಯವನ್ನು ಎಲ್ಲ ಕೊಟ್ಟಿರುವನು? ಅಂದಬಳಿಕ ನಿಮ್ಮ ಮಾತಿನಿಂದ ದಿಲ್ಲೀಪತಿಯು ನನ್ನಂತಹ ಒಂದೆರಡು ಉಪಕಾರಮಾಡಿದ ಕ್ಷುದ್ರರಿಗೆ ಸ್ವಾತಂತ್ರ್ಯವನ್ನು ಕೊಡುವದುಂಟೇ? ಈ ಮಾತಿನ ಅನುಭವವು ಹಿಂದೆ ದಿವಾಣ-ಇ-ಆಮಖೊಳಗಿನ ದರ್ಬಾರದಲ್ಲಿ ಅಪ್ಪನಿಗೂ, ನನಗೂ ಪೂರಾ ಬಂದುಹೋಗಿರುವದು. ಬಿಕ್ಕೆಬೇಡಿದರೆ ಸ್ವಾತಂತ್ರ್ಯವು ದೊರೆಯುವದಿಲ್ಲವೆಂಬ ಮಾತು ನಮಗೆ ಗಟ್ಟಿಮುಟ್ಟಿಯಾಗಿ ಗೊತ್ತಾಗಿದೆ.

ಜಯಸಿಂಗ (ಆಗ್ರಹದಿಂದ)—ಅದೇನೇ ಇರಲಿ, ನನ್ನಮಾತಿಗೆ ಒಪ್ಪಿ ನೀನು ದಿಲ್ಲಿಗೆ ಬರಲೇಬೇಕು. ಚಂಪತರಾಯನ ಮಗನನ್ನು ನಾನು ಬುಂದೇಲಖಂಡದಲ್ಲಿ ಅಸಹಾಯನಾಗಿ ಇರಗೊಡಲಾರೆನು. ಹೀರಾದೇವಿಯ ಗುಪ್ತಚಾರರು ಬುಂದೇಲಖಂಡದ ತುಂಬ ಸಂಚರಿಸುತ್ತಿರಲು, ನಿನ್ನೊಬ್ಬನನ್ನೇ ಬುಂದೇಲಖಂಡದಲ್ಲಿ ಬಿಡುವದು ಮೂರ್ಖತನವೇ ಸರಿ!

ಛತ್ರಸಾಲ—ಕಾಕಾಜಿ, ನೀವು ನನ್ನ ವಿಷಯವಾಗಿ ವಹಿಸಿರುವ ಸದಯತೆಗಾಗಿ ನಾನು ನಿಮಗೆ ಅತ್ಯಂತಕೃತಜ್ಞನಾಗಿರುವೆನು; ಆದರೆ ನನ್ನ ವಿಷ

ಯವಾಗಿ ತಾವು ಕಷ್ಟ ಅಂಜುವ ಕಾರಣವಿಲ್ಲವೆಂದು ಹೇಳಿಕೊಳ್ಳುವೆನು. ಬುಂದೇಲಖಂಡದಲ್ಲಿ ಒಬ್ಬ ಹೀರಾದೇವಿಯು ನನ್ನ ಪ್ರಾಣಹರಣಕ್ಕಾಗಿ ಹೊಂಚುಹಾಕಿದ್ದರೂ, ಪ್ರಾಣನಾಥಪ್ರಭುಗಳ ಕೃಪೆಯಿಂದ ಇಡಿಯ ಬುಂದೇಲಖಂಡವೇ ನನ್ನ ಸಂರಕ್ಷಣದ ಸಲುವಾಗಿ ಪ್ರಾಣಕೊಡಲಿಕ್ಕೆ ಸಿದ್ಧವಾದೀತು; ಆದ್ದರಿಂದ ಕಾಕಾಜೀ, ನನ್ನ ಚಿಂತೆಯನ್ನು ತಾವು ಮಾಡಬಾರದು. ಮಹೋಬದಕೋಟೆಯು ನನ್ನನ್ನು ರಕ್ಷಿಸಲು ಸಮರ್ಥವಾಗದಿದ್ದರೂ, ಅಪ್ಪನ ಯೋಗದಿಂದ ನಾನು ಸಂಪಾದಿಸಿರುವ ಧೈರ್ಯರೂಪ ದುರ್ಗವು ಇನ್ನುಮುಂದೆ ನನ್ನ ಸಂರಕ್ಷಣವನ್ನು ನಿಶ್ಚಯವಾಗಿ ಮಾಡುವದು! ತಂದೆಯ ಪ್ರೇಮವು ಈಗ ಪ್ರತ್ಯಕ್ಷವಾಗಿ ನನ್ನನ್ನು ರಕ್ಷಿಸಿದಿದ್ದರೂ, ವಿಂಧ್ಯವಾಸಿನೀದೇವಿಯು ಈಪ್ರೇಮಲಭಕ್ತನಯೋಗಕ್ಷೇಮವನ್ನು ತಕ್ಕೊಳ್ಳದೆ ಬಿಡುವಹಾಗಿಲ್ಲ. ಮನಸ್ಸಿನಲ್ಲಿಸ್ವಾತಂತ್ರ್ಯದದಿವ್ಯಜ್ಯೋತಿಯು ಪ್ರಕಾಶಿಸುತ್ತಿರುವಾಗ, ಧೈರ್ಯರೂಪ ತಂದೆಯು ರಕ್ಷಿಸುತ್ತಿರುವಾಗ, ದೇಶಹಿತದಂಥ ಪವಿತ್ರಕಾರ್ಯವನ್ನು ಮಾಡುತ್ತಿರುವಾಗ, ಪ್ರಾಣನಾಥಪ್ರಭುಗಳ ಹಾಗು ತಮ್ಮಂಥ ಗುರುಹಿರಿಯರ ಆಶೀರ್ವಾದದ ಅಭಯಹಸ್ತವು ತಲೆಯಮೇಲಿರುವಾಗ, ಶ್ರೀ ವಿಂಧ್ಯವಾಸಿನಿಯು ಕೃಪಾದೃಷ್ಟಿಯಿಂದ ನೋಡುತ್ತಿರುವಾಗ ನಾನು ಹೀರಾದೇವಿಯಂಥ ಕಟಕಳಿಗೆ ಏಕೆ ಅಂಜಬೇಕು? ಕಾಕಾಜೀ, ನಾನು ದಿಲ್ಲಿಗೆ ಬರಲೇಬೇಕೆಂದು ನೀವು ಆಗ್ರಹಪಡಬೇಡಿರಿ. ನಾನು ಈ ಪ್ರಾಂತದಲ್ಲಿ ಅತ್ಯಂತ ಮಹತ್ವದ ಕೆಲಸಗಳನ್ನು ಮಾಡಬೇಕಾಗಿದೆ. ಇಷ್ಟು ಬೇಗನೆ, ನಾಳೆಗೇ ದಕ್ಷಿಣವನ್ನು ಬಿಡುವದು ನನ್ನಿಂದ ಆಗುವಹಾಗಿಲ್ಲ.

ಜಯಸಿಂಗ (ಆಶ್ಚರ್ಯದಿಂದ)—ಏನು? ನೀನು ನಮ್ಮಸಂಗಡ ಬುಂದೇಲಖಂಡಕ್ಕೂ ಬರುವದಿಲ್ಲವೆ?

ಛತ್ರಸಾಲ—ಇಲ್ಲ, ನಾನು ದಕ್ಷಿಣದಲ್ಲಿ ಕೆಲಕಾಲ ಇರಬೇಕಾಗಿದೆ.

ಜಯಸಿಂಗ—ಯಾಕೆ? ನೀನು ದಕ್ಷಿಣದಲ್ಲಿ ಯಾಕೆ ಇರುವೆ?

ಛತ್ರಸಾಲ (ಗಾಂಭೀರ್ಯದಿಂದ)--ಮಹಾತ್ಮರಾದ ಶಿವಾಜಿ ಭೋಸಲೆಯವರ ದರ್ಶನ ಮಾಡಿಕೊಳ್ಳುವೆನು.

ಜಯಸಿಂಗ (ಸ್ವಲ್ಪವಿಚಾರಿಸಿ ಆನಂದದಿಂದತಲೆದೂಗುತ್ತ)—ಅತ್ಯಂತ ಸ್ತುತ್ಯವು, ಅತ್ಯಂತ ಪ್ರಶಂಸನೀಯವು; ಛತ್ರಸಾಲ, ನೀನು ಬಹು

ಯೋಗ್ಯಕೆಲಸವನ್ನು ಮಾಡುತ್ತಿರುವೆ. ಆ ಪುಣ್ಯವಂತನಾದ ಮಹಾತ್ಮನ ದರ್ಶನಕ್ಕೆ ಅವಶ್ಯವಾಗಿ ಹೋಗಿ, ಆತನ ಗುರುಮಂತ್ರವನ್ನು ಸ್ವೀಕರಿಸು. ನಿನಗೆ ಗುರುಮಂತ್ರವನ್ನು ಉಪದೇಶಿಸಲಿಕ್ಕೆ ಆತನು ಸರ್ವಥೈವ ಯೋಗ್ಯನಾಗಿರುವನು; ಆದರೆ ದಕ್ಷಿಣದಲ್ಲಿಯ ನಿನ್ನ ಕೆಲಸವಾದ ಕೂಡಲೆ ದಿಲ್ಲಿಗೆ ಬಾರದೆ ಇರಬೇಡ. ಇಂದಿನ ನಿನ್ನ ಅಪ್ರತಿಮ ಶೌರ್ಯದ ಲಾಭವನ್ನೇನಾದರೂ ಮಾಡಿಕೊಳ್ಳಲೇಬೇಕು.

ಛತ್ರಸಾಲ—ಈ ವಿಷಯವಾಗಿ ಮಹಾತ್ಮನಾದ ಶಿವಾಜಿಯ ಆಲೋಚನೆಯನ್ನು ಕೇಳಿಕೊಳ್ಳುವೆನು. ಆತನು ತೋರಿಸಿಕೊಟ್ಟ ಹಾದಿಯಿಂದಲೇ ನಾನು ಬುಂದೇಲಖಂಡದ ಸ್ವಾತಂತ್ರ್ಯದ ವಿಷಯವಾಗಿ ಪ್ರಯತ್ನಮಾಡಬೇಕೆಂದಿದ್ದೇನೆ. ಅಪ್ಪನೂ ಸಮರಭೂಮಿಯಲ್ಲಿ ದೇಹವಿಡುವಾಗ ಇದೇ ಮಾತು ಹೇಳಿರುವನು. ನನ್ನ ಗುರುವು ದಿಲ್ಲಿಗೆ ಹೋಗೆಂದು ನನಗೆ ಹೇಳಿದರೆ, ಕಾಕಾಜೀ, ತಾವು ದಿಲ್ಲಿಗೆ ಮುಟ್ಟುವದರೊಳಗಾಗಿಯೇ ತಮ್ಮ ಚರಣ ಸನ್ನಿಧಿಗೆ ನಾನು ಬರುವೆನು.



೨೧ನೆಯ ಪ್ರಕರಣ - ಸುಫಲಾದೇವಿಯ ಸದಭಿಮಾನ

ರಣದುಲ್ಲಾಖಾನನ ಅಪ್ಪಣೆಯಂತೆ ಓರಛಾದಿಂದ ಹೊರಟ ಕಂಚುಕಿರಾಯನು ಅತಿವೇಗದಿಂದ ಧಾರೀರಕ್ಕೆ ಬಂದು ದರ್ಬಾರು ನೆರಿಸಿದನು. ಈಗತಾನು ಬಾದಶಹನ ಪ್ರೀತಿಯಒಬ್ಬ ಸರದಾರನನ್ನುಅಳಿಯನಾಗಿ ಮಾಡಿಕೊಂಡು ಬಂದ ಮಹತ್ವದ ಸುದ್ದಿಯನ್ನು ತನ್ನ ಹೆಂಡತಿಗೂ,ಪ್ರಧಾನರಿಗೂ, ಪ್ರಜೆಗಳಿಗೂ ಯಾವಾಗ ಹೇಳೇನೆನ್ನುವಹಾಗೆ ಆತನಿಗೆ ಆಗಿತ್ತು. ಬಹು ದಿವಸಗಳಮೇಲೆ ರಾಜದರ್ಶನದ ಯೋಗವು ಒದಗಿದ್ದರಿಂದ ಧಾರೀರದ ದರ್ಬಾರಮಂದಿರವು ರಾಜ್ಯಾಧಿಕಾರಿಗಳಿಂದಲೂ, ಪ್ರಜೆಗಳಿಂದಲೂ ತುಂಬಿ ಹೋಗಿತ್ತು. ಯಾವ ಮಹತ್ವದ ಕಾರ್ಯಕ್ಕಾಗಿ ಇಂದಿನ ದರ್ಬಾರವು ನೆರೆದಿರುವದೆಂಬದನ್ನು ತಿಳಿದುಕೊಳ್ಳುವದಕ್ಕಾಗಿ ಎಲ್ಲರೂ ಉತ್ಸುಕರಾಗಿದ್ದರು. ಪ್ರಧಾನನಿಗೂ ದರ್ಬಾರದ ಕಾರಣವು ಗೊತ್ತಾಗಿದ್ದಿಲ್ಲ. ಇಂತಹ ದೊಡ್ಡ

ದರ್ಬಾರನೆರೆಸಿ ತಮ್ಮ ರಾಜೇಸಾಹೇಬರು ಏನು ಹೇಳುವರೋ ಎಂದು ಸಜ್ಜನರಾಯನು ಚಿಂತಾತುರನಾಗಿ ಆಶ್ಚರ್ಯದಿಂದ ಎಮರುನೋಡುತ್ತಿದ್ದನು ರಾಣೀ ಸುಫಲಾದೇವಿಯೂ, ವಿಜಯೆಯೂ ಕಂಚುಕಿರಾಯನ ಅತ್ಯಾಗ್ರಹದಿಂದ ಆತನ ಭಾಷಣವನ್ನು ಕೇಳುವದಕ್ಕಾಗಿ ಪರದೆಯಮರೆಯಲ್ಲಿ ಕುಳಿತುಕೊಂಡಿದ್ದರು. ಅಷ್ಟರಲ್ಲಿ ಕಂಚುಕಿರಾಯನು ದರ್ಬಾರದ ಕೈಗಡದ ಆಧ್ಯತೆಯಿಂದ ದರ್ಬಾರವರನ್ನು ಕುರಿತು—

ಪ್ರಧಾನಜೀ, ಮಾನಕರಿಗಳೇ, ಹಾಗು ಧಾರೀರದ ಸಮುಸ್ತ ನಾಗರಿಕರೇ, ಇಂದಿನ ನಿಮ್ಮ ರಾಜನಿಷ್ಠೆಯನ್ನು ನೋಡಿ ನಮಗೆ ಬಹಳ ಸಂತೋಷವಾಗುತ್ತದೆ. ನಾವು ಸಿಂಹಾಸನವೇರಿದಂದಿನಿಂದ ಧಾರೀರದ ಗೌರವವನ್ನು ಹೆಚ್ಚಿಸುವದಕ್ಕಾಗಿ ನಾವು ಪಡುತ್ತಿರುವ ಶ್ರಮವನ್ನು ನೀವು ಅರಿತೇ ಇರುವಿರಿ. ನಮ್ಮ ಧಾರೀರದ ರಾಜ್ಯವು ಎಷ್ಟು ಪ್ರಬಲವಿದ್ದರೂ, ದಿಲ್ಲೀ ಪತಿಯ ಸಾಮ್ರಾಜ್ಯಕ್ಕೆ ಅದನ್ನು ಹೋಲಿಸಿನೋಡಿದರೆ, ಅದು ಕೇವಲ ಬಿಂದುಮಾತ್ರವೇ ಸರಿಯೆಂಬ ಮಾತನ್ನು ನೀವು ಮರೆಯಲಾಗದು. ಸಾಮ್ರಾಜ್ಯಸತ್ತೆಯ ವಿಸ್ತಾರವಾದ ನೆರಳಲ್ಲಿ ನಮಗೆ ಆಶ್ರಯ ದೊರೆತದ್ದು ಮಹದ್ಭಾಗ್ಯವೇ ಸರಿ. ದೈವಯೋಗದಿಂದ ನಮಗೆ ಪುತ್ರಸಂತತಿಯಾಗಲಿಲ್ಲ, ಇನ್ನು ಮುಂದೆ ಆದೀತೆಂಬ ನಂಬಿಗೆಯೂ ಇರುವದಿಲ್ಲ. ನಮಗೆ ಪುತ್ರಸಂತಾನವಿಲ್ಲವೆಂಬ ಕಾರಣದಿಂದ ನಮಗೆ ದುಃಖವಾಗುವಷ್ಟೇ ನಮಗೆ ಆನಂದವೂ ಆಗುತ್ತದೆ; ಯಾಕಂದರೆ ಸದ್ಯದ ಬುಂದೇಲಖಂಡದ ದೂಷಿತವಾದ ವಾತಾವರಣದ ಯೋಗದಿಂದ ಪ್ರತಿಒಬ್ಬ ತರುಣನ ತಲೆಯು ಸಾಮ್ರಾಜ್ಯದ್ರೋಹದಿಂದ ತಿರುಗಿಹೋಗಿದೆ. ಸಾಗರದ ರಾಜನಾದ ಸಭಾಕರಣನಿಗೆ ಮಗನಿಂದ ಎಷ್ಟು ಸುಖವಾಗಿದೆಯೆಂಬದನ್ನು ನೀವು ನೋಡುತ್ತಲೇ ಇರುವಿರಿ. ಛತ್ರಸಾಲನಂತು ಬಂಡಾಯಗಾರನ ಮುಖ್ಯನು! ಆತನು ಎಂತಹ ತಲೆತಿರುಕನು, ಎಂತಹ ಅತ್ಯಾಚಾರಿಯು ಎಂಬದನ್ನು ನಾನು ನಿಮಗೆ ವಿವರಿಸಿ ಹೇಳುವ ಕಾರಣವಿಲ್ಲ; ಆತನ ಅವಿಚಾರದಿಂದ ಬುಂದೇಲಖಂಡದಲ್ಲಿ ರಕ್ತದ ಕಾಲಿವೆ ಹರಿಯಿತು. ಛತ್ರಸಾಲನಂತಹ, ಅಥವಾ ಸಾಗರದ ಯುವರಾಜ ದಳಪತನಂತಹ ಮಕ್ಕಳಿರ್ದುವದಕ್ಕಿಂತ, ನಿಷ್ಪುತ್ರಕರಾಗಿರುವದು ಯೋಗ್ಯವೆಂದು ನನಗೆ ತೋರುತ್ತದೆ!

ಈಗಿನ ಕಾಲದಲ್ಲಿ ಪುತ್ರಸಂತತಿಯಿಂದ ಆಗುವ ಅನರ್ಥವನ್ನು ನಿಮ್ಮ ಮುಂದೆ ಹೇಳಿದೆನು; ಅಂದಬಳಿಕ ನಾವು ಪುತ್ರಸಂತತಿಯ ಇಚ್ಛೆಯನ್ನು ಯಾಕೆ ಮಾಡಬೇಕು? ಸಾರ್ವಭೌಮ ದಿಲ್ಲೀಪತಿಯ ಜನಾನಖಾನೆಯಕಡೆಗೆ ನೋಡಿದರೆ, ಹಾಗು ಬಾದಶಹರ ಸರದಾರ, ದರಕದಾರ, ಅಮೀರ, ಉಮರಾವರನ್ನು ಮನಸ್ಸಿನಲ್ಲಿ, ತಂದರೆ ಸದ್ಯದ ಕಾಲವು ಗಂಡು ಮಕ್ಕಳದಾಗಿರದೆ ಹೆಣ್ಣುಮಕ್ಕಳದಾಗಿರುವದೆಂಬದು ಕೂಡಲೆ ಮನಸ್ಸಿನಲ್ಲಿ ಬರುವದು ! ಗಂಡು ಮಕ್ಕಳು ತಂದೆಯಮೇಲೆ ಸಂಕಟವನ್ನು ತಂದರೆ, ಹೆಣ್ಣುಮಕ್ಕಳು ತಂದೆಯ ಉತ್ಕರ್ಷಮಾಡುವರೆಂಬ ಉದಾಹರಣಗಳು ಹೇರಳವಾಗಿ ದೊರೆಯುವವು. ಸಾರ್ವಭೌಮ ದಿಲ್ಲೀಪತಿಗೂ, ಆತನ ಜಾತಿಯವರಾದ ಅಧಿಕಾರಿಗಳಿಗೂ ನಮ್ಮ ಗಂಡುಮಕ್ಕಳನ್ನು ನೋಡಿದ ಕೂಡಲೆ ತ್ರಾಸವಾಗುವಂತೆ, ನಮ್ಮ ಹೆಣ್ಣು ಮಕ್ಕಳನ್ನು ನೋಡಿದರೆ ಆನಂದವಾಗುವದು. ಪ್ರತ್ಯಕ್ಷ ದಿಲ್ಲೀ ದರ್ಬಾರದಲ್ಲಿ ನಮ್ಮ ಸುಂದರ ತರುಣ ಕನ್ಯೆಯರ ವರ್ಚಸ್ಸು ಚನ್ನಾಗಿರುವದು. ಅಂತಹ ಕನ್ಯೆಯರು ಹತ ವೈಭವದ ರಾಜನನ್ನು ವೈಭವಶಾಲಿಯನ್ನಾಗಿ ಮಾಡಿದರು; ಬಿಕ್ಕೆಬೇಡುತ್ತಿರುವ ತಂದೆಯನ್ನು ಸರದಾರನಾಗಮಾಡಿದರು; ವಿಚಾರಗೇಡಿ ತಂದೆಯನ್ನು ದಿವಾಣನಾಗಮಾಡಿದರು. ನಮ್ಮ ಹೆಣ್ಣುಮಕ್ಕಳು, ದರ್ಬಾರದೊಳಗಿನ ದೊಡ್ಡದೊಡ್ಡ ಅಧಿಕಾರಗಳನ್ನು ತಮ್ಮ ತಂದೆಗೆ ಕೊಡಿಸಿರುವರು; ತಮ್ಮ ತಂದೆಯ ಮೇಲಿದ್ದ ಬಾದಶಹನ ಬಹು ದಿವಸದ ಸಿಟ್ಟನ್ನು ಇಳಿಸಿ ಬಾದಶಹನನ್ನು ಸುಪ್ರಸನ್ನನಾಗುವಂತೆ ಮಾಡಿರುವರು. ಇಂತಹ ಹಲವು ಹಿತಕಾರಕ ಉದಾಹರಣೆಗಳನ್ನು ನಾವು ನೋಡಿರುವದರಿಂದಲೇ, ಸದ್ಯದ ಕಾಲವು ಗಂಡುಮಕ್ಕಳದಾಗಿರದೆ ಹೆಣ್ಣುಮಕ್ಕಳದಾಗಿರುತ್ತದೆಂದು ನಾವು ಹೇಳಿದೆವು.

ತಮ್ಮ ರಾಜನು ಎತ್ತೋ ಹೊರಟುನಡೆದಿರುವನೆಂಬ ದಾರುಣವಾದ ಚಿಂತೆಯು ಸಜ್ಜನರಾಯನಿಗೆ ಉತ್ಪನ್ನವಾಯಿತು. ಇನ್ನು ಅವರು ಏನು ಮಾತಾಡುವರೋ, ಏನಿಲ್ಲವೋ ಎಂದು ಆತನು ಆಲೋಚಿಸತೊಡಗಿದನು. ತಮ್ಮ ಅರಸರ ಭಾಷಣವನ್ನು ಹೇಗೆ ನಿಲ್ಲಿಸಬೇಕೆಂಬದು ಆತನಿಗೆ ತಿಳಿಯದಾಗಲು, ಆಸ್ಥಾವಿನಿಷ್ಠನು ಹತಬುದ್ಧನಾಗಿ ಸುಮ್ಮನೆ ಕುಳಿತುಕೊಂಡನು. ಅಷ್ಟರಲ್ಲಿ ಕಂಚುಕಿ ರಾಯನ ರಗಳೆಯು ಮತ್ತೆ ಆರಂಭವಾಯಿತು. ಆತನು ಮತ್ತೆ ದರ್ಬಾರವನ್ನು ಕುರಿತು—

ನಮ್ಮ ನೆರೆಯವರಾದ ರಜಪೂತ ಬಂಧುಗಳ ಕಡೆಗೆ ನೋಡಿದರೆ, ಕನ್ಯೆಯರ ಉಪಯುಕ್ತತೆಯು ನಮಗಿಂತಲೂ ಅವರಿಗೆ ಹೆಚ್ಚು ಚನ್ನಾಗಿ ಹೇಗೆ ತಿಳಿದಿರುವದೆಂಬದೂ, ಕನ್ಯೆಯರ ಸದುಪಯೋಗಮಾಡಿಕೊಳ್ಳುವ ಸಂಬಂಧದಿಂದ ಅವರಿಗಿಂತ ನಾವು ಹೇಗೆ ಹಿಂದೆ ಉಳಿದಿರುವೆವೆಂಬದೂ ಚನ್ನಾಗಿ ಲಕ್ಷದಲ್ಲಿ ಬರಬಹುದು. ಸಾಮ್ರಾಟ್ ಅಕಬರನ ಕಾಲದಿಂದಲೇ ಕನ್ಯೆಯರ ಉಪಯುಕ್ತತೆಯನ್ನು ಅವರು ಚನ್ನಾಗಿ ಕಂಡುಹಿಡಿದರು. ಅಲ್ಲಿಂದ ಅವರು ದಿಲ್ಲೀಪತಿಯಚರಣಕಮಲಗಳಿಗೆ ತಮ್ಮ ಕನ್ಯೆಯರನ್ನು ಎರೆದು,ದೊಡ್ಡ ದೊಡ್ಡ ಅಧಿಕಾರಗಳನ್ನೂ, ದೊಡ್ಡ ದೊಡ್ಡ ಬಿರುದುಗಳನ್ನೂ ಸಂಪಾದಿಸಲಿಕ್ಕೆ ಆರಂಭಿಸಿದರು. ಒಬ್ಬೊಬ್ಬ ರಜಪೂತರಬಿರುದಾವಳಿಯ ಉದ್ದಳತೆಯನ್ನು ನೋಡಿದರೆ, ಮನಸ್ಸು ಆಶ್ಚರ್ಯಮಗ್ನವಾಗದೆ ಇರದು; ಒಬ್ಬೊಬ್ಬ ರಜಪೂತನ ಹುದ್ದೆಯ ವರ್ಣನವನ್ನು ಕೇಳಿದರೆ, ಅಂತಃಕರಣದಲ್ಲಿ ಲೋಭವು ಉಕ್ಕಿ ಬರುವದು; ಒಬ್ಬೊಬ್ಬ ರಜಪೂತನ ಅಧಿಕಾರದ ಕಥೆಗಳನ್ನು ಕೇಳಿದರೆ, ಹೃದಯದಲ್ಲಿ ಸ್ಫುರಣವು ಉಂಟಾಗುತ್ತದೆ. ಸದ್ಗೃಹಸ್ಥರೇ, ಕನ್ಯೆಯರ ಯೋಗದಿಂದ ಅಧಿಕಾರ ಭೋಗಿಸುವಂಥ, ಕನ್ಯೆಯರ ಯೋಗದಿಂದ ವಿಷಯಲಂಪಟರಾಗಿರುವಂಥ, ಕನ್ಯೆಯರ ಯೋಗದಿಂದ ರಾಜ್ಯಸುಖವನ್ನು ಭೋಗಿಸುವಂಥ ಭಾಗ್ಯಶಾಲಿಗಳಾದ ರಜಪೂತರನ್ನು ನೀವು ನೋಡಿದರೆ, ನಮ್ಮ ಗಂಡುಮಕ್ಕಳೆಲ್ಲರೂ ಹೆಣ್ಣುಮಕ್ಕಳಾದ ದಿನವೇ ಸುದಿನವೆಂದು ನಿಮಗೆ ತೋರದೆ ಇರಲಿಕ್ಕಿಲ್ಲ!

ಪ್ರಧಾನ ಸಜ್ಜನರಾಯನಿಂದ, ಅರಸನಭಾಷಣವನ್ನು ಕೇಳುವದಾಗಲೊಲ್ಲದು. ಆತನು ವಿನಯದಿಂದ ಮೆಲ್ಲನೆ—"ರಾಜನ್, ನೀವು ಇದೇ ದೂರದ ಪ್ರವಾಸ ಮುಗಿಸಿ ಬಂದಿರುವಿರಿ. ವ್ಯರ್ಥವಾಗಿ ಹೆಚ್ಚು ಮಾತಾಡುವ ಆಯಾಸವನ್ನು ಮಾಡಿಕೊಳ್ಳಬಾರದು. ತಮ್ಮ ಭಾಷಣದ ಉದ್ದೇಶವೆಲ್ಲ ದರ್ಬಾರದವರಿಗೆ ತಿಳಿದಿರುವದು; ಆದ್ದರಿಂದ ಭಾಷಣವನ್ನು ನಿಲ್ಲಿಸಿದರೆ ಮಾನಕರಿಗಳನ್ನೂ, ನಾಗರಿಕರನ್ನೂ ತಾಂಬೂಲಾದಿಗಳಿಂದ ಸತ್ಕರಿಸಿ ಇಂದಿನ ದರ್ಬಾರದ ಕಾರ್ಯವನ್ನು ಮುಗಿಸಿಬಿಡುವೆನು. ಎಂದು ಬೇಡಿಕೊಂಡನು. ಅದಕ್ಕೆ ಕಂಚುಕಿರಾಯನು ನಗುತ್ತ—ಪ್ರಧಾನಜೀ, ದರ್ಬಾರದ ಕಾರ್ಯದಲ್ಲಿ ಇಷ್ಟು ಅವಸರಮಾಡುವದು ನೆಟ್ಟಗಲ್ಲ. ದಿಲ್ಲೀಪತಿಯ ದರ್ಬಾರದ ಕೆಲಸವು ಒಮ್ಮೆ

ಆರಂಭವಾಯಿತೆಂದರೆ, ಆರಾರುತಾಸು ಒಂದೇ ಸವನೆ ನಡೆಯುತ್ತಿತ್ತು. ಸ್ತುತಿಪಾಠಕರಿಗೂ, ಕಂಚುಕಿಗಳಿಗೂ ಬಂಗಾರದ ಬೆತ್ತದ ಬಲವಾದ ಆಧಾರ ವಿರುತ್ತಿದ್ದರೂ, ನಿಂತುನಿಂತು ನಮ್ಮ ಕಾಲು ನೋಯುತ್ತಿರುವಾಗ ದರ್ಬಾರದ ಕಾರ್ಯವು ನಡೆಯುತ್ತಲೇ ಇರುವದರ ಹಳೆಯ ಅನುಭವವು ನಮಗಿರುವದು; ಆದ್ದರಿಂದ ದರ್ಬಾರದ ಕಾರ್ಯವು ತೀರಕಡಿಮೆಯೆಂದರೆ ಮೂರು ತಾಸಾದರೂ ನಡೆಯಬೇಕೆಂದು ನಮ್ಮ ನಿಶ್ಚಿತ ಅಭಿಪ್ರಾಯವಿರುವದು; ಇನ್ನು ಮುಖ್ಯ ವಿಷಯವನ್ನು ಕುರಿತು ನಿಮಗೆ ನಾಲ್ಕು ಮಾತು ಹೇಳುತ್ತೇನೆ.

ಪ್ರಿಯ ಸಭಾಸದರೇ, ಮಂತ್ರಿಗಳೇ, ಈಗಿನ ಕಾಲದಲ್ಲಿ ಗಂಡುಮಕ್ಕಳಿಂದ ರಾಜ್ಯಕ್ಕಾಗುವ ಹಾನಿಯನ್ನೂ, ಹೆಣ್ಣುಮಕ್ಕಳಿಂದಾಗುವ ಲಾಭವನ್ನೂ ಕುರಿತು ನಾನು ಸೋಪಪತ್ತಿಕವಾಗಿ ನಿಮಗೆ ಹೇಳಿದೆನಷ್ಟೆ? ಇನ್ನು ನಮ್ಮ ಅನುಭವದಿಂದ ನಮ್ಮ ರಾಜ್ಯದ ಗೌರವವೂ, ನಿಮ್ಮ ಸುಖವೂ ಹೆಚ್ಚುವದಕ್ಕಾಗಿ ನಾವು ಯಾವ ಉಪಾಯವನ್ನು ಯೋಚಿಸಿರುತ್ತೇವೆಂಬದನ್ನು ನಿಮಗೆ ಹೇಳುವೆನು. ನಮ್ಮ ಹೊಟ್ಟೆಯಲ್ಲಿ ವಿಜಯೆಯೆಂಬ ಕನ್ಯಾರತ್ನವು ಜನಿಸಿರುವದನ್ನು ನೀವು ಬಲ್ಲಿರಿ. ಆ ರತ್ನದ ಪ್ರಭೆಯು ದಿಲ್ಲಿಯ ಬಾದಶಹನ ಕಣ್ಣುಗಳನ್ನು, ಅಥವಾ ಯಾವನಾದರೊಬ್ಬ ವಿಲಾಸಿ ಶಹಾಜಾದನಕಣ್ಣುಗಳನ್ನು ಕುಕ್ಕೀತೆಂದು ನಾನು ಮಾಡಿದ್ದೆನು; ಆದರೆ ಅಷ್ಟು ಭಾಗ್ಯವು ನಮ್ಮ ದೈವದಲ್ಲಿಲ್ಲ; ಆದರೂ ಚಲುವೆಯಾದ ಹೊಟ್ಟೆಯಮಗಳ ಉಪಯೋಗವನ್ನು ಶಕ್ಯವಿದ್ದ ಮಟ್ಟಿಗೆ ಯೋಗ್ಯರೀತಿಯಿಂದ ಮಾಡಿಕೊಳ್ಳುವ ಶ್ರೇಷ್ಠವಾದ ಯುಕ್ತಿಯನ್ನು ನಾವು ಕಂಡುಹಿಡಿದಿದ್ದೇವೆ. ಆ ಯುಕ್ತಿಯು ಸಫಲವಾದರೆ, ಧಾರೀರದ ರಾಜ್ಯದ ಗೌರವವು ಎಷ್ಟು ಹೆಚ್ಚುವದೆಂಬದನ್ನು ನಾನೇನು ಹೇಳಲಿ? ನಮ್ಮ ಆ ಯುಕ್ತಿಯಿಂದ ಕನ್ಯಾದಾನದ, ಹಾಗು ರಾಜ್ಯಕಾರಭಾರದ ನಮ್ಮ ತಾಪವು ತನ್ನಿಂದ ತಾನೇ ಇಲ್ಲದಂತಾಗಿ, ನಾವು ದಿಲ್ಲಿಯ ದರ್ಬಾರದ ಬಿರುದಾವಳಿಗಳಿಂದ ಭೂಷಿತವಾಗುವದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ! ಆ ಯುಕ್ತಿಯೆಂದರೆ, ಸರ್ವಗುಣ ಸಂಪನ್ನನಾದ ದಿಲ್ಲಿಯ ದರ್ಬಾರದ ಪ್ರತಾಪಶಾಲಿ ಸರದಾರನಾದ ರಣದುಲ್ಲಾಖಾನನು ನಮ್ಮ ವಿಜಯೆಯ ಪತಿಯಾಗಿ, ನಮ್ಮ ಪಶ್ಚಾತ್ ಧಾರೀರದ ಅಧಿಪತಿಯೂ ಆಗಬೇಕೆಂಬದು!

ಕಂಚುಕಿರಾಯನ ಈ ಅಮಂಗಲ ಮಾತುಗಳನ್ನು ಕೇಳಿ ಕ್ರೋಧ-ದುಃಖ-ಶೋಕಗಳ ಧ್ವನಿಗಳು ಉತ್ಪನ್ನವಾಗಿ, ದರ್ಬಾರದಲ್ಲಿ ಗದ್ದಲವುಂಟಾಯಿತು! ಜನತೆಯ ಈ ಕ್ರೋಧಾಗ್ನಿಯ ಸೆಕೆಯು ಕಂಚುಕಿರಾಯನಿಗೆ ಬಡಿಯದೆ ಬಿಡದೆಂದು ಸಜ್ಜನರಾಯನು ಕ್ಷಣಹೊತ್ತು ಚಿಂತಿಸಿ ಎದ್ದು ಜನರನ್ನು ಕುರಿತು—ನಾಗರಿಕರೇ, ಶಾಂತರಾಗಿರಿ-ಶಾಂತರಾಗಿರಿ! ರಾಜೇ ಸಾಹೇಬರಿಗೆ ಅಪಮಾನವಾಗುವಂತಹ ಒಂದುಶಬ್ದವನ್ನು ಕೂಡ ಉಚ್ಚರಿಸಬೇಡಿರಿ. ರಾಜೇ ಸಾಹೇಬರು ದರ್ಬಾರದಲ್ಲಿ ಮಾತಾಡಿದ ಮಾತ್ರದಿಂದ, 'ಕೂಡಲೆ ನಿಮ್ಮ ವಿಜಯೆಯ ವಿವಾಹವು ವಿಧರ್ಮಿಯಾದ ಯವನನೊಡನೆ ಆಯಿತೆಂದು ನೀವು ತಿಳಿಯಬೇಡಿರಿ. ರಾಜೇಸಾಹೇಬರು ವಿಚಾರಿಗಳಿರುವರು. ಇನ್ನೂ ವಿಚಾರ ಮಾಡತಕ್ಕ ಸಂಗತಿ ಇರುವದು. ಧಾರೀರದ ಅರಸು ಮನೆತನದ ಪಾವಿತ್ರ್ಯವೂ, ಸತ್ತ್ವಿಯೂ ವಿಧರ್ಮಿಗಳಾದ ಯವನರ ಕೈಯಲ್ಲಿ ಹೋಗುವಂತಹ ಕಾರ್ಯವನ್ನು ಮಹಾರಾಜರಿಂದ ನಾನು ಸರ್ವಥಾ ಮಾಡಗೊಡಲಾರೆನು. ನೀವು ಶಾಂತರಾಗಿರಿ.

ಕಂಚುಕಿರಾಯ (ಸಂತಾಪದಿಂದ ಗದ್ದರಿಸಿ)—ಸಜ್ಜನರಾಯ, ರಣದುಲ್ಲಾಖಾನನಂಥ ದಿಲ್ಲಿಯ ದರ್ಬಾರದ ಪ್ರೀತಿಯ ಸರದಾರನಿಗೆ ನಮ್ಮಂತಹ ಹಿಂದೂ ರಾಜರು ತಮ್ಮ ಮಗಳನ್ನು ಕೊಡುವದು ಅವಿಚಾರವೇನು? ದಿಲ್ಲೀಪತಿಯಾಗಲಿ, ದಿಲ್ಲಿಯ ಪತಿಯ ಜಾತಿಯ ಬೇರೆ ಘನವಂತರಾಗಲಿ ನಮ್ಮ ಮುಕ್ಕಳು ಮರಿಗಳನ್ನು ತಮ್ಮ ಜನಾನಖಾನೆಯಲ್ಲಿ ಸೇರಿಸಿಕೊಳ್ಳುವದು ಮಹದ್ಭಾಗ್ಯವಲ್ಲದೆ ಮತ್ತೇನು? ಸಜ್ಜನರಾಯ, ನಾನು ಪೂರಾ ವಿಚಾರಮಾಡಿಯೇ ನನ್ನ ಮಗಳನ್ನು ರಣದುಲ್ಲಾಖಾನನಿಗೆ ಕೊಟ್ಟು, ನನ್ನ ಪಶ್ಚಾತ್ ನನ್ನ ಧಾರೀರದ ರಾಜ್ಯವನ್ನು ನನ್ನ ಆಅಳಿಯನಿಗೆ ಒಪ್ಪಿಸಬೇಕೆಂದು ನಿಶ್ಚಯಿಸಿರುತ್ತೇನೆ.

ಒಬ್ಬ ನಾಗರಿಕ (ತಡೆಯಲಾರದೆ ಸಂತಾಪದಿಂದ)—ರಾಜನ್, ಧಾರೀರದ ರಾಜವಂಶವೂ, ರಾಜಸತ್ತ್ವಿಯೂ ಪವಿತ್ರವಾಗಿಯೇ ಇರುವಂತೆಯೂ, ವಿಧರ್ಮಿ ಯವನರ ಪಾತಕೀ ಸಂಸರ್ಗವು ಅದಕ್ಕೆಅಗದಂತೆಯೂ ಪ್ರಯತ್ನ ಮಾಡುವದು ನಮ್ಮ ಶ್ರೇಷ್ಠ ಕರ್ತವ್ಯವಾಗಿರುವದು., ನಿಮ್ಮ ಆ ಅಮಂಗಲ ನಿಶ್ಚಯವು ಧಾರೀರದ ಪ್ರಜೆಗಳಿಗೆ ಸರ್ವಥಾ ಸಹನವಾಗಲಾರದು. ರಾಜನ್,

ಕುಮಾರೀ ವಿಜಯೆಯು ನಮ್ಮ ರಾಜಲಕ್ಷ್ಮ್ಯಾಯಾಗಿರುವಳು. ಆ ರಾಜಪುತ್ರಿಯ ವಿವಾಹವು ಬಂದೇಲಿ ತರುಣನೊಡನೆಯೇ ಆಗಬೇಕು.

ನಾಗರಿಕರ ಈ ಸ್ಪಷ್ಟವಾದ ಆಕ್ಷೇಪವನ್ನು ಕೇಳಿ ಪ್ರಧಾನ ಸಜ್ಜನ ರಾಯನು ನಾಗರಿಕರನ್ನು ಕುರಿತು—ನಾಗರಿಕರೇ, ಸಿಟ್ಟಿನ ಭರದಲ್ಲಿ ಮನ ಸ್ಸಿಗೆ ಬಂದಂತೆ ಮಾತಾಡಿ ನೀವು ಅರಸರ ಅಪಮಾನಮಾಡುತ್ತಿರುವಿರಿ! ಮಹಾರಾಣಿ ಸುಫಲಾದೇವಿಯವರ ಸಮ್ಮತಿಯು ಹೊರತು ರಾಜಕುಮಾರಿಯ ವಿವಾಹಸಂಬಂಧವಾಗಲಾರದು. ಸಿಂಹಾಸನದ ಏಕನಿಷ್ಠ ಸೇವಕನಾದ ಸಜ್ಜನರಾಯನಿಗೂ ನಿಮ್ಮಂತೆಯೇ ವಿವಾಹದ ಪ್ರಸಕ್ತಿಯು ಇಂದೇ ಗೊತ್ತಾಗಿರುವದು. ದಿಲ್ಲೀಪತಿಯು ಸಿಟ್ಟಾಗಬಾರದೆಂದು ರಾಜೇಸಾಹೇಬರು ದರ್ಬಾರ ನೆರೆಸಿರುವರಿಷ್ಟೆ! ನಾನಾದರೂ ಶಕ್ಯವಿದ್ದಮಟ್ಟಿಗೆ ಪ್ರಯತ್ನಮಾಡಿ ರಾಜ್ಯದ ಕೀರ್ತಿಯು ನಿಷ್ಕಲಂಕವಾಗಿರುವಂತೆ ಯತ್ನಿಸುವೆನು. ನೀವು ನಿಶ್ಶಂಕೆಯಿಂದ ಮನೆಗೆ ಹೋಗಿರಿ. ರಾಜನ್, ದರ್ಬಾರದ ಕಾರ್ಯವನ್ನು ನಿಲ್ಲಿಸುವದಕ್ಕೆ ಅಪ್ಪಣೆ ಕೊಡೋಣವಾಗಬೇಕು.

ಕಂಚುಕಿರಾಯ—ಇಷ್ಟರಲ್ಲಿಯೇ ದರ್ಬಾರದಕೆಲಸವು ನಿಲ್ಲಲಾರದು. ಸಜ್ಜನರಾಯ, ಹೆಸರಿನಂತೆ ನೀನು ಸಜ್ಜನನೆಂದು ನಾನು ಈವರೆಗೆ ತಿಳಿದಿದ್ದೆನು. ಇಂದಿಗೆ ನನ್ನ ಭ್ರಾಂತಿಯು ದೂರವಾಯಿತು. ನೀನು ಪ್ರಜೆಗಳಲ್ಲಿ ಅರಾಜಕ ಭಾವನೆಯನ್ನುಂಟುಮಾಡುತ್ತ ಬಂದಿರುತ್ತೀ. ನಿನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವದರಲ್ಲಿಯೇ ನಿನ್ನ ತಂತ್ರವು ಈವರೆಗೆ ನಡೆಯುತ್ತ ಬಂದಿರುವದೆಂಬದು ಸ್ಪಷ್ಟವಾಗಿ ತೋರುತ್ತದೆ. ಆದ್ದರಿಂದ ನಿನ್ನನ್ನು ಹೀಗೆಯೇ ಸ್ವತಂತ್ರವಾಗಿ ಇರಗೊಟ್ಟರೆ, ರಾಜದುಲ್ಲಾ ಖಾನನೊಡನೆ ಆಗುವ ವಿಜಯೆಯಲಗ್ನಕ್ಕೆ ಪ್ರಯತ್ನಪೂರ್ವಕವಾಗಿನೀನುವಿಘ್ನವನ್ನುಂಟುಮಾಡೀ; ಆದ್ದರಿಂದ ಆ ಉದ್ಭಟ ನಾಗರಿಕನೊಡನೆ ನಿನ್ನನ್ನಾಸೆರೆಯಲ್ಲಿಡಿಸಬೇಕೆಂದು ನಾನು ಆಜ್ಞಾಪಿಸುತ್ತೇನೆ. ನೀನು ಈ ಅರಾಜಕ ನಾಗರಿಕನೊಡನೆ ಕಾರಾಗೃಹ ಶಿಕ್ಷೆಯನ್ನು ಭೋಗಿಸಬೇಕು.

ಈ ಮೇರೆಗೆ ಕಂಚುಕಿರಾಯನು ನುಡಿಯುತ್ತಿರಲು, ಪರದೆಯ ಮರೆಗೆ ಕುಳಿತಿದ್ದ ಸುಫಲಾದೇವಿಯು ನಿರ್ವಾಹವಿಲ್ಲದೆ ಹೊರಗೆಬಂದು ಸಿಂಹಾಸನದ ಬಳಿಯಲ್ಲಿ ನಿಂತಳು. ಆಕೆಯ ಮಂಗಲಕಾರಕ ಮುಖವನ್ನು ನೋಡಿದಕೂ

ಡಲಿ ಕ್ಷೋಭಿಸಿದ ದರ್ಬಾರವು ಶಾಂತವಾಯಿತು. ಕಂಚುಕಿರಾಯನು ಹೆಂಡತಿಯ ಮೋರೆಯನ್ನು ಆಶ್ಚರ್ಯದಿಂದ ನೋಡತೊಡಗಿದನು. ಆಗ ಸುಫಲಾದೇವಿಯು ವಿನಯದಿಂದ—

ಸುಫಲಾದೇವಿ—ಪ್ರಾಣನಾಥ, ತಾವು ನಿಶ್ಚಿಂತರಾಗಿರಬೇಕು. ಧಾರೀರದ ಪ್ರಜೆಗಳು ತಮ್ಮ ಅಪ್ಪಣೆಯನ್ನು ಅಮಾನ್ಯಮಾಡಲಾರರು. ಪ್ರಧಾನಜೀ, ರಾಜಾಜ್ಞೆಯಂತೆ ನೀವು ಕಾರಾಗೃಹಕ್ಕೆ ಹೋಗಬೇಕು. ನಾಗರಿಕರೇ, ನಿಮ್ಮ ಈ ಸ್ವಾಭಿಮಾನಿ ಬಂಧುವು ರಾಜಾಜ್ಞೆಯಂತೆ ಕಾರಾಗೃಹವಾಸವನ್ನು ಭೋಗಿಸಬೇಕಾಗುವದು. ನೆರೆದ ದರ್ಬಾರದಲ್ಲಿ ಹೀಗೆ ರಾಜಾಜ್ಞೆಯನ್ನು ಉಲ್ಲಂಘಿಸುವದು ಹಿಂದುಗಳ ಶೀಲವಲ್ಲ. ಅರಸನು ನಿಮ್ಮೊಳಗಿನವನೊಬ್ಬ ಮನುಷ್ಯನೇ ಆಗಿರುವದರಿಂದ, ಆತನ ಕೈಯಿಂದಲೂ ತಪ್ಪುಗಳಾಗುವ ಸಂಭವವುಂಟು. ರಾಜಾಜ್ಞೆಯನ್ನು ಶಾಂತರೀತಿಯಿಂದ ಮನ್ನಿಸಬೇಕು; ಆಮೇಲೆ ಅದು ತಪ್ಪಿನದಾಗಿದ್ದರೆ ಅರಸನಿಗೆ ಅದರ ಸತ್ಯತೆಯನ್ನು ತೋರಿಸಿ, ಆಧರಿಂದುಂಟಾಗುವ ದುಷ್ಪರಿಣಾಮವನ್ನು ಶಾಂತರೀತಿಯಿಂದ, ಚಾತುರ್ಯದಿಂದ, ಪ್ರೇಮಲ ಮಾತುಗಳಿಂದ ದೂರಮಾಡಬೇಕು. ಇದು ರಾಜಮಾರ್ಗವು. ಇನ್ನು ಅರಸರ ವಿಚಾರವು ನಿಮ್ಮಂತೆ ನನಗೂ ಸರ್ವಥಾ ಮಾನ್ಯವಾಗಿರುವದಿಲ್ಲ. ನಾಗರಿಕರೇ, ನೀವು ಸ್ವಸ್ಥಚಿತ್ತದಿಂದ ಮನೆಗೆ ಹೋಗಿರಿ. ನಿಮ್ಮ ಕರ್ತವ್ಯ-ತತ್ಪರ ಪ್ರಧಾನನಿಗೂ, ನಿಮ್ಮ ಪ್ರೇಮಲ ಬಂಧುವಿಗೂ ಲೇಶವೂ ತ್ರಾಸವಾಗದೆಂಬ ಬಗ್ಗೆ ನಾನು ಹೊಣೆಯಾಗುವೆನು. ನನ್ನ ವಿಜಯೆಯು ರಣದುಲ್ಲಾಖಾನನ ಹೆಂಡತಿಯಾಗಲಾರಳು. ನನ್ನ ವಿಜಯೆಯು ಯವನರ ಗೋಷ್ಠೆಯಲ್ಲಿ ಸೇರಲಾರಳು. ಸ್ವರ್ಗಲೋಕದ ಇಂದ್ರನು ವಿಜಯೆಯ ಪಾಣಿಗ್ರಹಣ ಮಾಡಲಿಚ್ಛಿಸಿದರೂ, ವಿಜಯೆಯು ಆತನ ಪಾಣಿಗ್ರಹಣ ಮಾಡಲಾರಳು; ಯಾಕಂದರೆ, ವಿಜಯೆಯ ಪತಿಯು ಚಂಪತರಾಯನ ಪುತ್ರನಾದ ಯುವರಾಜ ಛತ್ರಸಾಲನೆಂಬದು ಈ ಮೊದಲೆ ಗೊತ್ತಾಗಿಹೋಗಿದೆ, ಎಂದು ಹೇಳಿದಳು. ಈ ಮಾತನ್ನು ಕೇಳಿದ ಕೂಡಲೆ ಎಲ್ಲ ನಾಗರಿಕರು ಸದಭಿಮಾನದ ಆನಂದದಿಂದ ತಮ್ಮತಮ್ಮ ಮನೆಗಳಿಗೆ ಹೋದರು! ಸದಭಿಮಾನವು ಯಾರನ್ನು ಆನಂದಪಡಿಸಲಿಕ್ಕಿಲ್ಲ?

೨೨ನೆಯ ಪ್ರಕರಣ- ಪಾಪ! ಬಡಕಂಚುಕಿರಾಯನು!

ಸಿಟ್ಟಿನ ಹೆಚ್ಚಳದಿಂದ ಎಚ್ಚರದಪ್ಪಿದಕಂಚುಕಿರಾಯನು ಗರ್ಜಿಸುತ್ತ ಸುಫಲಾದೇವಿಗೆ-ನಾನಿಲ್ಲದಾಗ ವಿಜಯೆಯ ನಿಶ್ಚಯವು ಹೇಗಾಯಿತು? ಛತ್ರ ಸಾಲನಂತಹ ಬಿಕ್ಕೆಬೇಡುವ ತಲೆತಿರುಕನಿಗೆ ವಾಗ್ನಿಶ್ಚಯವನ್ನು ಯಾರು ಮಾಡಿದರು? ನನ್ನ ನಿಶ್ಚಯವು ಸುಳ್ಳಾಗಲಾರದು. ರಣದುಲ್ಲಾಖಾನನೊಡನೆಯೇ ವಿಜಯೆಯ ಲಗ್ನವನ್ನು ನಾನು ಮಾಡುವವನು!

ಸುಫಲಾ (ಉಸುರ್ಗರೆದು)— ವಿಚಾರಮಾಡಿರಿ, ಒಂದೆರಡು ಗಳಿಗೆ ಶಾಂತ ಮನಸ್ಸಿನಿಂದ ವಿಚಾರಮಾಡಿರಿ. ವಿಜಯೆಗೆ ನೀವು ಜನ್ಮಕೊಟ್ಟಿರುವವರಾಗಿರುವಂತೆ, ನಾನು ಆಕೆಯನ್ನು ಒಂಬತ್ತು ತಿಂಗಳು ಹೊತ್ತು ಹಡೆದು ಸಣ್ಣವಳನ್ನು ದೊಡ್ಡವಳನ್ನಾಗಿ ಮಾಡಿದ್ದೇನೆ. ನನ್ನ ವಿಚಾರವನ್ನು ಕೇಳದೆ ನೀವು ರಣದುಲ್ಲಾಖಾನನಿಗೆ ಆಕೆಯನ್ನು ಕೊಡುವ ನಿಶ್ಚಯವನ್ನು ಮಾಡಬಹುದೋ? ವಿಜಯೆಯೇನು ಸಣ್ಣವಳಲ್ಲ. ಆಕೆಗೆ ತನ್ನ ಹಿತಾಹಿತಗಳು ತಿಳಿಯುತ್ತವೆ. ಶ್ರೀ ವಿಂಧ್ಯವಾಸಿನಿಯ ಉತ್ಸವದ ಕಾಲದಲ್ಲಿ ವಿಜಯೆಯು ದೇವಿಗೆ ಅರ್ಪಿಸಿದ ಮಾಲೆಯು ಛತ್ರಸಾಲನ ಕೊರಳಲ್ಲಿ ಬಿದ್ದಾಗಲೇ ವಿಜಯೆಯು ಮನಸ್ಸಿನಿಂದ ಛತ್ರಸಾಲನನ್ನು ಪತಿಯಾಗಿ ಭಾವಿಸಿರುವಳು. ಇಂತಹ ಸೂಕ್ಷ್ಮ ವಿಚಾರಗಳು ಗಂಡಸರಿಗೆ ತಿಳಿಯಲಾರವು. ಪ್ರಾಣನಾಥ, ರಣದುಲ್ಲಾಖಾನನು ಬಾದಶಹರ ಪ್ರೀತಿಯ ಸರದಾರನಾಗಿದ್ದರೆ, ನೀವು ಸಾಮ್ರಾಜ್ಯದ ಏಕನಿಷ್ಠೆಯ ಭಕ್ತರಾಗಿದ್ದರೆ, ರಣದುಲ್ಲಾಖಾನನಿಗೆ ಕಾಣಿಕೆಯಾಗಿ ಆನೆ-ಕುದುರೆಗಳನ್ನು ಕೊಡಿರಿ; ಮುತ್ತು ರತ್ನಗಳನ್ನು ಕೊಡಿರಿ; ವಿಪುಲ ಧನವನ್ನು ಕೊಡಿರಿ; ಆದರೆ ಹೊಟ್ಟೆಯ ಮಕ್ಕಳನ್ನು ಕಾಣಿಕೆಯಾಗಿ ಕೊಡುವದು ನಿಮ್ಮಂಥ ಕ್ಷತ್ರಿಯ ವೀರರಿಗೆ ಒಪ್ಪುವದಿಲ್ಲ!

ಕಂಚುಕಿರಾಯ—ಅದೇನೇ ಇರಲಿ, ಸುಫಲೇ, ನಾನು ಇಲ್ಲದಾಗ ನೀನೂ, ಸಜ್ಜನರಾಯನೂ ಜನರ ಮನಸ್ಸನ್ನು ನಿಮ್ಮ ಕಡೆಗೆ ಮಾಡಿಕೊಂಡಿರುತ್ತೀರಿ. ನೆನಪಿನಲ್ಲಿಡಿರಿ, ನಾನು ಕಂಚುಕಿರಾಯನಿರುತ್ತೇನೆ. ನಾಳೆ ಬೆಳಗಿನಲ್ಲಿ ಲಗ್ನದ ತಿಥಿಯನ್ನು ತಿಳಿಸುವದಕ್ಕಾಗಿ ಇಲ್ಲಿಂದ ಸಾಂಡಣಿಯ ಸವಾರನು ಓರಛಾಕ್ಕೆ ರಣದುಲ್ಲಾಖಾನನ ಕಡೆಗೆ ಹೋಗುವನು; ಆಗ

ಅವನ ಸಂಗಡ ನಿಮ್ಮ ಈ ಒಳಸಂಚನ್ನು ಖಾನನಿಗೆ ತಿಳಿಸಿ, ಬಾದಶಹರ ಪ್ರಚಂಡ ಸೈನ್ಯದೊಡನೆ ಖಾನನನ್ನು ಬರಮಾಡಿಕೊಂಡು ನಾಗರಿಕರಸೊಕ್ಕು ಇಳಿಸುವೆನು. ಸುಫಲೇ, ನೀನೂ ಎಚ್ಚರದಿಂದ ಇರು. ನಾವು ನಿಶ್ಚಯಿಸಿದ ಲಗ್ನಕ್ಕೆ ಏನಾದರೂ ತೊಂದರೆಯುಂಟುಮಾಡಿದರೆ, ಸಜ್ಜನರಾಯನಿಗಾದ ಗತಿಯೇ ನಿನಗೂ ಆದೀತು!

ಹೊತ್ತು ಮುಣುಗಿತು. ನಾಲ್ಕುತಾಸು ರಾತ್ರಿಯಾಯಿತು. ಸುಫಲಾದೇವಿಯು ವಿಜಯೆಯನ್ನು ಕರಕೊಂಡು ಆಕೆಗೆ ಬಿಂದಿದ್ದ ವಿಪತ್ತನ್ನು ದೂರಮಾಡುವದಕ್ಕಾಗಿ ಸಜ್ಜನರಾಯನ ಕಾರಾಗೃಹದ ಕಡೆಗೆ ಸಾಗಿದಳು! ಆಕೆಯು ಪ್ರಧಾನ ಸಜ್ಜನರಾಯನನ್ನೂ, ಆ ಸ್ವಾಭಿಮಾನಿ ನಾಗರಿಕನಾದ ದಳಪತರಾಯನನ್ನೂ ಸೆರೆಯಲ್ಲಿರಿಸಿರುವ ಮನೆಯ ಬೀಗವನ್ನು ಸಾವಕಾಶವಾಗಿ ತೆಗೆದು, ಸೆರೆಮನೆಯ ಬಾಗಿಲನ್ನು ಪೂರಾ ತೆರೆದುಬಿಟ್ಟಳು. ಸಂಗಡಬಂದಿದ್ದ ವಿಜಯೆಯನ್ನು ಹೊರಗೆ ನಿಲ್ಲಿಸಿ ತಾನೊಬ್ಬಳೇ ಕೋಣೆಯನ್ನು ಹೊಕ್ಕಳು. ಪ್ರಧಾನನೂ, ದಳಪತರಾಯನೂ ಸುಖದಿಂದ ನಿದ್ದೆಮಾಡುತ್ತಿರುವದನ್ನು ನೋಡಿ ಅವರ ಮನೋಧೈರ್ಯಕ್ಕಾಗಿ ಆಕೆಗೆ ಆಶ್ಚರ್ಯವಾಯಿತು. ಸುಫಲಾದೇವಿಯು ಗಂಭೀರಸ್ವರದಿಂದ- "ಸಜ್ಜನರಾಯ, ಎಚ್ಚರಾಗಿರಿ-ಎಚ್ಚರಾಗಿರಿ; ಆ ತರುಣನನ್ನು ಎಬ್ಬಿಸಿರಿ" ಎಂದು ನುಡಿಯಲು, ಸಜ್ಜನರಾಯನು ಗಡಬಡಿಸಿ ಎಚ್ಚತ್ತು, ದನಿಯಮೇಲಿಂದ, ಬಂದವರು ರಾಣೀ ಸುಫಲಾದೇವಿಯರೆಂದು ತಿಳಿದು ತರುಣನನ್ನು ಎಬ್ಬಿಸುತ್ತ—

ಸಜ್ಜನರಾಯ—ಯಾರು? ರಾಣೀ ಸುಫಲಾದೇವೀ, ನೀವು ಇಷ್ಟು ರಾತ್ರಿಯಲ್ಲಿ ಇಲ್ಲಿಗೆ ಏಕೆ ಬಂದಿರಿ? ಕಾರಾಗೃಹದಲ್ಲಿ ಪರಾಧೀನನಾಗಿ ಬಿದ್ದಿರುವ ಸಜ್ಜನರಾಯನು ನಿಮ್ಮ್ಯಾವ ಸೇವೆಯನ್ನು ಮಾಡಲು ಸಮರ್ಥನಾದಾನು?

ಸುಫಲಾದೇವಿ— ಸಜ್ಜನರಾಯ, ಧಾರೀರದ ರಾಜಮನೆತನವನ್ನೂ, ರಾಜಸಿಂಹಾಸನವನ್ನೂ ನಿಷ್ಕಲಂಕವಾಗಿರಿಸುವದಕ್ಕಾಗಿನಾವು ಕಪಟಕಾರಕ ಸ್ಥಾನವನ್ನು ಕೈಕೊಳ್ಳದಿದ್ದರೆ ನಿರ್ವಾಹವಿಲ್ಲ.

ಸಜ್ಜನರಾಯ (ಆಶ್ಚರ್ಯದಿಂದ)— ಏನು? ರಾಜಾ ಕಂಚುಕಿರಾಯರವರು ನಿಮ್ಮ ಪ್ರಾರ್ಥನೆಯನ್ನು ಮನ್ನಿಸಲಿಲ್ಲವೆ? ತಮ್ಮ ಹಟವನ್ನೇ ನಡಿಸಬೇಕೆಂದಿರುವರೇ?

ಸುಫಲಾದೇವಿ— ನಿಮ್ಮ ರಾಜರ ನಿಶ್ಚಯವು ಚಲಿಸುವ ಹಾಗಿಲ್ಲ. "ಏನುಬೇಕಾದದ್ದಾಗಲಿ— ಮಾನಹೋಗಲಿ, ಪೂರ್ವಜರಿಂದ ಸಹಿತವಾಗಿ ತಾವು ನರಕಕ್ಕಿಳಿಯಲಿ, ತಮ್ಮ ನಾಶವಾಗಲಿ ವಿಜಯೆಯ ಲಗ್ನವನ್ನು ರಣದುಲ್ಲಾಖಾನನೊಡನೆ ಮಾಡಿದರೆಯೇ ನಾನು ನಿಜವಾದ ಸಾಮ್ರಾಜ್ಯ ಭಕ್ತನು" ಎಂಬ ಪ್ರತಿಜ್ಞೆಯ ಜಪವನ್ನು ಒಂದೇ ಸವನೆ ಮಾಡುತ್ತಿರುವರು!

ಸಜ್ಜನರಾಯ (ಗಂಭೀರಮುದ್ರೆಯಿಂದ)—ಸದ್ಯದ ಆಪತ್ತಿನಿಂದ ಪಾರಾಗುವದಕ್ಕಾಗಿ ರಾಣೀ ಸುಫಲಾದೇವಿಯವರು ಯಾವ ಯುಕ್ತಿಯನ್ನು ಸೂಚಿಸುತ್ತಿರುವರು? ಅದನ್ನು ಸಿದ್ಧಿಗೊಯ್ಯುವದಕ್ಕಾಗಿ ನಾನು ನನ್ನ ಪ್ರಾಣವನ್ನೂ ಲಕ್ಷಿಸಲಾರೆನು.

ಸುಫಲಾದೇವಿ—ಆಮಾತು ನನಗೆ ಗೊತ್ತಿರುವದರಿಂದಲೇ ನಾನು ನಿಮ್ಮಬಳಿಗೆ ಬಂದಿರುವೆನು. ಪ್ರಧಾನಜೀ, ನೀವು ಈ ಕಾರಾಗೃಹವಾಸವನ್ನು ಬಿಟ್ಟು ಈಗಿಂದೀಗಲೇ ಓರಛಾದ ಹಾದಿಯನ್ನು ಹಿಡಿಯಿರಿ. ರಾಜಕುಮಾರೀ ವಿಜಯೆಯು ನಿಮ್ಮ ಸಂಗಡ ಓರಛಾಕ್ಕೆ ಬರುವಳು. ಈ ಕೋಟೆಯಿಂದ ಹೊರಬೀಳುವ ಗುಪ್ತಮಾರ್ಗವು ನಿಮಗೆ ಗೊತ್ತೇಇರುತ್ತದೆ. ಆ ಗುಪ್ತಮಾರ್ಗದಿಂದ ನೀವು ಹೊರಬಿದ್ದಿರೆಂದರೆ, ನಿಮ್ಮ ಸಲುವಾಗಿ ಎರಡು ಕುದುರೆಗಳನ್ನು ಹಿಡಿದುಕೊಂಡಿದ್ದ ಕಿಸನನು ನಿಮ್ಮ ಕಣ್ಣಿಗೆ ಬೀಳಬಹುದು. ನೀವೂ, ವಿಜಯೆಯೂ ಕುದುರೆಗಳನ್ನು ಹತ್ತಿಕೊಂಡು ಒಮ್ಮೆಲೆ ಓರಛಾದ ಹಾದಿಯನ್ನು ಹಿಡಿಯಿರಿ.

ಸಜ್ಜನರಾಯ (ನಡುವೆಬಾಯಿಹಾಕಿ)—ಓರಛಾಕ್ಕೆ ಹೋಗಿ ರಾಣೀ ಹೀರಾದೇವಿಯ ಆಶ್ರಯದಲ್ಲಿ ರಾಜಕುಮಾರಿಯನ್ನು ಇಡಬೇಕೆಂದು ನಿಮ್ಮ ಮನಸ್ಸಿನಲ್ಲಿ ಇರುವದೇನು? ಹಾಗಿದ್ದರೆ ನಿಮ್ಮ ಯುಕ್ತಿಯು ಸಫಲವಾಗಲಾರದು; ಯಾಕಂದರೆ ಹೀರಾದೇವಿ—

ಸುಫಲಾದೇವಿ—ಸಜ್ಜನರಾಯ, ನಾನು ಹೇಳುವದನ್ನು ಪೂರ್ಣವಾಗಿ ಕೇಳಿಕೊಳ್ಳಿರಿ. ನೀವು ವಿಜಯೆಯೊಡನೆ ಹೀರಾದೇವಿಯ ಕಡೆಗೆ ಹೋಗಬೇಕು. ನಾನು ಧಾರೀರದ ಅರಸನ ಕಡೆಯಿಂದ ಬಂದಿರುವೆನೆಂದು ಪ್ರಸಿದ್ಧಮಾಡಿರಿ. ರಾಣೀ ಹೀರಾದೇವಿಗೆ ನಿಮ್ಮಗುರುತು ಇರುವದು. ಆಕೆಯು ನಿಮ್ಮ ಆದರಸತ್ಕಾರವನ್ನು ಮಾಡದೆ ಇರಲಾರಳು. ರಾಣೀ ಹೀರಾದೇವಿ

ಯನ್ನು ಏಕಾಂತದಲ್ಲಿ ಕಂಡು ಆಕೆಗೆ—"ಸುಫಲಾದೇವಿಯು ವಿಜಯೆಯನ್ನು ಛತ್ರಸಾಲನಿಗೆ ಕೊಡುವದನ್ನು ನಿಶ್ಚಯಿಸಿ, ಧಾರೀರದ ರಾಜ್ಯವನ್ನು ಛತ್ರಸಾಲನಿಗೆ ಕೊಡಬೇಕೆಂದು ಮಾಡಿರುವಳು; ಆದ್ದರಿಂದ ಕಂಚುಕಿರಾಯರು ವಿಜಯೆಯನ್ನು ನನ್ನಸಂಗಡ ಕಳಿಸಿಕೊಟ್ಟಿದ್ದಾರೆ; ನೀವು ಆದಷ್ಟುಬೇಗನೆ ವಿಜಯೆಯ ಲಗ್ನವನ್ನು ಯುವರಾಜ ನಿಮಲದೇವನ ಸಂಗಡ ಮಾಡಿಬಿಡಬೇಕು; ಅಂದರೆ ಧಾರೀರದಮೇಲಿನ ವಿಪತ್ತು ದೂರವಾಗಿ, ಛತ್ರಸಾಲನು ಕಂಗಾಲನಾಗಿಯೇ ಅಡವಡವಿ ತಿರುಗುತ್ತಿರುವನು" ಎಂದು ಹೇಳಿರಿ. ಛತ್ರಸಾಲನನ್ನು ದ್ವೇಷಿಸುತ್ತಿರುವ ಹೀರಾದೇವಿಗೆ ನಿಮ್ಮ ಮಾತು ಒಪ್ಪಿಗೆಯಾಗಿ, ಬೇಗನೆ ಲಗ್ನಸಮಾರಂಭಕ್ಕೆ ಆಕೆಯು ಒಪ್ಪಿಕೊಳ್ಳುವಳು. ಛತ್ರಸಾಲನ ಕಡೆಯವರಾಗಲಿ, ಹೀರಾದೇವಿಯ ಕಡೆಯವರಾಗಲಿ ಲಗ್ನಕ್ಕೆ ವಿಘ್ನಮಾಡಬಹುದಾದುದರಿಂದ, ಆದಷ್ಟುಗುಪ್ತರೀತಿಯಿಂದ ಮೊವಲನೆಯಲಗ್ನಮುಹೂರ್ತಕ್ಕೇ ಲಗ್ನಮಾಡಿಬಿಡೆಂದು ಹೇಳಿರಿ.

ಸುಫಲಾದೇವಿಯ ಮಾತು ಮುಗಿದರೂ ಸಜ್ಜನರಾಯನ ಬಾಯಿಂದ ಮಾತುಗಳು ಹೊರಡದಾದವು. ವಿಚಾರಮಗ್ನಸ್ಥಿತಿಯಲ್ಲಿ ಚಿತ್ರದೊಳಗಿನ ಗೊಂಬೆಯಂತೆ ಆತನು ನಿಂತುಬಿಟ್ಟಿದ್ದನು. ಇದನ್ನು ನೋಡಿ ರಾಣೀ ಸುಫಲಾದೇವಿಯು ಮತ್ತೆ ಸಜ್ಜನರಾಯನನ್ನು ಕುರಿತು—"ನಾನು ಹೇಳಿದ ಯುಕ್ತಿಯು ನಿಮ್ಮ ಮನಸ್ಸಿಗೆ ಬರಲಿಲ್ಲವೇನು? ನನ್ನ ಕಪಟಪ್ರಬಂಧವು ನಿಮಗೆ ಯೋಗ್ಯವಾಗಿ ತೋರಲೋಲ್ಲದೇನು? ಲಕ್ಷಾವಧಿಜನರಕಲ್ಯಾಣಕ್ಕಾಗಿ ಎರಡು ಮಾತು ಸುಳ್ಳುಆಡಲಿಕ್ಕೆ ನಿಮಗೆ ಅಂಜಿಕೆ ಬರುವದೇನು? ಸ್ವಾಮಿಯು ತಾನಾಗಿ ತನ್ನಮೇಲೆ ವಿಪತ್ತು ತಂದುಕೊಂಡಿರುವಾಗ, ಅದನ್ನು ದೂರಮಾಡುವದಕ್ಕಾಗಿ ಸ್ವಾಮಿಯೊಡನೆ ಕಪಟವನ್ನು ಆಚರಿಸಲಿಕ್ಕೆ ನಿಮ್ಮ ಸ್ವಾಮಿಭಕ್ತಿಗೆ ಸಹನವಾಗಲೊಲ್ಲದೇನು? ನಾನಾದರೂ ಏನುಮಾಡಲಿ? ವಿಜಯೆಯನ್ನು ರಕ್ಷಿಸಲಿಕ್ಕೆ, ಧಾರೀರದ ಪ್ರಜೆಗಳ ಆಪತ್ತನ್ನು ದೂರಮಾಡಲಿಕ್ಕೆ ನನಗೆ ಬೇರೆ ಉಪಾಯವು ತೋರಲೋಲ್ಲದು; ಆದರಿಂದ ನಾನು ಪ್ರಾಣನಾಥರೊಡನೆ ಕಪಟವನ್ನು ಆಚರಿಸಬೇಕಾಗಿರುವದು. ಸಜ್ಜನರಾಯ, ನಾಳೆ ಧಾರೀರದ ಅರಮನೆಯಿಂದ ಹೊರಡುವ ಸಾಂಡಣಿಯ ಸವಾರನು ರಣದುಲ್ಲಾಖಾನನ ಕಡೆಗೆ ಹೋಗದಂತೆ ವ್ಯವಸ್ಥೆ ಮಾಡಿರುವೆನು. ಇನ್ನುಮೇಲಿ

ರಣದುಲ್ಲಾಖಾನನ ಕಡೆಗೆ ಹೋಗುವ ಪ್ರಾಣನಾಥರ ಪತ್ರಗಳು ಮೊದಲು ನನ್ನ ಕಡೆಗೆ ಬರುವವು. ಅದರಂತೆ ರಣದುಲ್ಲಾಖಾನನಿಂದ ಬರುವ ಯಾವ ದೊಂದು ಪತ್ರವು ನನ್ನಕಡೆಗೆ ಮೊದಲು ಬಾರದೆ ಇರುವಹಾಗಿಲ್ಲ. ನಾಳೆ ನಿಂದ ಈ ಸುಫಲಾದೇವಿಯು ವಿಜಯಾ-ರಣದುಲ್ಲಾಖಾನರ ವಿವಾಹದ ವಿಷಯದಲ್ಲಿ ಸಮ್ಮತಿಯನ್ನು ಪ್ರಕಟಿಸುತ್ತ ಹೋಗುವಳು! ನಿಜವಾದ ವಿಜಯೆಯು ಓರಛಾದಲ್ಲಿ ವಿಮಲದೇವನೊಡನೆ ವಿವಾಹ ಬದ್ಧಳಾಗುತ್ತಿರುವಾಗ, ಮೋಸದ ವಿಜಯೆಯು ರಣದುಲ್ಲಾಖಾನನ ಭಾವೀಪತ್ನಿಯೆಂದು ಬುರುಕೆಯಿಂದ ಮೋರೆಯನ್ನು ಪೂರಾ ಮುಚ್ಚಿಕೊಂಡು, ಧಾರೀರದ ಅರಮನೆಯಲ್ಲಿ ಆನಂದದಿಂದ ಸಂಚರಿಸತೊಡಗುವಳು.

ಸಜ್ಜನರಾಯ—ಸುಫಲಾದೇವೀ, ಮಧುರಫಲಗಳನ್ನು ಉತ್ಪನ್ನಮಾಡಲಿಕ್ಕೆ ಎಷ್ಟೋಸಾರೆ ಗಿಡಗಳಿಗೆ ಹೊಲಸು ಗೊಬ್ಬರವನ್ನು ಹಾಕಬೇಕಾಗುತ್ತದೆ. ಅದರಂತೆಯೇ ಅತ್ಯಂತ ನ್ಯಾಯವೂ, ಪವಿತ್ರವೂ, ಸತ್ಯವೂ ಆದ ಪಕ್ಷವನ್ನು ಜಯಶಾಲಿಯಾಗಮಾಡುವದಕ್ಕಾಗಿ ಅಸತ್ಯರೂಪವಾದ ಗೊಬ್ಬರವನ್ನು ಒಮ್ಮೊಮ್ಮೆ ಸ್ಪರ್ಶಮಾಡಬೇಕಾಗುತ್ತದೆ. ಸದ್ಯದ ಪ್ರಸಂಗವು ಅಂತಹದೇ ಇರುತ್ತದೆ. ರಾಣೀ, ನೀವು ಒಪ್ಪಿಸುವ ಕೆಲಸವನ್ನು ನಾನು ಮನಃಪೂರ್ವಕವಾಗಿಮಾಡಲು ಒಪ್ಪಿಕೊಳ್ಳುತ್ತೇನೆ; ಆದರೆ ನಿನ್ನೆ ನೀವು ಹೇಳಿದಂತೆ ಮಹೋಬದ ಛತ್ರಸಾಲನು ಧಾರೀರದ ಸಿಂಹಾಸನವೇರುವ ಯೋಗವು ಇದರಿಂದ ತಪ್ಪಿಹೋಗುತ್ತದಲ್ಲ? ವಿಜಯೆಯು ವಿಮಲದೇವನ ಕೊರಳಲ್ಲಿ ಮಾಲೆ ಹಾಕಿದಕೂಡಲೆ ಹೀರಾದೇವಿಯ ಕ್ರೂರತನದ ಆಳಿಕೆಗೆ ಧಾರೀರದ ಸಂಸ್ಥಾನವು ಒಳಪಡಬೇಕಾಗುವದು!

ಸುಫಲಾದೇವಿ—ಸಜ್ಜನರಾಯ, ಹೀಗೆ ಚಿಂತೆಗೊಳಗಾಗಬೇಡಿರಿ. ಇಲ್ಲಿಯ ರಾಜಸಿಂಹಾಸನದಮೇಲೆ ಛತ್ರಸಾಲನೇ ಕುಳಿತುಕೊಳ್ಳುವನು.

ಈ ಮೇರೆಗೆ ನುಡಿದು ಸುಫಲಾದೇವಿಯು ಒಂದು ಲಕ್ಕೋಟೆಯನ್ನು ಉಡಿಯೊಳಗಿಂದ ತೆಗೆದು ತೇಜಸ್ವಿಯಾದ ದಳಪತರಾಯನನ್ನು ಕುರಿತು—ದಳಪತರಾಯ, ನಿನ್ನೆ ನೀನು ಮಾತಾಡಿದಾಗಲೇ ನಿನ್ನ ಗುರುತು ನನಗೆ ಆಗಿರುತ್ತದೆ. ನೀನು ಈಲಕ್ಕೋಟೆಯನ್ನು ಬುಂದೇಲಖಂಡದಲ್ಲಿರುವ ಪ್ರಾಣನಾಥ

ಪ್ರಭುಗಳಿಗೆ ಮುಟ್ಟಿಸು. ಅವರು ಆದಷ್ಟು ಬೇಗನೆ ಸ್ವಾತಂತ್ರ್ಯಪ್ರಾಪ್ತಿಗಾಗಿ ಯತ್ನಿಸಲಿಕ್ಕೆ ಛತ್ರಸಾಲನನ್ನು ಆಜ್ಞಾಪಿಸುವರು.

ಸಜ್ಜನರಾಯ (ನಿಟ್ಟುಸಿರುಬಿಟ್ಟು)—ಈ ರೀತಿಯಿಂದ ಸ್ವಾತಂತ್ರ್ಯವನ್ನು ಸಂಪಾದಿಸಿದ ಬಳಿಕ ಛತ್ರಸಾಲನು ಇಲ್ಲಿ ಬರುವವನೇನು? ರಾಣೀ, ಬುಂದೇಲಖಂಡಕ್ಕೆ ಸ್ವಾತಂತ್ರ್ಯವು ಅಲ್ಪಕಾಲದಲ್ಲಿ ಮೊರೆಯಲಾರದು. ರಾಣೀ ಹೀರಾದೇವಿಯಅಧಿಕಾರವು ಧಾರೀರದಮೇಲೆ ನಡೆಯತೊಡಗುವದು.

ಸುಫಲಾದೇವಿ—ರಣದುಲ್ಲಾ ಖಾನನ, ಅಥವಾ ಆ ದುಷ್ಟ ಹೀರಾದೇವಿಯ ಸಂಬಂಧವು ಧಾರೀರದ ಸಂಸ್ಥಾನಕ್ಕೇನಿರುವದು? ರಾಜಾವಿಮಲದೇವನೊಡನೆ ಆಗುವ ವಿಜಯೆಯ ಲಗ್ನವು ಕೇವಲ ನಾಟಕವಾಗಿರುವದು.

ಸಜ್ಜನರಾಯ (ಆಶ್ಚರ್ಯದಿಂದ)—ವಿಮಲದೇವನೊಡನೆ ವಿಜಯೆಯ ಸಶಾಸ್ತ್ರ ವಿವಾಹವಾದ ಬಳಿಕ, ವಿಜಯೆಯು ತಿರುಗಿ ಛತ್ರಸಾಲನ ಹೆಂಡತಿಯಾಗುವ ಬಗೆಯೇನು?

ಸುಫಲಾದೇವಿ—ಸಜ್ಜನರಾಯ, ಅದನ್ನು ಸ್ಪಷ್ಟವಾಗಿ ಹೇಳುವೆನು ಕೇಳಿರಿ. ಓರಛಾದ ಯುವರಾಜನಾದ ವಿಮಲದೇವನು ಪುರುಷನಲ್ಲ, ಸ್ತ್ರೀಯು. ತನಗೆ ಗಂಡುಮಕ್ಕಳಿಲ್ಲದ್ದರಿಂದ ತನ್ನ ಪಶ್ಚಾತ್ ತನ್ನ ರಾಜ್ಯವು ಮಹೋಬದ ಅರಸುಮನೆತನಕ್ಕೆ ಸೇರುವದೆಂಬ ಹೊಟ್ಟೇಕಿಚ್ಚಿನಿಂದ ಹೀರಾದೇವಿಯು ಹೆಣ್ಣುಹುಡುಗಿಗೆ ಗಂಡುವೇಷಹಾಕಿ, ಆಕೆಗೆ ವಿಮಲದೇವನೆಂಬ ಹೆಸರನ್ನು ಇಟ್ಟು ಈವರೆಗೆ ಆತನನ್ನು ಯುವರಾಜನನ್ನಾಗಿನಡಿಸಿಕೊಳ್ಳುತ್ತ ಬಂದಿರುವಳು. ವಿಮಲದೇವನ ಪಟ್ಟಾಭಿಷೇಕ ಸಮಾರಂಭವನ್ನು ಹೀರಾದೇವಿಯು ಬೇಗನೆಮಾಡುವವಳಿದ್ದಾಳೆ. ಅಷ್ಟರಲ್ಲಿ ಈ ಲಗ್ನದ ಕೆಲಸವನ್ನು ತೀರಿಸಿಬಿಡಿರಿ.

ಸುಫಲಾದೇವಿಯ ಈ ಮಾತುಗಳನ್ನು ಕೇಳಿ ಸಜ್ಜನರಾಯನ ಮುಖದಲ್ಲಿ ಆನಂದಾಶ್ಚರ್ಯಗಳ ಕಳೆಯು ಉಕ್ಕಹತ್ತಿದ್ದು, ವಿಜಯೆಯೊಡನೆ ಆತನು ಓರಛಾದ ಹಾದಿಯನ್ನು ಹಿಡಿದು ಸಾಗಹತ್ತಿದರೂ ಅದು ಹಾಗೆಯೇ ಉಕ್ಕುತ್ತಲೇ ಇತ್ತು! ಆತನು ತನ್ನನ್ನು ಹಿಂಬಾಲಿಸಿ ಬರುತ್ತಿರುವ ವಿಜಯೆಯನ್ನು ಕುರಿತು—ಕುಮಾರೀ, ವಿಮಲದೇವನ ಪುರುಷವೇಷದ ಸಂಗತಿಯು ರಾಣಿಯವರಿಗೆ ಹೇಗೆ ಗೊತ್ತಾಯಿತು?

ವಿಜಯೆ—ವಿಮಲದೇವನ ಸಹವಾಸದಲ್ಲಿ ನಾನು ಬಹಳ ದಿವಸಗಳನ್ನು ಕಳೆದಿರುವೆನು. ಆಗ ಅತನ ಸೋಗು ನನಗೆ ಗೊತ್ತಾಗಿ, ಆ ಮಾತನ್ನು ನಾನೇ ಅವ್ವನಿಗೆ ಬೇಳೆರುತ್ತೇನೆ.

ಇತ್ತ ಸುಫಲಾದೇವಿಯು ತನ್ನ ಪತಿಯಾದ ಕಂಚುಕೀರಾಯನಿಗೆ ವಿಜಯಾ-ರಣದುಲ್ಲಾಖಾನರ ವಿವಾಹವು ತನಗೆ ಸಮ್ಮತವಾಗಿರುವದೆಂದು ಹೇಳಿದಳು. ಆಗ ಅರಸನಿಗಾದ ಆನಂದವನ್ನು ವರ್ಣಿಸಲಾಸಲ್ಲ. ಅತನು ಲಗ್ನದ ಸಿದ್ಧತೆಯಲ್ಲಿ ತೊಡಗಿದನು; ಆದರೆ ಲಗ್ನವ ತಿಥಿಯು ಸುದ್ದಿಯು ಇನ್ನೂ ಸ್ವತಃ ವರನಿಗೇ ಗೊತ್ತಾಗಿದ್ದಿಲ್ಲ. ಖಾನನ ಪೆಂಡತಿಯಾಗಬೇಕಾಗಿರುವ ಸುಫಲಾದೇವಿಯ ದಾಸಿಯು ಬುರುಕೆಯಿಂದ ಸರ್ವಾಂಗವನ್ನು ಮುಚ್ಚಿಕೊಂಡು ಮನೆಯಲ್ಲಿ ಓಡಾಡಹತ್ತಿದಳು ! ಪಾಪ! ಬಡ ಕಂಚುಕೀರಾಯನು!

೨೩ನೆಯ ಪ್ರಕರಣ-ಸತ್ವದ ಪ್ರಭಾವ

ಅನಂತವಿಶ್ವದಲ್ಲಿ ಭಗವಾನ್ ಸೂರ್ಯನಾರಾಯಣನು ಪ್ರಕಾಶಿಸುವಂತೆ, ಬುಂದೇಲಖಂಡದ ಅಸಂಖ್ಯ ಜನರಲ್ಲಿ ಪ್ರಾಣನಾಥ ಪ್ರಭುಗಳುತಮ್ಮ ಅಲೌಕಿಕತೇಜದಿಂದ ಪ್ರಕಾಶಿಸುತ್ತಿದ್ದರು. ರಣದುಲ್ಲಾಖಾನನು ಓರಛಾದ ಮುಲ್ಕಾಖತ್ ದಿವಾಣಖಾನೆಯಲ್ಲಿ ಕುಳಿತು ಬುಂದೇಲಖಂಡದ ನಾಗರಿಕರಿಗೆ-"ಇಂದು ಮಧ್ಯಾಹ್ನದಲ್ಲಿ ಚತುರ್ಭುಜನ ಮಂದಿರವು ನೆಲಸಮವಾಗಿ, ನಾಳೆ ಬೆಳಗಾಗುತ್ತಲೆ ಪಟ್ಟಣದೊಳಗಿನ ಗುಡಿಗಳೆಲ್ಲ ನೆಲಸಮವಾಗುವವು. ಆ ಮೇಲೆ ಆ ಗುಡಿಗಳ ಚಿಪ್ಪಿನಾರದ ಮೇಲೆ ಸುಂದರ ಮಸೀದೆಗಳನ್ನು ಕಟ್ಟುವ ಕೆಲಸವು ಆರಂಭವಾಗುವದು." ಎಂಬ ಅಪಮಾನಕಾರಕ ಅಪ್ಪಣೆಯನ್ನು ಕಳಿಸಿದ್ದನು. ಅದನ್ನು ಕೇಳಿದ ಕೂಡಲೆ ನಾಗರಿಕರಿಗೆ ಪರಮಾವಧಿ ದುಃಖವಾಯಿತು. ಅವರು ಸಂತಾಪದಿಂದ ಯವನರ ಜುಲುಮೆಯ ಅಧಿಕಾರವನ್ನು ಶಪಿಸಹತ್ತಿದರು; ಆದರೆ ಚತುರ್ಭುಜನ ಮಂದಿರವನ್ನು ಉಳಿಸಿಕೊಳ್ಳುವ ಉಪಾಯವು ಅವರಿಗೆ ತೋಚಲೊಲ್ಲದು. ಅವರಿಗೆ ಅಸಹ್ಯ ದುಃಖವಾಯಿತು! ಮುಖ್ಯರಾದವರು ಅತ್ಯಂತ ಪ್ರಯಾಸದಿಂದ ಹೀರಾದೇವಿಯನ್ನು ಕಂಡು, ರಣದುಲ್ಲಾಖಾನನು ನಡಿಸುವ ಅನರ್ಥವನ್ನು ಹೇಳಿ, ಚತುರ್ಭುಜ ಪರಮಾತ್ಮನ ದೇವಾಲಯವನ್ನಷ್ಟು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕೆಂದು

ಪ್ರಾರ್ಥಿಸಿದರು. ಅದಕ್ಕೆ ಹೀರಾದೇವಿಯು—" ಸದ್ಯಕ್ಕೆ ನಾನು ಲಗ್ನ ಸಮಾರಂಭದಲ್ಲಿ ತೊಡಗಿದ್ದೇನೆ; ಮೇಲಾಗಿ ದಿಲ್ಲೀಪತಿಯ ವಿಚಾರಕ್ಕೆ ವಿರುದ್ಧವಾಗಿ ಹೋಗುವದು ಅನ್ಯಾಯವು! ಆದರಿಂದ ನೀವು ಯಾವ ಉಸಾಬರಿಗೂ ಹೋಗಬೇಡಿರಿ. ರಣದುಲ್ಲಾಖಾನನು ಒಂದು ಗುಡಿಯನ್ನು ಕೆಡವಿದರೆ, ನಾವು ಐದು ಗುಡಿಗಳನ್ನು ಕಟ್ಟಿಸಿಕೊಡುವೆವು." ಎಂದು ಅಭಯವನ್ನಿತ್ತು, ನಾಗರಿಕರನ್ನು ಕಳಿಸಿಕೊಟ್ಟಳು. ಆದರಿಂದಂತು ಓರಛಾದ ನಾಗರಿಕರ ನಿರಾಶೆಗೆ ಮೇರೆಯಿಲ್ಲದಾಯಿತು. ತಮಗೆ ಸಹಾಯಮಾಡುವಂತಹ ಯೋಗ್ಯ ಮಾರ್ಗದರ್ಶಕನು ಅವರಿಗೆ ತೋರದಾದನು. ಸೂರ್ಯೋದಯದಿಂದಲೇ ಜನರು ಗುಂಪುಗುಂಪಾಗಿ ಚತುರ್ಭುಜ ಪರಮಾತ್ಮನ ಕಟ್ಟಕಡೆಯ ದರ್ಶನವನ್ನು ತಕ್ಕೊಳ್ಳುವದಕ್ಕಾಗಿ ಆತನ ಮಂದಿರದ ಕಡೆಗೆ ಸಾಗುತ್ತಲಿದ್ದರು. ದುಃಖದ ಧ್ವನಿಗಳೂ, ಸಂತಾಪದ ಶಾಪಧ್ವನಿಗಳೂ ಪಟ್ಟಣದ ತುಂಬ ಕೇಳಿಸುತ್ತಲಿದ್ದವು. ಮಧ್ಯಾಹ್ನವಾದರೂ ನಾಗರಿಕರಲ್ಲಿ ಒಂದು ಪಿಳ್ಳೆಯೂ ಅನ್ನ ನೀರುಗಳನ್ನು ಮುಟ್ಟಿದ್ದಿಲ್ಲ. ಅಷ್ಟರಲ್ಲಿ ಪ್ರಾಣನಾಥ ಪ್ರಭುಗಳು ಶ್ರೀ ಚತುರ್ಭುಜ ಪರಮಾತ್ಮನ ಮಂದಿರದಲ್ಲಿ ಬಂದಿರುವರೆಂಬದನ್ನು ಕೇಳಿದ ಬಳಿಕಂತು, ಜನರ ಗುಂಪುಗಳು ತೆರಪಿಲ್ಲದೆ ಗುಡಿಯ ಕಡೆಗೆ ಸಾಗಹತ್ತಿದವು. ಓರಛಾದ ಪ್ರತಿ ಒಬ್ಬ ನಾಗರಿಕನು ಪ್ರಭುಗಳಿಂದ ಚತುರ್ಭುಜನ ಮೂರ್ತಿಯು ಸಂರಕ್ಷಣವಾಗುವದೆಂದು ತಿಳಿದುಕೊಳ್ಳಹತ್ತಿದನು.

ಪ್ರಾಣನಾಥ ಪ್ರಭುಗಳು ಉಚ್ಚವಾದ ಆಸನದಮೇಲೆ ನಿಂತುಕೊಂಡು, ಉನ್ನತ ಸ್ವರದಿಂದ ನಾಗರಿಕರನ್ನು ಕುರಿತು ನುಡಿಯತೊಡಗಿದರೇನಂದರೆ—"ಸಜ್ಜನರೇ, ಚಂಪತರಾಯನು ಮರಣಹೊಂದಿದ ಬಳಿಕ ಜನರ ಮನಸ್ಸಿನಲ್ಲಿ ಸ್ವಾತಂತ್ರ್ಯಪ್ರೇಮದ ಬೀಜವನ್ನು ಬಿತ್ತಬೇಕೆಂದು ಬುಂದೇಲಖಂಡದಲ್ಲೆಲ್ಲ ನಾನು ಪ್ರವಾಸಮಾಡುತ್ತಿರುವೆನು. ಈ ಕೆಲಸವು ಬಹು ದಿವಸಕ್ಕೆ ಮೆಲ್ಲ ಮೆಲ್ಲನೆ ಆಗಬಹುದೆಂದು ನಾನು ತಿಳಿದಿದ್ದೆನು; ಆದರೆ ಅನುಭವದಿಂದ ಸ್ವಾತಂತ್ರ್ಯಪ್ರಾಪ್ತಿಯು ಬಹುಬೇಗನೆ ಆಗುವದೆಂದು ನನಗೆ ತೋರಹತ್ತಿರುವದು! ಪ್ರತಿಒಬ್ಬನಿಗೆ ಸ್ವಾತಂತ್ರ್ಯದ ಪ್ರೀತಿಯು ಇರುತ್ತದೆಂಬ ಮಾತು ನನಗೆ ಗೊತ್ತಾಯಿತು; ಆದರೆ ಸ್ವಾತಂತ್ರ್ಯದ ಗುರುತು ಮಾತ್ರ ಬಹುಸ್ವಲ್ಪ ಜನರಿಗಿರುವದು. " ತಮ್ಮ ಧರ್ಮದ ಪರಿಪಾಲನವು ಉತ್ತಮರೀತಿಯಿಂದ

ಆಗಬೇಕು, ತಮ್ಮ ತೀರ್ಥ ಕ್ಷೇತ್ರಗಳ, ಹಾಗು ತಮ್ಮ ಧಾರ್ಮಿಕ ತಿಳುವಳಿಕೆಗಳ ಪಾವಿತ್ರ್ಯವು ಸುರಕ್ಷಿತವಾಗಿರಬೇಕು, ತಮ್ಮ ಮೇಲೆ ಅನ್ಯಾಯದ ಕರ-ಕಂಡಾಯಗಳ ಭಾರವು ಹೇರಬಾರದು, ತಾವು ಕರ-ಕಂದಾಯಗಳ ರೂಪದಿಂದ ಕೊಡುವ ಹಣದ ಉಪಯೋಗವು ತಮ್ಮ ಹಿತಕ್ಕಾಗಿಯೇ ಆಗುತ್ತಿರಬೇಕು, ರಾಜ್ಯ ಕಾರಭಾರದಲ್ಲಿ ಸಹಾಯಮಾಡುವ ಹಾದಿಯು ತಮಗೆ ತೆರೆದಿರಬೇಕು, ತಮ್ಮಮೇಲೆ ಯಾರೂ ಒತ್ತಾಯಮಾಡಬಾರದು" ಎಂಬಿವೇ ಮೊದಲಾದ ಸದಿಚ್ಛೆಗಳು ಇಡಿಯ ಬುಂದೇಲಖಂಡಕ್ಕೇ ಇರುತ್ತವೆ; ಆದರೆ ಇಂತಹ ಇಚ್ಛೆಗಳು ಸ್ವಾತಂತ್ರ್ಯವಿರದಿದ್ದರೆ ಪೂರ್ಣವಾಗವೆಂಬ ಮಾತು ಮಾತ್ರ ಬಹು ಸ್ವಲ್ಪ ಜನರಿಗೆ ಗೊತ್ತಿರುತ್ತದೆ. ಎಲ್ಲ ಜನರು ಸ್ವಾತಂತ್ರ್ಯದ ಫಲದ ಗುರುತು ಹಿಡಿಯುವರು; ಆದರೆ ಆ ಫಲಗಳು ಸ್ವಾತಂತ್ರ್ಯ ವೃಕ್ಷಕ್ಕೇ ಆಗುವವೆಂಬ ಮಾತು ಬಹುಜನರಿಗೆ ಗೊತ್ತಿರುವದಿಲ್ಲ. ಪಾಪಿಗಳೂ, ಹೊಟ್ಟೆಕಿಚ್ಚಿನವರೂ, ಅಹಂಕಾರಿಗಳೂ ಆದ ಜನರು, ಈ ಸ್ವಾತಂತ್ರ್ಯದ ಸುರುಚಿರ ಫಲಗಳು ಪಾರತಂತ್ರ್ಯದ ವೃಕ್ಷಕ್ಕೆ ಬಿಡುವವೆಂದು ಹೇಳಿ, ಜನರನ್ನು ಮೋಸಗೊಳಿಸುತ್ತಿರುವರು. ಆದ್ದರಿಂದ ಸ್ವಾತಂತ್ರ್ಯದ ಫಲವನ್ನು ಇಚ್ಛಿಸುವ ತಿಳುವಳಿಕೆ ಇಲ್ಲದ ಜನರು, ಸ್ವಾತಂತ್ರ್ಯ ವೃಕ್ಷದ ಬೊಡ್ಡೆಗೇ ಕೊಡಲಿಯ ಪೆಟ್ಟುಹಾಕ ತೊಡಗುವರು.

ಸಜ್ಜನರೇ, ನಾವು ಯವನರ ಕೈಕಾಲು ಬಿದ್ದರೆ, ನಾವು ಕೈಜೋಡಿಸಿ ಅವರಲ್ಲಿ ಭಿಕ್ಷೆಬೇಡಿದರೆ, ನಾವು ತೋರಿಸಬಾರದ ಕ್ಷುದ್ರ ತನವನ್ನು ಅವರ ಮುಂದೆ ತೋರಿಸಿದರೆ ಈಗ ಚತುರ್ಭುಜ ಪರಮಾತ್ಮನ ಗುಡಿಯ ಸಂರಕ್ಷಣವಾಗಬಹುದೋ? ಅದೇ ನೀವು ಚಂಪತರಾಯನ ಸ್ವಾತಂತ್ರ್ಯಪ್ರಾಪ್ತಿಯ ಕಾರ್ಯಕ್ಕೆ ಮನಃಪೂರ್ವಕ ಸಹಾಯಮಾಡಿ, ಸ್ವಾತಂತ್ರ್ಯಕ್ಕಾಗಿ ರಕ್ತ ಸುರಿಸಿ ಬುಂದೇಲಖಂಡವನ್ನು ಸ್ವತಂತ್ರವಾಗಮಾಡಿದ್ದರೆ, ರಣದುಲ್ಲಾಖಾನನಂತಹ ನೀಚರು ಬುಂದೇಲಖಂಡದಲ್ಲಿ ಕಾಲನ್ನಾದರೂ ಇಡುತ್ತಿದ್ದರೋ? ಏನು ಮಾಡಬೇಕು, ಬಹಳ ಹೊತ್ತಿನ ಮೇಲೆ ನೀವು ಎಚ್ಚರಾದಿರಿ, ಬೆಂಕಿಯು ಭುಗಿಭುಗಿಲೆಂದು ಉರಿಯುವವರೆಗೆ ಸುಮ್ಮನಿದ್ದು ಬಿಟ್ಟಿರಿ! ವೀರರೇ, ನಿಮ್ಮನ್ನು ಈಗ್ಗಮುಚ್ಚಿಹಾಕಿರುವ ಹೇಡಿತನಕ್ಕಾಗಿ ನಿಮಗೆ ನಾಚಿಕೆ ಬರುವದಿಲ್ಲವೆ? ಯಾವ ಪಟ್ಟಣದಲ್ಲಿ ಪ್ರತಾಪಶಾಲಿಯಾದರುದ್ರಪ್ರತಾಪನು ಸ್ವಾತಂ

ತ್ಯದೇವಿಯು ಪೌರಾಸನೆಯನ್ನು ಮಾಡಿದನೋ, ಅದೇಪಟ್ಟಣದಲ್ಲಿ ಅದೇ ರುದ್ರಪ್ರತಾಪನ ಅನುಯಾಯಿಗಳ ವಂಶಜರು ನೀವು, ಹೀಗೆ ಹತಾಶರಾಗಿ ಉನುರುಗಳೆಯುತ್ತ ನಿಂತುಕೊಳ್ಳುವ ಪ್ರಸಂಗವು ಬರಬೇಕೇ? ಇನ್ನೊಂದು ಕ್ಷಣದಲ್ಲಿ ಚತುರ್ಭುಜನ ಮುಂದಿರದ ನಾಶವಾಗಿ, ಚತುರ್ಭುಜನಮೂರ್ತಿಯು ಚೂರುಚೂರು ಆಗಬೇಕಾಗಿರುವದು; ಇನ್ನೊಂದು ಕ್ಷಣದಲ್ಲಿ ಚತುರ್ಭುಜ ಪರಮಾತ್ಮನ ತಲೆಯುನೇಲೆ ಪುಷ್ಪಗಳು ಏರುವವರ ಬದಲು, ಸುತ್ತಿಗೆಗಳ ಹೊಡತಗಳು, ಪಾರಿಯು ಪೊಯ್ತುಗಳು, ಗುದ್ದಲಿಯ ಪೆಟ್ಟುಗಳುಬೀಳುವವು; ಇದನ್ನು ಈಗ ಕಣ್ಣುಮುಚ್ಚಿನೋಡಬೇಕಾಗಿರುವದು. ಇದಕ್ಕಿಂತ ಹೀಗೆನಿಂತ ನಿಂತಹಾಗೆಯೇನಾವು ಸತ್ತುಹೋಗುವದು ಒಳ್ಳೆಯದಲ್ಲವೆ? ಹೀಗೆ ನುಡಿಯುತ್ತಿರುವಾಗ ಪ್ರಾಣನಾಥಪ್ರಭುಗಳ ಕಣ್ಣುಗಳಿಂದ ನೀರುಗಳು ಒಂದೇಸವನೆ ಹೋಗಹತ್ತಿದವು. ಅವನ್ನು ನೋಡುವ ಎಲ್ಲ ಬುಂದೇಲಿಗಳೂ ಕಣ್ಣೀರು ಸುರಿಸುತ್ತ ನಿಂತುಕೊಂಡಿದ್ದರು; ಆ ಮೇರೆಯಿಲ್ಲದ ಬುಂದೇಲಿಗಳ ಸಮುದಾಯದಲ್ಲಿ ಕೆಲವರು ಕ್ರೂರಕರ್ಮಿಗಳಿರಬಹುದು; ಕೆಲವರು ಕಪಟಿಗಳಿರಬಹುದು; ಕೆಲವರು ಅನೀತಿಯುವರಿರಬಹುದು; ಕೆಲವರು ವಿಶ್ವಾಸಘಾತಕಿಗಳಿರಬಹುದು; ಕೆಲವರು ದೇಶದ್ರೋಹಿಗಳಿರಬಹುದು. ಒಟ್ಟಿಗೆ ಸದ್ವರ್ತನದವರಿದ್ದಲ್ಲಿ ದುರ್ವರ್ತನದವರು, ದಯಾಳುಗಳಿದ್ದಲ್ಲಿ ಕ್ರೂರರು, ಸಾಧುಗಳಿದ್ದಲ್ಲಿ ದಾಂಭಿಕರು ಹೀಗೆ ಪರಸ್ಪರ ವಿರೋಧಭಾವದ ಜನರು ಯಾವಾಗಾದರೂ ಇರತಕ್ಕವರೇ! ಆದರೆ ಅಂಥವರೆಲ್ಲರ ಅಂತಃಕರಣದಲ್ಲಿ ಈಗ ಧರ್ಮಪ್ರೇಮದ ಒಂದೇಒಂದು ಜ್ಯೋತಿಯು ಪ್ರಕಾಶಿಸತೊಡಗಿ, ಅವರೆಲ್ಲರು ಕಣ್ಣೀರು ಸುರಿಸಹತ್ತಿದ್ದನ್ನು ನೋಡಿ ಪ್ರಾಣನಾಥ ಪ್ರಭುಗಳು ಸದ್ಗದಿತವಾಣಿಯಿಂದ—"ಸಜ್ಜನರೇ, ಭರತಖಂಡದೊಳಗಿನ ಆರ್ಯರ ಮನೋವೃತ್ತಿಗಳು ಮೋಕ್ಷಸುಖದ ಕಡೆಗೆ ಯಾವಾಗಲೂ ಸ್ವಾಭಾವಿಕವಾಗಿಯೇ ತಿರುಗಿರುವದರಿಂದ, ಅವರು ತಮ್ಮ ಆಚಾರ ವಿಚಾರಗಳನ್ನು, ಪ್ರೇಮ ದ್ವೇಷಗಳನ್ನು ಬದಿಗಿಟ್ಟು ಧರ್ಮರಕ್ಷಣಕ್ಕಾಗಿ ಒಂದೇ ಮನೋವೃತ್ತಿಯವರಾಗುತ್ತಿರುವದು ಸ್ವಾಭಾವಿಕವು; ಹಾಗಿಲ್ಲದಿದ್ದರೆ ಭಿನ್ನಭಿನ್ನಮನೋವೃತ್ತಿಗಳುಳ್ಳ ನಮ್ಮಲ್ಲರ ಕಣ್ಣುಗಳಲ್ಲಿ ನೀರುಗಳು ಯಾಕೆ ಬರುತ್ತಿದ್ದವು ಹೇಳಿರಿ? ನಾವು ಧರ್ಮಮೂಲರಾಗಿ ಐಹಿಕಸುಖವನ್ನು ಭೋಗಿಸತಕ್ಕವರು:ಧರ್ಮಮೂಲರಾಗಿ

ಎಲ್ಲ ವ್ಯವಹಾರಗಳನ್ನು ನಡಿಸತಕ್ಕವರು; ಆದ್ದರಿಂದಲೇ ನಾವು ಧರ್ಮ ಮಯರು! ಅಂತಹ ನಮ್ಮನ್ನು ಯವನರು ಧರ್ಮಭ್ರಷ್ಟರಾಗಮಾಡುವ ಪ್ರಸಂಗವು ಬಂದಿರುವದಲ್ಲ! ಅಂದಬಳಿಕ ಧರ್ಮರಕ್ಷಣಕ್ಕಾಗಿ ದೇಶವ ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕೆ ನೀವೆಲ್ಲರು ಒಮ್ಮನಸ್ಸಿಂದ ಪ್ರಯತ್ನ ಮಾಡಬಾರದೇನು? ನೀವು ಹೀಗೆಯೇ ಪಾರತಂತ್ರ್ಯವ ಪಂಕದಲ್ಲಿ ಚಿರಕಾಲ ಕೊಳೆಯುವತ್ತಿ, ಕಪಿಗೆ ಪರಕೀಯರಘಾತಕತನವ ಕಲಿಸುವಿಕೆಯಿಂದ, ನಿಮ್ಮ ಧರ್ಮಗ್ರಂಥಗಳ ಹಾಗು ನಿಮ್ಮ ಗುರುಹಿರಿಯರ ಲಕ್ಷವಿಲ್ಲದೆ, ನಿಮ್ಮ ಧರ್ಮ ಪದ್ಧತಿಯನ್ನು ನಿಮ್ಮ ಕೈಯಿಂದಲೇ ಮುರಿಯುವಷ್ಟು ನಾಸ್ತಿಕರು ನೀವಾಗ ಬೇಕಾದೀತು; ಆದ್ದರಿಂದ ಈಗಲೇ ಎಚ್ಚತ್ತು, ಧರ್ಮಮೂಲರಾಗಿ ದೇಶದ ಸ್ವಾತಂತ್ರ್ಯವನ್ನು ಸಂಪಾದಿಸುವದಕ್ಕಾಗಿ ಟೊಂಕಕಟ್ಟಿರಿ.

ಪ್ರಭುಗಳವರ ಈ ಮಾತುಗಳಿಂದ ಸ್ಫೂರ್ತಿಗೊಂಡ ಎಷ್ಟೋ ನಾಗರಿಕರು ಆತ್ಯಾತುರರಾಗಿ—"ಪ್ರಭೋ, ಬುಂದೇಲಖಂಡದ ಸ್ವಾತಂತ್ರ್ಯಕ್ಕಾಗಿ ಹೊಡೆದಾಡಲು ನಾವು ನಿಶ್ಚಯಮಾಡಿರುತ್ತೇವೆ; ಆದರೆ ಸೈನ್ಯಕ್ಕೆ ಚತುರ್ಭುಜ ಪರಮಾತ್ಮನ, ಹಾಗು ಆತನ ಮಂದಿರದ ಸಂರಕ್ಷಣವನ್ನು ಹೇಗೆ ಮಾಡಬೇಕು? ನಮ್ಮ ಪವಿತ್ರ ದೇವಸ್ಥಾನದ ನಾಶವಾಗದಂತಹದೊಂದು ಯುಕ್ತಿಯನ್ನು ನಮಗೆ ಹೇಳಿರಿ. ನಮ್ಮ ಪ್ರಾಣವನ್ನು ಲಕ್ಷಿಸದೆ ನೀವು ಹೇಳಿದ ಯುಕ್ತಿಯಿಂದ ಮುಂದಿನವನ್ನು ರಕ್ಷಿಸುವೆವು" ಎಂದು ನುಡಿಯುತ್ತಿರಲು, ಒಬ್ಬ ತರುಣನಾಗರಿಕನು ಆವೇಶದಿಂದ—ಈಗೇ ಸ್ವಾತಂತ್ರ್ಯದ ಯುದ್ಧವು ಆರಂಭವಾಗಿಹೋಗಲಿ, ಚತುರ್ಭುಜಪರಮಾತ್ಮನ ಸಂರಕ್ಷಣವೇ ಸಾತಂತ್ರ್ಯದ ಯುದ್ಧದ ಮಂಗಲಾಚರಣವಾಗಿಹೋಗಲಿ! ಅಂದರೆ ಬುಂದೇಲಖಂಡದ ಸ್ವಾತಂತ್ರ್ಯವು ಪ್ರಾಪ್ತವಾದದ್ದರ ಕಡೆಯ ಮಂಗಲವನ್ನು ಮಾಡುವ ಪ್ರಸಂಗವು ನಮಗೆ ಬೇಗನೆ ಬಂದೀತು" ಎಂದು ನುಡಿದನು. ಆಗ ಪ್ರಾಣನಾಥ ಪ್ರಭುಗಳು ಗಾಂಭೀರ್ಯದಿಂದ—

ಪ್ರಭುಗಳು—ಹಿಂದುಮುಂದಿನ ವಿಚಾರವಿಲ್ಲದೆ ಹೀಗೆ ದುಡುಕುವದು ಸರಿಯಲ್ಲ. ಇಂದೇ ಯುದ್ಧವನ್ನು ಆರಂಭಿಸಿರೆಂದು ನಾನು ನಿಮಗೆ ಹೇಳುವದಿಲ್ಲ. ನಿಮ್ಮ ಮುಂಸಾಳು ಇಲ್ಲದಿರುವಾಗ, ನಿಮ್ಮ ಯಾವ ಸಿದ್ಧತೆಯೂ ಆಗದಿರುವಾಗ, ನೀವು ಹೀಗೆ ನಿಶ್ಯಸ್ತ್ರರಾಗಿರುವಾಗ ಅವಿಚಾರದಿಂದ ಯುದ್ಧಕ್ಕೆ

ಕೈ ಹಾಕಿದರೆ, ಮೊಗಲರ ಪ್ರಚಂಡ ಸೈನ್ಯಕ್ಕೆ ನೀವು ತುತ್ತಾಗುವದಲ್ಲದೆ, ಬುಂದೇಲಖಂಡವನ್ನೂ ಅನರ್ಥಕ್ಕೆ ಗುರಿಮಾಡಿದಂತಾದೀತು! ಮಹೋಬವ ಛತ್ರಸಾಲನು ನಿಮ್ಮ ಮುಂದಾಳುವಾಗಲಿಕ್ಕೆ ಸರ್ವಥೈವ ಯೋಗ್ಯನಾಗಿರುವನು! ಆತನು ಸದ್ಯಕ್ಕೆ ಸ್ವದೇಶದಲ್ಲಿರುವದಿಲ್ಲ. ಆತನು ದಕ್ಷಿಣದೊಳಗಿನ ತನ್ನ ಪವಿತ್ರ ಕಾರ್ಯವನ್ನು ಮುಗಿಸಿಕೊಂಡು ಬೇಗನೆ ಸ್ವದೇಶಕ್ಕೆ ಬರುವನು. ಸಜ್ಜನರೇ, ಅಲ್ಲಿಯವರೆಗೆ ಎಂತಹ ಅವಮಾನವನ್ನಾದರೂ, ಎಂತಹ ಹಾನಿಯನ್ನಾದರೂ ಸಹಿಸಿಕೊಂಡು ನೀವು ಸುಮ್ಮನೆ ಕುಳಿತುಕೊಳ್ಳಿರಿ.

ಛತ್ರಸಾಲನು ನಿಮ್ಮ ಮುಂದಾಳಾಗುವನೆಂದು ಪ್ರಭುಗಳು ಹೇಳಿದ್ದರಿಂದ ನಾಗರಿಕರಿಗೆ ಆನಂದವಾದಷ್ಟೇ, ನೀವು ಸುಮ್ಮನೆ ಕುಳಿತುಕೊಳ್ಳಿರೆಂದು ಹೇಳಿದ್ದರಿಂದ ಅವರಿಗೆ ದುಃಖವೂ ಆಯಿತು. ಅವರು ತಡೆಯಲಾರದೆ ಪ್ರಭುಗಳನ್ನು ಕುರಿತು-"ಪ್ರಭುಗಳೇ, ಸ್ವಾತಂತ್ರ್ಯದ ಮಾತುಹಾಗಿರಲಿ, ಸದ್ಯಕ್ಕಾಗುವ ಚತುರ್ಭುಜಪರಮಾತ್ಮನ ನಾಶದ ಗತಿಯೇನು?" ಎಂದು ಕೇಳಿದರು. ಅದಕ್ಕೆ ಪ್ರಭುಗಳು ಮುಗುಳುನಗೆ ನಗುತ್ತ—ಸಜ್ಜನರೇ, ಶ್ರೀ ಚತುರ್ಭುಜ ಪರಮಾತ್ಮನೇ ವಿಶ್ವದ ನಾಥನಾಗಿ ವಿಶ್ವವನ್ನು ರಕ್ಷಿಸುತ್ತಿರಲು, ಆತನನ್ನು ರಕ್ಷಿಸಲು ನಾವೆಷ್ಟರವರು? ಇನ್ನು ನೀವಾಗಿ ಮಾಡಿಕೊಂಡಿರುವ ನಿಮ್ಮ ಚತುರ್ಭುಜನು ನಿಮ್ಮ ಯೋಗ್ಯತೆಯಂತೆ, ಸಮರ್ಥನಾಗಲಿ-ಅಸಮರ್ಥನಾಗಲಿ, ಹೊಡೆಯುವವನಾಗಲಿ-ಹೊಡೆಸಿಕೊಳ್ಳುವವನಾಗಲಿ, ಕಾಯುವವನಾಗಲಿ-ಸಾಯುವವನಾಗಲಿ ಆಗಬಹುದು. ನಿಮ್ಮ ಚತುರ್ಭುಜನ ಮೂರ್ತಿಯಲ್ಲಿ ಸಾನ್ನಿಧ್ಯವು ಉಂಟಾಗಲಿಕ್ಕೆ ಅರ್ಚಕರಾದ ನಿಮ್ಮ ತಪೋಬಲವು, ನಿಮ್ಮ ಭಕ್ತಿಯು ಕಾರಣವಾಗಿರುವವು. ನೀವು ಹೇಡಿಗಳಾದರೆ ನಿಮ್ಮ ದೇವರೂ ಹೇಡಿಯೇ, ನೀವು ಶೂರರಾದರೆ ನಿಮ್ಮ ದೇವರೂ ಶೂರನೇ! ಆದರೂ ಸದ್ಯಕ್ಕೆ ನಿಮ್ಮ ನಿಜವಾದ ಭಕ್ತಿಯು ಚತುರ್ಭುಜನಲ್ಲಿ ಇದ್ದದ್ದಾಪರೆ, ಹಾಗು ನಿಮ್ಮ ಹೃದಯದಲ್ಲಿ ಸ್ವಾತಂತ್ರ್ಯಪ್ರೀತಿಯು ನಿಜವಾಗಿಯೇ ಹುಟ್ಟಿದ್ದಾಗಿದ್ದರೆ, ಮತ್ತು ಛತ್ರಸಾಲನ ಯೋಗದಿಂದ ಬುಂದೇಲಖಂಡಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗುವದು ಸಂಭವವೇ ಆಗಿದ್ದರೆ ನಾನೂ ನೀವೂ ಹೀಗೆ ನೋಡುತ್ತ ನಿಂತನಿಂತಹಾಗೆಯೇ ನಿಮ್ಮ ಚತುರ್ಭುಜನು ತನ್ನ ಸಂರಕ್ಷಣವನ್ನು ತಾನು ಮಾಡಿಕೊಳ್ಳುವನು! ಆದ್ದರಿಂದ ನೀವು ಈಗಮಿಟ್ಟಮಿಸುಕದೆ ಸುಮ್ಮನೆ ನಿಂತುಕೊಳ್ಳತಕ್ಕದ್ದು.

ಪ್ರಿಯವಾಚಕರೇ, ಧರ್ಮಿಷ್ಠರಿಗೆ ಮಹಾಪುರುಷರು ಮಾಡಿದ ಆಜ್ಞೆಯು ಹೇಗೆ ವ್ಯರ್ಥವಾದೀತು? ಅಂತಹ ಜನಸಮೂಹವೆಂದರೇನು, ಪ್ರಭುಗಳ ಮಹಾಮಹಿಮೆಯನ್ನು ಸ್ಮರಿಸುತ್ತ ಸುಮ್ಮನೆ ನಿಂತುಬಿಟ್ಟಿತು! ಅಷ್ಟರಲ್ಲಿ ರಣದುಲ್ಲಾಖಾನನ ಆಧಿಪತ್ಯದಲ್ಲಿ ರಾಜಸೇನೆಯು ಸೈತಾನರ ಹಿಂಡಿನಂತೆ ಗುಡಿಯಮೇಲೆ ಸಾಗಿಬಂದಿತು. ಒಬ್ಬ ಬುಂದೇಲಿಯು ತಮ್ಮನ್ನು ಪ್ರತಿಬಂಧಿಸಿದರೆ, ಅಷ್ಟೇ ನೆವಮಾಡಿ ಪಟ್ಟಣವನ್ನೇ ಸುಡಬೇಕೆಂದು ನಿಶ್ಚಯಿಸಿ ಇವರು ಬಂದಿದ್ದರು! ಆದರೆ ಮಹಾಸತ್ವಶಾಲಿಗಳಾದ ಪ್ರಾಣನಾಥ ಪ್ರಭುಗಳ ಸತ್ಪದ ಅಭೇದ್ಯಕೋಟೆಯು ಓರಛಾ ಪಟ್ಟಣವನ್ನು ರಕ್ಷಿಸುತ್ತಿರುವಾಗ, ಆ ಸೈತಾನರ ದುಷ್ಟ ಆಲೋಚನೆಯು ಹೇಗೆ ಕೊನೆಗಾಣಬೇಕು? ಅವರು ಒಂದುಬಗೆಯ ನಿರಾಶೆಯಿಂದ ಗುಡಿಯನ್ನು ಹೊಕ್ಕರು. ಮೈಲಿಗೆಯಿಂದ ಪ್ರವೇಶಿಸಲಾಗದ ಗುಡಿಯಲ್ಲಿ ಯವನರು ಕಾಲಲ್ಲಿ ಜೋಡು ಹಾಕಿಕೊಂಡು ಹೋಗುವದನ್ನು ನೋಡಿ, ಆ ಬುಂದೇಲಿಗಳ ರಕ್ತವು ಕಾದು ಕುದಿಯಹತ್ತಿತು; ಮಹಾತ್ಮರಾದ ಧರ್ಮಮೂರ್ತಿ ಪ್ರಾಣನಾಥ ಪ್ರಭುಗಳ ಆಜ್ಞೆಯು ಪ್ರತಿಬಂಧವಿಲ್ಲದಿದ್ದರೆ, ಉಭಯರ ಅನರ್ಥಕ್ಕೂ ಅಂದಿನ ಪ್ರಸಂಗವು ಕಾರಣವಾಗದೆ ಹೋಗುತ್ತಿದ್ದಿಲ್ಲ. ಎಲ್ಲ ಬುಂದೇಲಿಗಳ ಮೋರೆ ಕಣ್ಣುಗಳು ಸಿಟ್ಟಿನಿಂದ ಕೆಂಪಗೆ ಕೆಂಡದಂತಾಗಿದ್ದವು. ಪ್ರಭುವಿನ ಶಾಂತ ಮೂರ್ತಿಯ ದರ್ಶನದಿಂದ ಅವು ಕಿಡಿಗಳನ್ನು ಸುರಿಸದಾಗಿದ್ದವು. ಅಷ್ಟರಲ್ಲಿ ರಣದುಲ್ಲಾಖಾನನು ಪ್ರಾಣನಾಥ ಪ್ರಭುಗಳ ಮುಂದೆಬಂದು ನಿಂತುಕೊಂಡು ಹರಕುಮುರಕ ಹಿಂದುಸ್ಥಾನೀ ಭಾಷೆಯಿಂದ— "ಏ ಗೋಸಾವ್ಯಾ! ಇಷ್ಟು ಜನರನ್ನು ಸೇರಿಸಿಕೊಂಡು ನೀನುಇವರಿಗೆ ಯಾವಉಪದೇಶಮಾಡುತ್ತಿ? ದಿಲ್ಲೀ ಪಟೆಯಮೇಲೆ ತಿರುಗಿ ಬೀಳುವದಕ್ಕಾಗಿ ಪ್ರೋತ್ಸಾಹಿಸಲು ಇಷ್ಟು ಜನರನ್ನು ಕೂಡಿಸಿರುತ್ತೀ ಏನು? ದಿಲ್ಲಿಯ ರಾಜಸತ್ತೆಯ ವಿರುದ್ಧವಾಗಿ ಬಂಡಾಯ ಮಾಡಲು ಇವರನ್ನು ಉತ್ತೇಜನ ಗೊಳಿಸುತ್ತೀ ಏನು? ಸಿದ್ಧನಾಗು, ಸಾಯಲಿಕ್ಕೆ ಸಿದ್ಧನಾಗು. ಬಾದಶಹರ ಹಾಗು ಇಸ್ಲಾಮಿಮತದ ಅಪಮಾನಮಾಡುವವನೆಂದು ತಿಳಿದು, ನಿನ್ನ ಇಷ್ಟು ಭಕ್ತಸಮೂಹದ ಮುಂದೆ ನಿನ್ನ ಶಿರಚ್ಛೇದವನ್ನು ಮಾಡುವೆನು, ಎಂದು ನುಡಿದು ರಣದುಲ್ಲಾಖಾನನು ತನ್ನ ಖಡ್ಗದ ತೀಕ್ಷ್ಣಧಾರೆಯ ಕಡೆಗೆ ನೋಡಹತ್ತಿದನು. ಆಗ ಪ್ರಭುಗಳು

ಗಂಭೀರ ವಾಣಿಯಿಂದ—"ಯವನಾ, ಬುಂದೇಲಖಂಡದಲ್ಲಿ ಸ್ವಾತಂತ್ರ್ಯದ ಪ್ರಾಣಪ್ರತಿಷ್ಠಾಪನೆಯನ್ನು ಮಾಡಿದಹೊರತು ಈ ಪ್ರಾಣನಾಥನಿಗೆ ಸಾಯುವ ಇಚ್ಛೆಯಿಲ್ಲ. ಸರಿ ಹಿಂದಕ್ಕೆ, ಮದ್ಯಪಾನಾದಿ ಪಲವು ವ್ಯಸನಗಳ ಹೊಲಸಿನಲ್ಲಿ ಯಾವಾಗಲೂ ಹೊರಳುತ್ತಿರುವ ನಿಮ್ಮಂಥ ಅಮಂಗಲ ಪ್ರಾಣಿಗಳನ್ನು ನಾನು ಮುಟ್ಟುತ್ತಿರುವದಿಲ್ಲ! ಸರಿ, ಅತ್ತ ದೂರ ನಿಂತುಕೊಳ್ಳಿ!

೨೪ನೆಯ ಪ್ರಕರಣ-ಬಿಡದಭಕ್ತಿ.

ಮಹಾತ್ಮರ ಮಹಾಮಹಿಮೆಯ ಅಧಿಕಾರವನ್ಯಾರಿಗೆಯನ್ನು ಯಾರು ತರ್ಕಿಸುವರು? ಪ್ರಾಣನಾಥ ಪ್ರಭುಗಳ ಸತ್ಪಮಯ ವಪ್ಪೋಕ್ತಿಯಿಂದ ರಣದುಲ್ಲಾಖಾನನು ನಿಜವಾಗಿಯೇ ಎರಡುಹೆಜ್ಜೆ ಹಿಂದಕ್ಕೆ ಸರಿದುನಿಂತನು. ಪ್ರಭುಗಳಮೇಲೆ ಏರಿಹೋಗುವ ಧೈರ್ಯವು ಆತನಿಗಾಗಲೊಲ್ಲದು. ಯಾರೋ ಆತನನ್ನು ಹಿಂದಕ್ಕೆ ದೂಡಿದಹಾಗಾಗುತ್ತಿತ್ತು. ಪ್ರಭುಗಳವರ ತೇಜೋಮಂಡಲವನ್ನು ಭೇದಿಸಿ ಆತನು ಹೋಗದಾದನು. ಖಾನನ ತಿಳುವಳಿಕೆಯಂತೆ ಪ್ರಾಣನಾಥ ಪ್ರಭುವು ಒಬ್ಬಗೋಸಾಯಿಯು;ನಿಶ್ಯಸ್ತ್ರನು; ಆತನಲ್ಲಿ ಸಿಟ್ಟುಕೋಪಗಳೇನು ಇಲ್ಲ; ಆತನು ಪ್ರಶಾಂತವಾದ ಮುಖಮುದ್ರೆಯುಳ್ಳವನು. ಆದರೂ ರಣದುಲ್ಲಾಖಾನನು ಪ್ರಭುವಿನಮೇಲೆ ಶಸ್ತ್ರವನ್ನು ಪ್ರಯೋಗಿಸಲು ಸಮರ್ಥನಾಗಲಿಲ್ಲ. ಆತನು ತನ್ನ ಒಬ್ಬ ದಂಡಾಳುವನ್ನು ಕೂರಿತು—"ಎಲೋ ಕಾಸೀಮು, ಈ ಪುಂಡರ ದೇವರನ್ನು ಪುಡಿಪುಡಿಮಾಡುವದಕ್ಕಾಗಿ ಪಿಯಾದಾಖಾನನು ಸೈನ್ಯದೊಡನೆ ಬರುತ್ತಿರುವನು. ಬೇಗನೆ ನನ್ನ ಸಹಾಯಕ್ಕೆ ಬರಬೇಕಾಗಿ ನಾನು ಆಜ್ಞಾಪಿಸಿರುವನೆಂದು ಹೇಳು. ಬುಂದೇಲಖಂಡದೊಳಗಿನ ಜನರ ಮನಸ್ಸಿನಲ್ಲಿ ರಾಜದ್ರೋಹದ ಬೀಜವನ್ನು ಬಿತ್ತುತ್ತಿರುವ ಪ್ರಾಣನಾಥನೆಂಬ ಗೋಸಾವಿಯು ಸಿಕ್ಕಿರುವನೆಂದು ಹೇಳು ಹೋಗು, ಬೇಗನೆ ಹೋಗು. ಏ ಗೋಸಾವ್ಯಾ, ನಿನ್ನ ಈ ತಲೆ[illegible] ಪ್ರಭುಭಕ್ತರಿಗೆ ಇಲ್ಲಿಂದ ಹೊರಟುಹೋಗೆಂದು ಹೇಳು. ಇಲ್ಲದಿದ್ದರೆ [illegible] ಇವರ ನಾಶಮಾಡುವ ಪ್ರಸಂಗವು ನನಗೆ ಬಂದೀತು.

ಪ್ರಭುಗಳು ಖಾನನಿಗೆ ಯಾವ ಉತ್ತರವನ್ನೂ ಕೊಡಲಿಲ್ಲ. ಜನರೂ ಅವರ ಅಪ್ಪಣೆಯಂತೆ ಸುಮ್ಮನೆ ಅಪಮಾನವನ್ನು ಸಹಿಸುತ್ತ ನಿಂತಿದ್ದರು.

ಮುಂದೆ ಸ್ವಲ್ಪಹೊತ್ತಿನಲ್ಲಿಯೇ ಫಿಯಾದಾಖಾನನು ಸೈನ್ಯದೊಡನೆ ಅಲ್ಲಿಗೆ ಬಂದನು. ಆಗ ರಣದುಲ್ಲಾಖಾನನು ಸಿಟ್ಟು ತಡೆಯದೆ ಪ್ರಾಣನಾಥ ಪ್ರಭುಗಳನ್ನು ಕುರಿತು—ಏ ಪ್ರಾಣನಾಥಪ್ರಭು, ರಾಜನಿಷ್ಠ ಬುಂದೇಲಿಗಳ ಮನಸ್ಸನ್ನು ಕೆಡಿಸುತ್ತ, ಅವರ ಮನಸ್ಸಿನಲ್ಲಿ ರಾಜದ್ರೋಹದ ಬೀಜವನ್ನು ಬಿತ್ತುತ್ತ, ಇಸ್ಲಾಮಿಮತದ ಅಪಮಾನವನ್ನು ಮಾಡುತ್ತ ನೀನು ಬುಂದೇಲಖಂಡದಲ್ಲೆಲ್ಲ ಸಂಚರಿಸುತ್ತಿರುವೆಯೆಂದು ಕೇಳುತ್ತೇವೆ. ನಿನ್ನ ಈ ರಾಜಕೀಯ ಸ್ವರೂಪದ ಅಪರಾಧಕ್ಕಾಗಿನಿನಗೆ ದೇಹಾಂತಶಾಸನಮಾಡಲು ನಾನು ನಿಶ್ಚಯಿಸಿರುತ್ತೇನೆ.

ಪ್ರಾಣನಾಥ (ಶಾಂತರಾಗಿ)—ನೀನು ಹೀಗೆಯೇ ನಿಶ್ಚಯಿಸುತ್ತ ಯಾಕೆ ಕಾಲಹರಣಮಾಡುತ್ತೀ? ನಾನು ನಿನಗೆಲಗಲೇ ಹೇಳಬಿಟ್ಟಿರುವೆನು. ಬುಂದೇಲಿಗಳ ಧರ್ಮದಮೇಲೆ ಅಘಾತಮಾಡುವಂಥ, ಬುಂದೇಲಿಗಳ ಸೌಖ್ಯ-ಸದ್ಗುಣ-ಮನುಷ್ಯತ್ವಗಳನ್ನು ಮಣ್ಣುಗೂಡಿಸುವಂಥ ಯವನ ಸತ್ತೆಯನ್ನು ಬುಂದೇಲಖಂಡದಲ್ಲಿ ನಿರ್ಮೂಲಮಾಡಿದ ಹೊರತು ದೇಹಬಿಡುವ ಇಚ್ಛೆಯು ನನಗೆ ಖಂಡಿತವಾಗಿ ಇಲ್ಲ.

ರಣದುಲ್ಲಾಖಾನ—ನಿನ್ನ ಇಚ್ಛೆಯನ್ನು, ನಿನ್ನಂಥ ಕ್ಷುದ್ರಜಂತುವಿನ ಇಚ್ಛೆಯನ್ನು ನಮ್ಮಂತಹ ಸತ್ತಾಧಾರಿಗಳು ಅರೆನಿಮಿಷದಲ್ಲಿ ಹೇಗೆನಿಷ್ಫಲ ಮಾಡುವರೆಂಬದನ್ನು ನೋಡು. ಫಿಯಾದಾಖಾನ, ಏನುನೋಡುತ್ತೀರಿ? ಹಾರಿಸಿರಿ ಹಾರಿಸಿರಿ ಈ ಗೋಸಾವ್ಯಾನ ಚಂದನ್ನು.

ಹೀಗೆ ನುಡಿಯುತ್ತಿರುವದರೊಳಗೆ ಪ್ರಾಣನಾಥ ಪ್ರಭುಗಳು ಧ್ಯಾನಸ್ಥರಾದರು. ಅವರ ಧ್ಯಾನಸ್ಥವಾದ ದಿವ್ಯಮೂರ್ತಿಯ ತೇಜಃಪುಂಜ ಮುಖವನ್ನು ನೋಡಿ ಫಿಯಾದಾಖಾನನಿಗೂ ಅವರಮೇಲೆ ಶಸ್ತ್ರವೆತ್ತುವ ಧೈರ್ಯವಾಗಲೊಲ್ಲದು. ಅವನ ಅವಸ್ಥೆಯೂ ರಣದುಲ್ಲಾಖಾನನಂತೆಯೇ ಆಯಿತು. ಹೀಗೆ ಯಾಕಾಗುವದೆಂಬ ಕಾರಣವು ಇಬ್ಬರು ಖಾನರ ಮನಸ್ಸಿನಲ್ಲಿಯೂ ಬರಲೊಲ್ಲದು. ಆಗ ಫಿಯಾದಾಖಾನನು ತಾನು ಶಸ್ತ್ರವೆತ್ತಲಾರದೆ ತನ್ನ ಕೈಕೆಳಗಿನ ಹೈದರಖಾನನಿಗೆ ಪ್ರಭುವನ್ನು ತುಂಡರಿಸಲು ಆಜ್ಞಾಪಿಸಿದನು. ಹೀಗೆಯೇ ಮುಂದೆ ಹೈದರಖಾನನಿಂದ ರಣಮಸ್ತಖಾನನ ಕಡೆಗೆ, ರಣಮಸ್ತಖಾನನಿಂದ ಮಹಮ್ಮದಖಾನನ ಕಡೆಗೆ, ಬರ

ಬರುತ್ತ ಕೆಳಕೆಳಗಿನ ಅಧಿಕಾರಿಗಳಕಡೆಗೆ ಪ್ರಭುವಿನ ಸಂಹಾರದ ಕಾರ್ಯವು ಒಪ್ಪಿಸುತ್ತಾ ಹೋಯಿತು! ಈಗಂತು ಪ್ರಭುಗಳು ಕಣ್ಣುಮುಚ್ಚಿಕೊಂಡು ಧ್ಯಾನಸ್ಥರಾಗಿ ನಿಂತುಬಿಟ್ಟಿದ್ದರು. ಮಹಮ್ಮದಖಾನನು ತಾನು ಅಪ್ಪಣೆ ಕೊಡಬೇಕೆಂದರೆ, ತನ್ನ ಪೈಕೆಳಗೆ ಯಾರೂ ಇಲ್ಲದಿರುವಾಗ ವಿಚಾರಮಾಡ ತೊಡಗಿದನು. ಧ್ಯಾನಸ್ಥರಾಗಿ ನಿಂತುಬಿಟ್ಟಿರುವ ಪ್ರಾಣನಾಥ ಪ್ರಭುವಿನ ದಿವ್ಯ ಮೂರ್ತಿಯನ್ನು ಸಂಹರಿಸುವಧೈರ್ಯವು ಆತನಿಗೆ ಆಗದಿರಲು, ಆತನು ತನ್ನಮೇಲಿನ ಅಧಿಕಾರಿಯಾದ ರಣಮಸ್ತಖಾನನನ್ನು ಕುರಿತು-"ಖಾವಿಂದ, ತಮ್ಮ ಸವಾರಿಯು ಪ್ರತ್ಯಕ್ಷವಾಗಿರುವಾಗ ಇಂಥ ಪ್ರಸಿದ್ಧ ಕಾಫಿರನ ತಲೆ ಯನ್ನು ನಾನು ಹಾರಿಸುವದೆಂದರೆ, ನಾನಾಗಿಯೇ ಖಾವಿಂದರ ಅಪಮಾನ ಮಾಡಿದಂತಾಗುವದು; ಆದ್ದರಿಂದ ಈ ಕಾಫಿರನಶಿರಚ್ಛೇದಮಾಡುವ ಮಾನವು ತಮಗೇ ಇರತಕ್ಕದ್ದು" ಎಂದು ಹೇಳಿ ಜಾರಿಕೊಂಡನು. ಹೀಗೆಯೇ ಅವ ರವರು ತಮ್ಮತಮ್ಮ ಮೇಲಿನ ಅಧಿಕಾರಿಗಳಿಗೆ ಮಾನವನ್ನು ಅರ್ಪಿಸುತ್ತ ಅರ್ಪಿಸುತ್ತ, ಕಡೆಗೆ ಪ್ರಭುಗಳನ್ನು ಸಂಹರಿಸುವ ಕೆಲಸವು ಮತ್ತೆ ರಣದುಲ್ಲಾ ಖಾನನಪಾಲಿಗೇ ಬಂದಿತು!

ರಣದುಲ್ಲಾಖಾನನು ಕ್ಷಣಮಾತ್ರ ಚಿಂತಿಸುತ್ತ ನಿಂತನು. ಧ್ಯಾನಸ್ಥ ರಾಗಿರುವ ಪ್ರಾಣನಾಥ ಪ್ರಭುಗಳ ಅತರ್ಕ್ಯ ತೇಜಸ್ಸಿನಿಂದ ಹತಪ್ರಭನಾಗಿರುವ ಆತನಿಗೆ, ಪ್ರಭುಗಳ ಮೇಲೆ ಖಡ್ಗವನ್ನು ಪ್ರಯೋಗಿಸಲಿಕ್ಕೆ ಒಮ್ಮೆಲೆ ಧೈರ್ಯ ವಾಗಲೊಲ್ಲದು. ತಾನು ಹಿಂದುಗಳ ಶಿರಚ್ಛೇದಮಾಡುವವರಲ್ಲಿಯೂ, ಅವರ ದೇವಸ್ಥಾನಗಳ ನಾಶಮಾಡುವವರಲ್ಲಿಯೂ ಮಹಾ ನಿಪುಣನೆಂದು ಪ್ರಸಿದ್ಧಿ ಯನ್ನು ಹೊಂದಿರಲು, ಇಂದು ತನ್ನ ಮನಸ್ಸು ಪ್ರಾಣನಾಥನ ಪ್ರಾಣಹರ ಣಕ್ಕೆ ಹಿಂಜರಿಯುವದನ್ನುನೋಡಿ ಆತನಿಗೆ ಬಹಳ ನಾಚಿಕೆಬಂದಿತು. ಆತನು ತನ್ನ ಚಂಚಲಮನಸ್ಸನ್ನು ಸ್ಥಿರಮಾಡಿಕೊಳ್ಳಹತ್ತಿದನು; ಕೆಳದುಟಿಯನ್ನು ಕಸುವಿನಿಂದ ಕಡಕೊಳ್ಳಹತ್ತಿದನು; ಶಕ್ಯವಿದ್ದಮಟ್ಟಿಗೆ ತನ್ನ ಮುಖಮುದ್ರೆ ಯನ್ನು ಉಗ್ರವಾಗಮಾಡತೊಡಗಿದನು. ಆತನು ತನ್ನ ಶರೀರದೊಳಗಿನ ಸರ್ವಶಕ್ತಿಯನ್ನು ಒಟ್ಟುಗೂಡಿಸಿ, ಅಲ್ಲಾನನ್ನು ಸ್ಮರಿಸಿ ಪ್ರಾಣನಾಥ ಪ್ರಭು ವನ್ನು ಸಂಹರಿಸುವದಕ್ಕಾಗಿ ಆವೇಶದಿಂದ ಮುಂದುವರಿದನು. ಪ್ರಾಣನಾಥ ಪ್ರಭುಗಳಂತು ಧ್ಯಾನಸರಾಗಿ ಪರ್ವತದಂತೆ ಸ್ಥಿರವಾಗಿ ನಿಂತುಬಿಟ್ಟಿದ್ದರು.

ಇಂತಹ ಪರಿಸ್ಥಿತಿಯಲ್ಲಿ ಏನುಮಾಡಬೇಕೆಂದು ಓರ್ವಾಪ ನಾಗರಿಕರೆಲ್ಲರು ಸುಮ್ಮನೆ ನಿಂತುಬಿಟ್ಟಿದ್ದರು. ಪ್ರಾಣನಾಥ ಪ್ರಭುಗಳ ಮೇಲೆ ರಣಮಲ್ಲಾ ಖಾನನು ಖಡ್ಗವೆತ್ತಿ ಹಾಕುತ್ತಿರಲು, ಇಲ್ಲಿಯವರೆಗೆ ಒತ್ತಟ್ಟಿಗೆ ಸುಮ್ಮನೆ ನಿಂತಿದ್ದ ಒಬ್ಬ ಸುಂದರ ತರುಣಿಯು ಬಾಣದಂತೆ ಖಾನನ ಬಳಿಗೆ ಬಂದು ಅವನ ಕೈಯನ್ನು ಹಿಡಿದು--

ತರುಣಿ—ರಣಮಲ್ಲಾ ! ಎಂತಹ ಅನ್ಯಾಯವನ್ನು ಮಾಡುತ್ತಿರುವೆಯಲ್ಲ ! ಈ ಮಹಾತ್ಮನು ಯಾವ ತಪ್ಪು ಮಾಡಿರುವನೆಂದು ನೀನು ಈತನನ್ನು ಕೊಲ್ಲಲು ಉದ್ಯೋಗಿಸಿರುತ್ತೀ ? ದಿಲ್ಲೀಪತಿಯ ಸಾಮ್ರಾಜ್ಯದಲ್ಲಿ ಇಂತಹ ಅನ್ಯಾಯಗಳಾಗುತ್ತಿದರೆ, ಆಕಾಶದಲ್ಲಿ ಸಂಚರಿಸುತ್ತಿರುವ ಚಂದ್ರ-ಸೂರ್ಯರು ಈ ಸಾಸಮಯ ಸಾಮ್ರಾಜ್ಯದ ಮೇಲೆ ಪ್ರಕಾಶಿಸಲಾರರು ! ಕೈಯನ್ನು ಹಿಂದಕ್ಕೆ ತೆಗೆದುಕೋ, ಸರಿ ಹಿಂದಕ್ಕೆ !

ತನ್ನ ಕೈಯನ್ನು ಪ್ರಾಣನಾಥ ಪ್ರಭುವೇ ಹಿಡಿದಿರುವನೆಂದು ತಿಳಿದು ರಣದುಲ್ಲಾಖಾನನು ಸಂತಾಪದಿಂದ— ಎಲೇ ಗೋಸಾವ್ಯಾ, ನಮ್ಮಂತಹ ಸತ್ತಾಧಾರಿಗಳು ಮಾಡುವ ಶಿಕ್ಷೆಯನ್ನು ಸುಮ್ಮನೆ ಅನುಭೋಗಿಸುವದನ್ನು ಬಿಟ್ಟು ನಮ್ಮ ಕಾರ್ಯಕ್ಕೆ ವಿಘ್ನವನ್ನುಂಟುಮಾಡುವೆಯಾ? ಪ್ರಾಣಹರಣ ಮಾಡುವ ಬೇರೆಬೇರೆ ಪ್ರಕಾರಗಳಲ್ಲಿ ತೀರ ಸುಲಭವಾದ ರೀತಿಯಿಂದ ನಿನ್ನ ಪ್ರಾಣಹರಣ ಮಾಡಬೇಕೆಂದು ನಾವು ಇರುವಾಗ, ನೀನು ನಮ್ಮ ಉಪಕಾರ ಸ್ಮರಿಸುವದನ್ನು ಬಿಟ್ಟು ನಮ್ಮ ಕೈಹಿಡಿಯುತ್ತೀಯೇನು ?

ತರುಣಿ---ರಣದುಲ್ಲಾ, ನಿನ್ನ ಕೈಯನ್ನು ಈ ಮಹಾತ್ಮನು ಹಿಡಿದಿರಲಿ ನಾನು ಹಿಡಿದಿರುವೆನು. ಅಧಿಕಾರದ ಮದದಿಂದ ಮುಚ್ಚಿಹೋಗಿರುವ ನಿನ್ನ ಕಣ್ಣುಗಳನ್ನು ತೆರೆದು ನೆಟ್ಟಗೆ ನನ್ನನ್ನು ನೋಡು, ಆಂದರೆ ಎಲ್ಲವೂ ನಿನಗೆ ತಿಳಿಯುವದು. ಈ ಮಹಾತ್ಮನನ್ನು ಕೊಲ್ಲುವ ಕಾರಣವೇನು? ಈತನನ್ನು ಕೊಲ್ಲುವದಕ್ಕಾಗಿ ದಿಲ್ಲೀಪತಿಯಿಂದ ನಿನಗೆ ಫರ್ಮಾನವು ಬಂದಿರುತ್ತದೆನು ?

ತರುಣಿಯ ಈ ಮಾತುಗಳನ್ನು ಕೇಳಿ ಸಂತಾಪವು ಹೆಚ್ಚುತ್ತಿರಲು, ರಣದುಲ್ಲಾಖಾನನು ಆಕೆಯನ್ನು ಕುರಿತು—

ರಣದುಲ್ಲಾ— ಪ್ರಾಣನಾಥನನ್ನು ಮೇಲಗಟ್ಟಿ ಬಯಸಿ ನಿರ್ಬುದ್ಧಿಯೋರಿಯೇ, ವ್ಯರ್ಥವಾಗಿ ಯಾಕೆ ಹರಟುತ್ತೀ? ನೀನು ಯಾರಮುಂದೆನಿಂತಿ

ರುತ್ತೀ? ಯಾರ ಕೆಲಸಕ್ಕೆ ಪ್ರತಿಬಂಧವನ್ನುಂಟುಮಾಡುತ್ತೀ? ನೀನುಯಾರ ಸಂಗಡ ಮಾತಾಡುತ್ತೀ ಎಂಬದರ ಎಚ್ಚರವು ನಿನಗಿರುವದೋ? ಇಲ್ಲಿಂದ ತಟ್ಟನೆ ಹೊರಟುಹೋಗು. ಇಲ್ಲವಾದರೆ ಈ ದಿಲ್ಲೀಪತಿಯ ಸರದಾರನು ನಾನು ನಿನ್ನನ್ನು ವಧಿಸದೆ ಬಿಡಲಿಕ್ಕಿಲ್ಲ.

ತರುಣಿ (ನಗುತ್ತ)—ನನ್ನನ್ನು ಕೊಲ್ಲುವ ಸಾಮರ್ಥ್ಯವು ನಿನ್ನಲ್ಲಿ ವದಿಲ್ಲ. ವ್ಯರ್ಥವಾಗಿ ಯಾಕೆ ಡೌಲುತೋರಿಸುತ್ತೀ? ನೆಟ್ಟಗೆ ಕಣ್ಣುತೆರೆದು ನೋಡು; ಅಂದರೆ ನನ್ನ ಪಾದಗಳನ್ನು ಹಿಡಿದುಕೊಳ್ಳುವ ಮನಸ್ಸು ನಿನಗೆ ಆಗುವದು.

ರಣದುಲ್ಲಾ (ಆ ತರುಣಿಯ ಕಡೆಗೆ ನೋಡುತ್ತ)—ಎಲೇ, ಈ ಹುಡುಗಿಗೆ ಹುಚ್ಚುಹಿಡಿದಿರುವ ಹಾಗೆ ತೋರುತ್ತದೆ. ಏ ಹುಚ್ಚುಹುಡುಗೀ, ಬದುಕುವದೆಂದರೇನು, ಸಾಯುವದೆಂದರೇನು ನಿನಗೆ ತಿಳಿಯುತ್ತದೆಯೆ? ನೀನು ಬದುಕಬೇಕೆಂದಿದ್ದರೆ ಬೇಗನೆ ಇಲ್ಲಿಂದ ಹೊರಟುಹೋಗು.

ತರುಣಿ (ಶಾಂತಮನಸ್ಸಿನಿಂದ) — ಇನ್ನೂ ನಿನಗೆ ಎಚ್ಚರಿಕೆಯಾಗಲಿಲ್ಲದೋ? ಇಷ್ಟು ಜನರಲ್ಲಿ ನಾನು ಯಾರೆಂಬದನ್ನು ತಿಳಿಸುವ ಪ್ರಸಂಗ ತರಬೇಡ.

ರಣದುಲ್ಲಾಖಾನ (ಗುರುತು ಹತ್ತದ್ದರಿಂದ)—ಇನ್ನೂ ನೀನು ನಿನ್ನ ಹಟವನ್ನು ಬಿಡುವದಿಲ್ಲವೆ? ನೋಡು, ನಿನ್ನ ಮಹಾತ್ಮನ ಶಿರಃಕಮಲವು ಹಾರುವದನ್ನು ನೋಡು.

ಈಮೇರೆಗೆ ನುಡಿದು ರಣದುಲ್ಲಾಖಾನನು ಖಡ್ಗವೆತ್ತಿ ಪ್ರಭುಗಳನ್ನು ಹೊಡೆಯಹೋಗಲು, ಆಗ ಆ ತರುಣಿಯು ಶಾಂತರೀತಿಯಿಂದ—ಎಲೇ, ಸಮರ್ಕಂದದ ಬೀದಿಯಲ್ಲಿ ಬಿಕ್ಕೆಬೇಡುತ್ತಿದ್ದತಿರುಕನೇ, ಅಪ್ಪನು ನಿನ್ನನ್ನು ಈ ಯೋಗ್ಯತೆಗೆ ಏರಿಸಿದ ಉಪಕಾರವನ್ನು ತೀರಿಸುತ್ತೀ ಏನು? ದಿಲ್ಲಿಯ ಪತಿಯ ಪ್ರೀತಿಯ ಮಗಳು ನಿನ್ನನ್ನು ಆಜ್ಞಾಪಿಸುವಳು, ಒಂದು ಕ್ಷಣದೊಳಗೆ ನಿನ್ನ ಸೊಕ್ಕಿನ ಸೇನೆಯನ್ನು ಕಟ್ಟಿಕೊಂಡು ಈ ದೇವಮಂದಿರದಿಂದ ಹೊರಟುಹೋಗು! ಕಾರಣವಿಲ್ಲದೆ ಪ್ರಾಣನಾಥ ಪ್ರಭುಗಳ ಸಂಹಾರವಾಗಬಾರದೆಂತಲೂ, ಓರಛಾದ ನಾಗರಿಕರ ಧರ್ಮಚ್ಛಲವಾಗಬಾರದೆಂತಲೂ ಈ ಬದ್ರುನ್ನಿಸೆಯ ಮನಃಪೂರ್ವಕವಾದ ಇಚ್ಛೆಯಿರುತ್ತದೆ. ನೋಡು,

ಸೂಕ್ಷ್ಮದೃಷ್ಟಿಯಿಂದ ನೋಡು, ಇನ್ನೂ ಹತ್ತರಬಂದು ನೋಡು, ಅಂದರೆ ಈಕೆಯು ಸಾರ್ವಭೌಮ ಔರಂಗಜೇಬ ಬಾದಶಹನ ಪ್ರಿಯ ಪುತ್ರಿ ಬದ್ರುನ್ನಿಸೆಯಿರುವಳೆಂಬದು ನಿನ್ನ ಲಕ್ಷದಲ್ಲಿ ಬರಬಹುದು!

ಈಗ ರಣದುಲ್ಲಾಖಾನನಿಗೆ ಗುರುತುಹತ್ತಿತು. ಆತನು ನಿಜವಾಗಿಯೇ ಶಹಾಜಾದಿಯ ಚರಣಗಳ ಮೇಲೆ ಮಸ್ತಕವಿಟ್ಟು ಅತ್ಯಂತ ಆರ್ಜವದಿಂದ—

ರಣದುಲ್ಲಾ—ಶಹಾಜಾದೀ, ಈ ಸ್ಥಳದಲ್ಲಿ, ಇಂತಹ ಹೊತ್ತಿನಲ್ಲಿ ಈ ವೇಷದಿಂದ ಹೀಗೆ ಅಕಸ್ಮಾತ್ ನೀವು ಬಂದೀರೆಂಬಕಲ್ಪನೆಯೂ ನನಗೆ ಬಾರದಿರುವದರಿಂದ, ನನ್ನಿಂದ ಹೀಗೆ ಅವಿಚಾರವಾಯಿತು. ನನ್ನನ್ನು ಕ್ಷಮಿಸಬೇಕು.

ಬದ್ರುನ್ನಿಸೆ—ಈ ಮಹಾತ್ಮರನ್ನು ನೀನು ವ್ಯರ್ಥವಾಗಿ ಅಪಮಾನಗೊಳಿಸಿದ್ದಕ್ಕಾಗಿ ನೀನು ಮೊದಲು ಇವರು ನಿಂತಿರುವ ಸ್ಥಳಕ್ಕೆ ನಮಸ್ಕಾರ ಮಾಡು; ಮತ್ತು ಚತುರ್ಭುಜನ ಮಂದಿರವನ್ನು ನಾಶಮಾಡುವದಿಲ್ಲೆಂದು ಆಣೆಮಾಡು; ಅಂದರೆ ನಿನ್ನ ಅವಿಚಾರದ ನಡತೆಗಾಗಿ ನಿನ್ನನ್ನು ಕ್ಷಮಿಸುವೆನು.

ರಣದುಲ್ಲಾಖಾನನು ಬದ್ರುನ್ನಿಸೆಯ ಅಪ್ಪಣೆಯನ್ನು ತಲೆಯಲ್ಲಾಂತು ಮನ್ನಿಸಿದನು. ಆತನು ರಾಜಕುಮಾರಿಗೆ ಕುರ್ನಿಸಾತಮಾಡಿ ತನ್ನ ಯಾವತ್ತು ಸೈನ್ಯದೊಡನೆ ಹೋಗತೊಡಗಿದನು. ಆಗ ಬದ್ರುನ್ನಿಸೆಯು—

"ರಣದುಲ್ಲಾಖಾನ, ಫಿಯಾದಾಖಾನ, ಉಳಿದ ಯವನ ವೀರರೇ, ನೀವು ದಿಲ್ಲೀಪತಿಗೆ ಅಂಕಿತರಾಗಿರುವಿರಿ. ದಿಲ್ಲೀಪತಿಯ ಕೀರ್ತಿಯು ಹೆಚ್ಚುವಂತೆ, ದಿಲ್ಲೀಪತಿಯು ಲೋಕಪ್ರಿಯನಾಗುವಂತೆ ನೀವು ಯಾವಾಗಲೂ ನಡೆಯುತ್ತ ಹೋಗಿರಿ. ನಾವು ಅಧಿಕಾರಿಗಳು, ಸಾರ್ವಭೌಮರು ನಮ್ಮ ಜಾತಿಯವರು ಎಂದು ತಿಳಿದು ಅನ್ಯಾಯದಿಂದ ನಡೆಯುತ್ತ, ಜನರನ್ನು ಬಲಾತ್ಕರಿಸುತ್ತ ನಿಮ್ಮ ಹಿತವನ್ನೇ ನೋಡಿಕೊಳ್ಳಹತ್ತಿದರೆ, ಬೇಗನೆ ನಿಮ್ಮಮೇಲೆ ಹಾಗು ನಿಮ್ಮ ಬಾದಶಹರ ಮೇಲೆ ಪ್ರಜೆಗಳು ಕ್ಷೋಭಿಸಬಹುದು. ಹಿಂದುಸ್ಥಾನದ ಜನರು ಶಾಂತರಾಗಿರುವ ವರೆಗೆ ಒಳ್ಳೇ ಸಹನಶೀಲರಾಗಿರುವರು. ಆದರೆ ತಮ್ಮ, ಹಾಗು ತಮ್ಮ ಧರ್ಮದ ಛಲವಾಗಹತ್ತಿದಾಗ ಒಮ್ಮೆ ಅವರು ಕ್ಷೋಭಿಸಿ ಎಲ್ಲರೂ ಒಟ್ಟಾದರೆ, ದಿಲ್ಲಿಯ ಇಸ್ಲಾಮಿ ಸತ್ತೆಯನ್ನು ಹಾಪಾ

ಅನ್ನವವರೊಳಗಾಗಿ ಬುಡ ಮೇಲುಮಾಡದೆ ಬಿಡಲಿಕ್ಕಿಲ್ಲ; ಆದ್ದರಿಂದ ಸ್ವಲ್ಪ ವಿಚಾರದಿಂದ ನಡೆಸುಕೊಳ್ಳಿರಿ. ಹೋಗಿರಿ, ರಾಜ್ಯಪ್ರೇಮದಿಂದ ಮೊದಲೇ ಕಲಂಕಿತವಾಗಿರುವ ನನ್ನ ತಂದೆಯ ಹೆಸರನ್ನು ಮತ್ತಿಷ್ಟು ಕಲಂಕಯುಕ್ತವಾಗುವಂತೆ ನೀವು ನಡೆದುಕೊಳ್ಳಬೇಡಿರಿ. ನೀವು ಅಧಿಕಾರವಿಲ್ಲದೆ ಯಾವ ಯಾವ ಬಲಾತ್ಕಾರವನ್ನು ಪ್ರಜೆಗಳಮೇಲೆ ಮಾಡುವಿರೋ, ಸ್ವೇಚ್ಛೆಯಿಂದ ನೀವು ಯಾವಯಾವ ಅನ್ಯಾಯವನ್ನು ಮಾಡುವಿರೋ, ನೀವು ಯಾವಯಾವ ಪಾಪಗಳನ್ನು ಸ್ವಚ್ಛಂದವಾಗಿ ಆಚರಿಸುವಿರೋ ಅವೆಲ್ಲವನ್ನು ಮಾಡುವವನೂ, ಮಾಡಿಸುವವನೂ ದಿಲ್ಲೀಪತಿಯೇ ಇರುವನೆಂದು ಎಲ್ಲಕಡೆಗೂಡಂಗುರ ಹೊಡೆದು ಹೋಗುವದು.

ರಣದುಲ್ಲಾಖಾನನೂ, ಫಿಯಾದಾಖಾನನೂ, ಬೇರೆ ಯವನ ವೀರರೂ ತಿರುಗಿ ಮಾತಾಡದೆ ಚತುರ್ಭುಜನ ಮಂದಿರದಿಂದ ಹೊರಟುಹೋದರು. ಚತುರ್ಭುಜನ ಮಂದಿರದ ಸಂರಕ್ಷಣಾಪ್ರ ಹೀಗೆ ಅಕಲ್ಪಿತ ರೀತಿಯಿಂದ ಆದದ್ದಕ್ಕಾಗಿ ಜನರು ಪರಮಾಶ್ಚರ್ಯಪಟ್ಟರು; ಅವರಿಗೆ ಪರಮಾವಧಿ ಆನಂದವಾಯಿತು. ಆ ಆನಂದದ ಭರದಲ್ಲಿ ಅವರು ಔರಂಗಜೇಬ ಬಾದಶಹನ ಮಗಳ ಉಪಕಾರವನ್ನು ನೆನಿಸುತ್ತ, ಆಕೆಯು ಪರಮ ಧನ್ಯಳೆಂದು ಕೊಂಡಾಡಿದರು. ಮಹಾನುಭಾವರಾದ ಪ್ರಾಣನಾಥಪ್ರಭುಗಳ ಭವಿಷ್ಯವು ಎಷ್ಟುಸಲಕ್ಷಣವಾಗಿ ನಿಜವಾಯಿತಲ್ಲ! ಅವರ ಭವಿಷ್ಯದಂತೆ ಛತ್ರಸಾಲನಯೋಗದಿಂದ ಬುಂದೇಲಖಂಡಕ್ಕೆಯಾಕೆ ಸ್ವಾತಂತ್ರ್ಯವು ದೊರೆಯದೆಇದ್ದೀತು! ಪ್ರಾಣನಾಥ ಪ್ರಭುಗಳ ಯೋಗ್ಯತೆಯು ಸಾಮಾನ್ಯವಾದದ್ದಲ್ಲ. ಅಂತಹ ದುಷ್ಟಯವನನೆಂದರೇನು, ಪ್ರಭುಗಳ ಸ್ಪರ್ಶಮಾಡುವಧೈರ್ಯವುಳಿತನಿಗಾಗಲಿಲ್ಲ! ಅಂತಹ ದೇವಾಂಶರು ಬುಂದೇಲಖಂಡದ ಸ್ವಾತಂತ್ರ್ಯಕ್ಕಾಗಿ ಟೊಂಕಕಟ್ಟಿರುವದರಿಂದ, ನಾವು ಸ್ವಾತಂತ್ರ್ಯವನ್ನು ಪಡೆಯುವದೇ ನಿಶ್ಚಯವು. ಎಂಬಿವೇ ಮೊದಲಾದ ವಿಚಾರಗಳಿಂದ ಬುಂದೇಲಿಗಳು ಪ್ರಭುಗಳ ವಿಷಯದಲ್ಲಿ ಅತ್ಯಂತವಾದ ಶ್ರದ್ಧಾಭಕ್ತಿಗಳನ್ನು ತಾಳುತ್ತ ಅವರಆಪ್ಞೆಯಂತೆ ಛತ್ರಸಾಲನಿಗೆ ಸಹಾಯ ಮಾಡಲು ಚತುರ್ಭುಜ ಪರಮಾತ್ಮನ ಸಾಕ್ಷಿಯಿಂದ ಮನಸ್ಸಿನಲ್ಲಿ ನಿಶ್ಚಯಿಸಿದರು. ಈ ಕೆಲಸದಲ್ಲಿ ತಮ್ಮ ದೇಹಪಾತವಾದರೂ ರಣಭೂಮಿಯಿಂದ ಕಾಲುಕಿತ್ತದೆ ಯವನರೊಡನೆ ಕಾದಿ ಅವರುನಮ್ಮ ದೇವಸ್ಥಾನಗಳ ನೆಲಸಮನೂಡಿ

ದ್ವರಸೇಡು ತೀರಿಸಿಕೊಳ್ಳದೆ ಬಿಡಲಿಕ್ಕಿಲ್ಲವೆಂದು ಪ್ರತಿಜ್ಞೆಮಾಡಹತ್ತಿದರು. ಅವರು ಅಂದಿನ ಉಳಿದ ದಿವಸವನ್ನು ಹಬ್ಬದಂತೆ ಮಹೋತ್ಸವದಿಂದ ಕಳೆದು ಉಚ್ಚತರ ಭಕ್ತಿಭಾವದಿಂದ ಚತುರ್ಭುಜನ ಆರಾಧನೆಯನ್ನು ಮಾಡಿದರು; ಬಡಿದಮೊರತು ಭಕ್ತಿಯು ಹುಟ್ಟುವದಿಲ್ಲವೆಂಬ ಮಾತು ಸುಳ್ಳಲ್ಲ!

ಮಹಾಮಹಿಮರಾದ ಪ್ರಾಣನಾಥ ಪ್ರಭುಗಳು ವಿಂಧ್ಯವಾಸಿನಿಯ ಧ್ಯಾನದಲ್ಲಿದ್ದದ್ದರಿಂದ ಮಧ್ಯರಾತ್ರಿಯು ಯಾವಾಗ ಮೀರಿಹೋಯಿತೆಂಬದು ಅವರಿಗೆ ಗೊತ್ತೇ ಆಗಲಿಲ್ಲ! ಅವರು ಧ್ಯಾನವಿಸರ್ಜನೆಮಾಡಿ ಸುತ್ತುಮುತ್ತು ನೋಡುತ್ತಿರಲು, ಭಗವಾನ್ ಸೂರ್ಯನಾರಾಯಣನ ತೀಕ್ಷ್ಣವಾದ ಪ್ರಕಾಶವು ಬಿಸಿಲಾಗಿ, ಚಂದ್ರಮನ ಶೀತಕಿರಣಗಳು ಜಗತ್ತನ್ನು ವ್ಯಾಪಿಸಿರುವವೆಂಬುದು ಅವರಿಗೆ ಗೊತ್ತಾಯಿತು. ಓರಭಾವ ನಾಗರಿಕರು ಜೊತಬುಜೊಗಿದ್ದರು. ಚತುರ್ಭುಜ ಪರಮಾತ್ಮನ ದೇವಾಲಯವು ಇದ್ದಕ್ಕಿದ್ದಹಾಗೆ ಇಲ್ಲವಾಯಿತು. ಒಬ್ಬ ಸುಂದರತರುಣಿಯು ಕೈಜೋಡಿಸಿಕೊಂಡು ತಮ್ಮ ಬಳಿಯಲ್ಲಿ ನಿಂತುಕೊಂಡಿರುವದನ್ನು ಅವರು ನೋಡಿದರು. ಈಕೆಯೇನು ಪ್ರತ್ಯಕ್ಷವಿಂಧ್ಯವಾಸಿನಿಯೋ? ನನ್ನ ಧ್ಯಾನಕ್ಕೆ ಸಂತುಷ್ಟಳಾಗಿ ಈಕೆಯು ಪ್ರತ್ಯಕ್ಷವಾಗಿರಬಹುದೇನು? ಹಾಗಿದ್ದರೆ, ಹೀಗೆ ಕೈಜೋಡಿಸಿಕೊಂಡು ನಿಂತಿರುವ ಕಾರಣವೇನು? ದುಷ್ಟ ರಣದುಲ್ಲಾಖಾನನನ್ನೂ, ಮೊಗಲ ಸೈನ್ಯವನ್ನೂ ಓಡಿಸಿ ಈಕೆಯೇ ಚತುರ್ಭುಜನ ಸಂರಕ್ಷಣವನ್ನು ಮಾಡಿರಬಹುದೇನು, ಎಂದು ಯೋಚಿಸುತ್ತಿರಲು, ಬದ್ರುನ್ನಿಸೆಯು ಪ್ರಭುಗಳ ಚರಣಕ್ಕೆರಗಿ—"ಮಹಾತ್ಮನ್, ಔರಂಗಜೇಬ ಬಾದಶಹನ ಮಗಳಾದ ಬದ್ರುನ್ನಿಸೆಯು ನಮಸ್ಕರಿಸುತ್ತಿರುವಳು, ಆಶೀರ್ವದಿಸಬೇಕು," ಎಂದು ಪ್ರಾರ್ಥಿಸಿದಳು.

——(೦)——

೨೫ನೆಯ ಪ್ರಕರಣ - ಬದ್ರುನ್ನಿಸೆಯ ಭಯಭಕ್ತಿ

ಪ್ರಾಣನಾಥ ಪ್ರಭುಗಳು ಧ್ಯಾನಮಗ್ನರಾದದ್ದರಿಂದ ಅವರಿಗೆ ಬದ್ರುನ್ನಿಸೆಯು ಬಂದ ಸಂಗತಿಯು ಗೊತ್ತಾಗಿದ್ದಿಲ್ಲ. ಈ ಸಜ್ಜನಳೇ ಚತುರ್ಭುಜನ ಮಂದಿರವನ್ನು ಉಳಿಸಿರಬಹುದೆಂದು ತರ್ಕಿಸಿದರು. ಪ್ರತ್ಯಕ್ಷ ಯವನ ಪುತ್ರಿಯು! ಅದನಲ್ಲಿ ಔರಂಗಜೇಬನಂತಹ ಧರ್ಮಮೂಢ ಬಾದಶಹನ ಪುತ್ರಿಯು ಇಂತಹ ಸತ್ಕಾರ್ಯಮಾಡುವದು ಅವರಿಗೆ ಪರಮಾಶ್ಚರ್ಯಕರವಾಗಿ

ತೋರಿತು. ಬದ್ರುನ್ನಿಸೆಯು ಇಷ್ಟುಭಕ್ತಿ-ವಿಶ್ವಾಸಗಳಿಂದ ತಮ್ಮೊಡನೆ ನಡೆದುಕೊಳ್ಳುತ್ತಿರುವದರ ಗೂಢವೂ ಅವರಿಗೆ ತಿಳಿಯಲಿಲ್ಲ; ಆದರೆ ಅವರು ಅತ್ಯಂತ ವಾತ್ಸಲ್ಯದಿಂದ—"ಏಳಮ್ಮಾ, ರಾಜಪುತ್ರೀ, ಏಳು! ಶ್ರೀ ವಿಂಧ್ಯವಾಸಿನಿಯ ಅಪೂರ್ವ ಘಟನೆಯು ನನಗೆ ಏನೂ ತಿಳಿಯದಾಗಿದೆ; ಆದರೆ ಸುಶೀಲೇ, ನಿನ್ನಂತಹ ಯವನ ತರುಣಿಯು ನಮ್ಮಂತಹ ಭಿಕ್ಷುಕರಿಗೆ ವಿನಯದಿಂದ ನಮಿಸುತ್ತಿರುವದನ್ನು ನೋಡಿದರೆ, ಕಲ್ಲಿದ್ದಲಿಯ ಕಣಿಗಳಲ್ಲಿ ರತ್ನಗಳು ದೊರೆಕುತ್ತಿದ್ದದ್ದರ ನೆನಪು ಆಗುತ್ತದೆ! ಬಾದಶಹನ ಹೊಟ್ಟೆಯಲ್ಲಿ ನಿನ್ನಂತಹ ಸದ್ಭಾವದ ಸತ್ಪುತ್ರಿಯು ಹುಟ್ಟಿ ಬರುವದೆಂದರೆ, ಮುಳ್ಳುಗಿಡಗಳ ಅರಣ್ಯದಲ್ಲಿ ಗುಲಾಬಿಯ ಹೂಗಳು ಸಿಗುವಂತೆಯೇ ಸರಿ! ನನಗೆ ನೀನು ಪ್ರತ್ಯಕ್ಷ ಜಗನ್ಮಾತೆ ವಿಂಧ್ಯವಾಸಿನಿಯಂತೆ ತೋರಿದೆ; ನೀನು ಕೈಜೋಡಿಸಿ ನಿಂತುಕೊಂಡಿರದಿದ್ದರೆ, ನನ್ನ ತಾಯಿಯೇ ನಿಂತಿರುವೆಯೆಂದು ನಾನು ನಿನ್ನ ಚರಣಗಳಿಗೆ ಎರಗುತ್ತಿದ್ದೆನು! ಹೇಳು, ನೀನು ಹೀಗೆ ಕೈಜೋಡಿಸಿಕೊಂಡು ನಿಂತು ಎಷ್ಟು ಹೊತ್ತಾಯಿತು!

ಬದ್ರುನ್ನಿಸೆ—ಪ್ರಭುಗಳು ಧ್ಯಾನಸ್ಥರಾದಾಗಿನಿಂದ!

ಪ್ರಭು—ಏನು? ಜನಾನಖಾನೆಯ ವಿಲಾಸದಲ್ಲಿ ಬೆಳೆದಿರುವ ಈ ಪುಷ್ಪವನ್ನು ಬಿಸಿಲು ಚಳಿಗಳಲ್ಲಿ ಹೀಗೆ ಅಖಂಡ ನಾಲ್ಕುಪ್ರಹರ ನಾನು ನಿಲ್ಲಿಸಿದೆನೆ? ಬಾಲೇ ಸುಕುಮಾರಿಯಾದ ಬಾಲೇ, ನಿನ್ನ ಕೋಮಲವಾದ ಚರಣಗಳು ನೋಯುತ್ತಿರಬಹುದು, ಕುಳಿತುಕೊಳ್ಳಮ್ಮಾ! ಇಂಥ ಕಠಿಣ ತಪಶ್ಚರ್ಯದ ಕಾರಣವೇನು ನನಗೆ ಹೇಳು.

ಬದ್ರುನ್ನಿಸೆ (ಕೆಳಗೆ ಕುಳಿತುಕೊಳ್ಳುತ್ತ)—ಪ್ರಭುಗಳೇ, ತಾವು ತ್ರಿಕಾಲಜ್ಞರು, ತಮ್ಮಮುಂದೆ ಹೊಸದಾಗಿ ಯಾವದನ್ನೂ ಹೇಳಲಾಗುವದಿಲ್ಲ; ಆದರೂ ಅಪ್ಪಣೆಯಾದದ್ದರಿಂದ ಹೇಳುವೆನು. ಬುಂದೇಲಖಂಡಕ್ಕೆ ಸ್ವಾತಂತ್ರ್ಯವು ಎಂದು ದೊರೆಯುವದೆಂಬದನ್ನು ತಮ್ಮಮುಖದಿಂದ ಕೇಳಬೇಕೆಂದು ನಾನು ಇಚ್ಛಿಸುವೆನು.

ಪ್ರಭು—ಅಮ್ಮಾ, ನಿಮ್ಮೆಲ್ಲರಂತೆಯೇ ನಾನೊಬ್ಬ ಸಾಮಾನ್ಯ ಮನುಷ್ಯನು. ನನಗೆ ತ್ರಿಕಾಲಜ್ಞಾನವು ಹೇಗಿರಬೇಕು? ಇರಲಿ, ಬುಂದೇಲಖಂಡದ ಒಳರ ಮನಸ್ಸಿನ ಸ್ಥಿತಿಯನ್ನು ನಾನು ನೋಡಿರುವೆನು; ಅದರ

ಮೇಲಿಂದ ನೋಡಿದರೆ, ಬುಂದೇಲಖಂಡವು ಸ್ವತಂತ್ರವಾಗುವ ಕಾಲವು ಸಮೀಪಿಸಿರುವದೆಂಬಂತೆ ನನಗೆ ತೋರುತ್ತದೆ! ಆದರೆ ಬದ್ರುನ್ನಿಸೇ, ಬುಂದೇಲಖಂಡದ ಸ್ವಾತಂತ್ರ್ಯದ ವಿಷಯವಾಗಿ ನೀನು ಇಷ್ಟು ಆತುರಳು ಯಾಕಾಗಿರುವೆ?

ಬದ್ರುನ್ನಿಸೆ—ನನ್ನ ಐಹಿಕ ಆಯುಷ್ಯದ ಸುಖದುಃಖಗಳು ಕೇವಲ ಬುಂದೇಲಖಂಡದ ಸ್ವಾತಂತ್ರ್ಯವನ್ನು ಅವಲಂಬಿಸಿರುವವು; ಆದ್ದರಿಂದ ಪ್ರಭೋ, ನನ್ನಕಣ್ಣಮುಂದೆ ಬುಂದೇಲಖಂಡವು ಸ್ವತಂತ್ರವಾದೀತೇನು?

ಪ್ರಾಣನಾಥಪ್ರಭುಗಳು-ಬುಂದೇಲಖಂಡವು ಅತ್ಯಲ್ಪಕಾಲದಲ್ಲಿ, ಇನ್ನು ನಾಲ್ಕುತಿಂಗಳೊಳಗೆ ಸ್ವಾತಂತ್ರ್ಯದ ಸವಿಯಾದ ಫಲವನ್ನು ಭೋಗಿಸತೊಡಗುವದು! ದಿಲ್ಲೀಪತಿಯು ಬಲಾಢ್ಯನಾಗಿರುವದರಿಂದ, ಆತನು ಬುಂದೇಲಖಂಡದ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲು ಮನಃಪೂರ್ವಕವಾಗಿ ಯತ್ನಿಸಬಹುದು; ಆದರೆ ಒಮ್ಮೆ ಬುಂದೇಲಿಗಳಿಗೆ ಸ್ವಾತಂತ್ರ್ಯವು ಪ್ರಾಪ್ತವಾದರೆ, ಒಮ್ಮೆ ಅವರಿಗೆ ಆ ಸ್ವಾತಂತ್ರ್ಯದಸವಿಯು ಹತ್ತಿದರೆ ತಮ್ಮ ಜನ್ಮಸಿದ್ಧವಾದ ಆ ಹಕ್ಕನ್ನು ಅವರು ಎಂದೂ ಕಳೆದುಕೊಳ್ಳಲಾರರು. ಬುಂದೇಲಖಂಡದ ಜನರ ಮನಸ್ಸಿನ ಸ್ಥಿತಿಗಳು ಈಗ ಬದಲಾಗಿ ಹೋಗಿರುತ್ತವೆ. ಬುಂದೇಲಖಂಡದೊಳಗಿನ ಸರದಾರಪುತ್ರರ, ಹಾಗು ರಾಜಪುತ್ರರ ಮನಸ್ಸುಗಳು ದಲಪತರಾಯನ ಪ್ರಯತ್ನದಿಂದ ಪರಿಶುದ್ಧವಾಗಿಹೋಗಿ, ಬುಂದೇಲಖಂಡದ ಆ ತರುಣವೀರರು ಛತ್ರಸಾಲನಿಗೆ ಯಾವಾಗಸಹಾಯಮಾಡೇವೆಂದು ಹಾತೊರೆಯ ಹತ್ತಿದ್ದಾರೆ. ದಲಪತರಾಯನು ಇಷ್ಟುಹೊತ್ತಿಗೇ ಬರಬೇಕಾಗಿತ್ತು; ಆದರೆ ತಡೆದಕಾರಣವೇನೋ ತಿಳಿಯದು.

ಬದ್ರುನ್ನಿಸೆ (ಆನಂದದಿಂದ)—ಮಹಾರಾಜ, ಯುವರಾಜ ದಲಪತರಾಯರು ಪ್ರಭುಗಳ ದರ್ಶನಕ್ಕಾಗಿ ಇಲ್ಲಿಗೆ ಬರುತ್ತಿರುವದು ನನ್ನನ್ನೇಲಿನ ಪ್ರಭುಗಳ ಕೃಪೆಯ ನಿದರ್ಶನವೇ ಸರಿ.

ಪ್ರಭು—ಹೌದು, ಇಂದು ಅವನು ನನ್ನನ್ನು ಕಾಣತಕ್ಕವನಿರುವನು; ಆದರೆ ಬದ್ರುನ್ನಿಸೇ, ನಿನಗೂ ದಲಪತರಾಯನಿಗೂ ಎಲ್ಲಿಯ ಗುರುತು?

ಬದ್ರುನ್ನಿಸೆ (ಲಜ್ಜೆಯಮೂಲಕ ಮಾತು ಹೊರಡದಿರಲು ಕೆಲಹೊತ್ತು ಸುಮ್ಮನಿದ್ದು)—ಪ್ರಭೋ, ಯುವರಾಜ ದಲಪತರಾಯರ ಗುರುತು ನನಗಿಷ್ಟಷ್ಟು ಈ ತ್ರಿಭುವನದಲ್ಲಿ ಮತ್ತಾರಿಗೂ ಇರಲಿಕ್ಕಿಲ್ಲ.

ಇದನ್ನು ಕೇಳಿ ಪ್ರಾಣನಾಥ ಪ್ರಭುಗಳಿಗೆ ಅತ್ಯಂತ ಆಶ್ಚರ್ಯವಾಯಿತು. ದಳಪತನೆಲ್ಲಿ, ಬದ್ರುನ್ನಿಸೆಯೆಲ್ಲಿ? ಇವರಿಬ್ಬರ ಪರಿಚಯವು ಹೇಗಾಗಿರಬಹುದು, ಎಂದು ಯೋಚಿಸುತ್ತಿರಲು, ದಳಪತರಾಯನು ಬಂದು ಪ್ರಭುಗಳ ಚರಣಕ್ಕೆರಗಿದನು. ಆಗ ಪ್ರಭುಗಳು ಸ್ನೇಹಾಂಕಿತ ಕರಗಳಿಂದ ಯುವರಾಜ ದಳಪತರಾಯನನ್ನು ಎಬ್ಬಿಸುತ್ತ ಆತುರದಿಂದ—"ದಳಪತ, ಈ ನೂತನ ಸುಂದರಿಯ ಗುರುತು ನಿನಗಿರುವದೋ" ಎಂದು ಕೇಳಿದರು. ದಳಪತರಾಯನು ಬದ್ರುನ್ನಿಸೆಯ ಕಡೆಗೆ ನೋಡುತ್ತಿರುವಾಗ ಅವರಿಬ್ಬರ ನೋಟಗಳು ತಾಕಲಾಡಲು, ಇಬ್ಬರಿಗಾನಂದಕ್ಕೆ ಮೇರೆಯಿಲ್ಲದಂತಾಯಿತು. ಆನಂದದ ಭರವು ತಗ್ಗಿದ ಮೇಲೆ ದಳಪತರಾಯನು ಪ್ರಭುಗಳನ್ನು ಕುರಿತು-

ದಳಪತ—ನನಗೆ ಈ ಸುಂದರ ಶಹಾಜಾದಿಯ ಪರಿಚಯವಿದ್ದಷ್ಟು ಈ ತ್ರಿಭುವನದಲ್ಲಿ ಮತ್ತೊಬ್ಬರಿಗೆ ಇರಲಿಕ್ಕಿಲ್ಲ.

ಪ್ರಾಣನಾಥ (ಇಬ್ಬರ ಮಾತಿನ ಮರ್ಮವರಿಯದೆ)— ದಲಪತ, ಇಂತಹ ಸದ್ಗುಣಶಾಲಿನಿಯ ಗುರುತು ಇರುವದು ಮಹದ್ಭಾಗ್ಯವೇ ಸರಿ. ರಣದುಲ್ಲಾಖಾನನಿಂದ ಶ್ರೀಚತುರ್ಭುಜಪರಮಾತ್ಮನ ಮಂದಿರವು ನಾಶವಾಗದೆ ಇಂದು ಉಳಿಯಲಿಕ್ಕೆ ಈ ಶಹಾಜಾದಿಯೇ ಕಾರಣಳಾಗಿರಬಹುದಾಗಿ ತೋರುತ್ತದೆ; ಇಲ್ಲದಿದ್ದರೆ ಆ ದುಷ್ಟ ಯವನನು ಮೊದಲು ನನ್ನನ್ನು ಸಂಹರಿಸಿ, ಆಮೇಲೆ ಚತುರ್ಭುಜ ಪರಮಾತ್ಮನ ಮೂರ್ತಿಯನ್ನು ನಾಶಗೊಳಿಸುತ್ತಿದ್ದನು!

ಹೀಗೆ ನುಡಿಯುತ್ತಿರುವಾಗ ಒಬ್ಬ ಭಾವಿಕನಾವ ನಾಗರಿಕನು ಮುಂದಕ್ಕೆ ಬಂದು ಪ್ರಭುಗಳ ಚರಣಗಳಿಗೆ ವಂದಿಸಿದನು. ಆಗ ಪ್ರಭುಗಳು ಆತನನ್ನು ಎಬ್ಬಿಸುತ್ತಿರಲು, ಆತನು—"ಮಹಾತ್ಮರೇ, ತಾವು ಧ್ಯಾನಸ್ಥರಾಗಿರಲು, ಶಹಾಜಾದಿಯವರು ಒಬ್ಬರೇ ಕೈಜೋಡಿಸಿಕೊಂಡು ನಿಂತಿದ್ದರು. ಬಹುಜನರು ಈ ಕೌತುಕವನ್ನು ನೋಡುತ್ತ ನಿಂತಿದ್ದರೂ, ರಾತ್ರಿಯಾದಾದಂತೆ ಒಬ್ಬೊಬ್ಬರೇ ಹೊರಟುಹೋದರು. ತಮ್ಮ ಜನಾಧಿಯ ಸ್ಥಿತಿಯಲ್ಲಿ ಈ ತರುಣಿಯೊಬ್ಬಳನ್ನೇ ಬಿಟ್ಟು ಹೋಗುವಹಾಗೆ ನನಗೆ ಆಗಲಿಲ್ಲ; ಆದ್ದರಿಂದ ನಾನು, ಅದೋ ಆ ಧರ್ಮಶಾಲೆಯಲ್ಲಿ ಎಚ್ಚರದಿಂದ ಕುಳಿತುಕೊಂಡಿದ್ದೆನು. ಮಹಾತ್ಮನ್, ಈ ರಾಜಪುತ್ರಿಯಿಂದ ಈದಿನ ಆಗಿರುವ ಕೆಲಸವು

ಸಣ್ಣ ಪುಟ್ಟದಲ್ಲ. ಎಂದು ಹೇಳಿ ಶ್ರೀ ಚತುರ್ಭುಜ ಪರಮಾತ್ಮನ ಸಂರಕ್ಷಣವಾದದ್ದನ್ನು ವರ್ಣಿಸಿದನು. ಅದನ್ನುಕೇಳಿ ಪ್ರಭುಗಳುಸಂತೋಷಪಟ್ಟು ಮತ್ತೆ ದಳಪತನನ್ನು ಕುರಿತು—

ಪ್ರಭುಗಳು—ದಳಪತ, ಕೇಳಿದೆಯಾ? ನಾನು ಧ್ಯಾನಸ್ಥನಾದದ್ದರಿಂದ ಈ ಮಾತು ನನಗೆ ಗೊತ್ತಿದ್ದಿಲ್ಲ. ಈ ಬದ್ರುನ್ನಿಸೆಯು ತನ್ನನ್ನು ದಿಲ್ಲೀಪತಿಯ ಮಗಳೆಂದು ಹೇಳಿಕೊಳ್ಳುತ್ತಾಳೆ; ಆದರೆ ಬುಂದೇಲಖಂಡದ ದೊಡ್ಡ ಮನೆತನದಲ್ಲಿ ಹುಟ್ಟಿದಬಾಲೆಯರು ನಾಚುವಂತೆ ಬುಂದೇಲಖಂಡದ ಕಲ್ಯಾಣಕ್ಕಾಗಿ ಈಕೆಯು ಚತುರಪಡುತ್ತಿರುವಳು ಈಕೆಯಪವಿತ್ರ ಸಮ್ಮುಣಗಳ ಕಡೆಗೆ ನೋಡಿದರೆ, ಈಕೆಯು ಸರ್ವಸಾಧಾರಣ ಬಾಲೆಯಾಗಿರದೆ, ಅಸಾಧಾರಣಳಾದ ದೇವಿಯಾಗಿರುವಳೆಂದು ಹೇಳಬೇಕಾಗುವದು! ದಳಪತ, ಬುಂದೇಲಖಂಡದಭಯಂಕರ ಶತ್ರುವಾಗಿರುವ ಔರಂಗಜೇಬನ ಮಗಳು ಈಕೆಯು, ಬುಂದೇಲಖಂಡದ ಸ್ವಾತಂತ್ರ್ಯಪ್ರಾಪ್ತಿಯ ಹಾದಿಯನ್ನು ಆತುರದಿಂದ ನೋಡುತ್ತಿರುವದು ಆಶ್ಚರ್ಯವಲ್ಲವೆ?

ದಲಪತ—ಭಗವನ್, ಈ ಯವನ ಕನ್ಯೆಯು ಯಾವನೊಬ್ಬ ಬುಂದೇಲಿಯ ತರುಣನನ್ನು ಲಗ್ನವಾದರೆ, ಅಪರಾಧವಾಗಬಹುದೇನು?

ಪ್ರಭು—ದಳಪತ, ಈಗಿನ ಯವನ ತರುಣರು ನೈತಿಕವೃಷ್ಟಿಯಿಂದ ಅಧಃಪತನ ಹೊಂದಿರುವದನ್ನು ನೋಡಿದರೆ, ಈ ಪವಿತ್ರ ಮನಸ್ಸಿನ, ಹಾಗು ಮಂಗಲ ವಿಚಾರದ ನಿರತಿಶಯ ಕೋಮಲ ಹೃದಯದ ಬಾಲೆಗೆ ಯವನರಿಂದ ಹೊರತಾದ ತರುಣ ಪತಿಯೇ ಯೋಗ್ಯನಾಗಿ ನನಗೆ ತೋರುವನು.

ಬದ್ರುನ್ನಿಸೆ (ಹರ್ಷನಿರ್ಭರಳಾಗಿ)—ಪ್ರಭೋ, ನನ್ನ ಪ್ರೇಮವನ್ನು ಸ್ವೀಕರಿಸಿ, ನನ್ನನ್ನು ಚರಣದ ದಾಸಿಯಾಗಿ ಮಾಡಿಕೊಳ್ಳಲು ಒಬ್ಬ ಬುಂದೇಲಿ ತರುಣನು ನನಗೆ ವಚನಕೊಟ್ಟು, ತನ್ನ ಆ ವಚನದಂತೆ ಆತನು ನನ್ನನ್ನು ಸ್ವೀಕರಿಸಿದರೆ, ನೀತಿವೃಷ್ಟಿಯಿಂದ ಅಪರಾಧವಾಗಬಹುದೇನು?

ಪ್ರಭು (ಆವೇಶದಿಂದ)—ಬದ್ರುನ್ನಿಸೇ,ನೀನು ಪಾವಿತ್ರ್ಯದ-ಮಾಂಗಲ್ಯದ-ನೀತಿಯ ಮೂರ್ತಿಯಾಗಿರುವದರಿಂದ, ನಿನ್ನ ಪಾಣಿಗ್ರಹಣ ಮಾಡಿದ ದೇವತೆಗಳ ಯೋಗ್ಯತೆಯೂ ಹೆಚ್ಚಬಹುದು; ಅಂದಬಳಿಕ ಮನುಷ್ಯನ ಪಾಡೇನು? ಆದರೆ ಯಾವ ಭಾಗ್ಯಶಾಲಿ ಬುಂದೇಲನು ನಿನ್ನ ಸ್ವರ್ಗೀಯ ಪ್ರೇಮಕ್ಕೆ ಪಾತ್ರನಾಗಿರುವನು?

ಪ್ರಭುಗಳ ಈ ಮಾತುಗಳನ್ನು ಕೇಳಿ ಬದ್ರುನ್ನಿಸೆಯು ನಾಚಿಕೆಯಿಂದ ದಳಪತರಾಯನ ಕಡೆಗೆ ನೋಡತೊಡಗಿದಳು. ಆಗ ಪ್ರಭುಗಳಿಗೆ ವಸ್ತು ಸ್ಥಿತಿಯ ಜ್ಞಾನವಾಗಿ ಅವರಮನಸ್ಸು ವಿಚಾರಮಗ್ನವಾಯಿತು. ಪ್ರಭುಗಳಿಗೆ ಈ ಮಾತಿನ ವಿಚಾರಕ್ಕೆ ತಕ್ಕಷ್ಟು ಅವಕಾಶವು ದೊರೆಯಲೆಂದು ದಲಪತನು ಪ್ರಭುಗಳನ್ನು ಕುರಿತು—

ದಲಪತ—ಪ್ರಭೋ, ಛತ್ರಸಾಲನು ಬೇಗನೆ ಬುಂದೇಲ ಖಂಡಕ್ಕೆ ಬರುವನು. ರಾಜಾ ಜಯಸಿಂಗರ ಸೇನೆಯು ಛತ್ರಸಾಲನ ಪರಾಕ್ರಮದಿಂದ ಜಯಶಾಲಿಯಾಗಿ ದಿಲ್ಲಿಯಕಡೆಗೆತಿರುಗಿತು. ಮಹಾತ್ಮನಾದಶಿವಾಜಿ ಭೋಸಲೆಯನ್ನು ಕಾಣಹೋಗಿದ್ದ ಛತ್ರಸಾಲನು ಬೇಗನೆ ಬುಂದೇಲಖಂಡಕ್ಕೆ ಬರಬಹುದೆಂದು ರಾಜಾ ಜಯಸಿಂಗರು ನನ್ನಮುಂದೆ ಹೇಳಿದರು. ಛತ್ರಸಾಲನು ಬಂದಕೂಡಲೆ ಸ್ವಾತಂತ್ರ್ಯಪ್ರಾಪ್ತಿಗಾಗಿ ಯುದ್ಧವನ್ನು ಆರಂಭಿಸಬೇಕಷ್ಟೆ?

ದಲಪತರಾಯನ ಈ ಮಾತುಗಳನ್ನು ಕೇಳಿ ಪ್ರಾಣನಾಥ ಪ್ರಭುಗಳು ಆನಂದದಿಂದ ತೂಗಾಡಹತ್ತಿದರು. ಕೆಲಹೊತ್ತಿನಮೇಲೆ ಪ್ರಭುಗಳು ಪ್ರಾತಃಸ್ನಾನಕ್ಕಾಗಿ ಬಟವಾನದಿಗೆ ಹೋಗಲು, ಇತ್ತ ದಲಪತರಾಯನು ಬದ್ರುನ್ನಿಸೆಯನ್ನು ಕುರಿತು—

ದಳಪತ (ಪ್ರೇಮಲ ವಾಣಿಯಿಂದ) — ಶಹಾಜಾದಿ ಬದ್ರುನ್ನಿಸೇ, ದಿಲ್ಲಿಯ ಬಾದಶಾಹೀ ಜನಾನಖಾನೆಯೊಳಗಿನ ಸೌಖ್ಯವನ್ನೂ, ವಿಲಾಸವನ್ನೂ ಬಿಟ್ಟುಕೊಟ್ಟು ನೀನು ಬುಂದೇಲಖಂಡಕ್ಕೆ ಯಾವಾಗ ಬಂದೆ?

ಬದ್ರುನ್ನಿಸೆ—ಆದಿವಸ ಯಮುನಾ ತೀರದಲ್ಲಿ ನೀವು ನನ್ನ ಪ್ರೇಮವನ್ನು ಸ್ವೀಕರಿಸಿದಂದಿನಿಂದ ಜನಾನಖಾನೆಯೊಳಗಿನ ಸುಖಗಳೂ, ವಿಲಾಸಗಳೂ ನನಗೆ ಬೇಸರಾದವು. ಸುಖದ ನಿಧಾನವೇ ದೊರೆತ ಬಳಿಕ, ಬಾದಶಹನ ಜನಾನಖಾನೆಯೊಳಗಿನ ಕ್ಷುದ್ರ ಸುಖಗಳಲ್ಲಿ ನನ್ನ ಮನಸ್ಸು ಹೇಗೆ ರಮಿಸಬೇಕು? ನಾನು ತಿರುಗಿ ಜನಾನಖಾನೆಗೆ ಹೋದದ್ದು ಕೇವಲ ಸುಖ-ವಿಲಾಸಗಳನ್ನು ಭೋಗಿಸುವದಕ್ಕಾಗಿಯಲ್ಲ; ನನ್ನ ತಂದೆಯಾದ ಬಾದಶಹರ ಕೃಪಾಪ್ರಸಾದದಿಂದ ಬುಂದೇಲಖಂಡದ ಸ್ವಾತಂತ್ರ್ಯವು ಅನಾಯಾಸವಾಗಿಸಿಕ್ಕರೆ ನೋಡಬೇಕೆಂದು ಹೋದದ್ದು; ಆದರೆ, ಕಡೆಗೆ ನಿರಾಶೆಯ

ಹೊರತು ಫಲವೇನು ದೊರೆಯದಾಗಲು, ಪೌರುಷದಿಂದಲ್ಲದೆ ಸ್ವಾತಂತ್ರ್ಯವು ದೊರೆಯದೆಂದು ತಿಳಿದು, ಪೌರುಷಸಂಪನ್ನರಾದ ತಮ್ಮನ್ನು ಹುಡುಕುತ್ತ ಬುಂದೇಲಖಂಡದಲ್ಲಿ ಸಂಚರಿಸಬೇಕಾಯಿತು!

ದಲಪತ—ಈ ಮಾತನ್ನು ನಾನು ಯಮುನಾ ತೀರದಲ್ಲಿ ನಿನಗೆ ಹೇಳಲಿಲ್ಲವೆಂಬಂತೆ ತೋರುತ್ತದೆ.

ಬದ್ರುನ್ನಿಸೆ—ನೀವು ಹೇಳಿರಲಿ, ಹೇಳಿರದಿರಲಿ, ನಾನು ಬಾದಶಹರನ್ನು ಒಂದು ಮಾತು ಕೇಳದೆ ಬಿಡುವಹಾಗಿದ್ದಿಲ್ಲ; ಯಾಕಂದರೆ ಅಪ್ಪನು ನನ್ನನ್ನು ಬಹಳವಾಗಿ ಪ್ರೀತಿಸುವನು!

ದಲಪತ—ಅಂತಹ ಪ್ರೀತಿಯು ನಿನ್ನ ಇಷ್ಟಾರ್ಥವನ್ನೇಕೆ ಪೂರ್ಣ ಮಾಡಲಿಲ್ಲ?

ಬದ್ರುನ್ನಿಸೆ—ಯುವರಾಜ, ಇನ್ನು ಆಮಾತು ಕಟ್ಟಿಕೊಂಡು ಮಾಡುವದೇನು? ಅವ್ವನೂ, ನಾನೂ ಬಾದಶಹರಿಗೆ ಹೇಳಬಾರದ್ದನ್ನು ಹೇಳಿದೆವು, ಮಾತಾಡಬಾರದ್ದನ್ನು ಮಾತಾಡಿದೆವು. ಕಡೆಗೆ ಅಂತಹ ವಜ್ರಹೃದಯದ ನಮ್ಮತಂದೆಯೂ ತಾಯಿಮುಕ್ಕಳ ಪ್ರಯತ್ನದಿಂದ ಕರಗಿ ಬುಂದೇಲಖಂಡದ ಸ್ವಾತಂತ್ರ್ಯದಾನದ ಫರ್ಮಾನವನ್ನು ಬರೆದನು. ಇನ್ನು ಅದರಮೇಲೆ ಸಹಿ ಸಿಕ್ಕೆಗಳು ಆಗತಕ್ಕವು. ಬಾದಶಹನು ಸಹಿಮಾಡಲು ಲೆಕ್ಕಣಿಕೆಯನ್ನೂ ಎದ್ದಿದನು. ಆದರೆ ಅಷ್ಟರಲ್ಲಿ ನಮ್ಮ ಸೋದರತ್ತೆಯಾದ ದುಷ್ಟ ರೋಷನಾರಳು ರಣದುಲ್ಲಾಖಾನ-ಕಂಚುಕಿರಾಯರೊಡನೆ ಅಲ್ಲಿಗೆ ಬಂದು, ಚಂಪತರಾಯನು ರಣದುಲ್ಲಾಖಾನನನ್ನು ಸೆರೆಯಲ್ಲಿರಿಸಿದ ಸುದ್ದಿಯನ್ನು ಹೇಳಲು, ಅಪ್ಪನು ಸಿಟ್ಟಿನಿಂದ ಎಚ್ಚರದಪ್ಪಿ ಸಂತಾಪದ ಭರದಲ್ಲಿ ಸ್ವಾತಂತ್ರ್ಯದ ಫರ್ಮಾನವನ್ನು ಹರಿದು ಚೂರುಚೂರು ಮಾಡಿದನು! ಮುಂದೆ ಅತನು ಹಾಗೇ ದರ್ಬಾರಕ್ಕೆ ಹೋಗಲು, ನಾನು ಅದೇದಿನ ಜನಾನಖಾನೆಯನ್ನು ಬಿಟ್ಟು ಬುಂದೇಲಖಂಡಕ್ಕೆ ಬರುವದಕ್ಕಾಗಿ ಹೊರಟೆನು!

ದಲಪತ (ಪ್ರೇಮಾರ್ದ್ರ ದೃಷ್ಟಿಯಿಂದ)— ಪ್ರಿಯ ಬದ್ರುನ್ನಿಸೆ, ನಿನ್ನಲ್ಲಿ ಸದ್ಗುಣ-ಸೌಂದರ್ಯಗಳೆರಡೂ ಕೂಡಿರುವದು, ಬಂಗಾರಕ್ಕೆ ಸುಗಂಧ ಉಂಟಾಗುವ ಅಪೂರ್ವ ಸಂಗತಿಯನ್ನು ಶಕ್ಯವಾಗಿ ಮಾಡಿ ತೋರಿಸಿದಂತಾಗಿರುತ್ತದೆ! ನೀನು ಸ್ವಲ್ಪವೂ ಹತಾಶಳಾಗಬೇಡ. ಬುಂದೇಲಖಂಡವು ಸ್ವತಂ

ತ್ರವಾಗುವ ಕಾಲವು ತೀರ ಸನಿಯಕ್ಕೆ ಬಂದಿದೆ. ಛತ್ರಸಾಲನು ಬಂದಕೂಡಲೆ ಪ್ರತಿಒಬ್ಬ ಬುಂದೇಲನು ಸ್ವಾತಂತ್ರ್ಯಕ್ಕಾಗಿ ಶಸ್ತ್ರವನ್ನು ಹಿರಿಯುವನು. ಸ್ವಲ್ಪ ಕಾಲದಲ್ಲಿಯೇ ಯವನ ಸೇನೆಯನ್ನು ಬುಂದೇಲಖಂಡದಿಂದ ಓಡಿಸುವೆವು!

ಬಮ್ರುನ್ನಿಸೆ (ಪ್ರೇಮದಿಂದ)—ಆಮೇಲೆ?

ದಲಪತ (ಅಷ್ಟೇ ಪ್ರೇಮದಿಂದ)— ಆಮೇಲೆ ದಲಪತನು ಬಮ್ರುನ್ನಿಸೆಯವನೇ ಆಗಿರುವನು!

೨೬ನೆಯ ಪ್ರಕರಣ-ಶಿವರಾಯನು

ಮಹಾರಾಷ್ಟ್ರದೊಳಗಿನ ಘೋಮಾನದಿಯ ತೀರದ್ದೊಂದು ಹಳ್ಳಿಯು. ಆ ಹಳ್ಳಿಯ ಗೌಡನು ನಿಂಬಾಜಿ ಎಂಬ ಹೆಸರಿನ ಮರಾಟನು. ಆತನು ತನ್ನಲ್ಲಿಗೆ ಅತಿಥಿನಾಗಿ ಬಂದಿರುವ ಛತ್ರಸಾಲನೊಡನೆ ಶಿವರಾಯನ ದರ್ಶನಕ್ಕಾಗಿ ಹೊರಟಿದ್ದನು. ಅವರು ಸ್ವಲ್ಪ ದೂರ ಹೋಗುವದರೊಳಗೆ ಒಬ್ಬ ಗಂಭೀರ ಪುರುಷನು ಒಂದು ಚಿಕ್ಕಮಗುವನ್ನು ಕರಕೊಂಡು ಅವರೆದುರಿಗೆ ಬಂದನು. ತಲೆಗೆ ಸುತ್ತಿದ್ದ ಪೇಟಾದಿಂದ ತೊಟ್ಟುಕೊಂಡಿದ್ದ ಚಣ್ಣದವರೆಗೆ ಆತನ ಎಲ್ಲ ವಸ್ತ್ರಗಳೂ ತೊಯ್ದುಹೋಗಿದ್ದವು. ತೊಯ್ದ ವಸ್ತ್ರಗಳಲ್ಲಿಆತನ ಗರತೀಮನೆಯಾಡಿದ ಮುರಿಯ ಮೈಕಟ್ಟು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಆತನು ಒಂದು ಕೈಯಲ್ಲಿ ಖಡ್ಗವನ್ನು ಹಿಡಿದಿದ್ದನು. ಒಂದುಕೈಯಿಂದ ನಿಂಬಾಜಿ ಪಾಟೇಲನ ಮಗಳಾದ "ಸುಭಿ" ಎಂಬ ಎಂಟುವರ್ಷದ ಹುಡುಗಿಯಕೈಬೆರಳನ್ನು ಹಿಡಿದುಕೊಂಡಿದ್ದನು. ಆತನಿಗಿದ್ದಕಿರಿಗಡ್ಡಗಳಿಂದಆತನ ಗದ್ದವೆಲ್ಲ ಮುಚ್ಚಿಹೋದದ್ದರಿಂದ ಆತನ ಮೋರೆಯು ಬಹು ಗಂಭೀರವಾಗಿ ತೋರುತ್ತಿತ್ತು. ಆ ತೇಜಸ್ವಿಯನ್ನು ನೋಡಿದಕೂಡಲೆ ಆ ಹಳ್ಳಿಯ ಜನರು ಆನಂದದಿಂದ ಮೈಮರೆತರು. ಈ ಮಹಾತ್ಮನು ಅಕಸ್ಮಾತ್ ಹೇಗೆ ಬಂದನೆಂದು ಅವರು ಆಶ್ಚರ್ಯಪಟ್ಟರು. ಕೂಡಲೆ ಅವರ ಮುಖದಿಂದ "ಶಿವರಾಯರಿಗೆ ಜಯವಾಗಲಿ" ಎಂಬ ಜಯಧ್ವನಿಯು ಹೊರಬಿದ್ದಿತು.

ಹೀಗೆ ಶಿವರಾಯನ ಹೆಸರಿನಿಂದ ಜಯಧ್ವನಿಯಾದಕೂಡಲೆ ಛತ್ರಸಾಲನಿಗೆಪರಮಾನಂದವಾಗಿ, ಹರ್ಷದಭರದಿಂದವೈಲಿತಮೇಲಿನಕೂದಲುಗಳು

ನೆಟ್ಟಗಾದವು. ತಾನು ಇಷ್ಟು ಆಯಾಸಪಟ್ಟು ಬಂದದ್ದು ಸಾರ್ಥಕವಾಯಿತೆಂದು ಆತನು ಭಾವಿಸಿದನು. ಆ ಮಹಾಪುರುಷನ ದರ್ಶನದಿಂದ ಆತನ ಮಾರ್ಗಾಯಾಸವೆಲ್ಲ ದೂರವಾಯಿತು. ಆತನು ಶಿವರಾಯನ ಬಳಿಗೆಹೋಗಿ, ವಿಮಲ ಭಕ್ತಿಭಾವದಿಂದ ಆತನ ಚರಣಕ್ಕೆರಗಿದನು. ಹೀಗೆ ಅಪರಿಚಿತವೇಷದವನೂ, ಅಪರಿಚಿತ ಭಾಷೆಯವನೂ,ಅಪರಿಚಿತ ಮುಖಮುದ್ರೆಯವನೂ ಆದ ಆ ತರುಣನುತನ್ನ ಚರಣಗಳನ್ನು ಪ್ರೇಮಪುರಸ್ಸರವಾಗಿ ಹಿಡಿದುಕೊಳ್ಳಲು, ಈತನೇ ಛತ್ರಸಾಲನೆಂದು ಭಾವಿಸುವಾಗ, ಶಿವರಾಯನಕಂಠವು ಸದ್ಗದಿತವಾಯಿತು! ಆ ಮಹಾರಾಷ್ಟ್ರಭೂಪತಿಯು ಕಂಪಿತಸ್ವರದಿಂದ—"ಯುವರಾಜ ಛತ್ರಸಾಲ,ನೀನೂನಾನೂ ಭಾರತಮಾತೆಯ ಮಕ್ಕಳೇ ಇರುವೆವು. ಜಗದಂಬೆಯಾದ ಭವಾನಿಯ, ಹಾಗು ಭಾರತಮಾತೆಯ ಪ್ರೇಮಸ್ಪದವಾದ ಮಕ್ಕಳ ಮೇಲೆಯೂ ಸರಿಯಾಗಿಯೇ ಇರುವದು. ಅಂದಬಳಿಕ ನಾವಿಬ್ಬರೂ ಬಂಧುಗಳಾಗಿರಲು, ಇಷ್ಟು ನಮ್ರಭಾವದಿಂದ ನನ್ನಚರಣಗಳಿಗೆ ನೀನು ವಂದಿಸುವದೇಕೆ? ಏಳು, ಬಂಧುಪ್ರೇಮದಿಂದ ನನಗೆ ಆಲಿಂಗನವನ್ನು ಕೊಡು," ಎಂದು ಆತನನ್ನು ಎಬ್ಬಿಸಿ ಪ್ರೇಮಭರದಿಂದ ಆತನನ್ನು ಅಪ್ಪಿಕೊಂಡನು! ಛತ್ರಸಾಲನ ತಂದೆಯಾದಚಂಪತರಾಯನವೀರವೃತ್ತಿಯನ್ನೂ,ಸ್ವಾತಂತ್ರ್ಯಾಭಿಮಾನವನ್ನೂ ಶಿವರಾಯನು ಕೇಳಿ ಅರಿತಿದ್ದನು. ಅಂತಹ ಪುಣ್ಯವಂತ ಸ್ವಾಭಿಮಾನಿಯಸತ್ಪುತ್ರನು ತನ್ನ ಚರಣಕ್ಕೆರಗಿದ್ದರಿಂದ ಶಿವರಾಯನ ನೇತ್ರಗಳು ಆಶ್ರುಪೂರ್ಣವಾದವು. ಅತ್ತ ಛತ್ರಸಾಲನು ತನ್ನ ಕಣ್ಣೀರುಗಳನ್ನು ಒರಿಸಿಕೊಳ್ಳುತ್ತ—"ಎಲೈ ಸ್ವಾತಂತ್ರ್ಯಚಕ್ರಾಗುರುವೇ, ನಿನ್ನನ್ನು ಶಿವಾಂಶಸಂತಲೂ, ನಿನ್ನೂಡನೆ ಭವಾನಿಯುಮಾತಾಡುವಳೆಂತಲೂ ಲೋಕವಾರ್ತೆಯಿಂದ ನಾನು ಕೇಳಿರುವೆನು! ಆದರೆ ನನ್ನನ್ನು ನೋಡಿದ ಮಾತ್ರದಿಂದ, ನೀನು "ಛತ್ರಸಾಲ" ಎಂದು ಪಾಮರನಾದ ನನ್ನನ್ನು ಗುರುತಿಸಿ ಕರೆದು ಬಿಟ್ಟೆಯಲ್ಲ! ಪ್ರಭೂ, ನಾನೆಲ್ಲಿಯವನು, ನೀನೆಲ್ಲಿಯವನು? ನನ್ನ ಗುರುತು ನಿನಗೆಲ್ಲಿ? ಈ ಅಬಳಿಕ ಜನವಾರ್ತೆಯು ಲೇಶವೂ ಅಸತ್ಯವಾದದ್ದೆಂದು ನಾನು ಭಾವಿಸುವಟ್ಟು; ನೀನು ಶಿವಾಂಶನಿರುವೆ, ಜಗದಂಬೆಯು ನಿನ್ನ ಸಂಗಡ ಮಾತಾಡುವದು ಸತ್ಯವೇ! ಸಮರ್ಥ ರಾಮದಾಸರ ಶಿಷ್ಯನು ನೀನು ಇಷ್ಟು ಮಹಿಮಾಶಾಲಿಯು ಆಗದೆ ಹೇಗೆ ಇದ್ದೀ! ಈ ಕುಮಾರ ಛತ್ರಸಾಲನನ್ನು ಆಶೀರ್ವ

ದಿಸಿ ಕೃತಾರ್ಥನಾಗಮಾಡು! ಮಹಾತ್ಮನ್, ನಿನ್ನನ್ನು ಕಾಣುವ ಇಚ್ಛೆಯಿಂದ ಬುಂದೇಲಖಂಡದಿಂದ ಪೊರಟು ಇಲ್ಲಿಗೆ ಬಂದೆನು. ಇಷ್ಟುದಿವಸದ ಪ್ರಯಾಸವು. ಇಂದು ನನಗೆ ಫಲಿಸಿತು! ಬುಂದೇಲಖಂಡದ ಸ್ವಾತಂತ್ರ್ಯವನ್ನು ಸಂಪಾದಿಸುವದಕ್ಕಾಗಿ ನನ್ನ ತಂದೆಯಾದ ಚಂಪತರಾಯನ ಅಂತ್ಯಕಾಲದ ಆಪ್ಪಣೆಯಂತೆ ನಾನು ನಿನ್ನ ಶಿಷ್ಯನಾಗಬೇಕಾಗಿರುವದು; ಆದ್ದರಿಂದ ಸನ್ಯಾಸಿಯೇ ಸದ್ಗುರೋ, ನನ್ನನ್ನು ನಿನ್ನ ಸಂಗಡ ಕರೆದುಕೊಂಡು ಹೋಗು; ನನ್ನ ಸೇವೆಯನ್ನು ಸ್ವೀಕರಿಸು; ನಿನ್ನ ಸ್ವಾತಂತ್ರ್ಯದಕಾರ್ಯಗಳನ್ನು ನನ್ನ ಕಣ್ಣಿಗೆ ಹಾಕು; ನಿನ್ನ ದಿನದ ನಡತೆಯನ್ನು ನನ್ನ ಹೃದಯದಲ್ಲಿ ಮಾಡಿಸು! ಸದ್ಗುರೋ, ಪೆಚ್ಚಿಗೆ ಏನು ಬೇಡಿಕೊಳ್ಳಲಿ? ನಿನ್ನ ಉಪದೇಶವನ್ನು ಗ್ರಹಿಸುವ ಪಾತ್ರತೆಯನ್ನು ಈ ದಾಸನಲ್ಲಿ ಉಂಟುಮಾಡಿ, ಕಡೆಗೆ ಗುರುಮಂತ್ರವನ್ನು ಉಪದೇಶಿಸಿ, ಬುಂದೇಲಖಂಡದ ಸ್ವಾತಂತ್ರ್ಯವನ್ನು ಈ ಛತ್ರಸಾಲನು ತಿರುಗಿ ಸಂಪಾದಿಸುವಂತೆ ಈತನನ್ನು ಆಶೀರ್ವದಿಸು.

ಛತ್ರಸಾಲನ ಸರಳ ಹೃದಯದ ಈ ಮಾತುಗಳನ್ನು ಕೇಳಿ ಶಿವರಾಯನ ಕಣ್ಣುಗಳೊಳಗಿಂದ ಪ್ರೇಮಾಶ್ರುಗಳು ಒಂದೇಸವನೆ ಸುರಿಯಹತ್ತಿದವು. ಆತನು ಸುಭಿಯ ಕೈಬೆರಳನ್ನು ಬಿಟ್ಟು ಛತ್ರಸಾಲನ ಹೆಗಲಮೇಲೆ ಕೈಯನ್ನಿಟ್ಟು ಪ್ರೇಮನಿರ್ಭರ ಸ್ವರದಿಂದ — "ಜನ್ಮ ಭೂಮಿಯ ಸೇವೆಯನ್ನು ಇಷ್ಟು ಆಸಕ್ತಿಯಿಂದ ಮಾಡುವ ಭಾಗ್ಯಶಾಲಿಯಾದ ತರುಣನೇ, ಈ ಮಹಾರಾಷ್ಟ್ರದಲ್ಲಿ ನಾನು ನಿನ್ನ ಸ್ವಾಗತ ಮಾಡುವೆನು. ಸಮಾನಧರ್ಮದ ಮಿತ್ರನೊಬ್ಬನು ದೊರೆತದ್ದಕ್ಕಾಗಿ ನನಗೆ ಬಹಳ ಸಂತೋಷವಾಗಿರುತ್ತದೆ. ನಿಲ್ಲು, ಕ್ಷಣಮಾತ್ರ ಇಲ್ಲಿಯೇ ನಿಲ್ಲು. ಈ ದಿಟ್ಟ ಹುಡುಗೆಯನ್ನು ಗೌಡನಿಗೆ ಒಪ್ಪಿಸಿ ಇಲ್ಲಿಯ ಜನರಿಗೆ ಹೇಳಿ ಈಗ ತಿರುಗಿ ಬರುವೆನು. ಛತ್ರಸಾಲ, ನಿನ್ನ ಸಂಗಡ ಏಕಾಂತದಲ್ಲಿ ಯಾವಾಗ ಮಾತಾಡೇನೆನ್ನುವಹಾಗೆ ಆಗಿದೆ," ಎಂದು ಹೇಳಿ, ಶಿವಾಜಿಯು ನಿಂಬಾಜಿಪಾಟೀಲನೊಡನೆ ಆತನ ಮನೆಗೆ ಹೋಗಿ, ಆತನನ್ನು ಕುರಿತು—"ಪಾಟೀಲ, ಈಕೆಯು ನಿಮ್ಮ ಸುಭಿಯು! ಭೀಮೆಯಲ್ಲಿ ಅಕಸ್ಮಾತ್ ಬಿದ್ದು ಮುಣುಗುತ್ತಿರಲು ತೆಗೆದೆನು. ಹುಡುಗಿ ಬಲುದಿಟ್ಟಿ! ಅಹಮ್ಮದನಗರದ' ಚಾಂದಬೀಬಿಯಂತೆ ಈಕೆಯು ಕತ್ತಿಯನ್ನು ಝಳಪಿಸಲಿಕ್ಕೆ ಹಿಂದೆಮುಂದೆ ನೋಡುವಹಾಗಿಲ್ಲ!

ಇಂತಹ ದಿಟ್ಟಪೆಡುಗೆಯ ತಂದೆಯು ನೀನು! ದಿಲೀರಖಾನ, ಜಯಸಿಂಗ ಎಂಬ ಇಬ್ಬರು ಬಾದಶಹನ ಸರದಾರರು ಪ್ರಬಲ ಸೈನ್ಯದೊಡನೆ ಮಹಾ ರಾಷ್ಟ್ರವನ್ನು ಮುತ್ತತಕ್ಕವರಿರುತ್ತಾರೆ. ಆಗ ನೀವು ತೀರಕಡಿಮೆಯೆಂದರೆ ನೂರುಜನ ಶೂರರೊಡನೆ ಭಗವಾಧ್ವಜವಾ ನಿಶಾನೆಯ ನೆರಳಿಗೆ ಬರಲೇ ಬೇಕು!

ಲಿಂಬಾಜಿ—ಖಡ್ಗ ಧರಿಸಲು ಸಮರ್ಥರಾಗಿರುವ ನನ್ನ ಶೂರ ಮರಾಟ ರೆಲ್ಲ ಮಹಾರಾಜರು ಹೇಳಿದ ಕೆಲಸವನ್ನು ಮಾಡಲಿಕ್ಕೆ ಸಿದ್ಧರಾಗಿರುವರು. ಮಹಾರಾಜರ ಬಾಯಿಂದ ಹೊರಡುವ ಪ್ರತಿಒಂದು ಶಬ್ದವನ್ನು ಜಗನ್ಮಾತೆ ಯಾದ ಭವಾನಿಯು ಉಚ್ಚರಿಸುತ್ತಿರುವಳೆಂದು ನಮ್ಮೆಲ್ಲರ ನಂಬಿಕೆಯಾಗಿರು ವದು. ಮನುಷ್ಯರ ಅಪ್ಪಣೆಯನ್ನು ಒಂದೊಂದುವೇಳೆ ಮೀರಬಹುದು; ಆದರೆ ಶ್ರೀ ಭವಾನಿಯ ಅಪ್ಪಣೆಯನ್ನು ಮೀರುವಂತಹ ನೀಚನು ಇಡಿಯ ದೇಶದಲ್ಲಿ ಯಾವನಾದರೂ ಇರುವನೆಂಬಹಾಗೆ ನನಗೆ ತೋರುವದಿಲ್ಲ. ಮಹಾ ರಾಜ, ಒದ್ದೆಗಳನ್ನು ಬಿಟ್ಟು ಈ ಒಣ ವಸ್ತ್ರಗಳನ್ನು ಧರಿಸಬೇಕು!

ಪಾಟೀಲನ ಮಾತಿಗೆ ಸ್ವಲ್ಪವೂ ಹಿಂದೆಮುಂದೆ ನೋಡದೆ,ಶಿವರಾಯನು ಆತನು ಕೊಟ್ಟ ವಸ್ತ್ರಗಳನ್ನು ಸ್ವೀಕರಿಸಿದನು. ಅದನ್ನು ನೋಡಿ ಲಿಂಬಾಜಿ ಪಾಟೀಲನು ಆನಂದದಿಂದ—

ಲಿಂಬಾಜಿ— ಬಡವರ ಆಧಾರವು, ಅನಾಥರ ರಕ್ಷಕನು, ದುಷ್ಟರ ಯಮನು, ಗೋ ಬ್ರಾಹ್ಮಣ ಪ್ರತಿಪಾಲಕನು ಎಂದು ಮಹಾರಾಜರಪ್ರಸಿದ್ಧಿ ಇರುವದು ಸುಮ್ಮನೆಯಲ್ಲ! ಮಹಾರಾಜರ ಪಾದಧೂಲಿಯು ನನ್ನ ಮನೆ ಯಲ್ಲಿ ಬಿದ್ದದ್ದು ನನ್ನ ಮಹದ್ಭಾಗ್ಯವೇ ಸರಿ! ಮಹಾರಾಜ, ತಮ್ಮಪಂಗ್ತಿ ಲಾಭವು ನನಗೆ ಆಗಬಹುದೋ? ತಮ್ಮ ಪಂಗ್ತಿಲಾಭವನ್ನು ಪಡೆಯುವಷ್ಟು ನಾನು ಭಾಗ್ಯಶಾಲಿಯು ಇರುವೆನೆಯೆ?

ಶಿವಾಜಿ—ಪಾಟೀಲ, ನಾನು ನಿಮ್ಮವನಿರುವೆನು, ಇಡಿಯ ಮಹಾ ರಾಷ್ಟ್ರದವನಿರುವೆನು! ಅಂದಬಳಿಕ ನಿಮ್ಮ ಮನಸ್ಸು ನೋಯುವಂತಹ ಕೆಲ ಸವು ನನ್ನಿಂದ ಹೇಗಾದೀತು? ನಾನು ನಾಲ್ಕಾರುತಾಸು ನಿಮ್ಮ ಈ ಬುಂದೇ ಲಖಂಡದ ತರುಣನೊಡನೆ ಒಂದು ಮಹತ್ವದ ಕೆಲಸಕ್ಕಾಗಿ ಹೊರಗೆಹೋಗಿ ಬರಬೇಕಾಗಿದೆ. ಆರುತಾಸಿನೊಳಗಾಗಿಯೇ ನಾವು ಇಲ್ಲಿಗೆ ಬಂದು ನಿಮ್ಮ

ಇಚ್ಛೆಯಂತೆ ಇಲ್ಲಿಯೇ ಸುಭಿಯ ಮನೆಯಲ್ಲಿ ಊಟಮಾಡೋಣ. ಸುಭೀ ! ನಿನಗೆ ಅಡಿಗೆಮಾಡಲಿಕ್ಕೆ ಬರುತ್ತದಷ್ಟೆ ?

ಸುಭಿ—" ನನಗೆ ಬರುವದಿಲ್ಲ ! ನಾನೇಕೆ ? ಅವ್ವನು ಇರುತ್ತಾಳಲ್ಲ ಅಡಿಗೆ ಮಾಡಲಿಕ್ಕೆ " ಎಂದು ಹೇಳುತ್ತ ಅವ್ವನ ಬಳಿಗೆ ಓಡಿಹೋದಳು! ಆಗ ಶಿವಾಜಿಯು ಎಲ್ಲರ ರಾಮ ರಾಮನ್ನು ಅತ್ಯಾದರದಿಂದ ಸ್ವೀಕರಿಸುತ್ತ, ಛತ್ರ ಸಾಲನೊಡನೆ ಅಲ್ಲಿಂದ ಹೊರಡಲು ಸಿದ್ಧನಾಗಲು, ಲಿಂಬಾಜಿಯು-"ಮಹಾ ರಾಜ, ಈ ತರುಣನಾದ ಬುಂದೇಲನು ನಿನ್ನೆ ಸಂಜೆಗೆ ಇಲ್ಲಿಗೆ ಬಂದನು. ಆತನು ತನ್ನ ಸವಿಮಾತುಗಳಿಂದಲೂ, ಪವಿತ್ರವಾದ ಆಚರಣೆಯಿಂದಲೂ, ದೈವೀ ಭಕ್ತಿಯಿಂದಲೂ ನಮ್ಮವನಾಗಿಹೋಗಿರುತ್ತಾನೆ. ತಮ್ಮನ್ನು ಕಾಣಿ ಬೇಕೆಂಬ ಆತುರದಲ್ಲಿ ಆತನು ಇಡಿಯ ರಾತ್ರಿ ಕಣ್ಣಿಗೆಕಣ್ಣು ಹಚ್ಚಿರುನ ದಿಲ್ಲ. ನಾನು ಆತನನ್ನು ನಿಮ್ಮ ದರ್ಶನಕ್ಕಾಗಿ ಕರಕೊಂಡು ಒರುತ್ತಿದ್ದೆನು; ಆದರೆ ಮಹಾರಾಜರ ಕೃಪಾ ಪ್ರಸಾದದಿಂದ ನನ್ನ ಸುಭಿಯು ಬದುಕಿದಳು ; ಈ ತರುಣ ಬುಂದೇಲನಿಗೂ ಅಕಲ್ಪಿತವಾಗಿ ಮಹಾರಾಜರ ದರ್ಶನವಾದಂ ತಾಯಿತು !

ಪುನಃ ಶಿವಾಜಿಯ ಜಯಘೋಷವಾಯಿತು. ಆ ಜಯಧ್ವನಿಯು ಅಡ ಗುವದರೊಳಗಾಗಿಯೇ ಶಿವಾಜಿಯು ಛತ್ರಸಾಲನೊಡನೆ ಅಲ್ಲಿಂದ ಹೊರಟು ಹೋಗಿದ್ದನು. ಮಹಾರಾಜರು ಆ ತರುಣನೊಡನೆ ಒಮ್ಮೆಲೆ ನಿಂತನಿಂತ ಲ್ಲಿಯೇ ಅದೃಶ್ಯರಾದರೆಂದು ಅವರಲ್ಲಿಯೊಬ್ಬನು ಅಂದುಬಿಟ್ಟನು. ಭವಾನೀ ದೇವಿಯ ಸಹಾಯದಿಂದ ಮಹಾರಾಜರು ಬೇಕಾದದ್ದು ಮಾಡಬಲ್ಲರೆಂದು ಗಾಂಭೀರ್ಯದಿಂದ ತಮ್ಮೊಳಗೆ ಮಾತಾಡಿಕೊಳ್ಳುತ್ತ, ಶಿವರಾಯನ ಚರಿತ್ರ ಗಳನ್ನು ಒಂದೊಂದಾಗಿ ಹೇಳಿಕೊಳ್ಳುತ್ತ ಆ ಎಲ್ಲ ಹಳ್ಳಿವಾಡ ಜನರು ತಮ್ಮ ತಮ್ಮ ಮನೆಗೆ ಹೋದರು. ಇಂದು ಶಿವರಾಯನ ದರ್ಶನವು ತಮಗಾಯಿ ತೆಂಬ ಆನಂದವು ಅವರ ಹೊಟ್ಟೆಯಲ್ಲಿ ಹಿಡಿಸದಾಗಿತ್ತು.

ಇತ್ತ ಮಹಾರಾಷ್ಟ್ರದ ಸ್ವಾತಂತ್ರ್ಯಸೂರ್ಯನು ಛತ್ರಸಾಲನ ಸಂಗಡ ಮಾತಾಡುತ್ತ ಭೀಮಾನದಿಯ ಉಸುಬಿನೊಳಗಿಂದ ಸಾಗಿದ್ದನು. ಬಹು ದೂರ ಹೋದಬಳಿಕ ಎತ್ತರವಾದದ್ದೊಂದು ಮರಡಿಯ ಕಡೆಗೆ ಆತನು ಹೊರಳಿದನು. ಆ ಮರಡಿಯ ಸುತ್ತುಮುತ್ತಲಿನ ಗಿಡಗಂಟಿಗಳನ್ನೂ,

ಮುಳ್ಳು ಕಲ್ಲುಗಳನ್ನೂ ನೋಡಿದರೆ, ಇಲ್ಲಿ ಮನುಷ್ಯರು ಇರಬಹುದೆಂದು ಯಾರಿಗೂ ತೋರುವಹಾಗಿದ್ದಿಲ್ಲ; ಆದರೆ ಶಿವಾಜಿಯು ಒಂದು ದೊಡ್ಡ ಕಲ್ಲ ಸಾಸಿಗೆಯ ಬಳಿಗೆ ಹೋಗಿ "ಏಸಾಜಿ" ಎಂದು ಕರೆದ ಕೂಡಲೆ "ಮಹಾ ರಾಜ" ಎಂಬ ಶಬ್ದದೊಡನೆ ಆ ಶಿಲೆಯು ಎರಡು ಭಾಗವಾಗಿ ಒಳಗೆಹೋಗು ವಷ್ಟು ಹಾದಿಯು ಸಿದ್ಧವಾಯಿತು. ಅದನ್ನು ನೋಡಿ ಛತ್ರಸಾಲನು ಆಶ್ಚ ರ್ಯಪಟ್ಟನು. ಆತನು ಒಂದು ಶಬ್ದವೂ ಮಾತಾಡದೆ ಶಿವಾಜಿಯು ಬೆನ್ನ ಹತ್ತಿ, ಆ ಗುಹೆಯನ್ನು ಹೊಕ್ಕನು. ಅವರು ಕೆಲವು ಪೆಜ್ಜೆಗಳನ್ನು ಹೋಗು ವದರೊಳಗೆ ಒಂದು ವಿಸ್ತಾರವಾದ ಸಭಾಮಂಟಪವು ಅವರ ಕಣ್ಣಿಗೆಬಿದ್ದಿತು. ಅಲ್ಲಿ ಚನ್ನಾಗಿಗಾಳಿಯಾಡುತ್ತಿದ್ದು, ಬೆಳಕಿಗೂ ಕೊರತೆಯಿದ್ದಿಲ್ಲ. ಭೂಮಿಯ ಹೊಟ್ಟೆಯಲ್ಲಿ ಹುಗಿದಿಟ್ಟಿರುವ ಈ ಮಂದಿರವನ್ನು ನೋಡಿ ಛತ್ರಸಾಲನ ಆಶ್ಚ ರ್ಯವು ಹಲವುಪಟ್ಟು ಹೆಚ್ಚಾಯಿತು. ಛತ್ರಸಾಲನ ಈ ಆಶ್ಚರ್ಯದ ಕಾರ ಣವನ್ನು ಕಂಡುಹಿಡಿಯಲಿಕ್ಕೆ, ಶಬ್ದಮಾತ್ರದಿಂದ ಮಹಾರಾಷ್ಟ್ರವನ್ನು ಅಲ್ಲಾ ಡಿಸುವ ಶಿವರಾಯನಿಗೆ ಎಷ್ಟುಹೊತ್ತು ಬೇಕಾದೀತು? ಆತನು ಛತ್ರಸಾಲ ನನ್ನು ಕುರಿತು—

ಶಿವಾಜಿ—ತರುಣಮಿತ್ರಾ, ಈ ಭವ್ಯ ಸಭಾಮಂಟಪವನ್ನು ನೋಡಿ ನಿನಗೆ ಬಹಳ ಆಶ್ಚರ್ಯವಾಗಿರುವಂತೆ ತೋರುತ್ತದೆ; ಆದರೆ ಈ ಬಗೆಯ ಗುಪ್ತ ಸ್ಥಳಗಳೂ, ಗುಪ್ತ ಮಾರ್ಗಗಳೂ ನಮ್ಮ ಸ್ವಾತಂತ್ರ್ಯಪ್ರಾಪ್ತಿಯ ಕಾರ್ಯದಲ್ಲಿ ಎಷ್ಟು ಉಪಯುಕ್ತವಾಗಿರುವವೆಂಬದನ್ನು ಕೇಳಿದರೆ, ನಿನಗೆ ಇದಕ್ಕಿಂತಲೂ ಹೆಚ್ಚು ಆಶ್ಚರ್ಯವಾಗಬಹುದು. ಮಹಾರಾಷ್ಟ್ರದೊಳಗಿನ ಸಾಧು-ಸಂತರು ಸಮತೆಯ ತತ್ವದಿಂದ ಎಲ್ಲ ಮಹಾರಾಷ್ಟ್ರರನ್ನು ಒಟ್ಟುಗೂ ಡಿಸಿದ್ದರೂ, ಸ್ವಾತಂತ್ರ್ಯಕ್ಕಾಗಿ ಹೊಡೆದಾಡಲಿಕ್ಕೆ ಬಹು ಸ್ವಲ್ಪ ಜನರು ಮಾತ್ರ ಸಿದ್ಧರಾಗಿದ್ದರು. ಶೂರರೂ, ಚತುರರೂ, ಮುತ್ಸದ್ದಿಗಳೂ ಆದ ಮಹಾರಾಷ್ಟ್ರರು ಬಹಮನಿ ಬಾದಶಹರ ಸೇವೆಯಲ್ಲಿ ಮಗ್ನರಾಗಿಹೋಗಿದ್ದ ದ್ದರಿಂದ, ಮೊದಮೊದಲು ಸ್ವಾತಂತ್ರ್ಯಕ್ಕಾಗಿಯತ್ನಿಸಲು ಒಟ್ಟುಗೂಡಹತ್ತಿ ದವರಲ್ಲಿ ಬಹುಜನರು ರಾಜಕಾರಣವನ್ನು ಅರಿಯದವರಾಗಿದ್ದರು. ಮುಂದೆ ರಾಮದಾಸಸ್ವಾಮಿಗಳು ವೀರಕರ್ಮ ಮಾರ್ಗವನ್ನು ಉಪದೇಶಿಸಿ, ಅವರಿಂದ ಒಟ್ಟುಗೂಡಿದ ತರುಣರನ್ನು ಸ್ವಾತಂತ್ರ್ಯದ ನಿಶಾನೆಯನೆರಳಿಗೆ ಕರೆತಂದರು.

ಆದ್ದರಿಂದ ಘಂಡರಪುರದ ಸಣ್ಣ ನಿಶಾನೆಯ ಬದಲು ಕೈಯಲ್ಲಿ ಶಸ್ತ್ರವೂ, ಯಾತ್ರೆಯ ಹಸಿಬಿಯ ಬದಲು ಹೆಗಲಮೇಲೆ ಮದ್ದುಗುಂಡಿನ ಚೀಲವೂ ಬಂದು, ಭಕ್ತಿಭಾವದ ವಿಠ್ಠಲ ನಾಮದ ಬದಲು ಮರಾಠರ ಮುಖದಲ್ಲಿ ಹರ ಹರ ಮಹಾದೇವ ಎಂಬ ವೀರನಾದವು ಹುಟ್ಟಿ ಮಹಾರಾಷ್ಟ್ರದಲ್ಲೆಲ್ಲ ಪಸರಿಸಹತ್ತಿತು! ಆದರೆ ಬಹುದಿನಸದ ಅನುಭವದಿಂದ ಕೈ ಕೂತಿದ್ದ ಮುಸಲ್ಮಾನರ ದೊಡ್ಡ ಸೈನ್ಯದ ಮುಂದೆ ಸಣ್ಣ ಸೈನ್ಯವುಳ್ಳ ನಾವು ಜಪ್ಪುಹಾಕಾದುವ ಕ್ರಮವನ್ನು ಆರಂಭಿಸಿದೆವು. ಛತ್ರಸಾಲ, ಯಾವ ಮಹತ್ಕಾರ್ಯವನ್ನಾದರೂ ನಾವು ಧರ್ಮದ ತಳಹದಿಯ ಮೇಲೆ ಆರಂಭಿಸಿದರೆ, ಕಾರ್ಯಕ್ಕೆ ಪರಿಶುದ್ಧತೆಯು ಪ್ರಾಪ್ತವಾಗಿ, ಅದರ ಬಳಿಕೆಯಿಂದ ಸುಖ-ಶಾಂತಿಗಳು ಹೆಚ್ಚುವವು; ಬಲಿಷ್ಠ ವೈರಿಗಳೊಡನೆ ದುರ್ಬಲರು ತಾಗುತ್ತಾ ಬಾಗುತ್ತಾ ಅನುವುನೋಡಿ ಅವರನ್ನು ಬಗ್ಗು ಬಡೆಯುತ್ತ ಹೋಗಬೇಕಾಗುವದು. ಇಲ್ಲದಿದ್ದರೆ ದುರ್ಬಲರ ನಾಶವಾಗದೆ ಇರುವದಿಲ್ಲ. ಡಂಗುರಹೊಡೆದು ಕಾದುವದು ಎರಡುಪಕ್ಷಗಳೂ ಸಮಬಲವಿದ್ದಾಗ; ಆದರೂ ಜಪ್ಪಿಸಿ ವೈರಿಗಳ ಮೇಲೆ ಬೀಳುವ ಮಾರ್ಗವನ್ನು ವನರಾಜನೆನಿಸುವ ಸಿಂಹವೂ ಅನುಸರಿಸುತ್ತಿರುವದನ್ನು ನಾವು ಮರೆಯಲಾಗದು! ನಮ್ಮ ಶೂರ ಮಾವಳರು ಸ್ವಲ್ಪ ಜನರಾದರೂ, ನಾವು ಸಮಯನೋಡಿ ಶತ್ರುಗಳ ಮೇಲೆ ಬಿದ್ದು ಅವರನ್ನು ನಾಶಗೊಳಿಸಿ, ಅಕಸ್ಮಾತ್ ಇಂಥ ಗುಪ್ತ ಸ್ಥಳಗಳ ಆಸರದಿಂದ ಒಮ್ಮೆಲೆ ಅಡಗಿಕೊಂಡುಬಿಡುತ್ತಿದ್ದದ್ದರಿಂದ, ಮುಸಲ್ಮಾನರು ದಿಗಿಲುಬಿದ್ದು ತಂಜೆ ಕೊಳ್ಳುತ್ತಿರಲು, ನಾವು ಜಯಶಾಲಿಗಳಾಗುತ್ತ ಬಲಿಷ್ಠರಾಗತೊಡಗಿದೆವು! ಹೊತ್ತಿನಲ್ಲಿ ಅಕಸ್ಮಾತ್ ಹೊರಬೀಳಲಿಕ್ಕೆ, ಅಕಸ್ಮಾತ್ ಗುಪ್ತವಾಗಲಿಕ್ಕೆ ಇಂತಹ ಗುಹೆಗಳೂ, ಗುಪ್ತ ಮಾರ್ಗಗಳೂ ಬಹಳವಾಗಿ ಉಪಯೋಗಿಸುವವು. ಇವುಗಳ ಸಹಾಯದಿಂದಲೇ ನಾವು ಇಂದು ಇಲ್ಲಿ ಇದ್ದವರು, ನಾಳೆ ಐವತ್ತು ಹರದಾರಿಗಳ ಮೇಲೆ ಕಾಣಿಸಿಕೊಳ್ಳುತ್ತಿದ್ದೆವು; ಇವ್ದರಿಂದ ವೈರಿಗಳಿಗೆ ನಮ್ಮ ನೆಲೆಯೇ ತಿಳಿಯುತ್ತಿದ್ದಿಲ್ಲ; ಸ್ವಲ್ಪವೂ ನಮ್ಮ ಹಾನಿಯಾಗುತ್ತಿದ್ದಿಲ್ಲ. ಛತ್ರಸಾಲ, ಇಂತಹ ಗುಪ್ತಸ್ಥಳಗಳ ಪ್ರಯೋಜನವು ನಿನಗೆ ಗೊತ್ತಾಯಿತಷ್ಟೆ? ರಾಜಸ್ಥಾನದೊಳಗಿನ ರಜಪೂತರೂ, ಬುಂದೇಲಖಂಡದೊಳಗಿನ ಬುಂದೇಲರೂ ಒಳ್ಳೇ ಶೂರರು, ರಣಧೀರರು; ಆದರೆ ಬಲಾಬಲ

ವನ್ನರಿತುಕೊಳ್ಳದೆ, ಹೊತ್ತು ವೇಳೆಯ ವಿಚಾರವಾಡದೆ, ಹಂಚಿಕೆಯನ್ನು ಉಪಯೋಗಿಸದೆ ಶತ್ರುಗಳ ಮೇಲೆ ಸರಳಮಾರ್ಗದಿಂದ ಸಾಗಿಹೋಗಿ ತಮ್ಮ ನಾಶನನ್ನು ಮಾಡಿಕೊಳ್ಳುವರು! ಜಪ್ಪಿಸಿ ಹೊಡೆಯುವ ಹಾದಿಯನ್ನು ಹಿಡಿದ ಹೊರತು ಪ್ರಬಲನಾದ ಶತ್ರುವು ಎಂದೂ ಹಣ್ಣಿಗೆ ಬರುವದಿಲ್ಲ.

ಛತ್ರಸಾಲನು ಏಕಾಗ್ರಚಿತ್ತದಿಂದ ಶಿವಾಜಿಯ ಈಮಾತುಗಳನ್ನು ಕೇಳುತ್ತಿದ್ದನು. ಆತನಿಗೆ ತಾನು ಏನೋ ಹೊಸದಾಗಿ ಕಲಿಯುತ್ತಿರುವೆನೆಂಬ ಹಾಗೆ ಆಗುತ್ತಲಿತ್ತು. ಆಗ ಶಿವಾಜಿಯು ಆತನ ಕೈಯನ್ನು ಹಿಡಿದುಕೊಂಡು-

ಶಿವಾಜಿ—ನಡೆ, ನಾವು ಆ ಆಸನದಮೇಲೆ ಕುಳಿತುಕೊಳ್ಳೋಣ. ಇಲ್ಲಿಯೇ ನಮ್ಮಿಬ್ಬರ ಮಾತುಕಥೆಗಳಾಗುವವೆಂದು ನಾನು ಮೊದಲೇ ತಿಳಿದಿದ್ದೆನು. ನಾನು ಲಿಂಬಾಜಿ ಪಾಟೀಲನ ಮನೆಗೆ ಸುಮ್ಮನೆ ಬಂದಿದ್ದಿಲ್ಲ. ಅಲ್ಲಿ ನಿನ್ನನ್ನು ನಾನು ಕಾಣುವೆನೆಂದು ಮೊದಲೇ ತಿಳಿದಿದ್ದೆನು.

ಛತ್ರಸಾಲ—ಮಹಾರಾಜ, ನಾನು ತಮ್ಮನ್ನು ಕಾಣಲಿಕ್ಕೆ ಬರುವೆನೆಂಬದು ತಮಗೆ ಹೇಗೆ ಗೊತ್ತಾಯಿತು? ನಾನು ಇದೇ ಊರಲ್ಲಿ ನಿಮ್ಮನ್ನು ಶೋಧನಮಾಡುವೆನೆಂಬದನ್ನು ನೀವು ಹೇಗೆ ತಿಳಿದುಕೊಂಡಿರಿ? ನಮ್ಮಿಬ್ಬರ ಸಂಭಾಷಣವು ಇಲ್ಲಿಯೇ ಆಗುವದೆಂಬದಕ್ಕೆ ನಿಮಗೆ ಆಧಾರವೇನು ದೊರೆಯಿತು? ಸನ್ಮಾನ್ಯರೇ, ನನ್ನನ್ನು ನೋಡಿದ ಕೂಡಲೆ ಮೊದಲೇ ಗುರುತು ಇದ್ದವರಂತೆ ತಟ್ಟನೆ ನನ್ನ ಹೆಸರು ಹೇಳಿಬಿಟ್ಟಿರಲ್ಲ! ಇವುಗಳ ಮರ್ಮವೇನು?

ಛತ್ರಸಾಲನ ಈ ಪ್ರಶ್ನೆಗಳಿಗೆ ಶಿವಾಜಿಯು ಉತ್ತರಕೊಡದೆ—"ಏಸಾಜೀ, ಒಂದು ಕ್ಷಣ ಇಲ್ಲಿಗೆ ಬಂದು ಹೋಗು" ಎಂದು ಹೇಳಲು, ಕೂಡಲೆ ಏಸಾಜಿಯು ಶಿವರಾಯನ ಮುಂದೆ ಬಂದು ನಿಂತುಕೊಂಡನು. ಆಗ ಶಿವಾಜಿಯು ಆತನ ಕಡೆಗೆ ಬೆರಳುಮಾಡಿ—

ಶಿವಾಜಿ—ಛತ್ರಸಾಲ, ಈತನನ್ನು ನೀನು ಎಲ್ಲಿಯಾದರು ನೋಡಿರುವೆಯಾ?

ಛತ್ರಸಾಲ (ಏಸಾಜಿಯನ್ನು ನೋಡಿ)—ಇಲ್ಲ, ಈತನನ್ನು ಈ ಮೊದಲು ಎಲ್ಲಿಯೂ ನೋಡಿಲ್ಲ. ಈತನನ್ನು ಇಂದೇ ಮೊದಲು ನೋಡಿದ್ದು.

ಶಿವಾಜಿ (ನಗುತ್ತ)-ತಮ್ಮ ರಾಜಧಾನಿಯನ್ನು ದಿಲ್ಲೀಪತಿಯು ಮುತ್ತುವನರೆಗೆ ರಾಜಸ್ಥಾನದೊಳಗಿನ ಅರಸರಿಗೆ ಶತ್ರುಗಳ ದಂಡಿನ ಚಲನವಲನದ

ಸುದ್ದಿಯೇ ಇರುವದಿಲ್ಲ. ಅನಂತೆ, ತಮ್ಮ ಪ್ರದೇಶವನ್ನು ಶತ್ರುಗಳು ಹಾಳುಗೆಡವಿದರೆಂಬದು, ಪ್ರತ್ಯಕ್ಷ ಅರಸುನೆಯಲ್ಲಿ ಶತ್ರುಗಳು ಬರುವವರೆಗೆ ಬುಂದೇಲಖಂಡದ ಅರಸರಿಗೆ ಗೊತ್ತು ಸಹ ಇರುವದಿಲ್ಲ. ರಜಪೂತರಾಗಲಿ, ಬುಂದೇಲಿಗಳಾಗಲಿ ಶತ್ರುಗಳ ಕಡೆಯ ಸುದ್ದಿಯನ್ನು ತಿಳಿದುಕೊಳ್ಳಲಿಕ್ಕೆ ಏನೂ ಉಪಾಯ ಮಾಡದಿರುವದೇ ಇದಕ್ಕೆ ಕಾರಣವು. ಶತ್ರುಗಳ ಛಾವಣಿಯಲ್ಲಿ ಗುಪ್ತಚಾರರನ್ನು ತಿರುಗಾಡಿಸಿ, ಶತ್ರುಗಳ ಕಡೆಯ ಎಲ್ಲ ಸುದ್ದಿಗಳನ್ನು ತಿಳಿದುಕೊಳ್ಳುವಕಲೆಯು ಅವರಿಗೆ ಗೊತ್ತಾದರೂ ಇರಲಿಕ್ಕಿಲ್ಲ, ಅಥವಾ ಹೀಗೆ ಸುದ್ದಿಗಳನ್ನು ತಿಳಕೊಳ್ಳುವದು ನಿಜವಾದ ಶೂರರ ಕೆಲಸವಲ್ಲೆಂಬ ಅವರ ಸೊಕ್ಕಿನ ವಿಚಾರದಿಂದ ಅವರು ಬೇಕೆಂತಲೇ ಆ ಹಾದಿಯನ್ನು ಹಿಡಿಯುತ್ತಿರಲಿಕ್ಕಿಲ್ಲ! ಛತ್ರಸಾಲ, ನನ್ನ ಹಲವು ಗುಪ್ತಚಾರರಲ್ಲಿ ಏಸಾಜಿಯು ಅತ್ಯಂತ ಚಾಣಾಕ್ಷನಾದ ಒಬ್ಬ ಗುಪ್ತಚಾರನಾಗಿರುವನು. ದೇವಗಡದ ಕಡೆಯ ಸುದ್ದಿಯನ್ನು ತಿಳಿದುಕೊಂಡು ಬರುವದಕ್ಕಾಗಿ ಈತನ-ಯೋಜನೆಯಾಗಿತ್ತು. ದೇವಗಡದ ಜಯಪ್ರಾಪ್ತಿಯಾದ ದಿವಸ ಜಯಸಿಂಗನೊಡನೆ ಆದ ನಿನ್ನ ಸಂಭಾಷಣವನ್ನೆಲ್ಲ ಏಸಾಜಿಯು ಕೇಳಿರುವನು. ನೀನು ನನ್ನ ಕಡೆಗೆ ಬರುವದಕ್ಕಾಗಿ ಹೊರಟಾಗಿನಿಂದ ಒಂದಿಲ್ಲೊಂದು ಸೋಗುಹಾಕಿಕೊಂಡು ಏಸಾಜಿಯು ನಿನ್ನ ಸಂಗಡಲೇ ಬರುತ್ತಿದ್ದನು. ಮೊದಲು ಬುಡಬುಡಿಕೆಯವರ ಸೋಗಿನಿಂದ, ಆಮೇಲೆ ದುರಗಮುರಿಗೆಯವರಸೋಗಿನಿಂದ, ಆಮೇಲೆ ಪ್ರಶ್ನೆಹೇಳುವ ದೋಸಿಗರ ಸೋಗಿನಿಂದ ಈತನು ನಿನ್ನ ಸಂಗಡಿಗನಾಗಿದ್ದನು. ಕಡೆಗೆ ಶ್ರೇಷ್ಠವರ್ಗದ ಮರಾಟರ ಸೋಗಿನಿಂದ ನಿನ್ನನ್ನು ಈ ಲಿಂಬಾಜಿಪಾಟೀಲನ ಮನೆಗೆ ಕರತಂದಾತನು ಈ ಏಸಾಜಿಯೆ!

ಶಿವಾಜಿಯ ಈ ಮಾತಿನಿಂದ ಛತ್ರಸಾಲನಿಗೆ ಎಲ್ಲ ನಿಚ್ಚಳವಾಗಿ ಕಾಣಹತ್ತಿತು. ತಾನು ದೇವಗಡವನ್ನು ಬಿಟ್ಟಾಗಿನಿಂದ ಏಸಾಜಿಯ ಈಗಿಡ್ಡಮೂರ್ತಿಯು ತನ್ನ ಸಂಗಡಲೇ ಇರುತ್ತಿದ್ದದ್ದರ ನಂಬಿಗೆಯು ಆತನಿಗೆ ಆಯಿತು. ಇಳಿದುಕೊಂಡ ಸ್ಥಳದಲ್ಲಿ ತನ್ನ ಯೋಗಕ್ಷೇಮವು ಉತ್ತಮರೀತಿಯಿಂದ ಆಗುತ್ತಿರುವದರ ಮರ್ಮವು ಈಗ ಛತ್ರಸಾಲನಿಗೆ ಗೊತ್ತಾಯಿತು. ಆತನು ಶಿವರಾಯನ ಕಡೆಗೆ ಕೈತಜ್ಞತೆಯಿಂದ ನೋಡುತ್ತ—

ಛತ್ರಸಾಲ—ಮಹಾರಾಜ, ತಮ್ಮ ಕಾರ್ಯ ಕೌಶಲ್ಯವನ್ನು ನನ್ನಂತಹ ಪಾಮರನು ಏನು ತಿಳಿಯುವೆನು? ನಿನ್ನೆ ಸಂಜೆಗೆ ನನ್ನನ್ನು ಲಿಂಬಾಜಿ

ಪಾಟೀಲನ ಮನೆಗೆ ಕರತಂದ ರಂಗರಾವ ಪಾಟೀಲನು ಈಪ್ರಸಾಜಿಯೇಎಂಬು ಮ ಈಗ ನನಗೆ ಗೊತ್ತಾಯಿತು ! ನಾನು ಇಷ್ಟು ಗುಪ್ತರೀತಿಯಿಂದ ಪ್ರವಾ ಸಮಾಡುತ್ತಿದ್ದರೂ, ಗುಪ್ತಚಾರರ ಮುಖಾಂತರವಾಗಿ ಮಹಾರಾಜರು ನನ್ನ ಹೃದಯವನ್ನು ಅರಿತು, ನನ್ನ ಆದರ ಸತ್ಕಾರಮಾಡಿಸಿ, ತಮ್ಮ ಚರಣಸನ್ನಿ ಧಿಗೆ ಬರಮಾಡಿಕೊಂಡದ್ದು ಮಹದುಪಕಾರವಲ್ಲವೆ?

ಶಿವರಾಯ (ಗಾಂಭೀರ್ಯದಿಂದ)—ಛತ್ರಸಾಲ, ನಾನು ಮಾಡತಕ್ಕ ಕೆಲಸವನ್ನು ಮಾಡಿರುವೆನು. ಅದರಲ್ಲಿ ಹೆಚ್ಚಿನದೇನಿದೆ? ಬುಂದೇಲಖಂಡ ವಂತಹ ದೂರದ ಪ್ರದೇಶದಿಂದ ಹಲವು ಸಂಕಟಗಳನ್ನು ಅನುಭವಿಸುತ್ತ, ಕೇವಲ ಪರೋಪಕಾರಕ್ಕಾಗಿ ನನ್ನಕಡೆಗೆ ಬರುತ್ತಿರುವ ನಿನ್ನನ್ನು, ನಾನು ಆದರಿಸದಿದ್ದರೆ ದೇವರಮುಂದೆ ನಾನು ಅಪರಾಧಿಯಾಗಲಿಕ್ಕಿಲ್ಲವೆ? ನಿನ್ನ ಶ್ರಮವನ್ನು ಕಡಿಮೆಮಾಡುವದಕ್ಕಾಗಿನಾನು ನೀನಿದ್ದಲ್ಲಿಗೇ ಬರಬೇಕಾಗಿತ್ತು; ಆದರೆ ನೀನು ದೇವಗಢವನ್ನು ಬಿಡುವ ಮುನ್ನಾದಿನ ಜಯಸಿಂಗನೊಡನೆ ನಿನ್ನ ಭಾಷಣವಾಗುವವರೆಗೆ ನಿನ್ನ ಉದ್ದೇಶವು ತಿಳಿಯಲಿಕ್ಕೆ ಮಾರ್ಗವಾಗದ್ದರಿಂದ, ನಾನು ಇಲ್ಲಿಯವರೆಗೆ ನಿನ್ನನ್ನು ಬರಗೊಡಬೇಕಾಯಿತು. ನೀನು ಬಹಳ ವೇಗದಿಂದ ಬರತೊಡಗಿದ್ದರಿಂದ ಇದೇ ಸ್ಥಳದಲ್ಲಿ ನಿನ್ನನ್ನು ಕಾಣುವದನ್ನು ನಾನು ಗೊತ್ತು ಪಡಿಸಬೇಕಾಯಿತು!

——(೦)——

೨೭ನೆಯ ಪ್ರಕರಣ - ಗೌರವದ ಉಪದೇಶ

ಈ ಮೇರೆಗೆ ನುಡಿದು ಶಿವರಾಯನು ಸ್ವಲ್ಪಹೊತ್ತು ಅಮ್ಮನೆ ಕುಳಿ ತನು. ಛತ್ರಸಾಲನು ಆತನನ್ನು ನೋಡುತ್ತ, ಶಿವರಾಯನು ಇನ್ನಾವ ಮಾತುಗಳನ್ನು ನನಗೆ ಹೇಳುವನೆಂಬದರ ಹಾದಿಯನ್ನು ಉತ್ಸುಕತೆಯಿಂದ ನೋಡಹತ್ತಿದನು. ಕೆಲಕಾಲ ಸ್ವಸ್ಥಚಿತ್ತದಿಂದ ಮನನಮಾಡಿದಬಳಿಕ ಆ ಮಹಾರಾಷ್ಟ್ರವೀರನು ಛತ್ರಸಾಲನನ್ನು ಕುರಿತು—

ಶಿವರಾಯ— ಛತ್ರಸಾಲ, ಬುಂದೇಲಖಂಡವನ್ನು ದಾಸ್ಯಮುಕ್ತಮಾ ಡುವದಕ್ಕಾಗಿ ಈವರೆಗೆ ಹಲವು ಪ್ರಯತ್ನಗಳಾಗಿರುವವೆಂದು ಕೇಳಿದ್ದೇನೆ; ಆದರೆ ಪ್ರತಿಒಂದು ಸಾರೆ ಅಂತಃಕಲಹದಿಂದ ಆ ಪ್ರಯತ್ನಗಳೆಲ್ಲ ನಿಷ್ಫಲ ವಾದವೆಂದು ಹೇಳುತ್ತಾರೆ, ಈಮಾತು ನಿಜವಷ್ಟೆ? ಬುಂದೇಲಖಂಡದೊಳ

ಗಿನ ಅರಸರು ಯವನಸತ್ತೆಯನ್ನು ದೂರಮಾಡಿಕೊಳ್ಳಲಿಕ್ಕೆ ಒಮ್ಮನಸ್ಸಿನಿಂದ ಯತ್ನಿಸುವದಿಲ್ಲವೆಂಬ ಮಾತು ನಿಜವೇನು?

ಛತ್ರಸಾಲ—ನಿಜವು, ಮಹಾರಾಜರು ಕೇಳಿದ ಪ್ರತಿಒಂದು ಸಂಗತಿಯೂ ನಿಜವಾದದ್ದು. ನಾವು ಮಾಡಿದ ಪ್ರಯತ್ನಗಳೆಲ್ಲ ನಿಷ್ಫಲವಾಗಿ ನಿರಾಕೆಯು ಉತ್ಪನ್ನವಾಗಲು, ಯಾವಮಾರ್ಗದಿಂದ ಯತ್ನಿಸಬೇಕೆಂಬನ್ನು ಕೇಳಿಕೊಳ್ಳುವದಕ್ಕಾಗಿಯೇ ಮಹಾರಾಜರ ಸನ್ನಿಧಿಗೆ ನಾನು ಬಂದಿರುವೆನು. ನನ್ನ ತಂದೆಯಾದ ರಾಜಾ ಚಂಪತರಾಯರಿಗೆ,ದಿಲ್ಲೀಪತಿಯ ಲಧಿಕಾರವನ್ನು ನಷ್ಟಪಡಿಸಿ ಬುಂದೇಲಖಂಡದ ಸ್ವಾತಂತ್ರ್ಯವನ್ನು ಸಂಪಾದಿಸುವೆನೆಂಬ ನಂಬಿಗೆಯು ಸಂಪೂರ್ಣವಾಗಿ ಇದ್ದಿತು. ಅವರ ಕೂವತ್ತು ಹೆಚ್ಚು; ಧೈರ್ಯವು ಬಹಳ; ಅವರ ಕ್ಷಾತ್ರತೇಜವು ಅದ್ವಿತೀಯವಾದದ್ದು; ಆದರೆ ಬಂದೇಲಿಗಳ ಪರಸ್ಪರರಲ್ಲಿಯ ಮಾತ್ಸರ್ಯದಿಂದಲೇ ಅವರು ತಮ್ಮ ರಾಜ್ಯದಿಂದ ಭ್ರಷ್ಟರಾಗಿ, ಕಡೆಗೆ ಜೀವಕ್ಕೆ ಎರವಾಗಬೇಕಾಯಿತು! ಕಡೆಕಡೆಗೆ ನಮ್ಮ ತಂದೆಯವರಿಗೆ ತಮ್ಮ ತಪ್ಪು ಗೊತ್ತಾಯಿತು! ಮಹಾರಾಜ, ನಿಮ್ಮ ಯೋಗ್ಯತೆಯು ನಮ್ಮ ಹಿರಿಯರಿಗೆ ಗೊತ್ತಿದ್ದಿಲ್ಲವೆಂತಲ್ಲ. ನಿಮ್ಮ ಸಹವಾಸದ ಯೋಗವು ಒದಗಿ ಬರಲಿಲ್ಲವೆಂಬ ಪಶ್ಚಾತ್ತಾಪವನ್ನು ಅವರು ಮರಣಕಾಲದಲ್ಲಿ ವ್ಯಕ್ತಮಾಡಿ ನಿಮ್ಮ ದರ್ಶನ ಮಾಡಿಕೊಳ್ಳಲು ನನ್ನನ್ನು ಆಜ್ಞಾಪಿಸಿದರು; ಅಂತೇ ನಾನು ತಮ್ಮ ಚರಣಸನ್ನಿಧಿಗೆ ಬಂದಿದ್ದೇನೆ.

ಶಿವಾಜಿ—ತರುಣರಾಜಾ, ಅಹಂಕಾರರಹಿತನಾಗಿ, ಭೂತದಯೆಯ ಪ್ರೇರಣೆಯಿಂದ ಸ್ವದೇಶೀಯರಲ್ಲಿ ಬಂಧುಭಾವವನ್ನು ವಹಿಸಿ, ದೇಶದಸ್ವಾತಂತ್ರ್ಯಕ್ಕಾಗಿ ನಿಸ್ವಾರ್ಥಬುದ್ಧಿಯಿಂದ ಯತ್ನಿಸುವ ಧರ್ಮಿಷ್ಠ ಪುಣ್ಯಪುರುಷನಿಗೆ ದೇವರು ತಕ್ಕಹಾದಿಯನ್ನು ತೋರಿಸಲಿಕ್ಕೆ ಸಿದ್ಧನಾಗಿರುವನೆಂದುತಿಳಿದುಕೋ. ಆ ವಿಶ್ವಪತಿಯು ಪ್ರತ್ಯಕ್ಷ ನಮ್ಮಮುಂದೆ ಬಂದುನಿಂತು ನಮಗೆ ಹಾದಿಯನ್ನು ತೋರಿಸದಿದ್ದರೂ, ಒಂದೊಂದು ಮುಖದಿಂದ ಪ್ರಸಂಗಕ್ಕೆ ತಕ್ಕ ಹಾದಿಯನ್ನು ತೋರಿಸುತ್ತಿರುವನು! ಅಂದಬಳಿಕ ನನ್ನಂತಹ ಪಾಮರನು ಹೆಚ್ಚಿಗೆ ಏನು ಹೇಳಲಿ? ಸ್ವದೇಶವನ್ನು ಉದ್ಧರಿಸಲು ಯತ್ನಿಸುವ ನೀನು, ಅಹಂಕಾರವನ್ನು ಬಿಡು; ದೇಶದ ಹಿತವೇ ನಿನ್ನ ಹಿತವೆಂದು ತಿಳಿದುಕೋ; ಧರ್ಮನಿಷ್ಠೆಯನ್ನು ಬಿಡಬೇಡ; ಸೃಷ್ಟಿಯ ಎಲ್ಲ ವ್ಯವಹಾರಗಳು ವಿಶ್ವಪಾಲಕನ

ತಂತ್ರದಿಂದ ನಡೆದಿದ್ದು ಆತನ ದಾಸನಾಗಿ ಕರ್ತವ್ಯವನ್ನು ಮಾಡುವೆನೆಂದು ತಿಳಿದು ವಿಘ್ನಗಳಿಗೆ ಹೆದರದೆ ಒಂದೇಸವನೆ ತಪಸ್ವಿಯಂತೆ ದೇಶಸೇವೆಯಲ್ಲಿ ದೇಹವನ್ನು ಸವಿಸು!

ಛತ್ರಸಾಲ—ಮಹಾಪ್ರಭೋ, ಇದಕ್ಕೂ ಹೆಚ್ಚಿನ ಹಾದಿಯ ತೋರಿ ಸೋಣವು ನನಗೇನುಬೇಕಾಗಿದೆ? ದೇವಿಯ ಭಕ್ತನಾದ ನೀನು ಸತ್ಪಬಲ ದಿಂದ ದೇವಿಯನ್ನು ಪ್ರಸನ್ನೀಕರಿಸಿಕೊಂಡಿರುವದರಿಂದ, ನಿನ್ನ ಅಧಿಕಾರವು ಬಹು ದೊಡ್ಡದಿರುವದು! ನಿನ್ನ ಉಪದೇಶವನ್ನು ದೇವಿಯ ಉಪದೇಶವೆಂ ತಲೇ ನಾನು ಭಾವಿಸುವೆನು. ಸ್ವಾತಂತ್ರ್ಯದೀಕ್ಷಾಗುರುವೇ, ಅಖಿಲ ಭರತ ಖಂಡವು ಯವನರ ದರ್ಪದಿಂದ ಹಣ್ಣಾಗಿ ಹೋಗಿರುವಾಗ, ಅದಕ್ಕೆ ಸ್ವಾತಂ ತ್ರ್ಯ ರಸಾಯನವನ್ನು ಕೊಟ್ಟು ತೇಜಸ್ವಿಯಾಗಮಾಡುವ ಹಾದಿಯನ್ನು ಮಟ್ಟಮೊದಲು ಕಂಡುಹಿಡಿದವನು ನೀನೇ ಅಲ್ಲವೆ? ಭರತಖಂಡದಲ್ಲಿ ಸ್ವಾ ತಂತ್ರ್ಯದ ಬೀಜಾರೋಪಣವನ್ನು ನೀನೇಮಾಡಿದೆ. ಆದ್ದರಿಂದ ನನ್ನಂತಹ ಸ್ವಾತಂತ್ರ್ಯದೇವಿಯ ಪಾಮರನಾದ ಉಪಾಸಕನನ್ನು ನೀನು ಎಷ್ಟು ಬೋಧಿ ಸಿದರೂ ಸ್ವಲ್ಪವೆ! ನಿನ್ನ ಪ್ರತಿಒಂದು ಶಬ್ದವೂ ನನಗೆ ಬೋಧಪ್ರದವಾ ಗಿಯೇ ಇರುವದು!

ಛತ್ರಸಾಲನ ಈ ಮಾತುಗಳನ್ನು ಕೇಳಿ ಶಿವಾಜಿಯು ಕೆಲಹೊತ್ತು ಆಲೋಚಿಸಿ ಮತ್ತೆ ಛತ್ರಸಾಲನನ್ನು ಕುರಿತು—ಛತ್ರಸಾಲ, ಬುಂದೇಲಖಂ ಡದ ಪರಿಸ್ಥಿತಿಯೂ, ಮಹಾರಾಷ್ಟ್ರದ ಪರಿಸ್ಥಿತಿಯೂ ಒಂದೇ ಇರುವದಿಲ್ಲ. ಸ್ವಾತಂತ್ರ್ಯಪ್ರಾಪ್ತಿಗಾಗಿ ನಾನು ಮಹಾರಾಷ್ಟ್ರದಲ್ಲಿ ಯತ್ನಿಸಿದ ಹಾದಿಯಿಂ ದಲೇ ಬುಂದೇಲಖಂಡದಲ್ಲಿ ನೀನು ಯತ್ನಿಸಿದರೆ, ಯಶಸ್ಸು ದೊರೆತೀತೆನ್ನುವ ಹಾಗೆ ತೋರುವದಿಲ್ಲ. ದೇಶ-ಕಾಲ-ಪರಿಸ್ಥಿತಿಗಳಿಗನುಸರಿಸಿ ತರ್ಕಸದ ಸದ್ವಿವೇಕ ಬುದ್ಧಿಗೆ ಯೋಗ್ಯತೋರಿದ ಹಾದಿಯನ್ನು ಹಿಡಿಯುವದು ಶ್ರೇಯ ಸ್ಕರವಾಗಿರುವದು. ಮಹಾರಾಷ್ಟ್ರವು ಸ್ವಾತಂತ್ರ್ಯವನ್ನು ಕಳೆದುಕೊಂಡು ಬಹಳ ದಿವಸವಾದದ್ದರಿಂದ, ಮರಾಟರ ಮನಸ್ಸನ್ನು ಸ್ವರಾಜ್ಯದ ಕಡೆಗೆ ಎಳೆ ದುಕೊಳ್ಳಲಿಕ್ಕೆ ಆಯಾಸವೂ, ವಿಲಂಬವೂ ಆಯಿತು. ಸಮರ್ಥ ಶ್ರೀ ರಾಮ ದಾಸರೂ, ಅವರ ಕರ್ತವ್ಯದಕ್ಷ ಶಿಷ್ಯರೂ ಎಷ್ಟೋ ವರ್ಷಗಳಿಂದ ಅಖಂಡ ಪ್ರಯತ್ನಮಾಡಿ, ಕೇವಲ ದೈವಾಧೀನವಾಗಿದ್ದ ಆಗಿನ ಮಹಾರಾಷ್ಟ್ರರ ಮನ

ಸ್ಸನ್ನು ಕರ್ತವ್ಯೋನ್ಮುಖ ದೈವಾಧೀನವಾಗುವಂತೆ ಮಾಡಿ, ಆ ಕರ್ಮಹೀನ ಮರಾಟರನ್ನು ಸಾತ್ವಿಕ ಕರ್ಮವೀರರಾಗಮಾಡಿದರು! ಅದರಿಂದ ಮರಾಟರು ಬಲಿಷ್ಠರೂ, ಸ್ವಾವಲಂಬಿಗಳೂ ಆದರು. ಹೀಗೆ ಮಹಾರಾಷ್ಟ್ರದ ಸ್ವಾತಂತ್ರ್ಯದ ಅಸ್ತಿವಾರವನ್ನು ಹಾಕಲಿಕ್ಕೆ ಬಹಳ ದಿವಸಗಳು ಬೇಕಾದವು; ಆದರೆ ಬುಂದೇಲಖಂಡದ ಮಾತು ಹಾಗಿಲ್ಲ. ಬುಂದೇಲಖಂಡದ ಸ್ವಾತಂತ್ರ್ಯವು ನಷ್ಟವಾಗಿ ಇನ್ನೂ ಮೂರು ತಲೆ ಪೂರಾ ಆಗಿಲ್ಲ. ಸೇಲೀಮು ಬಾದಶಹನು ನಿಮ್ಮ ಬುಂದೇಲಿಗಳ ಸ್ವಾತಂತ್ರ್ಯಕ್ಕೆ ಕೈಹಾಕಿದರೂ, ಆತನ ಮೊಮ್ಮಗ ಔರಂಗಜೇಬನ ಕಾಲದವರೆಗೂ ನಿಮ್ಮ ಸ್ವಾತಂತ್ರ್ಯತೇಜವನ್ನು ಪೂರ್ಣನಷ್ಟ ಪಡಿಸುವದು ದಿಲ್ಲೀ ಬಾದಶಹರಿಂದ ಆಗಿರುವದಿಲ್ಲ! ಇನ್ನೂ ಬುಂದೇಲಖಂಡದಲ್ಲಿ ರಾಜಾ ಚಂಪತರಾಯ-ರಾಜಾ ಛತ್ರಸಾಲರಂಥ ಸ್ವಾತಂತ್ರ್ಯಪ್ರಿಯ ವೀರರು ಹುಟ್ಟುತ್ತಲೇ ಇರುವರು; ಆದ್ದರಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ತಕ್ಕ ಮನಸ್ಸಿನ ರಚನೆಯನ್ನು ಮಾಡಲಿಕ್ಕೆ ಬುಂದೇಲಖಂಡದಲ್ಲಿ ಹೆಚ್ಚು ಆಯಾಸವಾಗುವಹಾಗಿಲ್ಲ, ವಿಲಂಬವೂ ಆಗುವಹಾಗಿಲ್ಲ. ಇದಲ್ಲದೆ ಬುಂದೇಲಖಂಡದ ಜನರು ಅಲ್ಲಲ್ಲಿಯ ಮಾಂಡಲಿಕ ರಾಜರಿಗೆ ಅಧೀನರಾಗಿರುವದರಿಂದ, ಬುಂದೇಲಖಂಡದ ಎಲ್ಲಮಾಂಡಲಿಕರಾಜರೂ, ಸರದಾರರೂ ಸ್ವರಾಜ್ಯ ಸಂಪಾದನಕ್ಕಾಗಿ ಒಮ್ಮನಸ್ಸಿನಿಂದ ಟೊಂಕಕಟ್ಟಿದರೆ, ಸಹಜವಾಗಿಯೇ ಬುಂದೇಲಖಂಡದಲ್ಲಿ ಐಕ್ಯವು ಉಂಟಾಗುವದು; ಆದ್ದರಿಂದಛತ್ರಸಾಲ, ನೀನು ಬುಂದೇಲಖಂಡಕ್ಕೆ ತಿರುಗಿ ಹೋದಕೂಡಲೆ ಅಂತಸ್ಥಕಲಹದ ಬೀಜವನ್ನು ಸ್ವಾರ್ಥತ್ಯಾಗದಿಂದ ಮೊದಲು ಹುರಿದುಬಿಡು. ಹೀಗೆ ಮಾಡುವಾಗ ನೀನು ಗರ್ವಿಷ್ಠರಾಜರ ಮುಂದೆ ನಮ್ರನಾಗು; ಜಾಣರಾಜರಿಗೆ ತಿಳಿಹೇಳು; ಅಜ್ಞಾನಿ ರಾಜರನ್ನು ಉಪದೇಶದಿಂದ ಹಾದಿಗೆ ಹಚ್ಚು; ಮೂರ್ಖ ರಾಜರನ್ನು ನಿಮ್ಮ ಮಾತೇ ಸರಿಯೆಂದು ಹೇಳಿ ಸಮಾಧಾನಪಡಿಸು; ಎಟ್ಟಿ ಅರಸರನ್ನು ಆಯಕಟ್ಟಿನ ಸ್ಥಳನೋಡಿ ಹಿಡಿಕೆ ಹಣ್ಣ್ಣಮಾಡು! ವ್ಯಕ್ತಿವಿಷಯಕ ಕಲಹಗಳು, ವ್ಯಕ್ತಿವಿಷಯಕ ದ್ವೇಷಗಳು, ವ್ಯಕ್ತಿವಿಷಯಕ ಮಾತ್ಸರ್ಯಗಳು, ವ್ಯಕ್ತಿಗತ ಕಷ್ಟ ಪ್ರಕೃತಿಗಳು ಎಂಬ ನಿಯಮದಂತೆ, ಅವನ್ನು ಸಂಪೂರ್ಣ ನಷ್ಟಗೊಳಿಸುವದು ಯಾರಿಗೂ ಶಕ್ಯವಲ್ಲೆಂಬದನ್ನು ಸರ್ವಥಾ ಮರೆಯಬೇಡ; ಆದರೂ ಸ್ವಾತಂತ್ರ್ಯದ ಉದಾತ್ತ ಕಾರ್ಯಕ್ಕಾಗಿ ಸಹಾಯಮಾಡುವಾಗ ತಮ್ಮ

ತಮ್ಮೊಳಗಿನ ಕಲಹ-ದ್ವೇಷ-ಮಾತ್ಸರ್ಯಗಳನ್ನು, ಮರೆತು ಬುಂದೇಲಿಗಳು ಒಟ್ಟುಗೂಡುವಂತೆ ಯತ್ನಿಸು. ಮೊದಲು ಪ್ರಮುಖನ ಸ್ವಾತಂತ್ರ್ಯದ ನಿಶಾನೆಯು ನೆರಳಿನಲ್ಲಿ ಎಲ್ಲ ಬುಂದೇಲಿಗಳು ಒಟ್ಟುಗೂಡುವಂತೆ ಮಾಡಿ, ಆಮೇಲೆ ಸ್ವಾತಂತ್ರ್ಯಕ್ಕಾಗಿ ಯತ್ನಿಸು.

ಛತ್ರಸಾಲ (ಉತ್ಸಾಹದಿಂದ)—ಸನ್ಮಾನನೀಯ ಗುರೋ, ಸಮರ್ಥ ರಾಮದಾಸ ಸ್ವಾಮಿಗಳು ಮಹಾರಾಷ್ಟ್ರದೊಳಗಿನ ಜನರಿಗೆ ಸ್ವಾತಂತ್ರ್ಯದ ಗುರುತುಮಾಡಿ ಕೊಟ್ಟಂತೆ, ಬುಂದೇಲಖಂಡದಲ್ಲಿ ಪ್ರಾಣನಾಥ ಪ್ರಭುಗಳು ಬುಂದೇಲಿಗಳಿಗೆ ಸ್ವಾತಂತ್ರ್ಯದ ಪಾಠಗಳನ್ನು ಕಲಿಸುತ್ತ, ಬುಂದೇಲಖಂಡದ ತುಂಬ ಸಂಚರಿಸುತ್ತಿರುವರು. ಬುಂದೇಲಖಂಡದಲ್ಲಿ ಪ್ರಾಣನಾಥ ಪ್ರಭುಗಳ ಆಜ್ಞೆಯು ರಾಜಾಜ್ಞೆಗಳಿಗಿಂತಲೂ ಬಲಿಷ್ಠವಾಗಿ, ಸರ್ವರಿಗೂ ಮಾನ್ಯವಾಗಿರುವದು. ಅಲ್ಲದೆ, ದಲಪತರಾಯನೆಂಬ ಒಬ್ಬ ತೇಜಸ್ವಿರಾಜಪುತ್ರನು ಅದೇ ಉದ್ದೇಶದಿಂದ ಬುಂದೇಲಖಂಡದಲ್ಲೆಲ್ಲ ಸಂಚರಿಸುತ್ತಿರುವನು; ಆದ್ದರಿಂದ ಬುಂದೇಲಖಂಡದ ಸ್ವಾತಂತ್ರ್ಯಪ್ರಾಪ್ತಿಯ ಕಾರ್ಯದ ಪೂರ್ವ ಸಿದ್ಧತೆಯು ಇಷ್ಟುಹೊತ್ತಿಗೆ ಪೂರ್ಣವಾಗಿರುವದೆಂದು ತಿಳಿಯಲಿಕ್ಕೆ ಬಾಧೆಯಿಲ್ಲ.

ಶಿವಾಜಿ—ಛತ್ರಸಾಲಾ, ಪ್ರಾಣನಾಥ ಪ್ರಭುಗಳಂಥ ಮಹಾತ್ಮರಬೆಂಬಲವು ದೊರೆತಿರುವಾಗ, ನೀನೇಕೆ ಚಿಂತೆಮಾಡುವೆ? ಬ್ರಹ್ಮನಿಷ್ಠರು ಹೊಲ್ಲದ ಕೆಲಸಕ್ಕೆ ಕೈಹಾಕರು; ಅವರು ಕೈಹಾಕಿದ ಕೆಲಸವು ವ್ಯರ್ಥವಾಗದು; ಆದ್ದರಿಂದ ಎಲೈ ಪರಾಕ್ರಮಿಯಾದ ರಾಜನೇ, ಬುಂದೇಲಖಂಡದ ಪೂರ್ವ ಸಿದ್ಧತೆಯಾಗಿದ್ದರೆ, ಸ್ವಾತಂತ್ರ್ಯದ ಮುಂದಿನ ಕೆಲಸವನ್ನು ಮಾಡುವದಕ್ಕಾಗಿ, ನೀನು ಬೇಗನೆ ಬುಂದೇಲಖಂಡಕ್ಕೆ ಹೋಗಬೇಕಾಗುವದು. ಅಲ್ಲಿಗೆ ಹೋದಬಳಿಕ ನೀನು ನಿನ್ನ ಶತ್ರುಗಳನ್ನು ಸಂಹರಿಸಿ ಜಯಶೀಲನಾಗು. ನೀನು ನಿನ್ನದೇಶವನ್ನು ಪುನಃ ಸ್ವಾಧೀನಪಡಿಸಿಕೊಂಡು ರಾಜ್ಯವಾಳು.ಬಾದಶಹನ ಸೈನ್ಯವನ್ನು ದೆಸೆಗೆಡಿಸಿ ಓಡಿಸಿಬಿಡು. ಆ ಕಪಟಿಗಳ ವಿಶ್ವಾಸವನ್ನು ಹಿಡಿಯದೆ, ತುರ್ಕ-ಮೊಗಲರ ಸ್ವಾಹಾಕಾರವನ್ನು ಮಾಡು. ನಿನ್ನಮೇಲೆ ಅವರು ಏರಿಬಂದಾಗೆಲ್ಲ ಶ್ರೀ ವಿಂಧ್ಯವಾಸಿನಿಯುನಿನಗೆ ಸಹಾಯಮಾಡಿ, ಅವರನ್ನು ನಿರಾಶೆಗೊಳಿಸುವಳು. ಅವರು ನನ್ನೊಡನೆ ದ್ವೇಷಬೆಳಿಸಿದಾಗ ಶ್ರೀ ಭವಾನಿಯು ನನಗೆ ಸಹಾಯಮಾಡುವದಕ್ಕಾಗಿ ಬಂದಳು. ಆಕೆಯ ಕೃಪಾ

ಪ್ರಸಾದದಿಂದ ನನಗೆ ಮುಸಲ್ಮಾನರು ಗಣ್ಯರಾಗಲಿಲ್ಲ. ನನ್ನ ಮೇಲೆ ಕಪ ಟಿಗಳಾದ ''ನಾನು ನಾನು'' ಅನ್ನುವ ಎಷ್ಟೋ ಮುಸಲ್ಮಾನವೀರರು ಏರಿ ಬಂದರು, ನನ್ನ ಕುತ್ತಿಗೆ ಕೊಯ್ಯಬೇಕೆಂದು ಅವರು ಯತ್ನಿಸಿದರು; ಆದರೆ ಅವರೆಲ್ಲರ ಸಂಹಾರವನ್ನೂ ಭವಾನಿಯು ನನ್ನ ಕೈಯಿಂದ ಮಾಡಿಸಿದಳು; ಆದ್ದ ರಿಂದ ನೀನು ಸ್ವಲ್ಪವೂ ಚಿಂತೆಮಾಡದೆ ನಿನ್ನ ದೇಶಕ್ಕೆ ಹೋಗು. ಸೈನ್ಯ ವನ್ನು ಕೂಡಿಸಿ, ಮುಸಲ್ಮಾನರನ್ನು ಓಡಿಸಿಬಿಡು. ಯಾವಾಗಲೂ ಹಿರಿದ ಕತ್ತಿಯು ಸಜ್ಜಾಗಿರಲಿ, ಅಂದರೆ ಪರಮೇಶ್ವರನ ಕೃಪೆಯಿಂದ ನಿನ್ನ ಸಂರಕ್ಷ ಣವಾಗುವದು. ಗೋ ಬ್ರಾಹ್ಮಣರ ಪ್ರತಿಪಾಲನೆಯು, ವೇದಗಳ ರಕ್ಷಣವು, ಸಮರಾಂಗಣದಲ್ಲಿ ಶೌರ್ಯವನ್ನು ಪ್ರಕಟಿಸುವದು ಕ್ಷತ್ರಿಯರ ಮುಖ್ಯ ವ್ರತ ಗಳಾಗಿರುವವು! ಇದರಲ್ಲಿ ನಿನಗೆ ಮರಣವು ಪ್ರಾಪ್ತವಾದರೆ, ಸೂರ್ಯಮಂಡ ಲವನ್ನು ಭೇದಿಸಿ ಸ್ವರ್ಗದ್ವಾರವನ್ನು ಜಯಿಸಿ ಅಲ್ಲಿಯ ಅಪಾರ ಸುಖವನ್ನು ಅನುಭೋಗಿಸುವೆ. ರಣದಲ್ಲಿ ಜಯಪ್ರಾಪ್ತಿಯಾದರೆ, ಬುಂದೇಲಖಂಡಕ್ಕೆ ಸ್ವರಾಜ್ಯವೂ, ನಿನಗೆ ಅಕ್ಷಯ್ಯ ಕೀರ್ತಿಯೂ ಪ್ರಾಪ್ತವಾಗುವವು. ಯುದ್ಧ ಮಾಡುವಾಗ ದಿಲ್ಲೀಪತಿಯೊಡನೆ ಪ್ರಸಂಗವಿರುವದೆಂಬದನ್ನು ಲಕ್ಷದಲ್ಲಿಟ್ಟು, ಅಡಗಿ-ಹುದುಗಿ-ಜಪ್ಪಿಸಿ ಯುದ್ಧಮಾಡು. ಪ್ರಾಮಾಣಿಕರಾದ ತರುಣ ಬುಂದೇಲಿಗಳನ್ನು ಆರಿಸಿ, ಶತ್ರುಗಳ ಕಡೆಯ ಸುದ್ದಿಯನ್ನು ತಿಳಿದುಕೊಂಡು ಬರುವದಕ್ಕಾಗಿ ಕಳಿಸುವದನ್ನು ಮರೆಯಬೇಡ. ಅರಸರಿಗೆ ಈ ಗುಪ್ತಚಾ ರರು ಒಂದು ಮುಖವಾಗಿರುವರು. ಸ್ವಾತಂತ್ರ್ಯಪ್ರಾಪ್ತಿಯಾದ ಹೊರತು ಸುಖ-ಶಾಂತಿ-ಸದ್ಭಾವನಗಳ ಉದಯವು ಜನತೆಯಲ್ಲಿ ಆಗುವದಿಲ್ಲವೆಂಬದನ್ನು ತಿಳಿದು, ಜನ್ಮಸಿದ್ಧ ಹಕ್ಕಾದ ಸ್ವರಾಜ್ಯವನ್ನು ಸಂಪಾದಿಸು. ಬುಂದೇಲಿಗಳು ನೀವು ಅತ್ಯಂತ ಶೂರರಿರುವಿರಿ. ನಿಮ್ಮಲ್ಲಿ ಒಮ್ಮೆ ಸ್ವರಾಜ್ಯದ ಬೀಜಾರೋ ಪಣವಾದರೆ, ಕೃತಾಂತನಂತೆಪರಾಕ್ರಮದಿಂದಕಾದಿ, ಸ್ವರಾಜ್ಯವನ್ನು ಸಂಪಾದಿ ಸದೆ ಬಿಡುವದೇ ಇಲ್ಲವು. ಛತ್ರಸಾಲಾ, ನಾವು ಆ ಜಗತ್ಪಾಲಕನ ಮಕ್ಕಳಿರು ವೆವಲ್ಲವೆ? ನಾವು ಯಾವದೊಂದು ಅನ್ಯಾಯದ, ಅಥವಾ ಒತ್ತಾಯದ ಕೆಲಸ ಮಾಡುವದಕ್ಕಾಗಲಿ, ಸ್ವಾರ್ಥದ ಕ್ಷೇತ್ರವನ್ನು ಹೆಚ್ಚಿಸಿಕೊಳ್ಳುವದಕ್ಕಾಗಲಿ, ಎರಡನೆಯವರ ಹಕ್ಕುಗಳನ್ನು ಕಾಲಲ್ಲಿ ಹಾಕಿ ತುಳಿಯುವದಕ್ಕಾಗಲಿ, ನೆಲೆ ಯಿಲ್ಲದ ರಾಜ್ಯತೃಷ್ಣೆಯನ್ನು ತೃಪ್ತಿಮಾಡಿಕೊಳ್ಳಲಿಕ್ಕಾಗಲಿ, ಅನಿವಾರದವಾ

ಅಧಿಕಾರವನ್ನು ಸಂಪಾದಿಸುವದಕ್ಕಾಗಲಿ ನಾವು ಕೈಯಲ್ಲಿ ಶಸ್ತ್ರವನ್ನು ಹಿಡಿದಿರುವದಿಲ್ಲ. ಪರಮೇಶ್ವರನ ದರ್ಬಾರದೊಳಗಿನ ಸಮತೆ-ನ್ಯಾಯಗಳ ಸ್ಥಾಪನೆಯು ಅನ್ಯಮಾರ್ಗದಿಂದ ಆಗುವಹಾಗೆ ಇಲ್ಲದ್ದರಿಂದ, ನಿರುಪಾಯರಾಗಿ ಶಸ್ತ್ರವನ್ನು ಹಿಡಿಯಬೇಕಾಗಿದೆ. ನಾವು ಆ ದಯಾಳು ಪರಮಾತ್ಮನ ಸೇವಕರಿರುವೆವು. ನಮ್ಮಂಥ ಸೇವಕರ ಕೆಲಸದಲ್ಲಿ ಕೀರ್ತಿಯನ್ನು ಕೊಡುವದು ಆತನ ಕೈಯಲ್ಲಿರುತ್ತದೆ. ನಿಷ್ಕಾಮದಿಂದ ಕೆಲಸಮಾಡುವದು ನಮ್ಮ ಅಧಿಕಾರವು. ಯಶಸ್ಸನ್ನು ಪಡೆಯುವದು ನ್ಯಾಯಿಯಾದ ಪರಮೇಶ್ವರನ ಇಚ್ಛೆಯನ್ನವಲಂಬಿಸಿರುತ್ತದೆ. ಏಕನಿಷ್ಠೆಯಿಂದ ನಾವು ಪರಹಿತಕ್ಕಾಗಿ ಹೆಣಗಿದರೆ, ಪರಮೇಶ್ವರನ ಕೃಪೆಯು ಯಾಕೆ ಆಗುವದಿಲ್ಲ?

ಛತ್ರಸಾಲ (ಸದ್ಗದಿತ ಕಂಠದಿಂದ)—ಮಹಾರಾಜ, ತಮ್ಮ ಉಪದೇಶದಿಂದ ನನ್ನಲ್ಲಿ ನವೀನವಾದದ್ದೊಂದು ತೇಜಸ್ಸು ಸಂಚಾರ ಮಾಡತೊಡಗಿರುವದು. ನನ್ನ ನಿರಾಶೆಹೊಂದಿದ ಮನಸ್ಸಿನಲ್ಲಿ ಆಶೆಯ ಅಂಕುರವು ಉತ್ಪನ್ನವಾಯಿತು. ನನ್ನ ಜನ್ಮಭೂಮಿಯಲ್ಲಿ ನಾನು ಯಾವಾಗ ಕಾಲಿಟ್ಟೇನು; ನನ ಜನ್ಮಭೂಮಿಯ ಮಾನರಕ್ಷಣವನ್ನು ಯಾವಾಗಮಾಡೇನು, ಎನ್ನುವಹಾಗೆ ನನಗೆ ಆಗಿದೆ. ಆದರೆ ಹಾಗೆಮಾಡುವ ಮೊದಲು ನಾನು ಒಮ್ಮೆ ದಿಲ್ಲಿಗೆಹೋಗಿ ಬರಬೇಕಾಗಿದೆ. ಮಹಾರಾಜ, ರಾಜಾ ಜಯಸಿಂಗರವರು ನನ್ನಮೇಲೆ ಅತ್ಯಂತ ಲೋಭಮಾಡುವರು. ದೇವಗಡದ ಮುತ್ತಿಗೆಯಲ್ಲಿ ನಾನು ದಿಲ್ಲೀಪತಿಯ ಪಕ್ಷದಿಂದ ಕಾದಿದೆನು.

ಶಿವಾಜಿ (ಆನಂದದಿಂದ ನೋಡುತ್ತ)—ನೀನು ಬಹಳ ಒಳ್ಳೆಯ ಕೆಲಸಮಾಡಿದೆ! ದಿಲ್ಲೀಪತಿಯೊಡನೆ ನೀನು ಯುದ್ಧಮಾಡಬೇಕಾಗಿರುವದರಿಂದ, ಆತನ ಸೈನ್ಯದ ಒಳಗಿನ ಹುರುಳು ತಿಳಿದಿರುವದು ಅವಶ್ಯವಾಗಿರುವದು; ಆದ್ದರಿಂದ ನೀನು ಹಾಗೆ ಮಾಡಿದ್ದು ಉತ್ತಮ ಕೆಲಸವಾಯಿತು.

ಛತ್ರಸಾಲ—ನನ್ನ ಪರಾಕ್ರಮದಿಂದ ದಿಲ್ಲೀಪತಿಗೆ ಜಯವಾಯಿತೆಂದು ರಾಜಾ ಜಯಸಿಂಗರವರೂ, ಯಾವತ್ತು ಸೈನಿಕರೂ ತಿಳಿದಿರುವರು. ಸ್ವತಃಬಹದೂರಖಾನ ಕೋಕಾನ ತಿಳುವಳಿಕೆಯೂ ಹಾಗೆಯೇ ಆಗಿರುತ್ತದೆ; ಆದ್ದರಿಂದ ನಾನು ದಿಲ್ಲೀಪತಿಯನ್ನು ಕಾಣಿಸಿಕೊಂಡರೆ, ಬುಂದೇಲಖಂಡದ ಹಿತಕ್ಕಾಗಿ ಏನಾದರೂ ಯತ್ನಮಾಡೋಣವೆಂದು ರಾಜಾ ಜಯಸಿಂಗರವರು

ಹೇಳಿರುವರು. ದಿಲ್ಲಿಗೆ ಬರಲೇಬೇಕೆಂದು ಅವರು ಅತ್ಯಾಗ್ರಹಮಾಡಿ ಹೇಳಿರುತ್ತಾರೆ; ಆದರೆ ಹಾಗೆ ಮಾಡುವದರಿಂದ ವ್ಯರ್ಥ ಕಾಲಹರಣವಾಗುವದೆಂದು ನನಗೆ ತೋರುತ್ತದೆ. ತಾವು ಅಪ್ಪಣೆಕೊಟ್ಟರೆ ನಾನು ದಿಲ್ಲಿಗೆ ಹೋಗದೆ, ಶಕ್ಯವಾದಷ್ಟು ಬೇಗನೆ ಬುಂದೇಲಖಂಡಕ್ಕೆ ಹೋಗಿ ಸ್ವಾತಂತ್ರ್ಯಪ್ರಾಪ್ತಿಯ ಯತ್ನವನ್ನು ನಡಿಸುವೆನು.

ಶಿವಾಜಿ—ದಿಲ್ಲಿಗೆ ಹೋಗುವದರಿಂದ ವ್ಯರ್ಥಕಾಲಹರಣ ವಾಗುವ ದೆಂಬ ನಿನ್ನಮಾತು ನನಗೆ ಮಾನ್ಯವಾಗಿರುತ್ತದೆ; ಆದರೆ ಯುದ್ಧವನ್ನುಆರಂಭಿಸುವ ಮೊದಲು ದಿಲ್ಲಿಗೆ ಹೋಗಿಬರುವದು ನನಗೆ ನೆಟ್ಟಗೆ ಕಾಣುತ್ತದೆ. ಬಾದಶಹನು ನಿನ್ನನ್ನು ಲಕ್ಷಿಸುವದಿಲ್ಲವೆಂಬದಂತು ನಿಜವೆ; ಆತನು ನಿನ್ನನ್ನು ಕಣ್ಣೆತ್ತಿಸಹ ನೋಡುವದಿಲ್ಲ! ಆ ಧರ್ಮಮೂಢನಿಗೆ ಹೆಂದೂಜನರು ಅತ್ಯಂತ ತಿರಸ್ಕರಣೀಯರಾಗಿ ತೋರುತ್ತಿದ್ದು, ಅವರ ಯಾವ ಬಗೆಯ ಹಿತಮಾಡಲಿಕ್ಕೂ ಆತನ ಮನಸ್ಸು ಒಪ್ಪುವದಿಲ್ಲ; ಆತನು ನಿನ್ನನ್ನು ತಿರಸ್ಕರಿಸಿ ಅಪಮಾನ ಗೊಳಿಸಿದನೆಂದರೆ, ಇನ್ನು ಯುದ್ಧದಹೊರತು ಎರಡನೆಯ ಉಪಾಯವಿಲ್ಲೆಂಬ ಮಾತು ಬುಂದೇಲಖಂಡದ ಅರಸರಿಗೂ, ಪ್ರಜೆಗಳಿಗೂ ಗೊತ್ತಾಗುವದು. ಶಾಂತತೆಯ ಎಲ್ಲ ಉಪಾಯಗಳು ನಿಂತುಹೋದವೆಂದು ತಿಳಿದಹೊರತು, ಅವರು ಯುದ್ಧಕ್ಕೆ ಸಿದ್ಧರಾಗಲಾರರು; ಇದಕ್ಕಾಗಿ ದಿಲ್ಲೀಪತಿಯಿಂದ ನಿರಾಶೆಯ ಉತ್ತರವನ್ನುಹೇಳಿಸಿಕೊಳ್ಳುವದು ಅವಶ್ಯವಾಗಿರುವದು; ಆದ್ದರಿಂದ ಈಗ ನೀನು ರಾಜಾ ಜಯಸಿಂಗನು ಹೇಳಿದಂತೆ ದಿಲ್ಲಿಗೆ ಹೋಗು. ಈ ಪ್ರಾಂತದಲ್ಲಿ ಇದ್ದು ನನ್ನ ಸ್ವಾತಂತ್ರ್ಯದ ಕಾರ್ಯವನ್ನು ಕಣ್ಣುಮುಟ್ಟಿ ನೋಡಬೇಕೆಂಬ ಇಚ್ಛೆಯನ್ನು ನೀನು ಪ್ರಕಟಮಾಡಿದೆ; ಆದರೆ ನನ್ನ ಪ್ರಯತ್ನದ ಅವಲೋಕನವು ನಿನ್ನ ಬುಂದೇಲಖಂಡದ ಪರಿಸ್ಥಿತಿಗೆ ಉಪಯೋಗವಾಗಲಾರದು; ಆದ್ದರಿಂದ ರಾಜಾ, ನೀನು ಇಲ್ಲಿ ಇರಬೇಡ. ನೀನು ಈ ಪ್ರಾಂತದಲ್ಲಿ ನನಗೆ ಸಹಾಯಮಾಡಿದರೂ, ಅಥವಾ ನಾವಿಬ್ಬರೂ ಕೂಡಿ ಶತ್ರುಗಳಮೇಲೆ ಏರಿಹೋಗಿ ಜಯವನ್ನೆ ಸಂಪಾದಿಸಿದರೂ ಯಶಸ್ಸಿನ ಸ್ವಾಮಿಯು ನಾನು ಆಗುವೆನು. ಅದರಿಂದ ಬುಂದೇಲಖಂಡದ ಹಿತಕ್ಕೆ ಅಷ್ಟು ಪ್ರಯೋಜನವಾಗಲಾರದು; ಆದ್ದರಿಂದ ನೀನು ಸ್ವದೇಶಕ್ಕೆ ಹೋಗಿ ಯುದ್ಧಮಾಡು. ನಿನ್ನ ಶೌರ್ಯವೂ, ನಿನ್ನ ಕೀರ್ತಿಯೂ ಚಂದ್ರಸೂರ್ಯರಿರುವವರೆಗೆ ಸ್ಥಿರವಾಗಿ ಇರುವವು!

ಶಿವರಾಯನ ಈ ಅಂತಃಕರಣ-ಪೂರ್ವಕವಾದ ಆಶೀರ್ವಚನದಿಂದ ಛತ್ರಸಾಲನ ಹೃದಯವು ವೀರ್ಯೋತ್ಸಾಹದಿಂದ ಉಕ್ಕಿಬಂದು, ಆತನ ನೇತ್ರಗಳಿಂದ ಆನಂದಾಶ್ರುಗಳು ಉದುರಹತ್ತಿದವು. ಆತನು ಶಿವರಾಯನ ಚರಣಗಳಿಗೆ ಭಕ್ತಿಯಿಂದ ನಮಸ್ಕರಿಸಿದನು. ಶಿವರಾಯನು ಆತನನ್ನು ಹಿಡಿದೆತ್ತಿ ಆಲಿಂಗಿಸಿದನು. ಆಗಿನ ಮಂಗಲಪ್ರಸಂಗವು ಭರತಖಂಡದ ಸ್ವಾತಂತ್ರ್ಯದ ಇತಿಹಾಸದಲ್ಲಿ ಬರೆದಿಡತಕ್ಕಂತಹದೇ ಸರಿ! ಶಿವರಾಯನ ಅಪ್ಪಣೆಯಿಂದ ಛತ್ರಸಾಲನು ಸ್ವದೇಶಕ್ಕೆಹೊರಟನು. ಶಿವರಾಯನು ಪ್ರೇಮದ ಕುರುಹೆಂದು ಛತ್ರಸಾಲನಿಗೆ ಅರ್ಪಿಸಿದ ಖಡ್ಗವು, ಗುಪ್ತರೀತಿಯಿಂದ ಪ್ರತ್ಯಕ್ಷ ಶಿವರಾಯನೇ ತನ್ನ ಬಳಿಯಲ್ಲಿ ಇರುತ್ತಿರುವಂತೆ ಛತ್ರಸಾಲನಿಗೆ ಭಾಸವಾಗತೊಡಗಿತು.



೨೬ನೆಯ ಪ್ರಕರಣ-ಸಾಮ್ರಾಜ್ಯದ ಮದ

ದೇವಗಡದ ಘನಘೋರವಾದ ಯುದ್ಧದಲ್ಲಿ ಔರಂಗಜೇಬ ಬಾದಶಹನಿಗೇ ಜಯವಾದದ್ದರಿಂದ, ದಕ್ಷಿಣವನ್ನು ಗೆಲ್ಲಬೇಕೆಂಬ ಆ ಬಾದಶಹನ ಮಹತ್ವಾಕಾಂಕ್ಷೆಯ ಪೂರ್ತಿಯ ಪ್ರಾರಂಭವಂತು ಉತ್ತಮರೀತಿಯಿಂದ ಆಯಿತೆಂದು, ದಿಲ್ಲಿಯ ಸಾಮ್ರಾಜ್ಯಭಕ್ತರು ಅಭಿಪ್ರಾಯಪಟ್ಟರು. ದಿಲ್ಲಿಯ ಪ್ರಜೆಗಳು ಅಂದಿನದಿವಸ ದೊಡ್ಡ ಹಬ್ಬದಂತೆ ಮಹೋತ್ಸವವನ್ನು ಮಾಡಿದರು. ದಿಲ್ಲಿಯ ಸಾರ್ವಜನಿಕ ಮಸೀದಿಗಳಲ್ಲಿಅಲ್ಲಾನಪ್ರಾರ್ಥನೆಮಾಡಬೇಕೆಂತಲೂ, ನಗರ ಪ್ರವೇಶಮಾಡುವ ರಾಜಾ ಜಯಸಿಂಗನ, ಹಾಗು ಬಹದುರಖಾನ ಕೋಕಾನ ಆಧಿಪತ್ಯದೊಳಗಿನ ವಿಜಯೀ ಸಾಮ್ರಾಜ್ಯಸೇನೆಯ ಸ್ವಾಗತವನ್ನು ಅತ್ಯಂತ ಆದರದಿಂದ ಮಾಡಬೇಕೆಂತಲೂ ಬಾದಶಹನ ಅಪ್ಪಣೆಯಾಗಿತ್ತು. ಹೊತ್ತುಮುಣುಗುವವೇಳೆಯಲ್ಲಿ ನಮಾಜು ತೀರಿದಬಳಿಕ ತೋಪುಗಳು ಗರ್ಜಿಸುತ್ತಿರಲು, ದೀಪಗಳ ಉಜ್ವಲಪ್ರಕಾಶದಲ್ಲಿ, ಹಾಗು ನಾಗರಿಕರ ಆನಂದೋದ್ಗಾರಗಳಲ್ಲಿ ಜಯಶಾಲಿಗಳಾದ ವೀರರ ಸತ್ಕಾರವಾಗಬೇಕಾಗಿತ್ತು. ಉತ್ಸವಪ್ರಿಯರಾದ ನಾಗರಿಕರು ಬಹುಬೆಲೆಯುಳ್ಳ ವಸ್ತ್ರಾಭರಣಗಳಿಂದ ಅಲಂಕೃತರಾಗಿ, ಚಾಂದಣೀಚೌಕಿನ ವಿಸ್ತಾರವಾದಪಟಾಂಗಣವನ್ನು ವ್ಯಾಪಿಸತೊಡಗಿದ್ದರು. ಖುದ್ದ ಬಾದಶಹನ ಸವಾರಿಯೂ ಮುಖ್ಯಮುಖ್ಯ

ವೀರರನ್ನು ಸತ್ಕರಿಸುವದಕ್ಕಾಗಿ ಅಲ್ಲಿಗೆ ಬರುವದಾಗಿತ್ತು. ಅಲಮಗೀರ ಬಾದಶಹನ ಜಯಜಯಕಾರ ಧ್ವನಿಯಿಂದ ಹತ್ತುದಿಕ್ಕುಗಳು ತುಂಬಿಹೋಗುತ್ತಲಿದ್ದವು.

ಹೊತ್ತುಮುಣುಗಿ ತಾಸು ರಾತ್ರಿಯಾಗಿರಬಹುದು. ಆನೆಯ ಅಂಬಾರಿಯಲ್ಲಿ ಕುಳಿತು ಚಾಂದಣೀಚೌಕಿನ ಮಾರ್ಗವನ್ನು ಹಿಡಿದು ಸಾಗಿದ್ದ ಔರಂಗಜೇಬಬಾದಶಹನ ಮುಖವು, ವಿಜಯದಮೂಲಕ ಸುಪ್ರಸನ್ನವಾಗಿರಬಹುದೆಂದು ನಾಗರಿಕರು ತಿಳಿದುಕೊಂಡಿದ್ದರು; ಆದರೆ ಒಂದಾನೊಂದು ಭಯಂಕರ ಪಾಪಕರ್ಮವನ್ನು ಮಾಡತೊಡಗಿರುವ ಕಲಾಹೀನನ ಮುಖದಲ್ಲಿ ತೋರುವಂತೆ, ಬಾದಶಹನ ತೇಜೋಹೀನವಾದ ಮುಖದಲ್ಲಿ ಲಜ್ಜೆಯ, ಹಾಗು ಆತ್ಮನಿಂದೆಯ ಚಿಹ್ನಗಳುತೋರುತ್ತಲಿದ್ದವು. ಅದನ್ನುನೋಡಿ ಜನರ ಮುಖದಿಂದ ಆಶ್ಚರ್ಯದ ಉದ್ಗಾರಗಳು ಹೊರಡಹತ್ತಿದವು. ಆದರೂ ತೋಪುಗಳು ಗರ್ಜಿಸುವಂತೆ ಗರ್ಜಿಸತೊಡಗಿದವು. ರಣವಾದ್ಯಗಳು ಕರ್ಕಶಧ್ವನಿ ಮಾಡತೊಡಗಿದವು. ಸ್ವಾಗತಕ್ಕಾಗಿಯೇ ಬುದ್ಧಿಪೂರ್ವಕ ಶೃಂಗರಿಸಿರುವ ಸ್ಥಾನದಲ್ಲಿ ಬಾದಶಹನು ಉಚ್ಚಾಸನದ ಮೇಲೆ ಕುಳಿತುಕೊಂಡನು. ಯಾವತ್ತು ಸರದಾರರೂ, ಮಾನಕರಿಗಳೂ ತಮ್ಮ ತಮ್ಮ ಆಸನಗಳಿಂದ ಎದ್ದು, ಬಾದಶಹನ ಜಯಜಯಕಾರವನ್ನು ಮಾಡಿದರು. ಅತ್ತ ವಿಜಯೀ ವೀರರ ಸಮೂಹವು ನಗರವನ್ನು ಪ್ರವೇಶಿಸತೊಡಗಿತು.

ಬಹದೂರಖಾನ ಕೋಕಾನು ತನ್ನಆರಿಸಿದವೀರರೊಡನೆ ಒಳ್ಳೇ ಡೌಲಿನಿಂದ ದಿಲ್ಲಿಯ ರಾಜವೀಧಿಯನ್ನು ತುಳಿಯುತ್ತಲಿದ್ದನು; ಆದರೆ ಅವನಕಡೆಗೆ ನಾಗರಿಕರ ಮನಸ್ಸು ಹರಿಯಲಿಲ್ಲ. ರಾಜಾ ಜಯಸಿಂಗನು ಒಮ್ಮೆ ವಿಜಯಶ್ರೀಯ ಮುಗುಳುನಗುತ್ತ, ಒಮ್ಮೆ ತನ್ನೊಡನೆ ಸಾಗಿಬರುತ್ತಿರುವ ತರುಣವೀರನೊಡನೆ ಮಾತನಾಡುತ್ತ ಚಾಂದಣೀ ಚೌಕನ್ನು ಸಮಾಪಿಸುತ್ತಲಿದ್ದನು; ಆದರೆ ಅತ್ತಕಡೆಗೂ ಜನರಮನಸ್ಸು ಹರಿಯಲಿಲ್ಲ; ಎಲ್ಲ ನಾಗರಿಕರ ಮನಸ್ಸುಗಳು ನಿಬ್ಬೆರಗಾದ ವಿಜಯಕ್ಕೆ ಕಾರಣನಾದ ತರುಣ ಬೀರನ ಮೇಲೆ ವೀರನು ಯಾರೆಂಬದನ್ನು ತಿಳಿದು ಕೊಳ್ಳುವದಕ್ಕಾಗಿ ಆತುರವಾಗಿದ್ದವು. ಆ ವೀರನು, ರಾಜಾ ಜಯಸಿಂಗನ ಬಳಿಯಲ್ಲಿ ಅಶ್ವಾರೂಢನಾಗಿ ಬರುತ್ತಿರುವ ಪ್ರಸನ್ನವದನನಾದ ಶಿವಾಜೀ ಎಂದು ಜನರು ಗುಜುಗುಟ್ಟಲು, ಅವರ ದೃಷ್ಟಿ

ಗಳು ಆ ತರುಣನಲ್ಲಿ ನಟ್ಟುಹೋದವು. ಈತನೇ ಆ ಛತ್ರಸಾಲನು, ಎಂದು ಎಲ್ಲರೂ ಬೆರಳುಮಾಡಿ ಆ ತರುಣನನ್ನೇ ತೋರಿಸಹತ್ತಿದರು. ಎಲ್ಲರು ಆ ವೀರನನ್ನು ಶ್ಲಾಘಿಸತೊಡಗಿದರು. ಒಬ್ಬರು ಆ ವೀರನ ಮೋಹಕರೂಪವನ್ನು ವರ್ಣಿಸಿದರೆ, ಇನ್ನೊಬ್ಬರು ಆ ವೀರನಮುಖದಲ್ಲಿ ಒಪ್ಪುವ ಕ್ಷಾತ್ರತೇಜವನ್ನು ವರ್ಣಿಸುತ್ತಲಿದ್ದರು. ಹೀಗೆ ದಿಲ್ಲಿಯ ಎಲ್ಲ ನಾಗರಿಕರ ನೋಟಕ್ಕೂ, ವರ್ಣನಕ್ಕೂ ಛತ್ರಸಾಲನೇ ವಿಷಯವಾಗಿರಲು, ನಾಗರಿಕರ ಮತದಂತೆ ಆತನೇ ವಿಜಯೀ ಬಾದಶಾಹೀಸೇನೆಯ ಅಗ್ರಗಣ್ಯನಾಗಿ ಸಮಾರಂಭದಸ್ಥಳವನ್ನು ಹೊಕ್ಕನು. ಆಗ ಬಾದಶಹನು ಬಹದೂರಖಾನಕೋಕಾನನ್ನು ತನ್ನ ಹತ್ತಿರದ ಆಸನದಲ್ಲಿ ಕುಳ್ಳಿರಿಸಿಕೊಂಡನು. ರಾಜಾ ಜಯಸಿಂಗನೂ ಬಾದಶಹನ ಬಳಿಯಲ್ಲಿದ್ದ ಆಸನದಹತ್ತಿರ ನಿಂತುಕೊಂಡನು; ಆದರೆ ಎಲ್ಲರ ಲಕ್ಷವು ಒಂದು ಮಗ್ಗಲಲ್ಲಿ ನಿಂತುಕೊಂಡಿರುವ ಛತ್ರಸಾಲನನ್ನು ಬಿಟ್ಟು ಬೇರೆಕಡೆಗೆ ಹೋಗಲೊಲ್ಲದು! ಬಾದಶಹನು ಈ ತರುಣ ರಜಪೂತವೀರನನ್ನು ಬಹಳವಾಗಿ ಸತ್ಕರಿಸಬಹುದೆಂದು ಎಲ್ಲರೂ ತಿಳಿದಿದ್ದರು. ಈ ವಿಜಯಶಾಲಿಯಾದ ವೀರನನ್ನೇ ಬಾದಶಹನು ತನ್ನ ಬಳಿಯಲ್ಲಿರುವ ಆಸನದಮೇಲೆ ಕುಳ್ಳಿರಿಸಿಕೊಳ್ಳುವನೆಂದು ಎಲ್ಲರೂ ನಂಬಿದ್ದರು. ಆದರೆ ಎಲ್ಲರ ಚಿತ್ತಗಳನ್ನು ಆಕರ್ಷಿಸಿಕೊಂಡಿರುವ ಆ ವೀರನು ನಿಂತುಕೊಂಡಿರುವ ನಿಟ್ಟಿನ ಕಡೆ ನೋಡುವದಕ್ಕೂ ಬಾದಶಹನು ಬುದ್ಧಿಪೂರ್ವಕವಾಗಿ ತಪ್ಪಿಸಿಕೊಳ್ಳುತ್ತಿರುವದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು. ಬಾದಶಹನು ಮರೆತಿರಬಹುದು, ತಾನು ಬುದ್ಧಿಪೂರ್ವಕ ಪತ್ರಬರೆದು ಕಳಿಸಿರಲು ಹೀಗೆ ಬುದ್ಧಿಪೂರ್ವಕ ದುರ್ಲಕ್ಷಮಾಡಲಿಕ್ಕಿಲ್ಲ, ಎಂದು ಯೋಚಿಸಿ ರಾಜಾ ಜಯಸಿಂಗನು ಬಾದಶಹನಿಗೆ ನೆನಪು ಕೊಡುವದಕ್ಕಾಗಿ "ಖಾವಿಂದ" ಎಂದು ನುಡಿಯುತ್ತಿರಲು, ಕಪಟಿಯಾದ ಔರಂಗಜೇಬ ಬಾದಶಹನು ಗಾಂಭೀರ್ಯದಿಂದ ಜಯಸಿಂಗನನ್ನು ಕುರಿತು—

"ಜಯಸಿಂಗಜೀ, ನೀವು ಏನು ಮಾತಾಡುತ್ತಿರುವಿರೆಂಬದು ನನ್ನ ಲಕ್ಷದಲ್ಲಿ ಬಂದಿರುವದು. ಚಂಪತರಾಯನ ಮಗನಾದ ಛತ್ರಸಾಲನು ದೇವಗಡದ ಯುದ್ಧದಲ್ಲಿ ಅತಿಶಯವಾದ ಪರಾಕ್ರಮವನ್ನು ತೋರಿಸಿದನೆಂತಲೂ, ಬಹಳವೇನು, ದೇವಗಡದ ವಿಜಯಕ್ಕೆ ಅವನ ಶೌರ್ಯವೇ ಕಾರಣವಾಗಿರುವದೆಂತಲೂ ಹೇಳಿ, ನಾನು ಛತ್ರಸಾಲನ ಆತಿಥ್ಯಮಾಡಿ, ಆತನ

ಸಾಮ್ರಾಜ್ಯಸೇವೆಗಾಗಿ ಯೋಗ್ಯ ಪ್ರತಿಫಲ ಕೊಡಬೇಕೆಂದು ನೀವು ನನಗೆ ಹೇಳುವವರಿರುವಿರಿ; ಆದರೆ ನಾವು ಬಹಳಅಸಮಾಧಾನದಿಂದ ನಿಮಗೆ ತಿಳಿಸುವೆವೇನಂದರೆ, ಛತ್ರಸಾಲನನ್ನು ಒಮ್ಮೆಲೆ ತೋಫಿನಬಾಯಿಗೆ ಕೊಡಿಸದಿರುವ, ಅನೆಯಕಾಲಿಗೆ ಕಟ್ಟಿಸಿ ಎಳೆಸದಿರುವ, ಪರಿಪರಿಯಿಂದ ಪೀಡಿಸಿ ಕೊಲ್ಲಿಸದಿರುವ ಒಂದು ಮಹದುಪಕಾರವನ್ನು ಆತನಮೇಲೆ ಮಾಡುತ್ತಿರುವೆವೆಂದು ನೀವು ತಿಳಿದುಕೊಳ್ಳಿರಿ. ಛತ್ರಸಾಲನು ಮಾಡಿರುವ ದಿಲ್ಲಿಯ ದರ್ಬಾರದ ಅಪಮಾನವನ್ನೂ, ಛತ್ರಸಾಲನು ಮಾಡಿರುವ ಇಸ್ಲಾಮಿಸತ್ತೆಯ ತಿರಸ್ಕಾರವನ್ನೂ, ಛತ್ರಸಾಲನು ಮಾಡಿರುವ ಧಾರ್ಮಿಕಹೇತುಗಳ ವಿಡಂಬನೆಯನ್ನೂ ಮನಸ್ಸಿನಲ್ಲಿ ತಂದರೆ, ಆ ದ್ರೋಹಿಗೆ ದೇಹಾಂತಶಾಸನದಹೊರತು ಬೇರೆ ಶಿಕ್ಷೆಕೊಡುವದು ಅನ್ಯಾಯವಾಗಬಹುದು; ಆದರೂ ಛತ್ರಸಾಲನು ಒಮ್ಮೆ ದಿಲ್ಲೀಪತಿಯ ಪ್ರಾಣವನ್ನು ಉಳಿಸಿರುವದರಿಂದ, ಇಂದು ಆತನು ದಿಲ್ಲೀಪತಿಯ ಮುಂದೆ ಜೀವದಿಂದ ನಿಂತಿರುವನು. ನಮ್ಮ ದರ್ಬಾರದಿಂದ ಛತ್ರಸಾಲನಿಗೆ ಯಾವ ಫಲವೂ ದೊರೆಯಲಾರದು. ಚಂಪತರಾಯನಿಗೆ ಕೊಟ್ಟಿರುವ ಅಮಿರಿಯನ್ನೂ, ಮನಸಬನ್ನೂ ಆತನ ರಾಜ್ಯದಸಂಗಡ ಜಪ್ತುಮಾಡಿರುತ್ತೇವೆ. ಅದನ್ನಾಗಲಿ, ಬೇರೆ ಯಾವ ಅಧಿಕಾರವನ್ನಾಗಲಿ ಛತ್ರಸಾಲನಿಗೆ ಕೊಡಲಿಕ್ಕೆ ನಾವು ಇಚ್ಛಿಸುವದಿಲ್ಲ. ಇಂತಹಸಾಮ್ರಾಜ್ಯದ್ರೋಹಿಗಳಿಂದ ಸೇವೆಯನ್ನು ಗ್ರಹಿಸಲಿಕ್ಕೆ ಔರಂಗಜೇಬನು ಒಪ್ಪಿಕೊಳ್ಳುವದಿಲ್ಲ. ಜಯಸಿಂಗಜೀ, ವ್ಯರ್ಥವಾಗಿ ಮಾತಾಡಬೇಡಿರಿ, ವ್ಯರ್ಥಪ್ರಯತ್ನವಾಡಬೇಡಿರಿ, ಬಂಡಾಯಗಾರನ ಮಗನ ಪಕ್ಷವನ್ನು ವ್ಯರ್ಥವಾಗಿ ಕಟ್ಟಬೇಡಿರಿ. ನಿಮಗೆ ಆ ಕೆಲಸದಲ್ಲಿ ಯಶಸ್ಸು ದೊರೆಯಲಿಕ್ಕಿಲ್ಲ. ಜಯಸಿಂಗಜೀ, ನೀವು - ಬಹದೂದರಖಾನಕೋಕಾನೂ ದೇವಗಡದಲ್ಲಿ ತೋರಿಸಿದ ಪರಾಕ್ರಮಕ್ಕಾಗಿಯೂ, ಸಂಪಾದಿಸಿದ ವಿಜಯಕ್ಕಾಗಿಯೂ ನಮಗೆ ಬಹಳ ಸಂತೋಷವಾಗಿರುತ್ತದೆ. ನಿಮ್ಮ ಶೌರ್ಯ - ಚಾತುರ್ಯಗಳನ್ನು ಎಷ್ಟು ಹೊಗಳಿದರೂ ಸ್ವಲ್ಪವೇ ಇರುವದು. ನೀವು ನಿಜವಾದ ಸಾಮ್ರಾಜ್ಯ ಭಕ್ತರಿರುವಿರಿ ! ನೀವು ಅತುಲ ಪರಾಕ್ರಮದಿಂದ ದೇವಗಡವನ್ನು ಸ್ವಾಧೀನಪಡಿಸಿಕೊಂಡು, ನಾವು ದಕ್ಷಿಣದಮೇಲೆ ವಿಜಯಯಾತ್ರೆಗೆ ಹೊರಡಬೇಕೆಂದು ನಮ್ಮನ್ನು ಜಾಗ್ರತಗೊಳಿಸಿರುವಿರಿ. ನಿಮ್ಮ ಈ ಸಾಮ್ರಾಜ್ಯ ಸೇವೆಯಿಂದ

ನಾವು ಸಂತುಷ್ಟರಾಗಿ, ನಿಮಗೆ ಯೋಗ್ಯ ಪ್ರತಿಫಲವ ಕೊಡುವದನ್ನು ಗೊತ್ತುಪಡಿಸಿರುತ್ತೇವೆ. ಇನ್ನು ಯಾರಯಾರಿಗೆ ಏನೇನು ಕೊಡತಕ್ಕದ್ದೆಂಬದರ ಯಾದಿಯನ್ನು ಈಗ ವಜೀರರು ಓದಿತೋರಿಸುವರು. ಖುದಾನು ನಿಮ್ಮ ಕಲ್ಯಾಣಮಾಡಲಿ!

ಹೀಗೆಂದು ಔರಂಗಜೇಬನು ತನ್ನ ಮಾತು ಮುಗಿಸಿದನು. ತನ್ನ ಆಸನದಮೇಲೆ ಕುಳಿತುಕೊಳ್ಳುತ್ತಿರುವಾಗ ಆತನ ದೃಷ್ಟಿಯು ತಪ್ಪಿ ಛತ್ರಸಾಲನ ಕಡೆಗೆ ಹೋಯಿತು. ಆಗ ಛತ್ರಸಾಲನ ಸಂತಪ್ತಮುದ್ರೆಯೂ, ತಿರಸ್ಕಾರದ ದೃಷ್ಟಿಯೂ ಆತನನ್ನು ಎದುರಿಸಿದವು. ಅದರಿಂದ ಬಾದಶಹನು ನಾಚಿ ತಲೆ ತಗ್ಗಿಸಿದನು; ಅಂಜಿಕೆಯಿಂದ ಗಡಬಡಿಸಿದನು; ಕ್ರೋಧದಿಂದ ಸಂತಪ್ತನಾದನು; ಆದರೂ ತನ್ನ ಮನಸ್ಸಿನ ಈ ಗಲಿಬಿಲಿಯನ್ನು ಸ್ವಲ್ಪವೂ ತೋರಗೊಡದೆ, ನಿಮಿಷಾರ್ಧದಲ್ಲಿ ಗಂಭೀರಮುದ್ರೆಯನ್ನು ತಾಳಿದನು. ಬಾದಶಹನ ಅಪ್ಪಣೆಯಂತೆ ದಿವಾಣ ಬಹದ್ದೂರನು ಇನಾಮುಗಳ ಯಾದಿಯನ್ನು ಓದತೊಡಗಿದನು. ಮೊದಲು ಬಹದೂರಖಾನ ಕೋಕಾನ ಹೆಸರು ಹೇಳಿ ಆತನಿಗೆ ನಬಾಬನ ಮನಸಬು ಕೊಟ್ಟಿರುವದು ಪ್ರಸಿದ್ಧವಾಯಿತು. ಬಳಿಕ ಎಷ್ಟೋ ಯವನವೀರರ ಹೆಸರುಗಳನ್ನು ಓದಿ, ಅವರಿಗೆ ಪ್ರತ್ಯಕ್ಷ ಸಣ್ಣ ದೊಡ್ಡ ಉಚಿತಗಳ ಕೊಟ್ಟಿರುವದನ್ನು ಹೇಳಿ, ಆಮೇಲೆ ರಾಜಾ ಜಯಸಿಂಗನಿಗೂ, ನಾಲ್ಕಾರುಜನ ರಜಪೂತವೀರರಿಗೂ ಶುಷ್ಕವಾದ ಪದವಿಗಳನ್ನು ಕೊಟ್ಟಿರುವದು ಪ್ರಸಿದ್ಧವಾಯಿತು. ರಾಜಾ ಜಯಸಿಂಗನಿಗೆ ಈ ಪಕ್ಷಪಾತವು ಸಹನವಾಗಲಿಲ್ಲ. ತಾನು ಆಗ್ರಹದಿಂದ ಛತ್ರಸಾಲನನ್ನು ಕರೆಮಾಡಿಕೊಂಡು ಬಂದಿದ್ದು, ಬಾದಶಹನು ತನ್ನ ಮಾತನ್ನು ಎಷ್ಟೂ ಲಕ್ಷಿಸದೆ ಹೀಗೆ ನೆರೆದ ದರ್ಬಾರದಲ್ಲಿ ಛತ್ರಸಾಲನ ಅಪಮಾನಮಾಡಿದ್ದು ತನ್ನ ಅಪಮಾನವೆಂದು ಆತನು ತಿಳಿದನು. ಎಡಬಲದ ಸರದಾರರು ಬೇಡಬೇಡೆಂದು ಕಣ್ಣುಸನ್ನೆಮಾಡಿ ತಿಳಿಸುತ್ತಿರಲು, ಜಯಸಿಂಗನು ಆವೇಶದಿಂದ— "ಜಹಾಪಹ್ನಾ, ಹೀಗೆ ಮಾಡುತ್ತಿರುವದು ಬಹಳ ಅನ್ಯಾಯವು! ತನ್ನ ಜೀವದ ಹಂಗು ಇಲ್ಲದೆ, ಹಿಂವೆನಾಡಲಿಲ್ಲ-ಮುಂದೆ ಮಾಡುವದಿಲ್ಲ ಎಂಬಂತೆ ರಣಸಾಹಸವಮಾಡಿ ತನ್ನ ಒಬ್ಬನ ಪರಾಕ್ರಮದ ಕಸುವಿನಿಂದಲೇ ದೇವಗಡದ ಕೋಟೆಯಮೇಲೆ ದಿಲ್ಲೀಪತಿಯ ನಿಶಾನೆಯನ್ನು

ಏರಿಸಿದ ವೀರನು ಒಂದುಕಡೆಗೆ ನಿಂತುಕೊಳ್ಳಬೇಕು," ದೇವಗಡದಲ್ಲಿರುವಾಗ ಮದ್ಯಪಾನದ ಅಮಲಿನಲ್ಲಿ ಹೊರಳಾಡುವದಕ್ಕಿಂತ, ಹಾಗು ವಾರಾಂಗನೆಯರ ಸಹವಾಸದಲ್ಲಿ ಕಾಲಕಳೆಯುವದಕ್ಕಿಂತಹೆಚ್ಚಿನ ಕೆಲಸವನ್ನು ಮಾಡದಿರುವನವನ ಗೌರವವನ್ನು ನಬಾಬೀ ಮನಸಬುಕೊಟ್ಟು ಮಾಡಬೇಕು; ಇದು ಸರ್ವಥಾ ಯೋಗ್ಯವಲ್ಲ. ಕೇಳಿರಿ, ಬಹದೂರಖಾನ ಕೋಕಾನನ್ನೇ ಕೇಳಿರಿ ! ತನ್ನ ಹೆಸರಿನ ಬಹದೂರಿಗಿಂತ ಹೆಚ್ಚಿನ ಬಹದೂರಿಯನ್ನು ಆತನು ದೇವಗಡದಲ್ಲಿರುವಾಗ ಏನು ಮಾಡಿದನು ? ಬಹದೂರಖಾನನ ಸೈನ್ಯವು ಇಷ್ಟು ದೊಡ್ಡದಿದ್ದೂ, ದೇವಗಡವು ಸ್ವಾಧೀನವಾಗಬಾರದು, ನಾನು ಅಲ್ಪ ಸೈನ್ಯದೊಡನೆ ಹೋದಕೂಡಲೆ ಅಲ್ಪ ಪ್ರಯತ್ನದಿಂದ ಅದರ ಮೇಲೆ ಬಾದಶಾಹಿಯ ನಿಶಾನೆಯು ಏರಬೇಕು, ಇದರಿಂದ ಏನು ಧ್ವನಿತವಾಗುವದು? ಬಹದೂರಖಾನನಿಗೆ ನಬಾಬಿಯನ್ನು ಕೊಡಿರಿ, ಅಥವಾ ಆತನ ಗೌರವವನ್ನು ಇದಕ್ಕೂ ಹೆಚ್ಚಿಗೆಮಾಡಿರಿ. ಅದಕ್ಕಾಗಿ ನನ್ನ ಆಕ್ಷೇಪವಿಲ್ಲ; ಆದರೆ ಛತ್ರಸಾಲನು ಸಾಮ್ರಾಜ್ಯಸೇವೆಯನ್ನು ಇಷ್ಟು ಉತ್ತಮರೀತಿಯಿಂದ ಮಾಡಿದ್ದು, ಆತನನ್ನು ಹೀಗೆ ಏಕೆ ಅಪಮಾನಗೊಳಿಸುವಿರಿ? ಛತ್ರಸಾಲನಿಗೆ ನಾನು—"ನಿನ್ನ ಹೋದ ರಾಜ್ಯವನ್ನೂ, ಹೋದ ವೈಭವವನ್ನೂ, ಅಷ್ಟೇ ಅಲ್ಲ, ಬುಂದೇಲಖಂಡದ ಸ್ವಾತಂತ್ರ್ಯವನ್ನೂ ಕೊಡಿಸುವೆನೆಂದು " ಹೇಳಿ ಒತ್ತಾಯದಿಂದ ಕರತಂದಿದ್ದೇನೆ. ಹೀಗಿರಲು, ಆತನ ಅಪಮಾನವುಇಷ್ಟರಮಟ್ಟಿಗೆ ಆಗಬೇಕೆ? ಛತ್ರಸಾಲನು ನಿಮ್ಮ ಮತದಂತೆ ಸಾಮ್ರಾಜ್ಯದ್ರೋಹಿಯಿರಬಹುದು! ಆದರೆ ಏಕನಿಷ್ಠ ಸಾಮ್ರಾಜ್ಯಭಕ್ತನೆಂದು ನೀವು ನನ್ನನ್ನು ಕರೆಯುತ್ತಿರುವಾಗ,ಈಗ ನನ್ನಮರ್ಯಾದೆಯನ್ನು ನೀವುಏನುಉಳಿಸಿದಹಾಗಾಯಿತು? ಸಾರ್ವಭೌಮ ಬಾದಶಹಾ! ಈ ವೃದ್ಧಜಯಸಿಂಗನು ವಿನಯದಿಂದ ಹೇಳಿಕೊಳ್ಳುವನೇನೆಂದರೆ, ದೇವಗಡದ ವಿಜಯದ ಸಂಪೂರ್ಣಶ್ರೇಯಸ್ಸು ಛತ್ರಸಾಲನ ಉಡಿಯಲ್ಲಿ ಬೀಳುವವರೆಗೆ ನನಗಾಗಲಿ, ಛತ್ರಸಾಲನ ಪರಾಕ್ರಮದಿಂದ ಡೌಲುಮಾಡುವವರಿಗಾಗಲಿ ಬಾದಶಹರ ದೇಣಿಗೆಯನ್ನು ಸ್ವೀಕರಿಸಲಿಕ್ಕೆ ಬರಲಾರದು !

ಜಯಸಿಂಗನ ಈ ಭಾಷಣವನ್ನು ಕೇಳಿ ಬಾದಶಹನು ಕ್ರೋಧದಿಂದ ಗರ್ಜಿಸಿ—" ಜಯಸಿಂಗಜೀ, ನಿಮಗೆ ಮುದಿಹುಚ್ಚು ಹಿಡಿದಹಾಗೆ ತೋರು

ತ್ತದೆ! ಇಲ್ಲದಿದ್ದರೆನಮ್ಮ ಸಂಬಂಧದ ಅಪಮಾನದಶಬ್ದಗಳುನಿಮ್ಮಬಾಯಿಂದ ಹೊರಡುತ್ತಿದ್ದಿಲ್ಲ. ರಾಜಾ ಜಯಸಿಂಗರು ಅಚ್ಚಸಾಮ್ರಾಜ್ಯಭಕ್ತರಿರುವ ರೆಂದು ನಾವು ಇನ್ನೂ ತಿಳಿದಿರುವೆವು. ಸಾಮ್ರಾಜ್ಯದ ವಿರುದ್ಧವಾಗಿ ಒಂದು ಶಬ್ದವನ್ನು ಉಚ್ಚರಿಸಿದರೂ, ಬೇರೆ ಹಿಂದುಗಳಂತೆ ನೀವೂ ಕಾಫಿರರಿರುವಿ ರೆಂದು ತಿಳಿಯಲಾಗುವದು. ನಡೆಯಿರಿ, ಬಹದೂರಖಾನ, ಜೇರೆ ಇಸ್ಲಾ ಮಿವೀರರೇ, ಮೋತಿಮಸೀದಿಗೆ ನಡೆಯಿರಿ, ಇನ್ನೊಮ್ಮೆ ಅಲ್ಲಾನನ್ನು ಪ್ರಾರ್ಥಿ ಸೋಣ,'' ಎಂದು ನುಡಿದು, ಬಾದಶಹನು ಆಸನದಿಂದ ಏಳತೊಡಗಿದನು. ಆದರೂ ರಾಜಾ ಜಯಸಿಂಗನು ಛತ್ರಸಾಲನ ಸಂತಪ್ತ ಮುದ್ರೆಯಕಡೆಗೆ ನೋಡುತ್ತ ಆತನನ್ನು ಮೇಲುಗಟ್ಟುವದಕ್ಕಾಗಿ ಮತ್ತೆ ಮಾತಾಡಬೇಕೆನ್ನು ತ್ತಿದ್ದನು. ಜಯಸಿಂಗನು ವ್ಯರ್ಥವಾಗಿ ಬಾದಶಹನ ಕ್ಷೋಭವನ್ನುಸಂಪಾದಿಸಿ ಕೊಳ್ಳುವನೆಂದು ಎಲ್ಲರಿಗೂ ತೋರಿತು. ಜಯಸಿಂಗನನ್ನು ಹೇಗೆ ಸುಮ್ಮ ನಿರಿಸಬೇಕೆಂದು ಬಾದಶಹನು ಯೋಚಿಸತೊಡಗಿದನು. ರಾಜಾ ಜಯಸಿಂ ಗನ ತುಟಿಗಳು ಛತ್ರಸಾಲನನ್ನು ಮೇಲುಗಟ್ಟಿ ಮಾತಾಡುವದಕ್ಕಾಗಿಯೂ, ಬಾದಶಹನ ತುಟಿಗಳು ಜಯಸಿಂಗನಿಗೆ ಶಿಕ್ಷೆಯನ್ನು ವಿಧಿಸುವದಕ್ಕಾಗಿಯೂ ಅಲ್ಲಾಡುತ್ತಿರಲು, ಅಷ್ಟರಲ್ಲಿ ರಾಜಾ ಜಯಸಿಂಗನ ಮೇಲೆ ಬಂದ ಪ್ರಸಂಗ ವನ್ನು ಅರಿತು ಛತ್ರಸಾಲನು ಮುಂದಕ್ಕೆ ಬಂದು ಆತನನ್ನು ಕೆಳಗೆ ಕುಳ್ಳಿರಿಸಿ ವಿನಯದಿಂದ—''ಕಾಕಾಜೀ, ವಿಷದ ಪರೀಕ್ಷೆಯನ್ನು ಹೆಚ್ಚುಮಾಡುವದ ರಲ್ಲಿ ಅರ್ಥವಿಲ್ಲ; ಇದ್ದಲಿಯನ್ನು ಪೆಚ್ಚಿಗೆ ತೊಳೆಯುವದರಲ್ಲಿ ಅರ್ಥವಿಲ್ಲ! ನನಗೆ ಇನ್ನು ಸ್ವದೇಶಕ್ಕೆಹೋಗುವದಕ್ಕಾಗಿ ಅಪ್ಪಣೆಕೊಡಿರಿ. ನನ್ನಮನಸ್ಸು ನನ್ನ ಜನರ ಕಡೆಗೆ ಎಳೆಯುತ್ತಿರುವದು! ನಿಮ್ಮನ್ನು ಸಂತುಷ್ಟರಾಗಮಾಡು ವದಕ್ಕಾಗಿಯೂ, ನಿಮ್ಮ ಅಪ್ಪಣೆಯನ್ನು ಪಾಲಿಸುವದಕ್ಕಾಗಿಯೂ ನನ್ನ ಮನ ಸ್ಸಿಲ್ಲದಿದ್ದರೂ ಇಲ್ಲಿಗೆ ಬಂದೆನು. ಇನ್ನು ಹೋಗಿ ಬರುತ್ತೇನೆ.'' ಎಂದು ಹೇಳಿ ರಾಜಾ ಜಯಸಿಂಗನನ್ನು ವಂದಿಸಿ ಛತ್ರಸಾಲನು ಹೊರಡಲು ಸಿದ್ಧನಾ ದನು. ಆಗ ಖುದ್ದ ಬಾದಶಹನ, ಹಾಗು ಬೇರೆಯವರ ಲಕ್ಷವು ತನ್ನಕಡೆಗೆ ಇರುವದನ್ನು ನೋಡಿ ಛತ್ರಸಾಲನು ಔರಂಗಜೇಬ ಬಾದಶಹನ ಕಡೆಗೆ ತಿರುಗಿ ಶಾಂತರೀತಿಯಿಂದ ನುಡಿದನೇನಂದರೆ—

ಬಾದಶಹಾ! ನಿನ್ನಿಂದ ಯಾವದೊಂದು ಹಕ್ಕನ್ನು ಸಂಪಾದಿಸುವದ ಕ್ಕಾಗಿಯಾಗಲಿ, ನಿನ್ನಿಂದಯಾವದಾದರೊಂದು ದೇಣಿಗೆಯನ್ನು ದೊರಕಿಸುವ ದಕ್ಕಾಗಿಯಾಗಲಿ, ನನ್ನ ತಂದೆಯ ಅಮೀರಿಯನ್ನು, ಅಥವಾ ರಾಜ್ಯವನ್ನು ನಿನ್ನಲ್ಲಿ ಭಿಕ್ಷೆ ಬೇಡುವದಕ್ಕಾಗಿಯಾಗಲಿ ಛತ್ರಸಾಲನು ನಿನ್ನ ದರ್ಬಾರಕ್ಕೆ ಬಂದಿರುವದಿಲ್ಲ. ಜಯಸಿಂಗರಾಜರು ನನ್ನ ತಂದೆಯ ಮಿತ್ರರಾಗಿದ್ದು, ನನ್ನ ಮೇಲೆ ಅವರ ವಿಶೇಷವಾದ ಪ್ರೇಮವಿರುವದು. ಅಂಥವರ ಇಚ್ಛೆಯನ್ನು ಮುರಿಯಲಾರದೆ ನಾನು ಇಲ್ಲಿಗೆಬಂದಿರುವೆನು. ನನ್ನಂಥ ಸಾಮ್ರಾಜ್ಯ ದ್ವೇಷಿಯಿಂದ ಸೇವೆಯನ್ನು ಸ್ವೀಕರಿಸಲಿಕ್ಕೆ ನೀನು ಇಚ್ಛಿಸದಿರುವದು ನ್ಯಾಯ್ಯವಾಗಿರುವಂತೆ, ನಿನ್ನಂತಹ ಪರಸ್ವಾತಂತ್ರ್ಯಹಾರಕ ದ್ರೋಹಿಯ ಸೇವೆಯನ್ನು ಮಾಡಲಿಚ್ಛಿಸದಿರುವದು ನನ್ನಂಥ ಸ್ವಾತಂತ್ರ್ಯ ಪ್ರಿಯನಿಗೂ ನ್ಯಾಯ್ಯವಾಗಿರುವದು. ನಾನು ದೇವಗಡದಲ್ಲಿ ಪರಾಕ್ರಮವನ್ನು ಪ್ರಕಟ ಮಾಡಿದ್ದು ನಿನ್ನ ಸಾಮ್ರಾಜ್ಯದ ಸೇವೆಯೆಂದಲ್ಲ, ನಿನ್ನ ಪ್ರಸನ್ನತೆಯಿಂದ ಏನಾದರೂ ಗಳಿಸಬೇಕೆಂದೂ ಅಲ್ಲ! ನಿನ್ನಲ್ಲಿ, ಹಾಗೂ ನಿನ್ನ ಸೈನ್ಯದಲ್ಲಿ ನಿಜವಾದ ತಿರುಳು ಎಷ್ಟಿರುವದೆಂಬುದನ್ನು ಕಣ್ಣು ಮುಟ್ಟಿ ನೋಡುವದಕ್ಕಾಗಿ ನಾನು ದೇವಗಡದಲ್ಲಿ ಪರಾಕ್ರಮವನ್ನು ತೋರಿಸಿದ್ದು! ನಿನ್ನ ಪ್ರಚಂಡ ಸೈನ್ಯದಲ್ಲಿ ಆಡಂಬರಕ್ಕಿಂತ ನಿಜವಾದ ತಿರುಳು ಬಹಳ ಸ್ವಲ್ಪ ಇರುವದೆಂಬ ಮಾತು ದೇವಗಡದ ಯುದ್ಧದಲ್ಲಿ ನನಗೆ ಅನುಭವದಿಂದ ಗೊತ್ತಾಗಿದೆ. ಕುಟಿಲ ಧರ್ಮಮೂಢನಾಗಿರುವ ನಿನ್ನಲ್ಲಿ ಮಾತ್ಸರ್ಯ, ದುರಭಿಮಾನ,ಸಂತಾಪ, ಕ್ರೌರ್ಯ ಮುಂತಾದ ದುರ್ಗುಣಗಳಭಾಂಡಾರವಲ್ಲವೆ, ಬೇರೆ ಸದ್ಗುಣಗಳ ಗಂಧವಾಗಲಿ, ನಿಜವಾದ ಮುತ್ಸದ್ದಿತನವಾಗಲಿ ಇರುವದಿಲ್ಲವೆಂಬ ಮಾತು ಈಗ ಎಲ್ಲ ದರ್ಬಾರದವರ ಸಾಕ್ಷಿಯಿಂದ ಗೊತ್ತಾಗಿಹೋಯಿತು. ಬಾದಶಹಾ! ನಮ್ಮಂಥ ಸ್ವಾತಂತ್ರ್ಯಪ್ರಿಯ ಶೂರ ಬುಂದೇಲಿಗಳನ್ನು ಸಂಭಾವಿಸುವಷ್ಟು ಮನೋಬಲವೂ, ಔದಾರ್ಯವೂ ನಿನ್ನಲ್ಲಿ ಇಲ್ಲವೇ ಇಲ್ಲ! ಆದರೆ ನೆನಪಿನಲ್ಲಿಡು, ಛತ್ರಸಾಲನು ಕೆಚ್ಚೆದೆಯ ಸ್ವಾತಂತ್ರ್ಯಪ್ರಿಯ ವೀರನಾದ ಚಂಪತರಾಯನ ಮಗನಾಗಿರುವನೆಂಬದನ್ನು ಚೆನ್ನಾಗಿ ನೆನಪಿನಲ್ಲಿಡು! ಕಟುತರ ಕರ್ತವ್ಯವೆಂದು ನಾನು ದೇವಗಡದಲ್ಲಿ ಖಡ್ಗವನ್ನು ಝಳಪಿಸಿದ್ದು ನಿನ್ನ ನೆನಪಿನಲ್ಲಿ ಇದ್ದೇ ಇರುವದು. ಇನ್ನುಮೇಲೆ ಪವಿತ್ರಕರ್ತವ್ಯವೆಂದು

ಬುಂದೇಲಿಗಳ ತೀಕ್ಷ್ಣಖಡ್ಗಗಳು ವಿದ್ಯುಲ್ಲತೆಯಂತೆ ಝಳಪಿಸುತ್ತಿರುವದನ್ನು ಕಣ್ಣುಮುಟ್ಟಿ ನೀನು ನೋಡುವೆಯಂತೆ! ಬಾದಶಹಾ! ಬುಂದೇಲಖಂಡ ದೊಳಗಿನ ಪ್ರತಿ ಒಬ್ಬ ಬುಂದೇಲನು ಛತ್ರಸಾಲನಿರುವನೆಂಬದನ್ನು ಲಕ್ಷ ದಲ್ಲಿಡು! ಕಾಕಾಜಿ, ಬರುವೆನಿನ್ನು! ವಿಂಧ್ಯವಾಸಿನಿಯ ಬರುವ ಉತ್ಸವಕ್ಕೆ ದಯಮಾಡಿಸುವ ಕೃಪೆಮಾಡಿದರೆ, ನನಗೆ ಬಹಳ ಆನಂದವಾಗುವದು! ಛತ್ರಸಾಲನ ಚಿಂತೆಯು ಶ್ರೀ ವಿಂಧ್ಯವಾಸಿನಿಗೆ ಇರುವದು. ನೀವು ನನ್ನ ಸಲುವಾಗಿ ಸ್ವಲ್ಪವೂ ಚಿಂತೆಮಾಡಬೇಡಿರಿ!

ಹೀಗೆ ನುಡಿದು ಛತ್ರಸಾಲನು ವಿದ್ಯುದ್ವೇಗದಿಂದ ಅಲ್ಲಿಂದ ಹೊರಟು ಹೋದನು. ಆತನ ಪರಾಕ್ರಮದ ಸುದ್ದಿಯನ್ನು ಕೇಳಿ ಆಶ್ಚರ್ಯಮುಗ್ಧ ರಾಗಿದ್ದ ದಿಲ್ಲಿಯ ನಾಗರಿಕರು, ಆತನ ಆವೇಶಪೂರ್ಣ ಭಾಷಣವನ್ನು ಕೇಳಿ, ಕ್ಷಣದಲ್ಲಿ ಅದೃಶ್ಯನಾದ ಬಗೆಯನ್ನರಿತು ಬೆರಗಾಗಿ ನಿಂತುಬಿಟ್ಟರು. ಬಾದಶಹನು ಸಿಟ್ಟಿನಿಂದ ಹುಚ್ಚಾಗಿಹೋದುದರಿಂದ, ರತ್ನಖಚಿತವಾದ ಮಯೂರಾಸನದ ವಿವಿಧ ರತ್ನಗಳ ಬೆಳಕಿನಲ್ಲಿ ದಗದಗನೆ ಉರಿಯುತ್ತಾ ಕುಳಿತುಕೊಂಡಿದ್ದನು. ಆತನು ಆಗ ಛತ್ರಸಾಲನಿಗೆ ಯಾವ ಕ್ರೂರ ಶಿಕ್ಷೆ ಯನ್ನು ವಿಧಿಸಬೇಕೆಂದು ನಿಶ್ಚಯಿಸುವಷ್ಟು ಸ್ಥಿರಮನಸ್ಸಿನವನು ಆಗಿದ್ದಿಲ್ಲ. ಆ ದುರಭಿಮಾನಿಯಾದ ಬಾದಶಹನ ಉನ್ಮತ್ತವಾದ ಮನಸ್ಸಿಗೆ, ರಾಜಾ ಜಯಸಿಂಗನೊಂದು, ಕುಮಾರ ಛತ್ರಸಾಲನೊಂದು ಹೀಗೆ ಎರಡು ಬರೆ ಗಳನ್ನು ಕೊಟ್ಟಹಾಗಾಯಿತು! ಸಂತಾಪಭರದಲ್ಲಿ ಬಾದಶಹನು ಒಂದೂ ಮಾತಾಡಲೊಲ್ಲನು, ಸಿಂಹಾಸನವನ್ನು ಬಿಟ್ಟು ಏಳಲೂಒಲ್ಲನು! ಹೀಗೆ ಕೆಲ ಹೊತ್ತು ಕ್ರಮಿಸಿದ ಮೇಲೆ ಧರ್ಮಾಂಧ ಬಾದಶಹನು ತನ್ನೊಳಗೆ ಮಾತಾಡಿ ಕೊಳ್ಳುವಂತೆ:—"ಹೇಗಿದ್ದರೂ ಕಾಫಿರರ ರೀತಿಯು ಹೀಗೆಯೆ! ಸರ್ವ ಶಕ್ತಿಯನ್ನು ಒಟ್ಟುಗೂಡಿಸಿ ಇವರ ರಕ್ತ ಹಿಂಡುವದೇ ಇದಕ್ಕೆ ಉಪಾ ಯವು" ಎಂದು ನುಡಿದು, ತಟ್ಟನೆ ಸಿಂಹಾಸನದಿಂದೆದ್ದು ಮೋತೀಮಸೀದಿಯ ಕಡೆಗೆ ಸಾಗಿದನು.

——(೦)——

೨೯ನೆಯ ಪ್ರಕರಣ - ಸಂಶಯನಿವೃತ್ತಿ

ಹಿಂದಿನ ಪ್ರಕರಣದಲ್ಲಿ ಹೇಳಿದಂತೆ, ದೇವಗಡದ ಜಯದಿಂದ ಬೇರೆ ಬೇರೆ ಸರದಾರರು ಬೇರೆಬೇರೆ ಉಚಿತಗಳನ್ನು ಹೊಂದಿದರಷ್ಟೆ? ಅದರಂತೆ ಬಾದಶಹನ ಜನಾನಖಾನೆಯೊಳಗಿನ ಬಾದಶಹನ ರಾಣಿಯರೂ, ಬಂಗಾರದವರೂ ಅಕಸ್ಮಾತ್ ಇಂದು ವಿಜಯೋತ್ಸವದಿಂದ ಬಾದಶಹನು ತಮ್ಮಲ್ಲಿಗೆ ಬಂದರೆ, ತಾವು ಏನು ಬೇಡಿಕೊಳ್ಳಬೇಕೆಂದು ಎಣಿಕೆ ಹಾಕುತ್ತಲಿದ್ದರು. ಬಾದಶಹನ ಮನಸ್ಸನ್ನು ರಮಿಸುವದಕ್ಕಾಗಿ ಎಷ್ಟು ಶೃಂಗಾರವಾದರೂ ಅವರ ಮನಸ್ಸಿಗೆ ತೃಪ್ತಿಯೇ ಆಗಲೊಲ್ಲದು. ಆದರೆ ತನ್ನಲ್ಲಿಗೆ ಬಾದಶಹನು ಬರುವ ಸಂಭವವಿರುವದೆಂಬ ಮಾತು ಪಟ್ಟರಾಣಿಯಾದ ಆಯೇಷೆಗೆ ಗೊತ್ತಿದ್ದರೂ, ಶೃಂಗಾರ-ವಿಲಾಸಗಳ ವಿಚಾರವು ಆಕೆಯನ್ನು ಸೋಂಕದೆ, ಆಕೆಯು ಸ್ವಸ್ಥವಾಗಿ ಕುಳಿತುಬಿಟ್ಟಿದ್ದಳು. ಶುದ್ಧಪ್ರೇಮದ ಪ್ರವಾಹವನ್ನು ಪತಿಯ ಮುಂದೆ ಹರಿಸಲು ಸಮರ್ಥರಾದ ಪತಿವ್ರತೆಯರು, ಪತಿಯನ್ನು ಶೃಂಗಾರಾದಿಗಳಿಂದ ಮೋಹಿಸುವ ಗೊಡವಿಗೆ ಯಾಕೆ ಹೋಗುವರು?

ಈ ದಿವಸ ಯಾಕೋ ಆಯೇಷಾ ರಾಣಿಯ ಮನಸ್ಸಿನ ವಿಚಾರವೇ ಬೇರೆಯಾಗಿತ್ತು. ಆಕೆಗೆ ಹದಿನಾರು ವರ್ಷಗಳ ಹಿಂದಿನ ಮಾತು ನೆನಪಾಗಿ, ತಾನು ಆಗ ಬಾದಶಹನಿಗೆ ಪ್ರೇಮವನ್ನು ಒಪ್ಪಿಸುವಾಗ ಹೇಗೆ ಮೋಸ ಹೋದೆನೆಂಬುದನ್ನು ನೆನಿಸಿ ಆಕೆಯು ಪಶ್ಚಾತ್ತಾಪ ಪಡತೊಡಗಿದಳು. ಆಗ ತನ್ನ ಅಣ್ಣನಾದಸಭಾಕರಣನು ಚಂಪತರಾಯನಿಂದಕೂಡಿ ಬುಂದೇಲದ ಸ್ವಾತಂತ್ರ್ಯದ ಸಲುವಾಗಿ ಯವನರೊಡನೆ ಕಾದುತ್ತಿರುವದು ಆಕೆಗೆ ನೆನಪಾಯಿತು. ಈಗ ತನ್ನ ಆ ಅಣ್ಣನು ದೇಶದ ಸ್ವಾತಂತ್ರ್ಯದ ಯತ್ನದಲ್ಲಿ ಎಷ್ಟು ತೊಡಗಿಹೋಗಿರಬಹುದಲ್ಲ, ಆತನು ಸ್ವದೇಶ - ಪ್ರೀತಿಯ ತೇಜಸ್ಸಿನಿಂದ ಎಷ್ಟು ಪ್ರಕಾಶಿಸುತ್ತಿರಬಹುದಲ್ಲ ಎಂಬ ವಿಚಾರವು ಆಕೆಯ ಮನಸ್ಸಿನಲ್ಲಿ ಉತ್ಪನ್ನವಾಗಿ, ತಾನು ಮಾತ್ರ ಸಾಗರದ ಅರಸು ಮನೆತನಕ್ಕೆ ಕಲಂಕ ಉತ್ಪನ್ನವಾಗುವಂತೆ ಯವನರ ಜನಾನಖಾನೆಯನ್ನು ಸೇರಿದೆನು, ಎಂಬ ಪಶ್ಚಾತ್ತಾಪದಿಂದ ಆಕೆಯು ತಳಮಳಿಸಹತ್ತಿದಳು. ಅಷ್ಟರಲ್ಲಿ ಯಾರದೋ ಕಾಲ ಸಪ್ಪಳವಾಗಲು, ಬಾದಶಹನೇ ಬಂದನೆಂದು ತಿಳಿದು ಆಕೆಯು ಅತ್ತ ನೋಡುತ್ತಾಳೆ, ಎದುರಿಗೆ ತೇಜೋಹೀನನಾಗಿದ್ದ ಸಭಾಕರಣನ ಕರಿಯ ಮೋರೆಯ ಮೂರ್ತಿಯು!

ಅಣ್ಣನ ಈ ವಿಕೃತರೂಪವನ್ನು ನೋಡಿ ಆಯೇಷೆಯು ಆಶ್ಚರ್ಯಪಟ್ಟದ್ದಲ್ಲದೆ, ಅಂತಹ ರಾತ್ರಿಯ ಕಾಲದಲ್ಲಿ ಅಕಸ್ಮಾತ್ ಆ ರೂಪವು ಎದುರಿಗೆ ಬಂದದ್ದರಿಂದ ಸ್ವಲ್ಪ ಹೆದರಿಯೂ ಹೆದರಿದಳು! ಆಕೆಯು ಎವೆಗೆ ಎವೆಹಾಕದೆ ಸಭಾಕರಣನನ್ನು ನೋಡತೊಡಗಿದಳು. ಇತ್ತ ಸಭಾಕರಣನೂ ಹಾಗೆಯೇ ಆಯೇಷೆಯನ್ನು ನೋಡತೊಡಗಿದ್ದನು. ಹೀಗೆ ಇಬ್ಬರೂ ಅಣ್ಣತಂಗಿಯರು ಒಬ್ಬರನ್ನೊಬ್ಬರು ಸ್ತಬ್ಧರಾಗಿ ನೋಡುತ್ತಿರಲು, ಬಾದಶಹನು ಬರುವ ಹೊತ್ತಿನಲ್ಲಿ ತನ್ನ ಈ ಶೂರ ಬಂಧುವು ಇಲ್ಲಿಗೆ ಹೇಗೆ ಬಂದಿರಬಹುದೆಂಬ ಆಶ್ಚರ್ಯದಿಂದ ಆಕೆಯು ಅಣ್ಣನನ್ನು ಮಾತನಾಡಿಸಬೇಕೆನ್ನುತ್ತಿರಲು, ಸಭಾಕರಣನು ತಂಗಿಯನ್ನು ಕುರಿತು ಗಾಂಭೀರ್ಯದಿಂದ

ಸಭಾಕರಣ—ಲಲಿತೇ, ಅವನೆ ನಾನು. ಹೀಗೆ ಹುಚ್ಚಿಯಹಾಗೆ ಏನು ನೋಡುತ್ತೀ? ಸಾಗರದ ಅರಮನೆಯೊಳಗಿನ ಲಲಿತೆಯು ಸುಕುಮಾರ ಸುಂದರರೂಪ-ಲಾವಣ್ಯಗಳನ್ನೂ, ಆಕೆಯ ಸದ್ಗುಣ ಸಮುಚ್ಚಯವನ್ನೂ ನೋಡಿ ಆನಂದಪಡುವವನೂ, ಲಲಿತೆಯು ಭಗಿನೀಪ್ರೇಮದಿಂದ ಸ್ವರ್ಗ ಸೌಖ್ಯವು ಪ್ರಾಪ್ತವಾದಂತೆ ಸಂತೋಷಪಡುವವನೂ, ಲಲಿತೆಯು ಬಟವಾನದಿಯಲ್ಲಿ ಮುಳುಗಿದಳೆಂಬ ತಿಳುವಳಿಕೆಯಿಂದ ಬಹಳವಾಗಿದುಃಖಿಸುವವನೂ ಕಡೆಗೆ ಇಂತಹ ನೀಚ ಪರಿಸ್ಥಿತಿಯಲ್ಲಿ ಲಲಿತೆಯ ದರ್ಶನವನ್ನು ಅಕಸ್ಮಾತ್ತಾಗಿ ಮಾಡಿಕೊಂಡು ವ್ಯಥಪಡುತ್ತಿರುವ ನಿನ್ನ ಅಣ್ಣನಾದ ಸಭಾಕರಣನೂ ನಾನೇ! ನಾನು ನಿನ್ನ ಪ್ರೇಮಲಬಂಧುವಿರುವೆನೆಂಬ ಗುರುತು ನಿನಗೆ ಹತ್ತಲೊಲ್ಲದೋ?

ಲಲಿತೆ (ಉದ್ವೇಗದಿಂದ)— ಗುರುತು ಹತ್ತಿತು! ಸಭಾಕರಣ, ನಿಮ್ಮ ಗುರುತು ಹತ್ತಿತು; ಆದರೆ ನಿಮ್ಮ ಅವಸ್ಥೆಯು ಹೀಗೆ ಏಕಾಯಿತು? ನಿಮ್ಮ ಆ ಉತ್ಸಾಹ, ನಿಮ್ಮ ಆ ಆವೇಶ, ನಿಮ್ಮ ಆ ತೇಜಸ್ಸು ಎಲ್ಲಿ ಅಡಗಿದುವು? ಹದಿನಾರು ವರ್ಷದ ಹಿಂದಿನ ಸಭಾಕರಣ ಈಗಿನ ಸಭಾಕರಣ ಇವರಲ್ಲಿ ಇಷ್ಟು ಹೆಚ್ಚು ಕಡಿಮೆಯು ಯಾತರಿಂದಾಯಿತು?

ಸಭಾಕರಣ—ಲಲಿತೇ, ಹದಿನಾರು ವರ್ಷದ ಹಿಂದಿನ ಸಭಾಕರಣನು ಬೇರೆ, ಆ ಮೇಲಿನ ಸಭಾಕರಣನು ಬೇರೆ! ಲಲಿತೆಯು ಬುಂದೇಲಖಂಡದಲ್ಲಿ ಇಲ್ಲದ ಹಾಗಾದಕೂಡಲೆ ಮೊದಲಿನ ಸಭಾಕರಣನು ಇಲ್ಲದಂತಾದನು.

ಆತನ ಸ್ಥಳದಲ್ಲಿ ಆಸುರೀವಿಚಾರದ, ಅಮಾನುಷೀಧ್ಯೇಯದ, ರಾಷ್ಟ್ರಸೀ ಕೃತಿಯ ಈಗಿನ ದುಷ್ಟಸಭಾಕರಣನು ಬುಂದೇಲ ಖಂಡದಲ್ಲೆಲ್ಲ ಪಿಶಾಚ ದಂತೆ ಜನರನ್ನು ಪೀಡಿಸುತ್ತ ತಿರುಗುತ್ತಿರುವನು. ಈತನು ಸಭಾಕರಣನಲ್ಲ, ಸಭಾಕರಣನ ದುಷ್ಟ ಪಿಶಾಚ್ಚವು!

ಲಲಿತೆ (ದುಃಖದಿಂದ)—ಅಂದರೆ, ಸ್ವಾತಂತ್ರ್ಯದ ಪವಿತ್ರಕಾರ್ಯ ದಿಂದ ಸಭಾಕರಣನು ಹಿಂತಿರುಗಿದನೇನು? ಸ್ವದೇಶ ಭಕ್ತಿಯ ಕರ್ತವ್ಯವನ್ನು ಸಭಾಕರಣನು ಬಿಟ್ಟುಬಿಟ್ಟನೇನು? ವಿಂಧ್ಯವಾಸಿನಿಯ ಪ್ರೇಮಕ್ಕೂ, ಚಂಪತರಾಯನ ಸ್ನೇಹಕ್ಕೂ, ಪ್ರಾಣನಾಥ ಪ್ರಭುಗಳ ಆಶೀರ್ವಾದಕ್ಕೂ ಸಭಾಕರಣನು ಎರವಾದನೇನು?

ಸಭಾಕರಣ—ಸಭಾಕರಣನು ಇದಕ್ಕೂ ಹೆಚ್ಚು ಅಧಃಪತನವನ್ನು ಹೊಂದಿರುವನು. ಅವನು ವಿಂಧ್ಯವಾಸಿನಿಯ ಪ್ರೇಮಕ್ಕಷ್ಟೇ ಎರವಾಗದೆ, ಆ ಲೋಕಮಾತೆಯ ದ್ರೋಹಕ್ಕೂ ಪಾತ್ರನಾಗಿರುವನು. ಚಂಪತರಾಯನ ಸ್ನೇಹಕ್ಕಷ್ಟೇ ಆತನು ಎರವಾಗದೆ, ಆ ಸ್ವಾತಂತ್ರ್ಯರವಿಯನ್ನು ನುಂಗಿಬಿಟ್ಟ ರಾಹುವೂ ಆಗಿರುವನು. ರಾಹುವು ಚಂಪತರಾಯನನ್ನು ನುಂಗಿಬಿಟ್ಟನು. ರಾಜಾ ಚಂಪತರಾಯನಿಗೂ, ಆತನ ಧ್ಯೇಯಕ್ಕೂ ಖಗ್ರಾಸ ಗ್ರಹಣವುಹಿಡಿಯಿತು. ಸಭಾಕರಣನು ಪ್ರಾಣನಾಥ ಪ್ರಭುಗಳ ಆಶೀರ್ವಾದಕ್ಕಷ್ಟೇ ಎರವಾಗದೆ, ಅವರ ನಿಗ್ರಹಕ್ಕೂ, ಬುಂದೇಲಖಂಡದ ಶಾಪಸಹಸ್ರಗಳಿಗೂ ಗುರಿಯಾಗಿರುವನು.

ಲಲಿತೆ (ಆಶ್ಚರ್ಯದಿಂದ)— ನೆಟ್ಟಗೆ ಹೇಳಿರಿ! ಇನ್ನಿಷ್ಟು ಸ್ಪಷ್ಟವಾಗಿ ಮಾತಾಡಿರಿ! ರಾಜಾ ಚಂಪತರಾಯನು ನೆಟ್ಟಗಿರುವನಷ್ಟ?

ಸಭಾಕರಣ (ತೀಕ್ಷ್ಣದೃಷ್ಟಿಯಿಂದ ಲಲಿತೆಯ ಮೋರೆ ನೋಡುತ್ತ)-ರಾಜಾ ಚಂಪತರಾಯನು ಸತ್ತು ಬಹಳ ದಿವಸಗಳಾದವು. ಚಂಪತರಾಯನ ಉದ್ದೇಶವು ಕೊನೆಗಾಣದೆ ಹೋಯಿತು. ಆತನ ರಾಜ್ಯವು ದಿಲ್ಲೀ ಸಾಮ್ರಾಜ್ಯಕ್ಕೆ ಸೇರಿತು. ಆತನ ಮಗ ಛತ್ರಸಾಲನು ಪರದೇಶಿಯಾದನು. ರಾಣೀ ಸರಲಾದೇವಿಯು ಅನಾಥಳಾದಳು!

ಲಲಿತೆ (ಕಣ್ಣೀರು ಸುರಿಸುತ್ತ)—ಹಾಯ! ದೈವದ ಎಂತಹ ವಿಚಿತ್ರ ಗತಿಯಿದು!

ಸಭಾಕರಣ (ಸಂಶಯದಿಮ್ದ್ರಯಿಂದ ತಂಗಿಯನ್ನು ನೋಡುತ್ತ)— ಲಲಿತೇ, ಚಂಪತರಾಯನ ದುರವಸ್ಥೆಯಿಂದ ಇಷ್ಟುದುಃಖಿಸಲಿಕ್ಕೆ ಚಂಪತರಾಯನು ನಿನಗೆ ಯಾರು? ಆತನ ಮರಣದಿಂದ ನಿನಗೇಕೆ ಇಷ್ಟು ದುಃಖವಾಗಬೇಕು?

ಲಲಿತೆ (ಆಶ್ಚರ್ಯದಿಂದ ಅಣ್ಣನನ್ನು ನೋಡುತ್ತ)— ಚಂಪತರಾಯನು ನನಗೆ ಯಾರೆಂದು ಕೇಳುವಿರಾ? ಚಂಪತರಾಯನು ನನಗೆ ಏನಾಗಬೇಕೆಂದು ಕೇಳುವಿರಾ? ಚಂಪತರಾಯನು ನನಗೆ ಏನಾಗಬೇಕೆಂಬದು ಸಭಾಕರಣನಿಗೆ ಗೊತ್ತಿಲ್ಲವೆ?

ಸಭಾಕರಣ—ಚಂಪತರಾಯನ ಹಾಗು, ಲಲಿತೆಯ ಸಂಬಂಧವು ನನಗೆ ಗೊತ್ತಿಲ್ಲ.

ಲಲಿತೆ—ಸಂಬಂಧವು ಗೊತ್ತಿಲ್ಲವೆ? ಓರಛಾದ ರಾಣಿಯಾದ ಹೀರಾದೇವಿಗೆ ನನ್ನ, ಹಾಗು ಚಂಪತರಾಯನ ಸಂಬಂಧವು ಗೊತ್ತಿರುತ್ತದೆ.

ಈ ಮಾತನ್ನು ಕೇಳಿದಕೂಡಲೆ ಸಭಾಕರಣನ ಎದೆಯು ಹಾರಿ, ಆತನ ಅಂತಃಕರಣವು ಅತ್ಯಂತ ವ್ಯಥಿತವಾಯಿತು. ಆತನು ಮತ್ತೆ ಲಲಿತೆಯನ್ನು ಕುರಿತು—

ಸಭಾಕರಣ—ಹೀರಾದೇವಿಗೆ ಲಲಿತೆಯು, ಹಾಗು ಚಂಪತರಾಯನ ಸಂಬಂಧವು ಪೂರ್ಣವಾಗಿ ಗೊತ್ತಿರುವದೆಯೇ?

ಲಲಿತೆ (ನಿರ್ಧಾರದಿಂದ)—ಹೌದು, ಗೊತ್ತಿದೆ!

ಸಭಾಕರಣ—ಹೀರಾದೇವಿಯ ಮಾತನ್ನು ಸಭಾಕರಣನು ನಂಬಬೇಕೆ?

ಲಲಿತೆ—ನಿರ್ಬಾಧವಾಗಿ ನಂಬಬೇಕು.

ಸಭಾಕರಣ (ಕಂಪಿತಸ್ವರದಿಂದ)—ಚಂಪತರಾಯನು ಲಲಿತೆಯ ಕೌಮಾರ್ಯಹರಣಮಾಡಿದನೆಂದು ಹೀರಾದೇವಿಯು ಹೇಳಿದಳು! ಲಲಿತೇ, ಬುಂದೇಲಖಂಡವನ್ನು ಬಿಡಲಿಕ್ಕೆ ನಿನಗೆ ಇದೇಕಾರಣವಾಯಿತೇನು?

ಲಲಿತೆ (ಆವೇಶದಿಂದ)—ಅಣ್ಣಾತಂಗಿಯರ ಪ್ರೇಮಜಲ್ಲಿ ಹೀಗೆ ವ್ಯತ್ಯಾಸವೆಣಿಸುವ ನೀಚರಿಗೆ ಧಿಕ್ಕಾರವು! ಅಣ್ಣಾ, ನೀನೂ ಅಂತಹಅಮಂಗಲಮಾತನ್ನು ನಂಬಿದೆಯಾ? ಜಗತ್ತಿನೊಳಗಿನ ಪವಿತ್ರ ಪ್ರೇಮದ ಅಂಶವು ಹಾಳಾ

ಗಿಹೋಯಿತೇ? ಚಂಪತರಾಯನು ನನ್ನ ಅಣ್ಣನಿದ್ದನು. ಚಂಪತರಾಯನೂ ಲಲಿತೆಯೂ ಅಣ್ಣತಂಗಿಯರಾಗಿ ನಡೆದುಕೊಳ್ಳುತ್ತಿದ್ದರು!

ಲಲಿತೆಯ ಈ ಮಾತುಗಳನ್ನು ಕೇಳಿ ಸಭಾಕರಣನು ಒಂದು ದೀರ್ಘ ಶ್ವಾಸವನ್ನು ಬಿಟ್ಟು, ನಾನು ಬದುಕಿದೆನೆಂದು ಆನಂದಪಟ್ಟನು. ಆತನ ಬಾಡಿದ ಮೋರೆಯು ಪ್ರಸನ್ನವಾಗತೊಡಗಿತು. ಆತನ ನಿಸ್ತೇಜ ಮುಖವು ಬಾಲರವಿಯಂತೆ ಬರಬರುತ್ತ ತೇಜೋಮಯವಾಗತೊಡಗಿತು. ಆತನ ಮುಖಲಕ್ಷಣದ ರೂಪಾಂತರಕ್ಕಾಗಿ ಆಶ್ಚರ್ಯಮೂಢಳಾಗಿರುವ ಲಲಿತೆಯ ಕೈಹಿಡಿದು ಸಭಾಕರಣನು—

ಸಭಾಕರಣ—ಲಲಿತೇ, ನೀನು ನನ್ನ ಸಂಗಡ ಬುಂದೇಲಖಂಡಕ್ಕೆ ಈಗಲೇ ಹೊರಡು. ಇನ್ನು ನಾನು ದೇಶದ್ರೋಹಿ ಸಭಾಕರಣನು ಹೋಗಿ ದೇಶಭಕ್ತ ಸಭಾಕರಣನು ಆಗಬೇಕಾಗಿರುವದು. ಈ ನವೀನ ಸಭಾಕರಣತ್ವದ ದೀಕ್ಷೆಯನ್ನು ಬುಂದೇಲಖಂಡದಲ್ಲಿ ಹೀರಾದೇವಿಯ, ಹಾಗು ಬುಂದೇಲಿವೀರರ ಸಮಕ್ಷ ನೀನು ನನಗೆ ಕೊಡಬೇಕು. ಚಂಪತರಾಯನ, ಹಾಗು ಲಲಿತೆಯ ಸರಲಭಾವದ ಬಂಧುಭಗಿನಿಯ ಸಂಬಂಧವನ್ನು ಮರೆತು, ಕುಭಾವದಿಂದ ಬುಂದೇಲಖಂಡದ ನಾಶಕ್ಕೆ ಕಾರಣನಾಗಿರುವ ಈ ಮಲಿನ ಸಭಾಕರಣನನ್ನು ನೀನು ಕೈಮುಟ್ಟಿ ಪರಿಶುದ್ಧಮಾಡಬೇಕಾಗಿರುವದು. ಲಲಿತೇ, ಹೀರಾದೇವಿಯ ನೀಚತಂತ್ರದಿಂದ ಸಭಾಕರಣನಿಗೆ ಬಡೆದುಕೊಂಡಿದ್ದ ಪ್ರತಿಜ್ಞಾರೂಪವಾದ ಪಿಶಾಚವು ಬಿಟ್ಟುಹೋಗಲಿಕ್ಕೆ ನೀನೇ ಮಾಂತ್ರಿಕಳಾಗಿರುವದರಿಂದ, ನೀನು ಈಗ ಬುಂದೇಲಖಂಡಕ್ಕೆ ಬರಲೇಬೇಕು; ಆದರೆ ಇವನಾರು? ನಿನ್ನ ನಿವಾಸಸ್ಥಾನದ ಕಡೆಗೆ ಯಾವನು ಬರುತ್ತಿರುವನು? ಇವನು ಬಾದಶಹನು; ಲಲಿತೆಯನ್ನು ಬುಂದೇಲಖಂಡದಿಂದ ಓಡಿಸಿಕೊಂಡು ಬಂದಿರುವ ಬಾದಶಹನು; ಲಲಿತೆಯ ಜನ್ಮವನ್ನು ಮಣ್ಣುಗೂಡಿಸಿದಬಾದಶಹನು! ಸಾಗರದ ರಾಜಮನೆತನಕ್ಕೆ ಕಲಂಕವನ್ನುಂಟುಮಾಡಿದ ಬಾದಶಹನು! ಬಾದಶಹಾ, ಲಲಿತೆಯ ಸುಖದಲ್ಲಿ ನೀನು ಮಣ್ಣುಗೂಡಿಸಿದೆಯಲ್ಲವೆ? ಈ ಜನಾನಖಾನೆಯಲ್ಲಿ ಲಲಿತೆಯನ್ನು ನೀನೇ ಒತ್ತಾಯದಿಂದ ಎಳೆದುತಂದೆಯಲ್ಲವೆ? ಲಲಿತೆಯ ಪಾವಿತ್ರ್ಯವನ್ನು ನೀನೇ ನಿನ್ನ ವಿಷಯಾಸಕ್ತಿಗೆ ಬಲಿಯಾಗಿ ನಷ್ಟಪಡಿಸಿದೆಯಲ್ಲವೆ?

ಬಾದಶಹ (ಆಶ್ಚರ್ಯದಿಂದ)—ಯಾರು? ಸಭಾಕರಣ, ನೀನು ಇಲ್ಲಿ ಈ ಜನಾನಖಾನೆಯಲ್ಲಿ ಹೇಗೆ ಬಂದೆ? ಇಷ್ಟು ವರ್ಷಗಳಾದಮೇಲೆ ಲಲಿತೆಯು ಇಲ್ಲಿ ಇರುವಳೆಂಬದು ನಿನಗೆ ಹೇಗೆ ಗೊತ್ತಾಯಿತು? ಎಲ! ಇವನಂತು ಖಡ್ಗಕ್ಕೆ ಕೈಹಾಕಿದನು! ಶೂರ ಬುಂದೇಲನೇ, ವಿಚಾರಮಾಡು-ವಿಚಾರಮಾಡು! ನಾನು ಅಧಿಕಾರದ ಬಲದಿಂದ ಲಲಿತೆಯನ್ನು ಜನಾನಖಾನೆಯಲ್ಲಿ ಎಳೆದು ತಂದೆನೆಂದು ನಿನಗೆ ಯಾರು ಹೇಳಿದರು? ಆಯೇಷಾ ಪ್ಯಾರಿ! ನಿನ್ನ ಕ್ರುದ್ಧನಾದ ಅಣ್ಣನನ್ನು ಶಾಂತಗೊಳಿಸು! ಯಾ ಅಲ್ಲಾ! ಈ ಸಂತಪ ಬುಂದೇಲನು ನನ್ನ ಶಿರಚ್ಛೇದಮಾಡದೆ ಬಿಡನು! ಯಾ ಅಲ್ಲಾ!

ಸಭಾಕರಣ (ಕತ್ತಿಯನ್ನು ಝಳಪಿಸುತ್ತ ತ್ವೇಷದಿಂದ) ಸಾಯಲಿಕ್ಕೆ ಸಿದ್ಧನಾಗು, ವಿಷಯಾಸಕ್ತನಾದ ಬಾದಶಹನೇ, ಸಾಯಲಿಕ್ಕೆ ಸಿದ್ಧನಾಗು!

ಲಲಿತೆ (ಸಭಾಕರಣನ ಕೈಹಿಡಿದು)—ಏನು ಅವಿಚಾರವಿದು! ನೀವು ಶಸ್ತ್ರಾಘಾತವನ್ನು ಯಾರ ಮೇಲೆ ಮಾಡುವಿರಿ? ಸಭಾಕರಣ, ನೀವು ಯಾರ ಪ್ರಾಣಹರಣ ಮಾಡುವಿರಿ?

ಲಲಿತೆಯು ಈಮಾತನ್ನು ಕೇಳಿ ಸಿಟ್ಟಿನಿಂದ ಕೆಂಪಾಗಿರುವಕಣ್ಣುಗಳಿಂದ ಔರಂಗಜೇಬಬಾದಶಹನನ್ನು ನೋಡುತ್ತ ಸಂತಾಪದಿಂದ ಅವಡುಗಚ್ಚುತ್ತ-

ಸಭಾಕರಣ—ಈ ದುರಾತ್ಮನ ಜೀವವನ್ನು ತಕ್ಕೊಳ್ಳುವೆನು!

ಲಲಿತೆ—ಅವರು ನಿನ್ಮ ಅನ್ಯಾಯವನ್ನೇನು ಮಾಡಿದರು?

ಸಭಾಕರಣ (ಲಲಿತೆಯನ್ನು ಆಶ್ಚರ್ಯದಿಂದ ನೋಡುತ್ತ)—ಲಲಿತೇ, ಈ ಪ್ರಶ್ನವಾಡಲಿಕ್ಕೆ ನಿನ್ನನಾಲಗೆಯು ಹೇಗೆ ಏಳುತ್ತದೆ? ಒಬ್ಬ ವಿಧರ್ಮಿಯವನನು ನಿನ್ನ ಪಾವಿತ್ರ್ಯವನ್ನೂ, ಕೌಮಾರ್ಯವನ್ನೂ, ಸಚ್ಛೀಲವನ್ನೂ ಮಣ್ಣುಗೂಡಿಸಿದ್ದನ್ನು, ಈ ಜನಾನಖಾನೆಯ ನರಕತುಲ್ಯ ಸುಖದಲ್ಲಿ ಮಗ್ನಳಾಗಿ ನೀನು ಮರೆತುಬಿಟ್ಟಿಯಾ? ಸಾಗರದ ತೇಜಸ್ವಿ ಕುಲದಲ್ಲಿ ಹುಟ್ಟಿರುವ ನೀನು, ಇಂದು ಅಮರ್ಯಾದವ್ಯಭಿಚಾರಖಾನೆಯಲ್ಲಿ ಬಿದ್ದಿರುವೆ! ಇದರ ವಿಚಾರವು ನಿನ್ನಕುನಸ್ಸಿಗೆತಗಲುವದಿಲ್ಲವೆ? ಲಲಿತೇ, ಈ ಅಮಂಗಲಸ್ಥಿತಿಯ ಕಡೆಗೆ ನಿನ್ನನ್ನು ಎಳೆದುಕೊಂಡುಬಂದಿರುವ ದುರಾತ್ಮನವಿಷಯವಾಗಿ ನಿನಗೆ ಸಂತಾಪವಾಗುವದಿಲ್ಲವೆ? ನಿನಗೆ ಅಭ್ಯಾಸದಿಂದ ಇದೇ ಸ್ಥಿತಿಯು ಸುಖಕಾರಕವಾಗಿ ಹೋರುತ್ತಿಗೆಯಾದುದಾಗಿದ್ದರೂ, ನಿನ್ನ, ಹಾಗು ನನ್ನ ಪವಿತ್ರ ಮನೆತನದ

ಅಪಮಾನಮಾಡಿದ ಅಘಾತಕ್ಕಾಗಿ ಈ ದುಷ್ಟ ಬಾದಶಹನನ್ನು ಜಗತ್ತಿನಿಂದ ಹೊರಡಿಸಬೇಕಾಗಿರುವದು! ಬಾದಶಹಾ! ಉಚ್ಚರಿಸು ಅಲ್ಲಾನಾಮವನ್ನು! ಈ ಸಭಾಕರಣನ ಖಡ್ಗವು ನಿನ್ನ ಹೃದಯದ ನೆಲೆಯನ್ನು ನೋಡದೆ ಬಿಡುವದಿಲ್ಲ!

ಬಾದಶಹ—ಯಾ ಅಲ್ಲಾ! ನಾನು ಇಂತಹ ಅನುಯಾಯಿತ ಸಾಮ್ರಾಜ್ಯದ ಅಧಿಪತಿಯಾಗಿದ್ದು, ನನ್ನನ್ನು ಇಂಥ ಕಠಿಣ ಪ್ರಸಂಗದಿಂದ ಪಾರಮಾಡಲಿಕ್ಕೆ ಯಾರೂ ಇರಬಾರದೇನು? ಯಾ ಅಲ್ಲಾ!

ಲಲಿತೆ (ಶಾಂತರೀತಿಯಿಂದ)—ಸಭಾಕರಣ, ಶಹಾನಶಹಾ ನನ್ನ ಆರಾಧ್ಯ ದೈವತವಾಗಿರುವರು. ಎರಡನೆಯವರ ಹೆಂಡಿರು ಮಕ್ಕಳನ್ನು ಒತ್ತಾಯದಿಂದ ಜನಾನಖಾನೆಯಲ್ಲಿ ಎಳೆದು ತರುವ ಕಾಲವು ಮುಗಿದ್ದು ಹೋಗಿದ್ದು, ಬಾದಶಹರಿಗೆ ಇಂತಹ ಘೋರ ವಿಷಯಾಸಕ್ತಿಯು ಅತ್ಯಂತ ತಿರಸ್ಕರಣೀಯವಾಗಿರುವದು! ಈ ಲಲಿತೆಯು ತಾನಾಗಿಯೇ ಪ್ರೀತಿಯಿಂದ ದಿಲ್ಲೀಪತಿಯ ಹೆಂಡತಿಯಾಗಿರುವಳು. ಲಲಿತೆಯ ನಡತೆಯು ಮೊದಲಿನಂತೆಯೇ ಪವಿತ್ರವಾಗಿರುವದು. ನಿನ್ನ ಮನಸ್ಸಿನಲ್ಲಿ ಉಂಟಾಗಿರುವ ಸಂಶಯವನ್ನು ದೂರ ಮಾಡಲಿಕ್ಕೆ ನಾನು ಓರಛಾಕ್ಕೆ ಬರಬೇಕಾಗುವದು.

ಸಭಾಕರಣ (ಸ್ವಲ್ಪ ಶಾಂತನಾಗಿ)—ಅಂದರೆ, ಓರಛಾಪರಾಣಿಗೆ ಅವರ ಸಂಬಂಧವೇನಾದರೂ ಇರುವದೇನು?

ಲಲಿತೆ—ಇರುವದು. ಶಹಾನಶಹಾರವರ ನಿರಪರಾಧಿತ್ವವೂ, ನನ್ನ ಪವಿತ್ರತೆಯೂ ಹೀರಾದೇವಿಯ ಮುಖದಿಂದಲೇ ಸಿದ್ಧವಾಗಬೇಕಾಗಿದೆ!

ಸಭಾಕರಣ (ಶಾಂತನಾಗಿ) ಒಳ್ಳೇದು, ಬಾದಶಹಾ, ಖಡ್ಗವನ್ನು ಒರೆಗಾಣಿಸುವೆನು. ನಾನು ನನ್ನ ಈ ಪ್ರೀತಿಯ ತಂಗಿಯನ್ನು ಬುಂದೇಲಖಂಡಕ್ಕೆ ಕರದೊಯ್ಯುವೆನು.

ಬಾದಶಹ (ಬದುಕಿದೆನೆಂಬ ಸಮಾಧಾನದಿಂದ)—ಆಯೇಷಾಪ್ಯಾರೀ! ನೀನು ತಿರುಗಿ ಯಾವಾಗ ಬರುವವಳು? ಬದ್ರುನ್ನಿಸೆಯುಹೋದಂತೆ ನೀನೂ ನನ್ನನ್ನು ಬಿಟ್ಟು ಹೋಗಿಬಿಡುವೆಯೇನು?

ಸಭಾಕರಣ (ಆಯೇಷೆಯು ಉತ್ತರಕೊಡುವದರೊಳಗೆ)-ಬಾದಶಹಾ! ಚಿಂತೆಮಾಡಬೇಡ. ನಿನ್ನ ಮಗಳಾದ ಬದ್ರುನ್ನಿಸೆಯು ಬುಂದೇಲಖಂಡ

ದಲ್ಲಿ ಸುಖರೂಪವಾಗಿ ಇರುವಳು. ತನ್ನ ತಾಯಿಗೆ ಕೊಡುವದಕ್ಕಾಗಿ, ಇಗೋ ಈ ಉಂಗುರವನ್ನು ಕೊಟ್ಟಿರುವಳು ನೋಡು. ಎಂದು ಸಭಾಕರಣನು ಒಂದು ಉಂಗುರವನ್ನು ಬಾದಶಹನ ಕೈಯಲ್ಲಿ ಕೊಟ್ಟನು. ಬಾದಶಹನು ಆತುರದಿಂದ ಅದನ್ನು ತಕ್ಕೊಂಡು ನೋಡುತ್ತಿರುವಾಗ, ದೇವಗಡದ ವಿಜಯದಿಂದ ಆದ ಆನಂದಕ್ಕಿಂತ ಹೆಚ್ಚಿನ ಆನಂದವು ಆತನಿಗಾಯಿತು! ಆಯೇಷಾರಾಣಿಯು ಬಾದಶಹನ ಸಮ್ಮತಿಯಿಂದ ಅಣ್ಣನೊಡನೆ ಓರಛಾಕ್ಕೆ ಹೋಗುವದಕ್ಕಾಗಿ ಹೊರಟಳು!

೩೦ನೆಯ ಪ್ರಕರಣ - ಪ್ರತಿಜ್ಞೆಯ ಪರಿತ್ಯಾಗ

ಛತ್ರಸಾಲನು ದೇವಗಡದ ಯುದ್ಧದಲ್ಲಿ ಜಯ ಹೊಂದಿದ್ದನ್ನೂ, ಆತನು ದಿಲ್ಲಿಯಿಂದ ಬುಂದೇಲಖಂಡಕ್ಕೆ ಬಂದು ಸೈನ್ಯವನ್ನು ಕೂಡಿಸಹತ್ತಿದ್ದನ್ನೂ ಕೇಳಿ ಓರಛಾದ ರಾಣಿಯಾದ ಹೀರಾದೇವಿಯು, ಆಸಮಾಧಾನ ಪಟ್ಟಳು. ಚಂಪತರಾಯನ ಮನೆತನವನ್ನು ನಿರ್ಮೂಲ ಮಾಡಬೇಕೆಂದು ನಿಶ್ಚಯಿಸಿದ ಆಕೆಗೆ, ಛತ್ರಸಾಲನ ಈ ಉತ್ಕರ್ಷವನ್ನು ಕೇಳಿ ದುಃಖವಾಯಿತು; ಆದರೂ ಆ ಹೊಟ್ಟೇಕಿಚ್ಚಿನ ದುಷ್ಟರಾಣಿಯು ಛತ್ರಸಾಲನ ನಾಶದ ವಿಷಯದಲ್ಲಿ ಉದಾಸೀನಮಾಡಲಿಲ್ಲ; ಎದೆಗುಂದಲಿಲ್ಲ. ನಿಮುಲದೇವನ ಲಗ್ನದ ಕೆಲಸವು ತೀರಿದ ಕೂಡಲೆ ಮುಲಾಖತ್ ದಿವಾಣಖಾನೆಯಲ್ಲಿ ತನ್ನ ಪಕ್ಷದ ಅರಸರ ದರ್ಬಾರು ನೆರೆಸಿ, ಛತ್ರಸಾಲನನ್ನು ಬುಂದೇಲಖಂಡದಿಂದ ಹೊಡೆದು ಓಡಿಸಬೇಕೆಂದು ನಿಶ್ಚಯಿಸಿದಳು.

ಹೀರಾದೇವಿಯು ಕರೆಕಳುಹಿದಂತೆ ಬುಂದೇಲಖಂಡದ ಅರಸರು ಮುಲಾಖತ್ ದಿವಾಣಖಾನೆಯಲ್ಲಿ ಕೂಡಿದರು. ಆದರೆ ಈ ಮೊದಲಿ ಕೂಡಿದಂತೆ ಅವರು ಚಂಪತರಾಯನ ಮೇಲಿನ ಸಿಟ್ಟಿನಿಂದ ಆತನ ವಂಶದ ನಾಶ ಮಾಡಬೇಕೆಂಬ ಈರ್ಷೆಯಿಂದ ಕೂಡಿದ್ದಿಲ್ಲ. ಪ್ರಾಣನಾಥ ಪ್ರಭುಗಳ ಉಪದೇಶದಿಂದ ಎಚ್ಚತ್ತು, ತಮ್ಮ ತಪ್ಪನ್ನು ತಿಳಿದುಕೊಂಡು ಹೀರಾದೇವಿಯ ಪಕ್ಷವನ್ನು ಬಿಟ್ಟು ಛತ್ರಸಾಲನ ಪಕ್ಷವನ್ನು ಸ್ವೀಕರಿಸಿ ಸ್ವಾತಂತ್ರ್ಯ

ಸಂಪಾದಿಸುವ ತಮ್ಮ ಸಂಕಲ್ಪವನ್ನು ಹೀರಾದೇವಿಗೆ ತಿಳಿಸುವದಕ್ಕಾಗಿ ಕೂಡಿ ದ್ದರು. ಹೀಗಿರುವಾಗ ಹೀರಾದೇವಿಯು ದರ್ಬಾರಕ್ಕೆ ಆಧ್ಯತೆಯಿಂದ ಬಂದಳು. ಇಂದಿನ ದರ್ಬಾರದ ಅಗ್ರಾಸನವನ್ನು ಫಿಯಾದಾಖಾನನು ಸ್ವೀ ಕರಿಸಿದ್ದನು. ಆಗ ಹೀರಾದೇವಿಯು ದರ್ಬಾರದ ಜನರನ್ನು ಕುರಿತು—

ಹೀರಾದೇವಿ—ಪರಮ ದಯಾಳುವಾದ ದಿಲ್ಲೀಪತಿಯು ಅತ್ಯಂತ ಉದಾರ ಮನಸ್ಸಿನಿಂದ ಬುಂದೇಲಖಂಡಮೊಳಗಿನ 'ಸಾಮ್ರಾಜ್ಯದ್ರೋಹ ವನ್ನು ಬೇರು ಸಹಿತವಾಗಿ ಕಿತ್ತು ಒಗೆದು, ಅಲ್ಲಿ ಶಾಂತತೆಯನ್ನು ನೆಲೆಗೊಳಿ ಸಿದ್ದು ನಮ್ಮಮೇಲಿನ ದೊಡ್ಡ ಉಪಕಾರವೇ ಸರಿ. ಸಾಮ್ರಾಜ್ಯಸತ್ತೆಯ ತಂಪಾದ ನೆರಳಲ್ಲಿ ಶಾಂತಿಯಿಂದ ಕಾಲಕಳೆಯುತ್ತಿರುವ ನಮ್ಮ ಹಿತಕ್ಕಾಗಿ, ಫಿಯಾದಾಖಾನರಂತಹ ನರರತ್ನವನ್ನು ಸುಬೇದಾರರಾಗಿ ನಿಯಮಿಸಿ ದಿಲ್ಲೀ ಪತಿಯು ತನ್ನ ಸಾಮ್ರಾಜ್ಯನಿಷ್ಠ ಪ್ರಜೆಗಳ ಹಿತದ ಅಭಿವೃದ್ಧಿಗಾಗಿ ಒಂದೇ ಸವನೆ ಯತ್ನಿಸುತ್ತಿರುವನು.

ಈ ಮೇರೆಗೆ ಹೀರಾದೇವಿಯು ಸಾರ್ವಭೌಮನ ಸ್ತುತಿಯ ಗಾಯನ ಮಾಡುತ್ತಿರಲು, ಮಧ್ಯದಲ್ಲಿಯೇ ಕಲಿಂಜರಾಧಿಪತಿಯು ಹೀರಾದೇವಿಗೆ ಉತ್ತರಕೊಡುವದಕ್ಕಾಗಿ ಎದ್ದುನಿಂತನು. ಬುಂದೇಲಖಂಡದ ಯಾವತ್ತು ಅರಸರ ಪಕ್ಷದಿಂದ ಆ ರಾಜನು ಬುಂದೇಲಖಂಡದ ನಿಶ್ಚಯವನ್ನು ಹೀರಾದೇ ವಿಗೆ ತಿಳಿಸುವದಕ್ಕಾಗಿ ಎದ್ದು ನಿಂತಿದ್ದನು. ಬದ್ರುನ್ನಿಸೆಯ ಅಪ್ಪಣೆಯಂತೆ ಚತುರ್ಭುಜನ ದೇವಾಲಯದ ಸಂರಕ್ಷಣವಾದ ಬಳಿಕ, ರಣದುಲ್ಲಾಖಾನನು ಆ ಸಂಗತಿಯನ್ನು ದಿಲ್ಲಿಯ ಬಾದಶಹನಿಗೆ ತಿಳಿಸಿ, ಪುನಃ ಚತುರ್ಭುಜನ ದೇವಾಲಯವನ್ನು ನಾಶಮಾಡುವದಕ್ಕಾಗಿ ಬಾದಶಹನ ಆಜ್ಞಾಪತ್ರವನ್ನು ತರಿಸಿಕೊಂಡಿದ್ದನು. ಆ ಆಜ್ಞಾಪತ್ರದಂತೆ ಫಿಯಾದಾಖಾನನು ಚತುರ್ಭು ಜನ ಮಂದಿರವನ್ನು ನಾಶಮಾಡುವದಕ್ಕಾಗಿ ತನ್ನಸೈನ್ಯವನ್ನು ಕಳಿಸಿ, ತಾನು ದರ್ಬಾರಕ್ಕೆ ಬಂದಿದ್ದನು. ಆ ಯವನ ಸೈನ್ಯವನ್ನು ಎದುರಿಸುವದಕ್ಕಾಗಿ ಓರಛಾದ ನೂತನ ರಾಜನಾದ ವಿಮಲದೇವನು, ಹೀರಾದೇವಿಯು ಇತ್ತ ದರ್ಬಾರಕ್ಕೆ ಬಂದಕೂಡಲೆ ಅತ್ತ ತನ್ನ ಸೇನಾಪತಿಯಾದ ಚಾಮುಂಡ ರಾಯನನ್ನು ಕೂಡಿಕೊಂಡು ಸೈನ್ಯದೊಡನೆ ಹೊರಟುಹೋಗಿದ್ದನು. ಇಲ್ಲಿ ದರ್ಬಾರದ ಕಾರ್ಯವು ನಡೆದಿರುವಾಗ ಅತ್ತ ಚತುರ್ಭುಜನ ಮಂದಿರದ

ಬಳಿಯಲ್ಲಿ ಮುಸಲ್ಮಾನ ಸೈನ್ಯಕ್ಕೂ, ರಜಪೂತ ಸೈನ್ಯಕ್ಕೂ ಯುದ್ಧವು ನಡೆದಿತ್ತು. ದಳಪತರಾಯನೂ ವಿಮಲದೇವನಿಗೆ ಸಹಾಯಕನಾಗಿ ಯುದ್ಧಮಾಡುತ್ತಿದ್ದನು. ಓರ್ಛಾದ ನಾಗರಿಕರೂ ಶಸ್ತ್ರಗಳನ್ನು ಧರಿಸಿ ವಿಮಲದೇವನ ಸೈನ್ಯವನ್ನು ಕೂಡಿದ್ದರು. ಈ ಸಂಗತಿಯನ್ನು ಹೀರಾದೇವಿಯು ಅರಿತಿರಲಿಲ್ಲ. ದರ್ಬಾರಿನೊಳಗಿನ ಅರಸರಿಗೂ ಇದು ಅಷ್ಟು ಸ್ಪಷ್ಟವಾಗಿ ಗೊತ್ತಿದ್ದಿಲ್ಲವೆಂದು ಹೇಳಬಹುದು. ಹೀಗಿರುವಾಗ ಮೇಲೆ ಹೇಳಿದಂತೆ ಕಲಿಂಜರ ರಾಜನು ಹೀರಾದೇವಿಯನ್ನು ಕುರಿತು—

ಕಲಿಂಜರರಾಜ—ರಾಣೀ ಹೀರಾದೇವಿ, ಇಲ್ಲಿ ನೆರೆದಿರುವ ಸನ್ಮಾನ್ಯರಾದ ಅರಸರಿಗೂ, ಸರದಾರರಿಗೂ ಕಣ್ಣುಗಳಿರುವದಿಲ್ಲವೆಂದು ನೀನು ತಿಳಿದಿರುವೆಯೇನು? ಅಥವಾ ಅವರ ತಿಳುವಳಿಕೆಯು ತೀರ ನಷ್ಟವಾಗಿ ಹೋಗಿರುವದೆಂದು ತಿಳಿದಿರುವೆಯೋ? ಬುಂದೇಲಖಂಡದ ಸುಬೇದಾರನಾದ ಫಿಯಾದಾಖಾನನು ಬುಂದೇಲಖಂಡಕ್ಕೆ ಯಾವ ಹಿತವನ್ನು ಮಾಡಿರುವನು? ಮಹೋಬದ ಚಂಪತರಾಯನು ರಣದಲ್ಲಿ ಮಡಿದು, ದಿಲ್ಲೀಪತಿಯಅಧಿಕಾರವು ಇಲ್ಲಿ ಸ್ಥಾಪಿತವಾದಮೇಲೆ, ಜಿಝಿಯಾದಂಥ ಅನ್ಯಾಯದ ಕರದಭಾರವು ನಮ್ಮ ತಲೆಯಮೇಲೆ ಕೂತಿತು; ಪ್ರಾಣಕ್ಕಿಂತಲೂ ಪ್ರಿಯವಾಗಿರುವ ದೇವ ಸ್ಥಾನಗಳ ನಾಶಮಾಡುವ ಕೆಲಸವು ಒತ್ತರದಿಂದ ನಡೆದಿತು. ಚತುರ್ಭುಜನ ದೇವಸ್ಥಾನವನ್ನು ನಾಶಮಾಡುವದಕ್ಕಾಗಿ ಇಂದೇ ಫಿಯಾದಾಖಾನನ ಸೈನ್ಯವು ಹೋಗಿರುವ ಸಂಶಯವೂ ನಮಗೆ ಬಂದಿದೆ. ಆಗಾಗ್ಗೆ ನಮ್ಮ ಪವಿತ್ರ ಧರ್ಮದ ಅಪಮಾನವನ್ನು ಮುಸಲ್ಮಾನರು ಮಾಡುತ್ತಿರುವದು ಅನುಭವದ ಮಾತಾಗಿದೆ. ಇಂತಹ ಸ್ಥಿತಿಯಲ್ಲಿ ಬಾದಶಹನು ನಮ್ಮ ಹಿತವನ್ನು ಮಾಡುತ್ತಿರುವನೆಂದು ನೀನು ಹೇಳುವದು ಆಶ್ಚರ್ಯದ ಸಂಗತಿಯೇ ಸರಿ. ಹೀರಾದೇವೀ, ನಾವೆಲ್ಲರೂ ನಮ್ಮ ಮನಸ್ಸಿನ ನಿಶ್ಚಯವನ್ನು ನಿನಗೆ ತಿಳಿಸುವದಕ್ಕಾಗಿಯೇ ಇಲ್ಲಿಗೆ ಬಂದಿದ್ದೇವೆ. ಮಹೋಬದ ಛತ್ರಸಾಲನು ಬುಂದೇಲಖಂಡಕ್ಕೆ ಬಂದಕೂಡಲೆ ಆತನ ಆಧಿಪತ್ಯದ ಕೆಳಗೆ ನಾವೆಲ್ಲರೂ ಬಾದಶಹನ ವಿರುದ್ಧವಾಗಿ ಶಸ್ತ್ರವನ್ನು ಎತ್ತುವ ನಿಶ್ಚಯಮಾಡಿದ್ದೇವೆ. ನೀನಾದರೂ ನಮ್ಮ ಕಾರ್ಯಕ್ಕೆ ಸಹಾಯಮಾಡತಕ್ಕದ್ದು; ಇಲ್ಲದಿದ್ದರೆ ನೀನೂ ಬಾದಶಹನಂತೆಯೇ ಬುಂದೇಲಖಂಡದ ಶತ್ರುವೆಂದು ತಿಳಿದು, ನಾವು

ನಿನ್ನ ಸಂಗಡ ನಡೆದುಕೊಳ್ಳಬೇಕಾಗುವದು; ಆದ್ದರಿಂದ ಪೂರ್ಣ ವಿಚಾರ ಮಾಡಿ ಬಾದಶಹನ ಪಕ್ಷವನ್ನು ಬಿಟ್ಟು ಬುಂದೇಲಖಂಡದ ಸ್ವಾತಂತ್ರ್ಯದ ರಕ್ಷಣಕ್ಕಾಗಿ ನಮ್ಮ ಸಂಗಡ ಸಿದ್ಧಳಾಗು.

ಈ ಮೇರೆಗೆ ನುಡಿದ ಕಲಿಂಜರರಾಜನ ಮಾತುಗಳನ್ನು ಕೇಳಿ ಹೀರಾದೇವಿಯು ಸಂತಪ್ತಳಾದಳು. ಆಕೆಯು ಎದ್ದು ನಿಂತು ಮಾತಾಡಬೇಕೆನ್ನುತ್ತಿರಲು, ಛತ್ರಸಾಲನು ಧೀರ ಗಂಭೀರ ಗತಿಯಿಂದ ದರ್ಬಾರವನ್ನು ಪ್ರವೇಶಿಸಿದನು. ಆತನನ್ನು ಅಕಸ್ಮಾತ್ತಾಗಿ ನೋಡಿದ ಕೂಡಲೆ ಇಡಿಯ ದರ್ಬಾರವೇ ಆತನ ಜಯಘೋಷಮಾಡಿತು. ಅದನ್ನು ನೋಡಿ ಹೀರಾದೇವಿಯು ಸಂತಾಪದಿಂದ ವೈಮನಸ್ಕಳಾದಳು. ಆಕೆಯು ಫಿಯಾದಾಖಾನನ ಹತ್ತರ ಬಂದಿರುವ ಛತ್ರಸಾಲನನ್ನು ಕುರಿತು—" ಏ ರಾಜದ್ರೋಹಿಯ ಪೋರನೆ, ನಿನ್ನಂತಹ ತಲೆತಿರುಕ ಉದ್ಧಟನು ಸಾಮ್ರಾಜ್ಯನಿಷ್ಠರ ಸಭೆಗೆ ಬರುವದು ಬಾದಶಹರ ಕೋಪಕ್ಕೆ ಕಾರಣವಾಗುವದು. ಇಲ್ಲಿ ನೀನು ಒಂದು ಕ್ಷಣವೂ ನಿಂತುಕೊಳ್ಳದೆ ಹೊರಟುಹೋಗು. ಇಲ್ಲದಿದ್ದರೆ ಸುಬೇದಾರ ಫಿಯಾದಾಖಾನರ ಕೋಪಕ್ಕೂ, ನನ್ನ ಶಾಸನಕ್ಕೂ ನೀನು ಗುರಿಯಾಗಬೇಕಾದೀತು.

ಛತ್ರಸಾಲ (ಸಮಾಧಾನದಿಂದ)—ಕಕ್ಕೀ, ಈ ನಿನ್ನ ಮಗನ ಮೇಲೆ ಇಷ್ಟೇಕೆ ಸಿಟ್ಟು? ನಾನು ಇಲ್ಲಿಂದ ಹೊರಟುಹೋಗಲಿಕ್ಕೆ ಬಂದಿರುವದಿಲ್ಲ. ನನ್ನ ಮೇಲಿರುವ ಈ ಸನ್ಮಾನನೀಯ ಬಂಧುಗಳ ಸಿಟ್ಟನ್ನು ಇಳಿಸಿ, ಅವರ ಪ್ರೇಮವನ್ನು ಸಂಪಾದಿಸಿ ಅವರೊಡನೆ ಬುಂದೇಲಖಂಡದ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂದು ಇಲ್ಲಿಗೆ ಬಂದಿದ್ದೇನೆ.

ಹೀರಾದೇವಿ—ಛತ್ರಸಾಲಾ, ನಿನ್ನ ಹಲವು ಅಪರಾಧಗಳ ಪಟ್ಟಿಯನ್ನು ಓದುವದಕ್ಕಾಗಿ ಇಂದಿನ ದರ್ಬಾರವನ್ನು ನಾನು ನೆರೆಸಿರುವದಿಲ್ಲ; ಸಾಮ್ರಾಜ್ಯ ನಿಷ್ಠೆಯನ್ನು ವ್ಯಕ್ತಮಾಡುವದಕ್ಕಾಗಿ ದರ್ಬಾರವನ್ನು ನೆರೆಸಿರುತ್ತೇನೆ. ದರ್ಬಾರದ ಕೆಲಸವು ಮುಗಿದ ಬಳಿಕ, ನಿನ್ನ ಅಪರಾಧಗಳ ವಿಚಾರಮಾಡಿ, ನಿನಗೆ ಯೋಗ್ಯವಾದ ಶಾಸನ ಮಾಡಲಿಕ್ಕೆ ಸುಬೇದಾರ ಫಿಯಾದಾಖಾನರು ಸಮರ್ಥರಿದ್ದಾರೆ.

ಫಿಯಾದಾಖಾನ (ಅಂಜುತ್ತಂಜುತ್ತ ಮೋರೆತಗ್ಗಿಸಿ)—ಬೇಷಕ್!

ಛತ್ರಸಾಲ— ಫಿಯಾದಾಖಾನ, ಬುಂದೇಲಖಂಡದೊಳಗಿನ ನಿಮ್ಮ ಮೊಗಲರ ಅಧಿಕಾರವು ನಷ್ಟವಾಯಿತೆಂದು ತಿಳಿ. ನೀನು ಚತುರ್ಭುಜನ

ಮುಂದಿರವನ್ನು ನಾಶಮಾಡುವದಕ್ಕಾಗಿ ಕಳಿಸಿದ ಯವನ ಸೇನೆಯನ್ನು, ವಿಮಲದೇವನೂ, ಚಾಮುಂಡರಾಯನೂ, ದಳಪತರಾಯನೂ ಗೊತ್ತಿಗೆ ಹಚ್ಚುತ್ತಲಿದ್ದಾರೆ. ನಿನ್ನನ್ನು ಸೆರೆಹಿಡಿಯಲಿಕ್ಕೆ ನಾನು ಬಂದಿದ್ದೇನೆ. ಇಳಿ, ಸಿಂಹಾಸನದಿಂದ ತಟ್ಟನೆ ಇಳಿದು ಜೀವವನ್ನು ಉಳಿಸಿಕೋ! ಒಂದು ಶಬ್ದವನ್ನು ತಿರುಗಿ ಉಚ್ಚರಿಸಿದರೆ, ನನ್ನ ಖಡ್ಗವು ನಿನ್ನ ಹೃದಯದ ರಕ್ತವನ್ನು ಕುಡಿಯದೆ ಬಿಡುವದಿಲ್ಲ!

ಕಲಿಂಜರರಾಜನ ಮಾತಿನಿಂದ ಚಿಂತಾಮಗ್ನನಾಗಿದ್ದ ಫಿದಾಯಾಖಾನನು, ಛತ್ರಸಾಲನು ಅಕಸ್ಮಾತ್ತಾಗಿ ಬಂದದ್ದರಿಂದ ಅಂಜಿಹೋಗಿದ್ದನು. ಆತನು ಪಿಟ್ಟಿಂದು ಮಾತಾಡದೆ ಪ್ರಾಣವನ್ನು ಉಳಿಸಿಕೊಳ್ಳುವದಕ್ಕಾಗಿ ಸಿಂಹಾಸನದಿಂದ ಕೆಳಗಿಳಿಯುತ್ತಿರಲು, ಹೀರಾದೇವಿಯು ಕರ್ಕಶಸ್ವರದಿಂಡ-

ಹೀರಾದೇವಿ—ಸುಬೇದಾರ ಸಾಹೇಬ! ಈ ಎಟ್ಟಿಹುಡುಗನ ಗದ್ದಲಿಕೆಗೆ ನೀವು ಇಷ್ಟು ಅಂಜಲಾಗದು! ಅವನು ಹೇಳುವದೆಲ್ಲ ಸುಳ್ಳು. ವಿಮಲದೇವನು ನನಗೆ ವಿರುದ್ಧವಾಗಿ ನಡೆಯನು. ನಾಗರಿಕರು ನನ್ನಮೇಲೆತಿರುಗಿಬೀಳಲಾರರು. ನೀವು ಸ್ವಸ್ಥವಾಗಿ ಆಸನದ ಮೇಲೆ ಕುಳಿತುಕೊಳ್ಳಿರಿ.

ಛತ್ರಸಾಲ (ಮೊದಲಿನಂತೆಯೇ ಶಾಂತಸ್ವರದಿಂದ) — ಫಿಯಾದಾಖಾನ, ವಿಷಪರೀಕ್ಷೆಯನ್ನು ಮಾಡಬೇಡ. ನಮ್ಮ ಬುಂದೇಲಿಗಳ ಶೌರ್ಯಸಾಹಸಗಳು ನಿನಗೆ ಗೊತ್ತಿರಬಹುದು. ಒಂದು ಕ್ಷಣವೂ ತಡೆಯದೆ ನನ್ನ ಅಧೀನನಾಗು. ಇನ್ನುಮೇಲೆ ಛತ್ರಸಾಲನು ನಿನ್ನೊಡನೆ ಮಾತಾಡುವದು ಈ ಖಡ್ಗದಮುಖಾಂತರವೆಂಬದನ್ನು ಗಟ್ಟಿಮುಟ್ಟಿಯಾಗಿ ತಿಳಿದುಕೋ!

ಮಹಾ ತೇಜಸ್ವಿಯಾದ ಛತ್ರಸಾಲನ ಈ ದರ್ಪೋಕ್ತಿಯನ್ನು ಕೇಳಿ ಫಿಯಾದಾಖಾನನು ತಟ್ಟನೆ ಸಿಂಹಾಸನದಿಂದ ಇಳಿದು, ಛತ್ರಸಾಲನ ಬಳಿಯಲ್ಲಿ ತಲೆಬಾಗಿ ನಿಂತು, ಅತ್ಯಂತ ವಿನಯದಿಂದ-"ನಾನು ನಿಮ್ಮ ಚಪ್ಪಣಿಯ ಗುಲಾಮನಾಗಿದ್ದೇನೆ. ನನ್ನ ಹೆಂಡಿರು ಮಕ್ಕಳ ಕಡೆಗೆ ನನ್ನನ್ನು ಜೀವದಿಂದ ಕಳಿಸುವ ಮೆಹಬ್ಬಾನಗಿ ಮಾಡಿರಿ"

ಛತ್ರಸಾಲ—ಖಾನ, ನಿನ್ನನ್ನು ಕ್ಷಮಿಸಿದ್ದೇನೆ. ಪ್ರಾಣರಕ್ಷಣದ ವಿಷಯವಾಗಿ ನಿಶ್ಚಿಂತನಾಗಿರು.

ಈ ಮೇರೆಗೆ ಅಭಯವಿತ್ತು, ಬುಂದೇಲಖಂಡದ ಯಾವತ್ತು ಅರಸರನ್ನೂ, ಸರದಾರರನ್ನೂ ಕುರಿತು ವಿನಯದಿಂದನುಡಿದನೇನಂದರೆ—"ಬಂಧು

ಗಳೇ, ನಾನು ನಿನ್ನೊಡನೆ ಬಹಳಹೊತ್ತು ಮಾತಾಡಲಿಕ್ಕೆ ಈಗ ಹೊತ್ತು ಇಲ್ಲ. ನಿಮ್ಮೆಲ್ಲರ ಸಹಾಯದಿಂದ ಬುಂದೇಲಖಂಡದ ಸ್ವಾತಂತ್ರ್ಯವನ್ನು ಸಂಪಾದಿಸಬೇಕೆಂದು ಬಂದಿದ್ದೇನೆ. ನನ್ನಿಂದ, ಹಾಗು ನಮ್ಮ ಹಿರಿಯರಿಂದ ನಿಮ್ಮ ಮನಸ್ಸು ನೋಯುವಂತಹ ಕೆಲಸವೇನಾದರೂ ಆಗಿದ್ದರೆ, ಅದನ್ನೆಲ್ಲ ಕ್ಷಮಿಸಿ, ನನ್ನನ್ನು ಉಡಿಯಲ್ಲಿ ಹಾಕಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ನನ್ನನ್ನು ಕ್ಷಮಿಸುವ ಇಚ್ಛೆಯು ನಿಮಗಿಲ್ಲದಿದ್ದರೆ, ಇಗೋ, ಸ್ವಾತಂತ್ರ್ಯಘಾತಕ ಮೊಗಲರ ಶಾಸನಕ್ಕಾಗಿ ಎತ್ತಿರುವ ಈ ನನ್ನ ಖಡ್ಗವನ್ನು ಮುಂದೆಮಾಡಿದ್ದೇನೆ, ನಿಮ್ಮಲ್ಲಿ ಯಾರಾದರೂ ಮುಂದಾಗಿ ನನ್ನ ಶಿರಸ್ಸನ್ನು ತುಂಡಿರಿಸಿ, ಅದೇ ಕೈಯಿಂದ ದೇಶದ ಸ್ವಾತಂತ್ರ್ಯಪ್ರಾಪ್ತಿಗಾಗಿ ಮೊಗಲರ ಮೇಲೆ ದುಮುಕಿರಿ'' ಎಂದು ನುಡಿಯುತ್ತಿರಲು, ಎಲ್ಲ ಅರಸರೂ, ಸರದಾರರೂ ಪಶ್ಚಾತ್ತಾಪದಿಂದ ಛತ್ರಸಾಲನನ್ನು ಕುರಿತು-"ನರವೀರನೇ, ನೀನೂ ಅಪರಾಧಿಯಲ್ಲ, ನಮ್ಮ್ಮತಂದೆಯವರೂ ಅಪರಾಧಿಗಳಲ್ಲ. ಸರ್ವಾಪರಾಧವೂ ನಮ್ಮದಿರುತ್ತದೆ; ಆದ್ದರಿಂದ ನೀನೇ ನಮ್ಮನ್ನು ಕ್ಷಮಿಸು. ನಿನ್ನ ಪವಿತ್ರ ಕಾರ್ಯಕ್ಕೆ ಸಹಾಯಮಾಡುವದಕ್ಕಾಗಿ ನಾವು ಯಾವಾಗೋ ಸಿದ್ಧರಾಗಿರುತ್ತೇವೆ.

ಹೀಗೆ ಛತ್ರಸಾಲನೂ, ದರ್ಬಾರದ ಜನರೂ ಪಶ್ಚಾತ್ತಾಪದಿಂದ ತಮ್ಮ ಹೃದಯಗಳನ್ನು ಶುದ್ಧಮಾಡಿಕೊಳ್ಳುತ್ತಿರುವಾಗ ವೈ ಮರೆತಿರಲು, ಅತ್ತ ಹೀರಾದೇವಿಯು ಬೊಚ್ಚಿಗೆದ್ದು ತನ್ನ ಖಡ್ಗದಿಂದ ಛತ್ರಸಾಲನ ಶಿರಸ್ಸನ್ನು ತುಂಡರಿಸುವದಕ್ಕಾಗಿ ದುಮುಕಿದಳು. ಆಗ ಎಲ್ಲ ದರ್ಬಾರದವರು ಹಾ ಹಾ ಕಾರ ಮಾಡುತ್ತಿರಲು, ಆಕೆಯ ಖಡ್ಗವೆತ್ತಿದ ಕೈಯನ್ನು ಯಾರೋ ಗಟ್ಟಿಯಾಗಿ ಹಿಡಿದುಬಿಟ್ಟಿದ್ದರು. ಹೀರಾದೇವಿಯು ಅವಡುಗಚ್ಚಿ ಹಿಂದಿರುಗಿ ನೋಡಲು, ಸಭಾಕರಣನ ಉಗ್ರವಾದ ಮೂರ್ತಿಯು! ಆಗ ಹೀರಾದೇವಿಯ ಸ್ಥಿತಿಯು ಹಾವಿಗೆ ಗರುಡನ ಗೆರೆ ತೋರಿಸಿದಂತಾಯಿತು! ಆಗ ಸಭಾಕರಣನು ಹೀರಾದೇವಿಯನ್ನು ಕುರಿತು ಘುಡಿಘುಡಿಸುತ್ತ— "ಪಾತಕಿಯಾದ ಸ್ತ್ರೀಯೇ, ನಿನ್ನ ಅಪವಿತ್ರ ಹಸ್ತವನ್ನು ಮುಟ್ಟುವ ನಾನು ದುರ್ಭಾಗ್ಯನೇ ಸರಿ; ಆದರೆ ಬುಂದೇಲಖಂಡದ ಈ ಅನರ್ಘ್ಯ ರತ್ನವನ್ನು ಉಳಿಸಿಕೊಳ್ಳುವದಕ್ಕಾಗಿ ನಾನು ನಿನ್ನ ಕೈಯನ್ನು ಹಿಡಿಯಬೇಕಾಯಿತು! ಒರೆಗಾಣಿಸು,

ನಿನ್ನ ಖಡ್ಗವನ್ನು ಒರೆಗಾಣಿಸಿ, ನನ್ನ ಬಳಿಯಲ್ಲಿ ನಿಂತಿರುವ ಈ ಸ್ತ್ರೀಯು ಯಾರೆಂಬದನ್ನು ಕಣ್ದೆರೆದು ನೋಡಿ ನನಗೆ ಹೇಳು!

ಹೀರಾದೇವಿ (ಧೈರ್ಯದಿಂದ)—ಸಭಾಕರಣ, ಈ ಜನ್ಮದಲ್ಲಿ ನಾನು ಈ ಸ್ತ್ರೀಯನ್ನು ನೋಡಿದ್ದು ಇದೇ ಮೊದಲು.

(ಸಭಾಕರಣ ಮತ್ತೆ ಗರ್ಜಿಸಿ) — ನೀನು ಹೀಗೆ ಉತ್ತರಕೊಡುವೆಯೆಂದು ನಾನು ಮೊದಲೇ ತರ್ಕಿಸಿದ್ದೆನು. ಇನ್ನು ನಿನ್ನ ನೀಚತನವನ್ನು ಸಾಕುಮಾಡು. ಇನ್ನೊಮ್ಮೆ ಸುಳ್ಳು ಆಡಿದೆಯೆಂದರೆ, ನಿನ್ನ ಕಪಾಳವೋಕ್ಷವಾಯಿತೆಂದು ತಿಳಿದುಕೋ!

ಸಭಾಕರಣನ ಈ ಚಮತ್ಕಾರದ ನಡತೆಯನ್ನು ನೋಡಿ ಸಭಿಕರು ಆಶ್ಚರ್ಯಪಡತೊಡಗಿದರು. ಎಲ್ಲರ ಕಣ್ಣುಗಳು ಸಭಾಕರಣನಲ್ಲಿ, ಹೀರಾದೇವಿಯಲ್ಲಿ ನಟ್ಟುಹೋಗಿದ್ದವು. ಹೀರಾದೇವಿಯು ಬೇಗನೆ ಮಾತಾಡದಿರುವನ್ನು ನೋಡಿ ಸಭಾಕರಣನು ಅಧಿಕಾರಯುಕ್ತ ವಾಣಿಯಿಂದ—

ಸಭಾಕರಣ—ಹೀರಾದೇವೀ ! ಸುಮ್ಮನಿರಬೇಡ. ಈ ಸ್ತ್ರೀಯಗುರುತು ನಿನಗಿರುವದೋ ಇಲ್ಲವೋ ಬೇಗನೆ ಹೇಳು.

ಹೀರಾದೇವಿ—ಇರುವದು.

ಸಭಾಕರಣ—ಈಕೆಯ ಹೆಸರೇನು ?

ಹೀರಾದೇವಿ—ಲಲಿತಾ.

ಸಭಾಕರಣ—ಈಕೆಯು ನನಗೇನಾಗಬೇಕು?

ಹೀರಾದೇವಿ—ಲಲಿತೆಯು ಸಭಾಕರಣನ ತಂಗಿಯು !

ಸಭಾಕರಣ—ಹದಿನಾರುವರ್ಷದ ಹಿಂದೆ ಈಕೆಯು ಬಟವಾನದಿಯಲ್ಲಿ ಮುಳುಗಿದಳೆಂದು ನೀನು ಹೇಳಿದೆಯೋ ಇಲ್ಲವೋ ?

ಹೀರಾದೇವಿ—ಹೇಳಿದ್ದೆನು; ಹಾಗೆಹೇಳೆಂದು ಲಲಿತೆಯೇ ಹೇಳಿದ್ದಳು.

ಸಭಾಕರಣ— ಈಕೆಯು ಹಾಗೆ ಯಾಕೆ ಹೇಳಿದಳು ?

ಹೀರಾದೇವಿ—ಕೆಲವೊಂದು ಕಾರಣದಿಂದ ಲಲಿತೆಯು ಬುಂದೇಲಖಂಡವನ್ನು ಬಿಟ್ಟು ಹೋಗಬೇಕಾಯಿತು. ಹೀಗೆ ಅಕಸ್ಮಾತ್ ತಾನು ಇಲ್ಲದಂತಾದರೆ, ಜನರು ತನ್ನ ವಿಷಯವಾಗಿ ಇಲ್ಲದ ಕುತರ್ಕಮಾಡಿ, ಅದರಿಂದ ತನ್ನ ಮನೆತನಕ್ಕೆ ಕಲಂಕ ಉಂಟಾದೀತೆಂದು ನನಗೆ ಹಾಗೆ ಹೇಳಬೇಕೆಂದು ಹೇಳಿ

ದಳು; ಮತ್ತು ತನ್ನ ಸೀರೆಯನ್ನೂ, ಆಲಂಕಾರಗಳನ್ನೂ ತಾನೇ ಕೊಟ್ಟಳು.

ಸಭಾಕರಣ— ಲಲಿತೆಯು ಹೆಣನೆಂದು ನೀನು ನನಗೆ ತೋರಿಸಿದ ಹೆಣವು ಯಾರದು?

ಹೀರಾದೇವಿ—ನನ್ನ ದಾಸಿಯದು.

ಸಭಾಕರಣ—ಲಲಿತೆಯು ಬುಂದೇಲಖಂಡದಿಂದ ಯಾಕೆ ಹೊರಟು ಹೋದಳು?

ಹೀರಾದೇವಿ—ಶಹಾಜಾದಾ ಔರಂಗಜೇಬನ ಮೇಲೆ ಈಕೆಯ ಪ್ರೀತಿಯು ಕುಳಿತದ್ದರಿಂದ ಹೊರಟುಹೋದಳು.

ಹೀರಾದೇವಿಯ ಈ ಮಾತುಗಳನ್ನು ಕೇಳಿದ ಕೂಡಲೆ ಲಲಿತೆಯು ಮುಂದಕ್ಕೆ ಬಂದು ಆವೇಶದಿಂದ--ಹೀರಾದೇವೀ, ಸುಳ್ಳು ಹೇಳಬೇಡ. ನನ್ನ ಪ್ರೇಮವು ಕುಳಿತಿರುವ ತರುಣನು ಒರಛಾದ ದರ್ಬಾರದ ಬುಂದೇಲಿ ಸರದಾರನೆಂದು ನೀನು ಹೇಳಲಿಲ್ಲವೆ? ಶಹಾಜಾದಾ ಔರಂಗಜೇಬನ ಸುದ್ದಿಯು ಕೂಡ ನನಗೆ ಗೊತ್ತು ಇದ್ದಿಲ್ಲ. ಈತನು ಕುಲೀನನಾದ ಬುಂದೇಲಿ ಸರದಾರನಿರುವನೆಂತಲೂ, ನಿನ್ನ ಪಾಣಿಗ್ರಹಣಕ್ಕೆ ಎಲ್ಲ ಬಗೆಯಿಂದ ಯೋಗ್ಯನಾಗಿರುವನೆಂತಲೂ ನೀನೇ ಹೇಳಲಿಲ್ಲವೆ? ನಿನ್ನ ಈ ಮೋಸದ ಮಾತನ್ನು ನಂಬಿಯೇ ನಾನು ಆತನಲ್ಲಿ ಅನುರಕ್ತಳಾದೆನಲ್ಲವೆ?

ಲಲಿತೆಯ ಈ ಪ್ರಶ್ನಗಳಿಗೆ ಉತ್ತರಕೊಡುವದಕ್ಕೆ ಹೀರಾದೇವಿಯು ಹಿಂದೆಮುಂದೆ ನೋಡುತ್ತಿರಲು, ಸಭಾಕರಣನು ಸಿಟ್ಟಿನಿಂದ—ಹೀರಾದೇವೀ, ಮುಚ್ಚುಮರೆ ನಡೆಯಲಿಕ್ಕಿಲ್ಲ. ಸ್ಪಷ್ಟವಾಗಿ ಉತ್ತರವನ್ನು ಕೊಡು. ಲಲಿತೆಯ ಪರಿಶುದ್ಧತೆಯೂ, ನಿನ್ನ ನೀಚತನವೂ ನನಗೆ ಗೊತ್ತಾಗಬೇಕಾಗಿದೆ. ನಿನ್ನ ಮೋಸದ ಉತ್ತೇಜನದಿಂದಲೇ ಲಲಿತೆಯು ಔರಂಗಜೇಬನ ಹೆಂಡತಿಯಾದದ್ದು ನಿಜವೋ ಸುಳ್ಳೋ?

ಹೀರಾದೇವಿ (ಭಯದಿಂದ)--ಹೌದು! ಲಲಿತೆಯು ಔರಂಗಜೇಬನಿಗೆ ಪೂರ್ಣವಾಗಿ ತನ್ನ ಪ್ರೇಮವನ್ನು ಅರ್ಪಿಸುವವರೆಗೆ, ತ್ರಿಕರಣಪೂರ್ವಕವಾಗಿ ಆತನ ಹೆಂಡತಿಯಾಗುವವರೆಗೆ, ನಾನು ಔರಂಗಜೇಬನ ಗುರುತನ್ನು ಆಕೆಗೆ ಹತ್ತಗೊಡಲಿಲ್ಲ! ಆತನು ರಜಪೂತ ಸರದಾರನೆಂತಲೇ ಹೇಳಿದೆನು. ಇನ್ನು ಸುಳ್ಳುಹೇಳಿ ಆಗುವದೇನು?

ಹೀರಾದೇವಿಯ ಈ ಮಾತುಗಳನ್ನು ಕೇಳಿ ಸಭಾಕರಣನು ಕ್ಷಣಮಾತ್ರ ಸ್ತಬ್ಧನಾದನು. ಆತನ ಮುಖವು ನೂತನ ಕಳೆಯಿಂದ ಪ್ರಕಾಶಿತವಾಯಿತು. ಆತನು ವಾತ್ಸಲ್ಯದಿಂದ ಲಲಿತೆಯ ಹೆಗಲಮೇಲೆ ಕೈಯಿಟ್ಟು— "ಲಲಿತೇ, ಸತೀಧರ್ಮಕ್ಕೆ ಯೋಗ್ಯವಾದದ್ದನ್ನೇ ನೀನು ಮಾಡಿದೆ! ಚೌರಂಗಬೇಬನ ಹೆಂಡತಿಯಾದದ್ದಕ್ಕಾಗಿ ನನಗೆ ಸಿಟ್ಟು ಇಲ್ಲ, ಸಭಾಕರಣನ ತಂಗಿಯೆನಿಸಿಕೊಳ್ಳಲಿಕ್ಕೆ ಲಲಿತೆಯು ಇನ್ನೂ ಪಾತ್ರಳಿರುವಳು. ಹೀರಾದೇವೀ, ಇನ್ನೊಂದು ಪ್ರಶ್ನೆದ ಉತ್ತರವನ್ನು ಕೊಡು. ಚಂಪತರಾಯನು ಲಲಿತೆಯ ಕೌಮಾರ್ಯವನ್ನು ಭ್ರಷ್ಟಮಾಡಿದನೆಂದು ನೀನು ಹೇಳಿದ್ದು ನಿಜವೋ ಸುಳ್ಳೊ?

ಹೀರಾದೇವಿ (ನಿರ್ಭಯದಿಂದ)—ಸುಳ್ಳು. ನಿಮ್ಮನ್ನು ನನ್ನಪಕ್ಷಕ್ಕೆ ಎಳೆದುಕೊಳ್ಳಬೇಕೆಂದು ನಾನು ಹಾಗೆ ಹೇಳಿದೆನು.

ಹೀರಾದೇವಿಯ ಈ ಉತ್ತರವನ್ನು ಕೇಳಿ ಸಭಾಕರಣನು ಸಭಿಕರನ್ನು ಕುರಿತು—"ಬುಂದೇಲಖಂಡದ ಯಾವತ್ತು ಅರಸರೇ, ಸರದಾರರೇ, ನನ್ನ ಪ್ರತಿಜ್ಞೆಯ ಕಾರಣವು ಸುಳ್ಳಾಗಿರುವದೆಂದು ನಿಮ್ಮ ಸಮಕ್ಷ ಹೀರಾದೇವಿಯು ಹೇಳುವದರಿಂದ, ನಾನು ಮಾಡಿದ ಪ್ರತಿಜ್ಞೆಗಾಗಿ ಪಶ್ಚಾತ್ತಾಪಪಟ್ಟು, ಆ ಘೋರ ಪ್ರತಿಜ್ಞೆಯ ಮೂಲಕ ನನ್ನಿಂದಾದ ಸ್ವದೇಶದ ಹಾನಿಗಾಗಿ ದುಃಖಪಡುತ್ತೇನೆ. ಮತ್ತು ನಿಮ್ಮೆಲ್ಲರ ಸಮಕ್ಷ ಈಗ ಪ್ರತಿಜ್ಞೆಯಿಂದ ಮುಕ್ತನಾಗಿ, ಸ್ವಾತಂತ್ರ್ಯಕ್ಕಾಗಿ ಶಸ್ತ್ರಹಿಡಿಯಬೇಕೆಂದು ನಿಶ್ಚಯಿಸಿರುತ್ತೇನೆ. ಇದು ನಿಮಗೆ ಸಮ್ಮತವೋ ಅಸಮ್ಮತವೋ?" ಎಂದು ಕೇಳಲು, ಎಲ್ಲ ಸಭೆಯು ಒಂದೇ ಧ್ವನಿಯಿಂದ—"ಸಮ್ಮತವು, ಪರಮಸಮ್ಮತವು!" ಎಂದು ಉತ್ತರ ಕೊಟ್ಟಿತು! ಅದನ್ನು ಕೇಳಿ ಸಭಾಕರಣನು—ಹಾಗಾದರೆ ಇನ್ನು ವ್ಯರ್ಥ ಮಾತುಗಳೇಕೆ? ಏಳಿರಿ, ವಿಮಲದೇವನೂ, ಚಾಮುಂಡರಾಯನೂ, ದಲಪತರಾಯನೂ ಯವನರೊಡನೆ ಕಾದುತ್ತಿರಲು, ನಾವು ಹೀಗೆ ಸುಮ್ಮನೆ ಮಾತಾಡುತ್ತ ಕುಳಿತುಕೊಳ್ಳುವದು ಯೋಗ್ಯವಲ್ಲ. ಕುಮಾರ ಛತ್ರಸಾಲ! ನೀನು ಬುಂದೇಲಖಂಡದ ವೀರಮೂರ್ತಿಯು, ಸದ್ಗುಣದ ಖನಿಯು, ಶಾಂತಿಯ ನಿಧಿಯು, ನಮ್ಮ ಪೂರ್ವಪುಣ್ಯದಿಂದ ದೊರೆತ ದೈವೀ ಸಂಪತ್ತು! ನಡೆ, ಮುಂದಾಗು. ನಮ್ಮಂತಹ ದೇಶದ್ರೋಹಿಗಳನ್ನು ನಿನ್ನ ಕ್ಷಾತ್ರತೇಜದಿಂದ

ಬೆಳಗಿಸಿ ನಮ್ಮನ್ನು ಪುನೀತರಾಗಮಾಡು'' ಎಂದು ನುಡಿಯುತ್ತಿರಲು, ಎಲ್ಲರ ಶಸ್ತ್ರಗಳು ಒರೆಗಳಿಂದ ಹೊರಬೀಳುತ್ತಿರುವಾಗ, ಎಲ್ಲರೂ ಶ್ರೀಚತುರ್ಭುಜನ ಮಂದಿರದ ಕಡೆಗೆ ಸಾಗಿದರು!

೩೧ನೆಯ ಪ್ರಕರಣ-ಸ್ವಾತಂತ್ರ್ಯಪ್ರಾಪ್ತಿ!

ಓರಛಾದ ಯುದ್ಧದಲ್ಲಿ ಛತ್ರಸಾಲನು ಜಯಶಾಲಿಯಾದನು. ಓರ ಛಾದ ಅರಮನೆಯಮೇಲೆಯೂ, ಮಹಾದ್ವಾರದಮೇಲೆಯೂ ಸ್ವಾತಂತ್ರ್ಯದ ನಿಶಾನೆಯು ಮೆರೆಯಹತ್ತಿತು. ಚತುರ್ಭುಜ ಪರಮಾತ್ಮನ ಮಂದಿರದ ಸಂರಕ್ಷಣಮಾಡಿ, ಬುಂದೇಲಖಂಡಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿ ಕೊಟ್ಟ ದ್ದರಿಂದ, ಬುಂದೇಲಖಂಡದವರಿಗೆ ಛತ್ರಸಾಲನು ಅವತಾರೀ ಪುರುಷನಾಗಿ ತೋರಹತ್ತಿದನು. ಆತನ ಅಪ್ಪಣೆಯನ್ನು ಬುಂದೇಲಖಂಡವು ತಲೆಯಲ್ಲಿ ಹೊತ್ತು ನುನ್ನಿಸಹತ್ತಿತು. ಸ್ವಾತಂತ್ರ್ಯಕ್ಕಾಗಿ ತ್ರಿಕರಣಪೂರ್ವಕ ಯತ್ನಿ ಸುವದಕ್ಕಾಗಿ ಬುಂದೇಲಖಂಡವು ಟೊಂಕಕಟ್ಟಿತು. ಸುಘೇದಾರ ಫಿಯಾದಾ ಖಾನನು ಪುಲ್ಲುಕಡ್ಡಿಕಚ್ಚಿ ಜೀವದಾನವನ್ನು ಬೇಡಿಕೊಂಡನೆಂಬ ಸುದ್ದಿಯು ಅಲ್ಲಲ್ಲಿ ಬುಂದೇಲಖಂಡದೊಳಗೆ ಪಸರಿಸಿದ್ದ ಮುಸಲ್ಮಾನರಿಗೆ ಗೊತ್ತಾಗಲು, ತಾವು ಇನ್ನು ದಿಲ್ಲಿಯ ಹಾದಿಯನ್ನು ಹಿಡಿಯದಿದ್ದರೆ ಗತಿಗಾಣೆವೆಂದು ತಿಳಿದು ಅವರು ಗುಳಿಕಟ್ಟಿದರು! ಛತ್ರಸಾಲನು ಸ್ವಾತಂತ್ರ್ಯವನ್ನು ಸಂಪಾದಿಸುವದ ಕ್ಕಾಗಿಓರಛಾದಲ್ಲಿ ಯತ್ನಿಸುತ್ತಿರುವನೆಂಬ ಸುದ್ದಿಯು ಬುಂದೇಲಖಂಡದಲ್ಲೆಲ್ಲ ಹಬ್ಬಲು, ಸ್ವಾತಂತ್ರ್ಯಕ್ಕಾಗಿ ಶಸ್ತ್ರಗಳನ್ನು ಝಳಪಿಸಲು ಬುಂದೇಲಖಂಡದ ತರುಣರೆಲ್ಲ ಗುಂಪುಗುಂಪಾಗಿ ಓರಛಾದ ಕಡೆಗೆಸಾಗಿ ಬರತೊಡಗಿದರು. ಶುಕ್ಲಪಕ್ಷದ ಚಂದ್ರನಂತೆ ಛತ್ರಸಾಲನ ಸಾಮರ್ಥ್ಯವು ದಿನದಿನಕ್ಕೆ ಹೆಚ್ಚ ಹತ್ತಿತು!

ಚತುರ್ಭುಜ ಪರಮಾತ್ಮನ ಮಂದಿರವನ್ನು ಸಂರಕ್ಷಿಸುವದಕ್ಕಾಗಿ ಹೂಡಿದ ಯುದ್ಧದಲ್ಲಿ ಸಛಾಕರಣನೂ, ದಳಪತರಾಯನೂ ತೋರಿಸಿದ ಶೌರ್ಯಾಕ್ರಮವು, ಆಕಾಶದಿಂದ ದೇವತೆಗಳು ಹೂಮಳೆಸುರಿಸುವಂತಹದಾಗಿತ್ತು.

ಅಜನ್ಮ ಪುರುಷವೇಷವನ್ನು ಧರಿಸಿದ್ದ ವಿಮಲದೇವನು ಅಂದಿನ ಯುದ್ಧದಲ್ಲಿ ತೋರಿಸಿದ ಪರಾಕ್ರಮವು ಆಶ್ಚರ್ಯಪಡತಕ್ಕಂತಹದೇ ಇದ್ದಿತು. ಅದನ್ನು ನೋಡಿ ಸಭಾಕರಣನು ಅಭಿಮಾನಪಟ್ಟನು. ಪ್ರಾಣನಾಥ ಪ್ರಭುಗಳಿಗೂ, ಛತ್ರಸಾಲನಿಗೂ ತಮ್ಮ ಕಲ್ಪನೆಗಿಂತ ಹೆಚ್ಚು ಯಶಸ್ಸು ದೊರೆತದ್ದರಿಂದ ಬಹಳ ಸಮಾಧಾನವಾಗಿತ್ತು. ಬುಂದೇಲಿಗಳ ಸ್ವಾಭಾವಿಕವಾದ ಉದಾರ ಮನೋವೃತ್ತಿಗಳು ಪೂರ್ಣಜಾಗ್ರತವಾದವು. ಬರಬರುತ್ತಾ ಛತ್ರಸಾಲನ ಸಾಮರ್ಥ್ಯವು ಹೆಚ್ಚುತ್ತ ಹೋಗಿ, ಆತನಿಗೆ ಓರಛಾದಲ್ಲಿರುವದು ಅಶಕ್ಯವಾಗ ತೊಡಗಿತು. ಓರಛಾದ ಕೋಟೆಯು ಯುದ್ಧಕ್ಕೆ ಅಷ್ಟು ಅನುಕೂಲವಾದ ದ್ದಿದ್ದಿಲ್ಲ. ಆದ್ದರಿಂದ ಛತ್ರಸಾಲನು ಪ್ರಾಣನಾಥ ಪ್ರಭುಗಳ, ಹಾಗು ಸಭಾಕರಣನ ವಿಚಾರದಿಂದ ಬೇಗನೆ ಗಡಕೋಟದ ಕೋಟೆಯನ್ನು ಯಾವ ತ್ತು ಸೈನ್ಯದ ಚಲನವಲನದ ಕೇಂದ್ರಸ್ಥಾನವನ್ನಾಗಿ ಮಾಡಿದನು. ಜಾಮುಂ ಡರಾಯನು ಓರಛಾವನ್ನು ರಕ್ಷಿಸಹತ್ತಿದನು. ಹೀರಾದೇವಿಯು ಮುಲಾಖತ ದಿವಾಣ ಖಾನೆಯಿಂದ ಎತ್ತಕಡೆಗೆ ಹೊರಟುಹೋದಳೆಂಬದು ಯಾರಿಗೂ ಗೊತ್ತಾಗಲಿಲ್ಲ. ಅರ್ಧಗಂಡಿಸಿನ ವೇಷದ ಒಬ್ಬ ಹುಚ್ಚಹೆಂಗಸು ದಿಲ್ಲಿಯ ಹಾದಿಯಹಿಡಿದು ಹೋಗುತ್ತಿದ್ದಳೆಂದು ಜನರು ಹೇಳಿದರು; ಆದರೆ ಆಕೆಯು ಹೀರಾದೇವಿಯೇ ಎಂಬ ನಂಬಿಗೆಯಾಗಲಿಲ್ಲ.

ಛತ್ರಸಾಲನು ಗಡಕೋಟವೆಂಬ ಕೋಟೆಯನ್ನು ತನ್ನ ಸೈನ್ಯದ ಮುಖ್ಯ ಠಾಣೆಯನ್ನು ಮಾಡಿ ಸ್ವಲ್ಪ ಸೈನ್ಯದೊಡನೆ ಧಾರೀರಕ್ಕೆ ಹೊರಟನು. ಆಗ ಸಭಾಕರಣನೂ, ದಳಪತರಾಯನೂ ಸಾಗರಸಂಸ್ಥಾನಕ್ಕೆ ಬರಬೇಕೆಂದು ಛತ್ರ ಸಾಲನಿಗೆ ಹೇಳಿದರು; ಆದರೆ 'ಮೊದಲು ಸುಫಲಾದೇವಿಯನ್ನು ಕಾಣುವದು ಅವಶ್ಯವೆಂದು ಪ್ರಾಣನಾಥ ಪ್ರಭುಗಳು ಹೇಳಿದ್ದರಿಂದ, ಧಾರೀರಕ್ಕೆ ಹೋಗ ಬೇಕಾಯಿತು. ಪ್ರಾಣನಾಥ ಪ್ರಭುಗಳ ಇಚ್ಛೆಯಂತೆ ಛತ್ರಸಾಲನು ಹೆಚ್ಚು ಸೈನ್ಯವನ್ನು ಸಂಗಡತೆಗೆದುಕೊಂಡು, ಸಕಲಸನ್ನಾಹದೊಡನೆ ಧಾರೀರದಕಡೆಗೆ ಸಾಗಿದನು. ಧಾರೀರವು ಇನ್ನು ಒಂದುದಿವಸದ ಹಾದಿಯಲ್ಲಿರುವಾಗ, ಆ ರಾಜ ಧಾನಿಯಲ್ಲಿ ಕಂಚುಕಿರಾಯನ ಸ್ಥಿತಿಯು ಬಹಳ ಶೋಚನೀಯವಾಗಿತ್ತು. ರಣದುಲ್ಲಾಖಾನನೊಡನೆ ಲಗ್ನವಾದ ತರುಣಿಯು ವಿಜಯೆಯ ದಾಸಿಯಾ ಗಿದ್ದು, ನಿಜವಾದ ವಿಜಯೆಯ ವಿವಾಹವು ಓರಛಾದ ವಿಮಲದೇವನೊಡನೆ

ಈ ಮೊದಲೆ ಆಗಿಹೋಗಿರುವದೆಂಬ ಸುದ್ದಿಯು ರಣದುಲ್ಲಾಖಾನನಿಗೆ ಗೊತ್ತಾದದ್ದರಿಂದ, ಆತನು ಕಂಚುಕಿರಾಯನಮೇಲೆ ಸಿಟ್ಟು ಬೆಂಕಿಯಾಗಿದ್ದನು. ಖಾನನಿಗೆ ವಿಜಯೆಯ ಆಪ್ಪ ಅವಶ್ಯಕತೆಯು ಇದ್ದಿಲ್ಲ. ಧಾರೀರದ ರಾಜ್ಯದ ಆಶೆಯಿಂದ ಆತನು ವಿಜಯೆಯನ್ನು ಲಗ್ನವಾಗಲು ಇಚ್ಛಿಸುತ್ತಿದ್ದನು; ಆದ್ದರಿಂದ ಆತನು ಕಂಚುಕಿರಾಯನಿಗೆ—" ನೀನು ದಾಸಿಯೊಡನೆ ನನ್ನ ಲಗ್ನಮಾಡಿ ನನ್ನ ಅಪಮಾನ ಮಾಡಿರುತ್ತೀ; ಆದ್ದರಿಂದ ಈ ತಪ್ಪಿಗಾಗಿ ನನಗೆ ಧಾರೀರದ ರಾಜ್ಯವನ್ನು ಒಪ್ಪಿಸು. ಇಲ್ಲದಿದ್ದರೆ ನಿನ್ನ ಪ್ರಾಣಹರಣ ಮಾಡುವೆನು " ಎಂದು ಹೇಳಿ ಕಳಿಸಿದನು. ಇದರಿಂದ ಹೇಡಿಯಾದ ವೃದ್ಧ ಕಂಚುಕಿರಾಯನು ಅಂಜಿ ಅಳಹತ್ತಿದ್ದನು. ಆತನಿಗೆ ತನ್ನ ಪ್ರಾಣಕ್ಕಿಂತಲೂ ರಾಜ್ಯವು ಪ್ರಿಯವಾಗಿತ್ತು; ರಾಜ್ಯಕ್ಕಿಂತಲೂ ಪ್ರಾಣವು ಪ್ರಿಯವಾಗಿತ್ತು. ಆದ್ದರಿಂದ ಆತನು ದುಃಖಿಸುತ್ತ—" ಈ ಪ್ರಸಂಗದಲ್ಲಿ ನನ್ನನ್ನು ಯಾರು ರಕ್ಷಿಸುವರು " ಎಂದು ಗೋಳಾಡುತ್ತಿರಲು, ಸುಫಲಾದೇವಿಯು ಅಲ್ಲಿಗೆ ಬಂದು, " ಚಂಪತರಾಯನ ಮಗನಾದ ಸ್ವಾತಂತ್ರ್ಯಪ್ರಿಯ ಕುಮಾರ ಛತ್ರಸಾಲನೇ ನಿಮ್ಮನ್ನು ರಕ್ಷಿಸುವನು " ಎಂದು ನುಡಿಯುತ್ತಿರುವಾಗ, ಕಂಚುಕಿರಾಯನು ಮುಖವೆತ್ತಿ ನೋಡಲು, ಛತ್ರಸಾಲನು ಎದುರಿಗೆ ನಿಂತುಕೊಂಡಿದ್ದನು. ಈ ಪ್ರಸಂಗದಲ್ಲಿ ನಾನು ಛತ್ರಸಾಲನಿಗೆ ಶರಣುಹೋಗದೆ ಗತಿಗಾಣೆನೆಂದು ತಿಳಿದು, ಕಂಚುಕಿರಾಯನು ಛತ್ರಸಾಲನ ಚರಣಗಳಿಗೆ ನಮಸ್ಕರಿಸಹೋದನು. ಆಗ ಪ್ರಾಣನಾಥ ಪ್ರಭುಗಳು—" ರಾಜಾ, ನಿನ್ನ ಆಳಯನಿಗೆ ನೀನು ನಮಸ್ಕಾರಮಾಡುವದು ಧರ್ಮವಲ್ಲ"ಎಂದು ಹೇಳಿದರು. ಕಂಚುಕಿರಾಯನು ಛತ್ರಸಾಲನನ್ನು ತನ್ನ ಬಳಿಯಲ್ಲಿ ಸಿಂಹಾಸನದಮೇಲೆ ಕುಳ್ಳಿರಿಸಿಕೊಂಡನು. ಪ್ರಾಣನಾಥ ಪ್ರಭುಗಳು ಉಚ್ಚಾಸನದಲ್ಲಿ ಕುಳಿತುಕೊಂಡರು. ಪ್ರಧಾನ ಸಜ್ಜನರಾಯನು ಅಕಸ್ಮಾತ್ತಾಗಿ ದರ್ಬಾರಕ್ಕೆ ಬಂದನು. ಆತನ ಆಪ್ಪಣೆಯಂತೆ ದರ್ಬಾರದ ಎಲ್ಲಕಾರ್ಯಗಳು ನಡೆಯುತ್ತಿದ್ದವು. ನಾಲ್ಕುಜನ ಗೋಪಿಯ ಸ್ತ್ರೀಯರು ಸುಫಲಾದೇವಿಯೊಡನೆ ಪರದೆಯಹಿಂದೆ ಕುಳಿತುಕೊಂಡಿದ್ದರು.

ರಣದುಲ್ಲಾಖಾನನನ್ನು ಇಬ್ಬರು ಸಶಸ್ತ್ರ ಸೈನಿಕರ ವಶಕ್ಕೆ ಒಪ್ಪಿಸಿ, ಸಜ್ಜನರಾಯನು ಪ್ರಾಣನಾಥ ಪ್ರಭುಗಳನ್ನು ಕುರಿತು ನುಡಿದನೇನೆಂದರೆ-

ಪ್ರಭೋ, ಹೋದವರ್ಷ ವಿಂಧ್ಯವಾಸಿನಿಯ ಮಹೋತ್ಸವದಲ್ಲಿ ವಿಜಯೆಯಿಂದ, ವಿಮಲದೇವನಿಂದ ಮಾಡಿದ ಮಾಲೆಯನ್ನು ಅವರು ವಿಂಧ್ಯವಾಸಿನಿಯ ಕೊರಳಿಗೆ ಹಾಕುತ್ತಿರುವಾಗ, ಅದು ಛತ್ರಸಾಲನ ಕೊರಳಿಗೆ ಬಿದ್ದಿತಷ್ಟೆ? ದೇವಿಯ ಈ ಸಂಕೇತದಂತೆ ಶಕ್ಯವಿದ್ವಮಟ್ಟಗೆ ನಡೆಯಬೇಕೆಂದು ತಿಳಿದು, ರಾಣೀ ಸುಫಲಾದೇವಿಯವರು ವಿಜಯೆಯನ್ನು ಛತ್ರಸಾಲನಿಗೆಲಗ್ನಮಾಡಬೇಕೆಂದು, ವರಮಾತಾ ಸರಲಾದೇವಿಯವರೊಡನೆ ಆಲೋಚಿಸಿ ನಿಶ್ಚಯಿಸಿರುತ್ತಾರೆ. ಅದಕ್ಕಾಗಿ ತಮ್ಮ ಒಪ್ಪಿಗೆಕೇಳಬೇಕೆಂದು ರಾಣಿಯವರು ನನ್ನನ್ನು ಆಜ್ಞಾಪಿಸಿರುವರು. ವಿವಾಹ ಸಮಾರಂಭವು ಬೇಗನೆ ಪೂರ್ಣವಾಗಬೇಕೆಂದು ಅವರು ಇಚ್ಛಿಸುತ್ತಿರುವರು.

ಪ್ರಭುಗಳು—ರಾಜಾ ಕಂಚುಕಿರಾಯ, ಸುಫಲಾದೇವಿಯ ವಿನಂತಿಯು ನಿನಗೆ ಮಾನ್ಯವಿದೆಯೆ? ಛತ್ರಸಾಲನು ನಿನ್ನ ಅಳಿಯನಾಗಬೇಕೆಂಬ ಇಚ್ಛೆಯು ನಿನಗಿರುವದೆಯೋ?

ಕಂಚುಕಿರಾಯ—ಪ್ರಭೋ, ನಾನು ಈ ವಿನಂತಿಯನ್ನು ಸಂತೋಷದಿಂದ ಮನ್ನಿಸುತ್ತಿದ್ದೆನು; ಆದರೆ ವಿಜಯೆಯ ವಿವಾಹವು ವಿಮಲದೇವನೊಡನೆ ಈ ಮೊದಲೆ ಆಗಿಹೋಗಿರುವದಲ್ಲ! ಅದಕ್ಕೆ ಉಪಾಯವೇನಿರುವದು? ತಿರುಗಿ ಲಗ್ನವಾಗುವದು ಅಶ್ಯಕವು,—

ಪ್ರಭು—ಹಾಗೆ ತಿಳಿಯಬೇಡ. ವಿಮಲದೇವನೊಡನೆ ಆದ ವಿಜಯೆಯ ಲಗ್ನವು ಕೇವಲ ವ್ಯರ್ಥವಾದದ್ದು. ವಿಮಲದೇವನು ಪುರುಷನಾಗಿರದೆ, ವಿಜಯೆಯಂತೆಯೇ ಆತನೊಬ್ಬ ಸ್ತ್ರೀಯಾಗಿರುವನು; ಅಂದಬಳಿಕ ಇಬ್ಬರು ಸ್ತ್ರೀಯರ ವಿವಾಹವು ಹೇಗೆ ಶಕ್ಯವಾಗುವದು?

ಕಂಚುಕಿರಾಯ (ಆನಂದದಿಂದ)—ನಾನು ಪ್ರಭುಗಳ ಇಚ್ಛೆಗೆ ಹೊರತಾದವನಲ್ಲ. ಪ್ರಭುಗಳ ಮನಸ್ಸಿಗೆ ಬಂದಂತೆ ಮಾಡಬಹುದು. ನನ್ನ ಪ್ರಾಣವೂ, ರಾಜ್ಯವೂ ರಣದುಲ್ಲಾಖಾನನ ದವಡೆಯೊಳಗಿಂದ ಪಾರಾದವೆಂದೆ ಸಾಕು!

ಪ್ರಭು—ಅದರ ವ್ಯವಸ್ಥೆಯು ಸಂಪೂರ್ಣವಾಗಿ ಆಗಿಹೋಗಿದೆ. ಅದರ ಚಿಂತೆಯು ನಿನಗೆ ಬೇಡ.

ಈ ಮೇರೆಗೆ ನುಡಿದು ಪ್ರಭುಗಳು ವಿಜಯೆಯನ್ನು ಕರೆದರು. ಆಗ ವಿಜಯೆಯು ತಾನೊಬ್ಬಳೇ ಬಾರದೆ ಮತ್ತೊಬ್ಬ ಸುಂದರ ತರುಣಿಯನ್ನು ಸಂಗಡ ಕರೆದುಕೊಂಡು ಬಂದಳು. ಎಲ್ಲರು ವಿಜಯೆಯನ್ನು ಗುರುತಿಸಿದರು; ಆದರೆ ಆಕೆಯು ಸಂಗಡ ಬಂದಿದ್ದ ಇನ್ನೊಬ್ಬ ತರುಣಿಯ ಗುರುತು ಸಭಾಕರಣ, ದಲಪತರಾಯ, ಛತ್ರಸಾಲ ಈ ಮೂವರ ಹೊರತು ಬೇರೆ ಯಾವ ಗಂಡಸರಿಗೂ ಹತ್ತಲಿಲ್ಲ. ಅದನ್ನು ನೋಡಿ ಪ್ರಭುಗಳು ವಿಜಯೆಯನ್ನು ಕುರಿತು—

ಪ್ರಭು—ವಿಜಯೇ, ನಾನು ನಿನ್ನೊಬ್ಬಳನ್ನು ಕರೆದಿರಲು, ಸಂಗಡ ಈ ಬಾಲೆಯನ್ನೇಕೆ ಕರೆದುಕೊಂಡು ಬಂದೆ?

ವಿಜಯೆ—ದೇವೀ ವಿಂಧ್ಯವಾಸಿನಿಯು ನಮ್ಮಿಬ್ಬರ ಮೇಲೆಯೂ ಅನುಗ್ರಹ ಮಾಡಿರುತ್ತಾಳೆ; ಆದ್ದರಿಂದ ಆ ಅನುಗ್ರಹದ ಲಾಭವು ನಮ್ಮಿಬ್ಬರಿಗಾಗಿ ದೊರೆಯುಬೇಕೆಂದು ಇಚ್ಛಿಸುತ್ತೇನೆ.

ಪ್ರಭು—ಅಂದರೆ? ಇದೇ ಬಾಲೆಯೇ ವಿಮಲದೇವನೆಂಬ ಹೆಸರಿನಿಂದ ಗಂಡಸಾಗಿ ವ್ಯವಹರಿಸುತ್ತಿದ್ದಳೇನು?

ವಿಜಯೆ—ಹೌದು.

ಪ್ರಭು—ಪಹಾರಸಿಂಗನ ಮಗಳಿಗೂ, ಛತ್ರಸಾಲನಿಗೂ ಲಗ್ನವು ಹೇಗಾಗಬೇಕು? ವಿಮಲೆಯು ಛತ್ರಸಾಲನಿಗೆ ಕಕ್ಕನ ಮಗಳಾಗಬೇಕಾಯಿತಲ್ಲವೆ?

ಸಭಾಕರಣ (ಅವಸರದಿಂದಎದ್ದು ನಿಂತು)—ಈ ವಿಮಲೆಯು ಪಹಾರಸಿಂಗನ ಮಗಳಲ್ಲ, ನನ್ನ ಮಗಳು.

ಸಭಾಕರಣನ ಈ ಮಾತುಗಳನ್ನು ಕೇಳಿ ಎಲ್ಲರೂ ಆಶ್ಚರ್ಯಪಟ್ಟರು. ಆಗ ಸಭಾಕರಣನು—ಹೀರಾದೇವಿಯು ತನ್ನ ಹೊಟ್ಟೆಯಲ್ಲಿ ಮಕ್ಕಳಿಲ್ಲದ್ದರಿಂದ ತಮ್ಮಪಶ್ಚಾತ್ ತಮ್ಮ ಸಿಂಹಾಸನವು ಛತ್ರಸಾಲನಿಗೆ ಅಥವಾ ಮಹೋಬದ ಅರಸುಮನೆತನದವರಿಗೆ ಆಗುವದೆಂಬ ಹೊಟ್ಟೆಕಿಚ್ಚಿನಿಂದ ನಾಲ್ಕುಜನ ಬಸರುಹೆಂಗಸರನ್ನು ಅರಮನೆಯಲ್ಲಿ ಗುಪ್ತವಾಗಿ ಇರಿಸಿಕೊಂಡು, ತಾನು ಗರ್ಭಿಣಿಯಿರುವೆನೆಂದು ಸುದ್ದಿಯ ಹುಟ್ಟಿಸಿದಳು. ಆ ನಾಲ್ವರಲ್ಲಿ ನನ್ನ ಹೆಂಡತಿಯು ಒಬ್ಬಳಿದ್ದಳು. ಮೂವರು ಹೆಂಗಸರೂ ಹೆಣ್ಣುಹಡೆಯಲು,

ಹೀರಾದೇವಿಯು ನಿರಾಶೆಪಟ್ಟು ಕಡೆಗೆ ನನ್ನ ಹೆಂಡತಿಯು ಗಂಡುಹಡೆಯುವ ಹಾದಿಯನ್ನು ನೋಡಹತ್ತಿದಳು. ಕಡೆಗೆ ದುರ್ದೈವದಿಂದ ಆಕೆಯೂ ಹೆಣ್ಣೇ ಹಡೆದಳು! ಆ ಹುಡುಗಿಯೇ ಈ ವಿಮಲೆಯು! ಇಷ್ಟರಿಂದ ಹೀರಾದೇವಿಯು ಹತಾಶಳಾಗದೆ, ವಿಮಲೆಯನ್ನೇ ವಿಮಲದೇವನೆಂದು ತಿಳಿದು ಗಂಡುವೇಷದಲ್ಲಿ ಇರಿಸಿ ಈವರೆಗೆ ವ್ಯವಹರಿಸುತ್ತ ಬಂದಿರುವಳು. ಆದ್ದರಿಂದ ವಿಮಲೆಯೊಡನೆ ಛತ್ರಸಾಲನ ಲಗ್ನವಾಗಲಿಕ್ಕೆ ಬಾಧೆಯಿಲ್ಲ; ಅದಕ್ಕೆ ನನ್ನ ಸಮ್ಮತಿಯೂ ಪೂರ್ಣವಾಗಿ ಇರುತ್ತದೆ.

ಈ ಸಂಗತಿಯನ್ನು ಕೇಳಿ ಎಲ್ಲರಿಗೂ ಆನಂದವಾಯಿತು. ವಿಂಧ್ಯವಾಸಿನಿಯ ಭವಿಷ್ಯವು ಸಂಪೂರ್ಣ ನಿಜವಾದದ್ದನ್ನು ನೋಡಿ ಎಲ್ಲರೂ ಆಶ್ಚರ್ಯಪಟ್ಟರು. ಪ್ರಭುಗಳು ವಿಜಯಾ-ವಿಮಲೆಯರ ಹಸ್ತಗಳನ್ನು ಛತ್ರಸಾಲನ ಹಸ್ತದಲ್ಲಿರಿಸಿದರು. ವಿಂಧ್ಯೇವಾಸಿನಿಯ ಜಯಘೋಷವಾಗಿ ಎಲ್ಲರೂ ವಧುವರರಅಭೀಷ್ಟವನ್ನು ಚಿಂತಿಸಿದರು. ಇನ್ನು ಬದ್ರುನ್ನಿಸಾ-ದಲಪತರಾಯರ ಲಗ್ನದಕೆಲಸವೊಂದು ಉಳಿದಿತ್ತು. ಆ ವಿಷಯವಾಗಿ ಏನುಮಾಡಬೇಕೆಂಬ ಬಗ್ಗೆ ಪ್ರಾಣನಾಥ ಪ್ರಭುಗಳ ನಿಶ್ಚಯವು ಇನ್ನೂ ಆಗಿದ್ದಿಲ್ಲ! ಅಷ್ಟರಲ್ಲಿ ಲಲಿತೆಯು ಮುಂದಕ್ಕೆ ಬಂದು ಪ್ರಭುಗಳನ್ನು ವಂದಿಸಿದಳು. ಬದ್ರುನ್ನಿಸೆಯೂ ಪ್ರಭುಗಳನ್ನು ವಂದಿಸಿದಳು. ಪ್ರಭುಗಳು ಏನೋ ಮಾತಾಡಬೇಕೆನ್ನುತ್ತಿರಲು, ಲಲಿತೆಯು—

ಲಲಿತೆ—ಪ್ರಭುಗಳೇ, ತಮ್ಮ ಉದಾರ ಹೃದಯವನ್ನು ವರ್ಣಿಸುವದು ನನಗೆ ಶಕ್ಯವಲ್ಲ! ನನಗೂ, ನನ್ನಮಗಳಿಗೂ ತಮ್ಮ ಚರಣವನ್ನು ಸೇವಿಸಲಿಕ್ಕೆ ಬರುತ್ತಿರುವದೊಂದು ಮಹದ್ಭಾಗ್ಯವೇಸರಿ. ಯುವರಾಜ ದಲಪತರಾಯನೂ, ಬದ್ರುನ್ನಿಸೆಯೂ ಪರಸ್ಪರರನ್ನು ಬಹಳವಾಗಿ ಪ್ರೀತಿಸುತ್ತಿರುವರು. ದಲಪತರಾಯನು ಬದ್ರುನ್ನಿಸೆಯೊಡನೆ ಲಗ್ನವಾಗಲಿಕ್ಕೆ ಸಿದ್ಧನಾಗಿರುವನು. ಆದರೆ ಆತನ ಚರಣಸೇವೆಯನ್ನು ಮಾಡುವದರಲ್ಲಿಯೇ ಬದ್ರುನ್ನಿಸೆಯು ಕೃತಕೃತ್ಯಳೆಂದು ಭಾವಿಸುವಳು. ಆಕೆಯೊಡನೆ ದಲಪತರಾಯನ ಲಗ್ನವಾದರೆ ಸಾಗರದ ಮನೆತನವು ಲೌಕಿಕದೃಷ್ಟಿಯಿಂದ ಕಲಂಕಿತವಾಗುವದು. ಆದ್ದರಿಂದ ನನ್ನ ಮಗಳು ದಲಪತರಾಯನ ಚರಣಸೇವೆಯಿಂದಲೇ ಸಂತುಷ್ಟಳಾಗಿರುವಳು.

ದಲಪತರಾಯ (ಆವೇಶದಿಂದ)—ಹೀಗಿದ್ದರೆ, ನಾನು ಬದ್ರುನ್ನಿಸೆಯ ಹೊರತು ಬೇರೆ ಸ್ತ್ರೀಯರೊಡನೆ ಲೌಕಿಕ ದೃಷ್ಟಿಯಿಂದ ವಿವಾಹ ಬದ್ಧನಾಗ ಲಾರೆನು. ಬದ್ರುನ್ನಿಸೆಯೇ ನನ್ನ ಹೆಂಡತಿಯು.

ಬುಂದೇಲಖಂಡದಲ್ಲಿ ಎಂದು ಒಕ್ಕಟ್ಟು ಉಂಟಾಯಿತೋ, ಸಭಾಕರಣ ನಂಥ ವೀರರುಎಂದು ಸ್ವದೇಶದ ಸ್ವಾತಂತ್ರ್ಯಕ್ಕಾಗಿ ಟೊಂಕಕಟ್ಟಿನಿಂತರೋ ಅಂದೇ ಬುಂದೇಲಖಂಡವು ಸ್ವತಂತ್ರವಾಯಿತು. ರಣದುಲ್ಲಾಖಾನನನ್ನು ಛತ್ರಸಾಲನು ಉದಾರಮನಸ್ಸಿನಿಂದ ಬಿಟ್ಟುಬಿಟ್ಟನು. ಆದರೆ ಉಪಕಾರವನ್ನು ತೀರಿಸುವದಕ್ಕಾಗಿ ರಣದುಲ್ಲಾಖಾನನು ಛತ್ರಸಾಲನ ಲಗ್ನವು "ಮಿರಹಾ" ಎಂಬ ಊರಲ್ಲಿ ಸನ್ನಾಹಾರಂಭದಿಂದ ಆಗುತ್ತಿರುವಾಗ, ದೊಡ್ಡ ಸೈನ್ಯದೊಡನೆ ಸಾಗಿಬಂದನು. ಮದುಮಗನಾಗಿದ್ದ ಛತ್ರಸಾಲನು ಹಾಗೆಯೇ ಯುದ್ಧಕ್ಕೆ ಬಂದು ರಣದುಲ್ಲಾಖಾನನನ್ನು ಪೂರ್ಣವಾಗಿ ಸೋಲಿಸಿದನು. ಆ ಯುದ್ಧದಲ್ಲಿ ಹೀರಾಪೇವಿಯು ಮರಣ ಹೊಂದಿದಳು. ಮುಂದೆ ಔರಂಗಜೇಬ ಬಾದಶಹನು ಎಷ್ಟು ನೆಗದಾಡಿದರೂ ಆತನ ಆಟವೇನೂ ನಡೆಯಲಿಲ್ಲ. ಆತನು ಒಂದು ಒಡಂಬಡಿಕೆಯ ಕರಾರಿನಿಂದ ಬುಂದೇಲಖಂಡದ ಸ್ವಾತಂತ್ರ್ಯವನ್ನು ಒಪ್ಪಿಕೊಳ್ಳಬೇಕಾಯಿತು. ಬಳಿಕ ಛತ್ರಸಾಲನು ವಿಮಲಾ-ವಿಜಯೆಯರೊಡನೆ ಆನಂದದಿಂದ ಮಹೋಬದ ರಾಜಧಾನಿಯನ್ನು ಪ್ರವೇಶಿಸಿದನು! ಬದ್ರುನ್ನಿಸೆಯು ದಲಪತರಾಯನನ್ನು ಸೇವಿಸುತ್ತ ಸಾಗರರಾಜ್ಯದಲ್ಲಿ ಉಳಿದಳು!

ಸಮಾಪ್ತ!

ಶ್ರೀ ಲಕ್ಷ್ಮೀವೆಂಕಟೇಶಾರ್ಪಣಮಸ್ತು.